Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. 10854 (B)
ದಿನಾಂಕ Date..............................

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE THIRTY-SECOND DAY

OF THE

THIRD SESSION

OF THE

FOURTH LEGISLATIVE ASSEMBLY

THURSDAY, 4TH APRIL 1968

CHAITRA 15, 1890 (SAKA)

Vol. XII—No. 1

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ) 4854
ಪ್ರಾಪ್ತಿ ಕ್ರಮಾಂಕ Accession No...............
ದಿನಾಂಕ Date..................................

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1968

Price : 25 Paise

(Departmental Library)
(ಇಲಾಖಾ ಗ್ರಂಥಾಲಯ) 4004
ಪ್ರವಿಷ್ಟಿ ಕ್ರಮಾಂಕ Accession No...............
ದಿನಾಂಕ Date....................................

MYSORE LEGISLATIVE ASSEMBLY

Thursday, 4th April 1968.

The House met in the Assembly Chamber, Vidhana Soudha, Bangalore, at One of the Clock.

MR. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

Assets of the State in Public Sector

376. SRI H. SIDDAVEERAPPA (Harihar).—

Will the Minister for Finance, Planning, Commerce and Industries be pleased to state :—

(*a*) the total assets of the State in the public sector ;

(*b*) the total loan liabilities of the State (figures up to end of December 1967 in both the cases may be furnished) ;

(*c*) the details of the evaluation of the assets ;

(*d*) the total amount of subsidy received by the State on various heads of Accounts from January 1957 up to end of December 1967 (Departmentwise figures on this account may kindly be furnished) ?

A.—Sri RAMAKRISHNA HEGDE (Minister for Finance, Planning, Commerce and Industries).—

(*a*)—

Assets		*As on 31st March 1967 (Rs. in lakhs)*
Capital Outlay on Improvement of Public Health	...	1061·95
Capital Outlay on Industrial and Economic Development		3895·31
Capital Outlay on I.N.E. & D. Works (Commercial)	...	11719·84
Capital Outlay on I.N.E. & D. Works (Non-Commercial)		1960·52
Capital Outlay on Electricity Schemes	...	8385·02
Capital Outlay on Public Works ...	...	6839·52
Capital Outlay on Other Works ...	...	66·12
Capital Outlay on Ports	...	160·18
Capital Outlay on Road Transport Schemes	...	522·31
Capital Outlay on Forests	...	33·50
Deposits and Advances.—		
Advances not bearing interest ...	...	271·27
Loans and Advances by State Government	...	13111·82
Investments	...	1106·63
Total	...	49133·99

(*b*) Loan liabilities of the State as on 31st March 1967:—

Public Debt—

Liabilities		*As on 31st March 1967 (Rs. in lakhs)*
Public Debt—		
Permanent Debt—State Loans	...	5705·85
Loans not bearing Interest	...	7·67
		5713·52
Floating Debt—		
Ways and Means advances	...	1179·61
Loans from Central Government	...	22735·53
Other Loans	...	2080·52
Unfunded Debt	...	2333·91
Deposits and Advances—		
Reserve and Depreciation Funds	...	5641·18
Other Deposit Accounts	...	2828·93
Total	...	42513·20

Actual figures up to the end of December 1967 (in both the cases) as required by the Hon'ble Member are not available. Hence figures up to the end of 31st March 1967 are furnished as per accounts of the Accountant General.

(*c*) This is as per outlay booked in the Accountant General's accounts. Besides this, Government own many assets not taken to Capital Account such as Roads, Bridges, Buildings, etc., constructed out of revenue funds.

(*d*) The question is not clear. The following are details of assistance received by State Government as a result of award of Finance Commission and assistance for Plan Schemes, Centrally Sponsored Schemes and other schemes outside the Plan from 1957-58, the first full year after State's Reorganisation. Departmentwise figures of assistance received are not readily available.

(Rs. in lakhs)

Years	Statutory grants	Share of Central Taxes	Grants for Plan, Centrally Sponsored and other Schemes
1957-58	625·73	641·88	283·81
1958-59	609·87	803·41	421·04
1959-60	600·24	842·88	495·92
1960-61	612·16	894·03	863·15
1961-62	706·96	956·69	695·16
1962-63	684·34	1192·22	721·34
1963-64	679·28	1390·46	852·32
1964-65	683·43	1370·41	985·10
1965-66	687·88	1473·66	1081·35
1966-67	2092·15	1969·09	1027·67

Sri H. SIDDAVEERAPPA.—In the list you have furnished with regard to total assets, may I know from what period you have computed these total assets ?

† Sri RAMAKRISHNA HEGDE.—These figures are collected from the Accountant General. I believe they relate to the period of the last 20 years.

Sri H. SIDDAVEERAPPA.—May I know what were the assets in existence prior to the period from which these figures are collected ?

† Indicates that the remarks or speeches have not been revised by the member concerned

Sri RAMAKRISHNA HEGDE.—I want notice.

Sri H. SIDDAVEERAPPA.—With regard to industrial and economic development, is any calculation made as to the returns that we were getting when compared with the capital outlay on those industries ?

Sri RAMAKRISHNA HEGDE.—In regard to returns on investment in industrial projects I have given information to the House already. The return is not as much as we expected Efforts will be made to increase the returns.

Sri S. SIVAPPA.—The Minister waa pleased to say that the return to those assets is very poor. May I know what exactly is the return ? Have they figures at their disposal to tell the House the exact returns uptodate ?

Sri RAMAKRISHNA HEGDE.—I have, during the course of my reply to the discussion on the Demands of the Industries Department, given detailed information. On an average it may not be more than two to two and half per cent. The return on the investment in the various rural development works, such as irrigation works, it is not even that much. It is on the minus side.

ಶ್ರೀ ಎಚ್. ಬಿ. ಜ್ವಾಲನಯ್ಯ.—ಕೈಗಾರಿಕೋದ್ಯಮದಲ್ಲಿ ವಿನಿಯೋಗಿಸಿರುವ ಹಣಕ್ಕೆ ಸರಿಯಾದ ಪ್ರತಿಫಲ ಬರುತ್ತಿಲ್ಲವೆಂದು ತಿಳಿದಮೇಲೆ ಅದರ ಬಗ್ಗೆ ಪರಿಶೀಲನೆ ಮಾಡಿ, ಅದನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಸಲಹೆ ಕೊಡಲು ಒಂದು ಸಮಿತಿಯನ್ನು ನೇಮಿಸುವುದಕ್ಕೆ ಸರ್ಕಾರದವರು ಸಿದ್ಧವಾಗಿದ್ದಾರೆಯೆ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಒಂದು ಕಮಿಟಿಯನ್ನು ಮಾಡತಕ್ಕ ನಿರ್ಧಾರ ಸರ್ಕಾರ ಮಾಡಿದೆ. ಈ ಸಭೆಯ ಕೆಲವು ಸದಸ್ಯರು ಮತ್ತು ಮೇಲ್ಮನೆಯ ಕೆಲವು ಸದಸ್ಯರನ್ನು ಒಳಗೊಂಡಂಥ ಒಂದು ಸಮಿತಿಯನ್ನು ಮಾಡಿ ಸರ್ಕಾರದವರು ನಡೆಸತಕ್ಕ ಕೈಗಾರಿಕೆಗಳ ವಿಚಾರದಲ್ಲಿ ಯಾವ ರೀತಿಯ ಲೋಪದೋಷಗಳಿವೆ ಮತ್ತು ಅವುಗಳನ್ನು ಸುಧಾರಣೆ ಮಾಡಲಿಕ್ಕೆ ಯಾವ ಯಾವ ಕಾರ್ಯವನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ವರದಿಮಾಡಲು ಒಂದು ಸಮಿತಿಯನ್ನು ನೇಮಿಸುತ್ತೇವೆಂದು ಈಗಾಗಲೇ ಹೇಳಿದ್ದೇನೆ.

Establishment of a Civil Court at Gadag

377. Sri K. H. PATIL (Gadag).—

Will the Minister for Law and Parliamentary Affairs be pleased to state :—

(*a*) the number of cases, *viz.*, Civil and Criminal and insolvency matters pending disposal in various courts of Dharwar District for more than 3 years ;

(b) the steps taken by the Government to establish a Civil Court in Gadag and when it is expected to be established ;

(c) whether the judicial authorities have strongly recommended establishment of Civil Court in Gadag and if so, the reasons for delay in establishment ?

A.—SRI S. R. KANTHI (Minister for Law and Parliamentary Affairs).—

(a) *Vide* Statement appended.

(b) The question of establishment of Civil Judge's Court at Gadag is under active consideration.

(c) Yes. The question is under examination.

(SRI S. R. KANTHI)

STATEMENT

Showing the number of Cases *viz.*, Civil and Criminal and Insolvency matter, pending disposal for more than 3 years in various courts, in Dharwar District, as on 1st March 1968.

Sl. No.	Name of the Court	Original Suits	Small cause Suits	Ex. Cases	Land Acqn. Cases	Matrimonial Cases	Guardian and W. Cases	V. and S. C. Cases	Insolvency Cases	Arbitration Cases	H.R.C. Cases	Misc. cases not falling under Cat. 4 to 10.	Appeals Reg.	Appeals Ex.	Appeals Misc.	Appeals H.R.C.	B.A.D. and other Appls.	S. C.	Cr. A.	Cr. Rev. Pet.
1	2	3	4	5	6	7	8	9	10	11	12	13	14	15	16	17	18	19	20	21
1	Dist. & Sessions Judge, Dharwar	14	...	1	...	...	...	...	...	...	...	38	267	...	18	...	9	2	16	2
2	Civil Judge, Dharwar	17	...	71	13	...	...	...	3	...	...	4	31	...	3	...	...	...	...	...
3	Civil Judge, Hubil	30	...	137	13	1	...	...	6	...	...	8	16	...	2	...	1	...	...	...
4	Munsiff, Dharwar	51	7	...	...	...	...	...	...	...	3	4	...	...	...	...	2	...	...	...

5	Munsiff, Hubli	38	...	166	...	...	...	...	...	...	...	9	...	...	...	...	...	...	...	...
6	Munsiff, Gadag	29	...	42	...	...	...	...	2	...	5	3	...	...	...	...	...	...	...	...
7	Munsiff, Laxmeshwar	71	...	23	...	...	...	...	...	...	...	...	...	...	...	...	...	...	...	...
8	Munsiff, Kundgol	45	...	42	...	...	...	...	2	...	...	33	...	...	...	...	...	...	...	...
9	Munsiff, Haveri	69	...	50	...	...	...	...	...	...	15	...	...	...	...	...	...	...	...	...
10	Munsiff, Ranebennur	65	...	60	...	...	...	...	...	...	...	5	...	...	...	...	...	...	...	...
11	Munsiff, Savanur	64	...	10	...	...	...	...	...	...	...	2	...	...	...	...	...	...	...	...
12	Munsiff, Ron.	30	...	20	...	...	...	...	...	...	...	...	...	...	...	...	...	...	...	...
13	Munsiff, Navalgund	91	...	25	...	...	...	...	...	...	...	...	...	...	...	...	...	...	...	...
	Total ...	614	7	647	26	1	...	...	13	...	23	106	314	...	23	...	12	2	1	62

Sri K. H. PATIL.—Supplementary to (c): What is under examination—whether the reasons for the delay in establishment or the very proposal ?

† Sri S. R. KANTHI.—The very proposal whether there should be a Civil Court at Gadag or not, is under examination.

Sri K. H. PATIL.—Supplementary to (b): May I know since how many years it is under active consideration and may I know whether it was under active consideration when you made the assurance on the eve of the election that the court would be established or was it under active consideration subsequently after the defeat of the Congress candidate ?

Sri S. R. KANTHI.—The hon'ble Member has mixed up so many questions. In the first place, it has nothing to do with elections whatsoever. The case has to be considered on its own merit. I was not the person who gave the assurance and I do not think anybody has given an assurance. All that the Government has said was that they would consider it as sympathetically as possible.

Sri K. H. PATIL.—When the High Court authorities have recommended, don't you think that there must be merit in it ?

Sri S. R. KANTHI.—The High Court has said so many things. The question of having two Civil Judges Courts in Dharwar District is being examined—one at Gadag and another at Haveri. It is a complicated question because there is not enough work for all the four courts.

Grant of lands to ryots whose lands submerged under Gayathri Reservoir

378. Sri G. DUGGAPPA (Bharamasagar).—

Will the Minister for Revenue and Forests be pleased to state :—

(a) whether the ryots whose lands have been submerged under Gayathri Reservoir, Hiriyur Taluk have requested the Government to grant land to them in the Aykat Area of Gayathri Reservoir ;

(b) the number of such ryots in Hiriyur and Sira Taluks whose lands have been submerged ;

(c) whether Government consider their request and reserve certain percentage of the land for these people ?

A.—Sri B. RACHAIAH (Minister for Revenue and Forests).—

(a) Yes.

(b) Hiriyur Taluk ... 27
Sira Taluk ... 15

(c) Reservation will be as per Land Grant Rules.

ಶ್ರೀ ಜಿ. ದುಗ್ಗಪ್ಪ.—1959ನೆ ಇಸವಿಯಿಂದ ಇಲ್ಲಿಯವರೆಗೂ ಗಾಯತ್ರಿ ಅಚ್ಚುಕಟ್ಟಿನ ಕೆಳಗಡೆ ಜಮೀನು ಕೊಡದೆ ಇರುವುದಕ್ಕೆ ಏನು ಕಾರಣ ಎಂದು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಕೇಳಿರತಕ್ಕ ಭೂಮಿ ಗೋಮಾಳಕ್ಕೆ ಸೇರಿದೆ. ಗೋಮಾಳದ ಭೂಮಿಯನ್ನು ಪಂಚಾಯಿತಿಯ ಸುಪರ್ದಿಗೆ ಕೊಟ್ಟಮೇಲೆ ಪಂಚಾಯಿತಿಯವರ ಅಭಿಪ್ರಾಯವನ್ನು ಪಡೆದುಕೊಳ್ಳಬೇಕು, ಆಮೇಲೆ ಅದನ್ನು ಡೈವೆಸ್ಟ್ ಮಾಡಿ ಕೊಡಬೇಕು. ಈ ಕಾರಣಗಳಿಂದ ಸ್ವಲ್ಪ ನಿಧಾನವಾಗುತ್ತಿದೆ.

ಶ್ರೀ ಜಿ. ದುಗ್ಗಪ್ಪ.—ಪಂಚಾಯಿತಿಯ ಅಭಿಪ್ರಾಯ ಕೇಳಬೇಕು ಎಂದು ಹೇಳುತ್ತೀರಿ. 1959ನೆ ಇಸವಿಯಿಂದ ಇಲ್ಲಿಯವರೆಗೂ ಏನು ಕಾರಣಕ್ಕೋಸ್ಕರ ಒಂದು ಅಂಗುಲ ಜಾಗವನ್ನೂ ಕೊಡದೆ ಇದ್ದೀರಿ ? ಕೆರೆ ಕಟ್ಟಿ ಆಗಿದೆ, ನೀರು ಕೊಡಲಾಗಿದೆ, ಅದನ್ನು ಉಪಯೋಗ ಮಾಡಿಕೊಳ್ಳಬೇಕೇ ಬೇಡವೇ ?

ಶ್ರೀ ಬಿ. ರಾಚಯ್ಯ.—ಇದರಲ್ಲಿ ಅವರೆಲ್ಲರಿಗೂ ಕಾಂಪೆನ್‌ಸೇಷನ್ ಕೊಟ್ಟಿದ್ದೇವೆ. ಮತ್ತೆ ಭೂಮಿ ಕಳೆದುಕೊಂಡಿರುವವರಲ್ಲಿ ಯಾರು ಯಾರು ಇನ್‌ಸಫಿಷಿಯಂಟ್ ಹೋಲ್ಡರ್ಸ್ ಇದ್ದಾರೆ ಅವರಿಗೆ ಕರಿಯಾಲ ಸರ್ವೆ ನಂಬರ್ 103 ಮತ್ತು 104 ರಲ್ಲಿ ಜಮೀನು ಕೊಡಬೇಕು ಎಂದು ರಿಕಾರ್ಡ್ ಬಿಲ್ಡ್-ಅಪ್ ಆಗಿದೆ. ಬಹುಶಃ ಒಂದೆರಡು ತಿಂಗಳಲ್ಲಿ ಇದೆಲ್ಲ ಪೂರೈಸುತ್ತದೆ ಎಂದು ನನಗೆ ವರದಿ ಬಂದಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಗಾಯತ್ರಿ ಜಲಾಶಯದ ಕೆಳಗಡೆ ಎಷ್ಟು ಅಚ್ಚುಕಟ್ಟು ಇದೆ, ಅದೆಲ್ಲ ಸಾಗುವಳಿಯಾಗಿದೆಯೋ ಅಥವಾ ಸಾಗುವಳಿಯಾಗಿಲ್ಲವೋ ?

ಶ್ರೀ ಬಿ. ರಾಚಯ್ಯ.—ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು. ಆ ವಿವರಗಳು ಈಗ ನನ್ನ ಬಳಿಯಲ್ಲಿಲ್ಲ.

Evicting of unauthorised cultivators of Gomal Lands

379. SRI N. G. HALAPPA (Channagiri).—.

Will the Minister for Revenue and Forests be pleased to state :—

(*a*) whether the unauthosied cultivators of Gomal lands in Kathalgere and Thyavanige Villages of Channagiri Taluk have been evicted since their replies to starred Question No. 378 during first Session, 1967 ;

(*b*) if not, the reasons for issuing stay order for maintaining *status quo* ;

(*c*) who issued the stay orders ;

(*d*) whether any report was called for from the local Revenue Officer prior to the issue of stay order ;

(*e*) if so, whether a copy of the report will be placed on the Table of the House ;

(*f*) when they intend to evict all the unauthorised cultivators of the said gomal lands ?

A.—SRI B. RACHAIAH (Minister for Revenue and Forests).—

(*a*) Necessary action has been taken to evict the unauthorised cultivators.

(SRI B. RACHAIAH)

(*b*) Stay Order was issued to harvest the standing crops.

(*c*) Government.

(*d*) No.

(*e*) Does not arise in view of the reply to clause (*d*).

(*f*) Does not arise in view of the reply to clause (*a*).

ಶ್ರೀ ಎನ್. ಜಿ. ಹಾಲಪ್ಪ.—ಕತ್ತಲಗೆರೆ ಮತ್ತು ತ್ಯಾವಣಗಿ ಗೋಮಾಳಗಳ ಸಂಬಂಧದಲ್ಲಿ ನಾನು ಕಳೆದ ಬಜೆಟ್ ಅಧಿವೇಶನದಲ್ಲಿ 378ನೆಯ ಪ್ರಶ್ನೆಯನ್ನು ಹಾಕಿ ಬಗರ್‌ಹುಕುಂ ಸಾಗುವಳಿ ಮಾಡಿದ್ದಾರೆಯೇ ಎಂದು ಕೇಳಿದ್ದೆ. ಅವರನ್ನು ಬಿಡಿಸುವ ಬದಲು ಈಗ ಸ್ಟ್ಯಾಂಡಿಂಗ್ ಕ್ರಾಪ್ ಇರುವುದರಿಂದ ಸ್ಟೇ ಕೊಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಅವರು ಈ ತಾಲ್ಲೂಕಿನ ಮಾಜಿ ಶಾಸಕರ ಸಂಬಂಧಿಗಳು ಮತ್ತು ಅಷ್ಟು ಜಮೀನನ್ನೂ ಅವರು ಸಾಗುವಳಿ ಮಾಡಿಕೊಂಡಿದ್ದಾರೆಂದು ಈ ರೀತಿ ಸ್ಟೇ ಆರ್ಡರ್ ಕೊಟ್ಟಿದ್ದೀರಿ ಎನ್ನುವುದು ನಿಜವೇ ಸ್ವಾಮಿ ?

† ಶ್ರೀ ಬಿ. ರಾಚಯ್ಯ.—ಬಗರ್‌ಹುಕುಂ ಸಾಗುವಳಿ ಮಾಡಿರುವವರ ಪೈಕಿ ಮಾಜಿ ಶಾಸಕರು ಮತ್ತು ಅವರ ಸಂಬಂಧೀಕರೂ ಇದ್ದಾರೆ. ಕತ್ತಲಗೆರೆ ಸರ್ವೆನಂಬರು 163, ತ್ಯಾವಣಿಗೆ ಗ್ರಾಮದ ಸರ್ವೆ ನಂಬರು 17, 18, 19, 20, 20, 21, 22, 29 ಮತ್ತು 30—ಇವುಗಳಲ್ಲಿರುವ ವಿಸ್ತೀರ್ಣ 252 ಎಕರೆ 10 ಗುಂಟೆಯಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವುದು 190 ಎಕರೆ 18 ಗುಂಟೆ. ಇದರಲ್ಲಿ ಮಾಜಿ ಶಾಸಕರ ಸಂಬಂಧೀಕರು ಸುಮಾರು 29 ಎಕರೆ ಆಕ್ರಮಿಸಿಕೊಂಡಿದ್ದಾರೆಂದು ವರದಿಯಾಗಿದೆ.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಗೋಮಾಳ ಜಮೀನು ಹಂಚಿಕೆ ಬಗ್ಗೆ ಸರಕಾರ 1961 ರಲ್ಲಿ ಕಾಯಿದೆ ಮಾಡಿ ಗೋಮಾಳವನ್ನೆಲ್ಲಾ ಪಂಚಾಯಿತಿಗಳಿಗೆ ವಹಿಸಿತು. ಇತ್ತೀಚೆಗೆ ರೆವಿನ್ಯೂ ಟ್ರಿಬ್ಯೂನಲ್ ಪಂಚಾಯಿತಿಗೆ ವೆಸ್ಟ್ ಆಗಿರುವುದರಿಂದ ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದೆ. 1961ನೆಯ ಇಸವಿಯಾದಮೇಲೆ ಡೆಪ್ಯುಟಿ ಕಮೀಷನರು ಮತ್ತು ಅಸಿಸ್ಟೆಂಟ್ ಕಮೀಷನರು ಸಾಗುವಳಿಗೆ ಭೂಮಿ ಕೊಟ್ಟಿದ್ದಾರೆ.

ಉಪಾಧ್ಯಕ್ಷರು.—ಪ್ರಶ್ನೆ ಕೇಳಬೇಕು, ಚರ್ಚೆಗೆ ಅವಕಾಶವಿಲ್ಲ.

Sri L. SRIKANTIAH.—May I know what steps have been taken by the Government to evict the ryots from the lands after passing the orders ?

Sri B. RACHAIAH.—If the Officers have violated the provisions of the Act, the orders will have no effect at all.

Sri G. DUGGAPPA.—Has it come to the notice of the Government that the unauthorised occupants of the lands are still continuing to the very minute ?

ಶ್ರೀ ಬಿ. ರಾಚಯ್ಯ.—ಅವರೆಲ್ಲರನ್ನೂ ಹೊರದೂಡಬೇಕೆಂದು ಆರ್ಡರಾಗಿದೆ. ಮತ್ತು ಅಕ್ರಮವಾಗಿ ಸಾಗುವಳಿ ಮಾಡಿರುವವರಿಗೆ ಒಂದು ಎಕರೆಗೆ 500 ರೂಪಾಯಿಗಳ ಪೀನಲ್‌ಫೈನ್ ಹಾಕಿದ್ದಾರೆ. ಅಲ್ಲದೆ ಈಗ ಪೋಲೀಸ್ ಸಹಾಯ ಕೇಳಿದ್ದಾರೆ, ಅದನ್ನು ಕೊಡುತ್ತಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಸರಕಾರಿ ಆರ್ಡರು ಜಾರಿಯಾಗಿಲ್ಲವೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಇದು ಬಹಳ ಪುಂಡಾಟ ಮಾಡುವ ಗ್ರಾಮ. ಇಲ್ಲಿಗೆ ಸಾಕಾದಷ್ಟು ಪೋಲೀಸರು ಬೇಕು, ಕಳುಹಿಸಿ ಎಂದು ತಾಸಿಲ್ದಾರರು ಬರೆದಿದ್ದಾರೆ.

Sri N. G. HALAPPA.—Will the Government give an assurance that it will not interfere in any manner in eviction proceedings in future ?

ಶ್ರೀ ಬಿ. ರಾಚಯ್ಯ.—ಯಾರು ಯಾರು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ ಅವರನ್ನು ಹೊರದೂಡುವುದಕ್ಕೆ ಆಜ್ಞೆ ಮಾಡಿದ್ದೇವೆಂದು ಈಗಾಗಲೇ ಹೇಳಿದ್ದೇನೆ.

Sri H. SIDDAVEERAPPA.—May I know the date on which the stay order was issued ?

ಶ್ರೀ ಬಿ. ರಾಚಯ್ಯ.—ಈಗ ಸ್ಟೇ ಆರ್ಡರಿಲ್ಲ, ಸ್ಟೇ ಆರ್ಡರು ವೆಕೇಟ್ ಆಗಿಹೋಯಿತು.

Sri H. SIDDAVEERAPPA.—To question on 17th July 1967, whether the unauthorised cultivators of Gomal lands will be evicted and it will be disposed of to the deserving ryot, you said, 'Yes'. After the reply was given a stay order has been issued. I want to know whether it is true or not ?

Sri B. RACHAIAH.—Yes, Sir, it is true. After that the stay order was issued, because the parties approached the Government to permit them to continue till they harvest the standing crop.

Sri H. SIDDAVEERAPPA.—Can we not hold the Minister responsible for having committed a contempt of this House, having given assurance that he would take steps for eviction and behind the back of this House issued the stay order ?

Sri B. RACHAIAH.—At the time when I made the assurance in the House, I did not know that there was no standing crop. The parties approached that they should be allowed to harvest the standing crop. Therefore, they are to be continued till the crops are harvested.

Sri H. SIDDAVEERAPPA.—After that standing crop, have they not raised two more crops ?

Sri B. RACHAIAH.—On 6-3-68 we have issued directions that all those people should be evicted.

Sri S. SIVAPPA.—The Minister was pleased to state that the Government is not in a position to evict those people because they are 'goondas'. Action has not been taken because the Government is afraid of them. Is it the intention of the Government to yield to the rebellious people and 'goonda' type of people ? That means there is no Government in Channagiri Taluk !

Sri B. RACHAIAH.—Government is strong enough to deal with those 'goonda' people and they have been dealt with earlier also. According te the order of 1961, these gomal lands vested with the Panchayats and the Panchayat did not make any request to the Government to see that they are evicted. So, it took some time to take action. Government is competent and it has got enough strength to deal with such matters.

Sri H. SIDDAVEERAPPA.—They are the best lands under Bhadra Project to have a Seed Farm; that is why we are very particular.

ಶ್ರೀ ಎಸ್. ಜಿ. ಹಾಲಪ್ಪ.—ಈ ಎರಡು ಗ್ರಾಮಗಳ ಗೋಮಾಳಗಳಿಗೆ ಹರಿಜನರು ಮತ್ತು ಇತರರು ದರಖಾಸ್ತು ಅರ್ಜಿ ಹಾಕಿ 3-4 ವರ್ಷವಾಗಿದೆ. ಈಗಲಾದರೂ ಅರ್ಹರಾದ ಮತ್ತು ಜಮೀನಿಲ್ಲದ ಜನ ಯಾರಿದ್ದಾರೆ ಅವರಿಗೆ ಡಿಸ್ಟ್ರಿಬ್ಯೂಟ್ ಮಾಡಿ ಎಂದು ಡೈರೆಕ್ಷನ್ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—6-3-68 ರಲ್ಲಿ ಡೈರೆಕ್ಷನ್ ಹೋಗಿದೆ, ಅವರನ್ನು ಎವಿಕ್ಟ್ ಮಾಡಿ ದರಖಾಸ್ತು ರೂಲ್ಸ್ ಪ್ರಕಾರ ವಿಲೇವಾರಿ ಮಾಡಿ ಎಂದು ತಿಳಿಸಲಾಗಿದೆ.

Restoration of Tanks in Lingadahalli Hobli

381. **Sri M. MALLAPPA** (Birur).—

Will the Minister for Public Works be pleased to state:—

(*a*) the number of tanks restored in Lingadahalli Hobli in Tarikere Taluk during the last three years

(*b*) the amount spent for each Taluk for restoration ;

(*c*) the number of tanks restored are supplying water for irrigation fullfilling the conditions of restroration ;

(*d*) what is the increased acres according to the sanctioned estimates ;

(*e*) whether it is not a fact that most of the tanks restrored have been breached again and they have not been attended by the Department though years have lapsed ?

Sri ALUR HANUMANTHAPPA (Deputy Minister for Minor Irrigation).—

(*a*) Nil.

(*b*) to (*e*) Does not arise in view of reply to clause (*a*).

ಶ್ರೀ ಎಂ. ಮಲ್ಲಪ್ಪ.—ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಒಂದೂ ಇಲ್ಲ ಎಂದು ಹೇಳಿದ್ದೀರಿ. ಎಲ್ಲಾ ಕೆರೆಗಳೂ ಜೀರ್ಣೋದ್ಧಾರವಾಗಿವೆ ಎಂತಲೇ ಅಥವಾ ಆಗಬೇಕಾದ್ದು ಯಾವುದೂ ಇಲ್ಲ ಅಂತಲೇ ?

† ಶ್ರೀ ಆಲೂರು ಹನುಮಂತಪ್ಪ.—ಈಚೆಗೆ ಯಾವ್ರದೂ ಆಗಿಲ್ಲ, 3 ವರ್ಷದ ಹಿಂದೆ ಆಗಿರುವ ಪಟ್ಟಿ ಇದೆ.

ಶ್ರೀ ಎಂ. ಮಲ್ಲಪ್ಪ.—3 ವರ್ಷದ ಹಿಂದೆ ಆಗಿದೆಯಲ್ಲಾ ಆ ಕೆರೆಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ, ? ಬ್ರೀಚ್ ಮುಚ್ಚಿದ್ದೀರಲ್ಲಾ ಅವು ಒಡೆದು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—1 ಲಕ್ಷದ 26 ಸಾವಿರಾದ 500 ರೂಪಾಯಿ ಖರ್ಚು ಮಾಡಿ 4 ಕೆರೆಗಳನ್ನು ಲಿಂಗದಹಳ್ಳಿ ಹೋಬಳಿಯಲ್ಲಿ ರೆಸ್ಟೋರ್ ಮಾಡಲಾಗಿದೆ, ಅವು ಯಾವುವೂ ಒಡೆದು ಹೋಗಿಲ್ಲ.

ಶ್ರೀ ಎಂ. ಮಲ್ಲಪ್ಪ,—ಹಾಗಾದರೆ ಆ ಕೆರೆಗಳಿಂದ ನೀರನ್ನು ಅಚ್ಚುಕಟ್ಟುದಾರರು ತೆಗೆದು ಕೊಳ್ಳುತ್ತಾ ಇದ್ದಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಹೌದು.

ಶ್ರೀ ಕೆ. ಎಂ. ತಮ್ಮಯ್ಯ.—ಜೀರ್ಣೋದ್ಧಾರ ಮಾಡುವುದು ಇರಲಿ, ಜೀರ್ಣೋದ್ಧಾರ ಮಾಡಿರುವ ಕೆರೆಗಳನ್ನು ಒಡೆದಿದ್ದಾರಲ್ಲಾ ಅದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲ. ಒಡೆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಂ. ತಮ್ಮಯ್ಯ.—ಆ ವಿಚಾರವನ್ನು ತಾಲ್ಲೂಕು ತಹಸೀಲ್ದಾರರ ಗಮನಕ್ಕೆ ತಂದು ಇದ್ದರೂ ಕೂಡ ಅವರು ಕ್ರಮತೆಗೆದುಕೊಂಡಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತಂದರೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಒಡೆದಂತಹವರ ಮೇಲೆ ಕ್ರಮ ತೆಗೆದು ಕೊಳ್ಳಲಾಗುತ್ತದೆ.

ಶ್ರೀ ಹಂಜಿ ಶಿವಣ್ಣ.—ಎರಡು ಕೆರೆಗಳು ಒಡೆದಿವೆ, ಅವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಸರಿಪಾಡಲಿಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಕೆಲವು ಸಂದರ್ಭಗಳಲ್ಲಿ ಮಳೆಗಾಲದಲ್ಲಿ ಒಡೆದು ಹೋಗುತ್ತವೆ, ಆಗ ನಮ್ಮ ಇಲಾಖೆಯವರು ತ್ವರಿತವಾಗಿ ಬ್ರೀಚ್ ಮುಚ್ಚುವಂತಹ ವ್ಯವಸ್ಥೆಯನ್ನು ಮಾಡುವಾಗ ರೆಸ್ಟೋರೇಷನ್ ಮಾಡುವುದಕ್ಕೂ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಪ್ಪ.—ಲಿಂಗದ ಹಳ್ಳಿ ಹೋಬಳಿ ಜೇಡಿ ಕೆರೆ ಮತ್ತು ಹೊಸಕೆರೆ, ಇವುಗಳ ಪೈಕಿ ಒಂದಕ್ಕೆ 60 ಸಾವಿರ ಇನ್ನೊಂದಕ್ಕೆ 80 ಸಾವಿರ ರೂಪಾಯಿ ಖರ್ಚು ಮಾಡಿ ಜೀರ್ಣೋದ್ಧಾರ ಮಾಡಿರುವುದು ಅದೇ ವರ್ಷ ಒಡೆದು ಹೋಗಿ ನೀರು ಸರಬರಾಜಾಗಿಲ್ಲ. ಯಾವುದೂ ಒಡೆದಿಲ್ಲ, ಯಾವುದೂ ಜೀರ್ಣೋದ್ಧಾರ ಮಾಡಬೇಕಾಗಿಲ್ಲ ಎಂದು ಹೇಳುತ್ತಾ ಇದ್ದೀರಿ. ಈಗಲಾದರೂ ಕೂಡ ಅದನ್ನು ಗಮನಕ್ಕೆ ತೆಗೆದುಕೊಂಡು ಅವುಗಳನ್ನು ಜೀರ್ಣೋದ್ಧಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಆ ವಿವರಗಳು ನನ್ನಲ್ಲಿಲ್ಲ. ಮಾನ್ಯ ಸದಸ್ಯರು ಈಗ ಹೇಳುತ್ತಿದ್ದಾರೆ. ಅದನ್ನು ಆದಷ್ಟು ಜಾಗ್ರತೆಯಾಗಿ ವಿಚಾರಿಸುತ್ತೇನೆ.

ಶ್ರೀ ಟಿ. ಎಸ್. ಶಿವಣ್ಣ.—ಈಗ ತಮಗೆ ವರದಿ ಬಂದಿರುವ ಕಾರಣ, ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳಿದ ವಿವರಗಳು ನಮ್ಮ ಮುಂದೆ ಇಲ್ಲ. ಹೊಸಕೆರೆ ಮತ್ತು ಜೇಡಿಕೆರೆ ಇವುಗಳ ಬಗ್ಗೆ ಇನ್ನೂ ಪರಿಶೀಲನೆ ನಡೆಯುತ್ತಿದೆ. ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನೆರೆಯ ಹಾವಳಿಯಿಂದ ಕೆಲವು ಕೆರೆಗಳು ಒಡೆದಿದ್ದರೂ ಇನ್‌ಎಫಿಷಿಯೆಂಟ್ ಎಗ್ಸಿಕೂಷನ್ನಿನಿಂದ ಅನೇಕ ಕೆರೆಗಳು ಸಂಸ್ಥಾನದಲ್ಲಿ ಒಡೆದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅನೇಕ ಕೆರೆಗಳೇನೂ ಇಲ್ಲ. ಅನಿವಾರ್ಯವಾಗಿ ಅವು ಒಡೆದರೆ ಅದನ್ನು ಇಲಾಖೆಯವರು ಸರಿಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ನಮ್ಮ technical people ಅಲ್ಲಿಗೆ ಹೋಗಿ ವಿಚಾರಮಾಡುತ್ತಾರೆ ಹಾಗೂ ಪರಿಶೀಲನೆಮಾಡುತ್ತಾರೆ. ಒಂದು ವೇಳೆ ಏನಾದರೂ ಕಂಟ್ರಾಕ್ಟರದು ತಪ್ಪು ಇದ್ದರೆ ಅವರ ಮೇಲೆ ತಕ್ಕ ಜವಾಬ್ದಾರಿಯನ್ನು ವಹಿಸುತ್ತೇವೆ.

ಶ್ರೀ ಕೆ. ಎಚ್. ಪಾಟೀಲ್.—ಉಪಮಂತ್ರಿಗಳು ಉತ್ತರ ಕೊಡುವಾಗ ಮಳೆಗಾಲದಲ್ಲಿ ಆ ಕೆರೆಗಳು ಒಡೆದಿರಬಹುದೆಂದು ಹೇಳಿದರು. ಈಗ ಮಳೆಗಾಲ ಮುಗಿದನಂತರ ಈ ಯೋಜನೆಯನ್ನು ತೆಗೆದು ಕೊಳ್ಳಬೇಕಾಗಿರುವುದರಿಂದ, ಉಪಮಂತ್ರಿಗಳು ಸತ್ಯಕ್ಕೆ ದೂರವಾದಂಥ ಸಂಗತಿಯನ್ನು ಇಲ್ಲಿ ಹೇಳುತ್ತಿದ್ದಾರೆ. ಈ ಯೋಜನೆಗಳು ಬಹಳ ಹಿಂದಿನವು ಆಗಿರುವುದರಿಂದ ಈಗ ಅನೇಕ ಕೆರೆಗಳು ಅಲ್ಲಿ ಒಡೆದುಹೋಗಲಿಕ್ಕೆ ಕೆಲವರು ಕಾರಣರಾಗಿರುವುದರಿಂದ, ಆ ರೀತಿ ತಪ್ಪುಮಾಡಿದಂತಹವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ನಾನು ಸಾಮಾನ್ಯವಾಗಿ ಉತ್ತರ ಕೊಟ್ಟಿದ್ದು. ಮಾನ್ಯ ಶ್ರೀ ಮಲ್ಲಪ್ಪನವರು ಹೇಳಿದಂಥ ವಿಷಯ ಅವರ ತಾಲ್ಲೂಕಿಗೆ ಸಂಬಂಧಪಟ್ಟ ವಿಷಯ. ಅಲ್ಲಿ ಕೆರೆಗಳು ಒಡೆದುಹೋದ ಬಗ್ಗೆ ವರದಿ ಈಗ ನನ್ನ ಮುಂದೆ ಇಲ್ಲ. ಮಾನ್ಯ ಸದಸ್ಯರು ಹೇಳಿದಂಥ ವಿಷಯವನ್ನು ನಾನು ಪರಿಶೀಲನೆಮಾಡುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಜೇಡಿ ಕೆರೆ ಬ್ರೀಚನ್ನು ಫಿಲಪ್‌ಮಾಡಿದ್ದಕ್ಕೇ ಫೈನಲ್ ಬಿಲ್ ಕಂಟ್ರಾಕ್ಟರ್ ತೆಗೆದುಕೊಂಡಿಲ್ಲ. ಅದರೊಳಗೆ ಇನ್ನೊಂದು ಕೆಲಸ ಮಾಡಿ ಎಂಬುದಾಗಿ ಹೇಗೆ ಹೇಳುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಈಗ ಜೇಡಿಕೆರೆ ಮತ್ತು ಹೊಸಕೆರೆ ವಿಷಯ ಹೇಳಿದ್ದಾರೆ. ಅದನ್ನು ಪರಿಶೀಲನೆಮಾಡಿದನಂತರ ಮಾನ್ಯ ಸದಸ್ಯರಿಗೆ ವಿವರಗಳನ್ನು ಬೇಕಾದರೆ ಕೊಡುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಈಗ ಅಧಿಕಾರಿಗಳೂ ಮತ್ತು ಕಂಟ್ರಾಕ್ಟರುಗಳು ಇಬ್ಬರೂ ಕೂಡ ಸೇರಿಕೊಂಡು ಅಲ್ಲಿ ಲೂಟಿ ಮಾಡಿದ್ದಾರೆ. ಅಲ್ಲಿ ಕೆರೆಗಳು ಒಡೆದುಹೋಗಿದ್ದಕ್ಕೆ ಅವರ ಮೇಲೆ ಜವಾಬ್ದಾರಿ ಇಡುತ್ತೀರಿ. ಅವರ ಜವಾಬ್ದಾರಿಯಲ್ಲಿ ತಪ್ಪಾಗಿದ್ದರೆ ಅವರಿಗೆ ಐನೂರೋ ಅಥವಾ ಸಾವಿರವೋ ಫೈನ್ ಹಾಕುತ್ತೀರಾ, ಅಥವಾ ಅವರಿಬ್ಬರನ್ನೂ ಕೋರ್ಟಿನ ಮುಂದೆ ತರಿಸಿ ತಕ್ಕ ಶಿಕ್ಷೆಯನ್ನು ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಹಾಗೆ ತಪ್ಪುಮಾಡಿದ್ದಲ್ಲಿ ಫೈನ್ ಹಾಕುತ್ತಾರೆ. ಶಿಕ್ಷೆ ಆಗುತ್ತದೆ. ಅದಕ್ಕೆ ಅಧಿಕಾರಿಗಳು ಜವಾಬ್ದಾರರೋ ಅಥವಾ ಕಂಟ್ರಾಕ್ಟರ್ ಜವಾಬ್ದಾರರೋ ಎಂಬುದನ್ನು ತಿಳಿದು ಅವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳುತ್ತೇವೆ.

Smuggling of foodgrains into Maharashtra from Aland border

383. SRI DIGAMBARA RAO B. KALMANKAR (Aland).—

Will the Minister for Food and Civil Supplies be pleased to state :—

(*a*) whether the smuggling of foodgrains from Aland border into Maharashtra is rampant; if so, how many cases are detected by police and Revenue Authorities;

(*b*) in how many cases prosecutions are launched during 1967-68 and till now;

(*c*) whether it has come to the notice of the Government that there is a racket of the grain merchants of Gulbarga, lorry owners and the police officers of Gulbarga District, who are responsible for large-scale smuggling of foodgrains into Maharashtra from Aland border;

(*d*) if so, the steps the Government has taken to break the said racket?

A.—SRI B. D. JATTI (Minister for Food and Civil Supplies).—

(*a*) No. But the police have detected 9 stray cases of attempted smuggling of foodgrains from Aland border up to 22nd February, 1968.

(*b*) In 9 cases.

(*c*) No.

(*d*) Does not arise.

SRI DIGAMBARA RAO B. KALMANKAR.—In answer to (a) it has been replied that police have detected 9 stray cases of attempted smuggling of foodgrains from Aland. Whether it is not a fact that only in stray cases they detected but they allow daily some vehicle to pass?

ಶ್ರೀ ಬಿ. ಡಿ. ಜತ್ತಿ.—ಅಂತಹ ಕೇಸುಗಳು ಪೋಲೀಸಿನವರ ದೃಷ್ಟಿಗೂ ಹಾಗೂ ಸರ್ಕಾರದ ದೃಷ್ಟಿಗೂ ಬಿದ್ದಿಲ್ಲ.

SRI DIGAMBARA RAO B. KALMANKAR.—Is it not a fact that this matter was brought to the notice of Hon'ble Minister, when he was on tour in Gulbarga and was attending the District Committee meeting, by the members of the Press and also myself, that some particular vehicles are daily carrying goods to Maharashtra and this fact was also noted by the Minister?

ಶ್ರೀ ಬಿ. ಡಿ. ಜತ್ತಿ.—ಈಗ ಇಲ್ಲಿ ಹೇಳಿದ ಸಂಗತಿಯನ್ನು ಮಾನ್ಯ ಸದಸ್ಯರು ನಾನು ಗುಲ್ಬರ್ಗಾಕ್ಕೆ ಹೋದಾಗ್ಗೆ ಹೇಳಿದ್ದರು.

ಶ್ರೀ ಎಂ. ನಾಗಪ್ಪ.—ಸ್ವಾಮಿ (ಅ) ಗೆ ಉತ್ತರವಾಗಿ 9 ಪ್ರಕರಣಗಳನ್ನು ಹಿಡಿದಿದ್ದೇವೆ ಎಂದು ಹೇಳಿದ್ದೀರಿ. ಆ 9 ಪ್ರಕರಣಗಳಲ್ಲಿ ಹಿಡಿದಂಥ ಮಾಲು ಎಷ್ಟು ? ಅದು ಹೆಚ್ಚಾಗಿ ವಕ್ಕಲಗರು ಮಾಡತಕ್ಕ ವ್ಯವಹಾರದಿಂದ ಹಿಡಿದಿದ್ದೀರಿ, ವ್ಯಾಪಾರ ಮಾಡತಕ್ಕವರಿಂದ ಹಿಡಿದಿಲ್ಲ ಎಂದು ಈ ಪ್ರಕರಣಗಳಲ್ಲಿ ತಿಳಿದು ಬರುತ್ತದೆ ಅಲ್ಲವೆ ? ದಯವಿಟ್ಟು ಹೇಳಬೇಕು.

ಶ್ರೀ ಬಿ. ಡಿ. ಜತ್ತಿ.—ರೈತರು ಹೆಚ್ಚಿಗೆ ಇಲ್ಲ. ವರ್ತಕರು 9. ಆ 9 ಕೇಸಿನಲ್ಲಿ 5 ಕೇಸು ಎವಿಕ್ಷನ್ ಆಗಿದೆ. ಉಳಿದ 4 ಕೇಸುಗಳು ಪೆಂಡಿಂಗ್ ಫೈರ್‌ನಲ್ಲಿ ಇವೆ. ವಿವರಗಳನ್ನು ಬೇಕಾದರೆ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಹಾರಾಷ್ಟ್ರ ಬಾರ್ಡರ್ ಮಾತ್ರ ಅಲ್ಲ. ಮೈಸೂರು ಕೇರಳ ಬಾರ್ಡರ್‌ನಲ್ಲೂ ಸಹಿತ ಇದೇರೀತಿಯಾಗಿ ಬೇಕಾದಷ್ಟು ಆಹಾರಧಾನ್ಯಗಳು ಬೇರೆ ಕಡೆ ಹೋಗುತ್ತಾ ಇವೆ. ಸರಿಯಾದಂಥ ಬಂದೋಬಸ್ತಿಗೆ ತಕ್ಕಂಥ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದು ತಮ್ಮ ಮೇಲೆ ಆರೋಪಣೆ ಇದೆ ಎಂದು ಗೊತ್ತಿದೆಯೇ ?

ಶ್ರೀ. ಬಿ. ಡಿ. ಜತ್ತಿ.—ಆರೋಪಣೆ ಮಾಡುವುದು ಯಾರು ಬೇಕಾದರೂ ಮಾಡಬಹುದು. ಅದು ಇಲ್ಲದಂತೆ ಇಲ್ಲ. ಕೆಲವೆಡೆಗೆ ಹೋಗುತ್ತದೆ, ಏನೂ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

Sri DIGAMBARA RAO B. KALMANKAR.—May I know the vehicle numbers and the names of their owners ?

Sri B. D. JATTI.—Can I read the whole list ? Or can I keep it on the table ?

Mr. DEPUTY SPEAKER.—The hon'ble Minister may keep it on the Table of the House *.

ಶ್ರೀ ಎಂ. ನಾಗಪ್ಪ.—ಗುಲಬರ್ಗ, ಬೀದರ್ ಜಿಲ್ಲೆಯಲ್ಲಿ ಮೊನ್ನೆ ದಿವಸ ಒಂದು ಲಾರಿಯನ್ನು ತಹಸೀಲ್ದಾರರು ಬೆನ್ನಟ್ಟಿ ಹೋಗಿ ಡ್ಯಾಷ್ ಹೊಡೆದು ಸತ್ತು ಹೋಗಿರುವ ಪ್ರಸಂಗ ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಬಿ. ಡಿ. ಜತ್ತಿ.—ನಮ್ಮ ಮುಂದಿರುವ ಪ್ರಶ್ನೆಗೆ ನಿಮಗೆ ಉಪಪ್ರಶ್ನೆಗೆ ಸಂಬಂಧ ಆಗುವುದಿಲ್ಲ ಎಂದು ಕಾಣುತ್ತದೆ.

** ** ** ** **

Underground Drainage Scheme in Tumkur

384. Sri B. P. GANGADHAR (Tumkur).—

Will the Minister for Home and Municipal Administration be pleased to state :—

(*a*) whether the Tumkur Town Municipality has prepared plan and estimate for the underground drianage in Tumkur ;

(*b*) the stage at which the request of the Municipality for the underground drainage is pending and before whom and since how long ;

(*c*) when the work for the above project will be started and by what time it will be completed ?

---

* Copy placed in the Mysore Legislature Library.

** Matter expunged as ordered by the Chair.

A.—Sri R. M. PATIL (Minister for Home and Municipal Administration).—

(*a*) and (*b*) Plans and Estimates amount to Rs. 21.18 lakhs are under finalisation by the P. W. D.

(*c*) The work will be started as soon as the scheme is sanctioned

ಶ್ರೀ ಬಿ. ಪಿ. ಗಂಗಾಧರ್.—ತುಮಕೂರಿನ ಒಳಚರಂಡಿಯ ವಿಚಾರ ಸುಮಾರು ಹತ್ತಾರು ವರ್ಷದಿಂದ ಮುಂದೂಡುತ್ತಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri R. M. PATIL.—This matter is first mooted in 1962 by the Tumkur Municipal Council. On account of its financial difficulties and due to its then unsound position of the finances, the Government did not approve the underground drainage scheme in 1964. Again this matter has been mooted in 1967. The same difficulty is there. However, this matter is under consideration of the Chief Engineer.

1-30 P.M.

Sri B. P. GANGADHAR.—When you say that financial position is not sound, may I know what exactly you mean ?

Sri R. M. PATIL.—The Municipal Council is indifferent towards recovery.

ಶ್ರೀ ಬಿ. ಪಿ. ಗಂಗಾಧರ್.—ಈಗ ತಾವು ಹೇಳುತ್ತಿರುವ ಅಂಕಿ ಅಂಶಗಳು ಆ ಮುನಿಸಿಪಾಲಿಟಿಯವರನ್ನು ದೂಷಿಸುವುದಕ್ಕಾಗಿ ಹೇಳುತ್ತಿರುವ ಅಂಕಿಗಳಲ್ಲವೇ ?

Sri R. M. PATIL.—Government is examining so far as the administration of the Municipal Council is concerned. This is one of the important feature against it.

ಶ್ರೀ ಬಿ. ಪಿ. ಗಂಗಾಧರ್.—ಅವರು ಸರ್ಕಾರಕ್ಕೆ ಕೊಡಬೇಕಾದ ಹಣ ಮತ್ತು ಬಡ್ಡಿ ಎರಡನ್ನೂ ಕೊಟ್ಟಿದ್ದಾರೋ ಇಲ್ಲವೋ ?

Sri R. M. PATIL.—That is an entirely different matter. Mearly because they have paid Government dues, that does not necessarily mean that the financial position is sound so as to take a burden of 21 lakhs.

ಶ್ರೀ ಬಿ. ಪಿ. ಗಂಗಾಧರ್.—ಅವರು ಆ ಕೆಲಸಕ್ಕೆ 21 ಲಕ್ಷ ರೂಪಾಯಿಗಳನ್ನು ಅಂದಾಜು ಮಾಡಿದ್ದರೆ ಅದಕ್ಕೆ ಸರ್ಕಾರದವರು ಸಹಾಯ ಕೊಟ್ಟಿದ್ದರೆ ಆ ಕೆಲಸವಾಗುತ್ತಿರಲಿಲ್ಲವೇ ? ಅದನ್ನು ತಾವು ಆಲೋಚನೆ ಮಾಡಿದ್ದೀರಾ ?

Sri R. M. PATIL.—Sir, my friend has not understood the implication of the whole question. Mere sanctioning of the scheme of under-ground drainage will not be enough unless there is adequate water supply to drain out the drains.

ಶ್ರೀ ಬಿ. ಪಿ. ಗಂಗಾಧರ್.—ಪರಿಸ್ಥಿತಿ ದಿನ ದಿನಕ್ಕೂ ಅಲ್ಲಿ ಹದಗೆಡುತ್ತಿದೆ ಎಂದು ಆ ವಿಷಯವನ್ನು ತಮ್ಮ ಗಮನಕ್ಕೂ ಮತ್ತು ಹಿಂದಿದ್ದ ಮಂತ್ರಿಗಳ ಗಮನಕ್ಕೂ ಆ ಟೌನಿನವರು ತಂದಿರಲಿಲ್ಲವೇ ?

Sri R. M. PATIL.—There is a proposal to have a comprehensive water supply scheme for Tumkur costing 28,75,000. That is also under examination.

ಶ್ರೀ ಬಿ. ಪಿ. ಗಂಗಾಧರ್.—ಇನ್ನೆಷ್ಟು ವರ್ಷಗಳಲ್ಲಿ ಸರ್ಕಾರದವರು ಈ ಕೆಲಸವನ್ನು ಮುಗಿಸಬೇಕೆಂದಿದ್ದಾರೆ ?

Sri R. M. PATIL.—The entire scheme will have to be taken up.

ಶ್ರೀ ಬಿ. ಪಿ. ಗಂಗಾಧರ್.—ಇದನ್ನು ಮುಗಿಸಲು ಒಂದು ಕಾಲ ನಿಗದಿಯನ್ನು ಮಾಡಲು ಸಾಧ್ಯವಿಲ್ಲವೇ ?

Sri R. M. PATIL.—It depends upon the availability of funds. Any way this year it will be finalised.

Providing of Electricity to Villages and wells in Muddebihal Taluk

385. Sri S. M. GUREDDI (Muddebihal).—

Will the Minister for Public Works be pleased to state :—

(*a*) the number of villages and wells in Muddebihal Taluk in respect of which the Mysore Electricity Board had a scheme for providing electricity during 1967-68 ;

(*b*) the number of villages and wells to which electricity has been provided so far ?

A.—Sri VEERENDRA PATIL (Minister for Public Works).—

(*a*) (i) 5 Villages.

(ii) 25 Wells.

(*b*) Two villages are electrified.

ಶ್ರೀ ಎಸ್. ಎಂ. ಗುರೆಡ್ಡಿ.—ವಿದ್ಯುಚ್ಛಕ್ತಿ ಮಂಡಲಿಯವರ ಯೋಜನೆಯಲ್ಲಿ 5 ಗ್ರಾಮಗಳು ಮತ್ತು 25 ಬಾವಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಕಾರ್ಯಕ್ರಮ ಇದ್ದರೂ ಕೇವಲ ಎರಡು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ ಎಂದಿದೆ. ಆ ಗ್ರಾಮಗಳು ಯಾವುವು ಮತ್ತು ಭಾವಿಗಳಿಗೆ ಒದಗಿಸದೆ ಇರುವುದಕ್ಕೆ ಕಾರಣವೇನು ?

†ಶ್ರೀ ವೀರೇಂದ್ರಪಾಟೀಲ್.—ಮುದ್ದೆಬಿಹಾಳ್ ಮತ್ತು ತಾಳಿಕೋಟೆ.

ಶ್ರೀ ಎಸ್. ಎಂ. ಗುರೆಡ್ಡಿ.—5 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕ ಯೋಜನೆಯಿದ್ದರೂ—1966ರಲ್ಲಿ ಒಂದೂರಿಗೂ ಮತ್ತು 1967ರಲ್ಲಿ ಒಂದೂರಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ. 5 ಗ್ರಾಮಗಳಿಗೂ ಒದಗಿಸಲು ಇದ್ದ ತೊಂದರೆ ಏನು ?

ಶ್ರೀ ವೀರೇಂದ್ರಪಾಟೀಲ್.—5 ಗ್ರಾಮಗಳಿಗೆ ಒದಗಿಸಬೇಕೆಂಬ ಯೋಜನೆಯನ್ನು ಹಾಕಿಕೊಂಡರು. ಆದರೆ ಅವರಲ್ಲಿ ಅದಕ್ಕೆ ಹಣದ ಅಭಾವ ಬಂದುದರಿಂದ ಎಲ್ಲಾ ಗ್ರಾಮಗಳಿಗೂ ಮುಗಿಸಲಿಕ್ಕೆ ಆಗಲಿಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ವಿದ್ಯುಚ್ಛಕ್ತಿ ಮಂಡಲಿಯವರು ಇಂತಿಷ್ಟು ಗ್ರಾಮಗಳಿಗೆ ಇಂತಿಷ್ಟು ಅವಧಿಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂಬ ಯೋಜನೆಯನ್ನು ಅವರೇ ತಯಾರು ಮಾಡಿಕೊಳ್ಳುತ್ತಾರೋ ಅಥವಾ ಸರ್ಕಾರದವರೇನಾದರೂ ಒಂದು ಡೈರೆಕ್ಷನ್ನನ್ನು ಕೊಡುತ್ತಾರೋ ಅಥವಾ ಆಯಾಯ ಸ್ಥಳದ ಪರಿಸ್ಥಿತಿ ನೋಡಿಕೊಂಡು ಆ ಕೆಲಸಗಳನ್ನು ಮಾಡಲು ಅಲ್ಲಿನ ತಾಲ್ಲೂಕ್ ಬೋರ್ಡಿನವರು ಅಥವಾ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಬೋರ್ಡಿನವರೇನಾದರೂ ಸಲಹೆಗಳನ್ನು ನೀಡುತ್ತಾರೋ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆಲ್ಲಾ ಕಾನೂನು ರೂಲ್ ಮತ್ತು ಪ್ರೊಸೀಜರುಗಳಿವೆ. ಅಲ್ಲಿ ಇದುವರೆಗೆ ಎಷ್ಟು ಪರ್ಸೆಂಟ್ ಎಲೆಕ್ಟ್ರಿಫೈ ಮಾಡಲಾಗಿದೆ, ಮತ್ತು ಆ ಗ್ರಾಮಗಳು ಮೇನ್ ಕೆ. ವಿ. ಲೈನಿಗೆ ಹತ್ತಿರವಲ್ಲಿವೆಯೋ ಅಥವಾ ದೂರದಲ್ಲಿವೆಯೋ ಅದನ್ನೂ ನೋಡಿಕೊಂಡು ಕೆಲಸ ಮಾಡುತ್ತಾರೆ. ಅಲ್ಲದೆ ಪಂಚಾಯಿತಿಯುವರು ಒಂದು ರೆಸಲ್ಯೂಷನ್ ಸಹಾ ಮಾಡಬೇಕಾಗಿರುತ್ತದೆ. ಇಷ್ಟೆಲ್ಲವನ್ನೂ ಅನುಸರಿಸಿ ಕೆಲಸ ಮಾಡುತ್ತಾರೆ.

ಶ್ರೀ ಎಂ. ರಾಮಣ್ಣ.—ಎಂ. ಎಸ್. ಇ. ಬಿ. ಅವರು ಪ್ರತಿ ವರ್ಷದಲ್ಲೂ ಒಂದು—ಎರಡು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಾ ಹೋದರೆ ನೂರಾರು ವರ್ಷಗಳಾದರೂ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸಿಕ್ಕಲಾರದು ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆಲ್ಲಾ ಹೆಚ್ಚಿನ ಹಣ ಬೇಕು. ಆದರೆ ಅವರಲ್ಲಿ ಹಣದ ಅಭಾವ ಜಾಸ್ತಿಯಾಗಿದೆ. ಈ ಹಿಂದೆ ಅವರಿಗೆ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಇಷ್ಟಿಷ್ಟು ಎಂದು ಹಣವನ್ನು ಕೊಡುತ್ತಿದ್ದರು. ಈಗ ರಾಜ್ಯ ಸರ್ಕಾರದವರೇನೂ ಹಣವನ್ನು ಕೊಡುತ್ತಿಲ್ಲ. ಇನ್ನು ಮುಂದೆ ಎಲೆಕ್ಟ್ರಿಸಿಟಿ ಬೋರ್ಡಿನವರೇ ತಮ್ಮಲ್ಲಿರತಕ್ಕ ಹಣದ ಆಧಾರದ ಮೇಲೆ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಬೇಕೆಂದು ಹೇಳಿದ್ದೇವೆ. ಆದ್ದರಿಂದ ಅವರು ಎಷ್ಟೆಷ್ಟು ಹಣ ಒದಗುತ್ತದೋ ಅಷ್ಟಷ್ಟು ಕೆಲಸ ಮಾಡಿಕೊಂಡು ಬರುತ್ತಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಬಿಜಾಪುರ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಕಾರ್ಯ ಬಹಳ ನಿಧಾನವಾಗಿ ನಡೆಯುತ್ತಿದೆ. ಈಗ ರಾಯಚೂರು ಜಿಲ್ಲೆ, ಬೀದರ್ ಜಿಲ್ಲೆ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಸಂಬಂಧಪಟ್ಟಹಾಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ವಿಷಯದಲ್ಲಿ ಒಂದು ಮಾಸ್ಟರ್ ಪ್ಲಾನನ್ನು ವಿದ್ಯುಚ್ಛಕ್ತಿ ಬೋರ್ಡಿನವರು ತಯಾರು ಮಾಡಿದ್ದಾರೆಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ, ಅದೇರೀತಿ ಬಿಜಾಪುರ ಜಿಲ್ಲೆಗೂ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿ ಪ್ರತಿವರ್ಷವೂ ಕನಿಷ್ಟ ಪಕ್ಷ ನೂರಾರು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಆ ಯೋಜನೆಯಲ್ಲಿ ಅಳವಡಿಸುವುದಕ್ಕೆ ಸಾಧ್ಯವಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಅದು ಮಾಸ್ಟರ್ ಪ್ಲಾನ್ ಎನ್ನುವುದು ಹೆಸರು ಬಹಳ ದೊಡ್ಡದು, ಅಷ್ಟೆ. ಆ ಕೆಲಸಗಳನ್ನು ಮಾಡುವುದಕ್ಕೆ ಶಕ್ತಿ ಇಲ್ಲದೆ ಇರುವಾಗ ಮಾಸ್ಟರ್ ಪ್ಲಾನ್ ಮಾಡುವುದರಲ್ಲಿ ಅರ್ಥವಿಲ್ಲ. ಮಾಸ್ಟರ್ ಪ್ಲಾನು ಮಾಡುವುದಾದರೆ ಬೀದರ್ ಜಿಲ್ಲೆಗೂ ಮಾಡಬಹುದು, ಎಲ್ಲಾ ಜಿಲ್ಲೆಗಳಿಗೂ ಬೇಕಾದರೆ ಮಾಡಬಹುದು. ಆದರೆ ಅದನ್ನು ಕಾರ್ಯಗತ ಮಾಡುವುದಕ್ಕೆ ದುಡ್ಡಿನ ಪ್ರಶ್ನೆ ಬರುತ್ತದೆ. ಈಗಾಗಲೇ ಎಲೆಕ್ಟ್ರಿಸಿಟಿ ಬೋರ್ಡಿನವರು ನಮ್ಮ ರಾಜ್ಯದಲ್ಲಿರುವಂತಹ ಎಲ್ಲಾ ಹಳ್ಳಿಗಳಿಗೂ ಬಾವಿಗಳಿಗೆ ಮತ್ತು ಪಂಪುಸೆಟ್ಟುಗಳಿಗೆ ಮನೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಸಲುವಾಗಿ 95 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ಎಂದು ಒಂದು ರಫ್ ಎಸ್ಟಿಮೇಟನ್ನು ತಯಾರು ಮಾಡಿದ್ದಾರೆ. ಮಾಸ್ಟರ್ ಪ್ಲಾನನ್ನು ಮಾಡಿದ ತಕ್ಷಣ ಹಣಬೇಕು. ಹಣ ಇಲ್ಲದೆ ಮಾಸ್ಟರ್ ಪ್ಲಾನನ್ನು ಮಾಡಿ ಏನು ಪ್ರಯೋಜನ?

ಉಪಾಧ್ಯಕ್ಷರು.—488ನೆಯ ಪ್ರಶ್ನೆಗೆ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಇಲ್ಲವೆ ಇರುವುದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Main Canal of Tungabhadra Project

388. Sri M. NAGAPPA (Raichur).—

Will the Minister for Public Works be pleased to state :—

(a) whether according to the original plan the main canal (Left Bank) of Tungabhadra Project was to cover the northern and many of eastern villages of the Raichur Taluk ;

(b) if so, the reason for changing the scheme and when this was done

(c) whether there is any scheme to provide a distributory to those villages which were to be irrigated under original scheme;

(d) whether injustice has not been done to these villages by changing the scheme;

(e) how the Government proposes to fulfil their longstanding ambitions?

A.—Sri VEERENDRA PATIL (Minister for Public Works).—

(a) No.

(b) Does not arise in view of reply to clause (a).

(c) No.

(d) Does not arise in view of reply to clauses (a) and (b),

(e) This will be examined.

ಶ್ರೀ ಎಂ. ನಾಗಪ್ಪ.—ತುಂಗಭದ್ರಾ ಪ್ರಾಜೆಕ್ಟನ್ನು ಮೊದಲು ಪ್ರಾರಂಭಮಾಡುವಾಗ ರಾಯಚೂರು ಜಿಲ್ಲೆಯಲ್ಲಿ ಯಾವ ಭಾಗಕ್ಕೆ ಕೆನಾಲ್ ಮಾಡಿದರೆ ಹೆಚ್ಚು ನೀರಾವರಿಯಾಗುತ್ತದೆ ಎನ್ನುವ ಉದ್ದೇಶ ಇತ್ತು ಎಂಬುದನ್ನು ತಾವು ಹೇಳುತ್ತೀರಾ?

† ಶ್ರೀ ವೀರೇಂದ್ರ ಪಾಟೀಲ್.—1951ನೇ ಇಸವಿಯಲ್ಲಿ ಹೈದರಾಬಾದ್ ಸರ್ಕಾರದಲ್ಲಿ ಇದನ್ನು ಸ್ಯಾಂಕ್ಷನ್ ಮಾಡಿದ ಪ್ರಕಾರ ತುಂಗಭದ್ರಾ ಪ್ರಾಜೆಕ್ಟಿನ ಎಡದಂಡೆ ನಾಲೆಯಿಂದ 127ನೇ ಮೈಲಿಯಿಂದ 14 ಮೈಲಿ ಬ್ರಾಂಚ್ ಕೆನಾಲ್ ಮಾಡಿ 5 ಲಕ್ಷ 80 ಸಾವಿರ ಎಕರೆ ನೀರಾವರಿ ಮಾಡಿದ್ದಾರೆ.

ಶ್ರೀ ಎಂ. ನಾಗಪ್ಪ.—127ನೇ ಮೈಲಿಯಿಂದ ಬ್ರಾಂಚ್ ಕೆನಾಲ್ ಹೋಗಿದೆ ಎಂದು ಹೇಳುತ್ತೀರಿ, ರಾಯಚೂರಿನ ಉತ್ತರದ ಭಾಗಕ್ಕೆ ಕೆನಾಲ್ ಹೋಗುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ನಾಗಪ್ಪ.—ಹಿಂದೆ ಇದ್ದ ಮ್ಯಾಪನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಅದನ್ನು ಈಗ ಡೈವರ್ಟ್ ಮಾಡಿದ್ದಾರೆ. 127 ನೇ ಮೈಲಿಯಿಂದ ಉತ್ತರದಿಂದ ದಕ್ಷಿಣಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಇದರಿಂದ ಉತ್ತರದ ಹಳ್ಳಿಗಳಿಗೆ ಬರತಕ್ಕಂಥ ನೀರು ದಕ್ಷಿಣದ ಹಳ್ಳಿಗಳಿಗೆ ಮಾತ್ರ ಬರುತ್ತದೆ. ಇದರಿಂದ ಉತ್ತರದ ಹಳ್ಳಿಗಳಿಗೆ ಸಾಕಷ್ಟು ಅನ್ಯಾಯವಾಗಿದೆ. ಇದನ್ನು ಸರಿಪಡಿಸಿ ಉತ್ತರದ ಹಳ್ಳಿಗಳಿಗೆ ಅನುಕೂಲವಾಗುವಂತೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಅದು ಬೇರೆ ಪ್ರಶ್ನೆ. ಮೊದಲು 127ನೇ ಮೈಲಿಯವರೆಗೂ ಕೆನಾಲ್ ಮಾಡಬೇಕೆಂದು ಇತ್ತು, ಇತ್ತೀಚೆಗೆ 141 ಮೈಲಿಯವರೆಗೂ ಮಾಡಿದ್ದೇವೆ. ಈಗ ಮಾನ್ಯ ಸದಸ್ಯರು ಯಾವ ಏರಿಯಾಕ್ಕೆ ನೀರನ್ನು ಒದಗಿಸಬೇಕೆಂದು ಬೇಡುತ್ತಿದ್ದಾರೆಯೋ ಅದು ಕೃಷ್ಣಾ ಬೇಸಿನ್‌ನಲ್ಲಿ ಇದೆ. ಆದ್ದರಿಂದ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಆದಮೇಲೆ ಆ ಏರಿಯಾಕ್ಕೆ ಬೇಕಾದರೆ ನೀರನ್ನು ಒದಗಿಸಬಹುದು.

ಶ್ರೀ ಎಂ. ನಾಗಪ್ಪ.—ತಾವು ದಯವಿಟ್ಟು ಮ್ಯಾಪನ್ನು ನೋಡಿದರೆ ತಮಗೆ ಕಾಣುತ್ತದೆ. ಈಗ ತಾವು ತೆಗೆದುಕೊಂಡುಹೋಗಿರುವ ಕೆನಾಲ್ ರಾಯಚೂರು ಪಟ್ಟಣದ ದಕ್ಷಿಣಕ್ಕೆ ತೆಗೆದುಕೊಂಡು ಹೋಗಿದ್ದೀರಿ, ಮೊದಲನೆಯ ಮ್ಯಾಪ್ ಪ್ರಕಾರ ಉತ್ತರ ಭಾಗಕ್ಕೆ ಕೆನಾಲನ್ನು ತೆಗೆದುಕೊಂಡು ಹೋಗಬೇಕಾಗಿತ್ತು. ಈಗ ಅದನ್ನು ಡೈವರ್ಟ್ ಮಾಡುವುದಕ್ಕೆ ಕಾರಣವೇನು?

ಶ್ರೀ ವೀರೇಂದ್ರ ಪಾಟೀಲ್.—ನನಗೆ ಗೊತ್ತಿರುವ ಪ್ರಕಾರ ಹೈದರಾಬಾದ್ ಸರ್ಕಾರದವರು 1951ರಲ್ಲಿ ಯಾವ ರೀತಿ ಈ ಸ್ಕೀಮನ್ನು ಮಂಜೂರು ಮಾಡಿದ್ದಾರೆ, ಅದನ್ನು ಡೀವಿಯೇಷನ್ ಮಾಡಿಲ್ಲ.

ಶ್ರೀ ಎಂ. ನಾಗಪ್ಪ.—1951ರ ಸ್ಕೀಮ್ ಪ್ರಕಾರ ಉತ್ತರದಲ್ಲಿನ ಅನೇಕ ಗ್ರಾಮಗಳು ನೀರಾವರಿಗೊಳಪಡುತ್ತಿದ್ದವೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಇನ್‌ವೆಸ್ಟಿಗೇಷನ್ ಮಾಡಿದ್ದರ ಮೇಲೆ ಹೇಳುತ್ತಿರಬಹುದು. ಯಾವುದೇ ಒಂದು ಪ್ರಾಜೆಕ್ಟನ್ನು ಮಾಡುವಾಗ ಆಲ್ಟರ್‌ನೇಟಿವ್ ಇನ್‌ವೆಸ್ಟಿಗೇಷನ್ ಮಾಡಿರುತ್ತಾರೆ. ಅಡ್ಮಿನಿಸ್ಟ್ರೇಟೀವಲಿ ಅಪ್ರೂವ್‌ಡ್ ಮತ್ತು ಪ್ರಾಜೆಕ್ಟ್ ಸ್ಯಾಂಕ್ಷನ್ ಮಾಡಿರುವ ಬಗ್ಗೆ ನಾನು ಹೇಳುತ್ತಿರುವುದು.

ಶ್ರೀ ಎಂ. ನಾಗಪ್ಪ.—ತಮಗೆ ಅಡ್ಮಿನಿಸ್ಟ್ರೇಟೀವ್‌ಲಿ ಅಪ್ರೂವ್‌ಡ್ ಆಗಿರುವ ಮ್ಯಾಪನ್ನು ಕೊಟ್ಟರೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಲ್ಲಿ ಈ ಬಗ್ಗೆ ಬೇರೆ ದಾಖಲೆಗಳು ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಿ. ಎಸ್. ಪಾಟೀಲ್.—127ನೇ ಮೈಲಿಯಿಂದ 141ನೇ ಮೈಲಿಯವರೆಗೆ ಹೋಗಿದೆ ಯೆಂದು ಹೇಳಿದಿರಿ. ಯಾವ ದಿಕ್ಕಿನಲ್ಲಿ ಹೋಗಿದೆ, ಯಾವ ಏರಿಯಾದಲ್ಲಿ ಹೋಗಿದೆ ಮತ್ತು ಇದರಿಂದ ಉತ್ತರದಲ್ಲಿನ ಗ್ರಾಮಗಳಿಗೆ ಡಿಪ್ರೈವ್ ಆಗುತ್ತಿದ್ದರೆ ಪರಿಹಾರ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲು 127ನೇ ಮೈಲಿಯವರೆಗೆ ಮಾತ್ರ ಚಾನಲ್ ತೋಡಿ ನಿಲ್ಲಿಸಿದ್ದರು. ಅದನ್ನೇ ಮುಂದೆ ಎಕ್ಸ್‌ಟೆಂಡ್ ಮಾಡಿಕೊಂಡು ಹೋಗಿದ್ದೇವೆ. ಹೆಚ್ಚಿನ ಏರಿಯಾವನ್ನು ನೀರಾವರಿಗೆ ಒಳಪಡಿಸಬೇಕೆಂದು ರಾಯಚೂರಿನ ತಾಲ್ಲೂಕಿನಲ್ಲಿ ಮೊದಲಿನ ಏರಿಯಾವನ್ನೇ 141 ಮೈಲಿಯವರೆಗೆ ವಿಸ್ತರಿಸಿದ್ದೇವೆ.

ಶ್ರೀ ಎಂ. ನಾಗಪ್ಪ.—ಈಗ ತಮ್ಮ ಪ್ಲಾನಿನ ಪ್ರಕಾರ ಮೊದಲಿನ ಹಳ್ಳಿಗಳೇ ನೀರಾವರಿಗೆ ಒಳಪಡುತ್ತವೋ ಅಥವಾ ಬೇರೆ ಹಳ್ಳಿಗಳು ನೀರಾವರಿಗೆ ಒಳಪಡುತ್ತವೊ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಇಟ್ಟುಕೊಂಡಿರುವ ದಾಖಲೆಯನ್ನು ನನಗೆ ಕೊಟ್ಟರೆ ನನ್ನ ಹತ್ತಿರವಿರುವ ದಾಖಲೆಗೆ ಹೋಲಿಸಿ ನೋಡಿ ವ್ಯತ್ಯಾಸ ಏನಿದೆ ಎಂಬುದನ್ನು ಕಂಡು ಹಿಡಿದು ಹೇಳಬಹುದು.

ಶ್ರೀ ವಿ. ಎಸ್. ಪಾಟೀಲ್.—ತೊಂದರೆಗೆ ಒಳಗಾದ ಗ್ರಾಮಗಳು ಇದ್ದರೆ ಅವಕ್ಕೆ ಪರಿಹಾರ ವನ್ನು ಕೊಡುತ್ತೀರಾ ?

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ನೋಡುತ್ತೇನೆಂದು ಹೇಳಿದ್ದಾರೆ.

Sanction of Land for Cashew Cultivation

389. Sri H. D. DEVE GOWDA (Holenarsipur).—

Will the Minister for Revenue and Forests be pleased to state :—

(*a*) the extent of land sanctioned for cashew cultivation in the State during the last six years (1st January 1960 to 1st January 1966) (Yearwise and Districtwise figures are needed) ;

(*b*) whether the lands so granted were utilised for the said purpose ;

(*c*) if not, whether Government would appoint a Senior Officer of the State to conduct an enquiry against the persons who have violated such rules and to take suitable action against them ?

A.—Sri B. RACHAIAH (Minister for Revenue and Forests).—

(*a*) *Vide* Statement 'A' appended.

(*b*) Yes. Except 27·28 acres.

(*c*) Does not arise since the area not brought under cashew cultivation is withdrawn for breach of conditions.

STATEMENT 'A'

Statement showing the extent of land sanctioned for Cashew cultivation (Yearwise and Districtwise)

District	1960	1961	1962	1963	1964	1965
1 Gulbarga	...	...	...	...	...	...
2 Dharwar	...	...	...	...	...	...
3 Bijapur	...	...	...	...	...	...
4 Bellary	...	...	...	...	...	...
5 Raichur	...	...	...	...	...	...
6 Belgaum	...	...	...	...	...	...
7 Kolar	...	...	75–00	35–00	126–00	88–00
8 Hassan	22–30	10–00	48–14	...	46–05	16–34
9 Coorg	46–24	25–32	40–35	33–10	94–23	23–06
10 Chickmagalur	105–00	74–13	133–00	50–00	97–00	24–00
11 Bangalore	...	...	...	...	...	20–00
12 North Kanara	107–06	70–00	57–26	24–00	59–10	82–30
13 Shimoga	72–20	213–14	255–06	298–13	164–36	121–32
14 Bidar	...	...	...	...	...	...
15 Chitradurga	...	19–00	119–00	...	...	...
16 Tumkur	...	4–30	...	...	100–00	50–00
17 South Kanara	222–14	61–20	143–35	90–28	56–20	32–20
18 Mysore	...	...	...	...	...	25–00
19 Mandya	...	...	...	...	...	25–00
Total ...	576–14	478–29	872–36	531–11	744–14	509–02

Grand Total ... 3,712–26 acres

ಶ್ರೀ ಎಚ್. ಡಿ. ದೇವೇಗೌಡ.— ಕಳೆದ ಆರು ವರ್ಷಗಳಿಂದಲೂ ರಾಜ್ಯದಲ್ಲಿ ಗೋಡಂಬಿ ವ್ಯವಸಾಯಕ್ಕೆ 3,712–26 ಎಕರೆಗಳನ್ನು ಕೊಡಲಾಗಿದೆಯೆಂದು ಹೇಳಿ, ಅದೇ 'ಬಿ' ಪ್ರಶ್ನೆಗೆ ಉತ್ತರವಾಗಿ 27–28 ಎಕರೆಗಳನ್ನು ಸದರಿ ಉದ್ದೇಶಕಾಗಿ ಉಪಯೋಗಿಸದಿದ್ದರಿಂದ ವಾಪಸ್ ಪಡೆಯಲಾಗಿದೆಯೆಂದು ಹೇಳಿದ್ದೀರಿ. ಇದು ಯಾವ ಜಿಲ್ಲೆಯಲ್ಲಿ ಎಂಬುದನ್ನು ಹೇಳುತ್ತೀರಾ?

† ಶ್ರೀ ಬಿ. ರಾಚಯ್ಯ.—ಸ್ವಲ್ಪ ಕಾಲಾವಕಾಶ ಬೇಕು.

ಶ್ರೀ ಎಚ್. ಡಿ. ದೇವೇಗೌಡ.—ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡಜಿಲ್ಲೆಗಳನ್ನು ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಸದರಿ ಉದ್ದೇಶಕ್ಕಾಗಿ ಕೊಟ್ಟಿರುವ ಜಮೀನುಗಳಲ್ಲಿ ಒಂದು ಎಕರೆಯಲ್ಲೂ ಗೋಡಂಬಿ ಬೆಳೆದಿಲ್ಲವೆಂದು ತಿಳಿದುಬಂದಿದೆ. ಈ ಬಗ್ಗೆ ತಮ್ಮಲ್ಲಿ ಏನಾದರೂ ಅಂಕಿಅಂಶಗಳು ಇವೆಯೇ ?

ಶ್ರೀ ಬಿ. ರಾಚಯ್ಯ.—ಇಲ್ಲಿ ಅಂಕಿಅಂಶಗಳನ್ನು ಕೊಟ್ಟು 27–28 ಎಕರೆಗಳನ್ನು ವಾಪಸ್ ಪಡೆಯಲಾಗಿದೆಯೆಂದು ಹೇಳಿದ್ದಾರೆ. ಗುಲ್ಬರ್ಗಾ, ಧಾರವಾಡ, ಬಿಜಾಪುರ, ಬಳ್ಳಾರಿ, ರಾಯಚೂರು, ಬೆಳಗಾಂ ಜಿಲ್ಲೆಗಳನ್ನು ಬಿಟ್ಟು ಉಳಿದ ಜಿಲ್ಲೆಗಳಿಗೆ ಸದರಿ ಉದ್ದೇಶಕ್ಕಾಗಿ ಜಮೀನುಗಳನ್ನು ಸುಮಾರು 3,712-26 ಎಕರೆಗಳಷ್ಟು ಕೊಟ್ಟು, 5 ವರ್ಷಗಳಲ್ಲಿ ಸದರಿ ಉದ್ದೇಶಕ್ಕಾಗಿ ಕೊಟ್ಟ ಜಮೀನುಗಳಲ್ಲಿ 27–28 ಎಕರೆಯನ್ನು ಉಪಯೋಗಿಸಲಿಲ್ಲವೆಂದು ವಾಪಸ್ ತೆಗೆದುಕೊಂಡಿದ್ದೇವೆಂದು ಉತ್ತರ ಕನ್ನಡ ಜಿಲ್ಲೆಯಿಂದ ವರದಿ ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು 27 - 28 ಎಕರೆ ಬಿಟ್ಟು ಉಳಿದುದನ್ನು ಉಪಯೋಗಿಸಲಾಗಿದೆ ಎಂದು ಹೇಳಿದ್ದೀರಿ. ಈಗ ಈ ಗೋಡಂಬಿ ಬೆಳೆಯಬೇಕೆಂದು ಜಮೀನನ್ನು ಮಂಜೂರು ಮಾಡತಕ್ಕ ಕಾಲದಲ್ಲಿ ಇರುವ ನಿಬಂಧನೆಗಳು ಏನು ? ಅದನ್ನು ತಿಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—5 ವರ್ಷಗಳೊಳಗಾಗಿ ಗೋಡಂಬಿ ಗಿಡಗಳನ್ನು ಹಾಕತಕ್ಕದ್ದು. ಒಂದು ಎಕರೆಯಲ್ಲಿ ಕೊನೆಯಪಕ್ಷ 40 ಗಿಡಗಳಾದರೂ ಇರಬೇಕೆಂಬ ನಿಬಂಧನೆ ಇದೆ.

ಶ್ರೀ ಎಚ್. ಸಿದ್ಧವೀರಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿ ಯಾವ್ಯಾವ ತಾಲ್ಲೂಕಿನಲ್ಲಿ ಕೊಟ್ಟಿದ್ದೀರಿ ? ಅಲ್ಲಿ ಗಿಡಗಳು ಇವೆಯೇ ? ತಮ್ಮನ್ನು ಬೇಕಾದರೆ ಆ ಜಾಗಕ್ಕೆ ಕರಕೊಂಡು ಹೋಗುತ್ತೇನೆ.

ಶ್ರೀ ಬಿ. ರಾಚಯ್ಯ.—ಚಿತ್ರದುರ್ಗ ಜಿಲ್ಲೆಯಲ್ಲಿ, ಬಹುಶಃ ಚಿತ್ರದುರ್ಗ ತಾಲೂಕಿನಲ್ಲೇ ಹೆಚ್ಚಾಗಿ ಕೊಟ್ಟಿರುವ ಹಾಗೆ ಕಾಣುತ್ತದೆ. ಆದರೆ ಎರಡು ಮೂರು ವರ್ಷ ಸರಿಯಾಗಿ ಮಳೆಯಾಗದಕಾರಣ ಸರಿಯಾಗಿ ಗಿಡ ಹುಟ್ಟಲಿಲ್ಲವೆಂಬ ಒಂದು ತಕರಾರು ಹಾಕಿಕೊಂಡಿದ್ದಾರೆ. ಇದನ್ನು ಮತ್ತೆ ಪುನರ್ವಿಮರ್ಶೆಮಾಡಿ ಯಾರ್ಯಾರು, ಕಂಡಿಶನ್ ಪ್ರಕಾರ ಭೂಮಿಯನ್ನು ಸಾಗುವಳಿಗೆ ತಂದಿಲ್ಲವೋ, ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 500 ಎಕರೆ ಜಮೀನನ್ನು ಕೊಟ್ಟಿದ್ದೀರಿ. ಈ ಜಮೀನನ್ನು ಯಾವ್ಯಾವ ತಾಲ್ಲೂಕಿನಲ್ಲಿ ಕೊಟ್ಟಿದ್ದೀರಿ ? ಕೊಟ್ಟಿರತಕ್ಕ ಜಮೀನು ದುರುಪಯೋಗ ಮಾಡುವುದಕ್ಕೋಸ್ಕರ ಕೊಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಆ ಜಮೀನಿನಲ್ಲಿ ಏನಾದರೂ ಗೋಡಂಬಿ ವ್ಯವಸಾಯವನ್ನು ಮಾಡಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ಅರಣ್ಯ ಇಲಾಖೆಯಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್ರ ಕೊಟ್ಟಿರತಕ್ಕದ್ದು. ಮಿಕ್ಕದ್ದೆಲ್ಲಾ ರೆವೆನ್ಯೂ ಇಲಾಖೆಯಲ್ಲಿದ್ದ ಭೂಮಿಯನ್ನು ಕೊಟ್ಟಿರತಕ್ಕದ್ದು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ್ಯಾವ ತಾಲೂಕಿನಲ್ಲಿ ಕೊಟ್ಟಿದ್ದಾರೆ ಎಂದು ನನ್ನ ಹತ್ತಿರ ವಿವರ ಇಲ್ಲ. 1960ನೇ ಇಸವಿಯಿಂದ 1965ನೇ ಇಸವಿಯವರೆಗೆ ಕೊಟ್ಟಿರತಕ್ಕ ವಿವರ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಗೋಡಂಬಿ ಬೆಳೆಯತಕ್ಕ ಸ್ಕೀಂ ಇದೆ. ಇದರಲ್ಲಿ ಜಿಲ್ಲಾ ಅಧಿಕಾರಿಗಳಿಗೆ ಮಾಮೂಲಾಗಿ ಗ್ರ್ಯಾಂಟ್ ಮಾಡತಕ್ಕ ಪರ್ಮಿಟ್ ಇರುವುದು 10 ಎಕರೆಗೆ. ಗೋಡಂಬಿಗೆ 20 ಎಕರೆವರೆಗೆ ಅಧಿಕಾರ ಇದೆ. ಕೆಲವು ಮುಖಂಡರು, ಈ ಒಂದು ಅಧಿಕಾರ ಪರಿಮಿತಿಯೊಳಗೆ 10 ಎಕರೆಗೆ ಮೇಲ್ಪಟ್ಟು, ದುರುದ್ದೇಶದಿಂದ, ಗೋಡಂಬಿ ಬೆಳೆಯುತ್ತೇವೆಂಬ ನೆಪದಿಂದ ಗ್ರ್ಯಾಂಟ್ ಮಾಡಿಸಿಕೊಂಡು ಲೂಟ್ ಹೊಡೆದಿರತಕ್ಕದ್ದು ನಿಜವೇ ? ಮತ್ತು ಜಿಲ್ಲಾಧಿಕಾರಿಗಳು ಮಂಜೂರುಮಾಡತಕ್ಕ ಕಾಲದಲ್ಲಿ, ಒಂದು ಷರತ್ತು ಹಾಕಿ, ಅದರಲ್ಲಿ ಗೋಡಂಬಿಯಲ್ಲದೆ, ಇತರ ಬೆಳೆಯನ್ನು ಬೆಳೆಯಬಹುದು ಎಂದು ಒಂದು ಷರತ್ತು ಹಾಕಿ, ಈ ಮೂರು ಸಾವಿರ ಚಿಲ್ಲರೆ ಎಕರೆ ದುರುಪಯೋಗ ಮಾಡಿದ ಪಕ್ಷದಲ್ಲಿ, ಸರ್ಕಾರ ಅದರ ಮೇಲೆ ಸೂಕ್ತ ತನಿಖೆ ನಡೆಸಿ ದುರುಪಯೋಗ ಪಡಿಸಿರುವುದನ್ನು ಎಲ್ಲಾ ವಾಪಸ್ಸು ಪಡೆದು, ಪುನಃ ಲ್ಯಾಂಡ್‌ಲೆಸ್ ಜನರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಷರತ್ತಿಗೊಳಪಟ್ಟು ಮಾಡದಿರತಕ್ಕದ್ದು 27–28 ಎಕರೆ. ಮಿಕ್ಕ ಕಡೆ ಇಂಥ ಇಂಥ ಕಡೆ ದುರುಪಯೋಗವಾಗಿದೆ ಎಂದು ಹೇಳಿದರೆ, ಅದನ್ನು ತನಿಖೆ ಮಾಡಿಸಬಹುದು. ಅದನ್ನು ಮಾನ್ಯ ಸದಸ್ಯರು ತಿಳಿಸಿದರೆ, ಅದಕ್ಕೆ ಯೋಗ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿಯನ್ನು ಕೊಟ್ಟಿದ್ದೀರಿ. ಸಿದ್ದಾಪುರದಲ್ಲಿ ಯಾರಿಗೆ ಇದನ್ನು ಕೊಟ್ಟಿದ್ದೀರಿ ? ಮತ್ತು ಅವರಿಗೆ ಖಾಸಗಿ ಜಮೀನು ಎಷ್ಟು ಇದೆ ?

ಶ್ರೀ ಬಿ. ರಾಚಯ್ಯ.—ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್.—ಈಗ ಭದ್ರಾವತಿಯಲ್ಲಿ ಸುಮಾರು 500 ಎಕರೆ ಕೊಟ್ಟು ಅಲ್ಲಿ 5 ವರ್ಷದಿಂದ ಏನೂ ಬೆಳೆಯಾಗಲಿಲ್ಲ. ದಯವಿಟ್ಟು ಈ ಜಮೀನುಗಳನ್ನು ಜಮೀನಿಲ್ಲದಿರತಕ್ಕಂತಹ ಹರಿಜನರಿಗೆ ಕೊಡುವುದಕ್ಕೆ ಏರ್ಪಾಟು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಇಡೀ ರಾಜ್ಯದಲ್ಲಿ ಎಷ್ಟು ಎಕರೆ ಕೊಟ್ಟಿದ್ದೇವೆಂದು ಜಿಲ್ಲಾವಾರು ಕೊಟ್ಟಿದ್ದೇನೆ. ಅದರ ತಾಲ್ಲೂಕುವಾರು, ಸರ್ವೆ ನಂಬರ್, ಹೋಬಳಿ ಮುಂತಾದ ಸಂಬಂಧಪಟ್ಟ ವಿವರಗಳು ಸದ್ಯಕ್ಕೆ ನನ್ನ ಹತ್ತಿರ ಇಲ್ಲ. ಆ ಮೇಲೆ ಬೇಕಾದರೆ, ಒದಗಿಸುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ತುಮಕೂರು ಜಿಲ್ಲೆಯಲ್ಲಿ ನೂರು ಎಕರೆಗಳಷ್ಟು ಭೂಮಿ ಕೊಟ್ಟಿದೆ ಎಂದು ಇಲ್ಲಿ ಹೇಳಿದ್ದೀರಿ. ಇದನ್ನು ಯಾರ್ಯಾರಿಗೆ ಕೊಡಲಾಗಿದೆ ಎನ್ನುವುದನ್ನು ತಿಳಿಸುವುದಕ್ಕಾಗುತ್ತದೆಯೇ ? ಮತ್ತು ಇದರ ಜೊತೆಗೆ ಯಾರ್ಯಾರಿಗೆ ಇಲ್ಲಿ ಜಮೀನುಗಳನ್ನು ಕೊಟ್ಟಿಲ್ಲವೋ ಅಂತಹವರಿಗೆ ಜಮೀನನ್ನು ಕೊಡುವುದರ ವ್ಯವಸ್ಥೆ ಮಾಡುವುದಕ್ಕಾಗುತ್ತದೆಯೇ ?

ಉಪಾಧ್ಯಕ್ಷರು.—ಇದಕ್ಕೆ ವಿವರಗಳಿಲ್ಲ ಎಂದು ಆಗಲೇ ಸಚಿವರು ಉತ್ತರ ಹೇಳಿದ್ದಾರೆ.

ಶ್ರೀ ಬಿ. ನಂಜಪ್ಪ.—ಕೆಲವು ಊರುಗಳಲ್ಲಿ ಜಮೀನು ಮಂಜೂರಾಗಿದ್ದರೂ ಕೂಡ ಅದನ್ನು ಇನ್ನೂ ಅವರಿಗೆ ಕೊಟ್ಟಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಅದು ನನಗೆ ಜ್ಞಾಪಕವಿಲ್ಲ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಸಭೆಯಲ್ಲಿ ಇಲ್ಲದಿರುವುದರಿಂದ ಈ ಪ್ರಶ್ನೆ ನಂ. 392ನ್ನು ತಡೆ ಹಿಡಿಯಲಾಗಿದೆ.

Assault Cases

393. Sri S. H. PUTTARANGANATH (Belur).—

Will the Minister for Home and Municipal Administration be pleased to state :—

(a) the number of assault cases received by the Sub-Inspector of Police, Belur, including Arehally Police Sub-Inspector (information may be furnished from 1st March 1967 to 1st February 1968) ;

(b) how many of them were compromised ;

(c) the number of cases in respect of which chargesheet were issued under C. P. C. ?

A.—Sri R. M. PATIL (Minister for Home and Municipal Administration).—

(a) 17.
(b) 6.
(c) 13.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್.—ಉತ್ತರ (ಬಿ)ನಲ್ಲಿ 6 ಎಂದೂ ಮತ್ತು (ಸಿ)ನಲ್ಲಿ 13 ಎಂದೂ ಹೇಳಿದ್ದೀರಿ. ಎಂದರೆಒಟ್ಟು 19 ಕೇಸುಗಳಾಗುತ್ತವೆ. ಇಲ್ಲಿ ಉತ್ತರದಲ್ಲಿ 17 ಎಂದೂ ಇದೆ. ಇದರಲ್ಲಿ ಯಾವುದು ಸರಿಯಾಗಿದೆ ಎನ್ನುವುದನ್ನು ತಿಳಿಸುತ್ತೀರಾ ?

Sri R. M. PATIL.—There are four cases reported as 'b' cases. Out of these 13 cases charge-sheeted, six cases have been compromised ; 4 cases are pending trial ; one case is acquitted ; one case is convicted ; one case struck off from the court. Thus it makes 17.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್. –(ಬಿ) ನಲ್ಲಿ ಉತ್ತರ ಹೇಳಿರುವ ಆರು ಕೇಸುಗಳಲ್ಲಿ ಇಲ್ಲಿನ ಸಬ್ ಇನ್ಸ್‌ಪೆಕ್ಟರ್‌ರವರು ಲಂಚ ತೆಗೆದುಕೊಂಡು ಇದನ್ನು ಕಾಂಪ್ರಮೈಸು ಮಾಡಿದ್ದಾರೆ ಎಂದು ಇಲ್ಲಿ ನಾನು ಅಪಾದನೆ ಮಾಡುತ್ತಿದ್ದೇನೆ. ಇದಕ್ಕೆ ಏನು ಉತ್ತರವನ್ನು ಹೇಳುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್.—ನೀವು ಅಪಾದನೆ ಮಾಡಬಹುದು. ಆದರೆ ಇದರ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಸಭೆಯಲ್ಲಿ ಇಲ್ಲದಿರುವುದರಿಂದ ಪ್ರಶ್ನೆ 394 ಕೂಡ ತಡೆಹಿಡಿದು ಮುಂದೂಡಲಾಗಿದೆ.

Allotment of lands to ryots of Hosa Ningapur

395. Sri VIRUPAKSHA GOUDA B. MALI PATIL (Koppal).—

Will the Minister for Revenue and Forests be pleased to state :—

(*a*) whether it is a fact that the ryots of Hosa Ningapur, Koppal taluk, resettlers from the T. B. Project were allotted lands during the year 1961 adjacent to the reservoir at three acres per family ;

(*b*) if so, the reasons for not giving possession of the same to the ryots till now ;

(*c*) whether it is a fact that new alignment of N. H. 13 passes through the stretch of lands belonging to the ryots of Hosa Ningapur thus making the lands unfit for cultivation ;

(*d*) if so, the alternative arrangements made by the Government in this behalf ?

A.—Sri B. RACHAIAH (Minister for Revenue and Forests).—

(*a*) Yes.

(*b*) Since the lands are uncultivable and as they are liable to be washed down in T. B. Reservoir, possession of the same has not been handed over to the ryots.

(*c*) The alignment of N.H. 13 M is still under consideration of Government.

(*d*) Proposals for grant of alternative lands are under consideration.

Sri VIRUPAKSHA GOUDA B. MALI PATIL.—In answer to (b) it is stated that the lands granted are uncultivable and are liable to be washed down in T.B. Reservoir. What action is taken to provide other suitable cultivable land ?

† Sri B. RACHAIAH.—If the party applies for suitable lands, the Government will try to provide cultivable lands.

ಶ್ರೀ ಎಂ. ನಾಗಪ್ಪ.—ಇಲ್ಲಿ ಲ್ಯಾಂಡು ಡೆವಲಪ್ ಮಾಡುತ್ತೇವೆ ಎಂದು ತೆಗೆದುಕೊಂಡು ಸುಮಾರು ಹತ್ತು ಹದಿನೈದು ವರ್ಷಗಳಾದುವು. ಮತ್ತು ಇಲ್ಲಿನ ಜನರ ಭೂಮಿಯೇ ವಾಷ್‌ಔಟ್ ಆಗಿರುವಾಗ ಇಂತಹ ಜನರಿಗೆ ಭೂಮಿಯನ್ನು ಕೊಡಲು ಇನ್ನೆಷ್ಟು ವರ್ಷಗಳು ತಮಗೆ ಬೇಕಾಗುತ್ತದೆ? ಮತ್ತು ಲ್ಯಾಂಡ್ ಗ್ರ್ಯಾಂಟು ರೂಲ್ಸ್ ಪ್ರಕಾರ ಭೂಮಿಯನ್ನು ಇಲ್ಲಿ ಕೊಡಲಿಕ್ಕಾಗುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಎಷ್ಟು ಮಿನಿಮಂ ಕಾಲ ಬೇಕೋ ಅಷ್ಟು ಕಾಲದಲ್ಲಿ ಇದನ್ನು ಮಾಡಲು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ.—ಮಿನಿಮಂ ಕಾಲ ಅಂದರೆ ಸರಕಾರದ ನೀತಿ ಪ್ರಕಾರ ಎಷ್ಟು ?

ಶ್ರೀ ಬಿ. ರಾಚಯ್ಯ.—ಸರಕಾರದ ನೀತಿ ಏನೂ ಇಲ್ಲ. ಎಷ್ಟು ಜಾಗ್ರತೆ ಮಾಡಬೇಕೆಂದು ಮನಸ್ಸು ಮಾಡುತ್ತೇವೆಯೋ ಅಷ್ಟು ಜಾಗ್ರತೆ ಮಾಡುತ್ತೇವೆ.

Sri TIRUMAL DEVARAYA.—Is Government aware that till today these lands are being cultivated ?

Sri B. RACHAIAH.—That information is not available with me.

Dr. R. NAGAN GOUDA.—Is it not the policy of the Government to give suitable lands for those whose lands have been submerged in the Tungabhadra Reservoir ?

Sri B. RACHAIAH.—If the parties themselves do not apply for grant of land, Government cannot help in such cases.

ಶ್ರೀಮತಿ ಬಸವರಾಜೇಶ್ವರಿ.—(ಡಿ) ಉತ್ತರದಲ್ಲಿ ಅಂಡರ್ ಕನ್ಸಿಡರೇಷನ್ ಎಂದು ಹೇಳಿರುವುದರಿಂದ ಅವರು ಆಗಲೇ ಅಪ್ಲಿಕೇಷನ್ಸ್ ಹಾಕಿದ್ದಾರೆ ಎಂದು ಅರ್ಥವಾಗುತ್ತದೆ. ಈಗಾಗಲೇ ಅರ್ಜಿ ಹಾಕಿದ್ದರೆ ಆರ್ಡರ್ಸ್ ಮಾಡುತ್ತೀರಾ ಅಥವಾ ಅರ್ಜಿ ಹಾಕಿಲ್ಲ ಎಂದು ಹೇಳುತ್ತೀರಾ !

ಶ್ರೀ ಬಿ. ರಾಚಯ್ಯ.—ಅರ್ಜಿ ಹಾಕಿದ್ದಾರೆ.

ಶ್ರೀಮತಿ ಬಸವರಾಜೇಶ್ವರಿ.—ಅರ್ಜಿ ಹಾಕಿದ್ದರೆ ಯಾವ ಗ್ರಾಮದಲ್ಲಿ ಭೂಮಿ ಕೇಳಿದ್ದಾರೆ ?

ಶ್ರೀ ಬಿ. ರಾಚಯ್ಯ.—ಎಷ್ಟು ಭೂಮಿ ಕಳೆದುಕೊಂಡಿದ್ದಾರೋ ಅಷ್ಟು ಭೂಮಿ ಕೊಡಿ ಎಂದು ಕೇಳಿದ್ದಾರೆ.

ಶ್ರೀಮತಿ ಬಸವರಾಜೇಶ್ವರಿ.—ಯಾವಾಗ ಆಜ್ಞೆ ಮಾಡುತ್ತೀರಿ !

ಶ್ರೀ ಬಿ. ರಾಚಯ್ಯ.—ಆದಷ್ಟು ಬೇಗ ಭೂಮಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Nationalisation of Bus Routes

387. Sri B. BHASKAR SETTY (Kapu).—

Will the Minister for Information and Publicity, Transport and Tourism be pleased to state :—

(*a*) the districts in which buses are proposed to be nationalised during the year 1968–69 ;

(*b*) the routes which are proposed to be nationalised ;

(*c*) the additional expenditure to be incurred for the purpose ?

A.—Sri MOHAMED ALI (Minister for Information and Publicity, Transport and Tourism).—

(*a*) Three schemes for nationalisation of bus routes in Mangalore Shimoga and Kolar Pockets respectively having been approved by Government under Section 68 D of the Motor Vehicles Act, 1939, it is proposed by the Mysore State Road Transport Corporation to implement the three approved schemes during the year.

(*b*) 31 routes in Mangalore Pocket; 48 routes in Shimoga Pocket; and 87 routes in Kolar Pocket as in the lists placed on the Table of the House.*

(*c*) Rs. 195–08 lakhs approximately.

Sri H. SIDDAVEERAPPA.—Before the Minister takes up further nationalisation of some other bits, would he consider it advisable to have the pockets filled up — pockets of 20 or 25 miles — in the routes already nationalised ?

Sri MOHAMED ALI.—That is a suggestion for action.

Sri H. SIDDAVEERAPPA.—Are you or are you not going to take over that bit of nationalised route between Chitradurga and Harihar as long as the Congress Government is there ? What is your special reason for withholding it ?

Sri MOHAMED ALI.—There is no special reason. That is a legacy left by the hon. Member to me.

Sri H. SIDDAVEERAPPA.—I left it only for two months. They have continued my legacy for 15 years.

Sri MOHAMED ALI.—In reply to an half-an-hour discussion on this subject, I have said that this portion of road between Chitradurga and Horihar will be taken over when the entire Chitradurga District is taken up for nationalisation in the second phase.

ಶ್ರೀ ಎಲ್. ಶ್ರೀಕಂಠಯ್ಯ.—ಇನ್ನುಳಿದಿರತಕ್ಕಂಥ ಬಸ್ಸು ರೂಟ್ಸ್ ಯಾವಾಗ ನ್ಯಾಷನಲೈಜೇಷನ್ ಮಾಡುತ್ತೀರಿ ?

Sri MOHAMED ALI.—After the finalisation of the Fourth Plan I will be able to commit myself.

Dr. R. NAGAN GOUDA.—Supplementary to (c) : Where was the urgency to take up these three districts for nationalisation while the Government don't have funds for roads, lift irrigation and so on. Have they received complaints that in these districts the bus services are in a very bad condition ?

Sri MOHAMED ALI.—Naturally the vested interests are opposed to nationalisation, but as a part of a phased programme these schemes have been approved by the Government and these schemes will be implemented by 1–7–68. Earlier I have informed the House that Shimoga and Mangalore scheme will be implemented in 1969. There was a writ petition pending in the High Court and that has been decided and there is no legal impediment to implement this scheme.

---

*Copy placed in the Mysore Legislature Library No. 41 dated 5th April 1968.

2-00 P.M.

Sri S. SIVAPPA.—May I know which is that vested interest? Will the Minister name the vested interest which is against the nationalisation of the bit of road between Chitradurga and Harihar?

Sri MOHAMED ALI.—It could not be taken up because it was not contiguous to the areas that we have already nationalised.

Sri L. SRIKANTIAH.—It is good that you are nationalising some routes. In Mysore District there are some roads which have been nationalised. But in Kollegal and Chamarajanagar Taluks some bits have been left out. Will the Government take necessary action to include these bits also which have been left out?

Sri MOHAMED ALI.—I will take this opportunity to say that whichever routes which have been partially nationalised will be fully nationalised.

Mr. DEPUTY SPEAKER.—Question hour is over.

Short Notice Question Nos. 32 and 33 are similar. Both the Questions may be put together.

SHORT NOTICE QUESTIONS AND ANSWERS

Robbery of Sheep at Voderallu Village, Kadur Taluk

32. Sri V. N. PATIL (Humnabad).—

Sri M. BASAVARAJU (K. R. Nagar).—

Will the Minister for Home and Municipal Administration be pleased to state:—

(a) whether Government is aware that 53 sheep were robbed from the Shepherds in Voderallu Village, Kadur Taluk by goondas and have carried all the sheep in a lorry;

(b) the steps they have taken to recover the stolen sheep and to restore them to the shepherds;

(c) the steps they propose to avoid recurrence of such incidents;

(d) the relief and protection they propose to give to the poor shepherds to rehabilitate themselves?

A.—Sri R. M. PATIL (Minister for Home and Municipal Administration).—

(a) 50 sheep were stolen and carried away in a lorry on the night of 6th March 1968 at about 1-00 A.M. from a field which is about a furlong from Vaderaballi.

(b) A case in Crime No. 15/68 of Kadur Police Station under Section 379 IPC has been registered and it is under investigation.

(Sri R. M. Patil)

(c) The complicity of local and outside criminals is being checked up and village beats are tightened up.

(d) As this is purely a case of theft, no action has been initiated to afford any relief to the shepherds. These shepherds have also not approached the Revenue Authorities for any assistance.

Robbery of Sheep at Vaderalu, Kadur Taluk

33. Sri C. M. S. SASTRY (Chickmagalur).—

Sri M. MALLAPPA (Birur).—

Sri K. M. THAMMIAH (Kadur).—

Will the Minister for Home and Municipal Administration be pleased to state.—

(a) whether there was any robbery of about 53 sheep at Vaderalu, Kadur Taluk, on 7th March 1968 by assaulting the shepherds and carrying the sheep in lorry ;

(b) the action taken by the Government in this behalf ?

A.—Sri R. M. PATIL (Minister for Home and Municipal Administration).—

(a) 50 Sheep were stolen and carried away in a lorry on the night of 6th March 1968 at about 1-00 A.M. from a field which is about a furlong from Vaderahalli.

(b) A case in Crime No. 15/68 of Kadur Police Station under Section 379 IPC has been registered and it is under investigation.

Sri V. N. PATIL.—May I know what relief is given in the form of compensation or relief to shepherds ?

Sri R. M. PATIL.—There is no question of giving compensation. It is a simple theft.

ಶ್ರೀ ಎಂ. ಬಸವರಾಜು.—ಸ್ಥಳೀಯ ಪೋಲೀಸರು ಹಾಗೂ ಕಳ್ಳರ ಗ್ಯಾಂಗ್ ಬಹಳ ಕಾಲದಿಂದ ಈ ರೀತಿ ಕಳ್ಳತನ ಮಾಡುತ್ತ ಕುರಿಗಳನ್ನು ಸಾಗಿಸುತ್ತಿರುವುದರಿಂದ ಕುರಿ ಸಾಕುವ ಜನಗಳಿಗೆ ಜೀವನಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದರೆ ಇನ್ನು ಮುಂದೆ ಈ ರೀತಿ ಆಗದ ಹಾಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

Sri R. M. PATIL.—There is a special squad of police for investigation. I do not agree with the suggestion of the Hon'ble member that there is connivance of Police.

ಶ್ರೀ ಎಸ್. ಶಿವಪ್ಪ.—ಚನ್ನರಾಯಪಟ್ಟಣ ತಾಲ್ಲೂಕು ತಿಮ್ಮಲಾಪುರ ಗ್ರಾಮದಲ್ಲಿ ಕುರಿ ಕಾಯುವವನನ್ನು ಹೊಡೆದು ಅಲ್ಲಿಯೂ ಇದೇ ರೀತಿ 50 ಕುರಿಗಳನ್ನು ಹೊಡೆದುಕೊಂಡು ಹೋಗಿದ್ದಾರೆ. ಇದರಿಂದ ಕಳ್ಳತನ ಮಾಡುವ ಒಂದು ಗ್ಯಾಂಗ್ ಇದೆಯೆನ್ನುವುದು ವ್ಯಕ್ತವಾಗುತ್ತದೆ.

ಕಳ್ಳರ ಗ್ಯಾಂಗಿಗೂ ಪೋಲೀಸಿನವರಿಗೂ ಏನಾದರೂ ಸಂಬಂಧವಿದೆಯೇ ಎನ್ನುವುದು ಗೊತ್ತಿಲ್ಲ. ಈ ಬಗ್ಗೆ ಸರ್ಕಾರದವರು ತೀವ್ರ ಕಾರ್ಯಕ್ರಮ ತೆಗೆದುಕೊಂಡು ಒಂದು ಸ್ಪೆಷಲ್ ಸ್ಕ್ವಾಡ್ ನೇಮಿಸುವ ವಿಚಾರವನ್ನು ಯೋಚನೆ ಮಾಡುತ್ತಾರೆಯೇ, ಸ್ವಾಮಿ?

Sri R. M. PATIL.—Similarly there is another case for the information of the House. In Banavar a similar offence was committed. It is suspected there is a gang and that gang has to be traced out. A special squad for tracing has been arranged.

ಶ್ರೀ ಬಿ. ಗಂಗಣ್ಣ.—ತುಮಕೂರು ಜಿಲ್ಲೆಯಲ್ಲಿ ಕುರಿ ಮತ್ತು ಮೇಕೆಗಳನ್ನು ಸಾಗಿಸುವ ದೊಡ್ಡ ಗುಂಪಿದೆ, ಸಿರಾ ತಾಲೂಕಿನಲ್ಲಿರುವ ಲಂಬಾಣಿ ತಾಂಡ ಇದರಲ್ಲಿ ತೊಡಗಿದೆ ಎಂಬ ಪುಕಾರಿರುವುದರಿಂದ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

Sri R. M. PATIL.—That will also be taken into consideration.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ತಾವು ನೇಮಿಸಿರುವ ಸ್ಪೆಷಲ್ ಸ್ಕ್ವಾಡ್ ಇಂಥ ಯಾವುದಾದರೂ ಕೇಸುಗಳನ್ನು ಹಿಡಿದಿದೆಯೇ? ಡಿಟೆಕ್ಟ್ ಮಾಡಿದೆಯೇ?

ಶ್ರೀ ಆರ್. ಎಂ. ಪಾಟೀಲ್.—ಡಿಟೆಕ್ಟ್ ಮಾಡಬೇಕೆಂಬ ಉದ್ದೇಶದಿಂದಲೇ ನೇಮಿಸಿರುವುದು. ಡಿಟೆಕ್ಟ್ ಮಾಡಿದ ಮೇಲೆ ಹೇಳುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ಹೋದ ವರ್ಷ ಕಡೂರು ತಾಲ್ಲೂಕು ಮುತ್ತಣಗೆರೆಯಲ್ಲಿ ಇಂಥ ಒಂದು ಕೇಸು ಆಯಿತು. ದೂರು ಕೊಟ್ಟರೆ ಗಮನ ಕೊಡಲಿಲ್ಲ. ಆದುದರಿಂದ ಜನರು ಇಂಥ ಕೇಸುಗಳಾದಾಗ ದೂರು ಕೊಡುತ್ತಿಲ್ಲ, ಕೊಡಲು ಹೆದರುತ್ತಾರೆ ಎಂದು ಹೇಳುವುದು ಗಮನಕ್ಕೆ ಬಂದಿದೆಯೇ?

Sri R. M. PATIL.—I am not aware of it. This question pertains to a particular incident. My friend is not correct in asking this question.

Sri M. MALLAPA.—Of these 50 sheep stolen, how many are still alive and who are in possession of them?

Sri R. M. PATIL.—They ought to have thought a little bit further as to whether they have been traced, and that could have been answered.

ಶ್ರೀ ಎಂ. ಬಸವರಾಜು.—ನಾಲ್ಕಾರು ವರ್ಷಗಳಿಂದ ಇಂಥ ಕೇಸುಗಳು ಆಗುತ್ತಿವೆ, ಇದರಲ್ಲಿ ಸ್ಥಳೀಯ ಪೋಲಿಸರು ಸೇರಿಲ್ಲವೆಂದು ಹೇಳುತ್ತೀರಿ. ಆದರೆ ಪೋಲೀಸರು ಸೇರಿರುವುದರಿಂದ ಪತ್ತೆ ಆಗುತಿಲ್ಲವೆಂಬ ಅನುಮಾನವಿದೆ. ಅದನ್ನು ನಿವಾರಣೆಮಾಡಲು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೀರಾ?

Sri R. M. PATIL.—I have already said that public co-operation is also required.

Sri H. SIDDAVEERAPPA.—Does the Hon'ble Minister consider that this is not a mere case of theft and that it is one of dacoity, because he said that they came and took the sheep in a lorry forcefully. As we all know these sheep are always reared in the open, especially in the fields. Does it not create a sort of panic in the villages if timely action is not taken?

Sri R. M. PATIL.—I request my friend to refresh his memory with regard to the definition of robbery. So far as this is concerned, there is no violence and therefore there is no robbery much less dacoity. This is a simple case of theft, because the shepherd ran away at the sight of the offenders; they took away the sheep.

Dr. R. NAGAN GOUDA.—As the prices of foodstuffs will go up very much if this kind of things are allowed to go on, will the Hon'ble Minister co-operate with the Food Minister and stop this kind of a thing?

Sri R. M. PATIL.—I share his feelings.

ಶ್ರೀ ವಿ. ಎನ್. ಪಾಟೀಲ.—ಈ ತರಹ 50 ಕುರಿಗಳನ್ನು ತೆಗೆದುಕೊಂಡು ಹೋಗಲು 25–30 ಜನರು ಬಂದಿರಬಹುದು. ಪೋಲೀಸು ಅದಕ್ಷತೆಯೇ ಕಾರಣ, ಆಡಳಿತ ಸ್ಕ್ವಾಡ್ ಅಚಲವಾಗಿದೆ ಎಂಬುದು ಗಮನಕ್ಕೆ ಬಂದಿದೆಯೇ ?

Sri R. M. PATIL.—Unless there is some offence, it is not advisable to infer like that.

ಶ್ರೀ. ಸಿ. ಎಂ. ಎಸ್. ಶಾಸ್ತ್ರಿ.—5 ಸಾವಿರ ರೂಪಾಯಿ ಬೆಲೆಬಾಳುವ ಕುರಿಗಳನ್ನು ಕಳೆದುಕೊಂಡಿರುವವರು ಸರಕಾರದಲ್ಲಿ ಪರಿಹಾರ ಬೇಡಿದರೆ ಕೊಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಇದು ಕೊಡುವ ಕೇಸು ಅಲ್ಲ. ಬೇಡಿದರೆ ಪರಿಶೀಲಿಸುತ್ತೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಸುಮಾರು ನಾಲ್ಕೈದು ವರ್ಷಗಳಿಂದ ಈ ರೀತಿ ಕಳ್ಳತನವಾಗುತ್ತಿದೆಯೆಂದು ಹೇಳುತ್ತಾರೆ. ಒಂದು ಕೇಸೂ ಪತ್ತೆ ಆಗದಿರುವುದರಿಂದ ಇದು ಪೋಲೀಸು ದಕ್ಷತೆಯೋ ಅಥವಾ ಅದಕ್ಷತೆಯೋ ?

ಶ್ರೀ ಆರ್. ಎಂ. ಪಾಟೀಲ್.—ಇದು ಊಹಾಪೋಹದ ಪ್ರಶ್ನೆ. ನಾಲ್ಕೈದು ವರ್ಷಗಳಿಂದ ಈ ಕೆಲಸವಾಗುತ್ತಿದೆ ಎಂದು ಮಾಹಿತಿಯಿಲ್ಲದೆ ಹೇಳುವುದು, ಅದರಿಂದ ಇನ್‌ಫರೆನ್ಸ್ ಡ್ರಾ ಮಾಡುವುದು ಸರಿಯಲ್ಲ.

ಶ್ರೀ ಎಂ. ಬಸವರಾಜ್.—5—6 ವರ್ಷಗಳಿಂದ ಒಂದು ಗ್ಯಾಂಗ್‌ನಿಂದ ಈ ಕೆಲಸ ನಡೆಯುತ್ತಾ ಇದೆ. ಎಷ್ಟು ಸಾಗಿ ಈ ರೀತಿ ನಡೆದಿದೆ ಎಷ್ಟು ಜನರನ್ನು ಹಿಡಿದಿದ್ದಾರೆ ಎಂಬುದನ್ನು ಇನ್‌ವೆಸ್ಟಿಗೇಟ್ ಮಾಡಿಸಿ ಈ ಮಾನ್ಯ ಸಭೆಗೆ ತಿಳಿಸುತ್ತೀರಾ ?

Sri R. M. PATIL.—That is the main object of appointing a Special Duty Officer for that and he is already working. As and when detection is made, I shall place the facts before the House.

ಶ್ರೀ ವಿ. ಎನ್. ಪಾಟೀಲ್.—ಸ್ಪೆಷಲ್ ಆಫೀಸರನ್ನು ನೇಮಕ ಮಾಡುವುದರಿಂದ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ಬಿದರ್ ಡಿಸ್ಟ್ರಿಕ್ಟ್‌ನಲ್ಲಿ ಪೋಲಿಸ್ ಸ್ಕ್ವಾಡ್ ಇಟ್ಟು ವ್ಯವಸ್ಥೆ ಮಾಡಿದ್ದರೂ ಕೂಡ 27 ಕುರಿಗಳನ್ನು ಮಳಿಗೆಯಿಂದ ಬಿಚ್ಚಿ ತೆಗೆದುಕೊಂಡು ಹೋಗಿದ್ದಾರೆ. ಈಗ ಒಂದು ತಿಂಗಳ ಹಿಂದೆ ಮರಕಲ್ ಅನ್ನುವ ಗ್ರಾಮದಲ್ಲಿ ಇಂತಹ ಒಂದು ಪ್ರಕರಣ ಆಗಿದೆ.

ಉಪಾಧ್ಯಕ್ಷರು.—ಪ್ರಶ್ನೆ ಕೇಳಬೇಕು.

ಶ್ರೀ ಎಸ್. ಎಚ್. ತಮ್ಮಯ್ಯ.—ಉತ್ತರ ಹೇಳಬೇಕಾದರೆ ಕುರಿಕಾಯುವವರು ಓಡಿಹೋದರು ಎಂದು ಹೇಳಿದಿರಿ, ಹೊಡೆದು ಅವರನ್ನು ಮರಕ್ಕೆ ಕಟ್ಟಿಹಾಕಿದ್ದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಆರ್. ಎಂ. ಪಾಟೀಲ್.—ಆ ರೀತಿ ಇದ್ದರೆ ಹೇಳುತ್ತಾ ಇದ್ದರು. ಆ ರೀತಿ ಆಗಿಲ್ಲ. ನಾನು ಹೇಳುವುದು ನನ್ನ ಹತ್ತಿರ ಇದ್ದ ಮಾಹಿತಿ ಪ್ರಕಾರ ಮತ್ತು ಕುರುಬರಾದರೂ ತೀವ್ರ ಸಮಾಚಾರ ಮುಟ್ಟಿಸಿದ್ದರೆ ಒಳ್ಳೆಯದಾಗುತ್ತಾ ಇತ್ತು. ರಾತ್ರಿ ಒಂದು ಗಂಟೆಗೆ ಆದಕ್ಕೆ ಮಾರನೆ ದಿವಸ ಎರಡು ಗಂಟೆ ಮೇಲೆ ಫಿರ್ಯಾದು ಕೊಟ್ಟಿದ್ದಾರೆ. ಆದ್ದರಿಂದ ಎವಿಡೆನ್ಸ್ ಸಿಕ್ಕುವುದು ಬಹಳ ಕಷ್ಟ ಅಂತ ಅನಿಸುತ್ತದೆ.

ಶ್ರೀ ಎಂ. ಬಸವರಾಜು.—ಕುರಿಕಾಯುವವರಿಗೆ ಪೋಲೀಸ್‌ನವರನ್ನು ಕಂಡರೆ ಭಯ, ಆದರಿಂದಲೇ 24 ಗಂಟೆ ಮೇಲೆ ದೂರು ಕೊಟ್ಟಿರುವುದು ಎಂದು ಹೇಳುತ್ತೇನೆ.

Sri R. M. PATIL.—My friend is not correct, Sir. He is making uncharitable remarks.

Mr. DEPUTY SPEAKER.—Short Notice Questions are over.

QUESTIONS FOR ANSWERS ON THE DAY

(but not taken up)

Disposal of Land Assignment Applications

380. Sri SADASHIVAPPA PATIL (Deodurg).—

Will the Minister for Revenue and Forests be pleased to state :—

(a) the number of land assignment applications received in Deodurg Taluk Office ;

(b) the number of applications sanctioned so far ;

(c) the number of applications pending ?

A.—Sri B. RACHAIAH (Minister for Revenue and Forests).—

(a) 61 applications.

(b) 34 applications.

(c) 27 applications.

Participation of Government Officials in Mandya Parliament Election

382. Sri G MADE GOWDA (Kirugavalu).—

Will the Chief Minister be pleased to state :—

(a) whether it has come to the notice of the Government that many of the officials have directly participated in the recent Parliament Election in Mandya District;

(b) if so, the action taken by Government against them ?

A.—Sri S. NIJALINGAPPA (Chief Minister).—

(a) No.

(b) Does not arise.

Prices of Chemical Fertilisers

390. Smt. K. S. NAGARATHNAMMA (Gundlupet).—

Will the Minister for Agriculture and Education be pleased to state :—

(a) the prices of Chemical fertilisers that was prevailing during 1964, 1965 and 1966.

(b). the rise in prices of the same during the current year.

(c) the prices of Endrine, Folidol, B.H.C., etc., that were prevailing during 1964, 1965 and 1966 ;

(d) the rise in price during the current year ?

A.—Sri K. V. SHANKARA GOWDA (Minister for Agriculture and Education)-—

(*a*) —

		1-1-64 to 7-8-65	7-8-65 to 1-2-66	1-2-66 to 1-4-66	1-4-66 to 1-4-67
		Rs.	Rs.	Rs.	Rs.
1	Ammonium Sulphate	360	360	405	405
2	Urea ...	615	615	680	680
3	A S N (Ammonium Sulphate Nitrate) ...	435	435	515	515
4	C A N (Calcium Ammonium Nitrate) ...	310	[illegible]	365	385
5	Amm : Phosphate 20 : 20...	...	...	...	660
6	Di. Ammonium Phosphate 18 : 46 ...	. .	...	...	830
7	Amm : Chloride ...	...	...	...	435
8	Imported NPK mixture 14 : 14 : 14 ...	...	...	...	...
9	High grade Basic slag (Price per tonne) ...	...	...	...	...

(*b*) The current prices from 1st April 1967.

			Rs.
1	Ammonium Sulphate	...	492
2	Urea	...	840
3	ASN	...	577
4	CAN	...	437
5	Amm Phosphate 20 : 20	...	818
6	Di. Amm : phosphate	...	1,095
7	Amm : Chloride	....	505
8	Imported NPK mixture	...	775
9	High Grade Basic Slag	...	304

(c) —

		1964-65	65-66	66-67
		Rs.	Rs.	Rs.
1.	Endrine 20%E.C.	14-40 per litre	14-90 per litre	16 per litre
2.	Folidol	3-60 per 100 ml.	3-80 per 100 ml.	4-20 per 100 ml.
3.	BHC 10%	395 per M. Ton	405 per M. Ton	410 per M. Ton
4.	DDT 50%	5 per K.G.	5-40 per K.G.	5-40 per K.G.
5.	Copper Sulphate	97-50 per (50 KGs)	150 per (50 KGs)	325 per (50 KGs)

(d) There is no rise in prices over 66-67 level.

Hutti Cold Mines

391. Sri G. AMARE GOWDA (Sindhanur).—

Will the Minister for Finance, Planning, Commerce and Industries be pleased to state :—

(a) the quantum of share capital of the Government held in Hutti Gold Mines Company ;

(b) the basis on which the present Board of Directors is constituted ; whether the Government has majority vote in the Board ;

(c) whether the directors are appointed or elected ;

(d) who has appointed the present head of Administrators as the Agent and General Manager of the Company ;

(e) whether it is the policy of the Government to continue the services of foreigners even when equally better qualified persons are available in the country ?

A.—Sri RAMAKRISHNA HEGDE (Minister for Finance, Planning and Commerce and Industries).—

(a) The amount of share capital held by Government in the Hutti Gold Mines Company Ltd., Hutti is Rs. 4,85,715·00.

(b) The Board of Directors of the Company is constituted in accordance with the Articles of Association of the Company and the Indian Companies Act, 1956, as amended from time to time.

Government have majority vote in the Board.

(SRI RAMAKRISHNA HEGDE)

(c) Two Directors, one of whom is the Chairman, are nominated by Government and four are elected.

(d) The Board of Directors of the Company has appointed the Agent and General Manager of the Company.

(e) The present incumbent holding the post of Agent and General Manager of the Company was appointed by the erstwhile Hyderabad Government.

He was initially appointed to the post of Superintendent of the Hutti Gold Mines Company and then promoted to the post of Agent and General Manager of this Company.

The Government of Mysore took over the business of the Hutti Gold Mines Company after States Reorganisation in 1956. Keeping in view the experience of the present incumbent of the post of Agent and General Manager of the Company, his services have been continued by the State Government.

CALLING ATTENTION TO A MATTER OF URGENT PUBLIC IMPORTANCE

MR. DEPUTY SPEAKER.—Sri V. N. Patil has been authorised to call the attention on behalf of Sri J. P. Sarwesh.

SRI V.N. PATIL (Humnabad).—Sir, I beg to call the attention of the Minister for Home and Municipal Administration to the unlawful acts committed by some persons by looting Jowar in Kurkunta and Sangai villages.

SRI R. M. PATIL (Minister for Home and Muncipal Administration).—In response to the calling attention notice, I beg to state, that it is reported that Sri Thimma Reddy Deshmukh, has got 245 acres of land in Kurkunta and Sangai villages of Sedam taluk. The pahani was in the name of Cultivators Saibavva, Yellappa and 4 others till 1966-67. The pahani for 1967-68 is in the name of Deshmukh. The Special Deputy Commissioner, Gulbarga, granted the occupancy rights to these cultivators on 1st April 1 67. The Mysore Revenue Appellate Tribunal, Bangalore, stayed the orders of the Special Deputy Commissioner, Gulbarga, *vide* its order No. 973/67 dated 28th April 1967. The matter is pending decision of the Revenue Appellate Tribunal. Further, Mrs. Nagamma Deshmukh has filed a case in the court at Sedam in Case No. M-C. 18th February 1967 for dispossessing the above petitioners. Now, both the parties claim to have cultivated the said lands.

It is also reported that it is a fact that Deshmukh has taken away the Crops on 5th and 6th March 1968 claiming himself as the cultivator and owner of the lands.

It is further reported that on 5th March 1968, Saibavva of Kurkunta village gave a petition to the effect that the crops have been looted by Sri Deshmukh. The Head Constable of Sedam Police Station visited the village on the same day and asked the petitioners to produce the proof of possession of the land which they did not. The case is reported to be of a civil nature. These are the facts, Sir.

Sri V. N. PATIL.—This statement is itself contradictory. We are sorry to hear this from the Hon'ble Home Minister.

Sri R. M. PATIL.—My submission is Hon'ble Member is practically anxious to hear from us. The point is, I have made the statement on the facts of the case. The merits of the case has to be decided by the Court which is competent to decide and as such whether the statement is contradictory or otherwise is a matter for the court to decide. I am not here to make a statement which my friend likes to have. This is a statement of facts which I have made. Nagamma might have made a complaint. That does not necessarily mean that the case of the parties who are litigating is affected by such statements.

Members' Representations

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಒಂದು ವಿಷಯವನ್ನು ಹೇಳಬೇಕೆಂದಿದ್ದೇನೆ. 30 ಸಾವಿರ ಜನರನ್ನು ಲಾಕ್‌ಔಟ್ ಮಾಡಿದ್ದಾರೆ, ಭಾರತ್ ಎಲೆಕ್ಟ್ರಾನಿಕ್ಸ್ ಅವರಿಗೆ ಸಂಬಂಧಪಟ್ಟವರು. ಅದು ಬಹಳ ಮುಖ್ಯವಾದಂಥ ವಿಷಯ.

Mr. DEPUTY SPEAKER.—I have received notice of adjournment motion just now. I will look into it and take it up tomorrow.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಯುಗಾದಿ ಹಬ್ಬಕ್ಕೆ ವಿರಾಮ ಕೊಡಬೇಕೆಂದು ನಾವು ಕೇಳಿದ್ದೆವು. ಯುಗಾದಿ ಹಬ್ಬದ ವಿರಾಮವಾಯಿತು. ವಿಧಾನ ಸೌಧದ ಮುಂದೆ ಕೆಲವರು ಉಪವಾಸಮಾಡುತ್ತಿದ್ದಾರೆ. ಅವರಿಗೆ ಯುಗಾದಿ ಹಬ್ಬದ ವಿರಾಮ ಎಲ್ಲಿದೆ? ಕಳೆದ ಅನೇಕ ದಿವಸಗಳಿಂದಲೂ ಬೆಂಗಳೂರಿನಲ್ಲಿ ನೀರಿಗೆ ಸಂಬಂಧಪಟ್ಟ ವಿಚಾರದಲ್ಲಿ ಅವರು ಯುಗಾದಿ ಹಬ್ಬವನ್ನು ಲೆಕ್ಕಿಸದೆ ಉಪವಾಸ ಮಾಡುತ್ತಿದ್ದಾರೆ. ಬೆಂಗಳೂರಿನ ನೀರಿನ ದರದ ಬಗ್ಗೆ ಸರ್ಕಾರದವರು ಇಷ್ಟೊಂದು ಅಲಕ್ಷ್ಯವನ್ನು ತೋರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಮಾತುಕತೆಗಳನ್ನು ನಡೆಸಿದ್ದೇನೆಂದು ಹೇಳಿದರು. ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಅವಶ್ಯಕವಿದೆಯೆಂದು ಹೇಳಿ ಹೊರಟುಹೋದರು. ಅದನ್ನು ಅಗತ್ಯವಾಗಿ ಮಾಡಬೇಕು. ಅವರು ಅಲ್ಲಿ ಉಪವಾಸಮಾಡುತ್ತಿರುವುದು ನಮ್ಮ ಗಮನವನ್ನು ಸೆಳೆಯುವುದಕ್ಕಾಗಿ ಎಂಬುದನ್ನು ಸರ್ಕಾರದವರು ಮನಗಾಣಬೇಕು. The Minister for Municipal Administration is here. He can rise to the occasion. ನೀರಿನ ದರ ಇಳಿಯಬೇಕು; "ಡೌನ್ ವಿತ್ ಆರ್. ಎಂ. ಪಾಟೀಲ್" ಎಂದು ಬೋರ್ಡ್ ಬರೆದಿದ್ದಾರೆ. Now I request the Hon'ble Minister for Municipal Administration to rise up to the occasion and take a lead in solving the problem because it concerns the citizens of Bangalore City. You cannot just close your eyes. It is very difficult for any legislator to do so. I request the concerned minister to make a statement and see that this fast is ended.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಒಂದು ತಿಂಗಳ ಹಿಂದೆ ಈ ವಿಷಯವಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಮಾಡಿದ್ದೆವು. ಅವರು ಒಂದು ತಿಂಗಳಲ್ಲಿ ಹೇಳುತ್ತೇನೆಂದು ಹೇಳಿದ್ದರು. ಇದುವರೆಗೆ ಯಾವ ತೀರ್ಮಾನವೂ ಅದರ ಬಗ್ಗೆ ಬಂದಿಲ್ಲ. ನಲ್ಲಿಗಳನ್ನು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ಅದನ್ನಾದರೂ ನಿಲ್ಲಿಸಿ. ಡಿಸ್‌ಕನೆಕ್ಟ್ ಮಾಡಿದ್ದಕ್ಕೆಲ್ಲಾ ರಿಕನೆಕ್ಟ್ ಮಾಡಿಸಿ ಎಂದು ನಾನು ಹೇಳುತ್ತೇನೆ. ಹಳೆಯ ದರದಲ್ಲಿ, ಅಂದರೆ, ಒಂದು ಸಾವಿರ ಗ್ಯಾಲನ್ನಿಗೆ ಒಂದು ರೂಪಾಯಿಯಂತೆ ತಗೆದುಕೊಳ್ಳಲಿ. ಮೊದಲು ಮಂತ್ರಿಗಳು ಅದರ ಬಗ್ಗೆ ಗಮನ ಕೊಡಲಿ ಎಂದು ನಾನು ಹೇಳುತ್ತೇನೆ.

Sri R. M. PATIL.—Sir, I will take the opportunity of explaining the entire position so far as water supply is concerned and also the rates that are charged and the rates that are in vogue as per the agreement between the Corporation and the Water Board.

Time may be given. I will explain the whole position.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು-ಕೋಟೆ).—ಈ ವಿಚಾರವಾಗಿ 8-10 ವರ್ಷದಿಂದಲೂ ಹೇಳುತ್ತಾ ಇದ್ದೇನೆ. ಯಾವ ಉತ್ತರವೂ ಬಂದಿಲ್ಲ.

BUDGET ESTIMATES FOR 1968-69—DEMANDS FOR GRANTS

DEMAND No. 27.

Sri G. NARAYANA GOWDA (Minister for Social Welfare).—Sir, on the recommendation of the Governor, I beg to move :

> "That a sum not exceeding Rs. 3,24,99,000 including the sums already voted on account be granted to the Government to defray the charges which will come in course of payment during the financial year for period ending 31st day of March 1969, in respect of 'Miscellaneous Social and Developmental Organisations".

Mr. DEPUTY SPEAKER.—Motion moved :

> "That a sum not exceeding Rs. 3,24,99,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969 in respect of 'Miscellaneous Social and Developmental Organisations".'

ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ಮಾನ್ಯ ಸಭಾಪತಿಯವರೇ, ಈ ಸಭೆಯ ಮುಂದಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನಾಡಲು ಬಯಸುತ್ತೇನೆ.

ಸ್ವಾಮಿ, ಈ ಸಾಲಿಗೆ ಸುಮಾರು 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಮಾನ್ಯ ಸಚಿವರು ಕೇಳಿದ್ದಾರೆ. ಸೋಷಿಯಲ್ ಅಂಡ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗಾಗಿ ಅವರು ಈ ಹಣವನ್ನು ಕೇಳಿದ್ದಾರೆ. ಹಳೇ ಮೈಸೂರಿನಲ್ಲಿ ಬಹಳ ದಿವಸದಿಂದ ಇದ್ದಂಥ ಕೆಲವು ಮಾನ್ಯ ಸದಸ್ಯರಿಗೆ ಮತ್ತು ಮೈಸೂರಿನ ಇತಿಹಾಸ ಬಲ್ಲಂಥ ಕೆಲವರಿಗೆ ಈ ವಿಚಾರವಾಗಿ ಚೆನ್ನಾಗಿ ಗೊತ್ತಿರಬೇಕು. ಹಿಂದಿನ ಸರ್ಕಾರದಲ್ಲಿ ದುಡ್ಡನ್ನು ಖರ್ಚು ಮಾಡಲು ಸುಮಾರು 18 ಇಲಾಖೆಗಳು ಇತ್ತು. ಇತ್ತೀಚೆಗೆ ಈ ಬಾಬುಗಳು 118 ಇಲಾಖೆಗಳಾಗಿವೆ. ಈ ಇಲಾಖೆಯಲ್ಲಿ ಎಷ್ಟೆಷ್ಟು ಹಣ ಖರ್ಚಾಗುತ್ತಾ ಇದೆ, ಆ ಹಣ ಸದ್ವಿನಿಯೋಗವಾಗುತ್ತಿದೆಯೋ ಇಲ್ಲವೇ ಎನ್ನತಕ್ಕಂಥ ವಿಚಾರ

ಸರ್ಕಾರಕ್ಕೆ ಗೊತ್ತಿಲ್ಲವೋ ಎನ್ನುವ ಭಾವನೆ ನಮಗೆ ಬಂದಿದೆ. ಯಾರ ಉಪಯೋಗಕ್ಕೋಸ್ಕರವಾಗಿ, ಯಾವ ಕಾರಣಕ್ಕೋಸ್ಕರವಾಗಿ ಇದನ್ನು ಖರ್ಚು ಮಾಡುತ್ತಾರೆ, ಅದು ಸದ್ವಿನಿಯೋಗ ಆಗುತ್ತಾ ಇಲ್ಲ, ವಿನಿಯೋಗ ಮಾತ್ರ ಆಗುತ್ತಾ ಇದೆ ಎಂದು ನಾನು ಹೇಳುತ್ತೇನೆ. ಉದಾಹರಣೆಗೆ 1947 ರಿಂದ ಈಚೆಗೆ ಸ್ವಾತಂತ್ರ್ಯ ಬಂದ ಇತ್ತೀಚೆಗೆ ಏನಾಗಿದೆ ಎನ್ನುವುದನ್ನು ನೋಡೋಣ. ನಮ್ಮ ದೇಶದ 1/5 ಭಾಗದ ಜನರ ಸಂರಕ್ಷಣೆ ಹೇಗೆ ನಡೆಯುತ್ತಾ ಇದೆ. ಎಷ್ಟುಮಟ್ಟಿಗೆ ಕಾಪಾಡಿ ಕೊಂಡು ಬರುತ್ತಾ ಇದ್ದಾರೆ? ತತ್ವ, ನ್ಯಾಯ ಹೇಳುವ ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲೂ, ಪ್ರಾಂತಗಳಲ್ಲೂ ಸಹ ಅಧಿಕಾರದಲ್ಲಿದೆ. ಮೊನ್ನೆ ನಡೆದ ಜನರಲ್ ಎಲೆಕ್ಷನ್‌ನಿಂದ ಇಲ್ಲಿಯವರೆಗೆ ಎಷ್ಟು ಪರಿಣಾಮ ಏನಾಗಿದೆ ಎನ್ನುವ ವಿಚಾರ ಮೊನ್ನೆ ಪಾರ್ಲಿಮೆಂಟ್‌ನಲ್ಲಿ ಸಹ 2 ಗಂಟೆಗಳ ಕಾಲ ನಡೆದ ಚರ್ಚೆಯಿಂದ ಗೊತ್ತಾಗುತ್ತೆ. ಆಂಧ್ರದಲ್ಲಿ ಒಬ್ಬ ಹರಿಜನ ಹುಡುಗನನ್ನು ಒಂದು ತಪ್ಪಿ ಗಾಗಿ ಜೀವಂತವಾಗಿ ಸುಟ್ಟುಬಿಟ್ಟರು. ಮತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಲೇಖನ ಬರೆ ದಿದ್ದಾರೆ, ಒಬ್ಬ ಹರಿಜನ ಸ್ತ್ರೀಯನ್ನು ನಗ್ನದಲ್ಲಿ ಬೀದಿಯಲ್ಲಿ ಮೆರವಣಿಗೆ ಮಾಡಿದರು ಎಂದು. ಮತ್ತು ನಮ್ಮ ಸಂಸ್ಥಾನದಲ್ಲಿ ನಾನು ಹೋದ ಸಾರಿ ಅಸೆಂಬ್ಲಿಯಲ್ಲಿ ಸಂಬಂಧಪಟ್ಟ ಸಚಿವರ ಗಮ ನಕ್ಕೆ ತಂದೆ. ಕೋಲಾರದ ಮಾನ್ಯ ಸ್ನೇಹಿತರು ಇಲ್ಲ ಇಲ್ಲ. ಆ ಗ್ರಾಮದಲ್ಲಿ ಇವೊತ್ತು ಹರಿಜನ ಹೆಂಗಸರು ತಲೆಗೆ ಹೂ ಮುಡಿದುಕೊಂಡು ಹೋಗುವ ಹಾಗಿಲ್ಲ. ಮೊಣಕಾಲಿನ ಕೆಳಗೆ ಪಂಚೆ ಉಟ್ಟುಕೊಂಡು ಹೋಗುವಂತಿಲ್ಲ. ಇದನ್ನು ನಾನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಈ ದಿನ ನನ್ನ ಮಗನಿಗೆ ನಾನು ಅಸ್ಪೃಶ್ಯ ಎಂದರೆ ಏತಕ್ಕೆ ನಾವು ಅಸ್ಪೃಶ್ಯರು ಎಂದು ಕರೆಸಿಕೊಳ್ಳ ಬೇಕು ಎಂದು ಕೇಳುತ್ತಾನೆ. ಅದಕ್ಕೆ ಏನು ಉತ್ತರ ಕೊಡುತ್ತೀರಿ? ಅಂದರೆ ನಾವು ಸಮಾಜದ ಕಟ್ಟುಪಾಡಿಗೆ ಬಿದ್ದು ಒದ್ದಾಡಬೇಕಾಗಿದೆ. ಇವೊತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಡೆಪ್ಯೂಟಿ ಕಮೀ ಷನರ್ ಆಗಿರಬಹುದು, ಒಬ್ಬ ದೊಡ್ಡ ಶ್ರೀಮಂತನಿರಬಹುದು, ಅಧಿಕಾರದಲ್ಲಿ ಅತ್ಯಂತ ದೊಡ್ಡವ ನಿರಬಹುದು, ಅವನು ಸಮಾಜದ ದೃಷ್ಟಿಯಲ್ಲಿ ವ್ಯವಹಾರಿಕ ದೃಷ್ಟಿಯಲ್ಲಿ ಆಚರಣೆಯಲ್ಲಿ ಪದ್ಧತಿಗೆ ಅನುಗುಣವಾಗಿ ಅವನು ಅಸ್ಪೃಶ್ಯನೇ. ಆದುದರಿಂದ ಹರಿಜನರಿಗೆ, ಹಿಂದುಳಿದವರಿಗೆ ರಾಜ್ಯಾಂಗದಲ್ಲಿ ಎರಡು ವಿಧವಾದ ಸೇಫ್‌ಗಾರ್ಡ್‌ನ್ನು ಕೊಟ್ಟಿದ್ದಾರೆ. ಆ ರಕ್ಷಣೆಗಳು ಯಾವುವು ಎಂದರೆ :

Broadly speaking there are two categories of safeguards for Scheduled castes and Scheduled Tribes :

1. Prohibition of discrimination on ground of religion, race, caste etc. as enunciated in articles 15, 16, 17, 19,(5), 23, 29 etc.
2. Welfare measures as visualised in articles 46, 275, etc.

ಸ್ವಾಮಿ, ಇಷ್ಟಾದರೂ ನಾನು ಕೇಳುತ್ತೇನೆ, ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರ ಗಳ ಮುಖಾಂತರ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ, ಅದು ಬರೀ ಪುಸ್ತಕದಲ್ಲಿ ಇದೆ. ಈ ರಕ್ಷಣೆಗಳನ್ನು ಕಾರ್ಯಗತ ಮಾಡಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದು ಕೊಂಡಿರಿ? ರಾಜ್ಯಾಂಗದ ಪ್ರಕಾರ ರಾಷ್ಟ್ರಪತಿಗಳು ನೇರವಾಗಿ ಕಮೀಷನರ್ ಫಾರ್ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂಬ ಒಬ್ಬ ದೊಡ್ಡ ಅಧಿಕಾರಿಯನ್ನು ನೇಮಿಸುತ್ತಾರೆ. ಅವರು ನೇರವಾಗಿ ರಾಷ್ಟ್ರ ಪತಿಯವರಿಗೆ ಜವಾಬ್ದಾರರು. ಅವರು ಭಾರತ ದೇಶದಲ್ಲಿ ಮೂಲೆಮೂಲೆಗೂ, ಮನೆಮನೆಗೂ ಹೋಗಿ ಪ್ರತಿವರ್ಷವೂ ಈ 1/5 ಭಾಗದ ಹರಿಜನರ ಸ್ಥಿತಿಗತಿಗಳು ಹೇಗಿವೆ, ಅವರ ಪ್ರಗತಿ ಹೇಗಿದೆ, ಅವರು ಯಾವ ರೀತಿ ಮುಂದುವರಿದಿದ್ದಾರೆ, ರಾಜ್ಯಾಂಗದತ್ತವಾದ ರಕ್ಷಣೆಗಳು ಎಷ್ಟರಮಟ್ಟಿಗೆ ಕಾರ್ಯಗತವಾಗಿವೆ ಎನ್ನುವ ಬಗ್ಗೆ ಅವರು ರಿಪೋರ್ಟ್ ಕೊಡುತ್ತಾರೆ. ಈ ರಿಪೋರ್ಟ್ ಕೇಂದ್ರ ಸರ್ಕಾರದಲ್ಲಿ ಪಾರ್ಲಿಮೆಂಟ್‌ನಲ್ಲೂ ಚರ್ಚೆ ಆಗುತ್ತದೆ. ನಾನು ಹೋದ ಸಲ ಈ ಅಸೆಂಬ್ಲಿಯಲ್ಲಿ ಹೇಳಿದ್ದೇನೆ. ಈ ರಿಪೋರ್ಟ್ ಪ್ರತಿ ಪ್ರಾಂತದ ವಿಧಾನಸಭೆಗಳಲ್ಲೂ ಸಹ ಚರ್ಚೆ ಆಗಬೇಕು ಎಂದು ಮತ್ತು ಈ ವಿಧಾನಸಭೆಯಲ್ಲೂ ಸಹ ಚರ್ಚೆ ಆಗಬೇಕು ಎಂದು.

2-30 P.M.

ನನಗೆ ಕಂಡುಬಂದಿರುವ ಹಾಗೆ ಇಲ್ಲಿ ಈ ವರದಿ 1957ರಿಂದಲೂ ಚರ್ಚೆಯಾಗಿಲ್ಲ. ಈ ರಿಪೋರ್ಟ್ ಇಲ್ಲಿ ಚರ್ಚೆಯಾಗಲೇಬೇಕು. ಇದರಿಂದ ಒಂದು ಮಹದುಪಕಾರವಿದೆ. ಇದನ್ನು ಚರ್ಚೆ ಮಾಡುವುದರಿಂದ ಇಲ್ಲಿ ನಮ್ಮ ಜನರಿಗೆ ಅಂದರೆ ನಮ್ಮ ಜನಾಂಗದವರಿಗೆ ಇಲ್ಲೇನು ಅನು ಕೂಲಗಳು ದೊರೆತಿವೆ, ಇಲ್ಲಿ ಇವರಿಗೆ ದೊರೆತಿರತಕ್ಕ ಸ್ಥಾನಮಾನಗಳೇನು? ನಮ್ಮ ಅಕ್ಕಪಕ್ಕದ

(ಶ್ರೀ ಜಿ. ದುಗ್ಗಪ್ಪ)

ಪ್ರಾಂತದಲ್ಲಿರತಕ್ಕ ನಮ್ಮ ಜನಾಂಗದವರಿಗೆ ಅಲ್ಲಿ ದೊರೆತಿರತಕ್ಕ ಸ್ಥಾನಮಾನಗಳೇನು ! ಅವರು ಅಲ್ಲಿ ಎಷ್ಟರಮಟ್ಟಿಗೆ ಮುಂದುವರಿದಿದ್ದಾರೆ ಮತ್ತು ಯಾವ ಯಾವ ರಾಜ್ಯದಲ್ಲಿ ಆ ಸಮಿತಿಯವರ ಸಲಹೆಗಳಿಗೆ ಎಷ್ಟೆಷ್ಟರಮಟ್ಟಿಗೆ ಕೊಟ್ಟಿದ್ದಾರೆ ಹಾಗೂ ಅವರ ಸಲಹೆಗಳನ್ನು ಕಾರ್ಯಗತ ಮಾಡಿದ್ದಾರೆ ಅನ್ನುವುದನ್ನು ತಿಳಿದುಕೊಳ್ಳಲು ಇದರಿಂದ ಅನುಕೂಲವಾಗುತ್ತದೆ. ಅಷ್ಟೇ ಅಲ್ಲದೆ ಈ ಅಮೂಲ್ಯ ಸಲಹೆಗಳನ್ನು ಈ ಮಾನ್ಯ ಸಭೆಯಲ್ಲೂ ಚರ್ಚೆ ಮಾಡುವುದರಿಂದ ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಒಂದು ಅವಕಾಶವನ್ನು ಮಾಡಿಕೊಟ್ಟರೆ ಇಲ್ಲಿರತಕ್ಕ ಮಾನ್ಯ ಸದಸ್ಯರು ಯಾರ್ಯಾರು ಏನೇನು ಅಭಿಪ್ರಾಯಗಳನ್ನು ಸೂಚಿಸುತ್ತಾರೆ ಎಂಬುದನ್ನೆಲ್ಲಾ ಕ್ರೋಢೀಕರಿಸಿ ಅದಕ್ಕನುಸಾರವಾಗಿ ಈ ಜನಾಂಗದವರಿಗೆ ಮುಂದುವರಿಯುವುದಕ್ಕೆ ಅಥವಾ ಇವರ ಒಂದು ಅಭಿವೃದ್ಧಿಗೆ ಯಾವ ನೀತಿರೀತಿಗಳನ್ನು ಅನುಸರಿಸಬೇಕೋ ಅವನ್ನು ಅನುಸರಿಸುವುದಕ್ಕೆ ಒಂದು ಅನುಕೂಲವಾಗುತ್ತದೆ. ಆದರೆ ಅದಕ್ಕೆ ಇಲ್ಲಿ ಅವಕಾಶವನ್ನು ಮಾಡಿರುವುದಿಲ್ಲ. ನಾನು ಹೋದ ಸಾರಿ ಕೂಡ ಇಲ್ಲಿ ಇದೇ ಮಾತನ್ನು ಹೇಳಿದ್ದೆ. ಹಿಂದೆ ಒಂದಾವರ್ತಿ ನಮ್ಮ ಮುಖ್ಯ ಮಂತ್ರಿಗಳು ನಮ್ಮ ಒಂದು ಹರಿಜನರ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕಾಗಿತ್ತು. ಅದಕ್ಕೆ ಒಬ್ಬ ಐ.ಎ.ಎಸ್. ಅಧಿಕಾರಿಗಳು ಕಾರ್ಯದರ್ಶಿಗಳಾಗಿದ್ದರು. ಆ ಕಾರ್ಯದರ್ಶಿಗಳು ಬಹಳ ಸೊಗಸಾಗಿ ಬಟ್ಟೆ ಹಾಕಿಕೊಂಡು ಭೂಷಣವಾಗಿ ತಯಾರಾಗಿ ಸಭೆಗೆ ಬಂದರು ಆ ದಿವಸ ಅಲ್ಲಿಗೆ ಮುಖ್ಯಮಂತ್ರಿಗಳು ಬಂದರು ಅವರು—ಏನ್ರಿ ಈ ಸಬ್‌ಜೆಕ್ಟುಗಳೆಲ್ಲಾ ಏತಕ್ಕೆ! ಈ ಅಜೆಂಡಾ ಏತಕ್ಕೆ ? ಇದೊಂದೂ ಬೇಕಾಗಿಲ್ಲ ನಿಮಗೇನು ತೊಂದರೆ ಆಗಿದೆ ಅನ್ನುವುದನ್ನು ನೀವೆಲ್ಲರೂ ತಿಳಿಸಿಬಿಡಿ ಅಷ್ಟೇ ಸಾಕು—ಎಂಬುದಾಗಿ ಹೇಳಿದರು. ಹಾಗೆ ಮುಖ್ಯಮಂತ್ರಿಗಳು ಹೇಳಿದ್ದನ್ನು ನೋಡಿ ಅಲ್ಲಿದ್ದ ನಮಗೆಲ್ಲರಿಗೂ ಬಹಳ ಸಖೇದಾಶ್ಚರ್ಯವಾಯಿತು. ನಮ್ಮ ಮುಖ್ಯ ಮಂತ್ರಿಗಳು ಎಷ್ಟು ಉದಾರಿಗಳು ಎಷ್ಟು ದೊಡ್ಡ ಮನಸ್ಸಿನಿಂದ ಮಾತನಾಡತ್ತಿದ್ದಾರೆ ಎಂದು ಅಲ್ಲಿದ್ದವರೆಲ್ಲರೂ ತಮತಮಗೇನು ಅಡಚಣೆಗಳಿದ್ದವೋ ಅವುಗಳನ್ನೆಲ್ಲಾ ತಿಳಿಸಿದರು. ಆದರೆ ಅಲ್ಲಿ ಆ ದಿವಸ ಏನೇನು ಕುಂದುಕೊರತೆಗಳನ್ನು ಜನರು ನಿವೇದಿಸಿಕೊಂಡಿದ್ದರೋ ಆ ಕೆಲಸಗಳೊಂದೂ ಆಗಲಿಲ್ಲ. ಆ ಕೆಲಸಗಳಾಗದಿದ್ದರೆ ಹೋಗಲಿ, ಆ ವರದಿ ಸಹಾ ಬೆಳಕಿಗೆ ಬರಲಿಲ್ಲ. ಆದರೆ ಅವರು ಬಹಳ ದೊಡ್ಡವರು. ಅವರಿಗೆ ಅನೇಕ ವ್ಯವಹಾರಗಳಿವೆ. ಅವರು ಏನು ಮಾಡಿದರೂ ಸರಿ ಎಂತಲೆ ಹೇಳತಕ್ಕ ಜನರೂ ಇದ್ದಾರೆ. ಆ ಒಂದು ಪ್ರಬಲ ಕಾರಣದಿಂದ ಅವರೂ ಹಾಗೆ ತಾತ್ಸಾರ ಮಾಡಿದ್ದಾರೆ. ಆ ಒಂದು ಪ್ರಬಲವಾದ ತಾತ್ಸಾರಕ್ಕೆ ಕಾರಣರು ಯಾರು ಎಂದರೆ ಯಾರು ಈ ದಿವಸ ನಮ್ಮ ಮಂತ್ರಿಮಂಡಲದಲ್ಲಿ ಈ ಐದನೇ ಒಂದುಭಾಗ ನತದೃಷ್ಟ ಜನಾಂಗದವರನ್ನು ಪ್ರತಿನಿಧಿಸತಕ್ಕವರಾಗಿ ಇದ್ದಾರೋ, ಇಲ್ಲಿ ನಮ್ಮ ಪರವಾಗಿ ಮಂತ್ರಿ ಮಂಡಲದಲ್ಲಿ ಕೆಲಸ ಮಾಡುತ್ತಿದ್ದಾರೋ ಅವರು ಅಷ್ಟು ಪ್ರಬಲರಾಗಿಲ್ಲ ಅನ್ನುವುದೇ ಪ್ರಬಲವಾದ ಕಾರಣ.

ನಾನು ಈ ದಿವಸ ಇಲ್ಲಿ ನಿಂತು ದುಗ್ಗಪ್ಪನಾಗಿ ಮಾತನಾಡುತ್ತಿಲ್ಲ. ನಾನು ಒಂದು ಸಾರ್ವಜನಿಕ ಮತದಾರರ ಕ್ಷೇತ್ರದಿಂದ ಬಂದು ಇಲ್ಲಿ ನಿಂತು ಮಾತನಾಡುತ್ತಿಲ್ಲ. ಆದರೆ ನಾನು ಬಹಳ ಹಿಂದುಳಿದ ಜನಾಂಗದ ಪ್ರತಿನಿಧಿಯಾಗಿ ಬಂದು ಇಲ್ಲಿ ಈ ದಿವಸ ಮಾತನಾಡುತ್ತಿದ್ದೇನೆ. ಹಾಗೆ ನಾನು ಇಲ್ಲಿಗೆ ಅವರ ಪ್ರತಿನಿಧಿಯಾಗಿ ಬಂದು ಅವರ ಬಗ್ಗೆ ನಾನು ನನ್ನ ಕರ್ತವ್ಯವನ್ನು ಸರಿಯಾಗಿ ಪರಿಪಾಲಿಸದಿದ್ದರೆ ನಾನು ನನ್ನ ಕರ್ತವ್ಯದಲ್ಲಿ ಲೋಪಮಾಡಿದ ಹಾಗೆ ಆಗುತ್ತದೆ. ಇಲ್ಲಿ ಆಗತಕ್ಕ ಒಬ್ಬ ವ್ಯಕ್ತಿಯ ಕರ್ತವ್ಯಲೋಪದಿಂದ ಅಲ್ಲಿ ಒಂದು ಕ್ಷೇತ್ರದಲ್ಲಿರತಕ್ಕ ಇಡೀ ಜನಾಂಗ ತೊಂದರೆಗೀಡಾದರೆ—ಇಲ್ಲಿ ಮಂತ್ರಿ ಮಂಡಲದಲ್ಲಿ ಹರಿಜನ ಪ್ರತಿನಿಧಿಯಾಗಿರತಕ್ಕ ವ್ಯಕ್ತಿ ತನ್ನ ಕರ್ತವ್ಯದಲ್ಲಿ ಲೋಪ ಮಾಡಿದರೆ ಅದರಿಂದ ಇಡೀ ದೇಶದಲ್ಲಿರತಕ್ಕ ಈ ಜನಾಂಗದವರೆಲ್ಲಾ ತೊಂದರೆಗೀಡಾಗಬೇಕಾಗುವುದು. ಈ ವರ್ಗದವರ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂಬ ಮನಸ್ಸು ಅಧಿಕಾರ ವರ್ಗದವರಿಗಿಲ್ಲ. ನಮ್ಮ ಅಧಿಕಾರಿಗಳ ಬಗ್ಗೆ ಮಾತನಾಡಿದರೆ These are all matters of administration. The administrative officers belonging to Scheduled Castes and Scheduled Tribes approach these members. So definitely this is a matter of bringing in non-officia linfluence in the matter of administration, ಎಂದು ಹೇಳಿಬಿಡುತ್ತಾರೆ. ಹೀಗೆ ಹೇಳುತ್ತ ಅಧಿಕಾರಿಗಳು ಇದು ಅಡ್ಮಿನಿಸ್ಟ್ರೇಟಿವ್ ಮ್ಯಾಟರ್ಸಿಗೆ ಸಂಬಂಧಪಟ್ಟದ್ದು ಎಂದು ಅವರನ್ನು ಉತ್ಪ್ರೇಕ್ಷೆ ಮಾಡುತ್ತಾರೆ. ಅದಕ್ಕೆ ಒಂದು ಕಾರಣವನ್ನೂ ಸಹಾ ಕೊಡಬಹುದು. ಈ ದಿವಸ ರಾಜ್ಯದಲ್ಲಿ ಈ ರಾಜಕೀಯ ಅಧಿಕಾರ ಮತ್ತು ಆಡಳಿತದ ಅಧಿಕಾರ ಯಾರ ಕೈಲಿವೆ ! ಈ ದಿವಸ ನಾನೇನು ಮಾಡಿದರೂ

ನನ್ನನ್ನು ಬಚಾಯಿಸಿಕೊಂಡು ಹೋಗುತ್ತಾರ್‍ಯೆಂಬ ಧೈರ್ಯ ಅಧಿಕಾರಿಗಳಿಗಿದೆ. ಆದರೆ ನಮ್ಮ ಅಧಿಕಾರಿಗಳ ಬಗ್ಗೆ ನಮ್ಮ ಪ್ರತಿನಿಧಿಯಾಗಿ ಮಂತ್ರಿ ಮಂಡಲದಲ್ಲಿ ಕೆಲಸ ಮಾಡತಕ್ಕ ವ್ಯಕ್ತಿ ಕಾರ್ಯಕ್ರಮ ಕೈಗೊಳ್ಳಲು ಎಷ್ಟರಮಟ್ಟಿಗೆ ದಕ್ಷತೆಯುಳ್ಳವರಾಗಿದ್ದಾರೆ ! ಅವರು ಎಷ್ಟು ದಕ್ಷತೆಯಿಂದ ಇಲ್ಲಿಯ ತನಕ ಕೆಲಸಗಳನ್ನು ಧೈರ್ಯದಿಂದ ಮುಂದುವರಿಸಿಕೊಂಡು ಬಂದಿದ್ದಾರೆ ಎಂದು ಕೇಳುತ್ತೇನೆ ! ಆದರೆ ಅವರಿಗೆ ಅಲ್ಲಿ ಈ ಕೆಲಸಗಳನ್ನು ದಕ್ಷತೆಯಿಂದ ಮಾಡುವುದಕ್ಕಾಗುತ್ತಿಲ್ಲ. ಅದನ್ನು ಸರಿಪಡಿಸಲಿರುವ ಉಪಾಯ ಒಂದೇ ಒಂದು. ಅದೇನೆಂದರೆ, ಅವರು ಆ ಕ್ಯಾಬಿನೆಟ್‌ನಿಂದ ರಾಜೀನಾಮೆ ಕೊಟ್ಟು ಹೊರಗೆ ಬರುವುದು. ಅವರು ಹಾಗೆ ಮಾಡಲಿ ಎಂದರೆ ಅವರು ಇದನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳದೆ ತಮ್ಮ ಒಂದು ಅಧಿಕಾರ ಲಾಲಸೆ ಹಾಗೂ ತನ್ನ ಸ್ವಾರ್ಥ ಹಿತಕ್ಕಾಗಿ ಇಡೀ ಜನಾಂಗದ ಏಳಿಗೆಯನ್ನು ಬಲಿಕೊಟ್ಟು ಅಧಿಕಾರದಲ್ಲಿದ್ದಾರೆ. ಒಂದು ರಾಜ್ಯದಲ್ಲಿರತಕ್ಕ ತನ್ನ ಜನಾಂಗದವರ ಅಭಿವೃದ್ಧಿಯನ್ನು ಮರೆತರೆ ಮುಂದೆ ನಮ್ಮ ಪೀಳಿಗೆ ಇಂದಿನ ನಮ್ಮ ಕೆಲಸಕ್ಕಾಗಿ ಶಪಿಸಾರು. ಅಲ್ಲಿ ತಮಗೆ ಎಫಿಷಿಯೆಂಟಾಗಿ ಕೆಲಸ ಮಾಡುವುದಕ್ಕಾಗದಿದ್ದರೆ ಅವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟು ಬರಲಿ. ಈ ದಿವಸ ನಮ್ಮ ಮಂತ್ರಿ ಮಂಡಲದಲ್ಲಿರತಕ್ಕ ಹರಿಜನ ಪ್ರತಿನಿಧಿಗೆ ಇಡೀ ಜನಾಂಗದ ಅಭಿವೃದ್ಧಿಗೆ ಶ್ರಮಿಸಲು ಸಾಧ್ಯವಿಲ್ಲ, ಅವರ ಕೈಯಿಂದ ಆ ಕೆಲಸವಾಗುವುದಿಲ್ಲ, ಅವರಿಗೆ ಅದೊಂದು ಅಸಾಧ್ಯವಾದ ಕಾರ್ಯ ಎಂದರೆ ಅಲ್ಲಿಗೆ ಸಾಕು. ನಾವು ಅದನ್ನು ಇನ್ನು ಮುಂದೆ ಹೆಚ್ಚು ತರ್ಕಮಾಡುವುದು ಬೇಡ.

ಇನ್ನು ನಾನೀಗ "Protective measures" ಪ್ರೊಟೆಕ್ಟೀವ್ ಮೆಷರ್ಸುಗಳು ಅಂದರೆ ಯಾವುವು ? ಅವುಗಳನ್ನು ಅನುಸರಿಸಿ ಈ ಜನಾಂಗಕ್ಕೆ ಎಷ್ಟರಮಟ್ಟಿಗೆ ರಕ್ಷಣೆ ಕೊಟಿದ್ದಾರೆ ಅನ್ನುವುದನ್ನು ಪ್ರಸ್ತಾಪ ಮಾಡಬಯಸುತ್ತೇನೆ :—

Scrutiny of legislation concerning Scheduled Castes and Scheduled Tribes; enquiry into complaints and representations; undertaking of case studies; maintenance of extensive contacts; thoroughly and freely mixing with the Scheduled Caste people. These are the duties of the Commissioner. Broadly speaking there are two categories of safeguards for S.C. and S.T. as ennunciated in the constitution protective safeguards such as reservation of seats in services, abolition of untouchability, etc., welfare measures—ಆದರೆ ಈ ರಕ್ಷಣೆಗಳೆಲ್ಲಾ ಪುಸ್ತಕದಲ್ಲೇ ಉಳಿದಿವೆ. ಆ ಮಾರ್ಟಿನ್ ಲೂಥರ್ ಕಿಂಗ್ ಹೀಗೆ ಹೇಳಿದ್ದಾನೆ ನಮಗೆ ಆ ಪುಸ್ತಕದಲ್ಲಿರತಕ್ಕ ರಕ್ಷಣೆಗಳು ಬೇಡ, ಅತನು ಆ ನೀಗ್ರೋ ಜನರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಕಾಲದಲ್ಲಿ ಹೇಳಿದ ಮಾತುಗಳಿವು—ನಮಗೆ ಕಾರ್ಯತಃ ರಕ್ಷಣೆಗಳನ್ನು ಕೊಡಿ ಎಂದು—ಹೀಗೆ ಹೇಳಿದ್ದಾನೆ: Martin King Luther: "We do not want these rights in theory: but we want these rights in result." ಈ ರಾಜ್ಯಾಂಗದತ್ತವಾದ ರಕ್ಷಣೆಗಳೇನಿವೆ ಅವು ಹಾಗೇ ಪುಸ್ತಕದಲ್ಲಿ ಉಳಿದವು. ಅವು ಇನ್ನೂ ಕಾರ್ಯಗತವಾಗಲಿಲ್ಲ. ನಮ್ಮಲ್ಲಿ ಈ ದಿವಸ ಅನೇಕರು ಈ ರಿಜರ್ವೇಷನ್ ಏತಕ್ಕಿರಬೇಕು ಇವು ಯಾವುವೂ ಬೇಕಿಲ್ಲ. ಇವೆಲ್ಲಾ ಹೋಗಬೇಕು ಅನ್ನತಕ್ಕವರೂ ಇದ್ದಾರೆ. ಈ ದಿವಸ ಇಲ್ಲಿಂದ ಆ ರಾಜ್ಯಸಭೆಗೆ ಹೋಗುವುದಕ್ಕೆ ನಮ್ಮ ಒಬ್ಬ ಸದಸ್ಯರಿಗೆ ಸಾಧ್ಯವಾಗಿದೆ. ಅಂದರೆ ಹೀಗೆ ನಾವು ಒಂದು ಜನರಲ್ ಸೀಟಿನಿಂದ ಕಂಟೆಸ್ಟ್ ಮಾಡಿ ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಿದೆಯೇ ಎಂದು ಕೇಳುತ್ತೇನೆ. ನಮ್ಮ ಮೇಲ್ಮನೆಯಿಂದ ಕಳೆದ 20 ವರ್ಷಗಳಲ್ಲಿ ಒಬ್ಬ ಸದಸ್ಯರು ಮಾತ್ರ ಅಂದರೆ ನಮ್ಮ ಹರಿಜನ ಜನಾಂಗದ ಒಬ್ಬ ಸದಸ್ಯರು ರಾಜ್ಯ ಸಭೆಗೆ ಈ ದಿವಸ ಆರಿಸಿ ಹೋದಂತಾಯಿತು. ಹಿಂದೆ ಆ ಮೇಲ್ಮನೆಯಲ್ಲಿ 40 ಜನ ಸದಸ್ಯರುಗಳಿದ್ದಾಗ ಅಲ್ಲಿ ಇಬ್ಬರು ಹರಿಜನ ಸದಸ್ಯರು ಇರುತ್ತಿದ್ದರು. ಈ ದಿವಸ ಅಲ್ಲಿ ನಮ್ಮ ಜನಾಂಗದವರು ಎಷ್ಟು ಜನರಿದ್ದಾರೆ? ನಮ್ಮ ರಾಜ್ಯಾಂಗದಲ್ಲಿ ಇದನ್ನೆಲ್ಲಾ ನಿಷ್ಕರ್ಷೆ ಮಾಡಿದ್ದರೂ ನಾವು ಅದರ ಬಗ್ಗೆ ತಪ್ಪನ್ನು ಮಾಡುತ್ತಿದ್ದೇವೆ. ಇಲ್ಲಿಗೆ ನಾವು ಚುನಾವಣೆಯಲ್ಲಿ ಆರಿಸಿ ಬಂದನಂತರ ಇಲ್ಲಿ ನಾವೆಲ್ಲರೂ ದೇಶಕ್ಕೆ ದ್ರೋಹ ಮಾಡುವುದಿಲ್ಲ ನಾವು ರಾಜ್ಯಾಂಗಕ್ಕೆ ನಿಷ್ಠೆಯಿಂದ ನಮ್ಮ ಸೇವೆಸಲ್ಲಿಸಿಕೊಂಡು ಬರುತ್ತೇವೆಂಬುದಾಗಿ ಇಲ್ಲಿ ಪ್ರಮಾಣವಚನವನ್ನು ತೆಗೆದುಕೊಂಡು ಆನಂತರ ಆ ಪ್ರಮಾಣಕ್ಕೆ ತದ್ವಿರುದ್ಧವಾಗಿ ನಡೆಯುತಕ್ಕದ್ದು ಇವೆಯಲ್ಲಾ ಇದು ದೇಶ ದ್ರೋಹಗಳಲ್ಲೆಲ್ಲಾ ಮಹಾ ಘೋರವಾದ ದ್ರೋಹವೆಂದು ನಾನು ಹೇಳುತ್ತೇನೆ ಈ ಕಾರ್ಯವನ್ನು ನಡೆಸತಕ್ಕ ಹಾದಿಯಲ್ಲಿ ಅನೇಕ ತೊಂದರೆಗಳು ಬರುತ್ತವೆ, ಈ ಜನಾಂಗದವರ ಅಭಿವೃದ್ಧಿಯನ್ನು ನೋಡಿ ಇವರ ಪ್ರಗತಿಯನ್ನು ನೋಡಿ ಅಸೂಯೆ ಪಡದೆ ಕೆಲಸಮಾಡುವ ಒಬ್ಬ ವ್ಯಕ್ತಿ ಅಲ್ಲಿಗೆ ಬೇಕು. ಬೂಟ್ಸನ್ನು ಹಾಕಿದವನಿಗೆ ಗೊತ್ತು ಆ ಬೂಟ್ಸ್ ಒಳಗಡೆ ಎಲ್ಲಿ ಕಚ್ಚುತ್ತೆ ಅನ್ನುವುದು. ಅದು ಬೇರೊಬ್ಬರಿಗೆ ಗೊತ್ತಾಗುವುದಿಲ್ಲ.

(ಶ್ರೀ ಜಿ. ದುಗ್ಗಪ್ಪ)

ನಮ್ಮ ಸ್ನೇಹಿತರು ನೇರವಾಗಿ ನೋಡಿದರೆ ಗೊತ್ತಾಗುತ್ತದೆ. ತೊಂದರೆಯನ್ನು ಅನುಭವಿಸುವ ಜನಗಳಿಗೆ ಎಲ್ಲಿ ನೋವಿದೆ ಎಂಬುದು ಗೊತ್ತಾಗುತ್ತದೆ. ಅದಕ್ಕೆ ಪರಿಹಾರವೇನು ಎಂಬುದನ್ನು ಅವರೇ ಕಂಡುಹಿಡಿಯುತ್ತಾರೆ. ಆದ್ದರಿಂದ ಆ ಜನಾಂಗಕ್ಕೆ ಸಂಬಂಧಪಟ್ಟ ವ್ಯಕ್ತಿಗೇ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಪೋರ್ಟ್‌ಫೋಲಿಯೋವನ್ನು ಕೊಡಬೇಕು ಎನ್ನುವ ಸೌಜನ್ಯ ಇವರಿಗೆ ಇಲ್ಲ, ಔದಾರ್ಯ ಇವರಿಗೆ ಇಲ್ಲ. ಈ ಸೋಷಿಯಲ್ ವೆಲ್‌ಫೇರ್ ಪೋರ್ಟ್‌ಫೋಲಿಯೋವನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳು ನನಗೆ ವೈಯಕ್ತಿಕವಾಗಿ ಸ್ನೇಹಿತರು. ಅವರು ನನಗೆ ಚೆನ್ನಾಗಿ ಗೊತ್ತು. ಆದರೆ ನಾನು ಈ ಇಲಾಖೆಗೆ ಸಂಬಂಧಪಟ್ಟಹಾಗೆ ಮಾತನಾಡುವಾಗ ಅವರು ನನ್ನ ಸ್ನೇಹಿತರು ಎಂದು ನಾನು ಮಾತನಾಡುವುದಕ್ಕೆ ಆಗುವುದಿಲ್ಲ. ನನ್ನ ಒಂದು ಅಭಿಪ್ರಾಯದಲ್ಲಿ ಈ ಸೋಷಿಯಲ್ ವೆಲ್‌ಫೇರ್ ಪೋರ್ಟ್‌ಫೋಲಿಯೋವನ್ನು ಯಾರಾದರೂ ಹರಿಜನರು ತೆಗೆದುಕೊಳ್ಳಬೇಕಾಗಿತ್ತು. ಆಗ ಅವರಿಗೆ ಹರಿಜನರ ಕಷ್ಟ ನಿಷ್ಠುರಗಳು ಏನು ಎಂಬುದು ಗೊತ್ತಾಗುತ್ತಿತ್ತು. ಅವಕ್ಕೆ ಏನು ಮಾಡಬೇಕೆಂಬುದೂ ಅವರಿಗೆ ಗೊತ್ತಾಗುತ್ತಿತ್ತು. ಬೇರೆಯವರಿಗೆ ಹರಿಜನರ ವಿಚಾರಗಳು ಗೊತ್ತಿದ್ದರೂ ಕೂಡ ಅವರಿಗೆ ಏನು ಅನುಕೂಲಗಳನ್ನು ಮಾಡಬೇಕೆಂಬುದು ಗೊತ್ತಾಗುವುದಿಲ್ಲ. ಈಗ ಒಂದು ಉದಾಹರಣೆಗೆ ಹೇಳಬೇಕಾಗಿದ್ದರೆ, ಹರಿಜನರ ಪ್ರತಿನಿಧಿಯಾಗಿರತಕ್ಕ ಮಾನ್ಯ ರೆವಿನ್ಯೂ ಮಂತ್ರಿಗಳು ಇವೊತ್ತಿನ ದಿವಸ ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಅವರು ಇಲ್ಲಿ ಇದ್ದರೆ ಕೆಲವು ವಿಷಯಗಳನ್ನು ನಾನು ಹೇಳಬೇಕೆಂದಿದ್ದೆ. ಈಗ ಸರ್ಕಾರದವರು ಹರಿಜನರಿಗೆ ಸಂಬಂಧಪಟ್ಟ ಹಾಗೆ ಒಂದು ಪುಸ್ತಕವನ್ನು ಹೊರಡಿಸಿದ್ದಾರೆ. ಅದರ ಹೆಸರು Ameliorative measures for Backward Classes in Mysore State ಎಂದು. ಇದರಲ್ಲಿರತಕ್ಕ ವರದಿಯನ್ನು ಬೇಕಾದರೆ ಓದುತ್ತೇನೆ. ಕೇರಳದಲ್ಲಿ ಹರಿಜನರಿಗೋಸ್ಕರ ಮತ್ತು ಹಿಂದುಳಿದ ವರ್ಗದವರಿಗೋಸ್ಕರ ಬೇರೆ ಒಂದು ಕಾನೂನನ್ನು ಮಾಡಿ ಇಟ್ಟಿದ್ದಾರೆ. ಅವರಿಗೆ ಜಮೀನು ಮಂಜೂರುಮಾಡುವುದಕ್ಕಾಗಿ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಹಾಗೆ ಬೇರೆ ಒಂದು ಕಾನೂನು ಇದೆ. ಮೈಸೂರಿನಲ್ಲಿ ಲ್ಯಾಂಡ್ ರೆವಿನ್ಯೂ ಕೋಡನ್ನು ಸರಿಯಾಗಿ ಜಾರಿ ಮಾಡುತ್ತಿಲ್ಲ. ಹರಿಜನರಿಗೆ ಮತ್ತು ಇತರ ಹಿಂದುಳಿದ ವರ್ಗದವರಿಗೆ ಸರಿಯಾಗಿ ಜಮೀನು ಮಂಜೂರು ಮಾಡುತ್ತಿಲ್ಲ. ಬೆಳಿಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಜಮೀನು ಮಂಜೂರಾತಿಗೆ ಸಂಬಂಧಪಟ್ಟ ಹಾಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಕೊಟ್ಟಂತಹ ಒಂದು ಉತ್ತರವೇ ಸಾಕು. ಆ ಒಂದು ನಿದರ್ಶನವೇ ಸಾಕು. ಶಿವಮೊಗ್ಗ ಜಿಲ್ಲೆಯಲ್ಲಿ 200-300 ಎಕರೆ ಜಮೀನು ಇರತಕ್ಕವರಿಗೆ ನೀರಾವರಿ ಜಮೀನನ್ನು ಕೊಟ್ಟಿದ್ದಾರೆ. ಹಿಂದುಳಿದ ಜನಗಳಿಗೆ ಹರಿಜನರಿಗೆ ಅಲ್ಲಿ ಜಮೀನನ್ನು ಕೊಟ್ಟಿಲ್ಲ. ಜಮೀನು ಇಲ್ಲದೇ ಇರುವವರಿಗೆ ಜಮೀನು ಕೊಟ್ಟಿಲ್ಲ. ಊರಿನಲ್ಲಿ ಬಲಾಢ್ಯರಾಗಿರತಕ್ಕವರು, ಪ್ರಮುಖರಾಗಿರತಕ್ಕವರು ಬಗರ್ ಹುಕುಂನಿಂದ ಸಾಗು ಮಾಡಿದ್ದರೆ ಅಂಥವರಿಗೇ ಜಮೀನು ಕೊಟ್ಟಿದ್ದಾರೆ. ಈಗ ಅಲ್ಲಿ ಗೂಂಡಾಗಿರಿ ಹೆಚ್ಚಿದೆ. ಮಂಡ್ಯಾ ಜಿಲ್ಲೆಯಲ್ಲಿ, ಬೀದರ್‌ನಲ್ಲಿ, ಚಿತ್ರದುರ್ಗದಲ್ಲಿ, ಹರಿಹರದಲ್ಲಿ, ದಾವಣಗೆರೆಯಲ್ಲಿ ಯಾರು ಯಾರಿಗೆ ಜಮೀನುಗಳನ್ನು ಕೊಡುತ್ತಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಹರಿಜನಾಂಗದ ಪ್ರತಿನಿಧಿಯಾದ ರೆವಿನ್ಯೂ ಮಂತ್ರಿಗಳು ಇದ್ದಾರೆ. ಅವರು ಎಷ್ಟು ಜನ ಹರಿಜನರಿಗೆ ಜಮೀನನ್ನು ಮಂಜೂರುಮಾಡುತ್ತಿದ್ದಾರೆ, ಅನುಕೂಲ ಮಾಡುತ್ತಿದ್ದಾರೆ ಎಂಬುದನ್ನು ಹೇಳಲಿ. ನೀರಾವರಿ ಜಮೀನನ್ನು ಮಂಜೂರುಮಾಡತಕ್ಕ ವಿಷಯದಲ್ಲಿ ರೆವಿನ್ಯೂ ಮಂತ್ರಿಗಳಿಗೆ ಎಷ್ಟು ಅರ್ಜಿಗಳು ಬಂದಿವೆ ಎಂಬುದನ್ನು ಹೇಳಲಿ. ಈ ನತದೃಷ್ಟ ಹರಿಜನಗಳು ಹೇಳುತ್ತಿದ್ದಾರೆ, ನಮಗೆ ಗ್ರಾಮಗಳಲ್ಲಿ ವ್ಯವಸಾಯ ಮಾಡುವುದಕ್ಕೆ ಜನಗಳು ಜಮೀನನ್ನು ಬಿಟ್ಟುಕೊಡುವುದಿಲ್ಲ ಎಂದು. ಅವರಿಂದ ಬಂದಂತಹ ಅರ್ಜಿಗಳನ್ನು ನಾನು ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಆ ಬಗ್ಗೆ ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ನಾನು ಕೇಳುತ್ತೇನೆ. ಇವೊತ್ತಿನ ದಿವಸ ಈ ಜಮೀನು ವ್ಯವಹಾರಕ್ಕೆ ಸಂಬಂಧಪಟ್ಟಹಾಗೆ ಹರಿಜನರಿಂದ 200-300 ಅರ್ಜಿಗಳು ಬರುತ್ತಿವೆ. ಹರಿಜನರ ಪರವಾಗಿ ಒಬ್ಬ ವ್ಯಕ್ತಿಗಳು ಮಂತ್ರಿಗಳಾಗಿ ಅಧಿಕಾರದಲ್ಲಿದ್ದಾರೆ. ಅವರು ಇವರ ಬಗ್ಗೆ ಏನು ಮಾಡಿದ್ದಾರೆ ? ಅವರು ಇವೊತ್ತು ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಅವರಿಗೆ ಚೆನ್ನಾಗಿ ಮನದಟ್ಟಾಗುವ ಹಾಗೆ ಹೇಳಬಹುದಾಗಿತ್ತು. ಇವರು ಇಲ್ಲಿ ಇದ್ದಿದ್ದರೆ ಹೇಳುವುದಕ್ಕೆ ಒಂದು ತರಹ ಸ್ಫೂರ್ತಿ ಬರುತ್ತಿತ್ತು. ಹಿಂದುಳಿದ ವರ್ಗದವರ ಮತ್ತು ಹರಿಜನರ ಅಭಿವೃದ್ಧಿಯ ವಿಷಯದಲ್ಲಿ, ಅವರ ಕಷ್ಟ ನಿಷ್ಠುರಗಳೇನು ಎಂಬುದನ್ನು ತಿಳಿದುಕೊಂಡು ಅವರ ಅಭಿವೃದ್ಧಿಯ ಬಗ್ಗೆ ಇವರು ಸಾಕಷ್ಟು ಕೆಲಸವನ್ನು ಮಾಡಿಲ್ಲ. ಇವರು ಇಲ್ಲಿ ಹರಿಜನರ ಪರವಾಗಿ ರೆವಿನ್ಯೂ ಮಂತ್ರಿಗಳಾಗಿರುವುದಕ್ಕೆ ನಾಲಾಯಕ್ ಎಂದು ನಾನು ಹೇಳುತ್ತೇನೆ. ಮಂತ್ರಿಗಳು ಉತ್ತರವನ್ನು ಹೇಳಬೇಕಾಗಿದ್ದರೆ ಪ್ರಾಸಂಗಿಕವಾಗಿ ಹೇಳುತ್ತಾರೆ. ಇಲ್ಲಿ ನಾವು ಏನಾದರೂ ಒಂದು ಪ್ರಶ್ನೆಯನ್ನು ಪ್ರಸ್ತಾಪ ಮಾಡಿದರೆ ಅದರ ಹಿನ್ನೆಲೆ ಏನು ಎನ್ನುವುದನ್ನು ಅರಿತು ಸರ್ಕಾರದವರು ಉತ್ತರವನ್ನು

ಕೊಡಬೇಕು. ಮೊನ್ನೆ ಇದೇ ಮಹಾಸಭೆಯಲ್ಲಿ ಶ್ರೀಮಾನ್ ಪುಟ್ಟದಾಸ ಅವರು ಮೆಡಿಕಲ್ ಡಿಮ್ಯಾಂಡಿನ ಮೇಲೆ ಪ್ರಸ್ತಾಪ ಮಾಡುತ್ತಾ ಆಸ್ಪತ್ರೆಗಳಲ್ಲಿ ಸ್ಪಿರಿಟ್ ಇರುವುದಿಲ್ಲ ಎಂದು ಹೇಳಿದರು. ನಮ್ಮ ಮಾನ್ಯ ಮಂತ್ರಿಗಳಾದ ವೈದ್ಯಕೀಯ ಇಲಾಖೆಯ ಮಂತ್ರಿಗಳಿಗೆ ಗೊತ್ತಿರುವಹಾಗೆ ಹಿಂದಿನ ಕಾಲದಲ್ಲಿ ಅಸೆಂಬ್ಲಿಯಲ್ಲಿ ಸರ್ಕಾರದ ಪ್ರತಿನಿಧಿಗಳು ಎಂದರೆ ಇಲಾಖೆಯ ಅಧಿಕಾರಿಗಳು ಉತ್ತರವನ್ನು ಹೇಳುತ್ತಿದ್ದರು ಅವರು ಯಾವ ರೀತಿ ಉತ್ತರವನ್ನು ಕೊಡುತ್ತಿದ್ದರು ಎಂಬುದು ಎಲ್ಲರಿಗೂ ಗೊತ್ತಿದೆ. ಅದೇ ಮಾದರಿಯಲ್ಲಿ ನಮ್ಮ ಮಾನ್ಯ ಮಂತ್ರಿಗಳಾದ ಪುಟ್ಟಸ್ವಾಮಿಯವರು ಮೊನ್ನೆ ಈ ಸಭೆಯಲ್ಲಿ ಬಹಳ ವ್ಯಂಗ್ಯವಾಗಿ ಉತ್ತರವನ್ನು ಹೇಳಿದರು. ಸ್ಪಿರಿಟ್ಟಿಗೆ ಬದಲಾಗಿ ಡೆಟಾಲ್ ಉಪಯೋಗಿಸುತ್ತೇವೆ ಎಂದು ಹೇಳಿದರು. ಇದರ ಹಿನ್ನಲೆ ಏನು, ಜನರ ಮನೋಭಿಪ್ರಾಯವೇನು ಎಂಬುದನ್ನು ತಿಳಿದುಕೊಳ್ಳಬೇಕು. ಸುಮ್ಮನೆ ಮಾತಿಗೆ ಮಾತು ಹೇಳಿ ಕಾಲ ಕಳೆದು ಹೋಗತಕ್ಕ ಸಭೆ ಇದಲ್ಲ. ಸಾಮಾನ್ಯವಾದ ಕೋ-ಆಪರೇಟೀವ್ ಸೊಸೈಟಿಯ ಜನರಲ್‌ಬಾಡಿ ಮೀಟಿಂಗ್ ಮಾಡಿದಹಾಗೆ ಆಗ ಬಾರದು ಎಂದು ನಾನು ಹೇಳುತ್ತಿದ್ದೇನೆ. ಸ್ವಲ್ಪ ಎಫೆಕ್ಟೀವ್ ಆಗಿ ಇರಬೇಕು. ಹಿಂದೆ ಶಾಸನ ಸಭೆ ನಡೆಯುವಾಗ ಸದಸ್ಯರುಗಳಿಗೆ ಉಚಿತ ಕಾಫಿ ಮತ್ತು ತಿಂಡಿಯ ವ್ಯವಸ್ಥೆ ಆಗುತ್ತಿತ್ತು. ಆ ಕಾಲದಲ್ಲಿ ಒಂದು ದೊಡ್ಡ ಉಪಕಾರವಾಗುತ್ತಿತ್ತು. ಶಾಸನ ಸಭೆಯಲ್ಲಿ ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡಿದರೂ ಕೂಡ ಈ ಸಭೆಯಲ್ಲಿ ಇಲಾಖೆಯ ಮುಖ್ಯಾಧಿಕಾರಿಗಳು ಮತ್ತು ಇಲಾಖೆಯ ಕಾರ್ಯದರ್ಶಿಗಳು ಇರುತ್ತಿದ್ದರು, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತಹ ವಿಷಯ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಹೋಗುತ್ತಿತ್ತು. ಅದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಅವರು ತೆಗೆದುಕೊಳ್ಳುತ್ತಿದ್ದರು. ಈಗ ಅಧಿಕಾರಿಗಳು ಏನು ಹೇಳುತ್ತಿದ್ದಾರೆ ಎಂದರೆ, ನಮಗೆ ಮಂತ್ರಿಗಳ ಕಾಟ ಎಂದು ಹೇಳುತ್ತಿದ್ದಾರೆ. ಅವರಿಗೂ ಬೇಜಾರು ಆಗಿದೆ. ಒಳ್ಳೆಯದಕ್ಕೂ, ಕೆಟ್ಟದ್ದಕ್ಕೂ ಸಣ್ಣದಕ್ಕೂ, ದೊಡ್ಡದಕ್ಕೂ ಮಂತ್ರಿಗಳ ಸಲಹೆ ಇಲ್ಲದೆ ಮುಂದಕ್ಕೆ ಹೋಗುವ ಹಾಗೇ ಇಲ್ಲ. ಪ್ರತಿಯೊಂದಕ್ಕೂ ಮಂತ್ರಿಗಳನ್ನು ಕೇಳಬೇಕು. ಇದರಿಂದ ಏನಾಗಿದೆ ಎಂದರೆ, ಜವಾಬ್ದಾರಿಯುತವಾದ ಅಧಿಕಾರಿಗಳೂ ಸಹ ಸುಮ್ಮನೆ ಕೈಕಟ್ಟಿಕೊಂಡು ಅಸಹಾಯಕರಾಗಿ ಕುಳಿತುಕೊಂಡಿದ್ದಾರೆ. ಪ್ರತಿಯೊಂದಕ್ಕೂ ಮಂತ್ರಿಗಳು ಇಂಟರ್‌ಫಿಯರ್ ಆಗುತ್ತಾರೆ. ಅದು ಸರಿಯಲ್ಲ; ಒಂದು ನೀತಿ ನಿರೂಪಣೆಯನ್ನು ಹಾಕಿದರೆ ಒಂದು ತತ್ವವನ್ನು ನಿರೂಪಣೆ ಮಾಡಿದರೆ, ಅದರಂತೆ ಅಧಿಕಾರಿಗಳು ನಡೆಸಿಕೊಂಡು ಹೋಗುತ್ತಾರೆ. ಸಣ್ಣಪುಟ್ಟದ್ದಕ್ಕೆಲ್ಲಾ ಮಂತ್ರಿಗಳು ಕೈ ಹಾಕುವುದಕ್ಕೆ ಹೋಗುವುದು ಸರಿಯಲ್ಲ. ಇದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕೆಲಸದಲ್ಲಿ ಆಸಕ್ತಿ ಇಲ್ಲದೆ ಹೋಗಿದೆ. ಅದೃಷ್ಟವಶಾತ್ ಈ ಇಲಾಖೆಗೆ ಈಗ ಸೀನಿಯರ್ ಸ್ಕೇಲಿನ ಆಫೀಸರನ್ನು ಡೈರೆಕ್ಟರಾಗಿ ಹಾಕಿದ್ದಾರೆ. ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅಧಿಕಾರಿಗಳಿಗೆ ಸ್ವಾತಂತ್ರ್ಯವನ್ನು ಕೊಡಿ, ನಿಮ್ಮ ಕಾರ್ಯನೀತಿ ಏನಿದೆ ಅದರಂತೆ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗಬೇಕೆಂದು ಹೇಳಿ. ಮಧ್ಯ ಪ್ರವೇಶ ಮಾಡಬೇಡಿ. ಈ ಇಲಾಖೆಯಲ್ಲಿ 3 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ (ಹರಿಹರ).—ಮೂರು ಕೋಟಿ ರೂಪಾಯಿಗಳು ಮಿಸ್‌ಲೇನಿಯಸ್ ಸೇರಿಸಿಕೊಂಡು ಇದೆ. ಹರಿಜನರಿಗೋಸ್ಕರ ಒಂದು ಕೋಟಿ ಮಾತ್ರ ಇದೆ.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಸದಸ್ಯರು ನನಗೆ ಈ ಸಮಯದಲ್ಲಿ ಈ ವಿಷಯವನ್ನು ಹೇಳಿದ್ದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಮೈಸೂರು ದೇಶದಲ್ಲಿ ಏನು ಹಾಸ್ಟಲುಗಳನ್ನು ಪ್ರಾರಂಭ ಮಾಡಿದ್ದಾರೆಯೋ ಅದನ್ನೆಲ್ಲಾ ಸೇರಿಸಿ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಪಟ್ಟಿಯನ್ನು ಕೊಟ್ಟಿದ್ದಾರೆ.

[MR. CHAIRMAN (SMT. NAGARATHNAMMA HIREMATH) in the Chair]

ರಾಜ್ಯಾಂಗದಲ್ಲಿ ಹೇಳಿರುವಂತೆ ಹಿಂದುಳಿದವರನ್ನು ರಕ್ಷಣೆ ಮಾಡುವುದಕ್ಕೆ ನಿಮಗೆ ಆಗುತ್ತಿಲ್ಲ. ನಿಮ್ಮ ಒಂದು ರಿಪೋರ್ಟಿನಿಂದ ಇದು ಗೊತ್ತಾಗುತ್ತದೆ. ಸಾಮಾಜಿಕ ಅಭಿವೃದ್ಧಿ ಮೂಲಕ ಹಿಂದುಳಿದವರಿಗೆ ಕೊಡುತ್ತಿರುವ ಗಾಡಿ, ಎತ್ತು, ಕೋಳಿ, ಮೇಕೆ ಮುಂತಾದವುಗಳನ್ನು ನಿಲ್ಲಿಸಿಬಿಡಿ. ಈ ರೀತಿ ಸಹಾಯ ಮಾಡುವುದರಿಂದ ಯಾವ ಪುರುಷಾರ್ಥವೂ ಸಾಧನೆಯಾಗುವುದಿಲ್ಲ. ಹಿಂದುಳಿದವರಿಗೆಲ್ಲಾ ಈ ಸರ್ಕಾರದವರು ಕೋಳಿಮೊಟ್ಟೆಯನ್ನು ಸಹ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ರೀತಿ ಸಹಾಯ ಮಾಡುವುದರಿಂದ ಇವರ ಆರ್ಥಿಕ ಪ್ರಗತಿಯಾಗುವುದಿಲ್ಲ. ನಿಜವಾಗಿಯೂ ಇವರ ಆರ್ಥಿಕ ಪ್ರಗತಿಯಾಗಬೇಕಾದರೆ ಇವರನ್ನು ವಿಚಾರವಂತರನ್ನಾಗಿ ಮಾಡಿ, ವಿದ್ಯಾವಂತರನ್ನಾಗಿ ಮಾಡಿ. ಇವತ್ತಿನದಿವಸ ಹಳ್ಳಿಗಾಡಿನಲ್ಲಿ ಹಿಂದುಳಿದ ಪಂಗಡದವರು ತಮ್ಮ ಮಕ್ಕಳನ್ನು ಅವರಿಗೆ

(ಶ್ರೀ ಜಿ. ದುಗ್ಗಪ್ಪ)

ಸ್ಲೇಟ್ ಕೊಡಿಸುವುದಕ್ಕೆ ಕಾಸಿಲ್ಲವೆಂದು ಸ್ಕೂಲಿಗೆ ಸೇರಿಸುತ್ತಿಲ್ಲ. ಆದ್ದರಿಂದ ಇಂತಹ ವಿದ್ಯಾರ್ಥಿಗಳಿಗೆ ಸರ್ಕಾರದವರು ಉಚಿತವಾಗಿ ಸ್ಲೇಟ್ ಮತ್ತು ಪುಸ್ತಕಗಳನ್ನು ಒದಗಿಸಬೇಕು. ಯಾವ ಮಕ್ಕಳು ಸರಿಯಾಗಿ ಶಾಲೆಗೆ ಬರುತ್ತವೋ ಅಂತಹ ಮಕ್ಕಳಿಗೆ ಉಚಿತವಾಗಿ ಬಟ್ಟೆಯನ್ನು ಕೊಡಬೇಕು. ವಿದ್ಯಾರ್ಥಿವೇತನ ಕೊಡಬೇಕು. ಈಗ ನೀವು 93 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ನಾನಾ ಸ್ಕೀಮುಗಳನ್ನು ಜಾರಿಗೆ ತರುವುದರ ಬದಲು ಹಿಂದುಳಿದವರಿಗೆ ವಿದ್ಯಾಭ್ಯಾಸ ಕೊಡಿಸಲು ಹೆಚ್ಚು ಹಣ ಖರ್ಚುಮಾಡಿ. ಇವತ್ತಿನದಿವಸ ಸಂಘ ಸಂಸ್ಥೆಗಳವರು ಬಾಲವಾಡಿಗಳನ್ನು ನಡೆಸುತ್ತಿದ್ದಾರೆ. ಸಮರ್ಪಕವಾದಂಥ ರೀತಿಯಲ್ಲಿ ನಡೆಸುತ್ತಿದ್ದಾರೆ. ಅದೇ ಸರ್ಕಾರದ ಆಶ್ರಯದಲ್ಲಿ ನಡೆಯುತ್ತಿರುವ ಬಾಲವಾಡಿಗಳು ಇವತ್ತಿನದಿವಸ ಯಾವ ರೀತಿ ನಡೆಯುತ್ತಿವೆ ಎಂಬುದನ್ನು ನೋಡಿದರೆ, ಈ ಬಗ್ಗೆ ಮಾನ್ಯ ಮಂತ್ರಿಗಳಿಗೇ ಸಮಾಧಾನವಾಗಿಲ್ಲವೆಂದು ಹೇಳಬಹುದು. ಕೇಂದ್ರಸರ್ಕಾರದ ಸಹಾಯ ಸಿಗುತ್ತದೆ ಎನ್ನುವ ಒಂದೇ ಕಾರಣದಿಂದ ಏನೋ ಒಂದು ರೀತಿ ನಡೆಸಿಕೊಂಡು ಹೋಗುತ್ತಿದ್ದಾರೆಯೇ ವಿನಾ ಮನಃಪೂರ್ವಕವಾಗಿ ಈ ಜನರ ಉದ್ಧಾರವಾಗಬೇಕು ಎಂಬ ಉದ್ದೇಶದಿಂದ ನಡೆಸುತ್ತಿಲ್ಲ. ಮನಸ್ಸು ಇಲ್ಲದೆ ಅನೇಕ ಯೋಜನೆಗಳನ್ನು ಮಾಡುತ್ತೇವೆ ಎಂದು ಪುಸ್ತಕಗಳನ್ನು ಅಚ್ಚು ಹಾಕಿಸಿ ಹೇಳುವುದಕ್ಕೆ ಬದಲು ಮನಃಪೂರ್ವಕವಾಗಿ ಒಂದೇ ಒಂದು ಯೋಜನೆಯನ್ನು ಜಾರಿಗೆ ತಂದರೆ ಇವರು ಎಷ್ಟೋ ಉದ್ಧಾರವಾಗುತ್ತಾರೆಂದು ಹೇಳಬಹುದು. ಮನಸ್ಸು ಇಲ್ಲದೆ ಯೋಜನೆಗಳನ್ನು ಮಾಡುವಾಗ ದುಡ್ಡು ವ್ಯಯವಾಗುತ್ತದೆಯಲ್ಲದೆ ಯಾವ ರೀತಿಯ ಪ್ರಯೋಜನವೂ ಆಗುವುದಿಲ್ಲ. ಇದೇ ರೀತಿ ಹಿಂದುಳಿದ ಜನಾಂಗಕ್ಕೆ ಮನೆ ಕಟ್ಟಿಸಿ ಕೊಡುವ ಸಲುವಾಗಿ ಮೂರೂವರೆ ಕೋಟಿ ರೂಪಾಯಿಗಳನ್ನು ಸಾಲವಾಗಿ ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್‌ನಿಂದ ಪಡೆಯಲಾಗಿದೆಯೆಂದು ಮಾನ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಹೇಳಿದಾಗ ಅವರನ್ನು ನಾನು ಮೆಚ್ಚಿಕೊಂಡೆ ಮತ್ತು ಅವರ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನು ಸಹ ಹೇಳಿದೆ. ಆದರೆ ಈಗ ಇಷ್ಟು ಹಣದಲ್ಲಿ ಖರ್ಚು ಮಾಡಿರುವುದು ಕೇವಲ 76 ಲಕ್ಷ ರೂಪಾಯಿಗಳು ಮಾತ್ರ. ಈ ರೀತಿಯ ಮಲತಾಯಿ ಧೋರಣೆ ಏತಕ್ಕೆ ಎಂದು ಕೇಳುತ್ತೇನೆ. ಹಿಂದುಳಿದ ಜನಾಂಗವನ್ನು ಮುಂದೆ ತರುವ ಸಲುವಾಗಿ ಅನೇಕ ಸ್ಕೀಮುಗಳನ್ನು ಕೈಕೊಂಡಿದ್ದೇವೆಂದು ಒಂದು ರಿಪೋರ್ಟ್ ತಯಾರು ಮಾಡಿ ನಮಗೆಲ್ಲಾ ಭೂತಕನ್ನಡಿ ಹಾಕಿ ತೋರಿಸಿ ನಮ್ಮನ್ನು ಉಬ್ಬಿಹೋಗುವಂತೆ ಮಾಡುತ್ತೀರಿ. ಇವರ ಬಗ್ಗೆ ನಿಜವಾಗಿಯೂ ನಿಮಗೆ ಕನಿಕರವಿದ್ದರೆ ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್‌ನಿಂದ ಸಾಲವಾಗಿ ತೆಗೆದುಕೊಂಡಿರುವ ಮೂರುವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಿ. ಇವತ್ತಿನದಿವಸ ಅಪೆಕ್ಸ್ ಬ್ಯಾಂಕಿನಿಂದ ಹಿಡಿದು ಪ್ರತಿಯೊಂದು ಸಂಸ್ಥೆಗೂ ಖಾಸಗೀ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಮಾಡಿದ್ದೀರಿ. ಆದರೆ ಹರಿಜನ ಗೃಹನಿರ್ಮಾಣ ಸೊಸೈಟಿಗೆ ಮಾತ್ರ ಡೆವಲಪ್‌ಮೆಂಟ್ ಕಮೀಷನರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಒಂದೊಂದು ಸೊಸೈಟಿಗೆ ಒಂದೊಂದು ಕಾನೂನು ಇಟ್ಟಿದ್ದೀರಿ. ಹಣ ದುರುಪಯೋಗವಾಗಬಹುದೆಂದು ಹರಿಜನ ಗೃಹನಿರ್ಮಾಣ ಸೊಸೈಟಿಗೆ ಖಾಸಗೀ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಮಾಡಿಲ್ಲವೆಂದು ಸರ್ಕಾರದವರು ಕೇಳಬಹುದು. ಹಣ ದುರುಪಯೋಗವಾದರೂ ಸಹ ಒಂದು ಪರ್‌ಸೆಂಟ್ ಆಗಬಹುದು, ಆದರೆ ಆಗಲಿ, ಈ ಕೆಲಸದಲ್ಲಿ ಆಸಕ್ತಿಯಿರುವಂಥವರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಮಂಜೂರು ಮಾಡಿದಂಥ ಕೆಲಸ ಆಗಿಯೇ ತೀರುತ್ತದೆ. ತಾಲ್ಲೂಕ್ ಬೋರ್ಡ್ ಸದಸ್ಯರನ್ನು ಬೇಕಾದರೆ ಈ ಸೊಸೈಟಿಗೆ ಅಧ್ಯಕ್ಷರನ್ನಾಗಿ ಮಾಡಬಹುದು. ಆದರೆ ಸರ್ಕಾರದ ಅಧಿಕಾರಿಗಳೇ ಅಧ್ಯಕ್ಷರಾಗಿದ್ದರೆ ಯಾವ ಕೆಲಸವೂ ಪೂರ್ತಿಯಾಗಿ ಆಗುವುದಿಲ್ಲ.

ಇನ್ನು ಒಂದು ಮುಖ್ಯವಾದಂಥ ವಿಷಯವೇನೆಂದರೆ, ಹಿಂದುಳಿದ ವರ್ಗದವರಿಗೆ ಸರ್ಕಾರೀ ಹುದ್ದೆಗಳನ್ನು ಮೀಸಲಾಗಿಡಬೇಕು ಎಂಬತಕ್ಕಂಥದ್ದು 1936ನೇ ಇಸವಿಯಲ್ಲಿಯೇ ಕೇಂದ್ರಸರ್ಕಾರದವರು ಒಂದು ಆರ್ಡರ್ ಹೊರಡಿಸಿ ಜಾರಿಗೆ ತಂದಿದ್ದಾರೆ. ಹಿಂದುಳಿದ ವರ್ಗದವರಲ್ಲಿ ಯಾರು ವಿದ್ಯಾವಂತರು ಇದ್ದಾರೆ, ಯಾರು ಯೋಗ್ಯರಾದವರು ಇದ್ದಾರೆ ಅಂತಹವರಿಗೆ ಇಷ್ಟು ಪರ್‌ಸೆಂಟ್ ಸರ್ಕಾರಿ ಕೆಲಸವನ್ನು ಕೊಡಬೇಕೆಂದು 1936ನೇ ಇಸವಿಯಲ್ಲಿ ಆರ್ಡರ್ ಆಗಿದೆಯೇ ಹೊರತು ಸ್ವಾತಂತ್ರ್ಯ ಬಂದಮೇಲೆ ಈ ಸ್ಕೀಮು ಜಾರಿಗೆ ಬಂದಿದ್ದು ಅಲ್ಲ. 1936 ರಿಂದ ಇದುವರೆಗೆ ದೊಡ್ಡ ದೊಡ್ಡ ಹುದ್ದೆಗಳಿಗೆ ಎಷ್ಟು ಜನರನ್ನು ತೆಗೆದುಕೊಂಡಿದ್ದೀರಿ ಎಂಬ ಲೆಕ್ಕವನ್ನು ಕೇಳುತ್ತೀರಾ? ಈ ರೀತಿ ಪ್ರಶ್ನೆ ಕೇಳಿದಾಗಲೆಲ್ಲಾ ಸರ್ಕಾರದವರು ದೊಡ್ಡ ದೊಡ್ಡ ಹುದ್ದೆಗಳಿಗೆ ಅರ್ಹರಾದವರು ಹಿಂದುಳಿದ ಜನಾಂಗದಲ್ಲಿ ಸಿಗುತ್ತಿದ್ದರೂ ಸಹ ಸಿಗುತ್ತಿಲ್ಲವೆಂದು ಹೇಳಿಬಿಡುತ್ತಾರೆ. ಐ.ಎ.ಎಸ್., ಐ.ಪಿ.ಎಸ್., ಪ್ರೊಫೆಸರ್‌ಗಳು ಇಂತಹ ದೊಡ್ಡ ದೊಡ್ಡ ಹುದ್ದೆಗಳು ಬೇಡ, ನಾಲ್ಕನೆ

ದರ್ಜೆಯ ಹುದ್ದೆಗಳನ್ನು ಈ ವರ್ಗದವರಿಗೆ ಇದುವರೆಗೆ ಎಷ್ಟು ಪರ್‌ಸೆಂಟ್ ಕೊಟ್ಟಿದ್ದೀರೀ ಎಂದು ಕೇಳುತ್ತೇನೆ. ಎಷ್ಟು ಪರ್‌ಸೆಂಟ್ ಇವರಿಗೆ ಕೊಡಬೇಕೆಂದು ಸರ್ಕಾರದ ನಿಯಮವಿದೆಯೋ ಅದರಂತೆ ಇಲಾಖಾ ಅಧಿಕಾರಿಗಳು ಕೊಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಪಿ.ಡಬ್ಲ್ಯು.ಡಿ. ಚೀಫ್ ಇಂಜನಿಯಾರ್ (ಜನರಲ್) ಅವರಲ್ಲಿಗೆ ನಾಲ್ಕನೆ ದರ್ಜೆಯ ಒಂದು ಹುದ್ದೆಗಾಗಿ ಹಿಂದುಳಿದ ಒಬ್ಬರ ಅರ್ಜಿಯನ್ನು ತೆಗೆದುಕೊಂಡು ಹೋದಾಗ ಅವರು ತಮ್ಮ ನಿಸ್ಸಹಾಯಕತೆಯನ್ನು ತೋರಿಸಿದರು. ಈ ಇಲಾಖೆಯಲ್ಲಿ 4–5 ಜನ ಚೀಫ್ ಇಂಜನಿಯರುಗಳಿರುವುದರಿಂದ ಮತ್ತೊಬ್ಬರಲ್ಲಿಗೆ ಹೋದೆ, ಅವರಿಗೆ ಕಣ್ಣಿನ ಜಾಗದಲ್ಲಿ ಕಣ್ಣು ಇಲ್ಲದೆ ನೆತ್ತಿಯಮೇಲೆ ಕಣ್ಣಿದೆಯೆಂದು ತಿಳಿಯಿತು. ನಂತರ ಇನ್ನೊಬ್ಬರಲ್ಲಿ ಹೋದಾಗ ಅವರು ತಲೆಯಲ್ಲೇ ನಡೆಯುತ್ತಾರೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹಿಂದುಳಿದ ಜನಾಂಗದವರಿಗೆ ಪ್ರತಿಯೊಂದು ಇಲಾಖೆಯಲ್ಲೂ ಎಷ್ಟು ಪರ್‌ಸೆಂಟ್ ಕೆಲಸ ಕೊಟ್ಟಿದ್ದಾರೆ ಎಂಬ ಬಗ್ಗೆ ಒಂದು ಸೆಲ್ ಮಾಡಿದ್ದೇವೆ, ಅದಕ್ಕೆ ಒಬ್ಬ ಆಫೀಸರನ್ನು ನೇಮಕ ಮಾಡಿದ್ದೇವೆ, ಅವರು ಪ್ರತಿಯೊಂದು ಆಫೀಸಿಗೂ ಹೋಗಿ ಲೆಕ್ಕ ತೆಗೆದುಕೊಂಡು ಬರುತ್ತಾರೆಂದು ಹೇಳಬಹುದು. ಆದರಿಂದ ನಮಗೆ ತೃಪ್ತಿಯಾಗುವುದಿಲ್ಲ. ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಆಫೀಸರ್‌ಗೆ ಸಂಪೂರ್ಣವಾದ ಅಧಿಕಾರವನ್ನು ಸರ್ಕಾರದವರು ಕೊಡಬೇಕು. ಇದರಲ್ಲಿ ಸರ್ಕಾರದವರು ಕೈಹಾಕಬಾರದು. ನಂತರ ಯಾವ ಯಾವ ಯೂನಿಟ್ ಆಫೀಸರ್‌ಗಳು ತಮಗೆ ಕೊಟ್ಟಿರುವ ಅಧಿಕಾರದಲ್ಲಿ ತಪ್ಪು ಮಾಡಿದ್ದಾರೆ ಅಂಥವರನ್ನು ಹಿಡಿದು ಬಲಿ ಹಾಕಬೇಕು. ಹೀಗಾದರೆ ನಿಮ್ಮ ರೀತಿ ನೀತಿ ಏನು, ನಿಮ್ಮ ತತ್ವ ಏನು? ಇವುಗಳನ್ನೆಲ್ಲಾ ಜಾರಿಗೆ ತರುವುದಕ್ಕೆ ಆಗುತ್ತದೆಯೇ? ಇಲ್ಲ, ಸಾಧ್ಯವಾಗುತ್ತಾ ಇಲ್ಲ. ನಿಮ್ಮ ಅಧಿಕಾರಿಗಳ ಚೆಲ್ಲಾಟವಾಗಿದೆ. ಇದರಿಂದ ತೊಂದರೆ ಯಾರಿಗೆ? ಯಾರು ಅನುಕೂಲಸ್ಥರಿದ್ದಾರೋ, ಅವರು ಅನುಕೂಲಸ್ಥರಾಗುತ್ತಾ ಹೋಗುತ್ತಾರೆ, ಯಾರು ಬಡವರಿದ್ದಾರೋ, ಅವರು ಇನ್ನೂ ಬಡವರಾಗಿಯೇ ಇದ್ದಾರೆ. ಈ ಒಂದು ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿದು, ನಾಲ್ಕನೆಯದಕ್ಕೆ ಬರುತ್ತಿದ್ದೇವೆ. ಆದರೂ ಇದು ಸಾಧ್ಯವಾಗಿದೆಯೇ? ಪಂಚವಾರ್ಷಿಕ ಯೋಜನೆಗಳಿಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದೀರಿ, ಅವುಗಳಲ್ಲಿ ಈ ನತದೃಷ್ಟರಿಗೆ ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ? ಎಷ್ಟು ಜನರಿಗೆ ಅವು ತಲಪಿವೆ? ಒಬ್ಬ ಕಮಿಷನರು ಹೇಳಿದ್ದಾರೆ—ಸಾಮಾನ್ಯ ಜನರ ಪ್ರಗತಿಯಾಗಬೇಕಾದರೆ, ಮೀಸಲಾಗಿ ಹಣ ಇಡಬೇಕು. ಪಂಚವಾರ್ಷಿಕ ಯೋಜನೆಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ, ತತ್ಪರಿಣಾಮವಾಗಿ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ, ಆ ಅನುಕೂಲದ ದೆಸೆಯಿಂದ ಹರಿಜನರು ಕೂಡ ಮುಂದೆ ಬರಬಹುದು ಎಂದು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಎಷ್ಟು ಜನರಿಗೆ ಇದರ ಅನುಕೂಲವಾಗಿದೆ. ಎಷ್ಟು ಜನರಿಗೆ ಪಂಪ್ ಸೆಟ್ಟು ಕೊಟ್ಟಿದ್ದೀರಿ? ಎಷ್ಟು ಜನರಿಗೆ ಜಮೀನು ಮಂಜೂರು ಮಾಡಿದ್ದೀರಿ? ಇದಕ್ಕೆ ಕಾರಣವೇನೆಂದರೆ, ನಿಮಗೆ ಮನಸ್ಸು ಇಲ್ಲದ ಮನಸ್ಸೇ ನಿಮ್ಮದಲ್ಲದೆ ನಮ್ಮದೂ ತಪ್ಪು ಇದೆ. ನಮ್ಮ ತಪ್ಪು ಏನೆಂದರೆ, ನಾವು ಪ್ರತಿನಿಧಿಗಳಾಗಿ ಇಲ್ಲಿ ಬಂದು, ಸ್ವಾರ್ಥಗಳಿಸುವುದಕ್ಕೋಸ್ಕರ, ಯಾವ ಕಾರಣಕ್ಕೋಸ್ಕರ ಬಂದಿದ್ದೇವೆಯೋ, ಅದನ್ನು ಮರೆತು ಬಿಡುತ್ತೇವೆ. ಇದರಿಂದ ಬಡವರು ಬಡವರಾಗಿಯೇ ಇದ್ದಾರೆ. ಅದರಲ್ಲೂ ಕೆಳಮಟ್ಟದ ಜನರಾದ ಭಂಗಿಗಳು ಸ್ವೀಪರ್ಸ್‌ಗಳನ್ನು ತೆಗೆದುಕೊಳ್ಳಿ.

3–00 P.M.

ಇವತ್ತಿನ ದಿವಸ ಸಮಾಜ ಕಲ್ಯಾಣ ಎಂದು ಯಾರ ಕಲ್ಯಾಣಕ್ಕೋಸ್ಕರ ಖರ್ಚು ಮಾಡುತ್ತಿದ್ದೀರಿ? ಮೊದಲು ಹಿಂದುಳಿದವರಿಗೆ, ಅವರ ಮಕ್ಕಳಿಗೋಸ್ಕರ ಖರ್ಚು ಮಾಡಿ. ನೀವು ಹೇಳಬಹುದು ಮಿಸ್‌ಯೂಸ್ ಆಗಿದೆ ಎಂದು. ಆದರೆ ಒಂದು ಕಡೆ ಮಿಸ್‌ಯೂಸ್ ಆಗಿರಬಹುದು. ಒಂದು ಕಡೆ, ಸೋಶಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ವಿಮೆನ್ ವೆಲ್‌ಫೇರ್ ಆಫೀಸ್ ಎಂದು ಬೋರ್ಡು ನೋಡಿದೆ. ಇದು ಯಾರ ಕಲ್ಯಾಣಕ್ಕೋಸ್ಕರ? ಹಿಂದೆ 18 ಇಲಾಖೆಗಳಿತ್ತು. ಇದು ಈಗ 118 ಆಗಿದೆ. ಮಾನ್ಯ ಸಿದ್ದವೀರಪ್ಪನವರು ಕೇಳಿದ ಒಂದು ಪ್ರಶ್ನೆಗೆ ಒಂದು ಆಸ್ತಿಗಳ ಪಟ್ಟಿಯನ್ನು ಮಾನ್ಯ ಆರ್ಥಿಕ ಮಂತ್ರಿಯವರು ಕೊಟ್ಟಿದ್ದಾರೆ. ನಾನಾದರೂ ಕೇಳುತ್ತೇನೆ, 56ನೇ ಇಸವಿಯಿಂದ ಇವರ ಆಸ್ತಿಪಾಸ್ತಿಗಳು ಎಷ್ಟು ಇವೆ ಎಂಬುದನ್ನು ಕಂಡುಹಿಡಿಯಬೇಕು. ಇವತ್ತು ಹೆಂಡವನ್ನು ಜಾರಿಗೆ ತಂದಿದ್ದಾರೆ. ಇದರಿಂದ ಕೇಂದ್ರದಿಂದ ಬರುವ ಗ್ರ್ಯಾಂಟ್ ನಿಂತು ಹೋಗಬಹುದು, ಅದನ್ನು ಹೆಂಡ ಜಾರಿಗೆ ತಂದಿರುವುದರಿಂದ ನಿಲ್ಲಿಸುತ್ತೇವೆಂದು ಹೇಳುತ್ತಾರೆ. ಇವತ್ತು ಇಲ್ಲಿ ಅರ್ಥ ಮಂತ್ರಿಯವರು ಇಲ್ಲ, ಇಲ್ಲದಿದ್ದರೆ ಎಲ್ಲವನ್ನೂ ಹೇಳಬೇಕೆಂದಿದ್ದೆ. ನಿಮಗೆ ಕೇಂದ್ರ ಸರ್ಕಾರದಿಂದ ಗ್ರಾಂಟ್ ಎಷ್ಟು ಕೇಳಬೇಕು, ಎಷ್ಟು ಖರ್ಚುಮಾಡಬೇಕು, ಇದು ಎಲ್ಲವೂ ಒಂದು ನಿಮಗೆ ಗೊಂದಲ

(ಶ್ರೀ ಜಿ. ದುಗ್ಗಪ್ಪ)

ಆಗಿದೆ. ಇವತ್ತು ಅಭಿವೃದ್ಧಿ ಇಲಾಖೆಯಲ್ಲಿ ಒಂದು ಆಫೀಸರುಗಳ ಸೈನ್ಯವೇ ಇದೆ. ಅವರಲ್ಲಿ ಕೆಲವರನ್ನು ಮನೆಗೆ ಕಳಿಸಬೇಕೆಂದಿದ್ದಾರೆ. ಆದರೆ ಅದನ್ನು ಹೇಗೆ ಮಾಡುತ್ತಾರೆ ಇವರು? ಇದಕ್ಕೆಲ್ಲಾ ಒಂದು Financial Enquiry Comission ಮಾಡಬೇಕು. ನಮ್ಮ ದೇಶದ ಆದಾಯವೇನು, ಯಾವುದು ಅನ್ಯಾಯವಾಗಿ ಖರ್ಚಾಗುತ್ತದೆ ಎಂದು ನೋಡಬೇಕು. ಹಿಂದೆ ಹನುಮಂತಯ್ಯನವರು ಇದ್ದಾಗ, ಇಂಥ ಒಂದು ಸಲಹೆಯನ್ನು ಅಂಗೀಕಾರ ಮಾಡಿದ್ದಾರೆ. ಅವರು ಹೇಳುತ್ತಿದ್ದರು, ಕೇಂದ್ರದಿಂದ ಗ್ರಾಂಟನ್ನು ರಾಜ್ಯಸರ್ಕಾರದವರು ತೆಗೆದುಕೊಂಡು ಬರುವುದಕ್ಕೆ ಪ್ರತಿ ವರ್ಷ ಸಾಲಾಗಿ ನಿಂತುಕೊಳ್ಳಬೇಕು, ಮತ್ತು ಅದು ಒಂದು ಜಟಿಲವಾದ ಪ್ರಶ್ನೆ ಎಂದು ಹೇಳಿದ್ದಾರೆ. ಅದಕ್ಕಾಗಿ ನೀವು ಒಂದು ಫಿನಾನ್ಸ್ ಇನ್‌ಕ್ವಾಯರಿ ಕಮಿಟಿ ಮಾಡಿ, ನಿಮ್ಮ ಪರಿಸ್ಥಿತಿ ಏನು, ನಿಮ್ಮ ಆದಾಯವೇನು, ಖರ್ಚು ಏನು ಎಂಬುದನ್ನೆಲ್ಲಾ ಕೂಲಂಕುಷವಾಗಿ ಕಂಡುಹಿಡಿಯಬೇಕು. ಇವತ್ತು ಸೇಂಧಿ ಜಾರಿಗೆ ತಂದಿದ್ದಾರೆ, ಯಾರಿಗೋಸ್ಕರ ತಂದಿದ್ದಾರೆ? ಇದರಿಂದ ನಾವು 20 ವರ್ಷ ಹಿಂದೆ ಹೋದಹಾಗೆ ಆಯಿತು. ಇವತ್ತು ಮನೆಯಲ್ಲಿ ಒಂದು ಒಳ್ಳೆಯ ತಿಂಡಿಯನ್ನು ಎಲ್ಲರೂ ಒಟ್ಟಿಗೆ ತಿನ್ನುವುದು ವಾಡಿಕೆ. ಆದರೆ, ಇಂದು ಮನೆಯ ಯಜಮಾನ ಹೆಂಡ ಕುಡಿದು, ಚೆನ್ನಾಗಿದೆ, ಎಂದು ಮಗುವಿಗೂ ಕೊಡುತ್ತಾನೆ, ನಂತರ, ತನ್ನ ಹೆಂಡತಿಗೂ ಕುಡಿಸುತ್ತಾನೆ. ಇದರಿಂದ ಎಲ್ಲರೂ ಕುಡಿಯುವ ಒಂದು ಸಂದರ್ಭ ಬರುತ್ತದೆ. ಇದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ನಿಮಗೆ ತೊಂದರೆ ಇದೆ, ಅದನ್ನು ಕೇಂದ್ರ ಸರ್ಕಾರಕ್ಕೆ, ಈ ರೀತಿಯ ಒಂದು ಕಮಿಶನ್ ಮಾಡಿ ತಿಳಿಸಬೇಕು. ಇವತ್ತು ಅಭಿವೃದ್ಧಿ ಇಲಾಖೆ ಎಂದು ಹೇಳಿ ಎಷ್ಟೆಷ್ಟು ಖರ್ಚು ಮಾಡಬೇಕೆಂದು ಇಲ್ಲ. ಪ್ರಾರಂಭವಾಗಿದೆ, ನಡೆದುಕೊಂಡು ಹೋಗುತ್ತಿದೆ. ನಿಲ್ಲಿಸುವುದಕ್ಕೆ ಇವರಿಗೆ ಆಗುವುದಿಲ್ಲ. ಹಾಸ್ಟೆಲನ್ನು 40 ಹುಡುಗರಿಗೆ ಪ್ರಾರಂಭ ಮಾಡಿ, ಮುಂದೆ 100 ಹುಡುಗರಿಗೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಪ್ರಗತಿ ಗೊತ್ತಿಲ್ಲ, ಏನೂ ಇಲ್ಲ. ಈ ರೀತಿ ಒಂದು ಅಸಹಾಯಕ ಪರಿಸ್ಥಿತಿಗೆ ತಂದುಬಿಟ್ಟಿದ್ದಾರೆ. ಇದಕ್ಕೆ ನಿವಾರಣೆಯೆಂದರೆ, ಆ ಒಂದು ಫೈನಾನ್ಸಿಯಲ್ ಇನ್‌ಕ್ವಾಯರಿ ಕಮಿಟಿ ಮಾಡಿ ಅನಗತ್ಯವಾದ ಖರ್ಚುಗಳನ್ನು ತಡೆಗಟ್ಟಿ, ನಿಜವಾಗಿ ಅಭಿವೃದ್ಧಿಯಾಗಬೇಕಾದ, ವಿದ್ಯಾಭ್ಯಾಸ ಮುಂತಾದ ಬಾಬುಗಳಿಗೆ ಖರ್ಚು ಮಾಡಬೇಕು. ಇದಕ್ಕೆ ನಮ್ಮ ಪ್ರತಿನಿಧಿಗಳು ಒಂದು ಹೋರಾಟವನ್ನು ಮಾಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ಮುನಿಸ್ವಾಮಯ್ಯ (ಆನೇಕಲ್).—ಸನ್ಮಾನ್ಯ ಅಧ್ಯಕ್ಷಣಿಯವರೇ, ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯವರು ಮಂಡಿಸಿರತಕ್ಕ 27ನೇ ಡಿಮ್ಯಾಂಡನ್ನು ಸ್ವಾಗತಿಸುತ್ತೇನೆ; ಮತ್ತು ಅವರು ಕೇಳಿರತಕ್ಕಂತಹ ಮೂರು ಕೋಟಿ ಚಿಲ್ಲರೆ ರೂಪಾಯಿಯನ್ನು ಕೊಡಬೇಕೆಂದು ಒತ್ತಾಯದಿಂದ ಹೇಳುತ್ತೇನೆ. ಇಷ್ಟೇ ಅಲ್ಲದೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕಾಗಿತ್ತು ಎನ್ನತಕ್ಕದ್ದನ್ನು ನಾನು ಸಭೆಯಲ್ಲಿ ಹೇಳುತ್ತೇನೆ. ಕೆಲವರು ಇದನ್ನು ವಿರೋಧಿಸುತ್ತಾ, ಇದು ಸರಿಯೇ, ಇಷ್ಟೊಂದು ಹಣವನ್ನು ಒದಗಿಸುವುದು ತಪ್ಪು ಎಂದು ಹೇಳಿದರು. ಆದರೆ, ನಮಗೆ ಪ್ರಗತಿ ಬೇಕಾದರೆ, ಸುಧಾರಣೆಯಾಗಬೇಕಾದರೆ, ಹಣ ಬೇಕೇ ಬೇಕು. ಇದನ್ನು ಅವರು ಮರೆತಿರುವ ಹಾಗೆ ಇದೆ. ಆದರೆ ಆಡಳಿತದಲ್ಲಿ ನ್ಯೂನತೆಗಳು ಕೆಲವು ಇರಬಹುದು, ಕೊರತೆಗಳು ಇರಬಹುದು, ಮತ್ತು ಅದನ್ನು ಸರಿಪಡಿಸುವುದಕ್ಕೆ, ಸಲಹೆಗಳನ್ನು ಕೊಡಬೇಕೇ ಹೊರತು ಕೊಡತಕ್ಕ ಹಣವನ್ನು ಕಡಿಮೆ ಮಾಡಿ, ಕೆಲಸವನ್ನು ಹೆಚ್ಚು ಮಾಡಿ, ಪ್ರಗತಿಯನ್ನು ಮಾಡಿ ಎಂದು ಹೇಳಿದರೆ ಅದು ಹೇಗೆ ಸಾಧ್ಯವಾಗುತ್ತದೆ? ಇದನ್ನು ಅವರು ತಮ್ಮಲ್ಲೇ ಪ್ರಶ್ನೆ ಮಾಡಿಕೊಳ್ಳುವುದು ಒಳ್ಳೆಯದು ಎಂದು ನಾನು ಹೇಳಬೇಕಾಗಿದೆ.

ಪ್ರಥಮವಾಗಿ ಈ ಬೇಡಿಕೆಯಲ್ಲಿ ಹರಿಜನರ ಪರವಾಗಿ ಕೆಲವು ವಿಷಯಗಳನ್ನು ಇಲ್ಲಿ ಮಾತನಾಡಬೇಕು ಎಂದು ಇದ್ದೇನೆ. ಸರಕಾರದವರು ಇಲ್ಲಿ ಕೇಳಿರತಕ್ಕ ಸುಮಾರು ಮೂರು ಕೋಟಿ ರೂಪಾಯಿಗಳಲ್ಲಿ ಹೆಚ್ಚು ಕಡಿಮೆ ಒಂದು ಕೋಟಿಯಷ್ಟು ಹಣವನ್ನು ಹರಿಜನರ ಪ್ರಗತಿಗಾಗಿ ಒದಗಿಸಿಕೊಂಡಿದ್ದಾರೆ ಎನ್ನುವುದು ನಮಗೆ ಕೊಟ್ಟಿರುವ ವಿವರಗಳಿಂದ ಗೊತ್ತಾಗುತ್ತದೆ. ಸರಕಾರ ಹರಿಜನರ ಪ್ರಗತಿಗಾಗಿ ಹಿಂದೆ ಸಾಧಿಸಿರತಕ್ಕ ಪ್ರಗತಿಯ ಬಗ್ಗೆ ಮತ್ತು ಈಗ ಇಲ್ಲಿಯವರೆಗೆ ಸಾಧಿಸಿರುವುದರ ಬಗೆಗೆ ಆಗಾಗ್ಗೆ ಬುಲೆಟಿನ್‌ಗಳನ್ನು ಪ್ರಕಟಮಾಡುತ್ತಾರೆ. ಈ ಬುಲಟಿನ್‌ಗಳಲ್ಲಿ ಎಲ್ಲ ವಿಚಾರಗಳನ್ನೂ ಸಂಗ್ರಹಿಸಿ ಪ್ರಕಟಿಸುತ್ತಿದ್ದಾರೆ. ನಮಗೆ ಕೊಟ್ಟಿರುವ ವಾಲ್ಯೂಂ ಒಂದು ಜುಲೈ 1966ರಲ್ಲಿ ಪ್ರಕಟವಾಗಿರುವುದು ಒಂದು ಬಂದಿದೆ. ಇದಾದಮೇಲೆ ವಾಲ್ಯೂಂ ಒಂದು ಎಂದು ಅಕ್ಟೋಬರ್ 1966ರಲ್ಲಿ ಒಂದು ಪ್ರಕಟವಾಗಿದೆ. ಇದಾದ ನಂತರ ಈಗ 1968ರಲ್ಲಿ ಪ್ರಕಟಮಾಡಿರುವ ಬುಲೆಟಿನ್ನನ್ನೂ ನಮಗೆ ಒದಗಿಸಿ ಕೊಟ್ಟಿದ್ದಾರೆ. ಇದು ಬ್ಯಾಕ್‌ವರ್ಡ್ ಕ್ಲಾಸಸ್ ಜನಗಳಿಗಾಗಿ ಮತ್ತು,

ಅವರ ಅಭಿವೃದ್ಧಿಗಾಗಿ ಪ್ರಕಟವಾಗಿರುವ ಒಂದು ಇಂಗ್ಲಿಷ್ ವರದಿಯನ್ನೂ ನಮಗೆ ಒದಗಿಸಿ ಕೊಟ್ಟಿದ್ದಾರೆ. ಇದನ್ನು ನಾವೆಲ್ಲ ಸ್ವಲ್ಪ ಎಚ್ಚರಿಕೆಯಿಂದ ಓದಿದರೆ ಹಿಂದೆ ಒಂದಷ್ಟು ಕೆಲಸಗಳು ಆಗಿರುವುದು ಹಾಗೂ ಮುಂದೆ ಮಾಡತಕ್ಕ ಕೆಲಸಗಳು ಏನು ಎನ್ನುವುದು ಇದರಿಂದ ಗೊತ್ತಾಗುತ್ತದೆ. ಆದರೆ ಇದಕ್ಕಾಗಿ ಹಣವನ್ನು ಖರ್ಚುಮಾಡಬೇಕೆಂದು ಒದಗಿಸಿದ್ದರೂ ಇದರಿಂದ ನಿರೀಕ್ಷಿಸಿದಷ್ಟು ಫಲಗಳು ಬರಲಿಲ್ಲ ಮತ್ತು ಅಷ್ಟು ಪರಿಣಾಮಕಾರಿಯೂ ಆಗಲಿಲ್ಲ ಎಂದು ವಿಷಾದದಿಂದ ಇಲ್ಲಿ ಹೇಳಬೇಕಾಗಿದೆ. ಇದಕ್ಕೆ ಕಾರಣ, ನಮ್ಮ ಸ್ನೇಹಿತರು ಈಗಾಗಲೇ ಹೇಳಿದ ಹಾಗೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು ಇಪ್ಪತ್ತು ವರ್ಷಗಳು ಆದರೂ ಈ ಇಪ್ಪತ್ತು ವರ್ಷಗಳಲ್ಲಿ ಹರಿಜನರ ಪ್ರಗತಿ ಏನೂ ಅಷ್ಟು ಸಾಧನೆಯಾಗಲಿಲ್ಲ ಮತ್ತು ಅಸ್ಪೃಶ್ಯತೆ ಕೂಡ ನಿವಾರಣೆಯಾಗಲಿಲ್ಲ. ಆದರೆ ಮೊದಲು ಅಸ್ಪೃಶ್ಯತೆ ಯಾವ ರೀತಿ ಇತ್ತೋ ಇಂದು ಅಷ್ಟು ಇಲ್ಲ. ಆದರೆ ಯಾವುದೋ ಕಾಲದಿಂದ ಬಂದಿರುವ ಈ ಅಸ್ಪೃಶ್ಯತೆಯನ್ನು ತೊಡೆದುಹಾಕಬೇಕು ಎಂದು ಪ್ರಯತ್ನಪಟ್ಟು ಮಾಡುತ್ತಿದ್ದಾರೆ. ಆದರೆ ಇದಕ್ಕೆಲ್ಲಾ ಒಂದು ಅಭ್ಯಾಸಬಲ ಕಾರಣವಾಗಿದೆ. ಮೊದಲಿನಿಂದ ಬಂದಿರುವ ಈ ಪದ್ಧತಿಯನ್ನು ಮತ್ತು ಸಮಾಜದಲ್ಲಿನ ಈ ಒಂದು ಅಸ್ಪೃಶ್ಯತೆಯ ದೊಡ್ಡ ಭೂತವನ್ನು ಒಮ್ಮೆಲೇ ತೊಡೆದು ಹಾಕಲು ಆಗುತ್ತಿಲ್ಲ. ಆದರೆ ಹಿಂದೆ ಇದ್ದಷ್ಟು ಇಂದು ಅಸ್ಪೃಶ್ಯತೆ ಇಲ್ಲ, ಅದು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಸಾಧ್ಯವಾದಷ್ಟು ಮಟ್ಟಿಗೆ ಅಸ್ಪೃಶ್ಯತೆಯನ್ನು ತೊಡೆದುಹಾಕುವ ಕೆಲಸಗಳು ಅಲ್ಲಲ್ಲಿ ಆಗುತ್ತಿರುವುದನ್ನು ನೋಡಿ ನನಗೂ ಕೂಡ ಸಂತೋಷವಾಗಿದೆ. ಸುಮಾರು ಮೂವತ್ತು ಅಥವಾ ನಲವತ್ತು ವರ್ಷಗಳ ಹಿಂದೆ ಹರಿಜನರ ಹುಡುಗರನ್ನು ಪಾಠಶಾಲೆಗಳಿಗೆ ಸೇರಿಸುತ್ತಿರಲಿಲ್ಲ. ಅವರೆಲ್ಲಾ ಕಿಟಕಿಯ ಹತ್ತಿರ ಕುಳಿತುಕೊಂಡು ಕಲಿಯುತ್ತಿದ್ದರು. ಅನೇಕ ಊರುಗಳಲ್ಲಿ ಹರಿಜನರು ದಾರಿಯ ಮಧ್ಯದಲ್ಲಿ ಹೋಗುವುದಕ್ಕೆ ಅವಕಾಶ ಇರಲಿಲ್ಲ. ಇದರಿಂದ ಅವರಿಗೆಲ್ಲ ಒಂದು ರೀತಿಯಾದ ಅಡ್ಡಿಗಳಾಗುತ್ತಿತ್ತು. ಮತ್ತು ಪಾಠಶಾಲೆಗಳಿಗೆ ಹರಿಜನರ ಹುಡುಗರು ಬಂದು ಓದಲು ಅವಕಾಶ ಇರುತ್ತಿರಲಿಲ್ಲ. ಈಗ ಅಂತಹ ಕಷ್ಟಗಳು ಇಲ್ಲ. ಎಲ್ಲ ಹರಿಜನರನ್ನೂ ಪಾಠಶಾಲೆಗೆ ಸೇರಿಸಿಕೊಳ್ಳುತ್ತಾರೆ ಮತ್ತು ಓದಲು ಅವಕಾಶ ಮಾಡಿಕೊಡುತ್ತಿದ್ದಾರೆ ಮತ್ತು ದೊಡ್ಡ ದೊಡ್ಡ ದೇವಸ್ಥಾನಗಳಿಗೆ ಕೂಡ ಹರಿಜನರು ಹೋಗಲು ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಬಹುಮಟ್ಟಿಗೆ ಇಂದು ಸಮಾಜದಲ್ಲಿ ಒಂದು ರೀತಿಯ ಸಾಧಾರಣೆಯಾಗಿ ಹರಿಜನರಿಗೆ ಅವಕಾಶಗಳನ್ನು ಮಾಡಿಕೊಟ್ಟಿದ್ದಾರೆ. ಈಗ ಎಷ್ಟೋ ಕಡೆಗಳಲ್ಲಿ ನಾನು ನೋಡಿರುವಂತೆ ಮಂತ್ರಿಗಳ ಮನೆಗಳಿಗೆ ಹಾಗೂ ಕೆಲವು ಸದಸ್ಯರುಗಳ ಮನೆಗಳಲ್ಲಿ ಹರಿಜನರು ಹೋಗಿ ಬರಲು ಅವಕಾಶಗಳನ್ನು ಕಲ್ಪಿಸಿಕೊಡುತ್ತಿದ್ದಾರೆ. ಇಲ್ಲಿ ಅಷ್ಟೇನೂ ಅಸ್ಪೃಶ್ಯತೆ ಇಲ್ಲ ಎಂದೇ ಹೇಳಬಹುದು. ಆದರೂ ಸಮಾಜದಲ್ಲಿ ಇನ್ನೂ ಕೆಲವು ಕಡೆಗಳಲ್ಲ ಸ್ವಲ್ಪಮಟ್ಟಿಗೆ ಇದೆ. ಹರಿಜನರು ಕೆಲವು ಕಡೆ ಹಳ್ಳಿಗಳಲ್ಲಿ ಸವರ್ಣದ ಜನಗಳು ತಮ್ಮ ಬಾವಿಯಲ್ಲಿ ನೀರನ್ನು ತೆಗೆದುಕೊಳ್ಳುವುದಕ್ಕೆ ಹರಿಜನರಿಗೆ ಅವಕಾಶಗಳನ್ನು ಮಾಡಿಕೊಡುತ್ತಿಲ್ಲ. ಇದರಿಂದ ಕೆಲವು ಕಡೆಗಳಲ್ಲಿ ಹರಿಜನರು ಬಹಳ ಕಷ್ಟಕ್ಕೆ ಸಿಕ್ಕಿ ಇಲ್ಲದ ತೊಂದರೆಗಳನ್ನೂ ಅನುಭವಿಸಿದ್ದಾರೆ. ಇಂತಹ ಉದಾಹರಣೆಗಳು ಎಷ್ಟೋ ಇವೆ. ಕೆಲವು ಊರುಗಳಲ್ಲಿ ಇಂತಹ ಜಗಳಕ್ಕೆ ಅವಕಾಶ ಕೊಡಬಾರದು ಎಂದು ಹರಿಜನರಿಗಾಗಿಯೇ ಪ್ರತ್ಯೇಕವಾದ ಬಾವಿಗಳನ್ನು ಮಾಡಿಸಿಕೊಟ್ಟಿದ್ದಾರೆ. ಕೆಲವು ಕಡೆಗಳಲ್ಲಿ ಹರಿಜನರು ಬೇರೆ ಜನ ನೀರು ತೆಗೆಯುವ ಬಾವಿಗಳಿಂದ ನೀರು ತೆಗೆಯುವಾಗ ಅವರಮೇಲೆ ಕೇಸುಗಳಾಗಿವೆ ಮತ್ತು ಕೆಲವು ಕಡೆ ಅಲ್ಲಿನ ಜನರೇ ಒಂದು ರೀತಿಯ ಸಮಾಧಾನ ಮಾಡುವ ಸಲುವಾಗಿ ಹರಿಜನರಿಗಾಗಿ ಪ್ರತ್ಯೇಕವಾದ ಬಾವಿಗಳನ್ನೇ ತೆಗೆಸಿಕೊಟ್ಟಿದ್ದಾರೆ. ಇದರಿಂದ ಒಂದು ರೀತಿಯಾದ ಶಾಂತಿ ಊರಿನಲ್ಲಿ ಇರಲಿ ಎಂದು ಈ ರೀತಿ ಮಾಡಿದ್ದಾರೆ. ಅಸ್ಪೃಶ್ಯತೆಯನ್ನು ಸಮಾಜದಲ್ಲಿ ತೊಡೆದುಹಾಕುವ ಸಲುವಾಗಿ ಸರಕಾರ ಸಾಕಾದಷ್ಟು ಪ್ರಯತ್ನಗಳನ್ನು ಮಾಡಿ ಶ್ರಮ ವಹಿಸುತ್ತಿದ್ದಾರೆ. ಇದು ಒಂದು ದೊಡ್ಡ ಸಮಸ್ಯೆಯಾಗಿ ಇನ್ನೂ ಇದೆ. ಈಗ ಎಂಟನೇ ಬಸವಜಯಂತಿಯ ಶತಮಾನೋತ್ಸವ ಎಲ್ಲೆಲ್ಲೂ ನಡೆಯುತ್ತಿದೆ. ಇದರಂತೆ ಮುಂದೆ ಮಹಾತ್ಮ ಗಾಂಧಿಯವರ ಶತಮಾನೋತ್ಸವವೂ ನಡೆಯುವುದರಲ್ಲಿದೆ. ಇಂತಹ ಸಂದರ್ಭಗಳಲ್ಲಿ ಅಸ್ಪೃಶ್ಯತೆಯನ್ನು ತೊಡೆದುಹಾಕುವ ಪ್ರಯತ್ನಗಳನ್ನು ಮಾಡಬೇಕು ಮತ್ತು ಮಠಾಧಿಪತಿಗಳು ಇದರಲ್ಲಿ ಹೆಚ್ಚು ಉತ್ಸಾಹ ತೋರಿ ಪ್ರಚಾರ ಮಾಡಬೇಕು. ಎಲ್ಲಸವರ್ಣ ಹಿಂದೂಗಳೂ ಕೂಡ ಅಸ್ಪೃಶ್ಯತೆಯನ್ನು ತೊಡೆದುಹಾಕಲು ಪ್ರಯತ್ನಮಾಡಬೇಕು ಮತ್ತು ಇದಕ್ಕೆ ಇನ್ನೂ ಸಾಕಷ್ಟು ಹೆಚ್ಚು ಪ್ರಚಾರ ಮಾಡುವುದು ಅವಶ್ಯಕ. ಅನೇಕ ವರ್ಷಗಳಿಂದ ಅಸ್ಪೃಶ್ಯತೆ ಎನ್ನುವುದು ಒಂದು ರೀತಿಯಾದ ಅಭ್ಯಾಸಬಲದಿಂದ ಬಂದಿದೆ. ಇದನ್ನು ತೊಡೆಯಲು ಸಾಕಷ್ಟು ಪ್ರಚಾರ ಮಾಡಬೇಕಾದುದು ಅಗತ್ಯ. ಇದಕ್ಕಾಗಿ ವೇದಗಳಲ್ಲಿ ಹಾಗೂ ಪುರಾಣ ಇತಿಹಾಸಗಳಲ್ಲಿ ಯಾವ ರೀತಿಯಾಗಿತ್ತು ಎನ್ನುವುದರ ಬಗ್ಗೆ ಮಠಾಧಿಪತಿಗಳು ಹಾಗೂ ಇತರ ತಜ್ಞರು ಇದರ ಬಗ್ಗೆ ಹೆಚ್ಚು ಪ್ರಚಾರಮಾಡಿ ಜನರಲ್ಲಿ ತಿಳುವಳಿಕೆ ಉಂಟುಮಾಡಿ ಅಸ್ಪೃಶ್ಯತೆಯನ್ನು ತೊಡೆಯಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು

(ಶ್ರೀ ಆರ್. ಮುನಿಸ್ವಾಮಯ್ಯ)

ಇದಕ್ಕಾಗಿ ಇನ್ನೂ ಹೆಚ್ಚು ಹಣವನ್ನು ಒದಗಿಸಿಕೊಡಬೇಕು ಎಂದು ಇಲ್ಲಿ ಒತ್ತಾಯದಿಂದ ಹೇಳುತ್ತಿದ್ದೇನೆ. ಆದರೆ ಹಿಂದೆ ಮೂವತ್ತು ವರ್ಷಗಳ ಹಿಂದೆ ಹರಿಜನರ ಸ್ಥಿತಿ ಯಾವ ರೀತಿ ಇತ್ತು ಮತ್ತು ಈಗ ಹೇಗಿದೆ ಎನ್ನುವುದನ್ನು ನೋಡಿದರೆ ಹಿಂದೆ ಅಕ್ಷರಸ್ಪರ್ಶ ಇರುವುದು ಕಾಣಿಸುತ್ತಿರಲಿಲ್ಲ. ಇಂದು ಒಂದೊಂದು ತಾಲ್ಲೂಕುಗಳಲ್ಲಿ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಎಷ್ಟೋ ಜನ ಹರಿಜನರು ವಿದ್ಯಾವಂತರಾಗಿ ಮುಂದೆ ಬರುತ್ತಿರುವುದನ್ನು ನೋಡುತ್ತಿದ್ದೇವೆ. ಆದರೆ ಎಲ್ಲೋ ಒಬ್ಬಿಬ್ಬರು ಹೆಚ್ಚು ವಿದ್ಯಾವಂತರಾಗಿ ಡಿಗ್ರಿಗಳನ್ನು ಪಡೆದ ಪದವೀಧರರುಗಳಾಗಿ ಬಂದಿರಬಹುದು. ಒಬ್ಬೊಬ್ಬರು ಟೆಕ್ನಿಕಲ್ ವಿದ್ಯೆಯಲ್ಲೂ ಪರಿಣಿತರಾಗಿ ಡಿಗ್ರಿಗಳನ್ನು ಪಡೆದಿರಬಹುದು. ಸ್ವಲ್ಪ ಮಟ್ಟಿಗೆ ವಿದ್ಯಾಭ್ಯಾಸದಲ್ಲಿ ಹರಿಜನರು ಮುಂದೆ ಬರುತ್ತಿದ್ದಾರೆ. ಆದರೆ ಎಷ್ಟುಮಟ್ಟಿಗೆ ಮುಂದೆ ಬರಬೇಕೋ ಇನ್ನೂ ಆ ಮಟ್ಟಕ್ಕೆ ಬಂದಿಲ್ಲ. ಎಲ್ಲ ಹಳ್ಳಿಗಳಲ್ಲೂ ಇರುವ ಪಾಠಶಾಲೆಗಳಿಗೆ ಹರಿಜನರು ವಿದ್ಯಾಭ್ಯಾಸ ಮಾಡಲು ಅನುಕೂಲವಾಗುವಂತೆ ಅವರಿಗೆ ಹೆಚ್ಚು ಹಣ ಖರ್ಚುಮಾಡಬೇಕಾದ ಅಗತ್ಯವಿದೆ. ವಿದ್ಯಾಭ್ಯಾಸ ಪಡೆಯುವ ಹರಿಜನರ ಮಕ್ಕಳಿಗೆ ಶಾಲೆಗೆ ಬಂದು ಸೇರುವಾಗ ಅವರಿಗಾಗಿ ಪುಸ್ತಕಗಳನ್ನು ಹಾಗೂ ಸ್ಲೇಟುಗಳನ್ನು ಒದಗಿಸಿಕೊಡಬೇಕು. ಈಗ ಒದಗಿಸಿರುವುದು ಸಾಲದು. ಇದಕ್ಕಾಗಿ ಇನ್ನೂ ಹೆಚ್ಚು ಹಣ ಒದಗಿಸಿ ಎಲ್ಲ ಊರುಗಳಲ್ಲಿಯೂ ಹೆಚ್ಚು ಮಂದಿ ಹರಿಜನರನ್ನು ವಿದ್ಯೆ ಪಡೆಯಲು ಅನುಕೂಲವಾಗುವಂತೆ ಅವರಿಗೆ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಹರಿಜನರಿಗೆ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸಿ ಸಹಾಯ ಮಾಡಬೇಕು. ಸುಮಾರು ಏಳೆಂಟು ವರ್ಷಗಳಿಂದೀಚೆಗೆ ಅನೇಕ ಹಾಸ್ಟೆಲುಗಳನ್ನು ಹರಿಜನರಿಗಾಗಿ ತೆರೆದಿದ್ದಾರೆ. ಮತ್ತು ಕೆಲವು ಹಾಸ್ಟೆಲುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೂಲಕ ತೆರೆದಿರುವ ಕಡೆ ಒಬ್ಬೊಬ್ಬರನ್ನು ಸೂಪರಿಂಟೆಂಡೆಂಟರಾಗಿ ಕೂಡ ನೇಮಿಸಿದ್ದಾರೆ. ಆದರೆ ಇಲ್ಲಿಗೆ ಸೂಪರಿಂಟೆಂಡೆಂಟ್ ಆಗಿ ನೇಮಕವಾಗಿರುವವರು ಕೇವಲ ಎಸ್.ಎಸ್.ಎಲ್.ಸಿ. ಓದಿದವರು ಮಾತ್ರ ಆಗಿರುತ್ತಾರೆ. ಇದಕ್ಕೆ ಬದಲು ಒಬ್ಬರು ಪದವೀಧರರಾಗಿರುವಂತಹವರನ್ನು ಇಲ್ಲಿಗೆ ಸೂಪರಿಂಟೆಂಡೆಂಟರಾಗಿ ನೇಮಕಮಾಡಿದರೆ ಇಲ್ಲಿನ ಹುಡುಗರಿಗೆ ಸ್ವಲ್ಪ ಸಹಾಯವಾಗುತ್ತದೆ. ಇದಕ್ಕಾಗಿ ಪೂರ್ತಿ ಕಾಲ ಇರುವಂತಹ ಒಬ್ಬರು ಪದವೀಧರರನ್ನು ಹಾಸ್ಟೆಲುಗಳ ಸೂಪರಿಂಟೆಂಡೆಂಟರಾಗಿ ನೇಮಿಸುವುದು ಒಳ್ಳೆಯದು ಎಂದು ಇಲ್ಲಿ ನಾನು ಸಲಹೆ ಮಾಡುತ್ತೇನೆ. ಈಗ ಇರುವಂತೆ ಎಸ್.ಎಸ್.ಎಲ್.ಸಿ. ಆಗಿರುವವರನ್ನು ಸೂಪರಿಂಟೆಂಡೆಂಟರಾಗಿ ನೇಮಿಸಿದರೆ ಅದರಿಂದ ಅನುಕೂಲವಾಗುವುದಿಲ್ಲ. ಹಾಸ್ಟೆಲುಗಳಲ್ಲಿ ಹನ್ನೊಂದನೇ ಸ್ಟ್ಯಾಂಡರ್ಡ್‌ನಲ್ಲಿ ವರ್ಗದಲ್ಲಿ ಓದುವವರೂ ಇರುತ್ತಾರೆ. ಇಂತಹ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಆಗಿರುವವರು ಇದ್ದರೆ ಅವರು ಏನೂ ಸಹಾಯ ಮಾಡಲಾಗುವುದಿಲ್ಲ. ಇದಕ್ಕಾಗಿ ಇಲ್ಲಿ ಪದವೀಧರರಾಗಿರುವವರನ್ನು ನೇಮಿಸುವುದು ಸೂಕ್ತವಾಗಿರುತ್ತದೆ. ಮತ್ತು ಸರಕಾರ ಈಗ ಒದಗಿಸಿರುವ ಹಣ ಸಾಲದು. ಇದನ್ನು ಒಂದಕ್ಕೆ ಎರಡರಷ್ಟು ಹೆಚ್ಚುಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ವಿದ್ಯಾರ್ಥಿವೇತನಗಳನ್ನು ಹರಿಜನರಿಗಾಗಿ ಕೊಡುತ್ತಿದ್ದಾರೆ. ಇದು ಸುಮಾರು 10-15-20 ವರ್ಷಗಳಿಂದ ಏನು ಕೊಡುತ್ತಿದ್ದರೋ ಇಂದೂ ಅದೇ ರೀತಿಯಲ್ಲಿದೆ. ಮೊದಲು ಮಿಡಲ್ ಸ್ಕೂಲಿನಲ್ಲಿ 3 ರೂಪಾಯಿ, ಹೈಸ್ಕೂಲುಗಳಲ್ಲಿ ಏಳೂವರೆ ರೂಪಾಯಿಗಳಷ್ಟು ಕೊಡುತ್ತಿದ್ದರು. ಈಗಲೂ ಕೂಡ ಇದೇ ರೇಟಿದೆ. ಇದನ್ನು ಇನ್ನೂ ಹೆಚ್ಚು ಮಾಡಬೇಕು, ಎಂದರೆ, ಒಂದಕ್ಕೆರಡರಷ್ಟು ಹೆಚ್ಚುಮಾಡಬಹುದು ಎಂದರೆ ಮಿಡಲ್ ಸ್ಕೂಲಿನಲ್ಲಿ 5 ರೂಪಾಯಿನಂತೆ, ಹೈಸ್ಕೂಲುಗಳಲ್ಲಿ ಹತ್ತು ರೂಪಾಯಿಗಳಂತೆ ಹೆಚ್ಚು ಮಾಡಬೇಕು ಎಂದು ಸರಕಾರಕ್ಕೆ ಇಲ್ಲಿ ಸಲಹೆ ಮಾಡುತ್ತೇನೆ. ಮತ್ತು ಕೇಂದ್ರ ಸರ್ಕಾರದವರು ಹರಿಜನರಿಗಾಗಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದಾರೆ. ಇದರಿಂದ ರಾಜ್ಯ ಸರಕಾರಕ್ಕೆ ಹಣದ ಖರ್ಚು ಇಲ್ಲ. ಇದರಿಂದ ರಾಜ್ಯ ಸರಕಾರದವರು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿ ಈಗಿರುವ ವೇತನಗಳನ್ನು ಒಂದಕ್ಕೆರಡರಷ್ಟು ಹೆಚ್ಚಿಸಬೇಕು ಮತ್ತು ಕೇಂದ್ರದಮೇಲೆ ಹೆಚ್ಚು ಒತ್ತಾಯ ತರಬೇಕೆಂದು ನಾನು ಇಲ್ಲಿ ಸರಕಾರಕ್ಕೆ ಸಲಹೆ ಮಾಡುತ್ತಿದ್ದೇನೆ ಮತ್ತು ಇದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಸರಕಾರ ತೆಗೆದುಕೊಳ್ಳಬೇಕೆಂದು ಇಲ್ಲಿ ನಾನು ಹೇಳುತ್ತೇನೆ.

ಡಿಪ್ರೆಸ್ಡ್ ಕ್ಲಾಸ್ ಲೈಬ್ರರಿ ಎಂದು ಬೆಂಗಳೂರು ಮೈಸೂರು ಯೂನಿವರ್ಸಿಟಿಯಲ್ಲಿ ಇದೆ. ಇದಕ್ಕೆ ಕೇಂದ್ರ ಸರಕಾರ ಹಣ ಒದಗಿಸುತ್ತದೆ. ಇರತಕ್ಕ ಹಣದಲ್ಲಿ ಅರ್ಧದಷ್ಟು ಸಹ ಖರ್ಚು ಮಾಡಿಲ್ಲ. ಡಿಪ್ರೆಸ್ಡ್ ಕ್ಲಾಸ್‌ಗೆ ಸಂಬಂಧಪಟ್ಟ ಪುಸ್ತಕಗಳನ್ನು ತೆಗೆದುಕೊಳ್ಳಲಿಲ್ಲ. ಇದರಿಂದ ಇದಕ್ಕೆ

ಒದಗಿಸಿದ ಹಣ ಉಳಿದುಹೋಗಿದೆ. ಇದನ್ನು ಕೂಡಲೇ ಪರಿಶೀಲಿಸಿ, ಕೇಂದ್ರದವರು ಕೊಡತಕ್ಕಂಥ ಹಣ ಖರ್ಚು ಮಾಡಿ, ಎಲ್ಲಾ ತರಹದ ಪುಸ್ತಕಗಳನ್ನು ಒದಗಿಸಿ ಸಹಾಯ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಮನೆಗಳನ್ನು ಕಟ್ಟಿಸುವ ವಿಚಾರ. ಮನೆಗಳ ಸೌಕರ್ಯದ ವಿಷಯ ಹೇಳುತ್ತೇನೆ. ಹರಿಜನರು ಬಡವರು ಎನ್ನತಕ್ಕಂಥ ವಿಚಾರ ಎಲ್ಲರಿಗೂ ಗೊತ್ತಿದೆ. ಹರಿಜನರು ಜೀವನ ನಡೆಸುವುದಕ್ಕೆ ಆರ್ಥಿಕ ತೊಂದರೆಯ ಜೊತೆಗೆ ಸಮಾಜದಲ್ಲಿ ಇವರು ಅಸ್ಪೃಶ್ಯರು ಎನ್ನುವುದರಿಂದ ಸಮಾಜದ ತೊಂದರೆ ಸಹ ಹರಿಜನರಿಗೆ ಇದೆ. ಹರಿಜನರಿಗಾಗಿ ಮನೆಗಳನ್ನು ಕಟ್ಟಿಸುವುದಕ್ಕೆ ಒಂದು ಕಾರ್ಪೊರೇಷನ್ ಇದೆ. ಇದಕ್ಕೆ ನಾಮಕರಣ ಮಾಡಿದ ಸದಸ್ಯರನ್ನು ನೇಮಕ ಮಾಡಿದ್ದಾರೆ. ಈ ಕಾರ್ಪೊರೇಷನ್ ಸಭೆ ವರ್ಷಕ್ಕೆ ಒಂದು ಸಲವೋ ಅಥವಾ ಇನ್ನೊಂದು ಸಲವೋ ಸಭೆ ಸೇರುತ್ತದೆ. ಆದುದರಿಂದ ಮನೆ ಕಟ್ಟುವಂಥಾದ್ದು ಇವರಿಂದ ಪರಿಶೀಲನೆಯಾಗುತ್ತದೆ ಎಂದು ಹೇಳಿದರೆ ಅದು ತಪ್ಪು. ಈ ಕಾರ್ಪೊರೇಷನ್ನಿಗೆ ಇನ್ನೂ ಹೆಚ್ಚು ಜನ ಸದಸ್ಯರನ್ನು ಕೊಡಬೇಕು ಮತ್ತು ಪ್ರತಿ ಮೂರು ತಿಂಗಳಿಗೆ ಒಂದು ಸಲ ಮೀಟಿಂಗ್ ಕರೆದು ಮನೆ ಕಟ್ಟುವ ಪ್ರಗತಿ ಪರಿಶೀಲನೆ ಮಾಡಬೇಕು ಹಾಗೂ ಇದಕ್ಕೆ ಪ್ರೋತ್ಸಾಹ ಕೊಡಬೇಕು ಎಂದು ಹೇಳುತ್ತೇನೆ.

ಹರಿಜನರ ಮನೆಗಳನ್ನು ಕಟ್ಟುವುದಕ್ಕೆ 200 ರೂಪಾಯಿ ಮರ ಉಚಿತವಾಗಿ ಕೊಡಬೇಕು ಎಂದು ಅರಣ್ಯ ಇಲಾಖೆಯವರು ಅಪ್ಪಣೆ ಕೊಡಿಸಿದ್ದಾರೆ. ಈ ಇನ್ನೂರು ರೂಪಾಯಿ ಮರ ತರಬೇಕಾದರೆ ಹರಿಜನರಿಗಾಗುವ ಪರದಾಟ ನೋಡಬೇಕು. ಶ್ರೀಮತಿ ನಾಗರತ್ನಮ್ಮನವರು ಹೇಳಿದಹಾಗೆ ಕಣ್ಣೀರು ಸುರಿಸಬೇಕಾಗುತ್ತದೆ. ಈ ಮರ ತರಲು ಹಳ್ಳಿಗಳಲ್ಲಿ ಮೊದಲು ಪಂಚಾಯಿತಿ ಲೈಸೆನ್ಸ್, ಅಮೇಲೆ ಬಿ. ಡಿ. ಒ. ಅವರಿಂದ ಲೈಸೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಇರುವವರೆಗೆ ಮರ ತರಲು ಚಿಕ್ಕಮಗಳೂರು ಡಿಪೋಕ್ಕೆ ಹೋಗಬೇಕಾಗುತ್ತದೆ. ಅಲ್ಲಿಗೆ ಹೋಗಿ ಮರ ಕೊಡಿ ಎಂದು ಕೇಳಿದರೆ ನಿಮ್ಮ ಅರ್ಜಿ ಬರಲಿಲ್ಲ, ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅಲ್ಲದೆ ನಮ್ಮ ಡಿಪೋದಿಂದ ಕೊಡಬೇಕು ಎಂದು ಹೇಳಿಲ್ಲ, ಹುಣಸೂರು ಡಿಪೋಕ್ಕೆ ಹೋಗಿ ಎಂದು ಹೇಳುತ್ತಾರೆ. ಹುಣಸೂರು ಡಿಪೋಕ್ಕೆ ಹೋದರೆ ವಿವರ ಕೊಟ್ಟು ಬರವಣಿಗೆಯಲ್ಲಿ ತಿಳುವಳಿಕೆ ಬರಲಿಲ್ಲ, ತರೀಕೆರೆ ಡಿಪೋಕ್ಕೆ ಹೋಗಿ ಎಂದು ಹೇಳಲಾಗುತ್ತದೆ. ಹೀಗೆ ಒಂದು ಡಿಪೋನಿಂದ ಇನ್ನೊಂದು ಡಿಪೋಕ್ಕೆ ಹೋಗಿ ಇನ್ನೂರು ರೂಪಾಯಿ ಖರ್ಚು ತಲೆಮೇಲೆ ಹಾಕಿಕೊಂಡು ನಿರುತ್ಸಾಹಿಗಳಾಗಿ ಬಿಡುವ ಸಂದರ್ಭ ಇದೆ. ಆದುದರಿಂದ ಇದನ್ನು ಸರಕಾರ ಗಮನಿಸಬೇಕು ಎಂದು ಹೇಳುತ್ತೇನೆ.

ಇನ್ನು ಉದ್ಯೋಗದಲ್ಲಿ ಶೇಕಡ 18ರಷ್ಟು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮೀಸಲಾಗಿ ಕಾಯ್ದಿಡಬೇಕು ಎಂದು ಹೇಳಿದ್ದಾರೆ. ಈ ರೀತಿ ಹೇಳುವುದು ಪುಸ್ತಕದಲ್ಲಿ ಕಾನೂನಿನಲ್ಲಿ ರೂಲ್ಸ್‌ನಲ್ಲಿ ಮಾತ್ರ ಇದೆ, ಆದರೆ ನಿಜವಾಗಿ ನಡೆಯುತಕ್ಕಂಥಾದ್ದು ಅಲ್ಲ. ನಮ್ಮ ಹರಿಜನರಿಗೆ ನಾಲ್ಕನೇ ತರಗತಿಯ ಆಳುಗಳ ಕೆಲಸ ಕೂಡ ಸರಕಾರದಲ್ಲಿ ದಕ್ಕುತ್ತಿಲ್ಲ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಎಂಪ್ಲಾಯ್‌ಮೆಂಟ್ ಸೆಲ್ ಎಂದು ಮಾಡಿದ್ದಾರೆ. ಆದರೆ ಅಧಿಕಾರಿಗಳು ಪರೀಕ್ಷೆ ಮಾಡಿದಾಗ ಶೇಕಡ 1.7 ಅಷ್ಟು ಮಾತ್ರ ಅನುಕೂಲ ಮಾಡಿಕೊಟ್ಟಿದ್ದಾರೆ. ಉಳಿದವರಿಗೆ 4ನೇ ತರಗತಿ ಸೇವಕರ ಕೆಲಸ ಸಿಕ್ಕುತ್ತಿಲ್ಲ. 3ನೇ ತರಗತಿ ಬಗ್ಗೆ ವಿಚಾರಿಸಿದರೆ ಅರ್ಹತೆಯುಳ್ಳ ಕ್ಯಾಂಡಿಡೇಟ್ ಬರಲಿಲ್ಲ, ಆದುದರಿಂದ ಟೆಂಪರರಿ ಅರೇಂಜ್‌ಮೆಂಟ್ ಮಾಡಿ ಬೇರೆಯವರನ್ನು ಇಟ್ಟುಕೊಂಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಮಂತ್ರಿಗಳು ಇದನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕು. ಖಚಿತವಾದ ಅಪ್ಪಣೆ ಹೊರಡಿಸಿ ಈ ರೀತಿ ಮಾಡದ ಹಾಗೆ ಅಧಿಕಾರಿಗಳಿಗೆ ತಿಳುವಳಿಕೆ ಕೊಡಬೇಕು. ಮೈಸೂರು ದೇಶದಲ್ಲಿ ನಮ್ಮದು ದುರಾದೃಷ್ಟ. ಇಲ್ಲಿ ಸುತ್ತುಮುತ್ತು ಕೇಂದ್ರ ಸರಕಾರದ ಕೈಗಾರಿಕೆಗಳು ಕಾರ್ಖಾನೆಗಳು ಇವೆ. ಹಾಗು ನಮ್ಮ ಕೈಗಾರಿಕೆಗಳು ಕಾರ್ಖಾನೆಗಳು ಸಹ ಇವೆ. ಇಲ್ಲಿ ಉದ್ಯೋಗ ಒದಗಿಸುವುದಕ್ಕೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಹೆಸರು ತರಿಸಿಕೊಳ್ಳುತ್ತಾರೆ. ಮೈಸೂರು ದೇಶದಲ್ಲಿ ಹುಟ್ಟಿ ಬೆಳೆದು ಭೂಮಿ ಉಳುಮೆಮಾಡಿ ದೇಶಕ್ಕೆ ಆಹಾರ ಒದಗಿಸುವ ಈ ದೇಶದ ಹರಿಜನರಿಗೆ ಕೆಲಸ ದೊರಕದೆ ಕೇರಳ ಮದ್ರಾಸ್‌ನವರಿಗೆ ಹೋಗುತ್ತವೆ. ಆದುದರಿಂದ ಸರಕಾರ ಇದನ್ನು ಗಮನಿಸಬೇಕು ಎಂದು ಹೇಳುತ್ತೇನೆ.

ಇನ್ನು ಎನ್. ಈ. ಎಸ್. ಹಣಕಾಸಿನ ಸ್ಥಿತಿ ಬಗ್ಗೆ ಹೇಳುವುದಾದರೆ ಇದಕ್ಕೆ ಕೇಂದ್ರದಿಂದ ಹಣ ಬರುತ್ತದೆ; ಹಾಗೂ ನಮ್ಮ ಸರಕಾರ ಕೂಡ ಹಣ ಒದಗಿಸುತ್ತದೆ. ಹರಿಜನ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಶೇಕಡ 18ರಷ್ಟು ಹಣ ಒದಗಿಸಬೇಕು ಮತ್ತು ಅವರಿಗಾಗಿ ಕೆಲಸ

(ಶ್ರೀ ಆರ್. ಮುನಿಸ್ವಾಮಯ್ಯ)

ಕಾರ್ಯಗಳನ್ನು ಏರ್ಪಡಿಸಬೇಕು, ಹಾಗೂ ಅಂದಾಜು ಮಾಡಿದ ಹಣ ಉಳಿಸದೆ ಖರ್ಚು ಮಾಡಬೇಕು ಎಂದು ನಿಗದಿಯಾಗಿದೆ. ಇದನ್ನು ಯಾವ ಬಿ. ಡಿ. ಓ. ಅಧಿಕಾರಿಗಳಾಗಲಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರಾಗಲಿ ಗಮನಿಸಿಲ್ಲ. ದಯವಿಟ್ಟು ಮೂರು ತಿಂಗಳಿಗೆ ಒಂದು ಸಲ ರಿಪೋರ್ಟ್ ತರಿಸಿಕೊಳ್ಳಬೇಕು ಮತ್ತು ಅವರಿಗೆ ಸರಿಯಾದ ತಿಳುವಳಿಕೆ ಕೊಟ್ಟು ಇದನ್ನು ತಾತ್ಸಾರ ಮಾಡಬಾರದು ಎಂದು ಹೇಳಬೇಕು. ಇಷ್ಟೇ ಅಲ್ಲದೆ ತಾತ್ಸಾರಮಾಡತಕ್ಕಂಥ ಅಧಿಕಾರಿಗಳಮೇಲೆ ಕಣ್ಣು ಇಡಬೇಕು ಎಂದು ಹೇಳುತ್ತೇನೆ.

ಇನ್ನು ಈಗ ಭೂಮಿ ವಿಷಯ ಹೇಳುವುದಕ್ಕೆ ಬಂದರೆ, ನಮ್ಮ ಸ್ನೇಹಿತರಾದ ಶ್ರೀಮಾನ್ ರಾಚಯ್ಯನವರನ್ನು ಕೂಡಲೇ ಡಿಸ್‌ಮಿಸ್ ಮಾಡಬೇಕೆಂದು ಇದ್ದೇವೆ. ಅದಕ್ಕೆ ಕಾರಣ ಇಷ್ಟೇ. ಎಷ್ಟೋ ಕಾಲದಿಂದ ಹರಿಜನರಿಗೆ ಭೂಮಿ ಇಲ್ಲ, ಕೆಲವು ಸವರ್ಣ ಹಿಂದುಗಳಿಗೂ ಭೂಮಿ ಇಲ್ಲ. ನೂರಾರು ಎಕರೆ ಭೂಮಿ ಬಗರ್ ಹುಕುಮ್‌ನಿಂದ ಸಾಗುವಳಿ ಮಾಡುತ್ತಿದ್ದಾರೆ. ನಮ್ಮವರು ಸಹ ಹಳ್ಳಿಗಳಲ್ಲಿ ಅರ್ಧ ಎಕರೆ, ಕಾಲು ಎಕರೆ, ಮುಕ್ಕಾಲು ಎಕರೆ ಒಂದು ಎಕರೆ, ಬಗರ್ ಹುಕುಮಿನಿಂದ ಸಾಗುವಳಿ ಮಾಡುತ್ತಿದ್ದವರನ್ನು ಓಡಿಸಬೇಕು ಎಂದು ಆರ್ಡರ್ ಮಾಡಿ ಬಹಳ ಅನ್ಯಾಯ ಮಾಡಿದ್ದಾರೆ. ಇದನ್ನು ನಾವು ಸಹಿಸಲು ಸಾಧ್ಯವಿಲ್ಲ. ಹರಿಜನರು ಉಳುಮೆ ಮಾಡತಕ್ಕ ಅರ್ಧ ಎಕರೆ ಕಾಲು ಎಕರೆ ಜಮೀನನ್ನು ಅವರಿಗೇ ರಿಜಿಸ್ಟರ್ ಮಾಡಿಕೊಡಬೇಕು ಇಲ್ಲದಿದ್ದರೆ ನಿಮಗೆ ಕೆಟ್ಟದ್ದು ಆಗುತ್ತದೆ.

ತೋಟಿ ತಳವಾರರು ನೀರಗಂಟಿಗಳಿಗೆ ಸರ್ವಿಸ್ ಇನಾಮ್ ಜಮೀನು ಇದೆ. ಹೊಸ ರೂಲ್ ಮಾಡಿ ಇನಾಮ್ ಜಮೀನು ಕೊಟ್ಟಿರುವುದನ್ನು ತೆಗೆದುಹಾಕಬೇಕು ಎಂದು ಮಾಡಿದ್ದಾರೆ. ಈ ಭೂಮಿ ಬೇರೆಯವರು ಕೊಂಡುಕೊಂಡು ಬಿಟ್ಟಿದ್ದಾರೆ. ವ್ಯವಸಾಯ ಮಾಡುವುದೇ ತಪ್ಪು ಎನ್ನುವ ಹಾಗೆ ಮಾಡಿದ್ದಾರೆ. ಇಂದು ಭೂಮಿ ಕಳಕೊಂಡು ಬಡ ಹರಿಜನರು ಬೀದಿ ಭಿಕಾರಿಗಳಾಗಿದ್ದಾರೆ. ಆದುದರಿಂದ ಇನ್ನು ಕೂಡಲೇ ಪರಿಶೀಲನೆಮಾಡಿ ಇನಾಮತಿ ಇರತಕ್ಕಂಥ ಭೂಮಿಯನ್ನು ಅವರವರಿಗೆ ರಿಜಿಸ್ಟರ್ ಮಾಡಿಸಿ ಕೊಡಬೇಕು ಎಂದು ಹೇಳುತ್ತೇನೆ.

ಮದ್ರಾಸ್ ರಾಜ್ಯದಲ್ಲಿ ಹರಿಜನರ ಕಲ್ಯಾಣ ಇಲಾಖೆ ಎಂದು ಒಂದು ಇಲಾಖೆ ಇದೆ. ಇಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅದು ಸೇರಿದೆ. ಬ್ಯಾಕ್‌ವರ್ಡ್ ಎನ್ನುವುದಕ್ಕೆ ಅರ್ಥ ಹೇಳಿರುವುದು ಏನು ಅಂದರೆ, 1500 ರೂಪಾಯಿ ಒಳಗೆ ಆದಾಯ ಇರತಕ್ಕಂಥವರು ಎಲ್ಲರೂ ಹಿಂದುಳಿದವರು ಎಂದು ಅರ್ಥ ಕೊಟ್ಟು ಒಂದು ರೀತಿಯ ಆರ್ಥಿಕ ಮಟ್ಟದ ಅರ್ಥ ಕೊಟ್ಟಿದ್ದಾರೆ. ರೂಲ್ಸ್ ಮಾಡುವ ಕಾಲದಲ್ಲಿ ಹರಿಜನರ ಕಲ್ಯಾಣ ಮರೆತು ಹೋಗುತ್ತಿದೆ. ಆದುದರಿಂದ ಹರಿಜನರ ಕಲ್ಯಾಣ ಮರೆತು ಹೋಗದ ಹಾಗೆ ಮದ್ರಾಸ್ ರಾಜ್ಯದಲ್ಲಿ ಇರುವ ಹಾಗೆ, ಆಂಧ್ರ ರಾಜ್ಯದಲ್ಲಿರುವ ಹಾಗೆ ಹರಿಜನರ ಕಲ್ಯಾಣ ಇಲಾಖೆ ಎಂದು ಮಾಡಿ ಈಗ ಇರತಕ್ಕ ಮಂತ್ರಿಗಳೇ ಈ ಮಂತ್ರಿಗಳಾಗಿ ಮುಂದುವರಿಯಬಹುದು, ಇಷ್ಟವಿಲ್ಲದಿದ್ದರೆ ಬೇರೆಯವರಿಗೆ ಕೊಡಬಹುದು. ಒಟ್ಟಿನಲ್ಲಿ ಹರಿಜನರ ಕಲ್ಯಾಣ ಇಲಾಖೆ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ವೆಲ್‌ಫೇರ್ ವಿಷಯ ಹೇಳುವುದಾದರೆ ಅದು ಬರಿ ಪುಸ್ತಕದಲ್ಲಿ ಇದೆ. ಈ ವಿಷಯ ಸಮಾಜ ಕಲ್ಯಾಣ ಇಲಾಖೆಗೆ ಹೋಗಿದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಗೆಜೆಟೆಡ್ ಆಫೀಸರನ್ನು ಕೇಳಿದ್ದೇವೆ. ಎಲ್ಲಿ ಕೊಡುತ್ತೀರಿ. ನಮ್ಮ ಕ್ಷೇತ್ರಕ್ಕೆ ಬೆಂಗಳೂರು ಡಿಸ್ಟ್ರಿಕ್ಟ್‌ಗೆ ಕೊಡುವುದಕ್ಕೆ ಸಾಧ್ಯವೇ? ಈ ಪಾಲ್ಟ್ರೀ ಸ್ಕೀಂ ಏರ್ಪಾಡು ಮಾಡುವುದಕ್ಕೆ ಸಾಧ್ಯವೇ ಎಂದು ಕೇಳಿದರೆ ಅವರು ನಿಸ್ಸಹಾಯಕತೆ ತೋರಿಸುತ್ತಾರೆ. ಈ ಸ್ಕೀಂ ಇದೆ, ಆದರೆ ಇದಕ್ಕೆ ಹಣ ಒದಗಿಸಿಲ್ಲ, ಆದುದರಿಂದ ಕೊಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಆರ್ಡರ್ ನೋಡಿ ತೃಪ್ತಿಪಟ್ಟುಕೊಳ್ಳುವಂತಾಗಿದೆ. ಅಲ್ಲೊಂದು ಇಲ್ಲೊಂದು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಇದನ್ನು ಪುಸ್ತಕದಲ್ಲಿ ಬಹಳ ಚೆನ್ನಾಗಿ ವರ್ಣನೆ ಮಾಡಿದ್ದಾರೆ. ಈ ಪುಸ್ತಕ ಅಮೇರಿಕಾದಿಂದ ಬಂದವರು ನೋಡಿದರೆ ನೀಗ್ರೋ ಜನರಂಥವರು ಕಿಣತರವಾದ ರೇಷಿಯಲ್ ತೊಂದರೆಪಟ್ಟು ಕೊಂಡವರು ನೋಡಿದರೆ ಅವರಿಗೆ ಅನ್ನಿಸಬಹುದು ಮೈಸೂರು ದೇಶದಲ್ಲಿ ಎಷ್ಟು ಸೊಗಸಾಗಿ ಕೆಲಸ ಮಾಡುತ್ತಾ ಇದ್ದಾರೆ, ಎಷ್ಟು ಅಭಿವೃದ್ಧಿ ಕಾರ್ಯ ಕೈಕೊಂಡಿದ್ದಾರೆ ಎಂದು ಅವರು ಸಂತೋಷ ಪಡುತ್ತಾರೆ. ಆದರೆ ಇಲ್ಲಿ ಅನುಭವಿಸುತ್ತಿರುವ ನಾವು ಪುಸ್ತಕದಲ್ಲಿರುವುದನ್ನು ನೋಡಿಕೊಂಡು ಅವರಲ್ಲಿರುವ ಪ್ರಗತಿಯನ್ನು ನೋಡಿ ಸಂತೋಷಪಡಬೇಕಾಗಿದೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

3-30 P.M.

ಪ್ರವಾಸೋದ್ಯಮದ ವಿಚಾರ ಹೇಳಬೇಕಾದರೆ, ಮೈಸೂರು ದೇಶದಲ್ಲಿ ಬಹಳ ಪ್ರಗತಿಪರವಾದ ಸೌಂದರ್ಯಪೂರಿತವಾದ, ಸೌಂದರ್ಯಕರವಾದ ಅನೇಕ ದೃಶ್ಯಗಳಿವೆ. ಅನೇಕ ಪ್ರವಾಸಿಗರು ಪರದೇಶಗಳಿಂದ ಮತ್ತು ಪ್ರಪಂಚದ ಅನೇಕ ಭಾಗಗಳಿಂದ ಬರುತ್ತಾರೆ. ಆನೇಕಲ್ ತಾಲ್ಲೂಕಿನಲ್ಲಿ ಬಹಳ ರಮಣೀಯವಾದ ದೃಶ್ಯಗಳಿವೆ, ಸೌಂದರ್ಯವಾದ ಬೆಟ್ಟಗಳು ಮತ್ತು ಅರಣ್ಯ ಪ್ರದೇಶಗಳಿವೆ. ಅನೇಕ ಆನೆಗಳು ಮತ್ತು ವನ್ಯ ಮೃಗಗಳು ಇವೆ. ಇವನ್ನೆಲ್ಲ ನೋಡುವುದಕ್ಕೆ ಮನರಂಜನೀಯವಾಗಿರುತ್ತದೆ. ಮುತ್ಯಾಲಮಡುವು ಎಂಬ ಸಣ್ಣ ಜಲಪಾತವಿದೆ. ಅದು ನೋಡುವುದಕ್ಕೆ ಬಹಳ ರಮಣೀಯವಾಗಿದೆ. ಅದನ್ನು ಒಂದು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂದೂ ಮತ್ತು ಸಂಚಾರಿಗಳಿಗೆ ಏನೇನು ಸೌಲಭ್ಯಗಳು ಬೇಕೋ ಅವನೆಲ್ಲ ಒದಗಿಸಬೇಕೆಂದೂ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರುವ ಬೇಡಿಕೆಯನ್ನು ವಿರೋಧಿಸುತ್ತ ನಾನು ಕೆಲವು ವಿಚಾರಗಳನ್ನು ಮೈಸೂರು ಸರ್ಕಾರದ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ಇವೊತ್ತಿನ ದಿವಸ ಒಂದು ವಿಷಾದದ ಸಂಗತಿ ಎಂದರೆ, ಹರಿಜನರ ಬೇಡಿಕೆ ಚರ್ಚೆಯಾಗುವಾಗ ಅದು ನಮಗೆ ಏನು ಸಂಬಂಧ ಎನ್ನುವ ಹಾಗೆ ಸಭೆಯ ಸದಸ್ಯರು ಎರಡು ಕಡೆಗಳಲ್ಲೂ ಬಹಳ ವಿರಳವಾಗಿದ್ದಾರೆ. ಇದು ಬಹಳ ದುಃಖದ ಸಂಗತಿ. ಏಕೆಂದರೆ, ಇವೊತ್ತು ನಾವು ನಾಡನ್ನು ಕಟ್ಟಲಿಕ್ಕೆ ಹೊರಟಿರುವವರು, ಸಮಾಜವನ್ನು ಕಟ್ಟಲಿಕ್ಕೆ ಹೊರಟಿರುವವರು, ಪ್ರತಿಯೊಬ್ಬರಿಗೂ ಹರಿಜನರ ವಿಚಾರದಲ್ಲಿ ಆಸಕ್ತಿ ಇರಬೇಕು ; ಅವರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ, ನಾಡಿಗೆ ಹೊಸ ಚೈತನ್ಯ ತುಂಬುವುದರಲ್ಲಿ ಆಸಕ್ತಿ ಇರಬೇಕು. ಇದನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ.

ಈ ಹೊತ್ತಿನ ದಿವಸ 1968-69 ರ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಯನ್ನು ನೋಡಿದಾಗ ಮಾನ್ಯ ಸಚಿವರು ಹೊಸದಾಗಿ ಏನನ್ನೂ ಈ ಬೇಡಿಕೆಗೆ ಶಕ್ತಿಯನ್ನು ತಂದು ಕೊಟ್ಟಿಲ್ಲ ಎನ್ನುವ ಮಾತನ್ನು ವಿಷಾದದಿಂದ ಅವರ ಗಮನಕ್ಕೆ ತರುತ್ತೇನೆ. ಈ ಬಜೆಟ್‌ನಲ್ಲಿ ಈ ವರ್ಷ ಸುಮಾರು ಹಿಂದುಳಿದ ಜನಾಂಗಗಳಿಗಾಗಿ 62 ಲಕ್ಷ 35 ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಬೇಡಿಕೆ 3,24,99,000 ರೂಪಾಯಿ ಇದ್ದರೂ ಕೂಡ ಹಿಂದುಳಿದ ವರ್ಗಗಳ ಕಲ್ಯಾಣದ ಸಲುವಾಗಿ ಕೊಟ್ಟಿರುವುದು ಕೇವಲ 62,35,000 ರೂಪಾಯಿಗಳು, ಸಿಬ್ಬಂದಿಯ ಸಲುವಾಗಿ 30 ಲಕ್ಷ ರೂಪಾಯಿ. ಇದನ್ನು ನೋಡಿದಾಗ ಎಲ್ಲವೂ ಕೂಡಿ ಸುಮಾರು 92 ಲಕ್ಷ ರೂಪಾಯಿಗಳಾಗುತ್ತವೆ. ಇದನ್ನು ಬಿಟ್ಟು ಸರ್ಕಾರದವರು ಯಾವ ಒಂದು ಹೆಚ್ಚಳವನ್ನೂ ಮಾಡಿಲ್ಲ. 1961ರ ಜನಗಣತಿ ಲೆಕ್ಕದ ಪ್ರಕಾರ ಜನಸಂಖ್ಯೆಯನ್ನು ತೆಗೆದುಕೊಂಡಾಗ ಮೈಸೂರು ರಾಜ್ಯದಲ್ಲಿ ಹರಿಜನರು ಸುಮಾರು 32 ಲಕ್ಷ, ಟ್ರೈಬ್ಸ್ 2 ಲಕ್ಷ, ಡೀನೋಟಿಫೈಡ್ ಟ್ರೈಬ್ಸ್ 8,10,000 ಮತ್ತು ನೊಮ್ಯಾಡಿಕ್, ಸೆಮಿ ನೊಮ್ಯಾಡಿಕ್ 4,15,000 ಹೀಗೆ ಒಟ್ಟು 46 ಲಕ್ಷ ಜನಾಂಗ ಈ ರೀತಿ ಇದ್ದಾರೆ. ಈ ಜನಾಂಗದ ಸಲುವಾಗಿ ಸರ್ಕಾರದವರು 62 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಇಟ್ಟುಕೊಂಡಿದ್ದಾರೆ. ಅಂದರೆ ಸುಮಾರು 23,28,000 ರೂಪಾಯಿಗಳು ಶಿಕ್ಷಣದ ಸಲುವಾಗಿ, 4,03,000 ರೂಪಾಯಿಗಳು ಆರ್ಥಿಕಾಭಿವೃದ್ಧಿಯ ಸಲುವಾಗಿ, 6,25,000 ರೂಪಾಯಿ ಆರೋಗ್ಯ ಮತ್ತು ಗೃಹ ನಿರ್ಮಾಣ ಮತ್ತು ಇತರ ಯೋಜನೆಗಳ ಸಲುವಾಗಿ ಷೆಡ್ಯೂಲ್ಡ್ ಕ್ಯಾಸ್ಟ್ ಜನಾಂಗದವರ ಸಲುವಾಗಿ ಇಟ್ಟಿದ್ದಾರೆ. ಷೆಡ್ಯೂಲ್ಡ್ ಟ್ರೈಬ್ಸ್ ಸಲುವಾಗಿ, 3,70,000 ರೂಪಾಯಿಗಳನ್ನು ಶಿಕ್ಷಣದ ಸಲುವಾಗಿ 1,70,000 ರೂಪಾಯಿಗಳನ್ನು ಆರ್ಥಿಕಾಭಿವೃದ್ಧಿಯ ಸಲುವಾಗಿ, 1,37,000 ರೂಪಾಯಿಗಳನ್ನು ಆರೋಗ್ಯ ಮತ್ತು ಇತರ ಖರ್ಚುಗಳಿಗಾಗಿಯೂ, ನೊಮ್ಯಾಡಿಕ್ ಮತ್ತು ಸೆಮಿ ನೊಮ್ಯಾಡಿಕ್ ಸಲುವಾಗಿ 3,35,000 ರೂಪಾಯಿಗಳನ್ನು ಶಿಕ್ಷಣದ ಸಲುವಾಗಿಯೂ, ಆರ್ಥಿಕಾಭಿವೃದ್ಧಿಯ ಸಲುವಾಗಿ 85,000 ರೂಪಾಯಿಗಳನ್ನೂ, ಆರೋಗ್ಯ ಮತ್ತು ಇತರೆ ಖರ್ಚುಗಳಿಗಾಗಿ 55,000 ರೂಪಾಯಿಗಳನ್ನೂ, ಈ ರೀತಿ ಒಟ್ಟು 62 ಲಕ್ಷ ರೂಪಾಯಿಗಳನ್ನು ಈ ಸಾಲಿನಲ್ಲಿ ಇಟ್ಟುಕೊಂಡಿದ್ದಾರೆ. ಇದನ್ನು ನೋಡಿದಾಗ ಮೈಸೂರು ಸರ್ಕಾರದವರು ತಮ್ಮ ಯಾವುದೇ ಹೆಚ್ಚು ಉಳಿಕೆಯನ್ನು ಈ ವರ್ಷದ ಬಜೆಟ್ಟಿನಲ್ಲಿ ಹಾಕಿಲ್ಲ.

ಮಕ್ಕಳ ಶಿಕ್ಷಣದ ಸಲುವಾಗಿ ಅಂಕಿ ಸಂಖ್ಯೆಗಳನ್ನು ನೋಡಿದಾಗ ಹಿಂದೆ ಸ್ಕಾಲರಷಿಪ್‌ಗಾಗಿ ಎಷ್ಟು ಹಣವಿತ್ತೋ ಅಷ್ಟೇ ಹಣವನ್ನು ಈ ಸಲವೂ ಇಟ್ಟುಕೊಂಡಿದ್ದಾರೆ. ಒಂದು ಸಲ ನಾನು ಚುಕ್ಕೆ ಗುರುತಿನ ಪ್ರಶ್ನೆ ಕೇಳಿದಾಗ ಮಾನ್ಯ ಶಿಕ್ಷಣ ಸಚಿವರು 8-9 ಲಕ್ಷ ರೂಪಾಯಿಗಳು ಪ್ರತಿ ವರ್ಷವೂ ಕಡಮೆ ಬೀಳುತ್ತಿದೆ, ಅದರ ಸಲುವಾಗಿ ಹೆಚ್ಚುವರಿಯನ್ನು ಕೇಂದ್ರ ಸರಕಾರಕ್ಕೆ ಕೇಳುತ್ತಿ

(ಶ್ರೀ ಎಸ್. ಎಸ್. ಅರಕೇರಿ)

ದ್ದೇವೆ ಎಂದು ಹೇಳಿದರು. ಆ ಕಾಲದಲ್ಲಿ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳೂ ಈ ಮಾನ್ಯ ಸಭೆಯಲ್ಲಿ ಇದ್ದರು. ಈ ಹೊತ್ತಿನ ದಿವಸ ಅವರು ಕೊಟ್ಟಿರುವ ಅಂಕಿ ಸಂಖ್ಯೆಗಳನ್ನು ನೋಡಿದರೆ ಕೇಂದ್ರ ಸರ್ಕಾರದಿಂದ ಬಂದದ್ದು ಕೇವಲ 17,70,000 ರೂಪಾಯಿಗಳು. ಪ್ರತಿವರ್ಷ ಪೋಸ್ಟ್ ಮೆಟ್ರಿಕ್ಯುಲೇಷನ್ ಶಿಕ್ಷಣದ ಸಲುವಾಗಿ ಕೊಡುತ್ತಿದ್ದುದು 17,42,000 ರೂಪಾಯಿ ಎಂದು ಹೇಳಿದಾಗ ನಮ್ಮ ಸಮಾಜ ಕಲ್ಯಾಣ ಮಂತ್ರಿಗಳು ಬಂದು ಒಂದು ವರ್ಷವಾದರೂ ಕೂಡ ಸುಮಾರು 28 ಸಾವಿರ ರೂಪಾಯಿಗಳು ಬಂದುವೇ ಹೊರತು ಸಭೆಯಲ್ಲಿ ಅವರು ಏನು ಆಶ್ವಾಸನೆಯನ್ನು ಕೊಟ್ಟಿದ್ದರು, ಎರಡು ಮೂರು ಲಕ್ಷ ರೂಪಾಯಿಗಳನ್ನಾದರೂ ಕೇಂದ್ರ ಸರ್ಕಾರದಿಂದ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಏನು ಹೇಳಿದ್ದರು ಅದು ಸಾಧ್ಯವಾಗಿಲ್ಲ. 1,30,000 ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಸಿಕ್ಕಲಾರದೆ ಪ್ರತಿ ವರ್ಷವೂ ಅವರು ಕಷ್ಟಪಡುತ್ತಿದ್ದಾರೆ. 93,000 ವಿದ್ಯಾರ್ಥಿಗಳಿಗೆ ಮಾತ್ರ ಸ್ಕಾಲರ್‌ಷಿಪ್ ಸಿಕ್ಕುತ್ತಿದೆ. ಇದರಿಂದ ಕಾಲೇಜು ವಿದ್ಯಾರ್ಥಿಗಳಿಗೆ ಅನೇಕರಿಗೆ ಮತ್ತು ಹೈಸ್ಕೂಲು ವಿದ್ಯಾರ್ಥಿಗಳಿಗೆ ಹೊಸ ತೊಂದರೆ ನಿರ್ಮಾಣವಾಗುತ್ತಿದೆ. ಷೆಡ್ಯೂಲ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ಸೇರಿದ ಎಲ್ಲ ವಿದ್ಯಾರ್ಥಿಗಳಿಗೂ ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳಲ್ಲಿ ಫೀಜು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ನೋಡಿದಾಗ ಸರ್ಕಾರದವರು ಅಂಥ ಪ್ರೈಮರಿ ಮತ್ತು ಹೈಸ್ಕೂಲುಗಳಿಗೆ ಸಹಾಯ ಧನವನ್ನು ಎಲ್ಲಿಸಬೇಕು. ಹರಿಜನರ ಏಳಿಗೆಯಾಗಬೇಕಾದರೆ, ಹರಿಜನರ ಉದ್ಧಾರವಾಗಬೇಕಾದರೆ ಶಿಕ್ಷಣದ ಬಾಬಿನ ಸಲುವಾಗಿ ಸರಿಯಾದ ಮೊತ್ತವನ್ನು ಮುಂದಿನಿಂದ ಆದರೂ ಕೊಡಬೇಕು ಎನ್ನುವಂಥ ಸೂಚನೆಯನ್ನು ಸರ್ಕಾರಕ್ಕೆ ಕೊಟ್ಟು ಆ ರೀತಿ ಮಾಡಬೇಕು ಎಂದು ಬಹಳ ಅಂತಃಕರಣ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಕೇಂದ್ರ ಸರ್ಕಾರದವರು ಈ ಸಲ ಸುಮಾರು ಕೇಂದ್ರೀಯ ಯೋಜನೆಗಳಿಗೆ ಸಹಾಯ ಧನವಾಗಿ 27,10,000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಷೆಡ್ಯೂಲ್ ಕ್ಯಾಸ್ಟ್‌ನವರಿಗೆ 18,70,000 ರೂಪಾಯಿ, ಡೀನೋಟಿಫೈಡ್ ಟ್ರೈಬ್ಸ್‌ಗೆ 1,76,000 ರೂಪಾಯಿ, ಷೆಡ್ಯೂಲ್ ಟ್ರೈಬ್ಸ್ ಸಲುವಾಗಿ 5,90,000 ರೂಪಾಯಿ, ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್ ಸಲುವಾಗಿ ಸುಮಾರು 74,000 ರೂಪಾಯಿ ಈ ರೀತಿಯಾಗಿ ಕೊಟ್ಟಿದ್ದಾರೆ. 27 ಲಕ್ಷದಲ್ಲಿ ಶಿಕ್ಷಣದ ಸಲುವಾಗಿ ಕೇವಲ 17 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೂರು ವರ್ಷಗಳ ಅಂಕಿಗಳನ್ನು ನೋಡಿದಾಗ ಹರಿಜನರಿಗೆ ಸರ್ಕಾರದವರು ಯಾವುದೇ ರೀತಿಯಲ್ಲಿ ಹೆಚ್ಚು ಸಹಾಯವನ್ನು ಕೊಡಲು ಪ್ರಯತ್ನ ಮಾಡಿಲ್ಲ ಎಂದು ಹೇಳಲು ದುಃಖವೆನಿಸುತ್ತದೆ. ಈಗ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಮುಂದುವರಿದ ಶಿಕ್ಷಣಕ್ಕೆ ಹೋಗಬೇಕು ಎಂದರೆ ನಿರಾಶಾದಾಯಕವಾದ ಪರಿಸ್ಥಿತಿ ಒದಗುತ್ತಿದೆ. ಸೋಷಿಯಲ್ ವೆಲ್‌ಫೇರ್ ಡೈರೆಕ್ಟರು ಮತ್ತು ಅವರ ಸಿಬ್ಬಂದಿ ಇದರ ಬಗ್ಗೆ ಹೆಚ್ಚು ಗಮನ ಕೊಟ್ಟು ಮಂತ್ರಿಗಳಿಗೆ ಹೆಚ್ಚಿನ ಪ್ರಕಾಶವನ್ನು ತರಬೇಕೆಂದು ಒಂದು ಸೂಚನೆಯನ್ನು ಮಾಡುತ್ತಿದ್ದೇನೆ.

ಅಸ್ಪೃಶ್ಯತಾ ನಿವಾರಣೆಗಾಗಿ ಕಳೆದ ಮೂರು ವರ್ಷಗಳಿಂದ ನೋಡಿದರೆ ಸರ್ಕಾರದವರು ಪ್ರತಿ ವರ್ಷ 18,000 ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ವರ್ಷ ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹರಿಜನರ ಪ್ರಚಾರಕ್ಕೆ, ಎಂದರೆ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ಕೆ ಎಷ್ಟು ಮಟ್ಟಿಗೆ ಇದರಲ್ಲಿ ವಿನಿಯೋಗವಾಗಿದೆ ಎನ್ನುವುದು ನನಗೆ ಶಂಕೆಯಾಗಿದೆ. ಹರಿಜನ ಸೇವಕ ಸಂಘ ಈ ದುಡ್ಡನ್ನು ತಿನ್ನುತ್ತಿದೆ. ಹಳ್ಳಿಗಳಲ್ಲಿ ಆಗಲೀ, ಬೇರೆ ಎಲ್ಲಿಯೇ ಆಗಲೀ ಅಸ್ಪೃಶ್ಯತಾ ನಿವಾರಣಾ ಕಾರ್ಯ ಹರಿಜನ ಪ್ರಚಾರ ಕಾರ್ಯ, ನಡೆಯುತ್ತಿಲ್ಲ. ಈ ಸಮಿತಿ ಈ ರಾಜ್ಯದಲ್ಲಿ ನಿರುಪಯೋಗವಾಗಿದೆ, ದೇಶದಲ್ಲಿ ನಿರ್ಬಲವಾಗಿ ಕೆಲಸ ಮಾಡುತ್ತಿದ. ಗಾಂಧೀಜಿಯವರು ಇದ್ದಾಗ ಯಾವ ರೀತಿ ಕೆಲಸ ಮಾಡುತ್ತಿತ್ತು ಎಂದು ನೆನೆಸಿಕೊಂಡರೆ ಈಗ ಕೇವಲ ಶೂನ್ಯವಾಗಿ ನಡೆದಿದೆ ಎಂದು ಹೇಳಬಹುದು. ಕಾಂಗ್ರೆಸ್ ಸರ್ಕಾರ 20 ವರ್ಷಗಳಲ್ಲಿ ಹರಿಜನರ ಸಲುವಾಗಿ ಎಷ್ಟು ಉದಾಸೀನದಿಂದ ನಡೆಯುತ್ತಿದೆ ಎಂದು ನೋಡಿದಾಗ ಈ ಸಮಿತಿಯ ಕೆಲಸವೂ ಅದೇ ರೀತಿ ಆಗಿದೆ ಎನ್ನುವುದು ಸ್ಪಷ್ಟವಾಗಿ ಕಾಣಿಸುತ್ತದೆ. ನಮ್ಮ ರಾಜ್ಯ ಸರ್ಕಾರದವರು ಒಂದು ವರ್ಷಕ್ಕೆ ಸರಾಸರಿ ಒಬ್ಬ ಹರಿಜನನಿಗೆ 90 ಪೈಸೆ ಖರ್ಚು ಮಾಡುತ್ತಿದ್ದರೆ ಕೇಂದ್ರ ಸರ್ಕಾರದವರು 35 ಪೈಸೆ ಖರ್ಚು ಮಾಡುತ್ತಿದ್ದಾರೆ. ಇದು ಬಹಳ ದುರದೃಷ್ಟಕರವಾದುದು ಎಂದು ಕಾಣಿಸುತ್ತದೆ. ಇನ್ನು ಮುಂದಾದರೂ ಸರ್ಕಾರದವರು ಆದಷ್ಟುಮಟ್ಟಿಗೆ ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಲು ಪ್ರಯತ್ನ ಮಾಡಬೇಕು. ಈ ಹೊತ್ತಿನ ದಿವಸ ಸುಮಾರು 50 ಲಕ್ಷ ಹರಿಜನರು ಕನ್ನಡ ನಾಡಿನಲ್ಲಿದ್ದಾರೆ. ದೇಶದಲ್ಲಿ ಸುಮಾರು ಏಳೂವರೆ, ಎಂಟು ಕೋಟಿ ಹರಿಜನರಿದ್ದಾರೆ.

(ಈ ಶಾಸನ ಗ್ರಂಥಾಲಯ) 4854
ಪರಿಗ್ರಹಣ ಕ್ರಮಾಂಕ Accession No.........
ದಿನಾಂಕ Date..........

ಇದನ್ನು ನೋಡಿದರೆ ಸರಕಾರದವರು ಸಾಕಷ್ಟು ಪ್ರಯತ್ನ ಮಾಡದಿರುವುದರಿಂದ ಆಗಬೇಕಾದಷ್ಟು ಅನುಕೂಲಗಳಾಗಿಲ್ಲವೆಂಬುದು ಕಂಡುಬರುತ್ತದೆ. ಮಹಾತ್ಮ ಗಾಂಧೀಜೀಯವರು ಹೇಳಿರುವುದನ್ನು ಸರಕಾರ ಬಹುಶಃ ಮರೆತಿರುವಂತೆ ಕಾಣುತ್ತದೆ. ಹಿಂದುಳಿದವರಿಗಾಗಿ ಒದಗಿಸುವ ಹಣವನ್ನು ಸರಿಯಾಗಿ ಖರ್ಚು ಮಾಡದಿದ್ದರೆ ಹೇಗೆತಾನೆ ಅವರಿಗೆ ಅನುಕೂಲವಾದೀತು? ಡಾ|| ಅಂಬೇಡ್ಕರ್‌ರವರು ಒಂದು ಮಹತ್ವವಾದ ವಿಚಾರವನ್ನು ಹೇಳಿದ್ದಾರೆ. ಜಗತ್ತಿನಲ್ಲಿ ಅವರು ಮಹನೀಯರು ಅರ್ಥ ಶಾಸ್ತ್ರಜ್ಞರು ಮತ್ತು ರಾಜನೀತಿ ಶಾಸ್ತ್ರಜ್ಞರು ಆಗಿದ್ದ ಡಾ|| ಅಂಬೇಡ್ಕರ್ ಪ್ರಸಿದ್ಧ ಇತಿಹಾಸಕಾರರೂ ಆಗಿದ್ದರು ಅಂಬೇಡ್ಕರ್‌ರರು ಈ ರೀತಿ ಹೇಳಿದ್ದಾರೆ:

> "No country will be grateful to another Country at the cost of her freedom, No man will be grateful to another man at the cost of his self-respect, and no woman will be grateful to a man at the cost of her chastity."

ಹರಿಜನರಿಗೆ ಸರಕಾರ ಸಹಾಯ ಮಾಡಿದರೆ ಉಪಕಾರ ಮಾಡಿದ ಹಾಗೆ ಅಲ್ಲ. ಅದು ಕರ್ತವ್ಯವಾಗಿದೆ. ಹರಿಜನರ ಮೇಲೆ ಉಪಕಾರ ಮಾಡಿರುವೆವು ಎಂಬ ಮನೋಭಾವನೆ ಇರುವುದು ತಪ್ಪು. ಸಮಾಜದಲ್ಲಿ ಕಳಂಕ ಹೋಗಲಾಡಿಸುವುದು ಸರಕಾರದ ಪರಮ ಗುರಿ. ಈ ದಿವಸ ಬೇರೆ ದೇಶಗಳನ್ನು ನೋಡಿದರೆ, ನೀಗ್ರೋಗಳಿರುವ ದೇಶ ಗುಲಾಮಗಿರಿ ಇರುವ ದೇಶಗಳನ್ನು ನೋಡಿದರೆ ಅವುಗಳೊಡನೆ ತುಲನಮಾಡಿದರೆ ಅಲ್ಲಿ ಹಿಂದುಳಿದವರಿಗಾಗಿ ಏನು ಅನುಕೂಲ ಕಲ್ಪಿಸಿದ್ದಾರೆ, ಅದರಂತೆ ನಾವೂ ಕಲ್ಪಿಸಬೇಕು ಎಂಬ ಭಾವನೆ ಸರಕಾರಕ್ಕೆ ಬರುವುದು. ಹಾಗೆ ಮಾಡದಿದ್ದರೆ, ಇತರ ದೇಶಗಳವರನ್ನು ನೋಡಿ ಕಲಿಯದಿದ್ದರೆ ಎಷ್ಟು ಹಣ ಹಿಂದುಳಿದವರಿಗಾಗಿ ಕೊಟ್ಟರೂ ಪ್ರಯೋಜನವಾಗುವುದಿಲ್ಲ, ಸರಿಯಾದ ಯೋಜನೆ ಮಾಡುವುದಕ್ಕೆ ಬರುವುದಿಲ್ಲ.

ಇನ್ನು ಹರಿಜನರಿಗೆ ದೊಡ್ಡ ಕಂಟಕ ಏನಿದೆಯೆಂದರೆ ನಿರುದ್ಯೋಗ ಸಮಸ್ಯೆ. ಇದು ದೇಶದಲ್ಲಿ ಬಹಳ ಭೀಕರವಾಗಿದೆ. ಒಂದಾನೊಂದು ಕಾಲದಲ್ಲಿ ಹಿಂದುಳಿದ ಜನಾಂಗದಲ್ಲಿ ಪದವೀಧರರಿರಲಿಲ್ಲ, [illegible] ಅವರು ಬೇಕಾದಷ್ಟಿದ್ದಾರೆ, ಅವರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ತಮ್ಮ ಹೆಸರು[illegible]ನ್ನು ರಿಜಿಸ್ಟರು ಮಾಡಿಸಿ ಬೀದಿ ಬೀದಿ ಅಲೆಯುತ್ತಿದ್ದಾರೆ. ಮುಖ್ಯ ಮಂತ್ರಿಗಳಿಗೆ ಈ ವಿಚಾರವನ್ನು ಹೇಳಿದಾಗ ಆ ಬಗ್ಗೆ ಒಂದು ಪಟ್ಟಿ ಕೊಡುವಂತೆ ತಿಳಿಸಿದರು. ಆದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜು ಮಾಡಿರುವುದಾದರೂ ಏನು? ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಎಂಪ್ಲಾಯಮೆಂಟ್ ಸೆಲ್ ಮಾಡಿದ್ದಾರೆ, ಆ ಇಲಾಖೆಗಳವರು ಬೇರೆ ಇಲಾಖೆಗಳವರಿಗೆ ಹಿಂದುಳಿದ ಉಮೇದುವಾರರ ಹೆಸರುಗಳನ್ನು ರೆಕಮೆಂಡ್ ಮಾಡಿದರೆ ಆಯಾ ಇಲಾಖೆಗಳ ಒಬ್ಬ ಅಧಿಕಾರಿಗಳ ಮೂಗು ಮುರಿಯುತ್ತಾರೆ. ಹೀಗಾದರೆ ಹರಿಜನರ ಕ್ಷೇಮಾಭ್ಯುದಯ ಹೇಗೆತಾನೆ ಸಾಧಿಸೀತು? ಸೋಷಿಯಲ್ ವೆಲ್‌ಫೇರದಿಂದ ಕಳಿಸಿದ ಉಮೇದುವಾರರಿಗೆ ಸರಿಯಾದ ಬೆಲೆ ಇಲ್ಲದೆ ಇದ್ದರೆ ಸ್ಥಾನಮಾನವಿಲ್ಲದಿದ್ದರೆ ಇಂಥ ಇಲಾಖೆಗಳಿಗೇಕೆ ಹಣ ಖರ್ಚು ಮಾಡಬೇಕು? ಈ ಇಲಾಖೆಗಳವರು ಕಳುಹಿಸುವ ಪಟ್ಟಿಯಲ್ಲಿರುವವರನ್ನೇಕೆ ಕೆಲಸಕ್ಕೆ ಬೇರೆ ಇಲಾಖೆಯ ಮುಖ್ಯಾಧಿಕಾರಿಗಳು ತೆಗೆದುಕೊಳ್ಳುವುದಿಲ್ಲ? ಈ ಬಗ್ಗೆ ಮಂತ್ರಿಗಳೇನು ಕ್ರಮ ತೆಗೆದುಕೊಂಡಿದ್ದಾರೆ? ನವೆಂಬರ್ 67ರಲ್ಲಿ ಚೀಫ್ ಸೆಕ್ರೆಟರಿಯವರು ಒಂದು ಗವರ್ನಮೆಂಟ್ ಆರ್ಡರನ್ನು ಹೊರಡಿಸಿ ಹರಿಜನರಿಗೆ ಸೇಕಡ 15 ಮತ್ತು ಗಿರಿಜನರಿಗೆ ಸೇಕಡ 3 ಹುದ್ದೆಗಳನ್ನು ಹೀಗೆ ಒಟ್ಟು ಸೇಕಡ 18 ಹುದ್ದೆಗಳನ್ನು ಕೊಡುವಂತೆ ಆಯಾ ಇಲಾಖೆಗಳಿಗೆ ತಿಳಿಸಿದ್ದಾರೆ. ಆದರೆ ಅದಕ್ಕೆ ಟೈಂ ಲಿಮಿಟ್ ಹಾಕಿಲ್ಲ. ಎಷ್ಟು ದಿವಸಗಳಲ್ಲಿ ತುಂಬಿ ಕೊಡಬೇಕೆಂಬುದನ್ನು ನಮೂದುಮಾಡಿಲ್ಲ. ಅದರ ಪ್ರಕಾರ ಕೆಲಸಗಳನ್ನು ಹರಿಜನ—ಗಿರಿಜನರಿಗೆ ಕೊಡದಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ದಂಡವನ್ನು ವಿಧಿಸುತ್ತಾರೆಂಬ ಭಯವಿರಬೇಕು. ಮಂತ್ರಿಗಳು ವಿಚಾರಮಾಡಿ 6 ತಿಂಗಳು ಅಥವಾ ವರ್ಷದೊಳಗೆ ಸೇಕಡ 18 ಹುದ್ದೆಗಳನ್ನು ಸರಕಾರಿ ಆಜ್ಞೆ ಪ್ರಕಾರ ಹರಿಜನರಿಗೆ ನೌಕರಿ ಭರ್ತಿ ಮಾಡದಿದ್ದರೆ 500 ರೂಪಾಯಿ ದಂಡ ಮತ್ತು 3 ತಿಂಗಳು ಶಿಕ್ಷೆಯನ್ನು ಕಾನೂನಿನ ಪ್ರಕಾರ ವಿಧಿಸುವುದಾಗಿ ಸೀರಿಯಸ್ ವಾರ್ನಿಂಗನ್ನು ಅಧಿಕಾರಿಗಳಿಗೆ ಕೊಡಬೇಕು. ಬೀರಪ್ಪ ಕಮಿಟಿ ವರದಿಯನ್ನು ನೋಡಿದರೆ ವಿಷಾದವಾಗುತ್ತದೆ, 1960ರಲ್ಲಿ ಆ ಸಮಿತಿಯನ್ನು ರಚಿಸಿದರು, 1962ರಲ್ಲಿ ಆ ಸಮಿತಿಯವರು ವರದಿ ಕೊಟ್ಟಿದ್ದಾರೆ. ಅದರಲ್ಲಿ ಬಹಳ ಉತ್ತಮವಾದ ಸಲಹೆಗಳಿವೆ. ಆದರೆ ಮೈಸೂರು ಸರಕಾರ ಅದನ್ನು ಇನ್ನೂ ಜಾರಿಗೆ ತಂದಿಲ್ಲ. ಅದನ್ನು ಜಾರಿಗೆ ತರಲು ಕಷ್ಟ ಎಂದು ಕೈಬಿಟ್ಟಿದ್ದೇವೆ ಎಂಬುದಾಗಿ ಮುಖ್ಯ ಮಂತ್ರಿಗಳು ಈ ಮಾನ್ಯ ಸಭೆಯಲ್ಲಿ ಹೇಳಿದ್ದಾರೆ. ಅದನ್ನು ಜಾರಿಗೆ ಕೊಡುವುದರಲ್ಲೇನು ತೊಂದರೆಯಿದೆ? ಕೆಲಸಗಳಲ್ಲಿ ಹಿಂದುಳಿದವರಿಗೆ ಕೊಟ್ಟಿರುವ

(ಶ್ರೀ ಎಸ್. ಎಸ್. ಅರಕೇರಿ)

ಪ್ರಾತಿನಿಧ್ಯ ನೋಡಿದರೆ ದುಃಖವಾಗುತ್ತದೆ, ಷೆಡ್ಯೂಲ್ಡ್ ಕ್ಯಾಸ್ಟಿನವರು 1962ರಲ್ಲಿ ಎಷ್ಟು ಜನರು ಹುದ್ದೆಗಳಲ್ಲಿದ್ದರು ಎಂಬುದಕ್ಕೆ ವಿವರವಿದೆ, ಅಲ್ಲಿಂದೀಚೆಗೆ ಹೆಚ್ಚು ಬದಲಾವಣೆಯಾಗಿರುವಂತೆ ಕಾಣಲಿಲ್ಲ, ಸೇಕಡ ಒಂದರಷ್ಟು ಹೆಚ್ಚಾಗಿರಬಹುದು. ಆಗ ಷೆಡ್ಯೂಲ್ಡ್ ಕ್ಯಾಸ್ಟಿನವರು ಈ ರೀತಿ ಹುದ್ದೆಗಳಲ್ಲಿದ್ದರು : ಕ್ಲಾಸ್ ಒಂದನೆ ಹುದ್ದೆಯಲ್ಲಿ 1.89, ಕ್ಲಾಸ್ ಎರಡನೆಯದರಲ್ಲಿ 3.36 ಜನ, ಕ್ಲಾಸ್ ಮೂರರಲ್ಲಿ 6.38, ಕ್ಲಾಸ್ 4 ರಲ್ಲಿ 11. 96, ಒಟ್ಟು ಸರಾಸರಿ ಸೇಕಡ 7 ಇದ್ದರು. ಷೆಡ್ಯೂಲ್ಡ್ ಟ್ರೈಬ್ಸ್‌ನವರು ಕ್ಲಾಸ್ ಒಂದರಲ್ಲಿ 0.24, ಕ್ಲಾಸ್ 2 ರಲ್ಲಿ 0.24, ಕ್ಲಾಸು 3ರಲ್ಲಿ 0. 43 ಮತ್ತು ಕ್ಲಾಸು 4 ರಲ್ಲಿ 1.10 ಇದ್ದರು. ಉಳಿದ ಕಮ್ಯೂನಿಟಿಯವರು ಕ್ಲಾಸು ಒಂದರಲ್ಲಿ 97, ಕ್ಲಾಸು 2ರಲ್ಲಿ 96, ಕ್ಲಾಸು 3 ರಲ್ಲಿ 93, ಕ್ಲಾಸು 4 ರಲ್ಲಿ 86, ಆವರೇಜ್ 91 ಜನ ಇದ್ದರು, ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಟ್ರೈಬ್ಸ್‌ನವರು ಸೇಕಡ 7 ಮಂದಿ ಇದ್ದರು ಎಂದು ತಿಳಿದಿದೆ. ಈ ಸಂಗತಿ ರಾಜ್ಯ ಸರಕಾರಕ್ಕೆ ಹೆಸರು ಕೆಡಿಸುವಂತಹುದು ಮತ್ತು ನಾಚಿಕೆಕೇಡು, ಈಗ ಸೇಕಡ 2 ಹೆಚ್ಚಾಗಿರಬಹುದು. ಒಂದೊಂದು ಇಲಾಖೆಯಲ್ಲಿ ಪರ್ಸೆಂಟೇಜ್ 2 ಕೂಡ ಆಗಿಲ್ಲ. ಹೀಗಿರುವಾಗ 20 ವರ್ಷಗಳಲ್ಲಿ ಈ ಸಂಬಂಧದಲ್ಲಿ ಕಾಂಗ್ರೆಸ್ ಸರಕಾರ ಮಾಡಿರುವುದಾದರೂ ಏನು ? ಬೀರಪ್ಪ ಸಮಿತಿ ವರದಿಯಲ್ಲಿ ಅನೇಕ ಮಹತ್ವವುಳ್ಳ ವಿಷಯಗಳಿವೆ. 25 ನೆಯ ಪುಟವನ್ನು ನೋಡಬಹುದು. ತೀರ ಕನಿಷ್ಟ ಶೇಕಡ ಇದ್ದದ್ದನ್ನು ಈಗ್ಗೆ ಶೇಕಡ 18ಕ್ಕೆ ಏರಿಸಲು ಅವಕಾಶವಿದೆ. ಬೀರಪ್ಪ ಸಮಿತಿ ವರದಿಯಲ್ಲಿ ಹೀಗೆ ತಿಳಿಸಿದ್ದಾರೆ.

> " For a period of 10 years, the percentage of reservation for Class I posts be raised to 25 per cent ; for Class II posts to 30 per cent ; Class III posts to 40 per cent ; and for Class IV posts to 50 per cent."

ಈ ರೀತಿ ಮುಂದಿನ 10 ವರ್ಷಗಳಲ್ಲಿ ಏರಿಸಿದರೆ ಸೇಕಡ 18 ಆಗಬಹುದು, ಮುಂದೆ ಸರಿಹೋಗುವುದು ಎಂದು ತಿಳಿಸಿದ್ದಾರೆ. ಇದನ್ನೇಕೆ ಸರಕಾರ ಒಪ್ಪಿಲ್ಲ ! ಒರಿಸ್ಸ, ಮಹಾರಾಷ್ಟ್ರ, ಗುಜ[illegible] ಮುಂತಾದ ಸರಕಾರಗಳವರಿಗೆ ಸ್ಪೆಷಲ್ಲಾಗಿ ರಾಜ್ಯಾಂಗದ ಆರ್ಟಿಕಲ್ 16 (4)ರ ಪ್ರಕಾರ ಅ[illegible] ಶೇಕಡ 18 ಕೊಟ್ಟಿದ್ದಾರೆ, ಹರಿಜನರ ಉದ್ಧಾರಕ್ಕೆ ಸ್ಪೆಷಲ್ ಕಾನೂನು ಮಾಡಬೇಕೆಂದು ತಿಳಿಸಿದ್ದಾರೆ. ಅದರ ಪ್ರಕಾರ ರಿಯಾಯಿತಿ ಪಡೆಯುವುದಕ್ಕೆ ಸರಕಾರಕ್ಕೆ ಮನಸ್ಸಿಲ್ಲ. ಬೀರಪ್ಪ ಸಮಿತಿಯ ವರದಿಯನ್ನು ಕೈಬಿಟ್ಟಿರುವುದು ಅನ್ಯಾಯ. ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು ಕ್ಯಾಬಿನೆಟ್ಟಿನಲ್ಲಿ ತಿಳಿಸಿ ಬೀರಪ್ಪ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರಲು ಪ್ರಯತ್ನಮಾಡಬೇಕು. ಹಾಗೆ ಮಾಡಿದರೆ ಮುಂದಿನ 15 ವರ್ಷಗಳಲ್ಲಿ ಹರಿಜನರ ನಿರುದ್ಯೋಗಗಳ ಸಮಸ್ಯೆ ನಿವಾರಣೆಯಾಗುವುದು. ಜಾತೀಯತೆಯ ನಿವಾರಣೆಗೆ ಅಸ್ಪೃಶ್ಯತಾ ನಿವಾರಣೆಗೆ ಬೀರಪ್ಪ ಸಮಿತಿಯ ವರದಿಯು ಮಾರ್ಗದರ್ಶಕವಾಗಿದೆ. ಆದುದರಿಂದ ಆ ವರದಿಯನ್ನು ಕೈಬಿಟ್ಟರೆ ಮಹಾ ಅಪರಾಧ ಮಾಡಿದಂತಾಗುತ್ತದೆ, ಹರಿಜನರಿಗೆ ಸರಕಾರ ಅನ್ಯಾಯ ಮಾಡಿದಂತಾಗುತ್ತದೆ. ಹಿಂದೆ ಪ್ರತಿ ವರ್ಷವೂ 1 ಕೋಟಿ ಹರಿಜನರಿಗಾಗಿ ಬಜೆಟ್ ಇತ್ತು. ಶ್ರೀ ನಿಜಲಿಂಗಪ್ಪನವರು ಅಧಿಕಾರಕ್ಕೆ ಬಂದಮೇಲೆ ಈಗ 60 ಲಕ್ಷಕ್ಕೆ ಇಳಿದಿದೆ. ಶ್ರೀಮತಿ ಯಶೋಧರ ದಾಸಪ್ಪನವರು ಸೋಷಿಯಲ್ ವೆಲ್‌ಫೇರ್ ಇಲಾಖೆಯನ್ನು ಹಾಳುಮಾಡಿದ್ದಾರೆ. ಹರಿಜನರ ಸಮಸ್ಯೆ ಪರಿಹಾರವಾಗುವವರೆಗೆ ಸಂಬಂಧಪಟ್ಟವರು ಹೇಳುವುದನ್ನು ಕೇಳಿ ಅವರೊಡನೆ ಚರ್ಚೆಮಾಡಿ ಸರಿಯಾದ ವ್ಯವಸ್ಥೆಮಾಡಬೇಕು. ಸೋಷಿಯಲ್ ವೆಲ್‌ಫೇರ್ ಆಫೀಸರುಗಳು ಡೆಪ್ಯುಟಿ ಕಮಿಷನರ ಕೈಕೆಳಗಿರುವುದರಿಂದ ಅವರು ಕೇವಲ ಗುಮಾಸ್ತೆಗಳಂತೆ ಕೆಲಸಮಾಡಬೇಕಾಗಿದೆ. ಮಾರ್ಚಿ 31 ರೊಳಗೆ ಒದಗಿಸಿರುವ ಹಣವನ್ನು ಖರ್ಚುಮಾಡಬೇಕಾಗಿರುತ್ತದೆ. ಆದರೆ ಇಂದೂ ಕೂಡ ಗ್ರಾಂಟಿಗೆ ಸಂಬಂಧಪಟ್ಟ ಬಿಲ್ಲುಗಳು ಮುಂತಾದುವು ಬರುತ್ತಿವೆ. ಮೊದಲೇ ಸಕಾಲದಲ್ಲಿ ಸೂಕ್ತಕ್ರಮ ತೆಗೆದುಕೊಳ್ಳದಿರುವುದರಿಂದ ಲಕ್ಷಾಂತರ ರೂಪಾಯಿ ಒದಗಿಸಿರುವುದು ಲ್ಯಾಪ್ಸ್ ಆಗುತ್ತಿದೆ, ಹೀಗಾಗಿ ಅನೇಕ ಹಾಸ್ಟೆಲುಗಳಿಗೆ ಮತ್ತು ಯೋಜನೆಗಳಿಗೆ ಅನ್ಯಾಯವಾಗಿದೆ. ಏಕೆ ಹೀಗೆ ಆಗಲು ಅವಕಾಶ ಕೊಟ್ಟಿರಿ, ಲ್ಯಾಪ್ಸ್ ಮಾಡಿದ್ದೇಕೆ ಎಂದು ಕೇಳಿ ಸೋಷಿಯಲ್ ವೆಲ್‌ಫೇರ್ ಇಲಾಖೆ ಡೈರೆಕ್ಟರನ್ನು ವಿಚಾರಮಾಡಿ ಸಂಬಂಧಪಟ್ಟವರಮೇಲೆ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು. ಕೊಡುವ ಅಲ್ಪ ಹಣದಲ್ಲೂ ಕೂಡ ಲ್ಯಾಪ್ಸ್ ಮಾಡಿದರೆ ಹೇಗೆ ಅನುಕೂಲವಾದೀತು ? ಹೀಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ಹಣವನ್ನು ಲ್ಯಾಪ್ಸ್ ಆಗಲು ಅವಕಾಶ ಕೊಟ್ಟರೆ ನಿಮ್ನವರ್ಗದವರಿಗೆ ಹೇಗೆ ನ್ಯಾಯ ದೊರೆತೀತು ?

ಬಾವಿಗಳ ವಿಚಾರ ನೋಡಿದರೆ ಹಳ್ಳಿಗಳಲ್ಲಿ ಮೂರು ವರ್ಷಗಳ ಅಂಕಿಅಂಶ ನೋಡಿದರೆ ಒಂದೂವರೆ ಲಕ್ಷ ಖರ್ಚುಮಾಡುವುದಿದೆ, ಅದರಿಂದ 20 ಬಾವಿಗಳು ಆಗಬಹುದು. ಈ ರೀತಿ ಮಾಡಿದರೆ ಎಷ್ಟು ವರ್ಷಗಳಲ್ಲಿ ಎಲ್ಲಾ ಹಳ್ಳಿಗಳಲ್ಲೂ ಹರಿಜನರಿಗೆ ಅಥವಾ ಹಿಂದುಳಿದವರಿಗೆ ಕುಡಿಯುವ ನೀರಿನ ಬಾವಿಗಳನ್ನೊದಗಿಸುವುದಕ್ಕೆ ಸರಕಾರಕ್ಕೆ ಸಾಧ್ಯವಾದೀತು ? ಹೀಗೆ ಉದಾಸೀನ ಮಾಡುವುದು ಸರಿಯಲ್ಲ ಎಂಬುದನ್ನು ಗಮನಕ್ಕೆ ತರುತ್ತೇನೆ.

ಇನ್ನು ಪಂಚಾಯಿತಿ ರಾಜ್ಯದ ವಿಚಾರ ಹೇಳುವುದಾದರೆ ಸ್ವಲ್ಪ ವಿಷಾದದಿಂದ ಹೇಳಬೇಕಾಗುತ್ತದೆ. ಭಾರತದೇಶದಲ್ಲಿ ಪ್ರಜಾರಾಜ್ಯವಿರಬೇಕು, ಪಂಚಾಯಿತಿ ರಾಜ್ಯವಿರಬೇಕು ಎಂದು ಹೇಳುವುದು ತಾತ್ವಿಕದೃಷ್ಟಿಯಿಂದ ನ್ಯಾಯವಾಗಿದೆ. ಆದರೆ ಭಾರತದಲ್ಲಿ ಅದಕ್ಕೆ ಸರಿಯಾದ ವಾತಾವರಣ ನಿರ್ಮಾಣವಾಗಿದೆಯೇ ಎಂದು ನೋಡಿದರೆ ಸುಮಾರು ಪಂಚಾಯಿತಿ ರಾಜ್ಯಬಂದು 10 ವರ್ಷಗಳಲ್ಲಿ ನಮಗಿರುವ ಅನುಭವದಂತೆ ಮತ್ತು ಕೇಂದ್ರ ಸರಕಾರದವರು ಒಂದು ವರದಿಯನ್ನು ಸಂಗ್ರಹಿಸಿದ್ದಾರೆ, ಅದರಲ್ಲಿಕೂಡ ಸ್ಪಷ್ಟವಾಗಿದೆ.

ಪಂಚಾಯ್ತಿ ರಾಜ್ಯದಿಂದ ಗ್ರಾಮಾಂತರಗಳಲ್ಲಿ ಜಾತೀಯತೆಯ ಸಮಸ್ಯೆ ಇನ್ನೂ ಉಗ್ರವಾಗಿ ಆಗುತ್ತಾ ಇವೆ; ಕಡಿಮೆ ಆಗಲಿಲ್ಲ. ಈ ಪಂಚಾಯ್ತಿಗಳಲ್ಲಿ ಮಾಡುವ ಕೆಲಸ ಏನು ? ಯಾವನೋ ಒಬ್ಬ ಹರಿಜನರನ್ನು ಮೆಂಬರ್ ಮಾಡಿಕೊಂಡು, ಅವನಿಗೆ ಪಂಚಾಯಿತಿ ಆಫೀಸಿನಲ್ಲಿ ಕೆಳಗೆ ಕೂರಿಸುತ್ತಿದ್ದಾರೆ. ತಮಗೆ ಏನು ಬೇಕೋ ಅದನ್ನು ಮಾಡಿಕೊಳ್ಳುವುದು. ಹಳ್ಳಿಗಳಲ್ಲಿ ಹರಿಜನರಿಗಾಗಿ ಇನ್ನೂ ಚಹದ ಅಂಗಡಿಗಳಲ್ಲಿ ಪ್ರವೇಶವಿಲ್ಲ ಈ ರೀತಿ ಆದರೆ ಲೋಕಲ್ ಸೆಲ್ಫ್ ಗವರ್ನ್‌ಮೆಂಟ್ ಅಂತ ಅನ್ನುವಂತಹ ತತ್ವ ಏನಿದೆ ಅದಕ್ಕೆ ಮಾನ್ಯತೆ ಕೊಟ್ಟಂತೆ ಆಗುವುದಿಲ್ಲ. ಹೀಗೆಲ್ಲಾ ಅನ್ಯಾಯಗಳು ನಡೆದರೆ ಇದು ಪ್ರಜಾರಾಜ್ಯಕ್ಕೆ ಹೆಲ್ತ್ ಸೈನೇ ? ಇವತ್ತಿನ ದಿವಸ ಪಂಚಾಯಿತಿ ರಾಜ್ಯಪದ್ಧತಿ ಸೋಷಿಯಲ್ ಪವರ್ ಎಲ್ಲಾ ಉಚ್ಚವರ್ಗದವರ ಕೈಗೆಹೋಗಿದೆ. Economic and political power has again rested with Caste Hindus. Whatever the Constitution has guaranteed social and economic rights under the Constitution to Scheduled Castes and Scheduled Tribes has again been ...ten away by the introduction of Panchayathiraj in the country this is ...ckery in the name of social justice. ಈ ರೀತಿಯಿಂದ ನಡೆದರೆ ಎಷ್ಟು ದುರ್ದೈವ, ...ಸರ್ಕಾರ ಏಕೆ ಇದಕ್ಕೆಲ್ಲಾ ಅವಕಾಶ ಕೊಟ್ಟಿದೆ ? ರಾಜಕೀಯ ಕಲಹಗಳು ಇವತ್ತು ಬೇಕಾದಷ್ಟು ಆಗುತ್ತಾ ಇವೆ. ವರ್ಷಕ್ಕೊಮ್ಮೆ ಪಂಚಾಯಿತಿ ರಾಜ್ಯಚುನಾವಣೆಯ ಕಾಲದಲ್ಲಿ ಕೊಲೆ ನಡೆಯುತ್ತಾ ಇರುತ್ತದೆ. ಬಡವರನ್ನು ಕೆಳಗೆ ದಬ್ಬುತ್ತಾ ಇರುತ್ತಾರೆ. ಇದನ್ನು ನೋಡಿದರೆ ನಾವೇನು ಹೊಸ ರಾಜ್ಯಾಂಗದ ಕಾಲದಲ್ಲಿ ಇದ್ದೇವೆಯೋ ಅಥವಾ ಹತ್ತು ಸಾವಿರ ವರ್ಷಗಳಿಗಿಂತಲೂ ಹಿಂದಿನ ಮನುಕಾಲದಲ್ಲಿದ್ದ ಪರಿಸ್ಥಿತಿಯಲ್ಲಿ ಜೀವನ ಮಾಡುತ್ತಾ ಇದ್ದೇವೆಯೋ ಅಂತ ಸಂಶಯ ಬರುತ್ತದೆ. ಗಾಂಧಿಜಿಯವರ ಮನಸ್ಸಿನಲ್ಲಿ ಏನಿತ್ತು ಅದಕ್ಕೆ ತದ್ವಿರುದ್ಧವಾಗಿ ಇವತ್ತಿನ ದಿವಸ ಕಾಂಗ್ರೆಸ್ ಸರಕಾರ ನಡೆಯುತ್ತಾ ಇರುವುದು ನಮ್ಮ ದೇಶದ ದುರ್ದೈವ. ಮೊನ್ನೆ ಕೇಂದ್ರ ಸರ್ಕಾರದ ಮಾನ್ಯ ಮಂತ್ರಿಗಳು ಬಂದಿದ್ದರು ಶ್ರೀಮಾನ್ ಜಗಜೀವನರಾಂ ಅವರು, ಅವರನ್ನು ಕೇಳಿದೆ ಸ್ವಾಮಿ, ಹಳ್ಳಿಗಳಲ್ಲಿ ಹರಿಜನರ ಪರಿಸ್ಥಿತಿ ಬಹಳ ಗಂಭೀರವಾಗಿದೆ, ಅವರ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಾ ಇದೆ ಅವರಿಗೆ ಏನಾದರೂ ಸಹಾಯ ಮಾಡಿ ಆರ್ಥಿಕ ಅಭಿವೃದ್ಧಿಮಾಡಿರಿ ಎಂದು ಹೇಳಿದ್ದಕ್ಕೆ, 50 ಕೋಳಿಗಳನ್ನು ಪ್ರತಿಹರಿಜನ ಕುಟುಂಬಕ್ಕೆ ಕೊಡ್ರಿ ಅಂತ ಹೇಳಿದರು, 50 ಕೋಳಿಗಳನ್ನು ಕೊಟ್ಟರೆ ಒಂದೇ ದಿನದಲ್ಲಿ ಅದನ್ನು ತಿಂದುಹಾಕುತ್ತಾರೆ ಏನು ಮಾಡುತ್ತೀರಿ ? ಕಾಂಗ್ರೆಸ್ ರಾಜ್ಯ ಸರಕಾರಕ್ಕೆ ಹರಿಜನರಿಗಾಗಿ ಜಮೀನು ಕೊಡುವ ವಿಚಾರ ಏನಾದರೂ ಇದೆಯೇ, ಇದ್ದರೆ ಗೋಮಾಳ ಕೊಡಿರಿ ಎಂದು ಕೇಳಿದ್ದಕ್ಕೆ, ಪಂಚಾಯ್ತಿ ರೆಸಲ್ಯೂಷನ್ ತನ್ನಿ ಅಂತ ಅನ್ನುತ್ತಾರೆ. ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಬಹಳ ನ್ಯೂನ್ಯತೆ ಇದೆ ಇವತ್ತಿನ ದಿವಸ ಗ್ರಾಮ ಪಂಚಾಯಿತಿಗಳಿಗೆ ಗೋಮಾಳಗಳನ್ನು ಏಕೆ vest ಮಾಡಬೇಕಾಗಿತ್ತು ? ಇವತ್ತೂ ಕೂಡ ನಾವು ಒಂದು age old customನಲ್ಲೇ ಇದ್ದೇವೆ. ಜಾತೀಯತೆಯ ಭಾವನೆಯಲ್ಲೇ ಇದ್ದೇವೆ. ಹರಿಜನರು ಇದ್ದಾರೆ, ಬಡವರು ಇದ್ದಾರೆ ಅವರೂ ಸಂತೋಷವಾಗಿ ಬಾಳಲಿ ಎನ್ನುವಂತಹ ಮನಸ್ಸು ಸವರ್ಣೀಯ ಜನರಲ್ಲಿ ಇಲ್ಲ. ಹಾಗಿರುವಾಗ ಪಂಚಾಯ್ತಿಯವರಿಗೆ ಆ ಅಧಿಕಾರ ಕೊಟ್ಟದ್ದೇ ಮಹಾಪರಾಧ. ಆದ್ದರಿಂದ ಇವತ್ತಿನ ದಿವಸ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಅವರು ರೆವಿನ್ಯೂ ಮಂತ್ರಿಗಳಿಗೆ ಅಥವಾ ಮುಖ್ಯ ಮಂತ್ರಿಗಳಿಗೆ ಹೇಳಿ ಜಮೀನ್‌ಗಳನ್ನು ಗ್ರಾಮ ಪಂಚಾಯತಿಯಿಂದ ತಿರುಗಿ ಸರಕಾರಕ್ಕೆ Divest ಮಾಡಿಕೊಂಡು ಹರಿಜನರಿಗೆ ಜಮೀನನ್ನು ಸರ್ಕಾರದವರು ಕೊಡಿಸಿಕೊಡಬೇಕು. ನಮ್ಮಲ್ಲಿ ಅರಣ್ಯ ಕಡಿಮೆಯಾಗುತ್ತಾ ಇದೆ ಎಂದು

(ಶ್ರೀ ಎಸ್. ಎಸ್. ಅರಕೇರಿ)

ಅನೇಕ ಸದಸ್ಯರು ಹೇಳಿದ್ದಾರೆ, ಇವತ್ತು ನಮ್ಮ ಮೈಸೂರು ರಾಜ್ಯದಲ್ಲಿ 14 ಪರ್ಸೆಂಟ್ ಅರಣ್ಯ ಇದೆ. ಉಳಿದ ಅನೇಕ ರಾಜ್ಯಗಳಲ್ಲಿ 8–9–10 ಪರ್ಸೆಂಟ್ ಇದೆ. ಹಾಗಿರುವಾಗ 4 ಪರ್ಸೆಂಟ್ ಅರಣ್ಯ ಜಮೀನು ಗಳನ್ನು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗಕ್ಕೆ ಕೊಟ್ಟರೆ ಏನೂ ಕಡಿಮೆ ಯಾದಂತೆ ಆಗುವುದಿಲ್ಲ. ಅವರಲ್ಲಿ ಲ್ಯಾಂಡ್‌ಲೆಸ್ ಇದ್ದಾರೆ, ಬಡವರು ಇದ್ದಾರೆ. ನಿರುದ್ಯೋಗಿಗಳು ಇದ್ದಾರೆ. ಅಂತಹವರ ಕಲ್ಯಾಣ ಆಗುವುದಿಲ್ಲವೇ ಎಂದು ನಾನು ಕೇಳುತ್ತಾ ಇದ್ದೇನೆ. ಮೊನ್ನೆ ಕೇರಳ ಕಂದಾಯ ಮಂತ್ರಿಗಳಾದ ಶ್ರೀಮತಿ ಗೌರಿ ಅವರು ಒಂದು ಲಕ್ಷ ಎಕರೆ ಜಮೀನನ್ನು ಹರಿಜನರ ಸಲುವಾಗಿ ಹಂಚುವಂತಹ ವ್ಯವಸ್ಥೆ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಹಾಗಿರುವಾಗ ನಮ್ಮ ಪಕ್ಕದ ರಾಜ್ಯವನ್ನು ನೋಡಿ ನಾಚಿಕೆಯಾದರೂ ಪಟ್ಟುಕೊಳ್ಳಬೇಡವೇ ? ತಾವು ಈಗಲಾದರೂ ಸೂಕ್ತಕ್ರಮ ತೆಗೆದುಕೊಳ್ಳದಿದ್ದರೆ ಒಂದಾನೊಂದು ಕಾಲದಲ್ಲಿ ಇದು ಖಂಡಿತವಾಗಿಯೂ ಕಮ್ಯುನಿಸ್ಟರ ರಾಜ್ಯವಾದೀತು ಎಂಬ ಭಯ ಕೂಡ ತಮ್ಮಲ್ಲಿ ಇಲ್ಲ. ಗಾಂಧಿಜಿಯವರು ಹೇಳಿದಂತಹ ಮಾತನ್ನಾದರೂ ಪರಿಪಾಲಿಸೋಣ ಎಂಬ ವಿಚಾರವು ಕೂಡ ತಮ್ಮಲ್ಲಿ ಇಲ್ಲ. ಅವರು ಒಂದು ಲಕ್ಷ ಎಕರೆ ಜಮೀನು ಹಂಚುತ್ತಾ ಇದ್ದಾರೆ. ನಮ್ಮ ರಾಜ್ಯದೊಡ್ಡದು, ಲಕ್ಷಾಂತರ ಎಕರೆ ಜಮೀನು ಇದೆ. ಆದ್ದರಿಂದ ನಮ್ಮ ಪಕ್ಕದ ರಾಜ್ಯಗಳವರಾದ ಮಹಾರಾಷ್ಟ್ರ, ಕೇರಳ ಮತ್ತು ಆಂಧ್ರದಲ್ಲಿ ಯಾವ ರೀತಿಯಿಂದ ಹರಿಜನರಿಗೆ ಜಮೀನನ್ನು ಹಂಚುತ್ತಾ ಇದ್ದಾರೋ ಅದೇ ರೀತಿಯಿಂದ ಇಲ್ಲೂ ಕೂಡ ಹಂಚಬೇಕೆಂಬುದನ್ನು ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ.

ಇನ್ನು ಭಂಗಿಗಳ ಪರಿಸ್ಥಿತಿ. ಅದು ಇನ್ನೂ ಗಂಭೀರವಾಗಿಯೇ ಇದೆ. ಅವರು ಆ ಕೀಳು ಉದ್ಯೋಗದಿಂದ ಹೊರ ಬರಲಿಕ್ಕೆ ಆಗದಿದ್ದರೆ ತಾವು ಎಷ್ಟು ದುಡ್ಡು ಖರ್ಚುಮಾಡಿದರೂ ಕೂಡ ವ್ಯರ್ಥ. ಮಾನ್ಯ ಮುನಿಸಿಪಲ್ ಮಂತ್ರಿಗಳು ಅವರ ಮನೆಗಳಿಗೆ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೇವೆ ಎಂದು ಹೇಳಿದರು. ಮದರಾಸ್ ಮತ್ತು ಆಂಧ್ರದಲ್ಲಿ ಅವರು ಗೃಹನಿರ್ಮಾಣ ಯೋಜನೆಯನ್ನು ಹಾಕಿಕೊಂಡಿದ್ದಾರೆ ಏನೆಂದರೆ ಭಂಗಿಜನರಿಗಾಗಿ ಓನರ್‌ಷಿಪ್ ಬೇಸಿಸ್ ಮೇಲೆ 15 ನೂರು ರೂಪಾಯಿ ಖರ್ಚು ಮಾಡಿ ಸಣ್ಣಮನೆಗಳನ್ನು ಕಟ್ಟಿಸಿಕೊಡಬೇಕೆಂದು ಇದ್ದಾರೆ. ಆ ರೀತಿಯಿಂದ ನಮ್ಮ ಸರ್ಕಾರದವರೂ ಕೂಡ ಮಾಡಿದರೆ ಉತ್ತಮವಾದಂತಹ ಯೋಜನೆಯಾಗುತ್ತದೆ ಎಂದು ಹೇಳುತ್ತೇನೆ.

1959ನೇ ಮಾರ್ಚಿ 30ನೇ ತಾರೀಖಿನ ದಿವಸ ಒಂದು ಗವರ್ನ್‌ಮೆಂಟ್ ಆರ್ಡರ್ ಹೊರಡಿಸಿದ್ದಾರೆ. ಅದರ ಸಾರಾಂಶವೇನೆಂದರೆ ಯಾವ ಯಾವ ಜಮೀನಿನಲ್ಲಿ 15 ವರ್ಷ ಗಳಿಗಿಂತಲೂ ಹೆಚ್ಚು ಕಾಲ ಹರಿಜನರು ವಾಸಮಾಡಿಕೊಂಡಿದ್ದಾರೋ ಅಂತಹವರಿಗೆ ಅಲ್ಲಿ ಸೈಟು ಗಳನ್ನು ಸರ್ಕಾರದವರೇ ದುಡ್ಡುಕೊಟ್ಟು ಅಕ್ವೈರ್ ಮಾಡಿಕೊಂಡು ಅವರಿಗೆ ಕೊಡುವುದು ಅಂತ. ಬೆಂಗಳೂರಿನಲ್ಲಿ 98 ಸ್ಲಂಗಳು ಇವೆ, ಇನ್ನೂವರೆಗೂ ಅವುಗಳ ಬಗ್ಗೆ ಕೈ ಎತ್ತಲಿಲ್ಲ. ಎಷ್ಟೋ ಜನ ಗುಡಿಸಲುಗಳಲ್ಲೇ ವಾಸ ಮಾಡಿಕೊಂಡಿದ್ದಾರೆ. ಅವರಿಗೆ ಟ್ರಸ್ಟ್ ಬೋರ್ಡಿನವರಿಂದ ನೂರೆಂಟು ತೊಂದರೆಗಳಾಗುತ್ತಾ ಇವೆ. ಮತ್ತು ಇದರ ಜವಾಬ್ದಾರಿ ಆರ್. ಎಂ. ಪಾಟೀಲರದೇ ಅಥವಾ ಮಾನ್ಯ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರದೇ ! ಯಾರದೇ ಆದರೂ ಕೂಡ ಕೇಂದ್ರಸರ್ಕಾರ ಅಥವಾ ರಾಜ್ಯಸರ್ಕಾರದಿಂದ ಹಣ ಪಡೆದುಕೊಂಡು ಅವರು ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ ಎಷ್ಟು ದುಡ್ಡುಬೇಕೋ ಆಯಾ ಹರಿಜನ ಶಾಖೆಗಳಿಗಾಗಿ ಅಷ್ಟು ದುಡ್ಡನ್ನು ನಾವು ಟ್ರಸ್ಟ್‌ಬೋರ್ಡಿನ ವರಿಗೆ ಕೊಡುತ್ತೇವೆ ಅಂತಾ ಆಶ್ವಾಸನೆಕೊಟ್ಟರೆ ಅವರು ಲೇಔಟ್ ಹಾಕಿ ಹರಿಜನರಿಗೆ ಸೈಟುಗಳನ್ನು ಹಂಚುವುದಕ್ಕೆ ತಯಾರು ಆಗುತ್ತಾರೆ. 1959ರ ಮಾರ್ಚಿ ಜಿ. ಓ. ಜಾರಿಗೆ ಬರದೇ ಇರುವುದು ದೊಡ್ಡ ಅನ್ಯಾಯ. 1964ರಲ್ಲಿ ಮೊಟ್ಟಮೊದಲು ಹರಿಜನರು ಟ್ರಸ್ಟ್‌ಬೋರ್ಡ್ ಸಾಲದ ಹಣವನ್ನು 6 ವರ್ಷಗಳಲ್ಲಿ ತೀರಿಸುತ್ತಿದ್ದರು. ಆ ಒಂದು ಆಜ್ಞೆಯ ಪ್ರಕಾರ 6 ವರ್ಷದ ವ್ಯಾಲ್ಯು ಕೊಡಬೇಕು ಎಂದು ನಿಗದಿ ಮಾಡಿದ್ದರು, ಮತ್ತು ಈಗ 1–1–65ರಲ್ಲಿ ಆದ ಹರಿಜನರಿಗೆ 6 ವರ್ಷಗಳ ಸವಲತ್ತು ಇಲ್ಲ ಮತ್ತು ಸವಲತ್ತುಗಳ ಜಿ. ಓ. ಅನ್ವಯವಾಗುವುದಿಲ್ಲ. ಅದನ್ನು ಈಗ ಸರ್ಕಾರದವರು ತೆಗೆದುಹಾಕಿದ್ದಾರೆ. ಈ ರೀತಿ ದಿನೇ ದಿನೇ ಹರಿಜನರ ಏಳಿಗೆ ಮಾಡುವ ಬದಲಾಗಿ ಕೊರೆ ಮಾಡುತ್ತಾ ಇದ್ದೀರಿ. ಇದರಿಂದ ಕರ್ನಾಟಕದಲ್ಲಿ ಹರಿಜನರ ಮೇಲೆ ಭಯಾನಕವಾದ ಪರಿಸ್ಥಿತಿ ಕಂಡುಬರುತ್ತಾ ಇದೆ.

ಇನ್ನು ಐ.ಎ.ಎಸ್. ಮತ್ತು ಐ.ಪಿ.ಎಸ್. ಟ್ರೈನಿಂಗ್ ಸೆಂಟರ್‌ನ್ನು ಮದರಾಸಿಗೆ ಹೋಗಲು ಬಿಟ್ಟುಕೊಟ್ಟಿದ್ದೀರಿ. ದಕ್ಷಿಣ ಹಿಂದೂಸ್ಥಾನದಲ್ಲಿ ಈ ಸೆಂಟರ್ ನಮ್ಮ ರಾಜ್ಯದಲ್ಲಿ ಇದ್ದುದು ಈ ರೀತಿ

ಕೈ ಬಿಟ್ಟು ಹೋಗುವುದಕ್ಕೆ ಯಾರು ಜವಾಬ್ದಾರರು ? ಇವರಲ್ಲೂ ಕೂಡ ಅನ್ಯಾಯವಾಗಿದೆ. ಇದನ್ನು ತಿರುಗಿ ಪಡೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕೆಂದು ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ.

ಇನ್ನು ಡೈರೆಕ್ಟರ್ ಅಫ್ ಗೌರ್ನಮೆಂಟ್ ಪ್ರೆಸ್‌ನ ಬಗ್ಗೆ ಹೇಳುವುದಾದರೆ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ದುಡ್ಡು ಕೊಟ್ಟು ಟ್ರೈನಿಂಗ್ ಕೊಡಿಸುತ್ತಿದ್ದರು ಎಂದರೂ ಕೂಡ ಅವರು ಹಾಕಿರತಕ್ಕ ಯೋಜನೆಯನ್ನು ಇಂಪ್ಲಿಮೆಂಟ್ ಮಾಡಲು ಹಿಂದೇಟುಹಾಕುತ್ತಿರುವರು ಇದಕ್ಕೆ ಅಂದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಒತ್ತಾಯ ಮಾಡಲಿಲ್ಲವೇನೋ ಎಂದು ಸಂಶಯ ಬರುತ್ತದೆ. ಗವರ್ನಮೆಂಟ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪ್ರತಿ ಒಂದು ಆರು ತಿಂಗಳಿಗೆ 60 ಹರಿಜನ ವಿದ್ಯಾರ್ಥಿಗಳನ್ನು ಟ್ರೈನ್ ಮಾಡಬೇಕೆಂಬ ನಿಯಮ ಇದೆ. ಅದನ್ನು ಡೈರೆಕ್ಟರ್ ಅಫ್ ಗವರ್ನಮೆಂಟ್ ಪ್ರಿಂಟಿಂಗ್ ಪ್ರೆಸ್‌ನವರು ಕೈಬಿಟ್ಟರೆ ಒಳ್ಳೆಯದು ಎಂದು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರಂತೆ. ಇದು ಬಹಳ ದುರದೃಷ್ಟದ ಸಂಗತಿ. ಇದನ್ನು ನೋಡಿದರೆ ಈ ಜನಾಂಗದವರು ಹರಿಜನರು ಯಾವ ರೀತಿಯಿಂದ ಮುಂದುವರಿಯಬೇಕೆಂಬ ಸಮಸ್ಯೆ ನಮ್ಮ ಮುಂದೆ ನಿಲ್ಲುತ್ತದೆ. ಇದರ ಸಲುವಾಗಿ ಸರ್ಕಾರದವರು ಮಾಡಿರತಕ್ಕ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಅಫೀಸರ್ ಅಂತ ಯಾರಿದ್ದಾರೆ ಅವರನ್ನು ಡೆಪ್ಯೂಟಿಕಮೀಶನರ ಆಡಳಿತದಿಂದ ತೆಗೆದು ಹಾಕಬೇಕು. ಇನ್ನು ತಾಲ್ಲೂಕಿನ ನಿದರ್ಶನ ಎಂದರೆ (1) ಇಂಡಿಟೌನ್ ಸಬ್ ಇನ್‌ಸ್ಪೆಕ್ಟರು ಕೊನೆವಾರ ಜನವರಿ 1968ರಲ್ಲಿ ಬರಗುಡಿ ಎಂಬ ಗ್ರಾಮಕ್ಕೆ ಹೋಗಿ ಅಲ್ಲಿನ ಹರಿಜನರ ಶಂಕರಪ್ಪ ಎಂಬುವರ ಜಮೀನಿನಲ್ಲಿದ್ದ ಸ್ಟ್ಯಾಂಡಿಂಗ್ ಕ್ರಾಪ್ ಮೇಲೆ ಜೀಪು ಟ್ರಕ್ಕುಗಳನ್ನು ಓಡಿಸಿ ಬೆಳೆಯನ್ನೆಲ್ಲಾ ಹಾಳುಮಾಡಿದ್ದಾರೆ. ಫೆಬ್ರುವರಿ ಕೊನೆವಾರದಲ್ಲಿ ಮಲರಪ್ಪ ಲಚ್ಯಾಣ (ಊರು) ಅನ್ನುವಂತಹವರ ಹೊಲದಿಂದ 20 ಚೀಲ ಜೋಳ 6 ಚೀಲ ಕುಸುಬಿ ಮೊದಲಾದುವುಗಳನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ. ಈ ರೀತಿ ಪೋಲೀಸರ ದಬ್ಬಾಳಿಕೆಯಾದರೆ ಯಾವ ರೀತಿಯಿಂದ ಹರಿಜನರು ಉಳಿಯಬೇಕೋ ಗೊತ್ತಾಗುವುದಿಲ್ಲ.

ಆಂಧ್ರದಲ್ಲಿ ಆದದ್ದು ಘಟನೆ ಎಲ್ಲರಿಗೂ ತಿಳಿದಿದೆ. ಹರಿಜನ ಬಾಲಕನ ಸಜೀವ ದಹನವಾದದ್ದು ಪ್ರಜಾವಾಣಿ ಮಹೋನ್ನತ ನಾಡಿನ ಹಿರಿಯ ಪತ್ರಿಕೆ ಅದರಲ್ಲಿ ಸಂಪಾದಕೀಯದಲ್ಲಿ ಬರೆದಿದ್ದಾರೆ. ಇವತ್ತು ಉಚ್ಚವರ್ಗದವರು 20ನೇ ಶತಮಾನದ ಮೃಗಗಳಿಗಿಂತಲೂ ಕಡೆಯಾಗಿದ್ದಾರಲ್ಲಾ ಅಂತ ಅನಿಸುತ್ತಾ ಇದೆ, ಅಂತಹ ನಿದರ್ಶನಗಳನ್ನು ನಮ್ಮ ಕರ್ನಾಟಕದಲ್ಲೂ ನೋಡುತ್ತಾ ಇದ್ದೇವೆ. ಗುಲ್ಬರ್ಗದ ಹತ್ತಿರ ಅನೇಕ ಊರುಗಳಲ್ಲಿ ಪೋಲೀಸರ ದಬ್ಬಾಳಿಕೆಗೆ ಹರಿಜನರು ಒಳಗಾಗಿದ್ದಾರೆ. ಈ ರೀತಿಯಾದರೆ ಪೋಲಿಸರನ್ನು ಕೇಳುವವರು ಯಾರು ? ಏನು ಎಂತು ಎಂಬುದು ಗೊತ್ತಾಗುವುದಿಲ್ಲ. ಬಸವಣ್ಣನವರ ಒಂದು ನುಡಿ ಜ್ಞಾಪಕಕ್ಕೆ ಬರುತ್ತದೆ, ಅದೇನೆಂದರೆ :

ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲ್ಲಬಹುದೆ.
ಏರಿ ನೀರುಂಡೊಡೆ ---
ಬಿತ್ತಿದ ಬೀಜಗಳ ಬೇಲಿ ಕೆಲಮಿ ಮೇದೊಡೆ
ತಾಯಿ ಮೊಲೆ ಹಾಲುಂಡೊಡೆ ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲ ಸಂಗಮದೇವಾ ?

ಇವತ್ತಿನ ದಿವಸ ಹರಿಜನರ ಪರಿಸ್ಥಿತಿ ಈ ರೀತಿಯಿಂದ ಆಗಿದೆ.

4-00 P.M.

ಈವೊತ್ತಿನ ದಿವಸ ಹರಿಜನರ ಪರಿಸ್ಥಿತಿ ಹೇಗಿದೆ ಎಂದರೆ ಸರ್ಕಾರದವರು ತೆರೆದ ಸೇಂದಿ ಅಂಗಡಿಗಳಲ್ಲಿ ಕುಡಿದು ಅವರ ಹತ್ತಿರ ಇದ್ದ ಹಣವನ್ನೆಲ್ಲಾ ಕಳೆದುಕೊಂಡು ಬಿಟ್ಟಿದ್ದಾರೆ. ಪುನಃ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದರೆ ಹೇಗಾಗುತ್ತದೆ. ಹರಿಜನರ ಅವನತಿಗಳಿಗೆ ಹಲವಾರು ಕಾರಣಗಳು ಇದೆ. ಸಮಾಜಕಲ್ಯಾಣ ಸೆಕ್ರೆಟರಿಗಳು, ಡೆಪ್ಯೂಟಿ ಸೆಕ್ರೆಟರಿಗಳು ಅವರು ಸರಿಯಾದ ಅಡ್ವೈಸ್ ಮಾನ್ಯ ಕಲ್ಯಾಣಮಂತ್ರಿಗಳಿಗೆ ಕೊಡುತ್ತಾ ಇಲ್ಲ. ಅದೂ ಅಲ್ಲದೆ ಮಂತ್ರಿಗಳೂ ಕೂಡ ಅವರ ಅಧಿಕಾರವನ್ನು ಉಪಯೋಗಿಸಿ ಯಾವರೀತಿ ಕೆಲಸ ಮಾಡಬೇಕು ಎಂಬುದನ್ನು ನೋಡಿ ಕೆಲಸ

(ಶ್ರೀ ಎಸ್. ಎಸ್. ಆರಕೇರಿ)

ಮಾಡಿರಬೇಕು. ಈ ರೀತಿ ಮಾಡಿದರೆ ಹರಿಜನ ಉದ್ಧಾರವಾಗುತ್ತದೆ. ಡಾಕ್ಟರ್ ಅಂಬೇಡ್ಕರ್ ರವರು ಹಿಂದೆ ಒಂದು ವಿಷಯವನ್ನು ಹೇಳುತ್ತಾ ಇದ್ದರು, ಅದು ಈ ರೀತಿ ಇದೆ :

> "If Tilak had been born as an untouhable, he would not have said Swaraj is my birth right but alienation of caste system is my birth right"

ಎಂದು. ಬಸವಣ್ಣನವರು 8ನೆಯ ಶತಮಾನದಲ್ಲಿ ಮಾಡಿದ್ದನ್ನು ಅವರು ಹೇಳಿದ ಉದಾತ್ತ ಧ್ಯೇಯ ಗಳು ಏನು ಇವೆ, ಅವರು ಪ್ರಚಾರ ಮಾಡಿದಂಥ ಸುಧಾರಣೆಗಳು ಏನು ಇವೆ ಅದನ್ನು ನೀವು ಅನುಷ್ಠಾನಕ್ಕೆ ತರುವುದಿಲ್ಲ. ಅವರು ಪ್ರಪ್ರಥಮವಾಗಿ ಹೇಳಿದ್ದು ಈ ಅಸ್ಪೃಶ್ಯತೆ ನಿವಾರಣೆಯಾಗ ಬೇಕು ಎಂದು. ಅದು ಇದುವರೆಗೂ ಹೋಗಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಹರಿಜನರ ಕಲ್ಯಾಣಕ್ಕೆ ಏನೇನು ಕೆಲಸಗಳು ಮಾಡಬೇಕು ಅದನ್ನು ಹೆಚ್ಚು ಹೆಚ್ಚಾಗಿ ತ್ವರಿತವಾಗಿ ಕಾರ್ಯಗತ ಮಾಡಬೇಕು ಇಲ್ಲದೇ ಹೋದರೆ ಸಮಾಜಕ್ಕೆ ಮತ್ತು ದೇಶಕ್ಕೆ ಒಂದು ಭಾರಿ ದೊಡ್ಡ ಸಮಸ್ಯೆಯು ಪರಿಣಮಿಸುತ್ತದೆ. ಹರಿಜನರ ಕಲ್ಯಾಣಕ್ಕೆ ಏನು ಆಗಬೇಕು ಅದಕ್ಕೆ ಒಂದು ಯೋಗ್ಯವಾದ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಬೇಕು ಎಂದು ಹೇಳಿ, ಮಾನ್ಯ ಅಧ್ಯ ಕ್ಷರಾದವರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಮೈಸೂರು ರಾಜ್ಯ ಸರ್ಕಾರ ಬಸವಣ್ಣನವರ 8ನೇ ಶತಮಾನೋತ್ಸವವನ್ನು ಆಚರಿಸುತ್ತಾ ಇದ್ದೀರಿ. ಆದರೆ ಹರಿಜನರ ಏಳಿಗೆಗಾಗಿ ಬಸವಣ್ಣನವರು ಮಾಡಿದ ಪ್ರಯತ್ನದ ನೆನಪಿಗಾಗಿ ಹಣ ವನ್ನು ತೆಗೆದು ಇರಿಸಿದ್ದೀರಾ ?

[MR. DEPUTY SPEAKER in the Chair.]

ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗವಾಡ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರುವ ಈ ಡಿಮ್ಯಾಂಡನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಹೇಳಲು ಇಚ್ಛಿಸುತ್ತೇನೆ.

ಮಹಾತ್ಮಾ ಗಾಂಧಿಯವರು ಅವರ ಜೀವನದಲ್ಲಿ ಮೊದಲನೇ ಹೆಜ್ಜೆ ಇಟ್ಟಿದ್ದು ಹರಿಜನರ ಉದ್ಧಾರಕ್ಕೆ ಎಂದು. ಆದರೆ ಗಾಂಧೀಜಿಯವರು ಹೋದಮೇಲೆ ಮತ್ತು ಸ್ವರಾಜ್ಯ ಸಿಕ್ಕಿದ ನಂತರ ದಲ್ಲಿ ಅದಕ್ಕೆ ಅಷ್ಟಾಗಿ ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ ಎಂದು ಕಾಣುತ್ತದೆ. ಏನೇನು ಸ್ಕೀಮು ಗಳನ್ನು ಮಾಡಿದ್ದರೋ ಅವೆಲ್ಲಾ ಬರೀ ನಾಟಕದ ರೂಪದಲ್ಲಿ ಇದೆ ಎಂದು ಕಾಣುತ್ತದೆ. ಈರೀತಿ ಆದರೆ ಹರಿಜನರು ಉದ್ಧಾರವಾಗುವುದಿಲ್ಲ. ಅದಕ್ಕೋಸ್ಕರವಾಗಿ ಈ ಖಾತೆಗೆ ಒಬ್ಬ ಪ್ರತ್ಯೇಕವಾದ ಒಬ್ಬ ಸೆಕ್ರೆಟರಿ ಇರಬೇಕು ಎಂದು ನಾನು ಹಿಂದೆಯೇ ಎಷ್ಟೋ ಸಾರಿ ಹೇಳಿದ್ದೇನೆ. ಅದಕ್ಕೆ ಸರಿ ಯಾದಂಥ ಒಬ್ಬ ಸೆಕ್ರೆಟರಿ ಇಲ್ಲ. ಇದನ್ನು ಮಾನ್ಯ ಮಂತ್ರಿಗಳು ವಿಚಾರಿಸಬೇಕಾಗಿದೆ. ಮಾನ್ಯ ಯಶೋಧರಾ ದಾಸಪ್ಪನವರು ಇದ್ದಾಗ ಹರಿಜನರಿಗೆ ಬೇಕಾದಷ್ಟು ಮಾನ್ಯತೆಗಳನ್ನು ಮಾಡಿದ್ದರು. ಆದರೆ ಅವರು ನಮ್ಮ ದುರ್ದೈವದಿಂದ ರಾಜೀನಾಮೆ ಕೊಟ್ಟು ಹೋದರು. ಈ ವಿಚಾರದಲ್ಲಿ ಸರ್ಕಾ ರದಲ್ಲಿ ಕೆಲವು ನ್ಯೂನ್ಯತೆಗಳು ಇದೆ. ಆದರೆ ಒಂದು ಮಾತನ್ನು ಹೇಳಬೇಕಾಗಿದೆ. ವಿದ್ಯಾಭ್ಯಾಸದ ವಿಚಾರದಲ್ಲಿ ಸಾಕಷ್ಟು ತೃಪ್ತಿಕರವಾಗಿ ನಡೆದಿದೆ, ಅದಕ್ಕಾಗಿ ನಾನು ಸರ್ಕಾರದವರಿಗೆ ಅಭಿನಂದಿಸು ತ್ತೇನೆ. ಅದೂ ಅಲ್ಲದೆ ಈಗ ಸರ್ಕಾರದವರು ಹರಿಜನರ ಹಾಸ್ಟಲುಗಳಿಗೆ 1ನೇ ತರಗತಿಯಿಂದ 4ನೇ ತರಗತಿಯವರೆಗೂ ಗ್ರಾಂಟನ್ನು ಕೊಡುತ್ತಾ ಇಲ್ಲ. ಹಳ್ಳಿಗಳ ಕಡೆಯಿಂದ ಬಂದು ದೊಡ್ಡ ಪಟ್ಟಣಗಳಲ್ಲಿ ವಾಸ ಮಾಡಬೇಕಾಗುತ್ತದೆ. ಹರಿಜನರ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡುವ ದೃಷ್ಟಿಯಿಂದ ಆ ಹಾಸ್ಟಲುಗಳಿಗೆ ಗ್ರಾಂಟನ್ನು ಕೊಡಬೇಕು. ಇದರಿಂದ ಈ ಹರಿಜನರ ವಿದ್ಯಾ ಭ್ಯಾಸಕ್ಕೆ ಒಂದು ಕೊರೆಮಾಡಿದ ಹಾಗಾಗುತ್ತದೆ. ಆದುದರಿಂದ ನೀವು ಹಾಸ್ಟಲಿಗೆ ಕೊಡುವ ಗ್ರಾಂಟನ್ನು ಕಟ್ ಮಾಡದೆ ಕೊಡಬೇಕು ಎಂದು ನಾನು ಕೇಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ಮಾಗಾಮಿ ಒಂದು ಸರ್ಕಾರಿ ಹಾಸ್ಟಲ್‌ಗೆ ಅಡಿಗೆಯವನ ಸಂಬಳ ಸರ್ಕಾರದವರು ಕೊಡುತ್ತಾ ಇದ್ದರು. ಪ್ರೈವೇಟ್ ಹಾಸ್ಟಲುಗಳಲ್ಲಿ ಅಡಿಗೆಯವನ ಸಂಬಳ ಕೊಡುವುದು ಬಹಳ ಕಷ್ಟವಾಗಿದೆ. ಸರ್ಕಾರದವರು ವಾಚ್‌ಮ್ಯಾನ್ ಸಂಬಳ ಕೊಡುತ್ತಾರೆ.

ಅಡಿಗೆಯವನ ಸಂಬಳ ಏತಕ್ಕಾಗಿ ಕೊಡಬಾರದು ? ಅದಕ್ಕಾಗಿ ತುಂಬಾ ಪಶ್ಚಾತ್ತಾಪ ಮಾಡುತ್ತಿದ್ದಾರೆ. ಹಳೇ ಮೈಸೂರಿನಲ್ಲಿ ತಲೆಗೆ 25 ರೂಪಾಯಿ ಕೊಡುತ್ತಾ ಇದ್ದೀರಿ. ಇದಲ್ಲದೆ ಬಟ್ಟೆ ಪ್ರತಿಯೊಂದನ್ನೂ ಕೊಡುತ್ತಾ ಇದ್ದೀರಿ. ಇದನ್ನು ಹೊಸ ಮೈಸೂರಿನ ಮಕ್ಕಳಿಗೆ ಏತಕ್ಕೆ ಕೊಡಬಾರದು ? ಹಳೇ ಮೈಸೂರು ಮತ್ತು ಹೊಸ ಮೈಸೂರು ಎಂದು ಏತಕ್ಕೆ ವ್ಯತ್ಯಾಸ ಮಾಡುತ್ತಾ ಇದ್ದೀರಿ ? ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ್ ಕೈಕೆಳಗೆ 10-15 ಜನ ಅಸಿಸ್ಟೆಂಟ್ ಡೈರೆಕ್ಟರುಗಳು ಇದ್ದಾರೆ ಈ ಅಸ್ಪೃಶ್ಯತೆ ನಿವಾರಣೆ ಎನ್ನುವುದು ಸಣ್ಣ ಕೆಲಸವೇನೂ ಅಲ್ಲ. ಆದುದರಿಂದ ಪ್ರತಿಯೊಬ್ಬ ಡಿವಿಷನಲ್ ಕಮೀಷನರ್ ಹತ್ತಿರವೂ ಒಬ್ಬೊಬ್ಬ ಅಸಿಸ್ಟೆಂಟ್ ಡೈರೆಕ್ಟರನ್ನು ಕೊಡಬೇಕು ಎಂದು ನಾನು ಹೋದ ಸಲವೇ ಹೇಳಿದ್ದೆ. ಹರಿಜನ ಉದ್ಧಾರ ಮಾಡಬೇಕು ಎಂದರೆ, ಒಬ್ಬೊಬ್ಬ ಡಿವಿಷನಲ್ ಕಮೀಷನರ್ ಹತ್ತಿರ ಒಬ್ಬೊಬ್ಬ ಅಸಿಸ್ಟೆಂಟ್ ಡೈರೆಕ್ಟರನ್ನು ಕೊಡಬೇಕು ಎಂದು ಈಗಲೂ ಹೇಳುತ್ತಿದ್ದೇನೆ, ಅದನ್ನು ಮಾಡದೇಹೋದರೆ ನಾನು ಸೋಷಿಯಲ್‌ವೆಲ್‌ಫೇರ್ ಕಮಿಟಿಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕಾಗುತ್ತದೆ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದೂ ಅಲ್ಲದೆ ಅವರಿಗೆ ಜೀಪುಗಳೂ ಸಹ ಇರುವುದಿಲ್ಲ. ಸೋಷಿಯಲ್ ವೆಲ್‌ಫೇರ್ ಬೋರ್ಡ್ ಮತ್ತು ಸೋಷಿಯಲ್ ವೆಲ್‌ಫೇರ್ ಎಂದು ಎರಡು ಇವೆ. ಸೋಷಿಯಲ್ ವೆಲ್‌ಫೇರ್ ಜೀಪುಗಳನ್ನು ತೆಗೆದುಕೊಂಡು ಓಡಾಡುತ್ತಾರೆ, ಸೋಷಿಯಲ್‌ವೆಲ್‌ಫೇರ್ ಆಫೀಸರಿಗೆ ಒಂದು ಜೀಪು ಸಹ ಸಿಕ್ಕುವುದಿಲ್ಲ. ಅದಕ್ಕೆ ಏರ್ಪಾಡು ಮಾಡಬೇಕು ಎಂದು ನಾನು ಕೇಳುತ್ತೇನೆ.

ಒಂದು ತಾಲ್ಲೂಕಿನಲ್ಲಿ 125 ಹಳ್ಳಿಗಳಿವೆ. ಅಂತಹವು ನಮ್ಮಲ್ಲಿ 10 ತಾಲ್ಲೂಕುಗಳಿವೆ. ಒಂದೊಂದು ತಾಲ್ಲೂಕಿಗೆ ಒಂದು ಜೀಪನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಶಕ್ತಿ ಇಲ್ಲವಾಗಿದೆ. ಅಂದ ಮೇಲೆ ಇವರಿಗೆ ಸಹಾಯ ಯಾವ ರೀತಿ ಮಾಡುವುದಕ್ಕೆ ಸಾಧ್ಯವಿದೆ ? ಆದರೆ ಒಬ್ಬ ಬಿ. ಡಿ. ಒ.ಗೆ ಜೀಪುಗಳು ಇರುತ್ತವೆ. ಹೀಗಾದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಮುಂದುವರಿಯುವುದು ಹೇಗೆ ? ಒಂದೊಂದು ಜಿಲ್ಲೆಯಿಂದ ಮೂವರು ಮೂರು ಲಕ್ಷ ಜನಗಳಿಂದ ಆರಿಸಿ ಬಂದಿದ್ದೇವೆ. ಅಂದ ಮೇಲೆ ಒಂದು ಲಕ್ಷಕ್ಕೆ ಒಬ್ಬ ಪ್ರತಿನಿಧಿಯಾಗಿ ಇಲ್ಲಿ ಇದ್ದೇವೆ. ಈ ಮೂರು ಲಕ್ಷ ಜನರ ಉದ್ಧಾರಕ್ಕಾಗಿ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಜೀಪ್ ಸಿಗುವುದಿಲ್ಲವೆಂಬುದಾಗಿ ಹೇಳಿದರೆ ಇವರಿಗೆ ಇನ್ನೇನು ಸಹಾಯ ಮಾಡಲು ಸಾಧ್ಯವಿದೆ ? ಸೋಷಿಯಲ್ ವೆಲ್‌ಫೇರ್ ಸ್ಕೀಂಗಳನ್ನು ಡೆವಲಪ್‌ಮೆಂಟ್ ಇಲಾಖೆಗೆ ಕೊಡುತ್ತೀರಿ. ಆ ರೀತಿ ಮಾಡಿದರೆ ಅದು ಯಾವ ಯೋಜನೆಯ ಕಾರ್ಯಗಳನ್ನೂ ಸಹ ಮಾಡುವುದಕ್ಕಾಗುವುದಿಲ್ಲ. ಅಲ್ಲದೆ ಅಸಿಸ್ಟೆಂಟ್ ಡೈರೆಕ್ಟರುಗಳಿಗೆ ಸ್ಪೆಷಲ್ ಸ್ಕೀಂಗಳನ್ನು ಕೊಡುವುದಲ್ಲದೆ ಇನ್ನೂ ಹರಿಜನ ಅಭಿವೃದ್ಧಿಗೆ ಬೇಕಾದ ಹೆಚ್ಚಿನ ಕೆಲಸಕಾರ್ಯಗಳನ್ನು ಅವರಿಗೆ ಕೊಡುವಂತೆ ಮಾಡಬಾರದು. ಈ ಬಾಬಿಗೆ ಸಾಕಷ್ಟು ದುಡ್ಡನ್ನು ಖರ್ಚು ಮಾಡುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದು ಪೂರ್ಣವಾಗಿ ಉಪಯೋಗವಾಗದಿದ್ದರೆ ಆ ದುಡ್ಡು ಲ್ಯಾಪ್ಸ್ ಆಗುತ್ತದೆ. ಸೋಷಿಯಲ್ ವೆಲ್‌ಫೇರ್ ಸ್ಕೀಂಗಳನ್ನು ಅಸಿಸ್ಟೆಂಟ್ ಡೈರೆಕ್ಟರುಗಳ ಕೈಗೆ ಹಾಗೂ ಡಿವಿಜನಲ್ ಕಮಿಷನರ್ ಕೈಕೆಳಗೆ ಕೊಡುವುದಕ್ಕಿಂತ ಅದನ್ನು ಡೆವಲಪ್‌ಮೆಂಟ್ ಆಫೀಸರ ಅಧಿಕಾರಕ್ಕೆ ಕೊಡುವುದು ಸೂಕ್ತ. ಆಗ ಅವರ ಕೆಲಸಗಳನ್ನು ಅವರು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿಯ ಅವಕಾಶವನ್ನು ಮಾನ್ಯ ಶ್ರೀ ನಾರಾಯಣ ಗೌಡರು ಮಾಡಿಕೊಡಬೇಕೆಂದು ನನ್ನ ವಿನಂತಿ. ಅಲ್ಲದೆ ಹರಿಜನರ ಏಳಿಗೆಗೋಸ್ಕರ, ಕೋಣ, ಕುರಿ, ಕೋಳಿ ಕೊಡುವುದನ್ನು ಬಂದ್ ಮಾಡಿ. ಏಕೆಂದರೆ ಅವರು ಅದನ್ನು ತಿಂದುಬಿಡುತ್ತಾರೆ. ಈಗ ಏನಾಗಿದೆಯೆಂದರೆ, ಎಲ್ಲರೂ ಕೋಳಿ ತಿನ್ನುವುದಕ್ಕೆ ಹತ್ತಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ಬಾಕಿಯವರು ತಿನ್ನುವುದಕ್ಕೆ ಈಗ ಶುರು ಮಾಡಿದ ಮೇಲೆ, ಇವರಿಗೆ ಅದು ಈಗ ತಿನ್ನುವುದಕ್ಕೆ ಸಿಗುವುದೇ ಇಲ್ಲ.

ಶ್ರೀಮತಿ ಚಂಪಾಬಾಯಿ ಭೋಗಲೆ.—ಒಂದೊಂದು ಊರಿಗೆ 40 ಎಕರೆ ಅಥವಾ 50 ಎಕರೆಗಳಂತೆ ಭೂಮಿಯನ್ನು ಸಾಮುದಾಯಿಕ ಅಭಿವೃದ್ಧಿ ಮೇಲೆ ವ್ಯವಸಾಯಕ್ಕೆ ಹರಿಜನರಿಗೆ ಕೊಟ್ಟರೆ ಅನುಕೂಲವಾಗುತ್ತದೆ. ಪ್ರತಿಯೊಂದು ಊರಿಗೆ ಸೇಕಡ 50ರಷ್ಟು ಗೋಮಾಳ ಭೂಮಿಯನ್ನು ಅಲ್ಲಿನ ಪಂಚಾಯಿತಿಯವರಿಗೆ ಕೊಟ್ಟು ಇನ್ನುಳಿದ 50 ಎಕರೆಯಷ್ಟನ್ನು ಹರಿಜನರಿಗೆ ಸಾಮುದಾಯಿಕ ಅಭಿವೃದ್ಧಿ ಯೋಜನೆಗಾಗಿ ಅಥವಾ ವ್ಯವಸಾಯಕ್ಕಾಗಿ ಕೊಡಬೇಕು. ಹೀಗೆ ಅವರ ಸಾಂಪತ್ತಿಕ ಶಕ್ತಿಯನ್ನು ಹೆಚ್ಚಿಸಬೇಕು. ಕೋಳಿ, ಕುರಿ ಮುಂತಾದುವನ್ನು ಹರಿಜನರಿಗೆ ಕೊಡುವುದಕ್ಕೆ ಬದಲು ಈ ಯೋಜನೆಗಳನ್ನು ಜಾಗ್ರತೆಯಾಗಿ ಸರ್ಕಾರದವರು ಹರಿಜನರಿಗಾಗಿ ಮಾಡಿಕೊಡುವುದು ಉಚಿತ. ನಮ್ಮಲ್ಲಿ ವತನ್ ಭೂಮಿ ಅಂದರೆ ಗೌರ್ನಮೆಂಟ್ ಲ್ಯಾಂಡ್ಸ್ ಎಂದು ಇರುತ್ತವೆ. ನಮ್ಮ ಪ್ರತಿಯೊಂದು ಕಡೆಗೂ ಆ ಭೂಮಿಯನ್ನು ಹರಿಜನರಿಗಾಗಿ ಕೊಡುವುದಾದರೆ ಅವರಿಗೆ ಒಂದು ಉದ್ಯೋಗ ಕಲ್ಪನೆ ಮಾಡಿದಂತಾಗುತ್ತದೆ. ಅದರಿಂದ ಹರಿಜನರ ಏಳಿಗೆಗೋಸ್ಕರ ಸಾಕಷ್ಟು ಅನುಕೂಲತೆ

(ಶ್ರೀಮತಿ ಚಂಪಾಬಾಯಿ ಭೋಗಳೆ)

ಗಳನ್ನು ಮಾಡಿಕೊಟ್ಟಂತಾಗುತ್ತದೆ. ಇತ್ತೀಚೆಗೆ ನಾನೇ ಡ್ರೈ ಫಾರ್ಮಿಂಗ್ ಸೊಸೈಟಿಯನ್ನು ಮಾಡುತ್ತಿದ್ದೇನೆ. ಅದು ವತನ್ ಲ್ಯಾಂಡ್. ವರ್ಷಕ್ಕೆ 45 ಸಾವಿರ ರೂಪಾಯಿಗಳಷ್ಟು ಔಟ್ ಪುಟ್ ಇದೆ. ಎರಡು ಕುಂಟೆ, ಮೂರು ಕುಂಟೆ ಜಮೀನು ಮಾಡಿದರೆ ಅಷ್ಟು ಉತ್ಪನ್ನ ಬರುವುದಿಲ್ಲ. ನಿಮ್ಮ ಸೆಕ್ರಟರಿಯವರಿಗೆ ಹೇಳಿದರೆ ಕೋಳಿ, ಕುರಿ ಸ್ಕೀಂ ಹಾಕುತ್ತಾರೆ. ಆದ್ದರಿಂದ ಮಂತ್ರಿಗಳೇ ಇದರ ಬಗ್ಗೆ ಒಂದು ಸ್ಕೀಂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಬ್ಬ ಅಧಿಕಾರಿಗೆ 80 ಎಕರೆಯಷ್ಟು ಜಮೀನು ಕೊಡುತ್ತೀರಿ. ಅದೇ 200 ಜನ ಹರಿಜನರು ಬೇಡಿದಾಗ ಅವರಿಗೆ ಇಲ್ಲವೆಂದು ಹೇಳುತ್ತೀರಿ. ಸರ್ವೆ ನಂಬರ್ 667ರಲ್ಲಿ ಗೈರಾನ್ ಲ್ಯಾಂಡ್‌ನಲ್ಲಿ ಒಬ್ಬ ಅಧಿಕಾರಿಗೆ 70-80 ಎಕರೆಗಳಷ್ಟು ಜಮೀನನ್ನು ಕೊಡುತ್ತೀರಿ. ಹರಿಜನರು ಬೇಡಿದರೆ ಕೆಳಗಿನಿಂದ ಮೇಲಿನ ಆಫೀಸರಿಗೆ ಬರೆದಿದ್ದೇವೆ ಎಂದು ಹೇಳುತ್ತೀರಿ. ಈ ವಿಚಾರದಲ್ಲಿ ಮಾನ್ಯ ಶ್ರೀ ರಾಚಯ್ಯನವರಿಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ಅರ್ಜಿಗಳನ್ನು ಕೊಟ್ಟಿದ್ದೇನೆ. ಆ ರೀತಿಯಾಗಿ ಒಬ್ಬ ಪೋಲೀಸ್ ಅಧಿಕಾರಿಗೆ ಕೊಟ್ಟಿದ್ದಾರೆ. ಹರಿಜನರಿಗೆ ಮುಂದಕ್ಕೂ ಕೊಡುವುದಕ್ಕಾಗುವುದಿಲ್ಲವೆಂದು ಬರೆಯುತ್ತಾರೆ. ಇದು ನಮ್ಮ ಸುದೈವವೋ ಅಥವಾ ದುರ್ದೈವವೋ ಎಂದು ನಾನು ಕೇಳುತ್ತೇನೆ. ಅವರನ್ನು ಹೇಳುವವರು, ಕೇಳುವವರು ಯಾರೂ ಇಲ್ಲ. ಮಾನ್ಯ ಸಚಿವರು ತಮ್ಮ ಇಲಾಖೆಯ ಮೂಲಕ ಅವರಿಗೆ ಸಹಾಯ ಮಾಡಬೇಕು. ಸರ್ಕಾರದ ಭೂಮಿಯನ್ನು ಮಾನ್ಯ ಮಂತ್ರಿಗಳು ತಮ್ಮ ಸುಬರ್ದಿನಲ್ಲಿ ತೆಗೆದುಕೊಂಡು ಅರ್ಜಿ ಹಾಕಿದಂಥ ಹರಿಜನರಿಗೆ ಕೊಡಿಸಿ ಕೊಡಬೇಕು. ಆಗ ಅವರು ಎಲ್ಲಾ ಉದ್ಯೋಗಗಳನ್ನು ಮಾಡುವುದಕ್ಕೆ ಸಹಾಯವಾಗುತ್ತದೆ. ಅವರ ಒಂದು ಸಾಂಪತ್ತಿಕ ಶಕ್ತಿಯನ್ನು ಹೆಚ್ಚಿಸಿ. ಅದಕ್ಕಾಗಿ ಜೋಡಿ ಎತ್ತು ಕೊಡಿ, ಡೈರಿ ಫಾರಂ ಮಾಡಿಸಿದರೆ ಪ್ರತಿಯೊಂದು ಊರಿನಲ್ಲಿಯೂ 100ರಿಂದ 200 ಮನೆಗಳವರಿಗೆ ಒಂದು ಉದ್ಯೋಗ ಕಲ್ಪನೆ ಮಾಡಿದಂತಾಗುತ್ತದೆ. ಅವರ ಅಭಿವೃದ್ಧಿಗಾಗಿ ಸಾವಿರಾರು ಸ್ಕೀಂಗಳನ್ನು ಮಾಡುವುದಕ್ಕಿಂತ ಅವರಿಗಾಗಿ ವ್ಯವಸಾಯ ಸ್ಕೀಂಗಳನ್ನು ಕೂಡಲೇ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರಿ ಭೂಮಿ ಇದ್ದರೆ ಮೊದಲು ಅವರಿಗೆ ವಸಾಹತು ಮಾಡಬೇಕು. ಹರಿಜನರ ಏಳಿಗೆಗೋಸ್ಕರ ಸರ್ಕಾರದವರು ಹೆಚ್ಚು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಶಿಕ್ಷಣ ಶಾಖೆಯಲ್ಲಿ 25 ರೂಪಾಯಿಗಳ ಗ್ರಾಂಟು ಕೊಡುತ್ತಾರೆ. ಇದರಿಂದ ಹರಿಜನ ಮಕ್ಕಳಿಗೆ ಸರಿಯಾಗಿ ಪುಸ್ತಕಗಳು ಸಿಗುವುದಿಲ್ಲ. ಹಲಗೆಗಳು ಸಿಗುವುದಿಲ್ಲ ಈಗಾಗಲೇ ಆ ಕೆಲಸವನ್ನು ಕಸ್ತೂರಿಬಾಯಿ ಬಾಳಗಾ ಪ್ರಿಂಟಿಂಗ್ ಪ್ರೆಸ್ಸಿಗೆ ಬಿಟ್ಟಿದ್ದಾರೆ. ಅದು ಹಳೆಯ ಪ್ರಿಂಟಿಂಗ್ ಪ್ರೆಸ್. ಅಲ್ಲಿಗೆ ಹೋಗಿದ್ದಾರೆ. ಅಕ್ಷರು ಅಲ್ಲಿ ಅವರ ಕಾಲಿನ ಮೇಲೆ ಎದ್ದು ನಿಲ್ಲುವಷ್ಟಿದೆ. ಸರ್ಕಾರ ಇದಕ್ಕಾಗಿ ಹೆಚ್ಚಿಗೆ ಸಹಾಯ ಮಾಡಬೇಕು. ಸರ್ಕಾರದವರು ತಮ್ಮ ಒಂದು ಪ್ರಿಂಟಿಂಗ್ ಪ್ರೆಸ್‌ಗೆ ಆ ಕೆಲಸವನ್ನು ಕೊಟ್ಟರೆ ಅವರವರಿಗೆ ಪುಸ್ತಕಗಳು ಚೆನ್ನಾಗಿ ದೊರೆಯಲು ಏರ್ಪಾಡು ಮಾಡಿದಂತಾಗುತ್ತದೆ. ನೀವು ಬಂದನಂತರ ಈ ಸ್ಕೀಂ ಗೌರ್ನಮೆಂಟ್ ಪ್ರಿಂಟಿಂಗ್ ಪ್ರೆಸ್ ಡೈರೆಕ್ಟರ್ ಆಫೀಸಿನೊಳಗೆ ಏನಾಯಿತೋ ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಏನಾದರೂ ಹರಿದು ಕಸದ ಬುಟ್ಟಿಗೆ ಹಾಕಿದರೋ ಏನೋ ಗೊತ್ತಿಲ್ಲ. ಡಿಸ್ಟ್ರಿಕ್ಟ್ ಆಫೀಸರು ಮತ್ತು ಡಿವಿಜನಲ್ ಕಮೀಷನರಿಗೆ ಬರೆದು ಕುರಿ ಮತ್ತು ಕೋಳಿಗಳನ್ನು ಹರಿಜನರಿಗೆ ಕೊಡುವುದಕ್ಕೆ ಖರ್ಚು ಮಾಡುವುದಕ್ಕೆ ಬದಲಾಗಿ ಹರಿಜನ ಮಕ್ಕಳ ವಿದ್ಯಾಭಿವೃದ್ಧಿಗೋಸ್ಕರ ಅದನ್ನು ಖರ್ಚು ಮಾಡಬೇಕು. ಅದಕ್ಕಾಗಿ ಬಜೆಟ್ಟಿನಲ್ಲಿ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ನಾನು ಮಂತ್ರಿಗಳನ್ನು ಕೇಳಿಕೊಂಡು ನಾನು ಈಗ ಏನೇನು ಸಲಹೆಗಳನ್ನು ಕೊಟ್ಟಿದ್ದೇನೋ ಅವನ್ನು ಕೂಡಲೇ ಅಮಲಿನಲ್ಲಿ ತರಬೇಕೆಂದು ಹೇಳಿ, ನಮ್ಮ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು) ಮಾನ್ಯ ಅಧ್ಯಕ್ಷರೇ, ಈ ದಿವಸ ಇಲ್ಲಿ ಇಟ್ಟಿರುವ ಬೇಡಿಕೆಯನ್ನು ನಾನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಆಡಬೇಕೆಂದು ಇಚ್ಛೆ ಪಡುತ್ತೇನೆ. ಮೊಟ್ಟ ಮೊದಲನೆಯದಾಗಿ, ಹರಿಜನ ಜನಾಂಗದ ವಿದ್ಯಾಭ್ಯಾಸ ಮಟ್ಟವನ್ನು ಯಾವ ರೀತಿಯಲ್ಲಿ ಏರಿಸಿದ್ದಾರೆಂಬುದನ್ನು ನಾವು ಈಗ ಯೋಚನೆ ಮಾಡಿ ನೋಡುವುದಾದರೆ, ಅದು ಯಾವ ರೀತಿ ಇದೆಯೆಂದು ಹೇಳಿದರೆ, ಸಾಯುತಕ್ಕವನಿಗೆ ಒಂದು ಗುಟುಕು ನೀರು ಕೊಟ್ಟಂತಾಗಿದೆ. ಕಾಲೇಜುಗಳಲ್ಲಿ ಮತ್ತು ಹೈಸ್ಕೂಲುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಸರಿಯಾದ ಸೌಕರ್ಯಗಳನ್ನು ಕೊಡದೆ ಇರುವುದು, ಮತ್ತು ಈಗ ಏನು ಅಲ್ಲಿ ಸೌಲಭ್ಯಗಳನ್ನು ಕೊಡುತ್ತಿದ್ದೀರೋ ಅದು ಏನೇನೂ ಸಾಲದು ಎನ್ನುವುದನ್ನು ಅಡ್ವೈಸರಿ ಕಮಿಟಿಯಲ್ಲಿ ನಾವು ಹೇಳಿ

ದ್ದೇವೆ. ಅವರಿಗೆ ಕೊಡತಕ್ಕ ಸ್ಕಾಲರ್‌ಷಿಪ್ಸ್ ಮತ್ತು ಫ್ರೀಷಿಪ್‌ಗಳನ್ನು ಇನ್ನೂ ಹೆಚ್ಚು ಮಾಡಬೇಕು. ಅಲ್ಲಿ ಅವರಿಗೆ ಕೊಡತಕ್ಕಂಥ 27 ಮತ್ತು 40 ರೂಪಾಯಿಗಳನ್ನು 60 ರೂಪಾಯಿಗಳವರೆಗೆ ಏರಿಸಬೇಕೆಂಬ ಬೇಡಿಕೆಯನ್ನು ಕೇಳಿದ್ದೆವು. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಅದನ್ನು ಪರಿಶೀಲಿಸುತ್ತೇವೆಂದು ಹೇಳಿದರು. ಆದರೆ ನಾನು ಇವತ್ತು ಅವರನ್ನು ಅದರ ಬಗ್ಗೆ ಏನಾದರೂ ಕಾರ್ಯಗತ ಮಾಡಿದ್ದೀರಾ ಅಥವಾ ಇಲ್ಲವೇ ಎನ್ನುವುದನ್ನು ಪ್ರಶ್ನಿಸಬೇಕಾಗಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಈ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡು ಇದ್ದಾರೆಂಬುದನ್ನು ತಿಳಿಸಬೇಕೆಂದು ನಾನು ಮನವಿ ಮಾಡುತ್ತೇನೆ.

ಇನ್ನು ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಒಂದು ಲೈಬ್ರೆರಿಯನ್ನು ತೆರೆಯಬೇಕು. ಆ ಲೈಬ್ರೆರಿಯನ್ನು ಸರ್ಕಾರದ ಹಾಸ್ಟಲುಗಳಿಗೂ ಕೊಡಬೇಕು. ಆದರೆ ಇದಕ್ಕೆ ಕೊಡುವ ಗ್ರಾಂಟನ್ನು ವರ್ಷದ ಕೊನೆಯಲ್ಲಿ ಕೊಡುವುದು ಸರಿಯಿಲ್ಲ. ಆ ಗ್ರಾಂಟನ್ನು ಬೇರೆ ಮಾರ್ಚ್ 31ರೊಳಗೆ ಡ್ರಾ ಮಾಡಬೇಕೆಂದು ಹೇಳುತ್ತೀರಿ ಪುಸ್ತಕ, ವಗೈರೆಗಳನ್ನು ಕೊಂಡುಕೊಳ್ಳಬೇಕು. ಅದಕ್ಕೆ ಸಾಕಷ್ಟು ಕಾಲಾವಕಾಶವೇ ಇರುವುದಿಲ್ಲ. ಮಾರ್ಚ್ 31ನೇ ತಾರೀಖು ಹತ್ತಿರ ಬಂದಾಗ್ಗೆ ಗ್ರಾಂಟನ್ನು ಮಂಜೂರು ಮಾಡುತ್ತಾರೆ. ಇದರಿಂದ ಪುಸ್ತಕಗಳನ್ನು ಮತ್ತು ಇತರೇ ಸಲಕರಣೆಗಳನ್ನು ಈ ವಿದ್ಯಾರ್ಥಿಗಳಿಗೆ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಕಾಲೇಜಿನಲ್ಲಿ ಹೆಚ್ಚಿಗೆ ಪುಸ್ತಕಗಳು ದೊರಕದೇ ಇರುವ ಸಂದರ್ಭಗಳಲ್ಲಿ ಪ್ರತ್ಯೇಕವಾಗಿ ಒಂದು ಲೈಬ್ರೆರಿಯನ್ನು ಹಾಸ್ಟಲ್‌ನಲ್ಲಿ ತೆರೆಯಬೇಕೆಂದು ನಮ್ಮ ಆಶೆ.

ಆದರೆ ಬಾಯಲ್ಲಿ ಬೇಕಾದಷ್ಟು ಹೇಳುತ್ತಾರೆ. ಕಾರ್ಯತಃ ಮಾತ್ರ ಏನೂ ಮಾಡುವುದಿಲ್ಲ. ಅವರು ಹೇಳಿದಂತೆ ಆ ಪುಸ್ತಕ ಭಂಡಾರದ ಗ್ರಾಂಟನ್ನು ವರ್ಷದಾಖೈರಿನಲ್ಲಿ 31ನೇ ತಾರೀಖಿನ ದಿನ ಕೊಟ್ಟರೆ ಅದು ಲ್ಯಾಪ್ಸಾಗದೆ ಇನ್ನೇನಾಗುತ್ತದೆ ಸ್ವಾಮಿ! ಆದ್ದರಿಂದ ಈ ಗ್ರಾಂಟನ್ನು ಜನವರಿ ವಳಗೆ ಕೊಡಲು ಏರ್ಪಾಡು ಮಾಡಬೇಕು.

ಇನ್ನು ಕ್ಲಾಸ್—ಒಂದು ಮತ್ತು ಎರಡರಲ್ಲಿ ಷೆಡ್ಯೂಲ್ ಕ್ಯಾಸ್ಟಿನವರಿಗೂ ಮತ್ತು ಷೆಡ್ಯೂಲ್ಡ್ ಟ್ರೈಬಿನವರಿಗೂ ಶೇ. 15 ಮತ್ತು ಶೇ. 3ರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ರಾಜ್ಯಾಂಗದಲ್ಲಿ ಹೇಳಿದ್ದನ್ನೇ ಆ ಬೀರಪ್ಪ ಸಮಿತಿಯವರೂ ಹೇಳಿದ್ದಾರೆ. ಹಾಗೆ ಅವರು ಒತ್ತಾಯ ಮಾಡಿ ಅಷ್ಟು ಹೇಳಿದ್ದರೂ ಮೊನ್ನೆ ನಮ್ಮ ಮುಖ್ಯ ಮಂತ್ರಿಗಳು ಇಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಆ ಶಿಫಾರ್ಸನ್ನು ಕಾರ್ಯಗತ ಮಾಡುವುದಕ್ಕಾಗುವುದಿಲ್ಲ ಎಂದು ಎರಡಾವರ್ತಿ ಅವರು ಒತ್ತಿ ಒತ್ತಿ ಹೇಳಿದರು. ಅವರು ಹಾಗೆ ಏತಕ್ಕೆ ಹೇಳಿದರು! ಅದೇನು ಈಗಿರತಕ್ಕ ಈ ಜನಾಂಗದ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆ ಅನ್ನುವ ಉದ್ದೇಶದಿಂದಲೋ ಅಥವಾ ಬೇರೆ ಇನ್ಯಾವ ಉದ್ದೇಶದಿಂದಲೋ ಅದು ಗೊತ್ತಾಗಲಿಲ್ಲ. ಹಾಗೆ ಕೊಡುವುದಕ್ಕಾಗುವುದಿಲ್ಲ ಎಂಬ ಉದ್ದೇಶವಿದ್ದಾಗ ಆ ನಿಬಂಧನೆಗಳನ್ನಾದರೂ ಏತಕ್ಕೆ ಮಾಡಿದರು? 1961ಕ್ಕೆ ಇವರು ಆ ಕ್ಲಾಸ್ ಎರಡರಲ್ಲಿ ಶೇ. 3ರನ್ನು ಅಚೀವ್ ಮಾಡಿರಬಹುದು. ಅಲ್ಲಿಂದೀಚೆಗೆ ಇವರು ಈ ಹುದ್ದೆಗಳಲ್ಲಿ ಶೇ. 4-5ಕ್ಕಿಂತ ಮೇಲೆ ಹೋಗಿಲ್ಲ ಎಂದು ನಾನು ಸಾರಿಹೇಳುತ್ತೇನೆ. ಇಷ್ಟು ಕೆಲಸಕ್ಕಾಗಿ ಸರ್ಕಾರದವರೇಕೆ ಆ ಬೀರಪ್ಪ ಕಮಿಟಿಗೆ ಅಷ್ಟೊಂದು ಹಣವನ್ನು ಖರ್ಚುಮಾಡಿದರು! ಹಾಗೆ ಸರ್ಕಾರದವರು ತಮ್ಮಿಂದಲೇ ನೇಮಕವಾದಂಥ ಒಂದು ಕಮಿಟಿಯು ಕೊಟ್ಟ ರಿಪೋರ್ಟನ್ನು ಸರ್ಕಾರದವರು ಗೌರವಿಸದಿದ್ದರೆ ಅದಕ್ಕೆ ಮರ್ಯಾದೆ ಕೊಡದಿದ್ದರೆ ಅದನ್ನೇಕೆ ಮಾಡಿದರು? ಮಾಡಿದ ಮೇಲೆ ಇಲ್ಲಿಯವರೆಗೆ ಅವರೆ ಅದಕ್ಕೆ ಬೆಲೆ ಕೊಟ್ಟಿದ್ದಾರೆ ಎಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. ಅಂತೂ ಅವರು ಮಾಡಿದ ಒಂದು ಕಮಿಟಿಯವರದಿಗೆ ಅವರೇ ಬೆಲೆ ಕೊಡದಿರುವುದು ಬಹಳ ಶೋಚನೀಯ.

ಇನ್ನು ಕ್ಲಾಸ್ ಎರಡು ಮತ್ತು ಮೂರರಲ್ಲಿ ಈ ರಿಜರ್ವೇಷನ್ ಬಗ್ಗೆ ಎಷ್ಟು ಜನರಿಗೆ ಸ್ಥಾನಗಳನ್ನು ಕಲ್ಪಿಸಿಕೊಟ್ಟಿದ್ದಾರೆಂಬುದನ್ನು ಪರಿಶೀಲಿಸಿದರೆ ಅವರು ತಂಬಿದ ಜನರಲ್ಲಿ ಅರ್ಧಕ್ಕೆ ಹೆಚ್ಚಾಗಿ ಆ ಕ್ಲಾಸ್ ಮೂರರಲ್ಲಿ ಇರುತ್ತಾರೆ. ಆದರೆ ಸರ್ಕಾರದವರು ಈ ದಿವಸ ಈ ಜನಾಂಗದವರು ನೌಕರಿಯಲ್ಲಿ ಎಷ್ಟು ಜನರಿದ್ದಾರೆಂಬುದನ್ನು ಲೆಕ್ಕಕ್ಕೆ ತೆಗೆದುಕೊಂಡು ಇನ್ನು ಸರ್ಕಾರದವರು ಹುದ್ದೆಗಳನ್ನು ಅಡ್ವರ್‌ಟೈಜ್ ಮಾಡಿದರೆ ಅವರಲ್ಲಿ ಕೆಲಸಕ್ಕೆ ಬರಲು ಜನರೇ ಇರುವುದಿಲ್ಲ ಅನ್ನುವಂಥ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. ಆದರೆ ಅದಕ್ಕೆ ನಾನು ಹೇಳುತ್ತೇನೆ, ಸ್ವಾಮಿ, ಈ ದಿವಸ ನೀವು ಅಪಾಯಿಂಟ್‌ಮೆಂಟ್‌ಗಳನ್ನು ಕೊಡುತ್ತೇವೆಂದು ಹೇಳಿ ನಾನು ನಿಮ್ಮ ಮನೆಯ ಮುಂದೆ ಕೆಲಸಕ್ಕೆ ಜನರನ್ನು ಸಾಲಾಗಿ ನಿಲ್ಲಿಸುತ್ತೇನೆ. ಈ ದಿವಸ ನಮ್ಮ ಜನಾಂಗದಲ್ಲಿ ಡಬ್ಬಲ್ ಗ್ರಾಜುಯೇಟ್‌ಗಳಾಗಿರತಕ್ಕ ಯುವಕರು ಕೆಲಸವಿಲ್ಲದೆ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ಆ ದಿವಸ ಇಲ್ಲಿ ನಮ್ಮ ಮುಖ್ಯ ಮಂತ್ರಿಗಳು ನೀವೊಂದು ಪತ್ರ ಬರೆಯಿರಿ ಸಾಕು ನಾವು ಎಷ್ಟು ಜನ ಇದ್ದರೂ

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ಅವರಿಗೆ ಅಪಾಯಿಂಟ್‌ಮೆಂಟುಗಳನ್ನು ಕೊಡುತ್ತೇವೆಂದು ಹೇಳಿದ್ದರು. ಅದಕ್ಕನುಸಾರವಾಗಿ ಶ್ರೀ ಜಯಪ್ರಕಾಶನಾರಾಯಣ್ ಅವರು ಮುಖ್ಯ ಮಂತ್ರಿಗಳಿಗೆ ಪತ್ರ ಸಹಾ ಬರೆದಿದ್ದರು. ಆದರೆ ಅವರು ಹಾಗೆ ಎಷ್ಟು ಜನರಿಗೆ ನೌಕರಿಗಳನ್ನು ಕೊಟ್ಟರು ಎಂಬ ವಿಚಾರ ನನಗೆ ಗೊತ್ತಾಗಲಿಲ್ಲ.

ಇನ್ನು ಅಸ್ಪೃಶ್ಯತೆಯನ್ನು ತೊಡೆದು ಹಾಕತಕ್ಕ ವಿಚಾರದಲ್ಲಿ ಗ್ರಾಮಪಂಚಾಯಿತಿಗಳಿಗೆ ಪ್ರಯಿಜನ್ನು ಕೊಡುವುದರ ಮೂಲಕ ಇದನ್ನು ತೊಡೆದುಹಾಕುತ್ತೇವೆಂದು ಇಲ್ಲಿ ಹೇಳುತ್ತಿರುವುದೆಲ್ಲಾ ಬರಿ ಒಂದು ನಾಟಕ. ಆದರೆ ಕೆಲವು ಗ್ರಾಮಪಂಚಾಯಿತಿಗಳಿಗೇನೋ ಬಹುಮಾನಗಳನ್ನು ಮಾತ್ರ ಕೊಟ್ಟಿದ್ದಾರೆ. ಇದರಿಂದ ಸರ್ಕಾರಕ್ಕೆ ನಷ್ಟವೇ ವಿನಾ ಇದರಿಂದೇನೂ ಕಾರ್ಯಸಾಧನೆ ಮಾತ್ರ ಆಗಿರುವುದಿಲ್ಲ. ನಮ್ಮಲ್ಲಿ ಮಾದಿಹಳ್ಳಿ ಎಂಬ ಒಂದು ಗ್ರಾಮವಿದೆ. ಅಲ್ಲಿನ ಪಂಚಾಯಿತಿಯವರು ಈ ಬಗ್ಗೆ ನಡೆಸಿದ ಕಾರ್ಯಕ್ರಮಗಳ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಅವರಿಗೆ ಒಂದು ಸಾವಿರ ಮತ್ತು 500 ರೂಪಾಯಿಗಳ ಬಹುಮಾನವನ್ನೇನೊ ಕೊಟ್ಟರು. ಆದರೆ ಸರ್ಕಾರಕ್ಕೆ ಹೀಗೆ ಕೊಡುತ್ತಿರುವುದೆಲ್ಲ ಬರೀ ದಂಡವಾಗಿ ಖರ್ಚಾಗುತ್ತಿದೆ. ಆದರೆ ಪಂಚಾಯಿತಿಗಳಿಂದ ಇದನ್ನು ನೀಗಲು ಸಾಧ್ಯವಿಲ್ಲ. ಇಲ್ಲಿಯವರೆಗೂ ನಡೆಸಿರತಕ್ಕದ್ದು ಎಲ್ಲಾ ಬೋಗಸ್ ಎಂದು ಹೇಳುತ್ತೇನೆ.

ಇನ್ನು ಡ್ರಿಂಕಿಂಗ್‌ವಾಟರ್ ವೆಲ್ಸ್‌ಗಳಿಗೆ ಬಂದರೆ—ಕಳೆದ ಚುನಾವಣೆಗಳ ಕಾಲದಲ್ಲಿ ನಮ್ಮ ಮುಖ್ಯ ಮಂತ್ರಿಗಳು ನಮ್ಮ ಹಾಸನ ಜಿಲ್ಲೆಗೂ ಬಂದಿದ್ದರು. ಅಲ್ಲಿ ಅವರು ಒಂದು ಪೆಂಡಾಲಿನಲ್ಲಿ ಮಾತನಾಡುತ್ತಿದ್ದಾಗ ಅವರು ಹೇಳಿದರು—ಒಂದೊಂದು ಹಳ್ಳಿಯಲ್ಲಿ ಕೆಲವರು ಬಲಗೈನವರು ಅಂತ ಇದ್ದರೆ ಇಲ್ಲಿ ಇನ್ನು ಕೆಲವರು ಎಡಗೈನವರು ಎಂದು ಇರುತ್ತಾರೆ. ಇಂಥಾ ವ್ಯತ್ಯಾಸಗಳನ್ನೆಲ್ಲಾ ತೊಡೆದುಹಾಕಬೇಕೆಂದರೆ ಅದು ಬಹಳ ಕಷ್ಟ. ಹಾಗೆ ಅದನ್ನು ತಡೆಗಟ್ಟುವುದನ್ನು ಹೇಗೆ ಪ್ರಯತ್ನ ಮಾಡಬೇಕು ಎಂಬುದನ್ನು ಪರಿಶೀಲನೆ ಅಲ್ಲಿ ಹೊಸದೊಂದು ಭಿನ್ನಭಾವನೆಯನ್ನು ಕ್ರಿಯೇಟ್‌ಮಾಡಿ ಬಂದರು. ಅದೇನು ಎಂದರೆ ಒಂದು ಊರಿನಲ್ಲಿ ಎಡಗೈನವರು ಮತ್ತು ಬಲಗೈನವರು ಎಂದು ಇದ್ದರೆ ಅವರಿಬ್ಬರಿಗೂ ಕುಡಿಯುವ ನೀರಿನ ಬಾವಿಗಳನ್ನು ಪ್ರತ್ಯೇಕವಾಗಿ ಮಾಡಿಸಿ ಕೊಟ್ಟು ಅಲ್ಲಿದ್ದ ಪ್ರಾಬ್ಲಂ ಅನ್ನು ಸಾಲ್ವ್ ಮಾಡಿದೆವು ಎಂದೇನು ಅವರು ಒಂದು ಮಾತನ್ನು ಹೇಳಿದ್ದಾರೋ ಅದು ತೀರಾ ನಾಚಿಗೆಗೇಡಾದ ಮಾತು ಎಂದು ನಾನು ಹೇಳುತ್ತೇನೆ. ಸರ್ಕಾರದವರು ಇಂಥ ಡಿಫರೆನ್ಸ್‌ಗಳನ್ನು ನೀಗುವುದಕ್ಕೆ ಬದಲಾಗಿ ಅವರೇ ಇಂಥ ಡಿಫರೆನ್ಸ್‌ಗಳು ಬೆಳೆದು ಅವರಲ್ಲಿದ್ದ ಆ ಒಂದು ಒಗ್ಗಟ್ಟಿಗೆ ಇವರೇ ಕಳಂಕ ತಂದಿದ್ದಾರೆ. ಈ ಎಂ.ಪಿ.ಆರ್.ಸಿ. ಸ್ಕೀಮು ಏನಿದೆ ಇದನ್ನು ಸರಿಯಾಗಿ ಕಾರ್ಯಗತಮಾಡುವುದಕ್ಕಾಗುವುದಿಲ್ಲ, ಇದು ಸಾಧ್ಯವಿಲ್ಲದ ಮಾತು ಎಂದು ನಾನು ಹೇಳುತ್ತೇನೆ. ಇಲ್ಲಿಯವರೆಗೂ ಸರ್ಕಾರದವರು ಈ ಯೋಜನೆಗಾಗಿ ಖರ್ಚುಮಾಡಿರತಕ್ಕ ಹಣವೆಲ್ಲಾ ಹಾಳಾಗಿಹೋಗಿದೆ. ಇದು ನಿಜವಾಗಿಯೂ ಸದ್ವಿನಿಯೋಗವಾಗಿಲ್ಲ. ಕೆಲವು ಕಡೆಗೆ ಬಾವಿಗಳನ್ನು ತೆಗೆದಿದ್ದಾರೆ ಆದರೆ ಅಲ್ಲಿ ನೀರು ಬಂದಿಲ್ಲ. ಇಲ್ಲಿಯವರೆಗೂ ಈ ಬಾಬಿಗೆ ಖರ್ಚಾಗಿರತಕ್ಕ ಹಣದಲ್ಲಿ ಶೇ. 50ರಷ್ಟು ಕೆಲಸಗಳು ಕೂಡ ಆಗಿಲ್ಲ. ಸರ್ಕಾರದವರು ಯಾವಾಗಲೂ ತೆರೆಯುವುದು ಇಂಥಾ ಸ್ಕೀಮುಗಳನ್ನೇ. ನಮ್ಮ ಹಾಸನ ತಾಲ್ಲೂಕಿನಲ್ಲಿ ಕಾರೆಹಳ್ಳಿ ಅನ್ನುವ ಒಂದು ಗ್ರಾಮವಿದೆ. ಅಲ್ಲಿ ಈ ಸ್ಕೀಮನ್ನು ತರೆದಿದ್ದಾರೆ. ಅಲ್ಲಿ ಒಬ್ಬ ಸೋಷಿಯಲ್ ವೆಲ್‌ಫೇರ್ ಆಫೀಸರು ಇದ್ದಾರೆ. ಅವರು ಡೆಪ್ಯುಟಿಕಮೀಷನರ ಕಚೇರಿಯ ಹೆಡ್‌ಗುಮಾಸ್ತರಾಗಿದ್ದಾರೆ. ಅಲ್ಲಿ ನಡೆದಿರತಕ್ಕ ಅನೇಕ ಕೆಲಸಗಳನ್ನು ನಾನು ನೋಡಿದ್ದೇನೆ. ಅನೇಕ ಬಾವಿಗಳಲ್ಲಿ ಬಾವಿ ತೋಡಿಸಿದ್ದರೂ ನೀರಿಲ್ಲ. ಇನ್ನು ಅಲ್ಲಿ ಕೆಲವು ಹರಿಜನರಿಗೆ ಬೇಸಾಯಕ್ಕೆ ಎತ್ತುಗಳನ್ನು ಕೊಡಿಸಿದ್ದಾರೆ. ಅವು ಈಗಲೋ ಆಗಲೋ ಸಾಯುತ್ತವೆ ಅನ್ನುವ ಹಾಗಿವೆ. ಇನ್ನು ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ ಆ ಮನೆಗಳ ಮೇಲೆ ಹೊದಿಸಿರತಕ್ಕ ತಗಡುಗಳನ್ನು ನೋಡಿದರೆ ಅವರೇನು ಬುಡುಬುಡುಕೆಯವರು ವಾಸಮಾಡತಕ್ಕ ಜೋಪಡಿಗಳೇನೋ ಅನ್ನುವಂತೆ ಕಾಣುತ್ತಿವೆ. ಹೀಗೆ ಅವರಿಗೆ ಅಲ್ಲಿ ನೀರಿಲ್ಲ, ವಸತಿಯಿಲ್ಲ. ಅಲ್ಲಿ ಬೆಳೆಯಿಲ್ಲ. ಆದ್ದರಿಂದ ಸರ್ಕಾರದವರು ಇಲ್ಲಿಯವರೆಗೂ ಏನು ಒಂದು ಹಣವನ್ನು ಖರ್ಚುಮಾಡಿದ್ದಾರೋ ಅದಕ್ಕೆ ತಕ್ಕ ಪ್ರತಿಫಲ ಬಂದಿಲ್ಲ ಎಂಬುದನ್ನು ನಾನು ಸಾರಿ ಸಾರಿ ಹೇಳುತ್ತೇನೆ. ಇದೆಲ್ಲಾ ಒಂದು ಭಾರಿ ಅಭಾಸಕ್ಕೆ ಕಾರಣವಾಗಿದೆಯೇ ವಿನಾ ಇದರಿಂದ ಪ್ರಯೋಜನವಂತೂ ಸುತರಾಂ ಆಗಿಲ್ಲ.

ಇನ್ನು ಅವರಿಗೆ ಕೊಡತಕ್ಕ ಆ ರೂರಲ್ ಹೌಸಿಂಗ್ ಸಾಲಗಳೇನಿವೆ ಅವು ಅವರಿಗೆ ಸಕಾಲಕ್ಕೆ ತಲುಪುತ್ತಿಲ್ಲ. ಅದಕ್ಕಾಗೇ ನಾನು ಆ ಸಂಸ್ಥೆಗಳ ಅಧ್ಯಕ್ಷತೆ ಈಗಿನಂತೆ ಆ ತಾಲ್ಲೂಕ್ ಬೋರ್ಡ್ ಅಧ್ಯಕ್ಷರಿಗಿರಬಾರದು, ಅದನ್ನು ಈ ಜನಾಂಗದವರಿಗೆ ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ. ಎಷ್ಟೋ

ಕಡೆಗಳಲ್ಲಿ ನನಗೆ ಗೊತ್ತಿರುವ ಹಾಗೆ ಅಲ್ಲಿ ಕೆಲವರಿಗೆ ಮೊದಲನೆಯ ಕಂತಿನ ಹಣವನ್ನು ಮನೆ ಕಟ್ಟಿಕೊಳ್ಳಲು ಕೊಟ್ಟಿದ್ದಾರೆ. ಅನಂತರ ಎರಡನೆ ಇನ್‌ಸ್ಟಾಲ್‌ಮೆಂಟ್‌ನ್ನು ಮಂಜೂರು ಮಾಡಿಲ್ಲ. ಹೀಗಾಗಿ ಅಲ್ಲಿ ಮಳೆಬಂದಾಗ ಆ ಗೋಡೆಗಳೆಲ್ಲಾ ಬಿದ್ದುಹೋಗುತ್ತಿವೆ. ಅಲ್ಲಿ ಇವರು ಆ ಮನೆಗಳಿಗೆ ಖರ್ಚು ಮಾಡುತ್ತಿರುವುದೆಲ್ಲಾ 300 ರೂಪಾಯಿಗಳು ಮಾತ್ರ. ಅದರಲ್ಲಿ ಸರಿಯಾಗಿ ಫೌಂಡೇಷನ್ ಕೂಡ ಹಾಕುವುದಕ್ಕಾಗುವುದಿಲ್ಲ. ಹೀಗಾಗಿ ಅಲ್ಲಿ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿನ ಅಧಿಕಾರಿಗಳು ಈ ಮನೆಗಳ ಆಯ ಎಷ್ಟಿರಬೇಕು ಅಳತೆ ಎಷ್ಟಿರಬೇಕು ಎಂಬುದನ್ನೆಲ್ಲಾ ನಿಗದಿ ಮಾಡಿದ್ದಾರೆ. ಆದರೆ ಆ ಹಳ್ಳಿ ಜನರಿಗೆ ಅದನ್ನು ಖಚಿತವಾಗಿ ಪಾಲಿಸುವುದಕ್ಕಾಗುವುದಿಲ್ಲ. ಅವರು ಅಲ್ಲಿ ಒಂದೆರೆಡು ಅಡಿಗಳನ್ನು ಜಾಸ್ತಿ ಹಾಕಿದ್ದರೆ ಅಂಥಾದ್ದನ್ನು ಮತ್ತೆ ಕಿತ್ತು ಕಟ್ಟಬೇಕು ಎಂದು ಹೇಳುತ್ತಿದ್ದಾರೆ. ಅಂಥ ನಿದರ್ಶನಗಳು ಬೇಕಾದಷ್ಟಿವೆ. ಆ ಜನರು ಈ ಸೊಸೈಟಿಯಿಂದ ಸಾಲ ಪಡೆಯಲು ಅಂದರೆ—300, 350 ರೂಪಾಯಿಗಳ ಸಾಲಕ್ಕಾಗಿ ಅವರು ತಮ್ಮ ಎರಡು—ಎರಡೂವರೆ ಸಾವಿರ ಮತ್ತು ಮೂರು ಸಾವಿರ ಬೆಲೆ ಬಾಳತಕ್ಕ ನಿವೇಶನಗಳನ್ನು ಆಧಾರ ಮಾಡಿದ್ದಾರೆ. ಹಾಗೆ ಮಾಡಿದ್ದರೂ ಅವರಿಗೆ ಅಗತ್ಯವಾದ ಹಣ ಸಿಕ್ಕದೆ ಅವರು ತುಂಬಾ ತೊಂದರೆಗೊಳಗಾಗಿದ್ದಾರೆ. ಹಾಗೆ ಅವರು ತೊಂದರೆ ಪಡುತ್ತಿರುವುದನ್ನು ಕಣ್ಣಲ್ಲಿ ನೋಡಿಕೊಂಡು ಕುಳಿತಿರುವುದು ಬಹಳ ಆಶ್ಚರ್ಯ. ಆದುದರಿಂದ ಸರ್ಕಾರದವರು ಈ ಕೂಡಲೆ ಇದರ ಬಗ್ಗೆ ಒಂದು ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕಾಗಿದೆ ಅಂದರೆ ಅವರು ಈ ಜನಾಂಗದಲ್ಲೀ ಯಾರನ್ನಾದರೂ ಒಬ್ಬರನ್ನು ಚುನಾವಣೆ ಮಾಡಿ ಅಲ್ಲಿಗೆ ಅಧ್ಯಕ್ಷರನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂಥಾ ಒಂದು ಪದ್ಧತಿಯನ್ನು ತಾವು ಜಾರಿಗೆ ತರಬೇಕು. ಆದರೆ ಸರ್ಕಾರದವರು ಈ ಜನಾಂಗ ಬದುಕಿದರೇನು—ಕೆಟ್ಟರೇನು ಎಂಬ ಉದ್ದೇಶವಿಟ್ಟುಕೊಂಡು ಕೆಲಸ ಮಾಡಿದರೆ ಅದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

4–30 P.M.

ಶ್ರೀ ಜಿ. ಬಸವಣ್ಣಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಮಾಜ ಕಲ್ಯಾಣ ಶಾಖೆಯ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ 27ನೇ ಡಿಮ್ಯಾಂಡನ್ನು ಸ್ವಾಗತಿಸುತ್ತಾ ಒಂದೆರಡು ಸಲಹೆಗಳನ್ನು ನಾನು ಕೊಡಬಯಸುತ್ತೇನೆ. ಈಗಾಗಲೇ ನನ್ನ ಸ್ನೇಹಿತರಾದ ಮಾನ್ಯ ಸದಸ್ಯರು ಸೂಕ್ತ ಸಲಹೆಗಳನ್ನು ಈ ಇಲಾಖೆಯ ಬಗ್ಗೆ ಕೊಟ್ಟಿದ್ದಾರೆ. ನಾನಾದರೂ ಆ ಸಲಹೆಗಳ ಬಗ್ಗೆ ಪ್ರಸ್ತಾಪಿಸದೆ ಈ ಇಲಾಖೆಯ ಬಗ್ಗೆ ಒಂದೆರಡು ಅಂಶಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಮೊಟ್ಟ ಮೊದಲನೆಯದಾಗಿ ಸಮಾಜ ಕಲ್ಯಾಣ ಇಲಾಖೆಯ ಪ್ರಗತಿಯ ಬಗ್ಗೆ ಒಂದೆರಡು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಪ್ರಪಂಚದಲ್ಲಿ ಯಾವುದೇ ಒಂದು ದೇಶದ ಸಮಾಜದ ಪ್ರಗತಿಯನ್ನು ಗಮನಿಸಿದರೆ ಆ ದೇಶದ ಸಮಾಜದ ಪ್ರಗತಿಗೆ ಅನೇಕ ವರ್ಷಗಳನ್ನು ತೆಗೆದುಕೊಂಡಿದ್ದಾರೆ. ಅದೇ ರೀತಿ ನಮ್ಮ ದೇಶದ ಸಮಾಜದ ಪ್ರಗತಿಯನ್ನು ಗಮನಿಸಿದರೆ ಕೇವಲ 20 ವರ್ಷಗಳ ಅವಧಿಯಲ್ಲಿ ಗಣನೀಯವಾದ ಪ್ರಗತಿಯನ್ನು ಸಾಧಿಸಿದ್ದಾರೆ. ನಮ್ಮ ರಾಜ್ಯ ಸರ್ಕಾರದವರು ಒಂದು ಸಮರ್ಥನೀಯವಾದ ಕೆಲಸಗಳನ್ನು ನಿಮ್ನವರ್ಗದವರ ಪ್ರಗತಿಯ ಬಗ್ಗೆ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈಗ ಕಳೆದ 200 ವರ್ಷಗಳಿಂದ ನಮ್ಮ ದೇಶ ಪರಕೀಯರ ದಾಸ್ಯಶೃಂಖಲೆಯಲ್ಲಿ ಸಿಲುಕಿತ್ತು. ಸಮಾಜ ಕಲ್ಯಾಣದ ಪ್ರಗತಿ ಆಗದೆ ಸಮಾಜದಲ್ಲಿ ಅಂಧಕಾರ ಮತ್ತು ಅಸ್ಪೃಶ್ಯತೆ ತಾಂಡವವಾಡುತ್ತಿತ್ತು. ನಾವು ಸ್ವಾತಂತ್ರ್ಯವನ್ನು ಗಳಿಸಿದ ಮೇಲೆ 20 ವರ್ಷಗಳ ಅವಧಿಯಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಅಳವಡಿಸಿಕೊಂಡು ಸಮಾಜ ಕಲ್ಯಾಣದ ಕೆಲಸಕ್ಕೆ ಸಾಕಷ್ಟು ಹಣವನ್ನು ಒದಗಿಸಿ ರಾಜ್ಯ ಸರ್ಕಾರದವರು ನಿಮ್ನವರ್ಗದವರ ಪ್ರಗತಿಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡಿದ್ದಾರೆ. ಸಮಾಜ ಕಲ್ಯಾಣದ ಪ್ರಗತಿಯ ಇಪ್ಪತ್ತು ವರ್ಷದ ಹಿಂದಿನ ಚಿತ್ರವನ್ನು ಮತ್ತು ಈಗಿನ ಚಿತ್ರವನ್ನೂ ಪರಿಶೀಲನೆ ಮಾಡಿದರೆ ಸಮಾಜದ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ ಎಂಬುದು ಖಂಡಿತವಾಗಿಯೂ ಅರ್ಥವಾಗುತ್ತದೆ. ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ನಿಮ್ನವರ್ಗದವರ ವಿದ್ಯಾಭ್ಯಾಸಕ್ಕಾಗಿ, ಮಹಿಳೆಯರ ಹಿತರಕ್ಷಣೆಗಾಗಿ, ಅವರ ಆರ್ಥಿಕ ಅಭಿವೃದ್ಧಿಗಾಗಿ, ಕೈಗಾರಿಕೆಗಾಗಿ, ವಿದ್ಯಾರ್ಥಿನಿಲಯಗಳಿಗಾಗಿ ಇತ್ಯಾದಿ ಅನೇಕ ಕೆಲಸಗಳಿಗೆ ಸರ್ಕಾರದವರು ಹಣವನ್ನು ಖರ್ಚು ಮಾಡಿದ್ದಾರೆ, ಈ ರೀತಿ ವಿನಿಯೋಗಿಸಿದ ಹಣ ಸರಿಯಾದ ರೀತಿಯಲ್ಲಿ ಸದುಪಯೋಗವಾಗಿದೆಯೇ ಎಂಬುದನ್ನು ಪರಿಶೀಲಿಸಿದರೆ, ಕೆಲವೊಂದು ಸಂದರ್ಭಗಳಲ್ಲಿ ಅದು ಸರಿಯಾಗಿ ಸದುಪಯೋಗವಾಗಿಲ್ಲ. ಯಾವುದರ ಸಲುವಾಗಿ ಸರ್ಕಾರದವರು ಹಣವನ್ನು ಮಂಜೂರು ಮಾಡುತ್ತಾರೆಯೋ, ಅದನ್ನು ಯಾವ ಕೆಲಸಕ್ಕೆ ಕೊಡುತ್ತಾರೆಯೋ

(ಶ್ರೀ ಜಿ. ಬಸವಣ್ಣಪ್ಪ)

ಅದಕ್ಕೆ ಆ ಹಣವನ್ನು ಉಪಯೋಗಿಸಬೇಕು. ಸರ್ಕಾರದವರು ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ನಿಮ್ನವರ್ಗದವರಿಗೆ ಹಣವನ್ನು ಕೊಟ್ಟರೆ ಅವರು ಅದನ್ನು ಸಾಲವನ್ನು ತೀರಿಸುವುದಕ್ಕೋ ಅಥವಾ ಮತ್ತೆ ಯಾವುದಕ್ಕೋ ಉಪಯೋಗಿಸುವುದು, ಮನೆ ಕಟ್ಟಿಕೊಳ್ಳುವುದಕ್ಕೆ ಹಣವನ್ನು ಕೊಟ್ಟರೆ ಅದನ್ನು ಮದುವೆ ಮಾಡುವುದಕ್ಕೆ ಉಪಯೋಗಿಸುವುದು, ಹೀಗೆ ಕೆಲವೊಂದು ಸಂದರ್ಭಗಳಲ್ಲಿ ಹಣ ದುರುಪಯೋಗವಾಗಿದೆ. ಈ ನಿಮ್ನವರ್ಗದವರ ಪ್ರಗತಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ಸರ್ಕಾರದವರ ಹೊಣೆಗಾರಿಕೆ ಎಷ್ಟಿದೆಯೋ ಅಷ್ಟೆ. ಅದರಲ್ಲಿ ಸದಸ್ಯರದು ಮತ್ತು ಸಾರ್ವಜನಿಕರದು ಹೊಣೆಗಾರಿಕೆ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಬಗ್ಗೆ ಕೆಲಸ ಮಾಡಲು ನಿಷ್ಠಾವಂತರಾದವರು ಇಲ್ಲದೆ ಇರುವುದು ಒಂದು ಕಾರಣ. ಈ ಸಮಾಜದ ಪ್ರಗತಿಯ ವಿಷಯದಲ್ಲಿ ಸರ್ಕಾರದ ಜವಾಬ್ದಾರಿ, ದೃಷ್ಟಿ ಎಷ್ಟು ಇರುತ್ತದೆಯೋ ಅದಕ್ಕಿಂತಲೂ ಹೆಚ್ಚು ನಮ್ಮ ಕರ್ತವ್ಯ ದೃಷ್ಟಿ ಇರಬೇಕು. ಆ ರೀತಿ ಇಲ್ಲದೇ ಹೋದರೆ ಸಮಾಜದ ಪ್ರಗತಿ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಕೆಲವಾರು ವರ್ಷಗಳ ಸಮಾಜದ ಪ್ರಗತಿಯನ್ನು ಗಮನಿಸಿದರೆ, ನಿಮ್ನವರ್ಗದ ಕೆಲವೊಂದು ಕೋಮುಗಳಿಗೆ ಅನ್ಯಾಯವಾಗಿರುವುದು ಕಂಡು ಬರುತ್ತದೆ ಆದರೆ ಈಗಿನ ಒಂದು ವ್ಯವಸ್ಥೆಯಲ್ಲಿ, ಎಲ್ಲಾ ಕೋಮುಗಳಿಗೂ ಸಹ ಸರಿಯಾದ ರಕ್ಷಣೆ ಸಿಕ್ಕುವ ವ್ಯವಸ್ಥೆಯಾಗಿದೆ. ನಮ್ಮ ನಾಯಕರ ಮುಖಂಡತ್ವದಲ್ಲಿ ಎಲ್ಲಾ ಕೋಮಿನವರಿಗೂ ಅನುಕೂಲವಾಗುತ್ತಿದೆ. ಈ ಸೋಷಿಯಲ್ ವೆಲ್‌ಫೇರ್ ಇಲಾಖೆಯ ಮಂತ್ರಿಗಳಾದ ಶ್ರೀಮಾನ್ ನಾರಾಯಣ ಗೌಡರು ಮತ್ತು ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರೂ ನಿಮ್ನ ವರ್ಗದವರ ಪ್ರಗತಿಗಾಗಿ ನಿಷ್‌ಪಕ್ಷಪಾತವಾಗಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ನಾನು ನಿಮ್ನವರ್ಗದವರ ಕೋಮುಗಳ ಪರವಾಗಿ ಅವರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಇನ್ನು ನಿಮ್ನ ವರ್ಗದವರ ವಿದ್ಯಾರ್ಥಿನಿಲಯಗಳು ಏನಿವೆ ಅವುಗಳಲ್ಲಿ ಈಗ್ಗೆ 10—12 ವರ್ಷಗಳ ಹಿಂದೆ ಬೋರ್ಡರುಗಳ ಸ್ಟ್ರೆಂಗ್ತ್ ಎಷ್ಟು ಇತ್ತೋ ಇವೊತ್ತೂ ಅಷ್ಟೇ ಇದೆ. ಮೂರು ವರ್ಷಗಳಿಗೊಮ್ಮೆ ನಿಮ್ನ ವರ್ಗದವರ ವಿದ್ಯಾರ್ಥಿ ನಿಲಯಗಳ ಬೋರ್ಡರುಗಳ ಸ್ಟ್ರೆಂಗ್ತನ್ನು ರಿವೈಜ್ ಮಾಡಬೇಕೆಂದು ನಿಯಮ ಇದ್ದರೂ ಕೂಡ ಅದನ್ನು ರಿವೈಜ್ ಮಾಡದೇ ಇರುವುದು ವಿಷಾದನೀಯ. ಈಗ ನಿಮ್ನ ವರ್ಗದವರ ಹಾಸ್ಟಲುಗಳಲ್ಲಿ ಸ್ಟ್ರೆಂಗ್ತ್ ಒಂದು ಇರುವುದನ್ನು ಒಂದೂವರೆಯಷ್ಟು ಹೆಚ್ಚು ಮಾಡಬೇಕು. ಈ ಬಗ್ಗೆ ಸಮಾಜಕಲ್ಯಾಣ ಇಲಾಖೆಯವರು ಆದಷ್ಟು ಜಾಗ್ರತೆ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಇನ್ನು ನಿಮ್ನ ವರ್ಗದ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುವ ವಿಷಯದಲ್ಲಿ ಒಂದು ವಿಷಯವನ್ನು ಹೇಳಬೇಕಾಗಿದೆ. ನಿಮ್ನವರ್ಗದ ವಿದ್ಯಾರ್ಥಿಗಳು ಒಂದು ಸಾವಿರ ಜನ ಸ್ಕಾಲರ್‌ಷಿಪ್‌ಗೆ ಅರ್ಜಿಯನ್ನು ಸಲ್ಲಿಸಿದರೆ ಅದರಲ್ಲಿ 50—60 ವಿದ್ಯಾರ್ಥಿಗಳಿಗೆ ಮಾತ್ರ ಸ್ಕಾಲರ್‌ಷಿಪ್ ಮಂಜೂರಾಗುತ್ತಿದೆ. ನಿಜವಾಗಿಯೂ ಈ ವಿಚಾರದಲ್ಲಿ ನಾವು ತುಂಬ ವ್ಯಥೆ ಪಡಬೇಕಾಗಿದೆ. ಸರ್ಕಾರದವರು ನಿಮ್ನ ವರ್ಗದವರಲ್ಲಿ ಪ್ರಗತಿಯನ್ನು ನಿರೀಕ್ಷಿಸಬೇಕಾದರೆ ವಿದ್ಯಾ ಪ್ರಗತಿ ಒಂದರಿಂದಲೇ ಸಾಧ್ಯ, ಮತ್ತೆ ಯಾವುದರಿಂದಲೂ ಸಾಧ್ಯವಿಲ್ಲ ಎಂದು ನಾನು ಗಂಟಾಘೋಷವಾಗಿ ಹೇಳುತ್ತೇನೆ. ಹರಿಜನರಿಗೆ ಮನೆಕಟ್ಟಿಕೊಳ್ಳುವುದಕ್ಕೆ ಮರಗಳನ್ನು ಕೊಡುತ್ತೇವೆ, ನಾಟಾಗಳನ್ನು ಕೊಡುತ್ತೇವೆ, ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಹಣ ಕೊಡುತ್ತೇವೆ ಎಂದು ಹೇಳಿದರೆ ನಿಮ್ನವರ್ಗದವರ ಪ್ರಗತಿಯಾಗುವುದಿಲ್ಲ. ಅದೆಲ್ಲವೂ ಪ್ರಭಾವಶಾಲಿಗಳ ಕೈವಶವಾಗುತ್ತದೆ. ಈ ವ್ಯವಸ್ಥೆಯನ್ನು ಬೇಕಾದರೆ ನಿಲ್ಲಿಸಿ ನಿಮ್ನವರ್ಗದವರ ವಿದ್ಯಾಪ್ರಗತಿಗೆ ಹೆಚ್ಚಿನ ಹಣವನ್ನು ವ್ಯಯ ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಅನೇಕ ನಿಮ್ನವರ್ಗದವರ ವಿದ್ಯಾರ್ಥಿನಿಲಯಗಳಲ್ಲಿ ಬೋರ್ಡರುಗಳಿಗೆ ಊಟದ ವ್ಯವಸೆಯಲ್ಲಿ ಬಟ್ಟೆಯ ವ್ಯವಸ್ಥೆಯಲ್ಲಿ, ಪುಸ್ತಕಗಳನ್ನು ಕೊಡತಕ್ಕ ವ್ಯವಸ್ಥೆಯಲ್ಲಿ ಇವರ ಪ್ರಗತಿ ಕುಂಠಿತವಾಗಿದೆ. ಆದ್ದರಿಂದ ನಿಮ್ನವರ್ಗದ ವಿದ್ಯಾರ್ಥಿಗಳಿಗೆ ಎಲ್ಲಾ ಸ್ಕೂಲು ಮತ್ತು ಕಾಲೇಜುಗಳಲ್ಲಿಯೂ ಪ್ರತಿಯೊಬ್ಬರಿಗೂ ಸ್ಕಾಲರ್‌ಷಿಪ್ ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕು ಮತ್ತು ಊಟದ ವ್ಯವಸ್ಥೆ ಬಟ್ಟೆಯನ್ನು ಕೊಡುವ ವ್ಯವಸ್ಥೆ ಈ ಎಲ್ಲಾ ವ್ಯವಸ್ಥೆಯನ್ನು ಸರಿಪಡಿಸಿ ನಿಮ್ನವರ್ಗದವರ ಪ್ರಗತಿಗೆ ತಳಹದಿಯನ್ನು ಹಾಕುವ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಿಮ್ನವರ್ಗದ ವಿದ್ಯಾರ್ಥಿನಿಯರಿಗೆ ವಿದ್ಯಾ ಇಲಾಖೆಯಲ್ಲಿ ಬಟ್ಟೆಗೋಸ್ಕರ ಸರ್ಕಾರದವರು 10 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದು ಸಾಕಾಗುವುದಿಲ್ಲ. ಅವರಿಗೆ ಕನಿಷ್ಟ ಪಕ್ಷ 30—40 ರೂಪಾಯಿಗಳನ್ನಾದರೂ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಿದರೆ ಅವರಿಗೆ

ಅದರಿಂದ ಒಂದು ಉಪಯೋಗವಾಗುತ್ತದೆ ಎಂದು ನನ್ನ ಸೂಚನೆಯನ್ನು ನಮ್ಮ ಸಮಾಜ ಕಲ್ಯಾಣ ಶಾಖೆಯ ಸಚಿವರ ಗಮನಕ್ಕೆ ನಾನು ತರಬಯಸುತ್ತೇನೆ. ನಿಮ್ನವರ್ಗದವರ ವಿದ್ಯಾರ್ಥಿನಿಲಯಗಳನ್ನು ಕಟ್ಟುವಾಗ ಅವರು ಕಾಲು ಭಾಗ ಹಣವನ್ನು ಸರ್ಕಾರಕ್ಕೆ ಕೊಡಬೇಕೆಂದು ಒಂದು ನಿಯಮವನ್ನು ಹಾಕಿದ್ದಾರೆ, ಈ ಕಾಲು ಭಾಗದ ಹಣವನ್ನು ನಿಮ್ನವರ್ಗದವರು ಒದಗಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಅದನ್ನು 1/10 ಭಾಗಕ್ಕೆ ಇಳಿಸಬೇಕೆಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಿಮ್ನವರ್ಗದವರಿಗೆ ಕೆಲಸಗಳನ್ನು ಕೊಡತಕ್ಕ ವಿಷಯದಲ್ಲಿ 18 ಪರ್ಸೆಂಟ್ ರಿಜರ್ವೇಷನ್ ಇಟ್ಟಿದ್ದಾರೆ. ಅದನ್ನು ಕಡ್ಡಾಯವಾಗಿ ಅನುಸರಿಸುವಂತಾಗಬೇಕು. ನನಗೆ ಗೊತ್ತಿರುವ ಹಾಗೆ ಅನೇಕ ಜನ ನಿಮ್ನವರ್ಗದ ವಿದ್ಯಾರ್ಥಿಗಳು ಡಿಗ್ರಿಹೋಲ್ಡರುಗಳು, ಡಿಪ್ಲೋಮಾ ಹೋಲ್ಡರುಗಳು ಕೆಲಸ ಇಲ್ಲದೆ ಅಲೆಯುತ್ತಿದ್ದಾರೆ. ಇಂಥ ಒಂದು ಹೃದಯ ವಿದ್ರಾವಕವಾದ ದೃಶ್ಯವನ್ನು ನಾವು ಇವೊತ್ತು ಕಣ್ಣಾರೆ ನೋಡುತ್ತಿದ್ದೇವೆ. ಆದ್ದರಿಂದ ನಿಮ್ನವರ್ಗದವರಿಗೆ ಕಡ್ಡಾಯವಾಗಿ 18 ಪರ್ಸೆಂಟ್ ಕೆಲಸವನ್ನು ಕೊಡತಕ್ಕ ನೀತಿಯನ್ನು ಕಡ್ಡಾಯವಾಗಿ ಸರ್ಕಾರದವರು ಅನುಸರಿಸಬೇಕು ಎಂದು ನಾನು ಹೇಳುತ್ತೇನೆ. ನಿಮ್ನವರ್ಗದವರಲ್ಲಿ ಪ್ರಗತಿಯನ್ನು ನಿರೀಕ್ಷಿಸಬೇಕಾದರೆ ಅವರ ವಿದ್ಯಾಪ್ರಗತಿಗೆ ಸರ್ಕಾರದವರು ಹೆಚ್ಚಿನ ಸಹಾಯವನ್ನು ಮಾಡಬೇಕು. ವಿದ್ಯಾಪ್ರಗತಿಯ ಕಡೆಗೆ ಅವರ ದೃಷ್ಟಿಕೋಣವನ್ನು ಹರಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಎನ್. ಪಾಟೀಲ್.—ಸ್ವಾಮಿ! ನಾನು ಈ ಬೇಡಿಕೆಯನ್ನು ವಿರೋಧಿಸುತ್ತೇನೆ. ಮಹಾತ್ಮಗಾಂಧಿಯವರು ಈ ಜನಾಂಗಕ್ಕೆ ಹರಿಜನರು ಎಂದು ಕರೆದರು. ಕಳೆದ 20 ವರ್ಷಗಳ ಈ ಕಾಂಗ್ರೆಸ್ಸಿನವರ ಆಡಳಿತದಲ್ಲಿ ಹರಿಜನರಿಗೆ ಯಾವ ಅನುಕೂಲತೆಗಳೂ, ಸೌಲಭ್ಯಗಳೂ ದೊರೆತಿಲ್ಲ. ಇದು ನಮ್ಮ ಸ್ವಂತ ಸಹೋದರರಿಂದ, ನಮ್ಮ ದೇಶದವರಿಂದಲೇ, ನಮ್ಮ ಸ್ವಂತ ಜನರಿಂದಲೇ ಈ ಜನರಿಗೆ ಅನ್ಯಾಯಗಳು ನಡೆಯುತ್ತಾ ಬಂದಿವೆ. ಬಹು ಪುರಾತನ ಮನೋವೃತ್ತಿ ಇರುವ ಜನರು ಜಾತಿಭೇಧಗಳನ್ನೂ ವರ್ಣಬೇಧಗಳನ್ನೂ ಉಂಟು ಮಾಡಿ ಈ ಜನರನ್ನು ಕೆಳಗೆ ತುಳಿದಿದ್ದಾರೆ. ಮಹಾತ್ಮಗಾಂಧಿಯವರು ನಮ್ಮನ್ನು ಏತಕ್ಕೋಸ್ಕರ ಹರಿಜನರು ಎಂದು ಹೆಸರು ಕೊಟ್ಟರೋ ಎಂದು ಅವರು ಪರಿತಪಿಸುತ್ತಿದ್ದಾರೆ. ಎಂದರೆ ಅವರಿಗೆ ಶಾಪ ಹಾಕಬೇಕೆಂದು ಅಲ್ಲ. ಅವರನ್ನು ಜ್ಞಾಪಿಸಿಕೊಳ್ಳುತ್ತಾರೆ. ಹರಿಜನರಿಗೆ ಎಂದು ತಮ್ಮ ಹೆಸರಿನಲ್ಲಿ ಕೋಟಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ! ಅದರಿಂದ ತಮಗೆ ಯಾವ ಪ್ರಯೋಜನವೂ ಸಿಕ್ಕಿಲ್ಲ ಎಂದು ಆ ಜನರು ಪರಿತಪಿಸುತ್ತಿದ್ದಾರೆ. ಸ್ವಾರ್ಥಿಗಳು ಬಡ ಹರಿಜನರ ಹೆಸರನ್ನು ಹೇಳಿಕೊಂಡು, ಅವರನ್ನು ಉದ್ಧಾರ ಮಾಡುತ್ತೇವೆಂದು ಹೇಳಿ ಅವರಿಗೆ ಸಿಕ್ಕುವ ಸೌಲಭ್ಯಗಳನ್ನು ಇವರೇ ಪಡೆದುಕೊಳ್ಳುತ್ತಿದ್ದಾರೆ. ಮೇಲು ಜಾತಿ ಕೀಳುಜಾತಿ ಎಂದು ಹೇಳಿಕೊಂಡು ನಾವು ಹರಿಜನರ ಸೇವೆಯನ್ನು ಮಾಡುತ್ತೇವೆಂದು ಇವರು ಹೊರಟಿದ್ದಾರೆ. ನಿಜವಾಗಿಯೂ ಇವರು ಹರಿಜನರ ಪ್ರಗತಿಯ ಬಗ್ಗೆ ಮಾಡುತ್ತಿರುವ ಕೆಲಸ ಕಾರ್ಯಗಳನ್ನು ನೋಡಿದರೆ ಇವರು ಅಧಿಕಾರದಲ್ಲಿರುವುದಕ್ಕೆ ಅರ್ಹರಲ್ಲ. ಈಗ 20 ವರ್ಷಗಳಿಂದಲೂ ಇವರು ಇದೇ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಹರಿಜನರನ್ನು ಕೆಳಕ್ಕೆ ತುಳಿಯುವ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆಯೇ ಹೊರತು, ಇವರನ್ನು ಮೇಲಕ್ಕೆ ಎತ್ತುವ ಕೆಲಸವನ್ನು ಮಾಡಿಲ್ಲ. ಸಮಾಜ ಸೇವೆಯನ್ನು ಮಾಡುತ್ತೇವೆ, ಹರಿಜನರನ್ನು ಉದ್ಧಾರಮಾಡುತ್ತೇವೆಂದು ಹೇಳಿ ಬರೀ ಬಾಯಲ್ಲಿ ಹೇಳುತ್ತಾರೆಯೇ ಹೊರತು ಕಾರ್ಯತಃ ಯಾವ ಕೆಲಸಗಳನ್ನೂ ಹರಿಜನರ ಪ್ರಗತಿಯ ಬಗ್ಗೆ ಮಾಡಿಲ್ಲ. ಮಹಾತ್ಮಾಗಾಂಧಿಯವರು ಹರಿಜನರು ಎನ್ನುವ ಶಬ್ದವನ್ನು ಏತಕ್ಕೆ ಹೇಳಿದರೋ ಎಂದು ನನ್ನ ಮನಸ್ಸಿಗೆ ನೋವಾಗುತ್ತದೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಪಾಪದ ನಗರಗಳು ಎಂದು ಹೇಳುವ ಹಾಗೆ ಇಲ್ಲಿ ಹರಿಜನರ ಕಾಲೋನಿಗಳನ್ನು ಮಾಡಿದ್ದೀರಿ. ಹಿಂದಿನಿಂದಲೂ ಸಮಾಜದ ಗುತ್ತಿಗೆದಾರರು ತಮ್ಮನ್ನು ತಾವು ದೇವರೆಂದು ಮಾಡಿಕೊಂಡು ಉಳಿದವರಿಗೆ ತಿರಸ್ಕರಿಸಿ ಮಾಡಿದ ಅನ್ಯಾಯಗಳ ಗುರುತು ಮುಂದಿನ ಜನಾಂಗದಲ್ಲಿ ಕೂಡ ಇವರೇ ಶೂದ್ರರು. ನಮ್ಮ ಪೂರ್ವ ಜನರು ಇವರನ್ನು ಹಾಗೆ ದೂರ ಇಟ್ಟು ಇವರನ್ನು ಮನುಷ್ಯರೆಂದು ಪರಿಗಣಿಸದೆ ಇದ್ದಾರೆ. ಮುಂದೆ ಬರುವ ಸಮಾಜ ಹೊಸಪೀಳಿಗೆಯು ಇವರನ್ನು ಪ್ರತ್ಯೇಕವಾಗಿ ದೂರ ಇಡಬೇಕೆಂದು Harijan colony ಸ್ಥಾಪಿಸುತ್ತಿದ್ದೀರಿ. It is a shameful memory of the feudal remnent blood are caste superiority, colour superiority, blood superiority, enough of disgrace. Free India cannot tolerate this perpetuation of torture concentration camps given them. Housing facility with other fellow citizens and not in isolation

(ಶ್ರೀ ಪಿ. ಎನ್. ಪಾಟೀಲ್)

camps ಮಾಡಿದ್ದಾರೆ. ಆ ಜನರ ಪ್ರಗತಿಗೋಸ್ಕರ ಮಾಡುವುದು ಖಂಡಿತಾ ಅಲ್ಲ. ಇದು ಹಳೆಯ ಕಾಲದ ಭಿನ್ನ ಬೇಧಗಳನ್ನು ಮುಂದುವರಿಸಿಕೊಂಡು ಹೋಗುವ ದುರುದ್ದೇಶದಿಂದ ಮಾಡಿರುವ ಕಾಲೋನಿಗಳು.

ಇವತ್ತಿನ ದಿವಸ ಹರಿಜನರಿಂದ ಸೀಟಿಗಾಗಿ ಅರ್ಜಿ ಬಂದರೆ ಮೂರು ಇಂಚು ಹಿಂದೆ ಹಾಕುತ್ತಾರೆ. ಸೋಷಿಯಲ್ ವೆಲ್‌ಫೇರ್ ಆಫೀಸಿನಲ್ಲಿ ಇರುವಂತಹ ಅಧಿಕಾರಿಗಳು ಹೊಟ್ಟೆ ತುಂಬಿದವರಾಗಿದ್ದಾರೆ. ಅವರಿಗೆ ಹರಿಜನರ ಕಷ್ಟ ಗೊತ್ತಾಗುತ್ತಿಲ್ಲ. ಹರಿಜನರು ಸಹ ನಾಗರೀಕರು ಎಂದು ಇವರು ತಿಳಿದುಕೊಂಡಿಲ್ಲ. ಹರಿಜನರ ಉದ್ಧಾರಕ್ಕಾಗಿ ಶ್ರೀ ನಾರಾಯಣಗೌಡರು 3 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಆದರೆ ಈ ಹಣದಲ್ಲಿ ಮೂರು ಲಕ್ಷ ರೂಪಾಯಿಗಳು ಸಹ ಇವರಿಗೆ ಸಿಗುವುದಿಲ್ಲ. ಹರಿಜನರಿಗೆ ಜಮೀನು ಸಾಗುವಳಿ ಮಾಡಲು ಒಂದೊಂದು ಜೊತೆ ಎತ್ತುಗಳನ್ನು ಕೊಡಲಾಗಿದೆಯೆಂದು ಇಲ್ಲಿ ಸರ್ಕಾರದವರು ಹೇಳುತ್ತಾರೆ, ಆದರೆ ನಿಜವಾಗಿಯೂ ಆ ಎತ್ತುಗಳು ಆ ಊರಿನ ಶ್ರೀಮಂತರ ಮನೆಯಲ್ಲಿ ಇವೆ. ಆ ಶ್ರೀಮಂತರು ಈ ಎತ್ತುಗಳನ್ನು ತಮ್ಮ ಜಮೀನುಗಳಲ್ಲಿ ಕೆಲಸ ಮಾಡಲು ಉಪಯೋಗಿಸಿಕೊಳ್ಳುತ್ತಿದ್ದಾರೆ. ಚುನಾವಣೆ ಸಮಯದಲ್ಲಿ ಹರಿಜನರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಹೇಳಿಕೊಂಡು ಗೆದ್ದು ಬಂದು ಅನಂತರ ಅವರನ್ನು ಅಮೇರಿಕಾದಲ್ಲಿ ಅಲ್ಲಿಯ ಜನರು ನಿಗ್ರೋಗಳನ್ನು ಕಾಣುವ ರೀತಿಯಲ್ಲಿ ಇಲ್ಲಿಯ ಹರಿಜನರನ್ನು ಕಾಣುವುದಕ್ಕೆ ಪ್ರಾರಂಭ ಮಾಡುತ್ತೀರಿ. ಇವತ್ತಿನ ದಿವಸ ನಾಯಿಗಳಿಗೆ, ದನಗಳಿಗೆ ಒಂದು ಕಿಮ್ಮತ್ತು ಇದೆ. ಇವುಗಳಿಗೆ ಇರುವ ಒಂದು ಕಿಮ್ಮತ್ತು ಹರಿಜನರಿಗೆ ಇಲ್ಲವಾಗಿದೆ. ಭೂದಾನದ ಅಂಗವಾಗಿ ನೂರಾರು ಎಕರೆಗಳು ದಾನವಾಗಿ ಶ್ರೀಮಂತರಿಂದ ಬಂತು. ಆ ಶ್ರೀಮಂತರು ಒಳ್ಳೆಯ ಜಮೀನುಗಳನ್ನು ತಾವೇ ಇಟ್ಟುಕೊಂಡು ಬಂಜರು ಭೂಮಿಯನ್ನು ದಾನವಾಗಿ ಕೊಟ್ಟರು. ಈ ರೀತಿ ದಾನವಾಗಿ ಕೊಟ್ಟು ದಾನಶೂರಕರ್ಣ ಎಂದು ಹೆಸರು ಪಡೆದುಕೊಂಡರು. ಈ ರೀತಿ ಬಂದ ಜಮೀನುಗಳನ್ನು ಒಂದೆರಡು ಎಕರೆಗಳಂತೆ ಹರಿಜನರಿಗೆ ಸರ್ಕಾರದವರು ಹಂಚಿದರು. ಈ ರೀತಿ ಹಂಚಿದ ಭೂಮಿಯನ್ನು ಸಾಗುವಳಿ ಮಾಡಲು ಎತ್ತುಗಳನ್ನು ಕೊಟ್ಟಾಗ, ಆ ಎತ್ತುಗಳನ್ನು ಶ್ರೀಮಂತರೇ ಉಪಯೋಗಿಸಿಕೊಂಡರು. ಈ ಪ್ರಕಾರ ಹರಿಜನರ ಉದ್ಧಾರವಾಗುತ್ತಿದೆ. ತಕ್ಕಡಿಯನ್ನು ಸಮವಾಗಿ ಹಿಡಿಯುವುದಕ್ಕೆ ನ್ಯಾಯಾಸ್ಥಾನ ಇದೆ. ಆದರೆ ಆ ನ್ಯಾಯಾಸ್ಥಾನದಿಂದ ಕೂಡ ಈ ಹರಿಜನರ ಉದ್ಧಾರವಾಗುತ್ತಿಲ್ಲ. ಇವತ್ತಿನ ದಿವಸ ಜನರಲ್ಲಿ ಲಾ ಅಂಡ್ ಆರ್ಡರ ಬಗ್ಗೆ ವಿಶ್ವಾಸ ತಪ್ಪಿಹೋಗುತ್ತಿದೆ. ಪ್ರತಿಯೊಂದು ವಿಚಾರದ ಬಗ್ಗೆಯೂ ಕೂಡ ಮಾನ್ಯ ಗೃಹಮಂತ್ರಿಗಳು ಕೇಸು ಕೋರ್ಟಿನಲ್ಲಿರುವುದರಿಂದ ಸರ್ಕಾರದವರು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ನಮ್ಮ ಕಡೆ ಕೆಲವು ಹರಿಜನರು 50ವರ್ಷಗಳಿಂದ ವಂಶ ಪರಂಪರೆಯಿಂದ ಸಾಗುವಳಿ ಮಾಡಿದ ಕೆಲವು ಭೂಮಿಗಳು ನೂರಾರು ಎಕರೆ ಜಮೀನು ತಮ್ಮದೇ ಎಂಬ ಭಾವನೆಯಿಂದ ಸಾಗುವಳಿ ಮಾಡುತ್ತ ಬಂದು 50 ವರ್ಷದ possession proof ಕೊಟ್ಟು Special Deputy Commissioner ಕಚೇರಿಯಿಂದ ಕೇಸ್ ಗೆದ್ದರು. 1967ರಲ್ಲಿ ಕೂಡ ಅವರ ಹೆಸರಿನಲ್ಲಿ ಭೂಮಿ ಬರೆದಿದ್ದು ಇದ್ದರೂ 68ರ ಕಾಗದಗಳು ಮೋಸದಲ್ಲಿ ತನ್ನ ಹೆಸರಿನಲ್ಲಿ ಮಾಡಿಸಿಕೊಂಡು ಗೂಂಡಾಗಳು ಹಾಗು ಪೋಲೀಸರ ಸಹಾಯ ಪಡೆದುಕೊಂಡು ಕಾಂಗ್ರೆಸ್ ಹಣವಂತರಲ್ಲೂ ಇಡೀ ವರ್ಷವೆಲ್ಲಾ ಶ್ರಮಪಟ್ಟು ಬೆಳೆಸಿಕೊಂಡು ಬಂದ ಬೆಳೆಗಳನ್ನು ಲೂಟಿ ಮಾಡಿಕೊಂಡು ಹೋದರು ಕೇಳುವವರಿಲ್ಲದಂತಾಗಿದೆ. ಸೇಡಂ ತಾಲ್ಲೂಕದಲ್ಲಿ ಈ ಜಮೀನುಗಳು ಇವರ ಹೆಸರಿಗೆ ಆಗಿ, ಸಾಗುವಳಿ ಮಾಡಿ ಬೆಳೆ ಬಂದು ನಿಂತಾಗ, ಅಲ್ಲಿಯ ಕೆಲವು ಶ್ರೀಮಂತರು ನಾಲ್ಕು ಜನ ಪೋಲೀಸರನ್ನು ಕರೆದುಕೊಂಡು ಹೋಗಿ ಬೆಳೆಯನ್ನೆಲ್ಲಾ ಲೂಟಿ ಮಾಡಿಕೊಂಡು ಹೋಗುತ್ತಿದ್ದಾರೆ. ಈ ಬಗ್ಗೆ ಆ ಹರಿಜನರು ಏನು ಕ್ರಮ ತೆಗೆದುಕೊಳ್ಳುವುದಕ್ಕೂ ಸಹ ಸಾಧ್ಯವಾಗುತ್ತಿಲ್ಲ. ಈ ರೀತಿಯಾಗಿ ಹರಿಜನರ ಉದ್ಧಾರವಾಗುತ್ತಿದೆ. ಕೆಳಗೆ ಬಿದ್ದಿರತಕ್ಕಂಥ ಇವರನ್ನು ಮೇಲೆ ತರಲು ಸರ್ಕಾರದವರು ನಿಜವಾಗಿಯೂ ಯಾವ ಕ್ರಮವನ್ನು ಕೈಕೊಳ್ಳುತ್ತಿಲ್ಲ. ಹರಿಜನರ ಅಭಿವೃದ್ಧಿಗಾಗಿಯೇ ಇರತಕ್ಕಂಥ ಅನೇಕ ಲಿಟರೇಚರ್‌ಗಳನ್ನು ನಾನು ಓದಿದ್ದೇನೆ. ಅದು ಎಲ್ಲಾ ಬರೀ ಪ್ರಾಪಗ್ಯಾಂಡವೇ ಹೊರತು ಯಾವ ರೀತಿಯಿಂದಲೂ ಸಹ ಇವರ ಅಭಿವೃದ್ಧಿಯಾಗುತ್ತಿಲ್ಲ. ಅವರೇ, ಬೇರೆ, ನಾವೇ ಬೇರೆ ಎಂಬ ಭಾವನೆ ಇನ್ನೂ ಬೆಳೆದುಕೊಂಡು ಹೋಗುತ್ತಿದೆ. ಕಳೆದ 2 ಸಾವಿರ ವರ್ಷಗಳಿಂದಲೂ ಸಹ ಇವರ ಮೇಲೆ ಆಗುತ್ತಿರುವ ಅನ್ಯಾಯ ಕೊನೆಯಾಗಲಿಲ್ಲ. ಈಗ ಕಾಂಗ್ರೆಸ್ ರಾಜ್ಯದಲ್ಲಿ ಇವರ ಅಭಿವೃದ್ಧಿಯಾಗಿಲ್ಲ. ಆದ್ದರಿಂದ ನಾನು ಶ್ರೀ ನಾರಾಯಣಗೌಡರವರನ್ನು ಕೇಳಿಕೊಳ್ಳುವುದು ಇಷ್ಟೆ, ತಾವು ಈ ಖಾತೆಗೆ ರಾಜೀನಾಮೆಯನ್ನು ಕೊಟ್ಟು ಬೇರೆ ಯಾವುದಾದರೂ ಒಂದು ಖಾತೆಯನ್ನು ತೆಗೆದುಕೊಳ್ಳಿ. ಯಾವ ಒಂದು ಜನಾಂಗದ ಮೇಲೆ ಇಷ್ಟೊಂದು ಅನ್ಯಾಯಗಳು ನಡೆಯುತ್ತಿದೆಯೋ, ಅದನ್ನು ಸರಿಪಡಿಸಲು ಆ ಜನಾಂಗದವರೇ

ಒಬ್ಬರು ಮಂತ್ರಿಗಳಾಗಲಿ. ಅವರಿಗಾದರೆ ಹರಿಜನರ ಕಷ್ಟಗಳು ತಿಳಿದಿರುತ್ತದೆ. ಇವರ ಅಭಿವೃದ್ಧಿಯನ್ನು ಯಾವ ರೀತಿ ಮಾಡಬೇಕು ಎಂಬ ಬಗ್ಗೆ ಒಂದು ಕಮೀಷನ್ ನೇಮಕ ಮಾಡಬಹುದು. ಅವರು ಸಹ ಹರಿಜನರ ಬಗ್ಗೆ ನಡೆಯುತ್ತಿರುವ ಅನ್ಯಾಯಗಳು ಮತ್ತು ಅವರ ಅಭಿವೃದ್ಧಿಯ ಬಗ್ಗೆ ಕೈಕೊಳ್ಳಬೇಕಾದ ಕಾರ್ಯಕ್ರಮಗಳನ್ನು ತಿಳಿಸಬಹುದು. ಆದರೆ ಅದರಿಂದ ಯಾವ ಒಂದು ಪ್ರಯೋಜನವೂ ಸಹ ಆಗುವುದಿಲ್ಲ. ಇದೇ ಉದ್ದೇಶಕ್ಕಾಗಿ ರಚನೆಯಾದಂಥ ಅನೇಕ ಕಮೀಷನ್‌ಗಳು ತಮ್ಮ ತಮ್ಮ ವರದಿಯನ್ನು ಕೊಟ್ಟಿದ್ದರೂ ಸಹ, ಆ ವರದಿಯ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನೂ ಇದುವರೆಗೆ ತೆಗೆದುಕೊಂಡಿಲ್ಲ. ಈ ರೀತಿ ಕಮೀಷನ್ ನೇಮಕ ಮಾಡುವ ಬದಲು ಹಳ್ಳಿಗಳಿಗೇ ಹೋಗಿ ಹರಿಜನರ 5—6 ಮನೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮಂತ್ರಿಗಳು ನೋಡಿದರೆ ಅವರ ಕಷ್ಟ ಏನೆಂಬುದು ಗೊತ್ತಾಗುತ್ತದೆ. ಹಳ್ಳಿಗಳಲ್ಲಿ ಹರಿಜನರನ್ನು ಗುಡಿಗಳಿಗೆ ಹೋಗುವುದಕ್ಕೆ ಬಿಡುತ್ತಿಲ್ಲ, ಸವರ್ಣೀಯ ಹಿಂದುಗಳ ಕ್ಷುಲ್ಲಕ ಮನೋವೃತ್ತಿಯಿಂದ ಮುಕ್ತಿಗೊಳ್ಳುವ ಆಕಾಂಕ್ಷೆಯಿಂದ ಎಷ್ಟು ಹರಿಜನರು ಬೌದ್ಧಧರ್ಮ ಸೇರಿದರು, ಇಸ್ಲಾಂ ಹಾಗು ಕ್ರೈಸ್ತ ಮತವನ್ನು ಅಪ್ಪಿಕೊಂಡರು, ಬಸವೇಶ್ವರರ ಕಾಲದಲ್ಲಿ ಕಾಯಕವೇ ಕೈಲಾಸವೆಂದು ಸಕಲ ಧರ್ಮಗಳೂ ವರ್ಣಗಳೂ ನುಳ್ಳೆಂದು ಸಾರಿ ಸಮಾನತೆ ತರಲು ಪ್ರಯತ್ನ ಪಟ್ಟರು. ಆದರೆ ವರ್ಗ ರಹಿತ ತರದೆ ಇದ್ದುದಕ್ಕಾಗಿ ವರ್ಣ ರಹಿತ ಸಮಾಜ ಜನ್ಮತಾಳಲಿಲ್ಲ. ಹರಿಜನರ ಆರ್ಥಿಕ ಅಭಿವೃದ್ಧಿ ಆಗಲೇಬೇಕು. ಬಾವಿಗಳಲ್ಲಿ ನೀರು ಸೇದುವುದಕ್ಕೆ ಬಿಡುತ್ತಿಲ್ಲ. ಈ ರೀತಿ ನಿರ್ಬಂಧ ಹಾಕುವವರನ್ನು ಹಿಡಿದು ಅಂತಹವರ ಮೇಲೆ ಕ್ರಿಮಿನಲ್ ಕೇಸ್ ಹಾಕಬಹುದೆಂದು ಕಾನೂನು ಇದೆ. ಆದರೆ ಆ ಕಾನೂನು ಕೇವಲ ಪುಸ್ತಕದಲ್ಲಿವೆಯೇ ಹೊರತು ಕೃತಿಯಲ್ಲಿ ಇನ್ನೂ ಬಂದಿಲ್ಲ. ಶ್ರೀ ಅರಕೇರಿಯವರು ತಮ್ಮ ಭಾಷಣದಲ್ಲಿ ಹರಿಜನರ ಉದ್ಧಾರದ ಬಗ್ಗೆ ಬಹಳವಾಗಿ ಮುತ್ತಿನಂತಹ ಮಾತನಾಡಿದರು. ಬಸವಣ್ಣನವರ ವಚನಗಳನ್ನು ಸಹ ಹೇಳಿದರು. ಡಾಕ್ಟರ್ ಅಂಬೇಡ್ಕರ್ ಅವರು ಹರಿಜನರ ಬಗ್ಗೆ ಏನು ಹೇಳಿದರು, ಅವರ ಬಗ್ಗೆ ಏನು ಕೆಲಸ ಮಾಡಿದರು ಎಂಬ ಬಗ್ಗೆ ಸಹ ಶ್ರೀ ಅರಕೇರಿಯವರು ಹೇಳಿದರು. ಬಸವಣ್ಣನವರು ಮತ್ತು ಅಂಬೇಡ್ಕರ್ ಅವರು ಹೇಳಿದ ವಿಚಾರಗಳು ಪುಸ್ತಕದಲ್ಲಿ ಇವೆಯೇ ಹೊರತು ಸಮಾಜದಲ್ಲಿ ಅಗ್ರಗಣ್ಯರಾದ ಸ್ವಾರ್ಥಿಗಳು ಇವುಗಳನ್ನು ಕಾರ್ಯರೂಪಕ್ಕೆ ತರಗೊಡಲಿಲ್ಲ ಜಾರಿಗೆ ಬರಲಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಇವರ ಹೆಸರಿನಲ್ಲಿ ಹರಿಜನರಿಗೆ ಅನ್ಯಾಯ ಮಾಡಬೇಡಿ. ಚುನಾವಣೆಯ ಸಮಯದಲ್ಲಿ ನಮ್ಮ ಬಿದರ್ ಜಿಲ್ಲೆಯಲ್ಲಿ ಕಾಂಗ್ರೆಸ್‌ನೊಳಗೇ ಎರಡು ಪಾರ್ಟಿಗಳಾಗಿ, ಒಂದು ಪಾರ್ಟಿಯವರು ಹರಿಜನರ ಬಗ್ಗೆ ವಿಶ್ವಾಸವಿದ್ದವರು ಎಂದು ತೋರಿಕೆಗಾಗಿ ಅವರಿಗಾಗಿ 50 ಗುಡಿಸಲುಗಳನ್ನು ಹಾಕಿಸಿಕೊಟ್ಟರು. ಬೇರೆ ಗ್ರಾಮದ ಜನತೆ ಇಚ್ಛೆಯ ವಿರೋಧ ಬೇರೆ ಗ್ರಾಮದ ಗ್ಯಾಯರಾಣ ಜಾಗದಲ್ಲಿ ಮತ್ತೊಂದು ಪಾರ್ಟಿಯವರು ಹೋಗಿ ಆ 50 ಗುಡಿಸಲುಗಳನ್ನು ಸುಟ್ಟು ಹಾಕಿದರು. ಇದರಿಂದ ಹರಿಜನರ ಬಗ್ಗೆ ಈ ಕಾಂಗ್ರೆಸ್‌ನವರಿಗೆ ಎಷ್ಟೊಂದು ಅಭಿಮಾನವಿದೆಯೆಂಬುದು ಗೊತ್ತಾಗುತ್ತದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ—ಗ್ರಾಮಾಂತರ).—ಕೇರಳಾ ರಾಜ್ಯದಲ್ಲಿ ಕಮ್ಯುನಿಸ್ಟ್ ಸರ್ಕಾರವಿದೆ. ಆ ಸರ್ಕಾರದವರು ಹರಿಜನರ ಉದ್ಧಾರದ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಹೇಳುತ್ತೀರಾ?

ಶ್ರೀ ವಿ. ಎನ್. ಪಾಟೀಲ್.—ನಾನು ಕೇರಳಾ ರಾಜ್ಯದಲ್ಲಿ ಮಂತ್ರಿಯಾಗಿದ್ದರೆ, ನೀವು ಅಲ್ಲಿ ಎಂ. ಎಲ್. ಎ. ಆಗಿದ್ದರೆ ಈ ಬಗ್ಗೆ ಉತ್ತರ ಕೊಡುತ್ತಿದ್ದೆ. ಆದರೆ ಈಗ ನಾನು ಮೈಸೂರು ಜನತೆ ಪ್ರತಿನಿಧಿಯಾಗಿ ಮೈಸೂರಿನಲ್ಲಿ ಹರಿಜನರ ಮೇಲಾಗುವ ಅನ್ಯಾಯ ಒತ್ತಿ ಹೇಳಲು ಮೈಸೂರು ರಾಜ್ಯದಲ್ಲಿದ್ದೇನೆ. ಆದ್ದರಿಂದ ಇಲ್ಲಿರುವ ಹರಿಜನರ ಬಗ್ಗೆ ಮಾತನಾಡುತ್ತಿದ್ದೇನೆ. ಮಾನ್ಯ ಅಗ್ನಿಹೋತ್ರಿಯವರು ನಾನು ಕಮ್ಯುನಿಷ್ಟ್ ಇರುವದರಿಂದ ಕೇರಳದ ಪ್ರತಿನಿಧಿಯಾಗಿ ತಿಳಿದರೆ ಕಷ್ಟ. ನಮ್ಮ ರಾಜ್ಯದಲ್ಲಿ ಹಗಲು ರಾತ್ರಿ ಇವರ ಬಗ್ಗೆ ಅನ್ಯಾಯಗಳು ನಡೆಯುತ್ತಿವೆ. ಹರಿಜನ ವಿದ್ಯಾರ್ಥಿಗಳು ಇತರೇ ವಿದ್ಯಾರ್ಥಿಗಳ ಜೊತೆಯಲ್ಲಿ ಇರುವುದಕ್ಕೆ ಇವತ್ತಿಗೂ ಅವಕಾಶ ಕೊಡುತ್ತಿಲ್ಲ. ಅವರಿಗಾಗಿ ಬೇರೆ ಹಾಸ್ಟೆಲ್‌ಗಳನ್ನು ಕಟ್ಟಿಸಿ ಬೇರೆ ಕಡೆ ಇಟ್ಟಿದ್ದಾರೆ. ಅವರೇ ಬೇರೆ ಎನ್ನುವ ಭಾವನೆಯನ್ನು ತೋರುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಮೂಲಕ ಇವರ ಉದ್ಧಾರಕ್ಕಾಗಿ ಕೆಲವೊಂದು ಯೋಜನೆಗಳನ್ನು ತಂದುಬಿಟ್ಟ ಮಾತ್ರಕ್ಕೆ ಇವರ ಉದ್ಧಾರವಾಗುವುದಿಲ್ಲ. ಆ ಯೋಜನೆಗಳನ್ನು ಕೃತಿಯಲ್ಲಿ ಮಾಡಿ ತೋರಿಸಬೇಕು. ಹುಮ್ನಾಬಾದ್‌ನಲ್ಲಿ ನಾಲ್ಕು ಜನ ಹರಿಜನರಿಗೆ ಅಲ್ಲಿಯ ಹೈಸ್ಕೂಲ್‌ನಲ್ಲಿ ಸೀಟ್ ಕೊಡದೆ ಅವರು ಬೆಂಗಳೂರಿಗೆ ಬಂದು ಸೇರಿದ್ದಾರೆ. ಇವರಿಗೆ ಹುಮ್ನಾಬಾದಿನಲ್ಲಿಯೇ ಹಾಸ್ಟಲಿನಲ್ಲಿ ಸೀಟ್‌ಗಳನ್ನು ಕೊಡಿಸಬೇಕೆಂದು ಹಿರೇಲಪುರ ಗ್ರಾಮದ ಶ್ರೀ ಕಾಶೀನಾಥ ಎಂಬ ಕುರುಡರಾದಂಥ ಗಾಯನ ಮಾಸ್ಟರ ಹಗಲು ರಾತ್ರಿ ತನ್ನ ಕಣ್ಣುಗಳಿಲ್ಲದಿದ್ದರೂ ದಲಿತ ವರ್ಗದವರೇ ನನ್ನ ಕಣ್ಣು ಎಂದು ಹೇಳುವ ಸೋಷಿಯಲ್ ವರ್ಕರ್ ಬೆಂಗಳೂರಿಗೆ ಬಂದು ಸಂಬಂಧ

(ಶ್ರೀ ಎ. ಎನ್. ಪಾಟೀಲ್)

ಪಟ್ಟವರೊಡನೆ ಮಾತನಾಡಿದರು. ಈ ನಾಲ್ಕು ಜನ ವಿದ್ಯಾರ್ಥಿಗಳು ಚುನಾವಣೆಯ ಸಮಯದಲ್ಲಿ ರಿಪಬ್ಲಿಕನ್ ಪಾರ್ಟಿಯ ಪರವಾಗಿ ಕೆಲಸ ಮಾಡಿದ್ದರಿಂದ ಅವರಿಗೆ ಸೀಟು ಕೊಡಬಾರದೆಂದು ಹಮ್ನಾಬಾದಿನ ತನ್ನನ್ನು ಹರಿಜನರ ನೇತೃ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಮುಖಂಡರುಗಳು ಸರ್ಕಾರಕ್ಕೆ ಈ ಬಡಹರಿಜನ ವಿದ್ಯಾರ್ಥಿಗಳಿಗೆ ಹಾಸ್ಟೆಲಿನಲ್ಲಿ ಸೀಟು ಕೊಡದೆ ಎರಡು ತಿಂಗಳು ಅವರ ಶಿಕ್ಷಣ ಹಾಳುಮಾಡಿ ಅವರನ್ನು ಅಲ್ಲಿಂದ ತೆಗೆಯುವ ಸಲುವಾಗಿ ಅಲ್ಲಿನ Block Development Officerನ ಮೇಲೆ ಒತ್ತಾಯ ತಂದು ಇನ್ನಿತರ ಅಧಿಕಾರಿಗಳಿಗೆ ತಿಳಿಸಿದ್ದರಿಂದ ಈ 4 ಜನ ವಿದ್ಯಾರ್ಥಿಗಳು ಬೆಂಗಳೂರಿಗೆ ಬಂದು ಸೀಟಿನ ಸಲುವಾಗಿ ಹೋರಾಡಬೇಕಾಯಿತು. ಈ ರೀತಿ ಹರಿಜನರ ಉದ್ಧಾರ ನಡೆಯುತ್ತಿದೆ. ಇದೇ ರೀತಿ ರಾಜಾಜಿನಗರದ ವಿ.ವಿ. ಹೈಸ್ಕೂಲಿನಲ್ಲಿ ಒಬ್ಬ ಹರಿಜನ ವಿದ್ಯಾರ್ಥಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ಫಾರಂ ಭರ್ತಿ ಮಾಡಿಕೊಟ್ಟಿದ್ದ. ಆದರೆ ಅಲ್ಲಿ ಕೆಲಸ ಮಾಡುವ ಕ್ಲಾರ್ಕ್ ಈ ಹುಡುಗನನ್ನು ಒಂದು ವರ್ಷ ಮಟ್ಟ ಹಾಕಬೇಕೆಂದುಕೊಂಡು ರಶೀದಿಯನ್ನು ಕೊಡದೆ ಪರೀಕ್ಷೆ ಸಮಯಕ್ಕೆ ಹಾಲ್ ಟಿಕೆಟ್ ಬರದಂತೆ ಮಾಡಿದ. ಆ ಹುಡುಗ ವಿಕ್ಟರಿ ಹಾಲ್‌ಗೆ ಹೋಗಿ ವಿಚಾರಿಸಿದಾಗ ಅವರು ರಶೀದಿ ಇಲ್ಲದಿರುವುದರಿಂದ ನಾವೇನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆ ಹುಡುಗನು ಮತ್ತು ಆ ಹುಡುಗನ ತಂದೆಯವರು ಪ್ರಮಾಣ ಪತ್ರವನ್ನು ಬರೆದು ಕೊಡುತ್ತೇವೆಂದು ಹೇಳಿದರೂ ಸಹ ಒಪ್ಪಲಿಲ್ಲ. ರೂಲ್ ಬಿಟ್ಟು ಹೇಗೆ ಹೋಗೋಣ ಎನ್ನುತ್ತಾರೆ ಚೀಫ್ Controller of Exam. ಇದು ಯಾವ ಪರಿಣಾಮ ಉಂಟು ಮಾಡುವುದು? ಈ Rule ಪಾಲಿಸಿ ಮಾಡಿ ವಿದ್ಯಾರ್ಥಿಯನ್ನು ತುಳಿಯುವ ಸಮಾಜದ ನಿಯಮಗಳು ಆ ಬಡ ದುರ್ದೈವಿ ಹರಿಜನ ವಿದ್ಯಾರ್ಥಿಯ ಮೇಲೆ. ಕಾಯಿದೆಗಳು Rule ಗಳು ಮನುಷ್ಯನನ್ನು ರಾಕ್ಷಸಿ ಮನೋವೃತ್ತಿ ಉಳ್ಳವರಿಂದ ಉಳಿಸಲು ಸೊಕ್ಕಿದವರ ಹಲ್ಲು ಮುರಿಯಲು ಶೋಷಣೆಗೀಡಾದವರನ್ನು ರಕ್ಷಣೆ ಮಾಡಲು ಇವೆಯೆ ಎಂದು ನನಗನಿಸುವುದು. ಪ್ರಜಾಪ್ರಭುತ್ವದಲ್ಲಿ ಈ ರೀತಿ ನಡೆಯುತ್ತಿದೆ. ಹಳ್ಳಿಗಳ ಕಡೆ ಹರಿಜನರಿಗೆ ರಕ್ಷಣೆ ಎನ್ನುವುದೇ ಇಲ್ಲವಾಗಿದೆ. ಇವರ ತಲೆ ಹೊಡೆದರೂ ಸಹ ಯಾರು ಕೇಳುವವರಿಲ್ಲವಾಗಿದೆ. ಈ ರೀತಿಯ ಅನ್ಯಾಯಗಳು ಈ ಕಾಂಗ್ರೆಸ್ ಸರ್ಕಾರದಲ್ಲಿ ನಡೆಯುತ್ತಿದೆ. ಪ್ರಜಾಪ್ರಭುತ್ವ ಬಂದ ಮೇಲೆ ತಾವುಗಳು ಉದ್ಧಾರ ಪಡುತ್ತೇವೆಂದು ತಿಳಿದ ಇವರು ಇದುವರೆಗೆ ಶಾಂತಿಯನ್ನು ಕಾಣದಾಗಿದ್ದಾರೆ. ಹಳ್ಳಿಗಳ ಕಡೆ ಇವರನ್ನು ಶ್ಯಾನುಭೋಗರು ಬಹಳ ಕೀಳು ಮಟ್ಟದಲ್ಲಿ ಕಾಣುತ್ತಿದ್ದಾರೆ. ಹರಿಜನರು ಯಾವ ರೀತಿಯಿಂದಲೂ ಮುಂದೆ ಬರುವುದಕ್ಕೆ ಸಾಧ್ಯವಾಗಿಲ್ಲ. ನಾನು ಬಿದಾರ್ ಗುಲ್ಬರ್ಗಾ ಮತ್ತು ರಾಯಚೂರ್ ಜಿಲ್ಲೆಯ ವಿಚಾರ ಹೇಳುವುದಾದರೆ, ಅಲ್ಲಿ 100ಕ್ಕೆ 90 ಭಾಗ ಜನರು 150 ವರ್ಷಗಳಿಂದಲೂ ಅಲ್ಲಿ ಕೆಲವು ಪರಮಪೋಕ್ಕ ಗೋಮಾಳ, ಬಂಜರು, ಜಮೀನುಗಳನ್ನು ಅನುಭವಿಸುತ್ತಿದ್ದಾರೆ. ಆದರೆ ಲ್ಯಾಂಡ್ ರಿಕಾರ್ಡ್ಸ್ ಅವರ ಹೆಸರಿಗಿಲ್ಲ, ಅದು ದೇಶಮುಖರ ಹೆಸರಿನಲ್ಲಿ, ಗೌಡರ ಹೆಸರಿನಲ್ಲಿ ಇದೆ. ಇದನ್ನು ಮಾನ್ಯ ಮಂತ್ರಿಯವರು ಗಮನಿಸಬೇಕು grant the occupancy rights of those lands, which they are cultivating. ಇವತ್ತು ಉಳುವವನೇ ಜಮೀನಿನ ಒಡೆಯನಾಗಬೇಕು. ಅವನಿಗೆ ಲ್ಯಾಂಡ್ ಕೊಡಿ, ಅಧಿಕಾರ ಕೊಡಿ, ಸೇಡಂ ತಾಲ್ಲೂಕಿನ ವಿಚಾರದಲ್ಲಿ ಒಂದು ಶಾರ್ಟ್ ನೋಟೀಸ್ ಕೊಟ್ಟರೆ, ಅದಕ್ಕೆ ಹೋಂ ಮಿನಿಸ್ಟರ್ ಏನೋ ಒಂದು ಹೇಳಿಬಿಟ್ಟರು. ಅಲ್ಲಿ ಒಬ್ಬ ದೇಶಮುಖ್ ಲಾ ಅಂಡ್ ಆರ್ಡರ್, ಕಾಯಿದೆಯನ್ನು ಕಾನೂನನ್ನು ಕೈಯೊಳಗೆ ತೆಗೆದುಕೊಂಡು, ಅದು ತನ್ನ ಕಾಲಿನ ಚಪ್ಪಲಿ ಎಂದು ತಿಳಿದುಕೊಂಡು, ಇವತ್ತು ಹಣದ ಪ್ರಭಾವದಿಂದ ಏನೇನು ಮಾಡುತ್ತಿದ್ದಾರೆ; ಅಂಥವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಕ್ರಮ ತೆಗೆದುಕೊಂಡರೆ ಏನೋ ಇಂಥ ಬಡ ಹರಿಜನರಿಗೆ ರಕ್ಷಣೆ ಕೊಟ್ಟಂತೆ ಆಗುತ್ತದೆ. ಇವತ್ತು ಸಮಾಜದಲ್ಲಿ ಯಾರು ಹಿಂದುಳಿದಿದ್ದಾರೋ, ಅಂಥವರಿಗೆ ನ್ಯಾಯ ದೊರಕಿಸಿ ಕೊಡುವುದಕ್ಕೆ ಸಮಾನತೆಯನ್ನು ತರುವುದಕ್ಕೆ ನಿಜವಾಗಿಯೂ ಸರ್ಕಾರದವರು ಪ್ರಯತ್ನ ಮಾಡಬೇಕು. ಆದರೆ ಇವತ್ತಿನ ಪರಿಸ್ಥಿತಿ ಏನು !, ಹಗಲು ರಾತ್ರಿ ಜಮೀನುಗಳನ್ನು ದಬ್ಬಾಳಿಕೆಯಿಂದ ಒತ್ತಾಯದಿಂದ ಬಿಡಿಸುತ್ತಿದ್ದಾರೆ. ಇವತ್ತು ಹಳ್ಳಿಗಳಲ್ಲಿ ನೂರಕ್ಕೆ 90 ಜನ ಬಡವರಿದ್ದಾರೆ. ಹರಿಜನರಲ್ಲಿ ಯಾರಾದರೂ ಲಕ್ಷಾಧೀಶರಿದ್ದರೆ, ಕೋಟ್ಯಾಧೀಶರಿದ್ದರೆ, ಅಂಥವರಿಗೆ ಸಲಾಮು ಹಾಕುತ್ತಿದ್ದರು. ಇವತ್ತು ಎಕನಾಮಿಕ್ ಡಿಸ್ಪಾರಿಟಿ ಏನಿದೆ, ಇದು ಕೆಳವರ್ಗದವರನ್ನು ತುಳಿಯುತ್ತಿದೆ. ಇಂಥ ಎಕನಾಮಿಕ್ ಡಿಸ್ಪಾರಿಟಿಯನ್ನು ತೆಗೆದುಹಾಕಬೇಕು. ಇಲ್ಲದಿದ್ದರೆ, ಬಡಜನರಿಗೆ ಒಂದು ನಿರಾಶೆ ಬರುತ್ತದೆ. ಆದರೆ ಈ ಕಾಂಗ್ರೆಸ್ಸಿನವರು 20 ವರ್ಷವಾದರೂ ಒಂದು ಸಮಾನತೆಯನ್ನು ತಂದು ಈ ಎಕನಾಮಿಕ್ ಡಿಸ್ಪಾರಿಟಿಯನ್ನು ತೆಗೆಯುತ್ತಾರೆಂದು ನನಗೆ ನಂಬಿಕೆ ಇಲ್ಲ. ಇವತ್ತು

ಸೋಶಿಯಲ್ ಸರ್ವಿಸ್ ಇಲಾಖೆ ಇದೆ. ವಿಧಾನಸೌಧದಿಂದ ಆರ್ಡರ್ಸ್ ಹೋಗುತ್ತಿಲ್ಲ. ಅದು ರೇಸ್ ಕೋರ್ಸು ಹತ್ತಿರ ಒಂದು ಕಾಂಗ್ರೆಸ್ ಭವನ ಇದೆ, ಅಲ್ಲಿಂದ ಆರ್ಡರ್ ಹೋಗುತ್ತಿದೆ. ನಿಮ್ಮ ಪಾರ್ಟಿಯಲ್ಲಿ ಯಾರು ಯಸ್‌ಮೇನ್ ಆಗುತ್ತಾರೋ, ಅಂಥವರಿಗೆ ಮಾತ್ರ ಈ ಇಲಾಖೆ ಇದೆಯೇ ಹೊರತು, ನಿಜವಾಗಿ ಸಮಾಜದಲ್ಲಿ ಯಾರು ಹಿಂದುಳಿದಿದ್ದಾರೋ, ಯಾರು ನಿಜವಾಗಿ ಬಡವರಿದ್ದಾರೋ, ಅಂಥವರಿಗೆ ಇದರ ಸೌಲಭ್ಯ ಹೋಗುತ್ತಿಲ್ಲ, ನೀವು ಖರ್ಚು ಮಾಡುತ್ತಿರುವ ಹಣ ದೇಶದ ದುಡ್ಡು, ದೇಶದ ಸೇವೆಯೇ ಜನಾರ್ಧನ ಸೇವೆಯೆಂದು ಪರಿಗಣಿಸಿ ಈ ಒಂದು ಎಕನಾಮಿಕ್ ಡಿಸ್ಪ್ಯಾರಿಟಿಯನ್ನು ತೆಗೆದು ಎಲ್ಲರಲ್ಲೂ ಸಮಾನತೆಯನ್ನು ಉಂಟು ಮಾಡಬೇಕು. ಅದು ಇಷ್ಟರವರೆಗೆ ಸಾಧ್ಯವಾಗಲಿಲ್ಲ. 20 ವರ್ಷಗಳಲ್ಲಿ ನೀವು ಅದು ಮಾಡಲಿಲ್ಲ. ಮುಂದೆ ಇನ್ನು 50 ವರ್ಷಗಳಾದರೂ ನಿಮ್ಮಿಂದ ಅದು ಮಾಡಲು ಸಾಧ್ಯವಿಲ್ಲ. ನಿಮ್ಮ ನಂಬಿಕೆ ಸಮಾಜದಲ್ಲಿ ಪ್ರಗತಿಶೀಲ ಪರಿವರ್ತನೆ ತರುವುದರಲ್ಲಿಲ್ಲ, ಸಮಾಜದಲ್ಲಿನ ಸ್ವಾರ್ಥಸಾಧಕರ ಸಿರಿವಂತ ವರ್ಗದವರ ಆಶ್ರಯದಲ್ಲಿ ನೀವು ಬೆಳೆದು ಬಂದು 5 ವರ್ಷಗಳ ಕಾಲ ಪ್ರಾಮಾಣಿಕತನದಿಂದ ಸಿರಿವಂತ ಸುಲಿಗೆದಾರರ ಸಲುವಾಗಿ ದುಡಿದು ರೈತ—ಕಾರ್ಮಿಕ ಜನರ ಶ್ರಮಜೀವರಿಂದ ಬಂದ ರಾಷ್ಟ್ರದ ಸಂಪತ್ತು ನಿಮ್ಮ ಹಾಗು ನಿಮ್ಮನ್ನು ಆರಿಸಿ ಬರಲು ಸಹಾಯ ಮಾಡಿದ ಶ್ರೀಮಂತರ ಬಾಯಿಗೆ ಬೆಣ್ಣೆ ಹಾಕಿ ಬಡವರ ಬಾಯಿಗೆ ಸುಣ್ಣ ಹಾಕುತ್ತಿದ್ದೀರಿ. ನಾನು ಒಂದು ಸಲಹೆ ಮಾಡುವುದೇನೆಂದರೆ, ಸೋಷಿಯಲ್ ಸರ್ವಿಸ್ ಖಾತೆಯೂ ಹಾಗೂ ಸರ್ಕಾರ ಚಾರಿಟಿಯೆಂದು ಉದ್ಧಾರ ಮಾಡುವೆವು ಎಂಬುದು ಮರೆತು ನಾವು ಡ್ಯೂಟಿಯನ್ನು ಮಾಡುವೆನು ಅಂತ ಹೇಳಿ ಯಾವುದೇ ಒಂದು ಹರಿಜನರ ಅಥವಾ ಗಿರಿಜನರ ಅರ್ಜಿಗಳು ಬಂದರೆ, ಅದು ಒಂದು ಮನೆಯ ಸಲುವಾಗಿರಬಹುದು, ಎತ್ತುಗಳ ಸಲುವಾಗಿರಬಹುದು, ಹೊಲದ ಸಲುವಾಗಿರಬಹುದು ಒಂದು ಸಾಲದ ಸಲುವಾಗಿರಬಹುದು, ಅದನ್ನು ಎರಡು ತಿಂಗಳೊಳಗೆ, ಯಾವ ಆಫೀಸರ್ ಅದರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವೋ, ಅಂಥವನನ್ನು anti national officer ಎಂದು ಮಾಡಿ ಒಂದು ಡಿಸಿಪ್ಲಿನರಿ ಕ್ರಮ ತೆಗೆದುಕೊಳ್ಳಬೇಕು. ಮೊದಲು ಸಸ್‌ಪೆಂಡ್ ಮಾಡಬೇಕು. ಸಮಾಜದಲ್ಲಿ ಅನ್ನ ಉತ್ಪತ್ತಿ ಮಾಡುವಂತಹ ರೈತನನ್ನು ತಿರಸ್ಕಾರ ಮಾಡಿ, ದೇಶದ ಅನ್ನದ ಬೆಳೆವಣಿಗೆಗೆ ತಡೆಹಿಡಿದವನನ್ನು ಸರಿಯಾಗಿ ಶಿಕ್ಷಿಸಬೇಕಾಗಿದೆ. ಇಂಥ ಜನರಿಂದ ಅರ್ಜಿಗಳು ಬಂದು ಎರಡು ತಿಂಗಳುಗಳೊಳಗೆ, ತಹಸೀಲ್ದಾರರಾಗಲಿ, ಬಿ. ಡಿ. ಒ. ಆಗಲಿ, ಯಾರೇ ಆಗಲಿ ಆ ಅರ್ಜಿಯಲ್ಲಿರುವ ನ್ಯಾಯವಾದ ಬೇಡಿಕೆಗಳನ್ನು ಪೂರ್ತಿಗೊಳಿಸದಿದ್ದರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಒಂದು ಶಿಕ್ಷೆ ಕೊಟ್ಟರೆ ಮಾತ್ರ ದೇಶದಲ್ಲಿ ಒಂದು ಶೇಕಡಾ 5 ರಷ್ಟಾದರೂ ಒಳ್ಳೆಯ ಕೆಲಸ ಮಾಡಿದ್ದೀರಿ ಎಂಬ ಒಂದು ಸಮಾಧಾನ ಎಲ್ಲರಲ್ಲೂ ಉಂಟಾಗುತ್ತದೆ. ಇದನ್ನು ಸರ್ಕಾರದವರು ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲ್ಮಲ).—ಮಾನ್ಯ ಅಧ್ಯಕ್ಷರೇ, ಈ ಸಮಾಜ ಕಲ್ಯಾಣ ಡಿಮ್ಯಾಂಡಿನ ಮೇಲೆ ಮಾತನಾಡಬೇಕಾದರೆ, ನನ್ನ ಮನಸ್ಸು ಸ್ವಲ್ಪ ಹಿಂದು ಮುಂದಾಗುತ್ತದೆ. ಏಕೆಂದರೆ, ನಮಗೆ ಅಷ್ಟು ಸಂತೋಷ ಬರುವುದಿಲ್ಲ. ಇದುವರೆಗೂ ಇವರು ಸಮಾಜ ಕಲ್ಯಾಣ ಏನೂ ಮಾಡಲಿಲ್ಲ. ಅವುಗಳೆಲ್ಲಾ ಮೂಲೆಗೆ ಬಿದ್ದಿವೆ. ಅವುಗಳನ್ನು ಮಾನ್ಯ ಮಂತ್ರಿಯವರು ಶೋಧನೆ ಮಾಡಿಲ್ಲ, ನಮ್ಮ ಡೈರೆಕ್ಟರು ಶೋಧನೆ ಮಾಡಿಲ್ಲ, ಯಾರೂ ಮಾಡಿಲ್ಲ. ಇಂದು ಸೋಶಿಯಲ್ ವೆಲ್‌ಫೇರ್ ಎಂಬುದು ಬರೇ ಕಾಗದಗಳ ಮೇಲೆ ಉಳಿದಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ಹರಿಜನರಿಗೆ ಮತ್ತು ಗಿರಿಜನರಿಗೆ ಎಷ್ಟು ಲಕ್ಷ ಖರ್ಚು ಮಾಡಿದ್ದಾರೆ, ಆದರಿಂದ ಯಾರಿಗೆ ಫಾಯಿದೆಯಾಗಿದೆ? ಅದು ಯಾರಿಗೆ ಮುಟ್ಟಿದೆ? ಎಂದರೆ ಯಾರಿಗೂ ಇಲ್ಲ. ಏನೋ ಕೊಟ್ಟಿದ್ದೀರಿ, ಯಾವನೋ ತಿಂದುಹೋಗಲಿ ಎಂದು ಕೊಟ್ಟಿದ್ದೀರಿ. ಸಮಾಜ ಕಲ್ಯಾಣ ಮೊದಲಿಂದಲೂ ನಡೆದುಕೊಂಡು ಬಂತು, ಯಾವ ಮಂತ್ರಿಯವರು ಬಂದರೂ ಏನೂ ಮುಂದೆ ಬರಲಿಲ್ಲ. ನೀವು ರಿಪೋರ್ಟು ತರಿಸಿಕೊಂಡು, ಏನೆಲ್ಲಾ ನೋಡಿದ್ದೀರಿ, ಎಷ್ಟು ಇನ್‌ಸ್ಪೆಕ್ಟ್ ಮಾಡಿದ್ದೀರಿ, ಇಂಥಿಂಥ ಕಡೆ ಮುಟ್ಟಿದೆ ಎಂದು ಏನಾದರೂ ಬಂದಿದೆಯೇ? ಕೆಲವರು ಈ ಇಲಾಖೆಯನ್ನು ಮುಚ್ಚಬೇಕೆಂದು ಹೇಳಿದ್ದಾರೆ. ಏಕೆಂದರೆ ಇದರಲ್ಲಿ ಖರ್ಚಾಗುವ ಹಣದಿಂದ ಏನೂ ಪ್ರಯೋಜನವಿಲ್ಲ, ಯಾರೋ ತಿಂದು ಹಾಕುತ್ತಾರೆ ಎಂದು. ಈಗ ಒಂದು ಬೋರ್ಡು ಮಾಡಿದ್ದಾರೆ. ಸೋಶಿಯಲ್ ವೆಲ್‌ಫೇರ್ ಅಧಿಕಾರಿಗೆ ಎಲ್ಲಾ ಅಧಿಕಾರ ಕೊಟ್ಟರೆ ಅವರೇ ಮಾಡುತ್ತಾರೆ. ಇದನ್ನು ಯಾರೂ ಮನಸ್ಸಿಗೆ ತೆಗೆದುಕೊಳ್ಳಲಿಲ್ಲವೆಂದು ಕಾಣುತ್ತದೆ. ಹರಿಜನ ಗಿರಿಜನರಿಗೆ ಕುರಿ ಕೋಣ ಕೊಡುವುದು ಬೇಡ, ಅವರಿಗೆ ಒಂದು ವ್ಯಾಪಾರ ಮಾಡುವುದಕ್ಕೆ, ಒಂದು ಸಣ್ಣ ಕೈಗಾರಿಕೆಯನ್ನು ಸ್ಥಾಪನೆಮಾಡುವುದಕ್ಕೆ, ಒಂದು ಸೈಕಲು ದುಕಾನ್ ತೆರೆಯುವುದಕ್ಕೆ ಎಲ್ಲಾ ಒಂದು ರೀತಿಯ ಸಾಲವನ್ನು ಸರ್ಕಾರದವರು ಕೊಟ್ಟರೆ ಅವರು ಮುಂದೆ ಬರುವ ಹಾಗೆ ಆಗುತ್ತದೆ.

(ಶ್ರೀಮತಿ ನಾಗಮ್ಮ)

ಒಂದು ಸಣ್ಣ ದುಕಾನು ಇಲ್ಲವೇ ಒಂದು ವರ್ಕ್‌ಷಾಪು ಅಥವಾ ವ್ಯಾಪಾರ ಮಾಡಿ ಅವರ ಜೀವನ ನಡೆಸಲು ಅನುಕೂಲವಾಗುವಂತೆ ಸರಕಾರದ ಸಮಾಜ ಕಲ್ಯಾಣ ಇಲಾಖೆಯವರು ಇದಕ್ಕಾಗಿ ಸ್ವಲ್ಪ ದುಡ್ಡು ಕೊಟ್ಟು ಸರಕಾರದವರು ಗ್ಯಾರಂಟಿ ಕೊಟ್ಟು ಏಕೆ ಮಾಡಬಾರದು ಎಂದು ನಾನು ಇಲ್ಲಿ ಕೇಳುತ್ತಿದ್ದೇನೆ. ಕಾನೂನು ರೀತಿಯಾಗಿ ಅವರಿಗೆ ಕೊಟ್ಟು ಅವರಿಂದ ಹಣವನ್ನು ವಾಪಸು ಬರುವಂತೆ ಏರ್ಪಾಡುಗಳನ್ನು ಮಾಡಬಹುದು. ಆದರೆ ಇಂದು ದೊಡ್ಡದಾಗಿ ಎಲ್ಲೆಲ್ಲೂ ಹಾಸ್ಟಲುಗಳನ್ನು ಮಾಡುತ್ತೇವೆ ಮತ್ತು ಹೆಚ್ಚು ಹಣ ಕೊಡುತ್ತೇವೆ ಎಂದು ಹೇಳುತ್ತಾರೆ; ಅಲ್ಲಿಗೆ ಯಾವ ಹೆಣ್ಣು ಮಕ್ಕಳೂ ಬರುತ್ತಿಲ್ಲ ಮತ್ತು ಇದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಏನೋ ಇವೆಲ್ಲಾ ಬೆಂಗಳೂರು ಹಾಗೂ ಮೈಸೂರು ಮುಂತಾದ ನಗರಗಳಲ್ಲಿ ಹೇಗೋ ನಡೆಯುತ್ತಿದೆ. ಸಮಾಜ ಕಲ್ಯಾಣದ ಇಲಾಖೆಯಿಂದ ಒಳ್ಳೆಯ ಕೆಲಸಗಳಾಗಬೇಕಾದರೆ ಒಂದೊಂದು ತಾಲ್ಲೂಕುಗಳಲ್ಲಿಯೂ ಹಾಗೂ ದೊಡ್ಡ ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಶಿಶುವಿಹಾರಗಳನ್ನು ಮಾಡುವಂತೆ ಇಲ್ಲಿಗೂ ಒಂದು ರೀತಿಯಾದ ಸ್ಕೀಂಗಳನ್ನು ಹಾಕಿಕೊಂಡು ಮಾಡಬೇಕು ಎಂದು ಇಲ್ಲಿ ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

5-00 P.M.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಹಳ್ಳಿಗಳಲ್ಲಿ ಮಾಡುವುದು ಬೇಡ ಎಂದು ತಾವು ಹೇಳುತ್ತೀರಾ ?

ಶ್ರೀಮತಿ ನಾಗಮ್ಮ.—ಹಳ್ಳಿಗಳಲ್ಲೂ ಮಾಡಬೇಕು. ಆದರೆ ಹರಿಜನರಿಗಾಗಿ ಹಾಗೂ ಗಿರಿಜನರಿಗಾಗಿ ಪಟ್ಟಣಗಳಲ್ಲಿ ಹೈಸ್ಕೂಲುಗಳನ್ನು ತೆರೆಯುವಂತೆ ದೊಡ್ಡ ತಾಲ್ಲೂಕುಗಳಲ್ಲೂ ಸ್ಕೂಲುಗಳನ್ನು ತೆರೆದರೆ ಸ್ವಲ್ಪಮಟ್ಟಿಗಾದರೂ ಹರಿಜನ ಹಾಗೂ ಗಿರಿಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಿ ಸ್ವಲ್ಪಮಟ್ಟಿಗಾದರೂ ಮುಂದೆ ಬರುತ್ತಾರೆ. ಇಂದು ನೀವು ಮಾಡುತ್ತಿರುವ ಕೆಲಸಗಳಿಂದ ಹರಿಜನರು ಮುಂದೆ ಬರಲು ಆಗುತ್ತಿಲ್ಲ. ಇಷ್ಟೊತ್ತು ನೀವು ಏನೋ ಒಂದು ರೀತಿಯಾಗಿ ದುಡ್ಡು ಕೊಡುತ್ತಿದ್ದೀರಿ ಇದನ್ನು ಲೀಡರುಗಳಾಗಿರುವವರು ತಿಂದು ಹಾಕುತ್ತಾರೆ. ಇದನ್ನು ಸರಿಯಾಗಿ ಮಾನ್ಯ ಮಂತ್ರಿಗಳು ಮನಸ್ಸಿಗೆ ತೆಗೆದುಕೊಂಡು ಸಮಾಜ ಕಲ್ಯಾಣ ಇಲಾಖೆಯಿಂದ ಹರಿಜನರ ಕಲ್ಯಾಣ ಆಗಬೇಕೆಂದು ಆಸೆ ಇದ್ದರೆ ಏನೇನು ಇದುವರೆಗೆ ಮಾಡಿದ್ದೀರಿ ಎನ್ನುವುದರ ಒಂದು ರಿಪೋರ್ಟನ್ನಾದರೂ ತರಿಸಿ ನಮಗೆ ಕೊಡಿ, ಆಗ ಗೊತ್ತಾಗುತ್ತದೆ ಏನೇನು ಮಾಡಿದ್ದಾರೆ ಎನ್ನುವುದು. ಇಂದು ಸಮಾಜ ಕಲ್ಯಾಣ ಖಾತೆಯಿಂದ ಏನೋ ಕೆಲವರಿಗೆ ಅನುಕೂಲಗಳಾಗುತ್ತಿವೆ. ಸುಮ್ಮನೆ ಏಳೆಂಟು ಕೋಟಿಯಷ್ಟು ಖರ್ಚು ಮಾಡಿದರೆ ಪ್ರಯೋಜನ ಬರುವುದಿಲ್ಲ. ನೀವು ಕೊಡುವ ದುಡ್ಡು ಬಡಜನರಿಗೆ ಸರಿಯಾಗಿ ಮುಟ್ಟುತ್ತದೆಯೋ ಇಲ್ಲವೇ ಎನ್ನುವುದರ ಕಡೆಗೆ ಯಾರೂ ಗಮನ ಕೊಡುತ್ತಿಲ್ಲ. ಸಮಾಜ ಕಲ್ಯಾಣದ ಇಲಾಖೆಯಲ್ಲಿ ಶಕ್ತಿಯುತವಾಗಿ ಕೆಲಸ ಮಾಡುವವರು ಯಾರೂ ಇಲ್ಲ. ಕೆಲವರು ಇಲ್ಲಿ ಇಂತಹ ಇಲಾಖೆಯನ್ನು ತೆಗೆದುಬಿಡುವುದು ಒಳ್ಳೆಯದು ಎಂದು ಹೇಳಿದರು. ನನಗೂ ಕೂಡ ಒಂದೊಂದು ಸಾರಿ ಹಾಗೆ ಮಾಡುವುದು ಸರಿ ಎಂದು ಕಾಣುತ್ತದೆ. ಇಲಾಖೆಯಿಂದ ನಮ್ಮಂತಹ ಬಡಜನರಿಗೆ ಯಾವ ಪ್ರಯೋಜನಗಳೂ ಸಿಗದೇ ಇದ್ದರೆ ಇಂತಹ ಇಲಾಖೆಗಳಾದರೂ ಏಕೆ ಇರಬೇಕು ಎಂದು ಇಲ್ಲಿ ಕೇಳಬೇಕಾಗಿ ಬಂದಿದೆ. ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳಾದರೂ ಇನ್ನೂ ಈ ಬಡಜನರಾದ ಹರಿಜನರು ಹಾಗೂ ಗಿರಿಜನರಿಗೆ ಯಾವ ಅನುಕೂಲಗಳೂ ಸಿಗುತ್ತಿಲ್ಲ. ಎಲ್ಲ ಪಟ್ಟಣಗಳ ಕಡೆ ಮಾಡುವುದಕ್ಕೆ ಬದಲಾಗಿ ಹಳ್ಳಿಗಾಡಿನಲ್ಲಿರುವ ಇಂತಹ ಬಡಜನತೆಯ ಬಗ್ಗೆ ಸರಿಯಾದ ಒಂದು ಯೋಜನೆಯನ್ನು ಮಾಡಿಕೊಂಡು ಇಂತಹ ಜನರ ಅಭಿವೃದ್ಧಿಗೆ ಬೇಗನೆ ಪ್ರಯತ್ನ ಮಾಡಬೇಕು ಎಂದು ನಾನು ಇಲ್ಲಿ ಪದೇ ಪದೇ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳೂ ಕೂಡ ಇದನ್ನು ನೋಡಲು ಎಲ್ಲ ಕಡೆಗೂ ಹೋಗಿ ನೋಡಿ ಬರುತ್ತಿಲ್ಲ. ಹೀಗಾದರೆ ಸೋಷಿಯಲ್ ವೆಲ್‌ಫೇರು ಮಾಡುತ್ತೇವೆ ಎಂದರೆ, ಅದು ಹೇಗೆತಾನೇ ಮಾಡಲು ಸಾಧ್ಯ ? ನನಗೆ ಈ ಬಡಜನರ ಬಗ್ಗೆ ಹೇಳಲು ಬಹಳ ದುಃಖವಾಗುತ್ತಿದೆ. ಏನೋ ಸರಕಾರ ಹರಿಜನರಿಗೆ ಸಹಾಯವಾಗಬೇಕು ಎಂದು ದುಡ್ಡನ್ನು ಕೊಡುತ್ತಿದ್ದಾರೆ. ಆದರೆ ಈಗ ಬರುವ ದುಡ್ಡನ್ನು ಇಲ್ಲಿರುವ ಅಧಿಕಾರಿಗಳೇ ಜೇಬಿಗೆ ಹಾಕಿಕೊಂಡು ಯಾವ ಕೆಲಸಗಳನ್ನೂ ಮಾಡುತ್ತಿಲ್ಲ. ಇದರಲ್ಲಿ ಮಧ್ಯಸ್ತಗಾರರು ಬೇರೆ ಇರುತ್ತಾರೆ. ಅವರುಗಳು ಲಂಚ ತೆಗೆದುಕೊಂಡು ಏನೇನೋ ಮಾಡುತ್ತಾರೆ. ಒಂದು ಕೆಲಸಕ್ಕೆ ಒಬ್ಬರು ಹರಿಜನರನ್ನು ಶಿಫಾರಸು ಮಾಡೋಣ ಎಂದು ನಮ್ಮಂತಹ ಎಂ. ಎಲ್. ಎ. ಗಳು ಹೋಗಿ ಹೇಳಿದರೆ ಅವರು ನಮಗೆ ಮೊದಲು ನೀವೇನೂ ಹೇಳಿರಲಿಲ್ಲ, ಈಗ ಎಲ್ಲಾ ಆಗಿ

ಹೋಯಿತು, ಮುಂದೆ ನೋಡೋಣ ಎನ್ನುತ್ತಾರೆ. ಹೀಗಾದರೆ ಬಡವರಾದ ಹರಿಜನರ ಉದ್ಧಾರ ಮಾಡಿದಂತಾಗುತ್ತದೆಯೇ? ಇದರ ಬಗ್ಗೆ ಮಂತ್ರಿಗಳು ನನಗೆ ಸರಿಯಾದ ಉತ್ತರವನ್ನು ಇಲ್ಲಿ ಕೊಡಬೇಕೆಂದು ಹೇಳುತ್ತಿದ್ದೇನೆ. ಇದನ್ನು ಬಹಳ ವ್ಯಥೆಯಿಂದ ಹೇಳಬೇಕಾಗಿ ಬಂದಿದೆ. ಈ ಮಾನ್ಯ ಸಭೆಯ ಎಲ್ಲ ಸದಸ್ಯರಿಗೂ ಕೂಡ ಹರಿಜನರ ಸ್ಥಿತಿ ಹೇಗಿದೆ ಎನ್ನುವುದು ಗೊತ್ತು. ಆದರೆ ಇಲಾಖೆಯಲ್ಲಿರುವ ಜನರಲ್ಲಿ ಯಾವ ಹಿತದೃಷ್ಟಿ ಕೂಡ ಇಲ್ಲ ಮತ್ತು ಸೋಷಿಯಲ್ ವೆಲ್‌ಫೇರು ಇಲಾಖೆಯ ಬಗ್ಗೆ ಇಲ್ಲಿನ ಸದಸ್ಯರಿಗೂ ಆಸಕ್ತಿ ಇಲ್ಲ ಎಂದು ಇಲ್ಲಿ ಹೆಚ್ಚಾಗಿ ಮಾತನಾಡುತ್ತಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಮಾತನಾಡಲಿ ಎಂದು ನಾವು ನಿಮಗೇ ಬಿಟ್ಟಿದ್ದೇವೆ.

ಶ್ರೀಮತಿ ನಾಗಮ್ಮ.—ಮಾನ್ಯ ಸದಸ್ಯರಾದ ಸಿದ್ದವೀರಪ್ಪನವರಿಗೂ ಗೊತ್ತು. ಇಲ್ಲಿ ಹೇಗೆ ಕೆಲಸಗಳು ನಡೆಯುತ್ತಿವೆ ಎನ್ನುವುದು. ನಾನು ಅವರಿಗೆ ಹೊಸದಾಗಿ ಹೇಳಬೇಕಾಗಿಲ್ಲ. ನಾನು ಮಂತ್ರಿಗಳಲ್ಲಿ ಹೇಳುವುದು ನಾನೇನೋ ಹೇಳುತ್ತೇನೆ ಎಂದು ಉದಾಸೀನದಿಂದ ಇರಬಾರದು. ಸ್ವಲ್ಪ ಶಕ್ತಿಯಿಂದ ಇಲಾಖೆಯಲ್ಲಿ ಕೆಲಸ ಮಾಡಬೇಕು ಎಂದು ಇಲ್ಲಿ ಒತ್ತಾಯದಿಂದ ಹೇಳುತ್ತಿದ್ದೇನೆ, ಸಮಾಜ ಕಲ್ಯಾಣ ಇಲಾಖೆ ಚೆನ್ನಾಗಿ ಮುಂದಕ್ಕೆ ಬರಬೇಕಾದರೆ ಸರಿಯಾಗಿ ಗುದ್ದಾಡಲು ಸಾಕಷ್ಟು ಶಕ್ತಿಯುಳ್ಳವರು ಹಾಗೂ ಆಸೆಯಿಂದ ಕೆಲಸ ಮಾಡುವವರು ಇಲ್ಲಿರಬೇಕ ಮತ್ತು ಷೆಡ್ಯೂಲು ಕ್ಯಾಸ್ಟು ಹಾಗೂ ಷೆಡ್ಯೂಲು ಟ್ರೈಬ್ಸ್ ವರ್ಗದವರನ್ನು ಮುಂದೆ ತರಲು ಇನ್ನೂ ಹೆಚ್ಚು ಪ್ರಯತ್ನಗಳನ್ನು ಮಾಡಬೇಕು. ಇಲ್ಲದಿದ್ದರೆ ಏನೂ ಆಗುವುದಿಲ್ಲ. ಈಗ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಷೆಡ್ಯೂಲ್ಡ್ ವರ್ಗದವರಿಗೆ ಕೊಡುತ್ತಿದ್ದಾರೆ. ಇದರಂತೆ ಇಲ್ಲಿರುವ ಬಡ ಜನಕ್ಕೆ ವ್ಯಾಪಾರ ಮಾಡಲು ಒಂದು ದುಕಾನು ಇಟ್ಟುಕೊಳ್ಳಲು ಅಥವಾ ಒಂದು ವರ್ಕ್‌ಷಾಪ್ ಮಾಡಿ ಅಲ್ಲಿ ಜನರಿಗೆ ಕೆಲಸಗಳು ಸಿಗುವಂತೆ ಏರ್ಪಾಡು ಮಾಡಬೇಕು. ಮತ್ತು ಸರ್ವಿಸ್‌ನಲ್ಲಿ ಹಿಂದುಳಿದ ಜನಾಂಗದವರಿಗಾಗಿ ಶೇಕಡಾ 18 ರಷ್ಟು ಇರಬೇಕು ಎಂದು ಸರಕಾರದವರು ನಿಗದಿ ಮಾಡಿದ್ದಾರೆ. ಇದರಂತೆ ಎಲ್ಲೆಲ್ಲಿ ಮಾಡಿದ್ದೀರಿ ಎಂದು ನಾನು ಇಲ್ಲಿ ಕೇಳುತ್ತೇನೆ. ಈಚೆಗೆ ಹರಿಜನರಲ್ಲಿ ಕೆಲವರು ಗ್ರ್ಯಾಜುಯೇಟುಗಳು ಹಾಗೂ ಇಂಜನೀಯರುಗಳು ಆಗಿರುವವರು ಬರುತ್ತಿದ್ದಾರೆ. ಇವರಲ್ಲಿ ಎಷ್ಟು ಜನರನ್ನು ಐ. ಎ. ಎಸ್. ಹಾಗೂ ಐ. ಪಿ. ಎಸ್. ದರ್ಜೆಯಲ್ಲಿ ನೇಮಕ ಮಾಡಿದ್ದೀರಿ? ಎಲ್ಲೂ ಶೇಕಡ 18 ರಷ್ಟು ಜಾಗಗಳನ್ನು ಮೀಸಲಾಗಿ ಇಡುತ್ತಲೇ ಇಲ್ಲ. ಈಚೆಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಗ್ರ್ಯಾಜುಯೇಟುಗಳನ್ನು ಕೆಲಸಗಳಿಗಾಗಿ ಕರೆದಿದ್ದರು. ಇದರಲ್ಲಿ ಶೇಕಡ 18 ರಂತೆ ಮೀಸಲು ಇಡಬೇಕೆಂದು ಇದ್ದರೂ ಎಷ್ಟು ಜನರನ್ನು ಷೆಡ್ಯೂಲು ಕ್ಯಾಸ್ಟು ವರ್ಗದವರಿಗೆ ಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ನಮ್ಮ ಹರಿಜನರಲ್ಲಿ ಎಷ್ಟೋ ಜನ ಅಸಿಸ್ಟೆಂಟು ಕಮಿಷನರುಗಳ ಹುದ್ದೆಯಲ್ಲಿದ್ದಾರೆ. ಹೆಚ್ಚು ಸಂಖ್ಯೆಯಲ್ಲಿ ನಮ್ಮ ಹರಿಜನರ ಪೈಕಿ ಐ. ಎ. ಎಸ್. ಹಾಗೂ ಐ. ಪಿ. ಎಸ್. ವರ್ಗದಲ್ಲಿ ನೇಮಕ ಮಾಡಬೇಕು ಎಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ ಮತ್ತು ಒತ್ತಾಯವನ್ನೂ ಮಾಡುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ರಾಮಚಂದ್ರ (ಸೂಳ್ಯ).—ಸ್ವಾಮೀ, ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು ಮಂಡಿಸಿರುವ ಬೇಡಿಕೆಯನ್ನು ವಿರೋಧಿಸುತ್ತಾ ಇಲ್ಲಿ ಎರಡು ಮಾತುಗಳನ್ನಾಡಬೇಕೆಂದು ನಾನು ಅಪೇಕ್ಷೆ ಮಾಡುತ್ತೇನೆ. ಈ ಬೇಡಿಕೆ ಕಳೆದ ಸಾರಿಯ ಬಡ್ಜೆಟ್ಟಿನಲ್ಲಿ ಸುಮಾರು ಎರಡು ಕೋಟಿ ತೊಂಬತ್ತೆಂಟು ಲಕ್ಷದಷ್ಟು ಇತ್ತು. ಇದು ಸಾಲದು ಎಂದು ಹೇಳಿದನು. ಈ ವರ್ಷ ಇದರ ಮೊತ್ತವನ್ನು ಸ್ವಲ್ಪ ಏರಿಸಿಬಿಟ್ಟರು. ಆದರೆ ಈ ಹಣಕ್ಕೆ ತಕ್ಕಂತೆ ಈ ಇಲಾಖೆಯಲ್ಲಿ ಏನಾದರೂ ಸರಿಯಾದ ಕಾರ್ಯಗಳಾಗುತ್ತಿವೆಯೋ ಇಲ್ಲವೇ ಎನ್ನುವುದರ ಕಲ್ಪನೆ ಯಾರಿಗೂ ಇಲ್ಲ. ಸುಮ್ಮನೆ ಹಣವನ್ನು ಇಟ್ಟಿರುವುದು ಕಡಿಮೆ ಎಂದು ಹೇಳಿದರೂ ಕೂಡ ಈ ಸಮಾಜಕ್ಕೆ ಬೇಕಾದಷ್ಟು ಹಣವನ್ನು ಇಟ್ಟುಕೊಂಡಿಲ್ಲ. ನಾವು ಇಲ್ಲಿ ಎಷ್ಟೋ ಬರಿ ಸಮಾಜ ಕಲ್ಯಾಣ ಇಲಾಖೆಯಿಂದ ಏನಾದರೂ ಕೆಲಸಗಳಾಗುತ್ತಿವೆಯೋ ಎಂದು ನೋಡಿದರೆ ಏನೂ ಆಗಿಲ್ಲ ಎನ್ನುವುದು ಕಂಡು ಬರುತ್ತದೆ. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ರಾಜ್ಯದಲ್ಲಿ ಬಹಳ ದೊಡ್ಡದಾದ ಸಮಾಜ ಕಲ್ಯಾಣ ಇಲಾಖೆ ಎಂದು ಸುಮ್ಮನೆ ಸರಕಾರ ಇಟ್ಟುಕೊಂಡಿದೆ. ಸಮಾಜ ಕಲ್ಯಾಣ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆ ಎಂದು ತಿಳಿದುಕೊಂಡು ನಿಜವಾಗಿಯೂ ಹಿಂದುಳಿದ ಸಮಾಜದವರನ್ನು ಉದ್ಧಾರ ಮಾಡಿ ಜನರ ಬಡತನವನ್ನು ನಿವಾರಣೆ ಮಾಡಲು ಹಾಗೂ ಅಸ್ಪೃಶ್ಯತೆಯನ್ನು ತೊಡೆದುಹಾಕಲು ತಕ್ಕ ಕ್ರಮಗಳನ್ನು ಕೈಗೆದುಕೊಳ್ಳುವುದರಲ್ಲಿ ಯಾವ ಆಸಕ್ತಿಯನ್ನೂ ವಹಿಸುತ್ತಿಲ್ಲ. ನಿಜವಾಗಿಯೂ ಈ ಮೂರು ವಿಧದಲ್ಲಿ ಸಹಾಯ ಮಾಡಿದರೆ ಹಿಂದುಳಿದ ಜನಾಂಗದವರಿಗೆ ಸ್ವಲ್ಪಮಟ್ಟಿಗಾದರೂ ಅನುಕೂಲಗಳಾಗು

(ಶ್ರೀ ಎ. ರಾಮಚಂದ್ರ)

ತ್ತಿತ್ತು. ಮತ್ತು ಸ್ವಾತಂತ್ರ್ಯ ಬಂದ ಮೇಲೆ ಪ್ರಜಾಪ್ರಭುತ್ವ ಇಂದು ಭದ್ರವಾದ ತಳಹದಿಯ ಮೇಲೆ ಉಳಿಯಬೇಕು ಎಂದು ಹಿಂದೆ ಮಹಾತ್ಮಾ ಗಾಂಧಿಯವರೇ ಬಹಳವಾಗಿ ಇದರ ಬಗ್ಗೆ ಹೇಳಿದ್ದಾರೆ. ಅದನ್ನು ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷದವರು ಏಕೆ ಮರೆತು ಬಿಟ್ಟರು ಎನ್ನುವುದನ್ನು ನಾವು ಇಲ್ಲಿ ಆಲೋಚನೆ ಮಾಡಬೇಕಾಗಿ ಬಂದಿದೆ. ಅವರು ಸತ್ಯ ಅಹಿಂಸೆಯ ಹಾದಿಯಲ್ಲಿ ಹೋಗಬೇಕೆಂದು ಹೇಳಿದ್ದನ್ನು ಇಂದಿನ ಸರಕಾರ ಮರೆತಂತೆ ಕಾಣುತ್ತದೆ. ಇದರಲ್ಲಿ ಸ್ವಾರ್ಥ ಬರುತ್ತದೆ. ಸ್ವಾರ್ಥ ಬಂದ ಮೇಲೆ ಎಲ್ಲವೂ ಹೋಗುತ್ತದೆ. ಮದ್ಯಪಾನ ಮಾಡಿದವನಿಗೆ ತನ್ನ ಸಂಸಾರದ ಕಷ್ಟದ ನೆನಪು ಆಗುವುದಿಲ್ಲ. ಗಾಂಧಿ ತತ್ವ ಸಂಪೂರ್ಣವಾಗಿ ಮರೆತು ಬಿಟ್ಟು ಇಂದು ನೀವು ಸ್ವಾರ್ಥಿಗಳಾಗಿದ್ದೀರಿ. ಇದರಿಂದ ನಿಮಗೆ ಮುಂದೆ ಪಶ್ಚಾತ್ತಾಪವಾಗುತ್ತದೆ ಮನಸ್ಸಿಗೆ ನೋವು ಆಗುತ್ತದೆ.

ಇನ್ನೊಂದು ವಿಷಯ ಹೇಳಲು ಬಹಳ ವಿಷಾದ ಪಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಿಂದ ಬರಿ ಹರಿಜನರಿಗೆ ಸಹಾಯವಾಗಬೇಕು. ಆದರೆ ಸರಕಾರದವರು ಎರಡನ್ನೂ ಮಾಡಬೇಕೆಂದು ದೇಶದ ಎಲ್ಲ ಜನರಿಗೆ ಸಹಾಯ ಸಹಕಾರವಾಗಬೇಕು ಎಂದು ಹೇಳತಕ್ಕ ಪ್ರಶ್ನೆ ಮುಂದೆ ಬಂದೇ ಬರುತ್ತದೆ. ಆದರೆ ಬೇರೆ ಜಾತಿಯವರು ಈ ಬಡಜನರಿಗೆ ಸಹಾಯ ಸಹಕಾರ ಮಾಡಿದರೆ ಮಾತ್ರ ಈ ಹರಿಜನರ ಉದ್ಧಾರವಾಗಲು ಸಾಧ್ಯ. ಇಂದು ಸಮಾಜ ಕಲ್ಯಾಣ ಇಲಾಖೆ ಮೇಲಿನ ಡಿಮ್ಯಾಂಡ್ ಮೇಲೆ ಹರಿಜನ ಶಾಸಕರೇ ಮಾತನಾಡಬೇಕು ಎಂಬುದು ಸರಿಯಲ್ಲ ಎಂದು ಹೇಳುತ್ತೇನೆ. ನಾನು ಯಾವ ಭೇದ ಭಾವದ ದೃಷ್ಟಿಯಿಂದ ಇದನ್ನು ಹೇಳುತ್ತಿಲ್ಲ. ಒಂದು ರೀತಿಯಲ್ಲಿ ಯಾವ ಭೇದ ಭಾವ ಇಲ್ಲದೆ ಎಲ್ಲರೂ ದುಡಿಯಬೇಕು. ಮಂತ್ರಿ ಮಂಡಳದವರು ಸರಕಾರಿ ಅಧಿಕಾರಿಗಳು ಎಲ್ಲರೂ ಒಂದೇ ಭಾವನೆಯಿಂದ ದುಡಿಯುದಿದ್ದರೆ ಹರಿಜನರ ಉದ್ಧಾರ ಈ 20 ವರ್ಷಗಳಲ್ಲಿಯೇ ನಿಜವಾಗಿಯೂ ಆಗುತ್ತಿತ್ತು. ಇದೇ ರೀತಿ ಭಾವನೆ ಇಟ್ಟುಕೊಂಡು ಕೆಲಸ ಮಾಡುವುದಾದರೆ 20 ವರ್ಷಗಳೇಕೆ ಇನ್ನೂ 100 ವರ್ಷಗಳಾದರೂ ಹರಿಜನರ ಉದ್ಧಾರವಾಗುವುದಿಲ್ಲ ಹರಿಜನರ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಕಾಣುತ್ತದೆ. ನಿಜವಾಗಿಯೂ ಹರಿಜನರ ಉದ್ಧಾರವಾಗಬೇಕಾದರೆ ಅವರು ಸಮಾಜದಲ್ಲಿ ಸ್ವತಂತ್ರರಾಗಬೇಕು, ಅವರಿಗೆ ಉಳಿಯಲು ಒಂದು ಮನೆ ಕಟ್ಟಿಸಿಕೊಳ್ಳಲು ಸ್ಥಳ ಬೇಕೇಬೇಕು, ಅವರು ಜೀವನ ಮಾಡುವುದಕ್ಕೆ ಅನುಕೂಲ ಒದಗಿಸಿ ಕೊಡಬೇಕು. ಇಷ್ಟು ಮಾಡಬೇಕು ಎಂದು ಕಳೆದ ಸಲ ಮಾತನಾಡುವಾಗ ಸಹ ನಾನು ಹೇಳಿದ್ದೇನೆ. ಹರಿಜನರಲ್ಲಿ ಎಷ್ಟು ಜನರಿಗೆ ಭೂಮಿ ಇದೆ, ಭೂಮಿ ಎಷ್ಟು ಜನರಿಗೆ ಇಲ್ಲ ಎನ್ನುವುದನ್ನು ನೋಡಬೇಕು. ಅವರು ಎಲ್ಲಿ ಎಂಥ ಪರಿಸ್ಥಿತಿಯಲ್ಲಿ ವಾಸ ಮಾಡುತ್ತಾರೆ ನೋಡಬೇಕು. ಈ ವಿಚಾರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಏನೂ ಉಪಯೋಗವಾಗುವುದಿಲ್ಲ. ಹರಿಜನರಿಗೆ ಉತ್ತೇಜನ ಕೊಡುವ ರೀತಿಯಲ್ಲಿ ಮಂತ್ರಿಗಳು ಸರಕಾರಿ ಅಧಿಕಾರಿಗಳು ಆತ್ಮಸಾಕ್ಷಿಯಾಗಿ ದುಡಿಯಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನೊಂದು ವಿಷಯ ವಿದ್ಯಾಭ್ಯಾಸ. ಹರಿಜನರಿಗೆ ಅಲ್ಪಸ್ವಲ್ಪ ವಿದ್ಯಾಭ್ಯಾಸದ ಅನುಕೂಲತೆ ಕೊಟ್ಟಿದ್ದರೂ ವಿದ್ಯಾಭ್ಯಾಸ ಪಡೆದವರಿಗೆ ಏನಾದರೂ ಒಂದು ಕೆಲಸ ಬೇಕು. ಆದರೆ ಎಷ್ಟೋ ಹರಿಜನರು ಕಲಿತವರು ಕಳೆದ ಏಳು ವರ್ಷದಿಂದ ಕೆಲಸವಿಲ್ಲದೆ ಸುಮ್ಮನೆ ಇದ್ದಾರೆ. ಹರಿಜನರಿಗೆ ಚಾನ್ಸ್ ಸಿಕ್ಕುವುದಿಲ್ಲ. ಯಾವ ಡಿಪಾರ್ಟ್‌ಮೆಂಟಿನಲ್ಲಿ ನೋಡಿದರೂ 18 ಪರ್ಸೆಂಟ್ ಹರಿಜನರು ಇಲ್ಲ. ಕೆಲವು ಕಡೆ ಒಂದು ಪರ್ಸೆಂಟ್ ಕೂಡ ಇಲ್ಲ. 18 ಪರ್ಸೆಂಟ್ ಆಗುವವರೆಗೆ ಇಂಥ ಸ್ಥಳಗಳನ್ನು ಅವರಿಗಾಗಿ ಕಾಯ್ದಿಡಬೇಕು ಅವುಗಳನ್ನು ತುಂಬಬೇಕು. ಸಮಾಜ ಕಲ್ಯಾಣ ಇಲಾಖೆಯು ಇದರ ಬಗ್ಗೆ ಏತಕ್ಕೆ ಉದಾಸೀನ ಮಾಡಿದ್ದಾರೆ? ಇದರ ಬಗ್ಗೆ ಉದಾಸೀನ ಮಾಡದೆ ಸರಕಾರದವರು ನ್ಯಾಯವಾದ ರೀತಿಯಲ್ಲಿ ಹರಿಜನೋದ್ಧಾರ ಮಾಡಬೇಕು. ಈ ಒಂದು ಉದ್ಯೋಗ ಸರಿಯಾಗಿ ಸಿಗದೇ ಇದ್ದರೆ ಬಡ ಜನರು ಜೀವನ ಮಾಡುವುದೇ ಕಷ್ಟವಾಗುತ್ತದೆ. ಅವರು ಕಲಿಯುವುದು ಏತಕ್ಕೆ? ಎಸ್ಸೆಸ್ಸೆಲ್ಸಿವರೆಗೆ ಕಲಿತರೂ ಕೆಲಸ ಸಿಕ್ಕುವುದಿಲ್ಲವೆಂದಾದರೆ ತುಂಬಾ ಕಷ್ಟವಾಗುತ್ತದೆ. ಬಡ ಹರಿಜನರು ಕಾಲೇಜಕ್ಕೆ ಹೋಗಲು ಅಷ್ಟು ಅವಕಾಶ ಇರುವುದಿಲ್ಲ. ಎಸ್ಸೆಸ್ಸೆಲ್ಸಿವರೆಗೆ ಕಲಿತವರಿಗೆ ಉದ್ಯೋಗ ಕೊಡಲು ಶಕ್ತಿ ಇಲ್ಲದೇ ಹೋದರೆ ಅವರ ಉದ್ಧಾರ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಈ ಪ್ರಶ್ನೆಗೆ ಸರಿಯಾದ ಉತ್ತರ ಮಾನ್ಯ ಮಂತ್ರಿಗಳು ಕೊಡಬೇಕು ಎಂದು ಪ್ರಾರ್ಥಿಸುತ್ತೇನೆ.

ಇನ್ನು ಹಾಸ್ಟೆಲ್ ವಿಚಾರ. ಹಾಸ್ಟೆಲ್ಲಿನಲ್ಲಿ ಇರತಕ್ಕ ಒಬ್ಬನಿಗೆ 25 ರೂಪಾಯಿ ದರ ಇಟ್ಟಿದ್ದೀರಿ. ಈ ಹಣ ಏನೇನೂ ಸಾಕಾಗುವುದಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ನಾಲ್ಕೈದು ಹಾಸ್ಟೆಲನಲ್ಲಿ ನಾನು ನೋಡಿದ್ದೇನೆ. ಅಲ್ಲಿ ಅನ್ನ ಮಾಡಲು ಅಕ್ಕಿ ಇರುವುದಿಲ್ಲ. ಹಣ ಸಾಕಾಗುವುದಿಲ್ಲ

ಎಂದು ಹೇಳುತ್ತಾರೆ. ಹಾಸ್ಟೆಲ್ಲಿನಲ್ಲಿ ಇರುವವರಿಗೆ ಅನ್ನ ಕೊಡದೆ ಗೆಣಸು ಚಪಾತಿ ತಿನ್ನಲು ಕೊಡುತ್ತಾರೆ. ಮನೆ ಏನಾದರೂ ಹತ್ತಿರದಲ್ಲಿ ಇದ್ದರೆ ಅಂಥವರು ಮನೆಗೆ ಹೋಗಿ ಊಟ ಮಾಡಿಕೊಂಡು ಸ್ಕೂಲಿಗೆ ಹೋಗುತ್ತಾರೆ. ಸರಕಾರ ನಡೆಸತಕ್ಕಂಥ ಹಾಸ್ಟೆಲ್ಲಿನಲ್ಲಿ ಸರಿಯಾಗಿ ಊಟ ಸಿಕ್ಕುವುದಿಲ್ಲ. ಹಾಸ್ಟೆಲ್ ನಡೆಸಲು ಕೊಡುವ ಹಣ ಸಾಲದು ಎಂದು ನಾವು ಅನೇಕ ಸಲ ಮನವಿ ಮಾಡಿಕೊಂಡರೂ ಕೂಡ ಅದನ್ನು ಸರಕಾರ ಅರ್ಥ ಮಾಡಿಕೊಳ್ಳುವುದಿಲ್ಲ. ನಾವು ವಿರೋಧಪಕ್ಷದವರು ಏನೋ ಹೇಳುತ್ತೇವೆ ಎಂದು ತಿಳಿದುಕೊಳ್ಳಬಾರದು. ನಾವು ಹೇಳುವುದನ್ನು ತಾವು ಗ್ರಹಿಸಬೇಕು. ಹಾಸ್ಟೆಲ್ಲುಗಳಿಗೆ ತಾವು ಸ್ವತಃ ಹೋಗಿ ಅಲ್ಲಿಯ ಪರಿಸ್ಥಿತಿ ನೋಡಬೇಕು.

ಮದ್ಯಪಾನ ವಿಷಯವನ್ನು ನಾನು ಈ ಮೊದಲು ಹೇಳಿದ್ದೇನೆ. ನಿಜವಾಗಿಯೂ ಮದ್ಯಪಾನ ನಿರೋಧದಿಂದ ಹರಿಜನರಿಗೆ ಅಲ್ಪ ಸ್ವಲ್ಪ ಒಳ್ಳೆಯದಾಗಿತ್ತು. ಅಂಥಾದ್ದನ್ನು ಸರಕಾರದವರು ತೆಗೆದು ಹಾಕಿ ಬಿಟ್ಟು ಬಡ ಹರಿಜನರಿಗೆ ದ್ರೋಹ ಮಾಡಿದ ಹಾಗೆ ಆಗಿದೆ. ಆದುದರಿಂದ ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸಮಾಜಕಲ್ಯಾಣ ಇಲಾಖೆಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರತಕ್ಕಂಥ ಬೇಡಿಕೆಯನ್ನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ಸರಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಡಿಮ್ಯಾಂಡ್ ವಿಚಾರದಲ್ಲಿ ಅನೇಕರು ಅನೇಕ ರೀತಿಯಿಂದ ಸಲಹೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಈ ಮೊದಲು ಮಾತನಾಡಿದ ನಮ್ಮ ಪಾಟೀಲ್ ಸಾಹೇಬರು ಕಳೆದ 20 ವರ್ಷಗಳಲ್ಲಿ ಕಾಂಗ್ರೆಸ್ ಸರಕಾರ ಏನೂ ಮಾಡಿಲ್ಲ ಎಂದು ವಾದ ಹೂಡಿದ್ದಾರೆ. ಶ್ರೀಮಾನ್ ಪಾಟೀಲರು ಒಂದು ವಿಚಾರ ಮರೆತು ಹೋಗಿರಬಹುದು. ಹಿಂದೆ ಕೇರಳದಲ್ಲಿ ನಂಬೂದ್ರಿಪಾದರ ಸರಕಾರ ಅಧಿಕಾರಕ್ಕೆ ಬಂದಾಗ್ಗೆ ಐದು ಜನ ಇರತಕ್ಕಂಥ ಒಂದು ಹರಿಜನ ಕುಟುಂಬವನ್ನು ಸುಟ್ಟುಹಾಕಿದರು. ನಾವು ಊರಿಗೆ ಹೋಗಿ ಪರಿಸ್ಥಿತಿ ನೋಡಿಕೊಂಡು ಬಂದಿದ್ದೇವೆ. ಇಂಥ ಸನ್ನಿವೇಶದಲ್ಲಿ ಇದು ಯಾವ ರಾಜಕೀಯ ಪಕ್ಷದ್ದು ಎಂದು ತಿಳಿದುಕೊಳ್ಳಬಾರದು. ಹರಿಜನರ ಪ್ರಶ್ನೆ ನೂರಾರು ವರ್ಷಗಳಿಂದ ಬಂದಿದೆ. ನಮ್ಮ ಸರಕಾರ ಬಂದರೆ ಇದನ್ನು ಮಾಡುತ್ತೇವೆ, ಕಾಂಗ್ರೆಸ್ ಸರಕಾರ ಮಾಡುವುದಿಲ್ಲ ಎಂದು ಅವರು ಹೇಳುವುದು ಸರಿಯಲ್ಲ. ದೇಶದಲ್ಲಿ ಇಂದು ಇರತಕ್ಕ ಅಸ್ಪೃಶ್ಯತೆ ನಿವಾರಣೆಯಾಗ ಬೇಕಾದರೆ ಅದಕ್ಕೆ ಸವರ್ಣೀಯರ ಸಹಕಾರ ಇಲ್ಲದೇ ಹೋದರೆ ಖಂಡಿತವಾಗಿ ಅಸ್ಪೃಶ್ಯತೆ ನಿರ್ಮೂಲನ ಮಾಡುವುದಕ್ಕೆ ಸಾಧ್ಯವಿಲ್ಲ. ಅಸ್ಪೃಶ್ಯತೆ ನಿವಾರಣೆ ಮಾಡುವುದಕ್ಕೆ ಶ್ರೀ ಬಸವಣ್ಣನವರು ಅನುಭವ ಮಂಟಪದಲ್ಲಿ ಹರಳಯ್ಯನನ್ನು ಬರ ಮಾಡಿಕೊಂಡು ಕ್ರಾಂತಿ ಎಬ್ಬಿಸಿದರು. ಇದಕ್ಕಾಗಿ ರಾಮಾನುಜಾಚಾರ್ಯರು ಕಷ್ಟ ಪಟ್ಟಿದ್ದಾರೆ, ಶಂಕರಾಚಾರ್ಯರು ಕಷ್ಟಪಟ್ಟಿದ್ದಾರೆ, ಮಹಾತ್ಮ ಗಾಂಧಿಯವರು ಕಷ್ಟಪಟ್ಟಿದ್ದಾರೆ. ಇದೊಂದು ನೂರಾರು ವರ್ಷಗಳಿಂದ ಬಂದಿರತಕ್ಕಂಥ ಜಾಡ್ಯ. ಇದು ನಿವಾರಣೆಯಾಗದಿದ್ದರೆ ಹಿಂದೂ ಧರ್ಮ ಹೋಗುತ್ತದೆ, ದೇಶ ಹಾಳಾಗಿ ಹೋಗುತ್ತದೆ. ಚೀಣಾ ದೇಶದವರು ನಮ್ಮ ಮೇಲೆ ದಂಡೆತ್ತಿ ಬಂದಾಗ ಜಾತಿ ಮತ ಕುಲ ಯಾವುದನ್ನೂ ಎಣಿಸದೆ ಅವರನ್ನು ಹೇಗೆ ಓಡಿಸಿದೆವೋ ಅದೇ ರೀತಿಯಲ್ಲಿ ಎಲ್ಲ ಪಕ್ಷಗಳವರೂ ಸೇರಿ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು. ಹಾಗೆ ಮಾಡದೆ ಇದ್ದರೆ ದೇಶಕ್ಕೆ ಒಳ್ಳೆಯದಲ್ಲ. ದೇಶಕ್ಕೆ ಒಳ್ಳೆಯದಲ್ಲದೆ ಇದ್ದರೆ ಅದರಿಂದ ಸುಖೀ ರಾಜ್ಯ ಬರುವುದಿಲ್ಲ.

ಸಮಾಜದಲ್ಲಿ ಏರುಪೇರುಗಳಿರಬಾರದು. ಇದ್ದರೆ ಬಹಳ ಅನಾಹುತಗಳಾಗುತ್ತವೆ. 50 ಲಕ್ಷ ಹರಿಜನರ ಪ್ರಜಾ ಸಂಖ್ಯೆ ಇರತಕ್ಕ ಕರ್ನಾಟಕದಲ್ಲಿ ಏರುಪೇರಾದರೆ ಖಂಡಿತವಾಗಿಯೂ ಅದು ನಮ್ಮ ರಾಜ್ಯಕ್ಕೆ ಒಂದು ಕಳಂಕ. ಸಮಾಜ ಕಲ್ಯಾಣದ ವಿಚಾರದಲ್ಲಿ ಮಾನ್ಯ ನಾರಾಯಣಗೌಡರಾಗಲೀ, ಶ್ರೀಮತಿ ಯಶೋಧರಮ್ಮನವರಾಗಲೀ ಸರಿಯಾಗಿ ಮಾಡಿಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಈ ಒಂದು ಖಾತೆಯನ್ನು ವಹಿಸಿರುವವರು 'ಏನೋ ಒಂದು ನಿರ್ಬಂಧಕ್ಕೆ ಒಳಪಟ್ಟು ಕೆಲಸ ಮಾಡುವಂತೆ ಇರಬಾರದು. ಈ ಸಂಧರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಂದು ಹಳ್ಳಿಯಲ್ಲಿ ಒಬ್ಬ ಮುಸಲ್ಮಾನ್ ಇದ್ದ. ಶ್ರೀರಾಮ ನವಮಿ ಬಂತು. ಊರಿನವರೆಲ್ಲರೂ ರಾಮ ಭಜನೆ ಮಾಡಬೇಕು, ಹಾಗೆ ರಾಮಭಜನೆ ಮಾಡದೆ ಇರುವವರು ಊರು ಬಿಟ್ಟು ಹೋಗಬೇಕು ಎಂದು ಹೇಳಿದರು. ಆಗ ಆ ಮುಸಲ್ಮಾನನು ತನ್ನ ಹೆಂಡತಿಯ ಸಂಗಡ ಇದ್ದ ವಿಚಾರವನ್ನು ತಿಳಿಸಿದಾಗ ಆಕೆ ರಾಮಭಜನೆ ಮಾಡಿ, ಏನು ಮಾಡುವುದಕ್ಕಾಗುತ್ತದೆ ಎಂದು ಹೇಳಿದಳಂತೆ. ಆಗ ಆ ಮುಸಲ್ಮಾನನು ಗರುಡಕಂಭವನ್ನು ಹಿಡಿದುಕೊಂಡು ಜುಲುಂಕಿ ರಾಮ್ ರಾಮ್, ಜುಲುಂಕಿ

(ಶ್ರೀ ಎ. ಮುನಿಯಪ್ಪ)

ರಾಮ್ ರಾಮ್ ಎಂದು ಹೇಳುತ್ತಿದ್ದನಂತೆ. ಅವರ ಅರ್ಥ ಹಿಂಬಾಗಳು ನನ್ನನ್ನು ನಿರ್ಬಂಧ ಮಾಡಿದ್ದರಿಂದ ನಾನು ರಾಮಭಜನೆ ಮಾಡುತ್ತಿದ್ದೇನೆ ಎಂದು. ಈ ರೀತಿಯಾಗಿ ಆಗಬಾರದು ಎಂದು ಹೇಳುತ್ತಿದ್ದೇನೆ.

ಸಮಾಜ ಕಲ್ಯಾಣ ಖಾತೆಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ 50 ಲಕ್ಷ ಜನಗಳಿಗೆ ಏನು ಮಾಡುವುದಕ್ಕೆ ಆಗುತ್ತದೆ, ಅದರಿಂದ ಸಮಾಜದಲ್ಲಿ ಏನು ಮಾಡಿದ ಹಾಗೆ ಆಗುತ್ತದೆ? ಈ ವಿಚಾರವನ್ನು ಗಮನಿಸಿದರೆ ಮಾನ್ಯ ನಾರಾಯಣಗೌಡರಾಗಲೀ, ಶ್ರೀಮತಿ ಯಶೋಧರಮ್ಮನವರಾಗಲೀ ಏನೂ ಮಾಡಲಿಲ್ಲ ಎಂದು ಹೇಳತಕ್ಕುದು ಸಾಧುವಲ್ಲ. ಹಿಂದೆ ಶ್ರೀಮಾನ್ ಶಂಕರ ನಾರಾಯಣ ರಾಯರು ಹರಿಜನೋದ್ಧಾರಕ್ಕಾಗಿ ಬಹಳ ಕಷ್ಟಪಟ್ಟಿದ್ದಾರೆ. ಅವರ ಮಕ್ಕಳೇ ಈಗ ಸಮಾಜ ಕಲ್ಯಾಣ ಇಲಾಖೆಯ ಡೈರೆಕ್ಟರಾಗಿದ್ದಾರೆ. ಈ ಸಮಾಜದ ಆರ್ಥಿಕಾಭಿವೃದ್ಧಿಗೆ, ವಿದ್ಯಾಭಿವೃದ್ಧಿಗೆ ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕು ಎಂಬುದಕ್ಕೆ 10-15 ವರ್ಷಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಮಾನ್ಯ ಮಂತ್ರಿಗಳು. ಈ ವಿಚಾರದ ಕಡೆಗೂ ಗಮನ ಕೊಡಬೇಕು.

ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಹರಿಜನರು ಯಾವ ಸ್ಥಿತಿಯಲ್ಲಿದ್ದರು, ಸ್ವರಾಜ್ಯ ಬಂದ ಮೇಲೆ ಈ ಹೊತ್ತು ಅವರ ಅಂತಸ್ತು ಏನಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರು ಟೀಕೆ ಮಾಡುವುದಕ್ಕೆ ಮುಂಚೆ ಗಮನದಲ್ಲಿಟ್ಟುಕೊಳ್ಳಬೇಕು. ಹರಿಜನರಿಗೆ ವಿದ್ಯಾಭ್ಯಾಸವನ್ನು ಕೊಟ್ಟಿದ್ದಾರೆ, ಅವರು ಆರ್ಥಿಕವಾಗಿ ಮುಂದೆ ಬರುವುದಕ್ಕೆ ಸಹಾಯ ಮಾಡಿದ್ದಾರೆ. ಆದರೂ ಕಾಂಗ್ರೆಸ್ ಸರ್ಕಾರ ಏನೂ ಮಾಡಿಲ್ಲ ಎನ್ನುವ ಮಾತು ಸರಿಯಲ್ಲ. ಮಹಾತ್ಮ ಗಾಂಧೀಜಿ ಅವರು ಎಲ್ಲವನ್ನೂ ವಿಶಾಲ ಹೃದಯದಿಂದ ನೋಡುತ್ತಿದ್ದರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ನಾಲ್ಕು ವರ್ಣಾಶ್ರಮ ಧರ್ಮಗಳಿವೆ. ಬ್ರಾಹ್ಮಣರು ಬರೆದುದನ್ನು ವೈಶ್ಯರು ಒಪ್ಪುವುದಿಲ್ಲ, ಕ್ಷತ್ರಿಯರು ಬರೆದುದನ್ನು ವೈಶ್ಯರು ಒಪ್ಪುವುದಿಲ್ಲ, ವೈಶ್ಯರು ಬರೆದುದನ್ನು ಶೂದ್ರರು ಒಪ್ಪುವುದಿಲ್ಲ. ಆದರೆ ಈ ಎಲ್ಲ ಜನಾಂಗಗಳೂ ನೆಹರೂ ಅವರ ನಾಯಕತ್ವದಲ್ಲಿ ಸೇರಿ, ಡಾಕ್ಟರ್ ಅಂಬೇಡ್ಕರ ಅವರು ಬರೆದ ರಾಜ್ಯಾಂಗವನ್ನು ಒಪ್ಪಿದ್ದಾರೆ. ಈ ರಾಜ್ಯಾಂಗಕ್ಕೆ ಏನಾದರೂ ಅನ್ಯಾಯವಾದರೆ ಸುಪ್ರೀಂ ಕೋರ್ಟಿಗೆ ಹೋಗುವುದಕ್ಕೆ ಅವಕಾಶವಿದೆ, ಹೈಕೋರ್ಟಿಗೆ ಹೋಗುವುದಕ್ಕೆ ಅವಕಾಶವಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ರಾಜ್ಯಾಂಗದಲ್ಲಿರುವ ಪ್ರಕಾರ ಅನುಕೂಲತೆಗಳನ್ನು ಕಾಂಗ್ರೆಸ್ ಸರ್ಕಾರ ಒದಗಿಸದೆ ಹೋದರೆ ಅದನ್ನು ಇಲ್ಲಿ ಹೇಳಬಹುದೇ ಅಥವಾ ಕೋರ್ಟಿಗೇ ಹೋಗಿ ಅವುಗಳನ್ನು ಪಡೆಯಬೇಕೇ ?

ಶ್ರೀ ಎ. ಮುನಿಯಪ್ಪ.— ರಾಜ್ಯಾಂಗದಲ್ಲಿರುವ ಪ್ರಕಾರ ನಡೆಯದೆ ಅದರಿಂದ ಹರಿಜನರ ಹಿತಕ್ಕೆ ಧಕ್ಕೆ ಬಂದರೆ, ಅವರು ಕೋರ್ಟಿಗೆ ಹೋದರೆ ಅದರಿಂದಾಗಿ ತಗಲುವ ಕೋರ್ಟು ವೆಚ್ಚವನ್ನು ಸರ್ಕಾರವೇ ವಹಿಸಿಕೊಂಡು ನ್ಯಾಯವನ್ನು ದೊರಕಿಸಿಕೊಡಲು ಸಿದ್ಧವಾಗಿದೆ ಎಂದು ಸರ್ಕಾರ ಘೋಷಣೆ ಮಾಡಿದೆ.

ವಿದ್ಯಾಭ್ಯಾಸದ ವಿಚಾರವಾಗಿ ಎಲ್ಲರೂ ಹೇಳಿದ್ದಾರೆ. ಹಾಸ್ಟಲುಗಳ ವಿಷಯವನ್ನು ತೆಗೆದುಕೊಂಡರೆ 20 ವರ್ಷಗಳ ಹಿಂದೆ ಎಷ್ಟು ಜನರಿಗೆ ಅವುಗಳಲ್ಲಿ ಅವಕಾಶವಿತ್ತೋ ಅಷ್ಟೇ ಜನರಿಗೆ ಇವೊತ್ತೂ ಅಲ್ಲಿ ಅವಕಾಶವಿದೆ. ಮಾನ್ಯ ಮಂತ್ರಿಯವರನ್ನು ನಾನು ಕೆಲವು ಕಡೆ ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಒಬ್ಬ ಸೂಪರಿಂಡೆಂಟರಿದ್ದಾರೆ ಅವರ ಸಂಸಾರವೂ ಹಾಸ್ಟಲಿನ ಖರ್ಚಿನಲ್ಲಿಯೇ ನಡೆಯಬೇಕು. ಹಾಸ್ಟಲಿಗೆ ಬರುವ ರೇಷನ್‌ನಲ್ಲೇ ಅವರೂ ಊಟ ಮಾಡುತ್ತಾರೆ. ಪ್ರತಿಯೊಂದು ಹಾಸ್ಟಲಿಗೂ ಸಂಬಂಧಪಟ್ಟಂತೆ ಸಲಹಾ ಸಮಿತಿಗಳನ್ನು ನೇಮಕ ಮಾಡಿ ಎಂದು ನಾನು ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಮಾಡುವುದಾಗಿ ಹೇಳಿದ್ದರು. ಆದರೆ ಇವೊತ್ತಿನವರೆಗೂ ಏನೂ ಮಾಡಿಲ್ಲ. ಈ ಸನ್ನಿವೇಶದಲ್ಲಿ ವಿದ್ಯಾಭ್ಯಾಸದ ದೃಷ್ಟಿಯಿಂದ, ತಕ್ಷಣ ಸಲಹಾ ಸಮಿತಿಗಳನ್ನು ಮಾಡಿ, ಅವುಗಳ ಮೇಲ್ವಿಚಾರಣೆಗೆ ಹಾಸ್ಟಲುಗಳನ್ನು ಒಳಪಡಿಸಿ, ಅವರ ರಿಪೋರ್ಟನ್ನು ಆಗಾಗ್ಗೆ ತರಿಸಿಕೊಳ್ಳಬೇಕು.

ಎಡಗೈ, ಬಲಗೈ ಎಂಬ ಭೇದಗಳ ವಿಚಾರವಾಗಿ ಮಾನ್ಯ ಪುಟ್ಟರಂಗನಾಥ ಅವರು ಹೇಳಿದರು. ಈ ವಾದ 1947ಕ್ಕೇ ಹೋಗಿ ಬಿಟ್ಟಿದೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಮಾನ್ಯ ಮುಖ್ಯ ಮಂತ್ರಿಗಳು ಸಾರ್ವಜನಿಕ ಸಭೆಯಲ್ಲಿ ಹೇಳಿದ ಮಾತನ್ನು ನಾನು ಹೇಳಿದೆ. ಹಾಸ್ಯಕ್ಕೆ ನಾನು ಹೇಳಲಿಲ್ಲ.

ಶ್ರೀ ಎ. ಮುನಿಯಪ್ಪ.—ಹಿಂದು ಮುಸಲ್ಮಾನರು ಒಂದಾಗಿ ಬಂದರೆ ಸ್ವರಾಜ್ಯ ಕೊಡುತ್ತೇವೆಂದು ಇಂಗ್ಲೀಷಿನವರು ಹೇಳುತ್ತಿದ್ದರು. ನಮ್ಮ ದೇಶವನ್ನು ನಮಗೆ ಕೊಡಿ, ಏನಾದರೂ ಮಾಡಿಕೊಳ್ಳುತ್ತೇವೆಂದು ಆಗ ಎಲ್ಲರೂ ಹೇಳಿದೆವು. ಒಂದು ವೇಳೆ ಈಗ ಯಾರಾದರೂ ಎಡಗೈ, ಬಲಗೈ ಎಂಬ ಭೇದಗಳಿಲ್ಲದೆ ಎಲ್ಲರೂ ಒಂದಾಗಿ ಬನ್ನಿ ಎಂದು ಹೇಳಿದರೆ ಇಂಗ್ಲೀಷಿನವರಿಗೆ ಹಿಂದೆ ಏನು ಹೇಳಿದೆವೋ ಅದೇ ರೀತಿ ಹೇಳೋಣ. ಆದುದರಿಂದ ಎಡಗೈ, ಬಲಗೈ ಎಂದು ಹೇಳುವುದು ಅಸ್ಪೃಶ್ಯತೆಯನ್ನು ಇನ್ನೂ ಕೆಲವು ದಿನ ಮುಂದಕ್ಕೆ ತಳ್ಳುವುದಕ್ಕೆ ಹೇಳುವಂಥ ಮಾತುಗಳು. ಆದುದರಿಂದ ಈ ವಿಚಾರದಲ್ಲಿ ಸರ್ಕಾರದವರು ಗಮನ ಕೊಡಬೇಕು.

ಸೊಸೈಟಿಗಳು ಎಂದು ಮಾಡಿದ್ದಾರೆ. ಹರಿಜನರು ಯಾರಾದರೂ ಚುನಾವಣೆಗಳಲ್ಲಿ ಆರಿಸಿ ಬರುವುದಕ್ಕೆ ಸಾಧ್ಯವಾಗುತ್ತದೆಯೇ? ವಿಧಾನ ಸಭೆಗೆ ಹರಿಜನರಿಗೆ ಮೀಸಲು ಸ್ಥಾನಗಳನ್ನು ಇಡಲಾಗಿದೆ. ಎಲ್ಲ ವಿಚಾರಗಳಲ್ಲಿಯೂ ಹರಿಜನರಿಗೆ 18 ಪರ್ಸೆಂಟ್ ಕೊಡಬೇಕು ಎಂದು ಹೇಳುತ್ತಾರೆ. ಆದರೆ ಸೊಸೈಟಿಗಳಲ್ಲಿ ಇಲ್ಲದೆ ಹರಿಜನರು ಆರಿಸಿ ಬರುವುದಕ್ಕೆ ಆಗುವುದಿಲ್ಲ. ಆದುದರಿಂದ ಹರಿಜನರಿಗೆ ಸೂಕ್ತ ಪ್ರಾತಿನಿಧ್ಯವನ್ನು ಸೊಸೈಟಿಗಳಲ್ಲಿ ದೊರಕಿಸಿಕೊಡಬೇಕು ಎಂದು ಮಾನ್ಯ ಸಹಕಾರ ಸಚಿವರಲ್ಲಿ ನಾನು ಕೇಳಿದಾಗ ಯೋಚನೆ ಮಾಡುತ್ತೇನೆಂದು ಹೇಳಿದರು. ಆ ವಿಚಾರದಲ್ಲಿ ಮಾನ್ಯ ಸಮಾಜಕಲ್ಯಾಣ ಇಲಾಖೆಯ ಮಂತ್ರಿಗಳೂ ಸ್ವಲ್ಪ ಸಹಾಯ ಮಾಡಬೇಕು ಮತ್ತು ಈ ವ್ಯವಸ್ಥೆ ಆಗುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಹರಿಜನ ಗಿರಿಜನ ಸೊಸೈಟಿಗಳಿವೆ. ಅದಕ್ಕೆ ಸಹಕಾರ ಸಂಘಗಳ ಇನ್‌ಸ್ಪೆಕ್ಟರೇ ಕಾರ್ಯದರ್ಶಿಯಾಗಿದ್ದಾರೆ. ಈ ಎರಡು ಸೊಸೈಟಿಗಳಲ್ಲಿ ಬಾಗೇಪಲ್ಲಿ ಸೊಸೈಟಿಯ ಷೇರು ದುಡ್ಡು ತಿಂದು ಹಾಕಿದ್ದಾರೆ. ಇನ್ನೊಂದು ಕಡೆ ಗುಡಿ ಬಂಡ ತಾಲ್ಲೋಕಿನಲ್ಲಿ ಮನೆಗಳಿಗೆ ಕೊಡುವ ದುಡ್ಡನ್ನು ತಿಂದು ಹಾಕಿದ್ದಾರೆ. ಆದುದರಿಂದ ಅಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕಾಗಿದೆ. ಸುಮ್ಮನೆ ಒಂದು ಸೊಸೈಟಿಯನ್ನು ಮಾಡಿದ್ದೇವೆ, ಅದು ಕಾರ್ಪೊರೇಷನ್ನಿಗೆ ಸಂಬಂಧಪಟ್ಟದ್ದು, ನಮಗೂ ಅದಕ್ಕೂ ಸಂಬಂಧವಿಲ್ಲ ಎನ್ನುವ ನಿಲುವು ತೆಗೆದುಕೊಂಡು ಕುಳಿತುಕೊಳ್ಳಬಾರದು.

5-30 P.M.

ಇನ್ನೊಂದು ವಿಚಾರ. ಸಮಾಜವಾದ ಈಗ ಎಲ್ಲಿದೆ? ಒಬ್ಬ ರಾಚಯ್ಯನವರು, ಒಬ್ಬ ನಾರಾಯಣಗೌಡರು ಮಾಡಿದರೆ ಆಗುವುದಿಲ್ಲ, ಎರಡೂವರೆ ಕೋಟಿ ಜನರೆಲ್ಲರೂ ಪ್ರಯತ್ನ ಮಾಡಿದರೆ ಸಮಾಜವಾದ ಸರಿಯಾಗಿ ಜಾರಿಗೆ ಬರಬಹುದು, ಅದು ಕಾರ್ಯಗತವಾಗಬೇಕು, ಸುಮ್ಮನೆ ಇಲ್ಲಿ ಭಾಷಣಮಾಡಿದರೆ ಪ್ರಯೋಜನವಾಗುವುದಿಲ್ಲ. ಇವತ್ತಲ್ಲ ನಾಳೆ ಸಮಾಜವಾದವನ್ನು ಜಾರಿಗೆ ತರುವುದಾಗಿ ನೀವು ಹೇಳಬಹುದು. ಆದರೆ ಶ್ರೀ ನಾರಾಯಣಗೌಡರು ಬಂದಮೇಲೂ ಕೂಡ ಅವರ ಬಂಧುಗಳು ಫುಟ್‌ಪಾತಿನಮೇಲೆ ಮಲಗಿಕೊಳ್ಳುತ್ತಿದ್ದಾರೆ. ಬಂಧುಗಳು ಎಂದರೆ ಅವರ ಸ್ವಂತ ಬಂಧುಗಳಲ್ಲ, ಅವರ ಖಾತೆಗೆ ಸಂಬಂಧಪಟ್ಟ ಎಡಗೈನವರು, ಬಲಗೈನವರು, ಕೊರಚ, ಕೊರಮ, ಲಂಬಾಣಿ, ಸುಡಗಾಡಸಿದ್ದ, ಹಕ್ಕಿ ಬಿಕ್ಕಿ ಮುಂತಾದವರು. ಅವರು ಕೊಳಚೆ ಪ್ರದೇಶವಿರುವ ಕಡೆ ಗುಡಿಸಲುಗಳನ್ನು ಕಟ್ಟಿಕೊಂಡಿರುತ್ತಾರೆ, ದೇವಸ್ಥಾನವಿರುವ ಕಡೆ ಊರಬಾಗಿಲಿನಲ್ಲಿರುತ್ತಾರೆ. ಇಂಥವರನ್ನು ಅಲೆಮಾರಿಗಳನ್ನು ಹೀಗೆಯೇ ಬಿಟ್ಟರೆ ವಿದ್ಯಾ ಬುದ್ಧಿ ಇಲ್ಲದೆ ಇದ್ದರೆ ಮುಂದೆ ಅವರು ಪುಂಡುಪೋಕರಿಗಳಾಗುವುದರಿಂದ ಸಮಾಜದ ಸ್ಥಿತಿಗತಿಯೇನಾಗುವುದು ಎಂಬುದನ್ನು ಯೋಚನೆಮಾಡಿ. ಅವರನ್ನು ಸುಧಾರಿಸದಿದ್ದರೆ ಮುಂದೆ ಅವರ ಹಾವಳಿಯನ್ನು ತಡೆಯಲು ಮಿಲಿಟರಿಯನ್ನು ಎಲ್ಲಿಂದ ತರುವುದು? ಅವರಿಗೂ ಪೋಲೀಸ್ ಮಂತ್ರಿಗಳಾದ ಶ್ರೀ ಆರ್. ಎಂ. ಪಾಟೀಲರಿಗೂ ಸಂಪರ್ಕ ಬಹಳ ಜಾಸ್ತಿ. ಯಾವಾಗ ಕೆಲಸವಿಲ್ಲ, ಯಾವಾಗ ತಿಂಡಿಯಿಲ್ಲ ಆಗ ಇವರ ಹಾವಳಿ ಹೆಚ್ಚುವುದು. ಒಂದು ದಿವಸ ಊಟವಿಲ್ಲದಿದ್ದರೆ ಸುಳ್ಳು ಹೇಳುತ್ತಾರೆ, ಎರಡನೆ ದಿವಸ ಊಟವಿಲ್ಲದಿದ್ದರೆ ಕಳ್ಳತನಮಾಡುತ್ತಾರೆ, ಮೂರನೆಯ ದಿವಸ ಊಟವಿಲ್ಲದಿದ್ದರೆ ಲೂಟಿಮಾಡುತ್ತಾರೆ, ನಾಲ್ಕನೆ ದಿವಸ ಊಟವಿಲ್ಲದಿದ್ದರೆ ಹೊಡೆದು ಅಟ್ಟುತ್ತಾರೆ, ಐದನೆ ದಿವಸ ಊಟವಿಲ್ಲದಿದ್ದರೆ ಖೂನಿ ಮಾಡುತ್ತಾರೆ ಎಂದು ಹಿಂದೆ ಹೇಳುತ್ತಿದ್ದರು. ಹಾಗಿರುವಾಗ ಈ ಜನಾಂಗವನ್ನು ಹೀಗಿಯೇ ಬೆಳೆಸಿಕೊಂಡುಹೋದರೆ ಹೇಗೆ? ಹರಿಜನರು ಹಕ್ಕಿಬಿಕ್ಕಿ, ಸುಡುಗಾಡಸಿದ್ದ, ಕೊರಚ, ಲಂಬಾಣಿ ಮುಂತಾದ ಪಂಗಡಗಳ ಸುಧಾರಣೆ ಇಂದು ಆಗಬೇಕಾಗಿದೆ. ಸಮಾಜ ಕಲ್ಯಾಣ ಖಾತೆ ಸಚಿವರ ಖಾತೆಯಲ್ಲಿರುವವರೆಲ್ಲಾ ಇಂಥವರೇ. ನಾರಾಯಣಗೌಡರ ಫ್ಯಾಕ್ಟರಿಯಲ್ಲಿ ಅವರ ಕೆಲಸವೇನೆಂದರೆ ರಸ್ತೆ ಗುಡಿಸುವುದು, ಕಕ್ಕಸು ಎತ್ತುವುದು, ಕಸ ಹಾಕುವುದು ಮುಂತಾದ್ದು. ಹೀಗೆಯೇ ಅವರನ್ನು ಬಿಟ್ಟರೆ ಮುಂದೆ ಗತಿಯೇನು? ಶ್ರೀ ಶಂಕರೇಗೌಡರು ಅವರ ಫ್ಯಾಕ್ಟರಿಯಲ್ಲಿ ಐ. ಎ. ಎಸ್., ಐ. ಪಿ. ಎಸ್. ಆಫೀಸರು

(ಶ್ರೀ ಎ. ಮುನಿಯಪ್ಪ)

ಗಳು, ಜಿಲ್ಲಾಧಿಕಾರಿಗಳು, ಮಂತ್ರಿಗಳು, ಏರೋಪ್ಲೇನ್ ನಡೆಸುವವರು, ರಾಜಕೀಯ ಮುಖಂಡರು ಮುಂತಾದವರನ್ನು ತಯಾರುಮಾಡುವರು. ಅದೇ ನಮ್ಮ ಶ್ರೀ ನಾರಾಯಣಗೌಡರ ಖಾತೆಯಲ್ಲಿ, ಕಾರ್ಖಾನೆಯಲ್ಲಿ ಅಂಥವರು ತಯಾರಿಸಲಿಲ್ಲ. ಮಾನ್ಯ ಸಚಿವರ ಕೈಗೆ ಕೇವಲ 50 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಈ ಜನರ ಸುಧಾರಣೆ ಅವರು ಹೇಗೆ ಮಾಡಲು ಸಾಧ್ಯ! ಅಡ್ವೈಜರಿ ಬೋರ್ಡಿನಲ್ಲಿ ನಾವು ಅನೇಕ ಸಲಹೆಗಳನ್ನು ಮಾಡಿದ್ದೇವೆ. ಹರಿಜನರ ಉಧ್ಧಾರವಾಗಬೇಕಾದರೆ ಅಸ್ಪೃಶ್ಯತೆಯ ಬಗ್ಗೆ ಚೆನ್ನಾಗಿ ಪ್ರಚಾರವಾಗಬೇಕು, ರೇಡಿಯೋದಲ್ಲಿ ಹೇಳಬೇಕು, ಶಾಲೆಗಳಿಗಿರುವ ಪಠ್ಯ ಪುಸ್ತಕಗಳಲ್ಲಿ ಅಸ್ಪೃಶ್ಯತೆ ನಿವಾರಣೆಯಾಗುವವರೆಗೆ ಮೋಕ್ಷವಿಲ್ಲ ಎಂದು ತಿಳಿಯುವಹಾಗೆ ಹೇಳಲು ತಕ್ಕ ಪಾಠಗಳನ್ನು ಸೇರಿಸಿ ಬೋಧೆಮಾಡಬೇಕು. ಅಸ್ಪೃಶ್ಯತೆ ವಿಚಾರದಲ್ಲಿ ಪ್ರಕಟಣೆಗಳನ್ನು ಹೊರಡಿಸಬೇಕು. ಇದೆಲ್ಲಾ ಆದಮೇಲೆ ಪ್ರಾಕ್ಟಿಕಲ್ಲಾಗಿ ಕೆಲಸಕಾರ್ಯವಾಗಿದೆಯೋ ಇಲ್ಲವೇ ಎಂಬುದನ್ನು ಮಂತ್ರಿಗಳು ನೋಡಬೇಕು. ನೋಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಯಾವ ಯಾವ ಇಲಾಖೆಯಲ್ಲಿ ಸೇಕಡ 18 ಹುದ್ದೆಗಳನ್ನು ಮೀಸಲಾಗಿಟ್ಟಿರುವುದನ್ನು ಕೊಟ್ಟಿಲ್ಲವೆಂಬುದನ್ನು ಪರಿಶೀಲನೆ ಮಾಡುವುದಾಗಿ ಹೇಳಿದ್ದಾರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ, ಸಂತೋಷ. ಈ ಕೆಲಸವನ್ನು ಮಂತ್ರಿಗಳು ಮಾಡಿ ಸುಖೀ ರಾಜ್ಯವನ್ನು ಕಟ್ಟಬೇಕು, ಸತ್ಪ್ರಜೆಗಳಾಗುವಂತೆ ಮಾಡಬೇಕು. ಹಾಗಿಲ್ಲದೆ ಸುಮ್ಮನೆ ನಾವೊಂದು ಹೇಳುವುದು ನೀವೊಂದು ಹೇಳುತ್ತಾ ಹೋಗುವುದು ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಒಂದು ವರ್ಷದಿಂದ ಹೇಳುತ್ತಿರುವುದನ್ನು ನಾವು ಕೇಳಿದ್ದೇವೆ. ಆದರೆ ಪರಿಣಾಮವೇನಾಗಿದೆ? ಹೋದ ವರ್ಷ ಮತ್ತು ಈ ವರ್ಷ ಅಸ್ಪೃಶ್ಯತೆಯ ಬಗ್ಗೆ ತಕ್ರಾರುಗಳೆಷ್ಟಾಗಿವೆಯೆಂಬುದನ್ನು ನೋಡಿ. ವಿದ್ಯಾರ್ಹತೆಯನ್ನು ಗಮನಕ್ಕೆ ತೆಗೆದುಕೊಂಡು ಜಾತಿಯ ಆಧಾರವಿಟ್ಟುಕೊಂಡು ಹರಿಜನರ ಬಾಳನ್ನು ಹಾಳುಮಾಡಿದರೆ ದೇಶ ಉದ್ಧಾರವಾಗುವುದಿಲ್ಲ, ಸುಮ್ಮನೆ ವಾದಮಾಡಿದರೆ ಪ್ರಯೋಜನವಾಗುವುದಿಲ್ಲ. ನಾವು ಕೇಳುವುದಿಷ್ಟೆ ಇರುವುದಕ್ಕೊಂದು ಮನೆ, ಹೊದೆಯುವುದಕ್ಕೆ ಬಟ್ಟೆ, ತಿನ್ನುವುದಕ್ಕೆ ಆಹಾರ. ಇದಕ್ಕೆ ತಕ್ಕ ವ್ಯವಸ್ಥೆಮಾಡದೆ ಸುಮ್ಮನೆ ಸಮಾಜ ಕಲ್ಯಾಣ ಮಾಡಿರುವುದಾಗಿ ಹೇಳಿದರೆ ಸಹಾಯವಾಗುವುದಿಲ್ಲ. ಸೆಂಟ್ರಲ್ ಸಮಾಜ ಕಲ್ಯಾಣ ಕೇಂದ್ರಗಳಿವೆ. ಆದರೆ ಅಲ್ಲಿ ಒಂದಾದರೂ ಹರಿಜನರ ಮಗುವಿದೆಯೋ ಎಂಬುದನ್ನು ನೋಡಬೇಕು. ಚೆನ್ನಾಗಿ ಊಟ ಮಾಡಿದವರಿಗೆ ಮಿಠಾಯಿ ಕೊಟ್ಟಹಾಗೆ, ಮಿಠಾಯಿ ತಿಂದವರಿಗೆ ಜಿಲೇಬಿ ಕೊಟ್ಟಹಾಗೆ ಈಗ ಆಗಿವೆ. ತಕ್ರಾರಿನ ವಿಚಾರದಲ್ಲಿ ಒಂದು ಮಾತು. ಈಗ ಜನನ ಮರಣದ ಲೆಕ್ಕವನ್ನು ತಿಂಗಳಿಗೊಂದು ಸಲ ತರಿಸುತ್ತಿದ್ದಾರೆ, ಹೋಂ ಸೆಕ್ರೆಟರಿಗಳು ಇಲ್ಲಿದ್ದಾರೆ, ಜನನ ಮರಣದ ಲೆಕ್ಕ ಕಳಿಸುವಾಗ ಪ್ರತಿಯೊಂದು ಗ್ರಾಮದಲ್ಲೂ ಅಸ್ಪೃಶ್ಯತೆಯ ಬಗ್ಗೆ ತಕ್ರಾರುಗಳೆಷ್ಟಾಗಿವೆ ಎಂಬುದನ್ನೂ ತಿಳಿಸಬೇಕು ಎಂದು ಆಜ್ಞೆ ಮಾಡಬೇಕು. ಹಿಂದೆ ದಿವಾನ್ ಮಾಧವರಾಯರು ಬಗಿಯಾಗಿದ್ದರು, ಇವರ ಮಕ್ಕಳು ಎನ್. ಲಕ್ಷ್ಮಣರಾಯರು ನಮ್ಮ ಜಿಲ್ಲಾಧಿಕಾರಿಗಳಾಗಿದ್ದಾಗ ಯಾರೋ ಒಬ್ಬ ಹರಿಜನರಿಗೆ ಅರ್ಧ ಕ್ಷೌರ ಮಾಡಿದ್ದಕ್ಕೆ ಆತನನ್ನು ಜೈಲಿಗೆ ಕಳುಹಿಸಿದರು. ಈಗ ದಕ್ಷರಾದ ಹೋಂ ಸೆಕ್ರೆಟರಿಗಳಿದ್ದಾರೆ, ಶ್ರೀ ನಾರಾಯಣಗೌಡರಿದ್ದಾರೆ. ಇವರೆಲ್ಲಾ ಹರಿಜನರ ಮತ್ತು ಹಿಂದುಳಿದವರ ಉದ್ಧಾರಕ್ಕೆ ಸರಿಯಾದ ವ್ಯವಸ್ಥೆಮಾಡಿ, ತಮ್ಮ ಸಹಕಾರ ಕೊಟ್ಟು ಸಮಾಜ ಕಲ್ಯಾಣವನ್ನು ಸಾಧಿಸಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಸನ್ಮಾನ್ಯ ಉಪಾಧ್ಯಕ್ಷರೇ, ಈ ಡಿಮ್ಯಾಂಡ್ ನಮ್ಮ ಮಾನ್ಯ ಸ್ನೇಹಿತರು ಹೇಳಿದಹಾಗೆ ಬಹಳ ಪ್ರಾಮುಖ್ಯವಾದುದು. ಇದರ ವಿಚಾರದಲ್ಲಿ ನಮ್ಮ ಹರಿಜನ ಬಂಧುಗಳು ಕೆಲವರು ಒಂದು ಶಂಕೆಯನ್ನು ವ್ಯಕ್ತಪಡಿಸಿದರು. ಹರಿಜನರಲ್ಲದ ಯಾರೂ ಈ ವಿಷಯದಲ್ಲಿ ಆಸಕ್ತಿ ವಹಿಸಿದಹಾಗೆ ಕಾಣುವುದಿಲ್ಲ ಎಂದು ಹೇಳಿದರು. ನಾನಾದರೂ ಹೇಳುತ್ತೇನೆ, ಯಾರೂ ಆಸಕ್ತಿ ತೋರಿಸದಿದ್ದರೆ ಈ ಪ್ರಶ್ನೆ ನಮ್ಮ ಹಿಂದೂಸ್ಥಾನವನ್ನು ಎಲ್ಲಿಗೆ ತೆಗೆದುಕೊಂಡುಹೋಗಿ ಬಿಡುವುದು ಎಂಬುದನ್ನು ಬೇರೆ ಕಡೆಯ ಉಪಮಾನಗಳಿಂದ ತಿಳಿಯಬಹುದಾಗಿದೆ. ಇಂದು ಅಮೇರಿಕಾ ನೋಡಬಹದು, ಅಲ್ಲಿ ನೀಗ್ರೋಗಳ ಪ್ರಶ್ನೆ ದೊಡ್ಡ ಪ್ರಶ್ನೆಯಾಗಿ ಅಲ್ಲಿನ ಬಿಳಿಯ ಜನರು ಅದನ್ನು ಬಿಡಿಸಲೇಬೇಕು, ಇಲ್ಲದಿದ್ದರೆ ಉಳಿಗಾಲವಿಲ್ಲ ಎಂಬುದನ್ನು ಮನಗಂಡಿದ್ದಾರೆ. ಅದೇ ಪರಿಸ್ಥಿತಿ ಇಲ್ಲಿ ನಮ್ಮ ದೇಶದಲ್ಲೂ ಒಂದಲ್ಲ, ಒಂದು ದಿವಸ ಬರಬಹುದು. ಆದುದರಿಂದ ಸವರ್ಣೀಯರ ಉಳಿಗಾಲಕ್ಕಾದರೂ ಅದಷ್ಟು ಜಾಗ್ರತೆ ಈ ಪ್ರಶ್ನೆಯನ್ನು ಬಿಡಿಸುವುದಕ್ಕೆ ಎಲ್ಲರೂ ಪ್ರಯತ್ನ ಮಾಡುತ್ತೀರಬೇಕು. ಹಾಗೆ ಮಾಡದಿದ್ದರೆ ಈ ಪ್ರಶ್ನೆ ಬಗೆಹರಿಯುವುದಿಲ್ಲ. ಕೆಲವರು ಏನೂ ಆಗಿಲ್ಲವೆಂದು ಹೇಳಿದರು. ಆದರೆ ನಿಷ್ಪಕ್ಷಪಾತ

ವಾಗಿ ಹೇಳುತ್ತೇನೆ, 1918ನೆಯ ಇಸವಿಯಲ್ಲಿ ಇಂಗ್ಲೀಷ್ ಒಂದನೆಯ ಕ್ಲಾಸಿನಲ್ಲಿ ನಾನು ಓದುತ್ತಿದ್ದೆ, 50 ವರ್ಷವಾಯ್ತು, ಆಗ ಡಾ॥ ಸಿ. ಆರ್. ರೆಡ್ಡಿಯವರು ಮೊದಲು ನಮ್ಮಲ್ಲಿ ಹರಿಜನರು ಶಾಲೆಗಳಲ್ಲಿ ಸವರ್ಣೀಯರ ಜೊತೆ ಸೇರಬಹುದು ಎಂದು ಒಳ್ಳೆಯ ಅವಕಾಶವನ್ನು ಕಲ್ಪಿಸಿದರು. ಈಗ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್‌ಷನ್ ಎಂದು ಹೇಳುವಹಾಗೆ ಇನ್‌ಸ್ಪೆಕ್ಟರ್ ಜನರಲ್ ಅಫ್ ಎಜುಕೇಷನ್ ಎಂದು ಆಗ ಹೇಳುತ್ತಿದ್ದರು. ಮಾನ್ಯ ಶ್ರೀ ರಂಗನಾಥ್ ಅವರ ಪೂಜ್ಯ ತಂದೆಯವರು ನನ್ನ ಜೊತೆಯಲ್ಲಿ ಓದುತ್ತಿದ್ದರು, ನನಗೆ ಜ್ಞಾಪಕವಿದೆ. ಮೊದಲು ಹರಿಜನರು ಶಾಲೆಗಳಿಗೆ ಬಂದಾಗ ಅವರು ಒಂದು ಬಾಗಿಲನಲ್ಲಿ ಬಂದರೆ ಸವರ್ಣೀಯ ಹಿಂದುಗಳು ಇನ್ನೊಂದು ಬಾಗಿಲಿನಲ್ಲಿ ಹೊರಗೆ ಹೋದರು. ಹರಿಜನರ ಜೊತೆಯಲ್ಲಿ ಓದುವುದು ಎಲ್ಲಾದರೂ ಉಂಟೇ ಎಂದು ಅವರು ಹೊರಟುಹೋದರು.

ತಾವು ಸರ್ಕಾರ ಮಾಡಿದರೆ ಒಳ್ಳೆಯದಲ್ಲ. ಇದನ್ನು ಮುಂದುವರಿಸಿಕೊಂಡು ಹೋಗದೆ, ಬರಬರುತ್ತಾ ಸ್ಕೂಲುಗಳಿಗೆ ಬರುವುದಕ್ಕೆ ಬೇರೆ ಬಟ್ಟೆ, ಮನೆಗೆ ಹೋದಾಗ ಬೇರೆ ಬಟ್ಟೆ ಅಂತ ಶುರು ಮಾಡಿಕೊಂಡು ಈಗ ಅದೆಲ್ಲಾ ಹೋಗಿವೆ ಒಂದು ಮಟ್ಟವನ್ನು ನೋಡುತ್ತಾ ಇದ್ದೇವೆ. ಎಲ್ಲಿ ನೋಡಿದರೂ ಕೂಡ ಜನಗಳಲ್ಲಿ ಮಾನಸಿಕ ಪರಿವರ್ತನೆಯಾಗಿದೆ ಎಂಬುದನ್ನು ನಾವು ನಿಷ್ಪಕ್ಷಪಾತವಾಗಿ ಎಲ್ಲಿ ಬೇಕಾದರೂ ಹೇಳಬಹುದು. ಆದರೆ ಒಂದು ಏನಾಗಿದೆ ಎಂದರೆ, ಹರಿಜನರ ಜೊತೆಗೆ ಕುಳಿತುಕೊಂಡು ಊಟ ಮಾಡುತ್ತೇವೆ, ಅವರನ್ನು ಮುಟ್ಟುತ್ತೇವೆ, ಅವರ ಜೊತೆಯಲ್ಲಿ ಇರುತ್ತೇವೆ. ಆದರೆ ಕೊಡುವುದು, ಕೂಡಿ ಊಟಮಾಡುವುದು, ಕುಲ ಎಣಿಸುವುದು ಇದು ಮಟ್ಟಿಗೆ ಹೋಗಿಲ್ಲ. ಎಲ್ಲಿ ನೋಡಿದರೂ ನಾವು ಅಂತಹವರು ನೀವು ಇಂತಹವರು, ಈ ಜಾತಿ ಆ ಜಾತಿ ಎಂಬುದು ಮನಸ್ಸಿನಲ್ಲಿ ಇದೆ. ನಾವೆಲ್ಲರೂ ಒಂದಾಗಿ ಮುಂದುವರಿಯಬೇಕೆಂಬ ಭಾವನೆಯನ್ನು ನಾವು ಇನ್ನೂ ಕಾಣದೆ ಇರತಕ್ಕ ಸನ್ನಿವೇಶದಲ್ಲಿ ಇದ್ದೇವೆ. ಅದು ಆದಷ್ಟು ಜಾಗ್ರತೆಯಾಗಿ ಹೋಗಿಯೇ ತೀರಬೇಕು. ಒಂದು ಅಂಶವನ್ನು ಮಾತ್ರ ಈಗ ನಾನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ನಮ್ಮ ರಾಜ್ಯಾಂಗವನ್ನು ಬರೆದಂತಹ ಡಾಕ್ಟರ್ ಅಂಬೇಡ್ಕರ್‌ರವರು ಬಹಳ ಗಣ್ಯವಕ್ತಿಗಳು, ನಾನು ಕೆಲವು ವರ್ಷಗಳ ಕಾಲ ಅವರ ಜೊತೆಯಲ್ಲಿ ಇದ್ದು ಅವರ ನಿಕಟ ಸಂಪರ್ಕದಿಂದ ಅವರು ಯಾವ ರೀತಿ ಈ ಪ್ರಶ್ನೆಯನ್ನು ಬಿಡಿಸಬೇಕೆಂದು ಯೋಚನೆ ಮಾಡಿದ್ದರು, ಅವರು ಏನು ಹೇಳುತ್ತಾ ಇದ್ದರು ಎಂದರೆ ಸವರ್ಣ ಹಿಂದೂಗಳ ಮನಸ್ಸಿನಲ್ಲಿ ಈ ಭಾವನೆ ಬಂದಾಗ ಮಟ್ಟಿಗೆ ಈ ಪ್ರಶ್ನೆ ಬಗೆಹರಿಯುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರು, ಕೊನೆ ಕೊನೆಗೆ ಅವರು ನಿರುತ್ಸಾಹಿಗಳಾಗಿ, ಅವರು ತಮ್ಮ ಅಸುವನ್ನು ನೀಗುವುದಕ್ಕೆ ಕೆಲವು ವರ್ಷಗಳ ಮುಂಚೆ ನಮಗೆ ಮೋಕ್ಷ ಇಲ್ಲ ಎಂದು ತಿಳಿದುಕೊಂಡು ಬೌದ್ಧಮತಕ್ಕೆ ಬಹಳ ಜಿಗುಪ್ಸೆಯಿಂದ ತಮ್ಮ ಜೊತೆಯಲ್ಲಿ ಇನ್ನೂ ಕೆಲವು ಜನರನ್ನು ಕರೆದುಕೊಂಡು ಹೊರಟು ಹೋದರು. ಅದನ್ನು ನಾನು ನೋಡಿದ್ದೇನೆ. ಅವರ ಆಶೆಮಾತ್ರ ಈ ಜನ ಮುಂದೆ ಬರಬೇಕೆಂಬುದನ್ನು ಅವರು ಬರೆದಿರತಕ್ಕ ಪುಸ್ತಗಳನ್ನು ನೋಡಿದರೆ ಎಷ್ಟು ಕಳಕಳಿಯಿಂದ ಯೋಚನೆ ಮಾಡುತ್ತಾ ಇದ್ದರು ಎಂಬುದನ್ನು ನೋಡಬಹುದಾಗಿದೆ. ರಾಜ್ಯಾಂಗ ಬರೆಯುವಾಗ ಸ್ಪಷ್ಟವಾಗಿ ಹೇಳಿದರು, ಕೆಲವರು ಹತ್ತುವರ್ಷದ ರಿಸರ್ವೇಷನ್ ಇರಬಾರದು, ಏಕೆ ಇರಬೇಕು ಎಂದು ವಾದ ಮಾಡಿದರು, ಆಗ ಅವರು ಬಹಳ ದಿಟ್ಟತನದಿಂದ ಹತ್ತು ವರ್ಷ ಹರಿಜನರು ಮತ್ತು ಗಿರಿಜನರಿಗೆ ರಿಸರ್ವೇಷನ್ ಇರಬೇಕು ಎಂದು ವಾದಿಸಿದರು. ಏಕೆಂದರೆ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಮತ್ತು ವಿದ್ಯಾಭ್ಯಾಸದ ದೃಷ್ಟಿಯಿಂದಲೂ ಅವರು ಎಲ್ಲರ ಜೊತೆಯಲ್ಲೂ ಸರಿಸಮಾನತೆಗೆ ಬರುವವರೆಗೂ ಇದು ಇರಬೇಕಾದ್ದು ಅತ್ಯವಶ್ಯಕ ಎಂದು ಹೇಳಿದರು. ಅದರಂತೆ ಆರ್ಟಿಕಲ್ 334 ಈ ದಿವಸ ನಮ್ಮ ರಾಜ್ಯಾಂಗದ ಕಡತದಲ್ಲಿ ಉಳಿದಿದೆ, ಆದರೆ ಪರಿಸ್ಥಿತಿ ಏನಾಯಿತು ? ಹತ್ತು ವರ್ಷದಲ್ಲಿ ಈ ಸಮಸ್ಯೆ ಬಗೆಹರಿಯಲಿಲ್ಲ. ಆಮೇಲೆ ಮತ್ತೆ ಪುನಃ 8ನೇ ಅಮೆಂಡ್‌ಮೆಂಟ್ ಪ್ರಕಾರ 1959ರಲ್ಲಿ ಇನ್ನೂ ಹತ್ತು ವರ್ಷಗಳ ಕಾಲ ಹೆಚ್ಚುಮಾಡಿಕೊಂಡು ಬಂದೆವು. ಈಗ ನಾಲ್ಕನೆ ಚುನಾವಣೆಯಲ್ಲಿ ಇದು ಹೊರಟು ಹೋಯಿತು. 20 ವರ್ಷದಲ್ಲಿ ಈ ರಿಸರ್ವೇಷನ್ ಆರ್ಟಿಕಲ್ ಹೊರಟು ಹೋಯಿತು, ಬಹಳ ದೀರ್ಘವಾಗಿ ಯೋಚನೆ ಮಾಡಬೇಕು, ನಾನು ಕೇಳುತ್ತೇನೆ. ಈಗ 20 ವರ್ಷಗಳಾದ ಮೇಲೆ ನಮ್ಮ ಹರಿಜನ ಬಂಧುಗಳು ಮತ್ತು ಗಿರಿಜನ ಬಂಧುಗಳು ಯಾರು ಸಮಾಜದಲ್ಲಿ ಆರ್ಥಿಕವಾಗಿ ಮತ್ತು ವಿದ್ಯಾಭ್ಯಾಸದಲ್ಲಿ ಮುಂದೆ ಇದ್ದಾರೆ ಅವರ ಜೊತೆಯಲ್ಲಿ ನಿಂತುಕೊಂಡು ಚುನಾವಣೆಯಲ್ಲಿ ಸ್ಪರ್ಧಿಸತಕ್ಕ ಶಕ್ತಿಯನ್ನು ಗಳಿಸಿದ್ದಾರೆಯೇ ? ನಾವು ಬಹಳ ದೀರ್ಘವಾಗಿ ನಿಷ್ಪಕ್ಷಪಾತವಾದ ಮನಸ್ಸಿನಿಂದ ಯೋಚನೆ ಮಾಡಬೇಕು. ನನಗಾದರೂ ಅನಿಸುತ್ತದೆ, ಈ ಸರ್ಕಾರ ಈಗ ಹೋಗತಕ್ಕ ರೀತಿಯಲ್ಲಿ ಹೋದರೆ ಒಂದು ನೂರುವರ್ಷಗಳಾದರೂ ಖಾಯಂ ಆಗಿ ಶಾಸನ ಕಡತದಲ್ಲಿ ಇದು ಇರಬೇಕಾದ ಪರಿಸ್ಥಿತಿ ಬಂದರೂ ಬರಬಹುದು. ಆರ್ಟಿಕಲ್ 17ರ ಪ್ರಕಾರ ಅನ್‌ಟಚಬಲಿಟಿ ಹೋಗಬೇಕೆಂಬ ಒಂದು ನಿಬಂಧನೆಯನ್ನು ಹಾಕಿದ್ದೇವೆ. ಅದನ್ನು

(ಶ್ರೀ ಎಚ್. ಸಿದ್ಧವೀರಪ್ಪ)

ಏಕೆ ಮುಂದುವರಿಸಲಿಲ್ಲ? ಕಾರಣವೇನು! ಅದಕ್ಕೆ ಕಾರ್ರ್ ಇಷ್ಟೆ. ನೀವು ಈ ಕಡಿತದಲ್ಲಿ ತೋರಿಸಿದ್ದೀರಲ್ಲಾ ಈ ಮಿಸಲೇನಿಯಸ್ —ಚೌ ಚೌ —ನಾವೇನಾದರೂ ಹೋಟೇಲಗೆ ಹೋದರೆ ಚೌ ಚೌ ಕೊಡು ಅನ್ನುವ ಹಾಗೆ—3 ಕೋಟಿ 10 ಲಕ್ಷ ರೂಪಾಯಿ ತೋರಿಸಿದ್ದೀರಿ, ಅದರಲ್ಲಿ ಇಂಗ್ಲೆಂಡ್ ಎಕ್ಸ್‌ಪೆನ್‌ಸಸ್ ಸೇರಿದೆ, ಫಿಲಂಸ್ ಸೇರಿದೆ, ಟೂರಿಸಂ ಸೇರಿದೆ ಇದೆಲ್ಲಾ ಸೇರಿ ಅದರ ಜೊತೆಗೆ ಎರ್ಡೋ ಮೂಲೆಯಲ್ಲಿ 90 ಲಕ್ಷ ರೂಪಾಯಿ ತೋರಿಸಿದ್ದೀರಿ, ನಾಚಿಕೆಯಾಗುವುದಿಲ್ಲವೇ? 90 ಲಕ್ಷ ರೂಪಾಯಿಗಳಿಂದ ಈ ಸಮಸ್ಯೆ ಬಗೆಹರಿಯುತ್ತದೆಯೇ? ಎಂ. ಎಸ್. ಕೆ. ಮಿಲ್‌ನ್ನು ಬರಿದುಮಾಡಿ, ಜನಗಳ ದುಡ್ಡು ಎರಡು ಕೋಟಿ ರೂಪಾಯಿಗಳನ್ನು ಅದರಲ್ಲಿ ಹಾಕಿದರಲ್ಲಾ ಅದನ್ನು ಹರಿಜನರಿಗೆ ಕೊಟ್ಟಿದ್ದರೆ ನಿಜವಾಗಿಯೂ ಮುಂದ ವರಿಯುತ್ತಾ ಇದ್ದರು. ಇಂತಹ ಅನ್ಯಾಯ, ಅಸಡ್ಡೆಗೆ ನಿಮ್ಮ ಸರ್ಕಾರ ಕೋಟಿ ಕೋಟಿ ರೂಪಾಯಿಗಳನ್ನು ಕೊಟ್ಟು ದುಡು ಹಾಳುಮಾಡಿದ್ದೀರಿ, ಅದರ ಬದಲು ಕನಿಷ್ಠ ನಿಮಗೇನಾದರೂ ಅವರ ವಿಚಾರದಲ್ಲಿ ಒಂದು ಕಲ್ಪನೆ ಇದ್ದರೆ 5 ಕೋಟಿ ರೂಪಾಯಿಗಳನ್ನಾದರೂ ಇದಕ್ಕೆ ಇಡಬೇಕಾಗಿತ್ತು. ಅದಕ್ಕಿಂತ ಕಡಿಮೆ ಇಟ್ಟರೆ ಆಡುವ ಹುಡುಗರಿಗೆ ಮಂಡಕ್ಕಿ ಕೊಡಿಸುತ್ತೇವೆಯಲ್ಲಾ, 3 ಕಾಸಿನ ಪುರಿ ಕೊಡಿಸುತ್ತೇವೆಯಲ್ಲಾ ಹಾಗೆ ಕೊಟ್ಟರೆ ಅದರಿಂದ ಏನಾಗುತ್ತದೆ! ನಾವು ಏನೇ ಮಾತನಾಡಲಿ ಮುಖ್ಯವಾಗಿ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಿಲ್ಲ. ಸಮಾಜ ಕಾರ್ಯಾಣದ ಮಂತ್ರಿಗಳನ್ನು ಒಂದು ವಿಷಯ ಕೇಳುತ್ತೇನೆ. ಒಂದು ವರ್ಷದ ರಿಕಾರ್ಡ್ ಕೊಡಲಿ—ಏನೂ ಬೇಕಾಗಿಲ್ಲ—ಅವರು ಸಾಮಾನ್ಯವಾಗಿ ಕಾಡಿನಲ್ಲಿ ಕೆಲಸ ಮಾಡತಕ್ಕ ಜನರು, ತಂಗಡಿ ಬಾರ್ಕ್ ಹರಾಜಿಗೆ ಬರುತ್ತದೆ—ಈ ತಂಗಡಿ ಚಕ್ಕೆ ಇದೆಯಲ್ಲಾ ಇದು ಚರ್ಮ ಹದಮಾಡುವುದಕ್ಕೆ ಬಹಳವಾಗಿ ಬೇಕು—ನಾನು ಮಂತ್ರಿಯಾಗಿದ್ದಾಗ ಸುಮಾರು ಒಂದು ಲಕ್ಷ ರೂಪಾಯಿ ಕೊಟ್ಟು ಒಂದು ಸಹಕಾರ ಸಂಘವನ್ನು ಸ್ಥಾಪನೆ ಮಾಡಿಸಿದ್ದೆ, ಯಾರೋ ಕಾಂಗ್ರೆಸ್ ಪುಡಾರಿಗಳೇ ಈಗ ದೊಡ್ಡವರಾಗಿದ್ದಾರೆ—ಬಡ ಜನರಿಗೆ ಸಿಕ್ಕದ ಹಾಗೆ ಮಾಡಿದ್ದಾರೆ. ಆದ್ದರಿಂದ ಈ ತಂಗಡಿ ಬಾರ್ಕ್‌ನ್ನು ಹರಾಜಿಗೆ ಹಾಕಬೇಡಿ; ಮತ್ತು ಕಾಡಿನಲ್ಲಿ ಸಿಕ್ಕತಕ್ಕ ಇನ್ನೂ ಅನೇಕ ಪದಾರ್ಥಗಳು ಇವೆ. ಅಂಟು ಇದೆ, ಮತ್ತು ಇತರ ಪದಾರ್ಥಗಳನ್ನು ಹರಿಜನರ ಉಪಯೋಗಕ್ಕಾಗಿ ಇಡಿ ಅವರು ಅವನ್ನು ಉಪಯೋಗಿಸಿಕೊಂಡು ಜೀವನ ಮಾಡಲಿ. ಅದನ್ನೆಲ್ಲಾ ಬಿಟ್ಟುಬಿಟ್ಟು ಆರ್ಥಿಕ ಸಮಾನತೆ ಬರಬೇಕು, ವಿದ್ಯಾಭ್ಯಾಸ ಕೊಡಿಸಬೇಕು ಎಂದು ಹೇಳುವುದನ್ನೆಲ್ಲಾ ಒಪ್ಪಿಕೊಳ್ಳೋಣ ಆದರೆ ಮುಖ್ಯವಾಗಿ ಈಗ ಅವರಿಗೆ ಬೇಕಾಗಿರುವುದು ಇಷ್ಟೆ, ಅವರ ಆರ್ಥಿಕ ಪ್ರಗತಿ ಆಗಬೇಕು. ವಿದ್ಯಾಭ್ಯಾಸದಲ್ಲಿ ಅವರು ಮುಂದೆ ಬರಬೇಕು—ನೌಕರಿ ಸಿಕ್ಕಲಿ ಬಿಡಲಿ ಆ ಮಾತು ಬೇರೆ—ಕೊನೇ ಪಕ್ಷ ಎಸ್. ಎಸ್. ಎಲ್. ಸಿ. ವರೆಗಾದರೂ ಕಡ್ಡಾಯವಾಗಿ ಅವರಿಗೆ ವಿದ್ಯಾಭ್ಯಾಸ ಮಾಡಿಸಿದರೆ ಅವರ ಸ್ಥಿತಿ ಉತ್ತಮವಾದೀತು. ನೀವೇನೂ ಸುಧಾರಿಸಲಿಕ್ಕೆ ಹೋಗಬೇಡಿ, ಅದು ತಪ್ಪು ತಿಳಿವಳಿಕೆ, ನಾವು ಸುಧಾರಿಸುತ್ತೇವೆ ಎನ್ನುವುದು. ಯಾರನ್ನು ಯಾರೂ ಸುಧಾರಿಸುವ ಸ್ಥಿತಿಯಲ್ಲಿ ಇಲ್ಲ. ಅವರನ್ನು ಅವರೇ ಸುಧಾರಿಸಿಕೊಳುತ್ತಾ ಇದ್ದಾರೆ ಅದೂ ತೆವಳಿಕೊಂಡು ದಬ್ಬಿಸಿಕೊಂಡು, ಅನ್ನಿಸಿಕೊಂಡು, ಗುದ್ದಿಸಿಕೊಂಡು ಎಲ್ಲಾ ಕಷ್ಟಗಳನ್ನೂ ಅನುಭವಿಸಿ. ಅಂತಹವರನ್ನು ಸುಧಾರಿಸುವುದಕ್ಕೆ ಉಳಿದವರು ತಲೆಹಾಕುತ್ತಾರೆ ಅಂದರೆ ಅದು ತಪ್ಪಾಗುತ್ತದೆ. 1936ರಲ್ಲಿ ಒಂದು ಕಾನ್‌ಫರೆನ್ಸ್ ಆಗುತ್ತಾ ಇತ್ತು ಶ್ರೀಮಾನ್ ಅನಂತರಾಮನ್‌ರವರು ಇದ್ದರು. ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರ್ ಆಗಿದ್ದಾಗ ಈ ಹರಿಜನರ ಉದ್ಧಾರ ಮಾಡಬೇಕಾದರೆ ಹೇಗೆ ಮಾಡಬೇಕು ಅನ್ನುವ ಪ್ರಶ್ನೆ ಬಂದಾಗ ಅವರಿಗೆ ಭೂಮಿ ಕೊಡಿ, ಒಂದು ಜೊತೆ ಎತ್ತು ಕೊಡಿ ಅಂದಾಗ ನಮ್ಮಲ್ಲಿ ಒಬ್ಬ ಗೌಡರು ಇದ್ದರು ಒಳ್ಳೆಯ ವರ್ಚಸ್ವಿಗಳು, ಅವರು ಹೇಳಿದರು ಇದೆಲ್ಲಾ ಮಾಡುವುದಕ್ಕೆ ಸಾಧ್ಯವಾದರೆ ಹೊಲ ಹೊಡೆಯುವುದಕ್ಕೆ ಒಂದು ಆಳನ್ನು ಕೊಡಬೇಕೆಂಬುದು ನನ್ನ ವಾದ ಎಂದು ಹೇಳಿದರು. ಅವರಿಗೆ ಎಲ್ಲಾ ಅನುಕೂಲಗಳನ್ನೂ ಮಾಡಿ ಕೊಟ್ಟು ಅವರಾಗಿ ಅವರೇ ಮುಂದೆ ಬರುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು, ಅದು ಮಾಡುತ್ತೇವೆ, ಇದು ಮಾಡುತ್ತೇವೆ ಎಂದರೆ ಅದೆಲ್ಲಾ ಆಗದ ಮಾತು, ಸುಳ್ಳು, ಎಂದು ನಾನಾದರೂ ಹೇಳುತ್ತೇನೆ. ಎತ್ತಿಕಟ್ಟುವುದಕ್ಕೆ ಈ ರೀತಿ ಹೇಳುತ್ತೇನೆ ಎಂದು ಯಾರೂ ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು. ಹರಿಜನರು ನಮ್ಮ ಸ್ನೇಹಿತರು ಇವತ್ತಿನದಿವಸ ಆರಿಸಿ ಬಂದಿದ್ದಾರಲ್ಲಾ—ನನಗಿಂತಲೂ ಎರಡರಷ್ಟು ಅವರಿಗೆ ಜವಾಬ್ದಾರಿ ಜಾಸ್ತಿ ಇದೆ, ಆಡಳಿತ ಯಾವ ರೀತಿ ನಡೆಯುತ್ತದೆ ಎಂಬುದನ್ನು ತಾವೆಲ್ಲಾ ತಿಳಿದಿರತಕ್ಕವರು. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಹಿತರಕ್ಷಣೆಯನ್ನು ಕೊಟ್ಟಿಲ್ಲ ಎಂದರೆ ಅದರ ಅರ್ಥ ಅವರವರ ಹಿತರಕ್ಷಣೆಯನ್ನು ಅವರವರೇ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಲಿಕ್ಕೇ ಬೇಕು, ಪ್ರಯತ್ನ ಮಾಡಬೇಕು. ರೆವಿನ್ಯೂ ಮಂತ್ರಿಗಳಿಗೆ ಒಂದು ಮಾತು ಹೇಳುತ್ತೇನೆ. ಏನೆಂದರೆ, ಇವತ್ತು ಅವರು ಒಂದು ಲೆಕ್ಕ ತರಿಸಲಿ. ಹರಿಜನರಿಗೆ ಕೊಟ್ಟ ಹೊಲ ಎಷ್ಟು? ಎಷ್ಟು ಜನರಿಗೆ ಜಮೀನನ್ನು ಕೊಟ್ಟಿದ್ದೀರೋ ಅವರು ಇವತ್ತು ಅಷ್ಟನ್ನೂ ಇಟ್ಟುಕೊಂಡಿದ್ದಾರೆಯೇ?

ಸ್ಟ್ಯಾಟಿಸ್‌ಟಿಕ್ಸ್ ಡಿಪಾರ್ಟ್‌ಮೆಂಟ್ ಇದೆ ಎಂದು ಹೇಳುತ್ತೀರಿ 3×3=9 ಅಂತ ಅವರು ಏನೋ ಒಂದು ಲೆಕ್ಕವನ್ನು ಅವರು ತೋರಿಸುತ್ತಾರೆ. ಎಷ್ಟು ಜನ ಹರಿಜನರಿಗೆ ದರಖಾಸ್ತು ಮೂಲಕ ಜಮೀನು ಕೊಟ್ಟಿದ್ದೀರಿ. ಈ 20 ವರ್ಷಗಳಲ್ಲಿ ಮತ್ತು ಎಷ್ಟು ಜನರು ವ್ಯವಸಾಯ ಮಾಡುತ್ತಾ ಇದ್ದಾರೆ, ಎಷ್ಟು ಜಮೀನು ಬೇರೆಯವರ ಕೈಗೆ ಸೇರಿದೆ ಎನ್ನುವಂತಹ ಒಂದು ಲೆಕ್ಕವನ್ನು ಕೊಟ್ಟರೆ ಆಗ ಗೊತ್ತಾಗುತ್ತದೆ, ನಿಮ್ಮ ನೀತಿ ಸರಿಹೋಗಿಲ್ಲ, ಇದಕ್ಕೆ ಏನೋ ಬೇರೆ ದಾರಿ ಇರಬೇಕು ಎಂಬುದು. ನಮಗೆಲ್ಲಾ ಗೊತ್ತು, ಶ್ರೀಮಾನ್ ಟಿ. ಮರಿಯಪ್ಪನವರು ಇದ್ದಾಗ ಒಂದು ರಿಪೋರ್ಟ್ ಕೊಟ್ಟಿದ್ದರು, ದುರ್‌ದೈವವಶಾತ್ ಆ ರಿಪೋರ್ಟ್ ಜಾರಿಗೆ ಬರಲಿಲ್ಲ, ಅದು ಏನಾಯಿತೋ ಗೊತ್ತಿಲ್ಲ. ಆದ್ದರಿಂದ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಅವರೂ ಕೂಡ ನಮ್ಮ ಅಣ್ಣತಮ್ಮಂದಿರು ಶೇಕಡ 20 ಭಾಗ ಇದ್ದಾರೆ, ಇವತ್ತಿನ ದಿವಸ ಅವರನ್ನು ಬಿಟ್ಟರೆ ನಮ್ಮ ಕೆಲಸ ಏನೂ ಆಗುವುದಿಲ್ಲ, ಹೊಲ ಹೊಡೆಯುತಕ್ಕ ಜನರಿಗೆ ಅದು ಚೆನ್ನಾಗಿ ಗೊತ್ತು, ಅವನು ಬಾರುಕೋಲು ಮಾಡಿಕೊಡಬೇಕು ಅದನ್ನು ನಾವು ಹೆಗಲ ಮೇಲೆ ಹಾಕಿಕೊಳ್ಳಬೇಕು. ರಾಮಾನುಜಾಚಾರ್ಯರು, ಬಸವಣ್ಣನವರು ಹೇಳಿರುವಂತಹ ಮಾನವ ಜೀವನದಲ್ಲಿ ಎಲ್ಲರೂ ಒಂದೇ, ಅನೇಕ ಕೆಡಕುಗಳನ್ನು ಅನುಭವಿಸಿಕೊಂಡು, ಅನೇಕ ತೊಂದರೆಗಳನ್ನು ಅನುಭವಿಸುತ್ತಾ ಇದ್ದರೂ ಕೂಡ ಬರೀ ತತ್ವಗಳನ್ನು ಪ್ರಚಾರ ಮಾಡಿದರೆ ಆಗುವುದಿಲ್ಲ, ಹೇಳಿದ ತತ್ವವನ್ನು ಒಂದು ರೂಪಾಯಿನಲ್ಲಿ ಒಂದಾಣೆಯಷ್ಟನ್ನಾದರೂ ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಈ ಸರ್ಕಾರ ಇದನ್ನು ಬೇರೆ ರೀತಿಯಿಂದ ನೋಡಬೇಕು, reorientation of the policy, as it were. ಶ್ರೀಮಾನ್ ನಾರಾಯಣಗೌಡರನ್ನು ಟೀಕೆ ಮಾಡುತ್ತಾ ಇದ್ದೇನೆ ಅಂತ ತಿಳಿದುಕೊಳ್ಳಬಾರದು. ಅವರು ಯಾರಿಗೂ ಕಡಿಮೆ ಇಲ್ಲ, ಯಾರಿದ್ದರೂ ಕೂಡ ಪರಿಸ್ಥಿತಿಯೇ ಹೀಗೆ ಇದೆ. ಸರ್ಕಾರ, ಮಂತ್ರಿಗಳು ಯಾರೇ ಇರಲಿ ಇದು ಒಂದು ದೊಡ್ಡ ನ್ಯಾಷನಲ್ ಪ್ರಾಬ್ಲಂ, ಸ್ಟೇಟ್ ಪ್ರಾಬ್ಲಂ. ಇದನ್ನು ಹೇಗೆ ಬಗೆಹರಿಸಬೇಕು ಎಂಬುದನ್ನು ನಮ್ಮ ಮಾನ್ಯ ಸ್ನೇಹಿತರು ಹೇಳಿದರು.

ನಮ್ಮ ಸ್ನೇಹಿತರು ಹೇಳಿದರು ಅದು ಸೋಷಿಯಾಲಿಸಮ್ ಎಂದು. ಒಬ್ಬ ಕುರುಡ ಕತ್ತಲೆ ಕೋಣೆಯಲ್ಲಿ ಒಂದು ಕರಿ ಬೆಕ್ಕನ್ನು ಹುಡುಕಿದಹಾಗೆ. ಸೋಷಿಯಾಲಿಸಮ್ ಹೀಗೆ ಹೋಗುತ್ತಾ ಇದ್ದರೆ ಹೇಗೆ ಇದನ್ನು ಆಚರಣೆಗೆ ತರಬೇಕು? ಇದನ್ನು ಹೀಗೆ ಮಾಡಬಾರದು. ಶ್ರೀಮಾನ್ ರಾಚಯ್ಯನವರ ಮೇಲೆ ಒಂದು ದೊಡ್ಡ ಜವಾಬ್ದಾರಿ ಇದೆ. ಅವರಿಗೆ ಇನ್ನೂ ಹೆಚ್ಚು ಜವಾಬ್ದಾರಿಯನ್ನು ಕೊಡೋಣ. ಯಾವುದು ಏನೇ ಇರಲಿ. ಇದನ್ನು ಮರೆಯಕೂಡದು. ಶ್ರೀಮಾನ್ ರಾಚಯ್ಯನವರಿಗೆ ಎರಡು ಜವಾಬ್ದಾರಿ ಸೇರಿದೆ. ಒಂದು ವ್ಯಕ್ತಿಗತವಾಗಿ ಕೆಲಸ ಮಾಡತಕ್ಕಂಥಾದ್ದು. ಇನ್ನೊಂದು ದಾರಿದ್ರ್ಯ ಸಮಾಜದ ಪ್ರತಿನಿಧಿಯಾಗಿ ಕೆಲಸ ಮಾಡಬೇಕು ಎನ್ನುವುದನ್ನು ಮರೆಯಬಾರದು. ಅವರ ಕಣ್ಣ ಎದುರಿಗೆ ಎಷ್ಟೊಂದು ನೌಕರಿಗಳಿಗೆ ಅನ್ಯಾಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಸುಮ್ಮನೆ ಇದ್ದಾರೆ. ನಮ್ಮ ಸರ್ಕಾರ ಇದ್ದಾಗ್ಗೆ ಪ್ರಮೋಷನ್ ಮತ್ತು ಡೈರೆಕ್ಟ್ ರೆಕ್ರೂಟ್‌ಮೆಂಟ್ ಯಾವರೀತಿ ಕೊಟ್ಟಿದ್ದೇವೆ ಎನ್ನುವುದನ್ನು ನೋಡಬೇಕು. ಯಾವ ಇಲಾಖೆಯಲ್ಲೇ ಆಗಲಿ 18 ಪರ್ಸೆಂಟು ಹರಿಜನರು ಕಡಿಮೆ ಇದ್ದರೆ ಬೇರೆಯವರಿಗೆ ನೌಕರಿಯನ್ನು ಕೊಡುವುದನ್ನು ನಿಲ್ಲಿಸಿ, ಹರಿಜನರಿಗೆ ಕೊಡಬೇಕು ಎಂದು ಒಂದು ಸರ್ಕಾರಿ ಆಜ್ಞೆ ಮಾಡಿದ್ದೆವು. ನೀವು ಕರ್ತವ್ಯಪಾಲನೆ ಸರಿಯಾಗಿ ಮಾಡಬೇಕಾದರೆ, ಅಂದರೆ, ಬರೀ ಶ್ರೀಮಾನ್ ರಾಚಯ್ಯನವರು, ಸೋಷಿಯಲ್ ವೆಲ್‌ಫೇರ್ ಮಂತ್ರಿಗಳು ಇವರುಗಳೇ ಅಲ್ಲ ಬಾಕಿ ಮಂತ್ರಿಗಳು ಎಲ್ಲರೂ ಸೇರಿ ಈ ಪ್ರಶ್ನೆಯನ್ನು ಒಂದು ಮಾನವೀಯತೆಯ ದೃಷ್ಟಿಯಿಂದ ನೋಡಿ ಸರಿಪಡಿಸಬೇಕು ಎಂದು ತಮ್ಮಲ್ಲಿ ಅರಿಕೆ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

[MR. CHAIRMAN (SRI S. D. KOTHAVALE) in the Chair]

† ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಸಭಾಪತಿಗಳೇ, ಯಾವ ಒಂದು ಭಾರತೀಯ ಸಮಾಜಧರ್ಮ ಹಾಗೂ ಬಡತನ ಇವೆರಡರ ನಿಕಟ ಸಂಪರ್ಕದಮೇಲೆ ನಿಂತಿದೆಯೋ ಅಂತಹ ಒಂದು ಸಮಾಜದ ವ್ಯವಸ್ಥೆಯಲ್ಲಿ ಈ ಒಂದು ಜಾತೀಯತೆಯ ಒಂದು ಮನೋಭಾವ ಸಿಕ್ಕಿ ಸಾವಿರಾರು ವರ್ಷಗಳಿಂದ ಇರತಕ್ಕಂಥ ಹರಿಜನ ಬಂಧುಗಳ ಉದ್ಧಾರಕ್ಕಾಗಿ ಅವರ ಏಳಿಗೆಗಾಗಿ ಯಾವ ಒಂದು ಸಮಾಜಕಲ್ಯಾಣ ಎಂಬ ಒಂದು ಭವ್ಯವಾದ ಹೆಸರನ್ನು ಇಟ್ಟುಕೊಂಡು ಕಳೆದ 20 ವರ್ಷಗಳಿಂದ ಈ ಹರಿಜನ ಬಂಧುಗಳ ಕಲ್ಯಾಣಕ್ಕಾಗಿ ಏನು ಕೆಲಸಮಾಡುತ್ತಾ ಇದೆಯೋ ಅದನ್ನು ಪರಿಶೀಲನೆ ಮಾಡಿದಾಗ ನನಗೆ ಒಂದು ಭಾವನೆ ಬರುತ್ತದೆ, ಈ ಮಹತ್ತರವಾದ ಕಾರ್ಯಸಾಧನೆ

(ಶ್ರೀ ಎಂ. ಬಸವರಾಜು)

ಗಾಗಿ ಸರ್ಕಾರದವರು ಒದಗಿಸಿರತಕ್ಕಂಥ ಹಣ ಬಹಳ ಕಡಿಮೆ ಎಂದು. ಈ ಎರಡು ದೃಷ್ಟಿಯಿಂದ ಈ ಡಿಮ್ಯಾಂಡನ್ನು ವಿರೋಧಿಸಿ ನನ್ನ ನಾಲ್ಕು ಮಾತುಗಳನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ.

ಈವೊತ್ತು ನಮ್ಮ ಸರ್ಕಾರ ಪೂರ್ಣವಾಗಿ ಹರಿಜನರ ಉದ್ಧಾರಕ್ಕಾಗಿ ಏನೂ ಕೆಲಸ ಮಾಡಿಲ್ಲ ಎಂದು ಹೇಳಲು ತಯಾರಾಗಿಲ್ಲ, ಅದಕ್ಕಾಗಿ ಅವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಯಾವ ದಿಕ್ಕಿನಲ್ಲಿ, ಯಾವ ರೀತಿಯಲ್ಲಿ ಕೆಲಸ ಮಾಡಬೇಕಾಗಿತ್ತೋ ಆ ದಿಕ್ಕಿನಲ್ಲಿ ಕೆಲಸ ಮಾಡಿಲ್ಲ. ಏತಕ್ಕೆಂದರೆ, ಪ್ರಥಮವಾಗಿ ನಮ್ಮ ಭಾರತೀಯ ಸಮಾಜ ವರ್ಣಾಶ್ರಮದ ಮೇಲೆ ನಿಂತಿರುವ ಸಮಾಜ. ಈ ವರ್ಣಾಶ್ರಮದ ಪೂರ್ವ ಚರಿತ್ರೆಯನ್ನು ಅವಲೋಕಿಸಿದ್ದೇ ಆದರೆ ಅದು ರಾಜರುಗಳು ಪೋಷಣೆ ಮಾಡಿಕೊಂಡು ಬಂದಂಥಾದ್ದು. ಈ ಅಸ್ಪೃಶ್ಯ ಎನ್ನತಕ್ಕಂಥಾದ್ದನ್ನು ಸಾವಿರಾರು ವರ್ಷಗಳಿಂದ ಧರ್ಮದ ಒಂದು ಹೆಸರಿನಲ್ಲಿ ರಾಜರುಗಳು, ರಾಜಮಹಾರಾಜರುಗಳು, ಚಕ್ರವರ್ತಿಗಳೂ ಸಹ ಈ ಅಸ್ಪೃಶ್ಯತೆಯನ್ನು ಈ ಸಮಾಜದಲ್ಲಿ ಪಾಲಿಸಿಕೊಂಡು ಬಂದಿದ್ದಾರೆ. ಸರ್ಕಾರದವರು ಏನು ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು ಕೆಲಸ ಮಾಡುತ್ತಾ ಇದ್ದಾರೆ ಇದರಿಂದ ಈ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯ ಇಲ್ಲ ಎನ್ನುವುದನ್ನು ಧೃಡಪಡಿಸುತ್ತೇನೆ. ಹರಿಜನರ ಉದ್ಧಾರಕ್ಕಾಗಿ ಈ ಸಮಾಜ ಕಲ್ಯಾಣ ಇಲಾಖೆ ಇದೆ ಎಂದು ಹೇಳುತ್ತಾರೆ. ಜನ ಏನು ಹೇಳುತ್ತಾರೆ ಎಂದರೆ, ಈ ಸರ್ಕಾರದಲ್ಲಿ ಹರಿಜನರ ಓಟು ತೆಗೆದುಕೊಳ್ಳಲಿಕ್ಕೆ ಈ ಸಮಾಜ ಕಲ್ಯಾಣ ಇದೆ, ನೀವು ಹರಿಜನರ ಉದ್ಧಾರಕ್ಕಾಗಿ ತಾಳಿರುವ ಧೋರಣೆ ಇದೆಯಲ್ಲಾ ಅದು ಪೂರ್ಣವಾಗಿ ಬದಲಾವಣೆಯಾಗಬೇಕು ಇಲ್ಲದೇ ಹೋದರೆ ಹೀಗೆ ಮಾಡುತ್ತಾ ಇದ್ದರೆ ನೀವು ಅನುಸರಿಸುತ್ತಿರುವ ನೀತಿಯಂತೆ ಹರಿಜನರ ಉದ್ಧಾರಕ್ಕಾಗಿ ಏನು ಮಾಡುತ್ತಾ ಇದ್ದೀರೋ ಅದಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗುತ್ತದೆ; ಅದು ಒಂದೇ ಅಲ್ಲ ಇಡೀ ಸಮಾಜದ ಏಳಿಗೆಗೆ ಒಂದು ಪೆಟ್ಟು ಬಿದ್ದಂತಾಗುತ್ತದೆ. ಮಹಾತ್ಮಾ ಗಾಂಧಿಯವರು ಹೇಳಿದಂತೆ ಒಂದು ಏಕೀಕೃತವಾದ ಸಮಾಜವಾಗಿರಬೇಕು. ಹರಿಜನರು ಕಾಂಗ್ರೆಸ್ಸಿಗೆ ಓಟು ಕೊಡುವುದಕ್ಕೆ ಇರತಕ್ಕಂಥ ಒಂದು ಜನತೆ ಎನ್ನುವ ಮನೋಭಾವನೆ ಹೋಗಬೇಕು, ಸವರ್ಣೀಯರು, ಅವರ್ಣೀಯರು ಎನ್ನುವ ವ್ಯತ್ಯಾಸ ಹೋಗಬೇಕು. 20 ವರ್ಷಗಳಿಂದ ಹರಿಜನರು ಹೇಗೆ ನಡೆಯುತ್ತಾ ಇದ್ದರೋ ಈಗಲೂ ಹಾಗೆ ನಡೆಯುತ್ತಾ ಇದ್ದಾರೆ. ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮದಲ್ಲಿ ಸ್ವಲ್ಪವೂ ಬದಲಾವಣೆ ಆಗಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಉದಾಹರಣೆಗೆ ಮೊನ್ನೆ ದಿವಸ ಪತ್ರಿಕೆಯಲ್ಲಿ ಓದಿದೆ. ಅಗ್ರಿಕಲ್‌ಚರಲ್‌ನಲ್ಲಿ ಲೇಬರ್ ಕ್ಲಾಸಿನವರಿಗೆ, ದಿನವೂ ಕೆಲಸ ಮಾಡುವ ಕೂಲಿಗಾರರಿಗೆ ಇವರಿಗೆಲ್ಲಾ ಒಂದು ಮಿನಿಮಮ್ ವೇಜಸ್ ಕೊಡಬೇಕು ಎಂದು ಕಾನೂನು ಮಾಡಿದ್ದೀರಿ. ಅದು ಮಾಡಿದರೆ ಉಪಯೋಗವಾದಂತೆ ಆಗುವುದಿಲ್ಲ. ಏತಕ್ಕೆಂದರೆ, ಇಂಡಸ್ಟ್ರಿಯಲ್ ಲೇಬರ್ ಕ್ಲಾಸಿನವರಿಗೆ ಏನಾದರೂ ಕೂಲಿ ಸರಿಯಾಗಿ ಕೊಡದೇ ಇದ್ದರೆ ಅವರು ಕೋರ್ಟಿಗೆ ಹೋಗಲು ಅವಕಾಶ ಇದೆ ಮತ್ತು ಅವರ ಹಕ್ಕುಗಳನ್ನು ಸಂರಕ್ಷಣೆ ಮಾಡಲು ಅವಕಾಶ ಇದೆ. ಆದರೆ ಅಗ್ರಿಕಲ್‌ಚರಲ್ ಲೇಬರ್ ಕ್ಲಾಸ್‌ನಲ್ಲಿ ಇವೊತ್ತು ಅಸ್ಪೃಶ್ಯತೆ ಇರತಕ್ಕಂಥ ಷೆಡ್ಯೂಲ್ ಕ್ಯಾಸ್ಟ್ಸ್ 75 ಪರ್ಸೆಂಟು ಇದ್ದಾರೆ. ಆದುದರಿಂದ ಇವರ ಹಕ್ಕುಗಳನ್ನು ಕಾಪಾಡಿಕೊಳ್ಳಲು ಒಂದು ಅನುಕೂಲ ಮಾಡಿಕೊಡಬೇಕು ಎಂದು ಕೇಳುತ್ತೇನೆ, ಇಲ್ಲದಿದ್ದರೆ ಹರಿಜನರು ಉದ್ಧಾರವಾಗುವುದಿಲ್ಲ. ಬಹುಪಾಲು ಜನ ಇದರಲ್ಲಿ ಇರುವುದರಿಂದ ಅನಾನುಕೂಲವಾಗಿದೆಯೇ ವಿನಾ ಅನುಕೂಲವೇನೂ ಆಗಿಲ್ಲ. ಇದನ್ನು ನಿವಾರಣೆ ಮಾಡಲು ಒಂದು ದೃಢವಾದ ನಿಲುವನ್ನು ತಾಳಬೇಕು ಇಲ್ಲದಿದ್ದರೆ ಹಳ್ಳಿಗಾಡಿನ ಜನತೆ ಸುಖಸಂತೋಷದಿಂದ ಇರಲು ಸಾಧ್ಯ ಇಲ್ಲ. ನೀವು ಸರ್ಕಾರದ ವತಿಯಿಂದ ಅಂತಹ ಅಂಶಗಳನ್ನು ಹೇಳುತ್ತೀರಿ, 10 ಜನಕ್ಕೆ ಕಮೀಷನರ್‌ಗೆ, ಡೆಪ್ಯೂಟಿ ಕಮೀಷನರ್ ಆಗಿ ನೌಕರಿ ಕೊಟ್ಟಿದ್ದೇವೆ ಮತ್ತು ಒಬ್ಬ ಮಿನಿಸ್ಟರ್‌ಗೆ ನೌಕರಿ ಕೊಟ್ಟಿದ್ದೇವೆ ಎಂದು. ಹೀಗೆ ಮಾಡುವುದರಿಂದ ಹರಿಜನರಿಗೆ ಒಂದು ಜಾತೀಯತೆಯ ಮನೋಭಾವ ತೋರುತ್ತದೆ. ಸವರ್ಣೀಯರು, ಹರಿಜನರು ಎನ್ನುವ ಅಂತರ ಹೋಗುವುದಿಲ್ಲ. ಅದು ಜಾಸ್ತಿಯಾಗುತ್ತದೆ. ಆದುದರಿಂದ ಸವರ್ಣೀಯರು ಮತ್ತು ಬೇರೆ ಹಿಂದೂಗಳು ಎನ್ನುವ ಭಾವನೆ ಏನು ಇದೆಯೋ ಅದನ್ನು ಹೋಗಲಾಡಿಸಲು ನಾವೆಲ್ಲರೂ ಒಂದೇ ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಒಂದು ಕಾರ್ಯಕ್ರಮ ಹಾಕಿಕೊಂಡು ಮಾಡಬೇಕು. ಇಂತಹ ಒಂದು ಮನೋಭಾವ ಹೋಗಿ ಈ ಸಮಾಜ ಉದ್ಧಾರವಾಗಬೇಕಾಗಿದೆ ಎನ್ನುವುದಕ್ಕಾಗಿ ಒಂದೆರಡು ವಿಷಯಗಳನ್ನು

ಸಭೆಯ ಮುಂದೆ ಇಡಲು ಬಯಸುತ್ತೇನೆ. ಮೊದಲನೆಯದಾಗಿ ಯಾವುದೋ ಒಂದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಕೆಲಸಕ್ಕಾಗಿ ಹರಿಜನರಿಂದ ಬೇಕಾದಷ್ಟು ಅರ್ಜಿಗಳು ಬಂದಿವೆ ಎಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನವರು ಕಳುಹಿಸಿದರು. ಅದರಲ್ಲಿ ಮೈಸೂರು ಜಿಲ್ಲೆಯ 5–6 ಜನರ ಹೆಸರು ಬಂದಿದೆ. ಆದರೆ ಒಬ್ಬನೂ ಬಂದಿರಲಿಲ್ಲ. ನೀವು ಏನೋ ಮಾತನಾಡಿದಿರಿ, ಸಿ.ಸಿ.ಎ. ರೂಲುಗಳು ಅನುಕೂಲವಾಗುತ್ತದೆ ಎಂದು. ಆದರೆ ಅದು ಹೆಸರಿಗೆ ಮಾತ್ರ ಇದೆ. ಸಂಬಂಧಪಟ್ಟ ಅಧಿಕಾರಿಗಳು ಹರಿಜನರಿಗೆ ಸಾಕಷ್ಟು ಸಂರಕ್ಷಣೆಯನ್ನು ಮಾಡಲಿಕ್ಕೆ ಆಗಿಲ್ಲ. ಈ ರೂಲುಗಳನ್ನು ಕಾರ್ಯರೂಪಕ್ಕೆ ತರುವಾಗ ಇದು ಅಷ್ಟೊಂದು ಪರಿಣಾಮಕಾರಿಯಾಗಿ ಆಗುತ್ತಾ ಇಲ್ಲ.

ಸ್ವಾಮಿ, ಇನ್ನೊಂದು ವಿಚಾರ. ನೀವು ಹರಿಜನರಿಗೆ ಮನೆ ಕಟ್ಟಿಕೊಡಿ, ಗದ್ದೆ, ಬೇಕಾದ ಜಮೀನು ಕೊಡಿ, ಸಾಕಷ್ಟು ಎಲ್ಲವನ್ನೂ ಕೊಡಿ ಇದರಿಂದ ಹರಿಜನರ ಬಂಧುಗಳಿಗೆ ಅನಾನುಕೂಲ ವಾಗಿದೆಯೇ ವಿನಾ ಅನುಕೂಲವಾಗಿಲ್ಲ ಎಂದು ನಾನು ಹೇಳುತ್ತೇನೆ. ಆದುದರಿಂದ ಪ್ರತಿಯೊಬ್ಬ ಹರಿಜನ ಹೆಣ್ಣುಮಕ್ಕಳಿಗೆ ಒಂದು ಸ್ಟ್ಯಾಂಡರ್ಡ್ ಎಜುಕೇಷನ್ ಅಂದರೆ ಎಸ್. ಎಸ್. ಎಲ್. ಸಿ. ಯನ್ನು ಕಡ್ಡಾಯವಾಗಿ ಮಾಡಿಸಬೇಕು ಎಂದು ನಾನು ಕೇಳುತ್ತೇನೆ ಮತ್ತು ಕೆ.ಆರ್. ನಗರದಲ್ಲಿ ಎರಡು ಹಾಸ್ಟಲುಗಳು ಇವೆ. ಒಂದು ಹಾಸ್ಟಲಿನಲ್ಲಿ 60 ಹುಡುಗರು ಓದಬಹುದು ಆದರೆ ಹರಿಜನರ ಸಂಖ್ಯೆಗೆ 60 ಮಕ್ಕಳಿಗೆ ಓದುವ ಅವಕಾಶ ಇದ್ದರೆ ಏನು ಪ್ರಯೋಜನ ? ಇವೊತ್ತಿನ ದಿವಸ ಕೆ.ಆರ್. ನಗರದ ಪ್ರಜಾಸಂಖ್ಯೆ ತೆಗೆದುಕೊಂಡರೆ 15 ಸಾವಿರ ಜನಸಂಖ್ಯೆ ಇದೆ. ಅದರಲ್ಲಿ ಸುಮಾರು 4–5 ಸಾವಿರ ಹರಿಜನರ ಸಂಖ್ಯೆ ಇದ್ದಾರೆ. ಇದರಲ್ಲಿ 2 ಸಾವಿರ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ, ಇದಕ್ಕಾಗಿ ನೀವು ಎರಡು ಹಾಸ್ಟಲುಗಳನ್ನು ಕೊಟ್ಟರೆ ಎಲ್ಲಿ ಸಾಕಾಗುತ್ತದೆ ? ಇದನ್ನು ಜಾಸ್ತಿ ಮಾಡಬೇಕೆಂದು ನಾನು ಕೇಳುತ್ತೇನೆ. ಮತ್ತು ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಎಸ್.ಎಸ್.ಎಲ್.ಸಿ. ಯನ್ನು ಕಡ್ಡಾಯವಾಗಿ ಮಾಡಿಕೊಡಬೇಕು ಎಂದು ಸಹ ಹೇಳುತ್ತೇನೆ.

ಇನ್ನು ಎರಡನೆಯದಾಗಿ ಮನಶ್ಶಾಸ್ತ್ರದ ಪ್ರಕಾರ ಸವರ್ಣೀಯರು ಇತರ ಹಿಂದೂಗಳು ಎನ್ನುವ ಭಾವನೆ ಸುಧಾರಣೆ ಆಗಬೇಕು. ಎಲ್ಲರೂ ಒಂದೇ ಏಕೀಕೃತವಾದ ಸಮಾಜಕ್ಕೆ ಸೇರಿ ದವರು ಎಂದರೆ ಆಗ ಮಕ್ಕಳ ಪರಿಸ್ಥಿತಿ ಸುಧಾರಿಸುತ್ತದೆ. ಸಣ್ಣ ಮಕ್ಕಳಿಂದಲೇ ಇದನ್ನು ಪರಿ ವರ್ತನೆ ಮಾಡಬೇಕು. ಮಕ್ಕಳಿಗೆ ಅವರು ಸವರ್ಣೀಯರು, ಅವರ್ಣೀಯರು ಎಂದು ಹೇಳ ಬಾರದು. ಸಣ್ಣ ಮಕ್ಕಳಿದ್ದಾಗಲೇ ಇವರ ಮನಸ್ಸನ್ನು ಪರಿವರ್ತನೆಯನ್ನು ಮಾಡಲು ಪ್ರಯತ್ನ ಮಾಡಬೇಕು.

ಇನ್ನು ಪ್ರೈಮರಿ ಶಾಲೆಗಳಲ್ಲಿ ಬಹುಪಾಲು ಹೆಣ್ಣುಮಕ್ಕಳು ಉಪಾಧ್ಯಾಯಿನಿಯಾಗಿರ ಬೇಕು. ಈಗ ಹರಿಜನರಿಗೆ 18 ಪರ್ಸೆಂಟು ನೌಕರಿಯನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ, ಅದನ್ನು 50 ಪರ್ಸೆಂಟಿಗೆ ಹೆಚ್ಚಿಸಬೇಕು. ಮತ್ತು ಬಹಳಮಟ್ಟಿಗೆ ಹರಿಜನರನ್ನು ಶಾಲಾ ಉಪಾಧ್ಯಾಯರನ್ನಾಗಿ ನೇಮಿಸಬೇಕು ಎಂದು ನಾನು ಕೇಳುತ್ತೇನೆ. ಏಕೆಂದರೆ ನಾವು ಅವರನ್ನು ಹೆಚ್ಚಿನವರು ಅವರು ಕಡಮೆ ಎಂದು ತಿಳಿಯಬಾರದು. ಒಂದು ಶಾಲೆಗೆ ಹೊಲೆಯರ ಉಪಾಧ್ಯಾಯ ಪಾಠ ಮಾಡುತ್ತಾ ಇದ್ದಾರೆ, ಮಕ್ಕಳ ಮನಸ್ಸು ಪರಿವರ್ತನೆ ಯಾಗುತ್ತದೆ. ದೃಷ್ಟಿಯಿಂದ ಪ್ರೈಮರಿ ಎಜುಕೇಷನ್ನಿನಲ್ಲಿ ಹರಿಜನ ಹೆಣ್ಣುಮಕ್ಕಳ ಶಿಕ್ಷಕರಿಗೆ ಹೆಚ್ಚಿನ ಪರ್ಸಂಟೇಜನ್ನು ಕೊಡಬೇಕು. ಸೇಕಡ 50 ರಷ್ಟು ಸ್ಥಾನವನ್ನು ಹೆಣ್ಣುಮಕ್ಕಳಿಗೆ ಕೊಡಬೇಕು.

6-00 P.M.

ಇನ್ನು ಮೆಡಿಕಲ್ ಇಲಾಖೆಯಲ್ಲಿ ಇವತ್ತು ಕೆಲವರು ರಾಜಕೀಯ ದೃಷ್ಟಿಯನ್ನುಂಟು ಮಾಡುತ್ತಿದ್ದಾರೆ. ಅನ್ನ ತಿನ್ನುವುದರಲ್ಲಿ, ರೊಟ್ಟಿ ತಿನ್ನುವುದರಲ್ಲಿ ಅಸ್ಪೃಶ್ಯತೆಯ ಮನೋಭಾವ ಬಹಳ ಜಾಸ್ತಿ ಇದೆ. ಆಸ್ಪತ್ರೆಗಳಲ್ಲಿ ಔಷಧಿಗಳನ್ನು ತೆಗೆದುಕೊಳ್ಳಬೇಕೆಂದರೆ, ಸವರ್ಣ ಹಿಂದೂಗಳು ಬಹಳ ಬೇಜಾರು ಪಡುತ್ತಿದ್ದಾರೆ. ಅಲ್ಲಿ ಒಂದು ಸಂಪರ್ಕ ಬೆಳೆಯಬೇಕಾದರೆ, ಆಸ್ಪತ್ರೆಗಳಲ್ಲಿರತಕ್ಕ ನರ್ಸ್‌ರೊಡನೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹೆಣ್ಣುಮಕ್ಕಳಿಗೆ ನರ್ಸಿಂಗ್ ಟ್ರೈನಿಂಗ್ ಕೊಟ್ಟು ಅವರ ಸಂಖ್ಯೆಯನ್ನು ಜಾಸ್ತಿಮಾಡಿ ಆ ಹುದ್ದೆಗಳನ್ನು ಹೆಚ್ಚಿಗೆ ಹರಿಜನ ಹೆಣ್ಣುಮಕ್ಕಳಿಗೆ ಖಾಯಂಗಾಗಿಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿಮಾಡುತ್ತೇನೆ.

(ಶ್ರೀ ಎಂ. ಬಸವರಾಜು)

ಕಳೆದ 20 ವರ್ಷಗಳಿಂದ ಹರಿಜನರಿಗೆ ಹಳೆ ಹೊಲಗೇರಿ ಇದ್ದಕಡೆ ಈಗ ಹೊಸ ಹೊಲಗೇರಿ ಮಾಡಿದ್ದಾಗಿದೆ. ಈಗ ಮಂಗಳೂರು ಹಂಚು ಹಾಕಿ ಹಳೆಯ ಹೊಲಗೇರಿ ಹತ್ತಿರ ಹೊಸ ಹೊಲಗೇರಿ ಮಾಡಿದಮೇಲೆ ಅಲ್ಲಿ ಸವರ್ಣ ಹಿಂದೂಗಳು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಒಂದು ಪ್ರೋತ್ಸಾಹವನ್ನು ಕೊಟ್ಟು ಅಲ್ಲಿ ಒಂದು ಏಕೀಕೃತವಾದ ರೀತಿಯಲ್ಲಿ ಮಾಡುವುದಕ್ಕೆ ಸರ್ಕಾರ ಇದುವರೆಗೆ ಏನೊಂದು ಕ್ರಮವನ್ನು ಮಾಡಿಕೊಂಡಿಲ್ಲ. ಎಲ್ಲೆಲ್ಲಿ ಹರಿಜನ ಕಾಲೋನಿಗಳು ಇವೆಯೋ ಅಲ್ಲಿ ಇನ್ನೂ ಇರತಕ್ಕ ಭೂಮಿಗಳನ್ನು ಸ್ವಾಧೀನಪಡಿಕೊಂಡು ಹರಿಜನ ಕಾಲೊನಿಯನ್ನು ಅಭಿವೃದ್ಧಿಮಾಡುವುದಕ್ಕೆ ಬದಲಾಗಿ, ಸಾವಿರ ವರ್ಷಗಳಿಂದಲೂ ಕೇವಲ ಹುಲ್ಲು ಷೆಡ್‌ಗಳಲ್ಲಿರತಕ್ಕ ಸವರ್ಣ ಹಿಂದೂಗಳಲ್ಲಿ ಸಂಪರ್ಕ ಜಾಸ್ತಿಯಾಗುವ ರೀತಿಯಲ್ಲಿ ಅಲ್ಲಲ್ಲಿನ ಪಂಚಾಯತಿಗಳು ಒಂದು ಪ್ರೋತ್ಸಾಹಧನವಾಗಿ ಕೊಡುವ ರೀತಿಯಲ್ಲಿ ಕೊಟ್ಟು ಪ್ರೋತ್ಸಾಹ ಕೊಡಬೇಕು. ಅದೇ ರೀತಿಯಲ್ಲಿ ಎರಡು ದೊಡ್ಡ ವಿಷಯಗಳನ್ನು ಇಲ್ಲಿ ಹೇಳಬೇಕಾಗಿ ಬಂದಿದೆ. ಒಂದು, ರಾಷ್ಟ್ರದ ಪ್ರಗತಿಯ ಬಗ್ಗೆ ಕಲವು ಚಿತ್ರಗಳನ್ನು ನೋಡುತ್ತಿದ್ದೇವೆ. ಅಸೆಂಬ್ಲಿಯಲ್ಲಿ ಹರಿಜನರ ಬಗ್ಗೆ ಭಾಷಣಗಳು ಆಗುತ್ತಿರುವಾಗ ಈ ದೇಶದ ಮೇಲೆ ಎಂತಹ ದುಷ್ಪರಿಣಾಮವಾದೀತು ಎನ್ನುವುದು ಇನ್ನೊಂದು. ಇದು ನಮ್ಮ ಹಳ್ಳಿಗಾಡಿನ ಜನಗಳಿಗೆ ಅರ್ಥವಾಗುವುದಿಲ್ಲ. ಚುನಾವಣೆಯ ಕಾಲದಲ್ಲಿ ಎಷ್ಟೇ ಭಾಷಣಗಳನ್ನು ಮಾಡಿದರೂ ನಮ್ಮ ಸಮಾಜ ಉದ್ಧಾರವಾಗುವುದಿಲ್ಲ. ಅಸ್ಪೃಶ್ಯತೆಯೂ ಕೂಡ ಹೋಗುವುದಿಲ್ಲ. ಈಗ ಫಿಲಂ ಡಿವಿಜನ್ ಏನಿದೆಯೋ ಅದರಿಂದ ಅಸ್ಪೃಶ್ಯತೆಯ ಒಂದು ಭಾವನೆ ಜನರಿಗೆ ಅರ್ಥವಾಗಬೇಕು. ನಮ್ಮ ದೇಶದ ಏಳಿಗೆಯಾಗಬೇಕಾದರೆ, ಸಾಮಾನ್ಯವಾಗಿ ಹಳ್ಳಿಗಾಡುಗಳಲ್ಲಿ ಫಿಲಂಗಳ ಮೂಲಕ ಅಲ್ಲಿನ ಜನರಿಗೆ ತಿಳುವಳಿಕೆಯುಂಟಾಗುವಂತೆ ಪ್ರದರ್ಶನಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಶಾಲಾ ಮಕ್ಕಳ ವಿಷಯದಲ್ಲಿ ಹೇಳುವುದಾದರೆ, ಪ್ರೈಮರಿ ಮತ್ತು ಮಾಧ್ಯಮಿಕ ಮಟ್ಟದಲ್ಲಿ ಅಲ್ಲಿನ ಚಿಕ್ಕ ಮಕ್ಕಳಿಗೆ, ಅದರಲ್ಲಿಯೂ ಅವರ ಒಂದು ಎಳೆಯ ಮನಸ್ಸಿಗೆ ಅರ್ಥವಾಗುವ ರೀತಿಯಲ್ಲಿ ಚಿತ್ರಗಳ ಮೂಲಕ ಮತ್ತು ಒಂದು ಭಾವನೆಯ ಮೂಲಕ ಸರ್ಕಾರದ ಮನಶಾಸ್ತ್ರ ಇಲಾಖೆಯ ನೆರವಿನಿಂದ ಪಾಠಪ್ರವಚನಗಳನ್ನು ಏರ್ಪಾಡುಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿಮಾಡುತ್ತೇನೆ.

ಇನ್ನು ವಿಲೇಜ್ ಪಂಚಾಯತ್ ಅಕೌಂಟೆಂಟ್ಸ್ ಮತ್ತು ಸೆಕ್ರೆಟರಿಗಳ ವಿಷಯವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ಇದು ಬಹಳ ದೊಡ್ಡದು. ನಮ್ಮ ಹಳ್ಳಿಗಳಲ್ಲಿ ಶ್ಯಾನುಭೋಗ ಮತ್ತು ಪಟೇಲ್ ಎಂಬುದಾಗಿ ಇರುತ್ತಾರೆ. ಅವರ ನೈತಿಕ ಮಟ್ಟ ಅಧೋಗತಿಗೆ ಬಂದು ಅವರು ತುಂಬಾ ಹೀನಸ್ಥಿತಿಯಲ್ಲಿದ್ದಾರೆ. ಆದರೂ ಶ್ಯಾನುಭೋಗರ ಹತ್ತಿರ, ಸ್ವಾಮಿ, ಬುದ್ಧಿ ಎಂತಲೂ ಪಟೇಲರ ಹತ್ತಿರ ಗೌಡರೆ ಎಂತಲೂ ಜನ ಹೇಳುತ್ತಾರೆ. ಅವರು ಅಂತಹ ಸ್ಥಾನಮಾನದಲ್ಲಿದ್ದರೂ ಅವರು ಆರ್ಥಿಕಮಟ್ಟದಲ್ಲಿ ಬಹಳ ಹೀನಸ್ಥಿತಿಯಲ್ಲಿದ್ದಾರೆ. ಆದರೂ ಪಟೇಲ ಮತ್ತು ಶ್ಯಾನುಭೋಗರ ಸ್ಥಾನಕ್ಕೆ ಗೌರವ ಕೊಡುತ್ತಾರೆ. ಅಂತಹ ಅನುವಂಶಿಕ ಹುದ್ದೆಗಳನ್ನು ಮತ್ತು ಅವರ ಸ್ಥಾನಮಾನಗಳನ್ನು ರದ್ದುಮಾಡುತ್ತಿದ್ದಾರೆ. ಆದರೆ ಸೇಕಡ 50 ರಷ್ಟನ್ನು ಹರಿಜನರನ್ನೇ ವಿಲೇಜ್ ಅಕೌಂಟೆಂಟ್ಟಾಗಿ ಮತ್ತು ವಿ.ಪಿ. ಸೆಕ್ರೆಟರಿಗಳಾಗಿ ತೆಗೆದುಕೊಳ್ಳಬೇಕು. ಅವರಿಗೆ ಹೆಚ್ಚಿನ ಶಿಕ್ಷಣ ಕೊಟ್ಟು ಅವರನ್ನೇ ಅಲ್ಲಿಗೆ ನೇಮಕಮಾಡಬೇಕು. ಆಗ ಹಳ್ಳಿಗಾಡಿನ ರೈತರ ಸಂಪರ್ಕ ನೇರವಾಗಿ ಬೆಳೆದು ಅವರಿಗೆ ಹೆಚ್ಚಿನ ಗೌರವ ಕೊಡುವ ಭಾವನೆ ಅವರಿಗೆ ಬರುತ್ತದೆ. ಕ್ರಾಂತಿಕಾರಕವಾದ ಬದಲಾವಣೆಯಾಗುತ್ತದೆ. ಇದರಿಂದ ಅಸ್ಪೃಶ್ಯತೆ ನಿವಾರಣೆಗೆ ಹೆಚ್ಚು ಅನುಕೂಲವಾಗುತ್ತದೆಂದು ಹೇಳಿ, ನನಗೆ ಇಷ್ಟುಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ನಾರಾಯಣಗೌಡ.—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ನನ್ನ ಬೇಡಿಕೆಯ ಮೇಲೆ ಮಾನ್ಯ ಸಭೆಯ ಸದಸ್ಯರು ಬಹುಶಃ ಪರವಾಗಿ ಮತ್ತು ವಿರೋಧವಾಗಿ ಮಾತನಾಡಿ ನನ್ನ ಕೆಲಸವನ್ನು ಸ್ವಲ್ಪ ಹಗುರವಾಗಿ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಹಾಗೂ ಮಾತನಾಡಿದ ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಕ್ಕಾಗಿ ಮತ್ತು ಕೆಲವರು ನನ್ನ ವಿಷಯದಲ್ಲಿ ಸ್ವಲ್ಪ ವಿಶ್ವಾಸಪೂರ್ವಕವಾಗಿ ಮಾತನಾಡಿದ್ದಕ್ಕಾಗಿ ನಾನು ಅವರಿಗೆ ಪ್ರಥಮವಾಗಿ ನನ್ನ ಕೃತಜ್ಞತೆಯನ್ನು ಅರ್ಪಿಸಲು ಬಯಸುತ್ತೇನೆ. ಹಾಗೂ ವಿರೋಧವಾಗಿ ಮಾತನಾಡಿದಂಥ ಮಾನ್ಯ ಸದಸ್ಯರುಗಳು ಒಂದುವೇಳೆ ಅವರು ವಿರೋಧಮಾಡುವುದಕ್ಕೋಸ್ಕರವಾಗಿಯೇ ಆ ರೀತಿಯಾಗಿ ಮಾತನಾಡಿದ್ದಾರೆಂದು ನಾನು ಭಾವಿಸುವುದಿಲ್ಲ. ಅವರು ಒಂದುವೇಳೆ ಇವತ್ತಿನದಿವಸ

ಏನಾದರೂ ಒಂದಿಷ್ಟು ನಮ್ಮ ಮನಸ್ಸು ಚುಚ್ಚುವ ಹಾಗೆ ಮಾತನಾಡಿದರೆ ಅವರ ಕೆಲಸಗಳು ಬೇಗನೆ ನಡೆಯುತ್ತವೆ ಎನ್ನುವ ಉದ್ದೇಶದಿಂದ ಮಾತನಾಡಿದ್ದಾರೆಂದು ನಾನು ತಿಳಿದುಕೊಂಡು ಅವರ ಉಪಯುಕ್ತವಾದ ಸಲಹೆಗಳಿಗೂ ಸಹ ನಾನು ಪೂರ್ಣ ಗಮನಕೊಡುತ್ತೇನೆಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮುಖ್ಯವಾಗಿ ಈ ಮಾನ್ಯ ಸಭೆಯೊಳಗೆ ಈ ಹರಿಜನ, ಗಿರಿಜನ ಮತ್ತು ಇತರೇ ಜನಾಂಗಗಳ ಉದ್ಧಾರಕ್ಕೋಸ್ಕರವಾಗಿ ಮಾನ್ಯ ಸದಸ್ಯರು ಹೇಳಿರತಕ್ಕ ಹಾಗೆ ಅವರ ಎಲ್ಲಾ ಅರ್ಥಿಕಾಭಿವೃದ್ಧಿಯ ಕಡೆ ಹೆಚ್ಚು ಗಮನಕೊಡದೆ ಅವರ ವಿದ್ಯಾಭಿವೃದ್ಧಿಯ ಕಡೆಗೆ ಹೆಚ್ಚು ಗಮನಕೊಟ್ಟರೆ ಬಹುಶಃ ಆ ಜನಾಂಗ ಹೆಚ್ಚು ಉದ್ಧಾರವಾಗುತ್ತದೆಂದು ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ಆ ಪ್ರಕಾರ ಸರ್ಕಾರದವರೂ ಸಹ ಅದರ ಕಡೆಗೇ ಹೆಚ್ಚು ಗಮನ ಕೊಡುತ್ತಿದ್ದಾರೆಂದು ತೋರಿಸುವುದಕ್ಕೆ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯಮುಂದೆ ಇಡಲು ಬಯಸುತ್ತೇನೆ. ನಮ್ಮ ಇಲಾಖೆಯ ಆಶ್ರಯದಲ್ಲಿ 365 ವಿಮೆನ್ ವೆಲ್‌ಫೇರ್ ಸೆಂಟರ್ಸ್ ಇವೆ. 241 ಹುಡುಗರ ಹಾಸ್ಟಲುಗಳೂ, 106 ಹೆಣ್ಣುಮಕ್ಕಳ ಹಾಸ್ಟಲುಗಳೂ, 14 ಟೆಕ್ನಿಕಲ್ ಹಾಸ್ಟಲುಗಳೂ ಇವೆ. ನಮ್ಮಲ್ಲಿ ಗ್ರಾಂಟ್-ಇನ್-ಏಡ್ ಹಾಸ್ಟಲುಗಳು 145 ಇವೆ. ಇವು ಈಗ ಹೆಚ್ಚಾಗಿ, ಜನತೆ ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ತಮ್ಮ ಗಮನವನ್ನು ಕೊಡುತ್ತಿದ್ದಾರೆ ಹಾಗೂ ಮಾನ್ಯ ಸದಸ್ಯರುಗಳು ಅನೇಕರು ಹೇಳಿದಹಾಗೆ ಜನತೆ ತಮ್ಮ ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಸಾಧಾರಣವಾಗಿ ಆಶ್ರಮ ಸ್ಕೂಲುಗಳಿಗೆ ಮತ್ತು ರೆಸಿಡೆನ್‌ಷಿಯಲ್ ಸ್ಕೂಲುಗಳಿಗೆ ಹೋಗುವ ವ್ಯವಸ್ಥೆ ಮಾಡುವುದರಿಂದ ಅವರು ಅಲ್ಲಿ ಓದುವಾಗ ಅವರಿಗೆ ಯೂನಿಫಾರಂ ಉಡುಪು ಕೊಡಬೇಕು, ಹಾಗೆ ಕೊಡುತ್ತಾ ಇಲ್ಲವೆಂದು ಕೆಲವು ಸದಸ್ಯರು ಹೇಳಿದರು. ನನಗೆ ಅದೇ ಒಂದು ಆಶ್ಚರ್ಯ. ನಾವು ಆ ಮಕ್ಕಳಿಗೆ ಎಲ್ಲರಿಗೂ ಒಂದು ವರ್ಷಕ್ಕೆ ಎರಡು ಸೆಟ್ಟು ಬಟ್ಟೆಗಳನ್ನು ಕೊಡುತ್ತಿದ್ದೇವೆ. ಯಾರು ಯಾರು ನರ್ಸರಿ ಶಾಲೆಗಳಲ್ಲಿ ಓದುತ್ತಿದ್ದಾರೋ ಅವರಿಗೂ ಮತ್ತು ಯಾರು ಯಾರು ಆಶ್ರಮ ಮತ್ತು ಡೆಸ್ಟಿಟ್ಯೂಟ್ಸ್‌ಶಾಲೆಗಳಲ್ಲಿ ಅಭ್ಯಾಸಮಾಡತಕ್ಕವರೆಲ್ಲರಿಗೂ ಎರಡೆರಡು ಸೆಟ್ ಬಟ್ಟೆಗಳನ್ನು ಕೊಡುತ್ತಿದ್ದೇವೆ. ಇನ್ನು ಡಿಮ್ಯಾಂಡ್ ಹೋಂ ಮತ್ತು ರೆಸ್ಕ್ಯೂ ಹೋಂಗಳಲ್ಲಿರತಕ್ಕವರಿಗೆಲ್ಲಾ ಒಂದೊಂದು ವರ್ಷಕ್ಕೆ 4 ಸೆಟ್ ಬಟ್ಟೆಗಳನ್ನು ಒದಗಿಸುತ್ತಿದ್ದೇವೆ.

ಇನ್ನು ಸರ್ಕಾರದವರು ಇಲ್ಲಿಯವರೆಗೂ ಆ ಹಾಸ್ಟಲುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೇನು ತಿಂಗಳು ಒಂದಕ್ಕೆ 25 ರೂಪಾಯಿಗಳ ಪ್ರಕಾರ ಒಂದು ಗ್ರಾಂಟನ್ನು ಕೊಡುತ್ತಿದ್ದರೋ ಅದು ಸಾಲದು ಎಂಬುದಾಗಿ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಸರ್ಕಾರ ಪರಿಶೀಲಿಸಿ ಈ ವರ್ಷದಿಂದ ಆ ಗ್ರಾಂಟನ್ನು 30 ರೂಪಾಯಿಗಳಿಗೆ ಏರಿಸಲು ನಿರ್ಧರಿಸಿದೆ. ಇದರಿಂದಾಗಿ ಸರ್ಕಾರಕ್ಕೆ ವರ್ಷಗೆ 10 ಲಕ್ಷದ 96,800 ರೂಪಾಯಿಗಳು ಖರ್ಚಾಗುತ್ತವೆ; ಅಂದರೆ ಇಷ್ಟು ಹಣ ಹೆಚ್ಚಿಗೆ ಖರ್ಚಾಗುತ್ತದೆ, ಈ ಬಾಬಿಗಾಗಿ. ಸರ್ಕಾರಕೆ ಅಷ್ಟು ದುಡ್ಡು ಹೆಚ್ಚಾಗಿ ಖರ್ಚಾದರೂ ಚಿಂತೆಯಿಲ್ಲ—ಆ ಮಕ್ಕಳ ಆರೋಗ್ಯದೃಷ್ಟಿಯಿಂದ ಇಷ್ಟು ಹಣವನ್ನು ಖರ್ಚುಮಾಡುವುದಕ್ಕೆ ಸರ್ಕಾರ ತೀರ್ಮಾನವನ್ನು ಕೈಗೊಂಡಿದೆ. ಹಾಗೂ ಕೆಲವರು ಈ ಹಾಸ್ಟಲುಗಳಲ್ಲಿ ಅಭ್ಯಾಸ ಮಾಡತಕ್ಕ ನಮ್ಮ ಮಕ್ಕಳು ಅಭ್ಯಾಸದಲ್ಲಿ ಬಹಳ ಹಿಂದುಳಿದಿದ್ದಾರೆಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ಏನಾದರೊಂದು ಏರ್ಪಾಡನ್ನು ಮಾಡಿ ಅವರಿಗೆ ಒಂದು ಕೋಚಿಂಗ್ ಕೊಡಲು ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದ್ದಾರೆ. ಸರ್ಕಾರ ಅದನ್ನು ಎರಡು ರೀತಿಯಿಂದ ಪರಿಶೀಲನೆ ಮಾಡುತ್ತಿದೆ. ಒಂದು—ಈಗ ಆಫೀಸುಗಳಲ್ಲಿ ಎರಡನೇ ದರ್ಜೆಯ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನು ಆಫೀಸ್ ಸೂಪರಿಂಟೆಂಡೆಂಟ್ ಆಗಿ ಮಾಡುತ್ತಿದ್ದೇವೆ ಇಂಥವರಲ್ಲಿ ಯಾರು ಯಾರು ಗ್ರಾಜುಯೇಟ್‌ಗಳಾಗಿದ್ದಾರೋ ಅಂಥವರನ್ನು ಅಲ್ಲಿಗೆ ಹಾಕಿದರೆ ಅನುಕೂಲವಾಗುವುದಿಲ್ಲವೇ ಅನ್ನುವುದು ಒಂದು ಆಲೋಚನೆ. ಇನ್ನೊಂದು ರೀತಿಯಲ್ಲಿ 4 ಹೆಣ್ಣು ಹುಡುಗರ ಮತ್ತು 4 ಗಂಡುಹುಡುಗರ ಶಾಲೆಗಳನ್ನು ಪ್ರಾಯೋಗಿಕವಾಗಿ ತೆಗೆದುಕೊಂಡು ಅವರಿಗೆ ಕೋಚಿಂಗ್ ಕೊಡುವುದಕ್ಕೆ ಒಂದು ಕೋಚಿಂಗ್ ಹೋಂ ಮಾಡುವುದು ಒಳ್ಳೆಯದೇ ಎಂಬುದಾಗಿ ಹೀಗೆ ಎರಡು ದೃಷ್ಟಿಗಳಲ್ಲಿ ಇದನ್ನು ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ. ಆದರೆ ಇದರಲ್ಲಿ ಯಾವುದು ಉತ್ತಮವಾದ್ದೋ ಅದನ್ನು ಸರ್ಕಾರ ಮುಂದಿನ ವರ್ಷದಿಂದ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ವಿದ್ಯಾಭಿವೃದ್ಧಿಯ ಬಗ್ಗೆ ಅಷ್ಟೇನೂ ಪ್ರಗತಿಯನ್ನು ಸಾಧಿಸಿಲ್ಲ ಎಂದು ಹೇಳಿದ್ದರೆ, ಇನ್ನು ಕೆಲವರು ಏನೋ ಒಂದು ಸ್ವಲ್ಪಮಟ್ಟಿಗೆ ಪ್ರಗತಿಯನ್ನು ಸಾಧಿಸಿದೆ

(ಶ್ರೀ ಜಿ. ನಾರಾಯಣಗೌಡ)

ಎಂದು ಹೇಳಿದ್ದಾರೆ. ನಾನು ಈಗ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಮುಂದಿಟ್ಟರೆ ಬಹುಶಃ ಸದಸ್ಯರಿಗೂ ಮತ್ತು ದೇಶಕ್ಕೂ ಇದರ ಬಗ್ಗೆ ಸರ್ಕಾರ ಇಲ್ಲಿಯವರೆಗೂ ಏನು ಸಾಧಿಸಿದೆ, ಎಷ್ಟು ಉತ್ತಮ ಕಾರ್ಯ ಮಾಡಿದೆ ಅನ್ನುವುದು ಎಲ್ಲರಿಗೂ ತಿಳಿದಂತಾಗುತ್ತದೆ. ನಾವು ಈ ಬಾಲಕರಿಗೆ ಮೂರು ಹಂತದಲ್ಲಿ ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದೇವೆ. ಒಂದು—ಪ್ರೀಮೆಟ್ರಿಕ್ ಸ್ಟೇಜ್. ಎರಡನೆಯದು ಪೋಸ್ಟ್ ಮೆಟ್ರಿಕ್ ಸ್ಟೇಜ್ ಮತ್ತು ಮೂರನೆಯದು ಮೆರಿಟ್ ಎಂದು. ಹೀಗೆ ಮೂರು ಹಂತಗಳಲ್ಲಿ ಕೊಡುತ್ತಿದ್ದೇವೆ. ಪ್ರೀಮೆಟ್ರಿಕ್ ಸ್ಟೇಜಿನಲ್ಲಿರತಕ್ಕ ವಿದ್ಯಾರ್ಥಿಗಳು ಸುಮಾರು 22—23 ಸಾವಿರ ಜನ ವಿದ್ಯಾರ್ಥಿಗಳು ಇದರಿಂದ ಸೌಲಭ್ಯ ಪಡೆಯುತ್ತಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿ ಬೇರೆ ಬೇರೆಯಾದ ನಾಲ್ಕು ಭಾಗಗಳಿವೆ. ಆ ನಾಲ್ಕು ಭಾಗಗಳಲ್ಲೂ ಹಿಂದಿನಿಂದ ಏನು ಕೊಡುತ್ತಿದ್ದರೋ ಅದನ್ನೇ ಈಗಲೂ ಅಲ್ಲಿ ಕೊಟ್ಟುಕೊಂಡು ಬರುತ್ತಿರುವುದರಿಂದ ಅದರಲ್ಲಿ ಒಂದಕ್ಕೊಂದಕ್ಕೆ ಬಹಳ ವ್ಯತ್ಯಾಸವಿದೆ. ಆದರೆ ಅದನ್ನು ಈಗ ತಪ್ಪಿಸಿ ಎಲ್ಲಾ ಭಾಗದಲ್ಲೂ ರಾಜ್ಯದಲ್ಲಿ ಒಂದೇ ಸಮನಾದ ಪದ್ಧತಿ ಇರಬೇಕು ಎಂದು ಸರ್ಕಾರದವರು ಉದ್ದೇಶಪಟ್ಟಿದ್ದಾರೆ. ಈ ಹಿಂದೆ ಈ ಪ್ರೀ-ಮೆಟ್ರಿಕ್ ಕ್ಲಾಸಿನವರೆಗೆ ಕೊಡುತ್ತಿದ್ದ ವಿದ್ಯಾರ್ಥಿವೇತನವೆಷ್ಟಿತ್ತು ಎಂಬುದನ್ನು ನಾನೀಗ ಸಭೆಯ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಹೈದ್ರಾಬಾದ್ ಕರ್ಣಾಟಕ ಏರಿಯಾದಲ್ಲಿ ಒಂದು ವರ್ಷಕ್ಕೆ ಎರಡನೇ ಸ್ಟಾಂಡರ್ಡಿಗೆ 6 ರೂಪಾಯಿ, 3 ನೇ ಸ್ಟಾಂಡರ್ಡಿಗೆ 8 ರೂಪಾಯಿ, 4 ನೇ ಸ್ಟಾಂಡರ್ಡಿಗೆ 10 ರೂಪಾಯಿ, 5, 6, 7 ನೇ ಸ್ಟಾಂಡರ್ಡುಗಳಿಗೆ 40 ರೂಪಾಯಿ ಮತ್ತು 8 ಮತ್ತು 9 ಸ್ಟ್ಯಾಂಡರ್ಡಿಗೆ 60 ರೂಪಾಯಿ ಹೀಗೆ ಕೊಡಲಾಗುತ್ತಿದೆ. ಇನ್ನು ಬೊಂಬಾಯಿ ಕರ್ಣಾಟಕ ಏರಿಯಾದಲ್ಲಿ ಅಲ್ಲಿ ಲಂಪ್‌ಸಂ ಸ್ಕಾಲರ್‌ಷಿಪ್ಪನ್ನು ಕೊಡುತ್ತಿದ್ದಾರೆ. ಅಲ್ಲಿ 6 ನೇ ಸ್ಟ್ಯಾಂಡರ್ಡಿಗೆ 9 ರೂಪಾಯಿ 8 ನೇ ಸ್ಟ್ಯಾಂಡರ್ಡಿಗೆ 10 ರೂಪಾಯಿ 9ನೆಯ ಸ್ಟ್ಯಾಂಡರ್ಡಿಗೆ 15 ರೂಪಾಯಿ, 10 ಮತ್ತು 11 ನೇ ಸ್ಟ್ಯಾಂಡರ್ಡಿಗೆ 20 ರೂಪಾಯಿ ಕೊಡಲಾಗುತ್ತಿದೆ. ಇನ್ನು ಮದ್ರಾಸ್ ಕರ್ಣಾಟಕ ಪ್ರದೇಶದಲ್ಲಿ 4 ಮತ್ತು 5 ನೆಯ ಸ್ಟ್ಯಾಂಡರ್ಡಿಗೆ 6 ರೂಪಾಯಿ, 6ನೇ ಸ್ಟ್ಯಾಂಡರ್ಡಿಗೆ 9 ರೂಪಾಯಿ 7 ಮತ್ತು 8 ನೆಯ ಸ್ಟ್ಯಾಂಡರ್ಡಿಗೆ 12 ರೂಪಾಯಿ ಅನಂತರ ಫಸ್ಟ್, ಸೆಕೆಂಡ್ ಮತ್ತು ಥರ್ಡ್ ಫಾರಂಗಳಿಗೆ 15 ರೂಪಾಯಿ, ಫೂರ್ತ್ ಅಂಡ್ ಫಿಫ್ತಿಗೆ 30 ರೂಪಾಯಿಗಳು ಇನ್ನು ಕೊಡಗಿನಲ್ಲಿ 4 ಮತ್ತು 5 ನೆಯ ಕ್ಲಾಸುಗಳಿಗೆ 12 ರೂಪಾಯಿ, 6 ಮತ್ತು 7ನೆಯ ಸ್ಟ್ಯಾಂಡರ್ಡಿಗೆ 5 ರೂಪಾಯಿ 2 ಮತ್ತು 3 ನೇ ಸ್ಟ್ಯಾಂಡರ್ಡಿಗೆ 4 ರೂಪಾಯಿ ಮತ್ತು ಒಂದನೆಯ ಸ್ಟ್ಯಾಂಡರ್ಡಿಗೆ 2 ರೂಪಾಯಿ ಹೀಗೆ ಕೊಡಲಾಗುತ್ತಿದೆ. ಇನ್ನು ಎಕ್ಸ್‌ಹೈದ್ರಾಬಾದ್ ಏರಿಯಾದಲ್ಲಿ ಮೆರಿಟ್ ಬಗ್ಗೆ ಮಿಡಲ್ ಸ್ಕೂಲಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ 50 ರೂಪಾಯಿಗಳನ್ನೂ ಮತ್ತು ಹೈಸ್ಕೂಲಿನಲ್ಲಿ ಓದತಕ್ಕವರಿಗೆ 75 ರೂಪಾಯಿಗಳನ್ನೂ ಅಂದರೆ ನೂರಕ್ಕೆ 50 ರಂತೆ ನಂಬರುಗಳನ್ನು ಪಡೆದು ಪಾಸಾದವರಿಗೆ ಮೆರಿಟ್ ಎಂದು ಹೇಳಿ ಈ ಸ್ಕಾಲರ್‌ಷಿಪ್‌ಗಳನ್ನು ಕೊಡಲಾಗುತ್ತಿದೆ. ಹೀಗೆ ಇವು ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಾಗಿದ್ದ ಕಾರಣ ಇವನ್ನೆಲ್ಲಾ ಒಂದು ಯೂನಿಫಾರಂ ರೇಟಿನಲ್ಲಿ ಕೊಡುವಂತೆ ಮಾಡಬೇಕೆಂದು ಸರ್ಕಾರದವರು ಇದನ್ನೀಗ ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದಾರೆ ಈ ದಿವಸ ಮೆರಿಟ್ ಸ್ಕಾಲರ್‌ಷಿಪ್ಪನ್ನು ಪಡೆಯತಕ್ಕ ವಿದ್ಯಾರ್ಥಿಗಳ ಸಂಖ್ಯೆ 1680 ಇದೆ. ಇನ್ನು ಕಡೆಯದಾಗಿ ಪೋಸ್ಟ್ ಮೆಟ್ರಿಕ್ ಸ್ಕಾಲರ್‌ಷಿಪ್‌ಗಳನ್ನು ಒಂದೊಂದು ಕಾಲೇಜಿನಲ್ಲೂ ಒಂದೊಂದು ರೀತಿಯಾಗಿ ಕೊಡಲಾಗುತ್ತಿದೆ. ಇದನ್ನು ಸಹಾ ಹೆಚ್ಚಿಸಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಮೊದಲೇ ಮನವಿಮಾಡಿಕೊಂಡಿದ್ದೆವು. ಈ ವಿಷಯವನ್ನು ಅನೇಕ ಮಾನ್ಯ ಸದಸ್ಯರೂ ಸಹಾ ಇಲ್ಲಿ ಚರ್ಚೆಮಾಡಿದ್ದಾರೆ, ಇಲ್ಲಿ ಕೊಡತಕ್ಕ ಸ್ಕಾಲರ್‌ಷಿಪ್ ಬಹಳ ಕಡಿಮೆ ಎಂದು. ಯಾರು ಯಾರು ಈ ಕೋರ್ಸಿನಲ್ಲಿ ಜನರಲ್ ಹಾಸ್ಟಲಿನಲ್ಲಿ ಓದುತ್ತಿದ್ದಾರೋ ಅವರು 100 ರೂಪಾಯಿಗಳವರೆಗೂ ಬೋರ್ಡಿಂಗ್ ಫೀಯನ್ನು ಕೊಡಬೇಕಾಗಿತ್ತು. ಇನ್ನು ಮುಂದೆ ಸರ್ಕಾರದವರೇ ಅದನ್ನು ವಹಿಸಿಕೊಳ್ಳಬೇಕೆದು ತೀರ್ಮಾನ ಮಾಡಿದ್ದಾರೆ.

ಈ ವರ್ಷದಲ್ಲಿ ಏನಾಗಿದೆ ಎಂದರೆ, ಒಂದೊಂದು ಕಾಲೇಜಿನಲ್ಲಿಯೂ ನಾನು ಈಗಾಗಲೇ ಹೇಳಿದಹಾಗೆ ಒಂದೊಂದು ರೀತಿ ಇದೆ. ಪ್ರೀ ಯೂನಿವರ್ಸಿಟಿ ಬಿ.ಎಸ್.ಸಿ., ಬಿ.ಎ., ಬಿ.ಕಾಮ್, ಬಿ.ಎಸ್.ಸಿ. (ಅಗ್ರಿಕಲ್‌ಚರಲ್) ಬಿ.ಎಸ್.ಸಿ., ಬಿ.ಎ., ಬಿ.ಕಾಂ. ಇಂಥವುಗಳಿಗೆ ಯಾರು ಯಾರು ವಿದ್ಯಾರ್ಥಿವೇತನಗಳನ್ನು ಪಡೆಯುತ್ತಿದ್ದಾರೆಯೋ ಅವರಿಗೆ ಹಾಸ್ಟಲುಗಳಲ್ಲಿರುವವರಿಗೆ 40 ರೂಪಾಯಿಗಳನ್ನು ಕೊಡುತ್ತಿದೆ. ಹಾಸ್ಟಲಿನಿಂದ ಹೊರಗಡೆ ಇರುವವರಿಗೆ 27 ರೂಪಾಯಿಗಳನ್ನು

ಕೊಡುತ್ತಿದೆ. ಇದು ಈಗ ಇರುವ ರೇಟು. ಈಗ ಇಂಡಿಯಾ ಸರ್ಕಾರದವರು ಸಹ ಬೇಕಾದಷ್ಟು ಸ್ಕಾಲರ್‌ಷಿಪ್‌ಗಳನ್ನು ಕೊಡುತ್ತಿದ್ದಾರೆ. ಆದ್ದರಿಂದ ಆ ಸ್ಕಾಲರ್‌ಷಿಪ್‌ಗಳನ್ನು ಕೊಡುವ ವಿಷಯದಲ್ಲಿ ಕೆಲವು ಸಲಹೆಗಳನ್ನು ನಾವು ಇಂಡಿಯಾ ಸರ್ಕಾರದವರಿಗೆ ಮಾಡಿದ್ದೇವೆ. ಅದು ಈ ರೀತಿ ಇದೆ:

Course of study	Monthly rates for those residing in hostels.	Monthly rates for Day Scholars.	Rates proposed by the Department	
			Hostelers	Day Scholars
	Rs.	Rs.	Rs.	Rs.
Preparatory/Pre-University, I. Sc. I.A.I.Com., I.Sc., (Agri.) B.Sc., B.A. B.Com., corresponding oriental language/Fine arts courses.	40	27	50	40
M.Sc., M.A., M.Com., LL.B., and III yr. class in Hons. courses, corresponding oriental languages Fine Arts courses.	50	35	75	50
D.Sc., D.Litt., Ph.D.	60	45	75	50
Diploma/Certificate courses in Agri., Veterinary Science, Hygiene and Public Health Course, Sanitary Inspector's Course, Pre-Engineering, Pre-Medical Courses.	40	27	50	40
Diploma and Degree courses in Indian Medicine.	40	27	50	40
Teachers' Training and Physical Education :				
(a) Under Graduate course	40	27	50	40
(b) Post-graduate course	50	35	75	50
B.Sc. (Agri.), B.V.Sc., Diploma courses in Rural Services/Civil and Rural Engineering.	50	35	75	50
Post-graduate courses in Agriculture, post-diploma courses in Co-operation/Community Develo-ment.	60	45	75	50

(ಶ್ರೀ ಜಿ. ನಾರಾಯಣಗೌಡ)

Course of study	Monthly rates for those residing in hostels.	Monthly rates for Day Scholars.	Rates proposed by the Department	
			Hostelers	Day Scholars
	Rs.	Rs.	Rs.	Rs.
Bachelor of Nursing and Bachelor of Pharmacy Diploma/Certificate courses in Engineering, Technology, Architect Medicine and courses.	65	50	75	50
Medicine and courses for overseers Draftsmen, Surveyor, Electrician, Tool-maker and Wireless Operator.	65	50	75	50
Degree courses in Engineering, Technology Architecture, Medicine and B.A., M. and S. or other similar courses, Master of Pharmacy.	75	60	100	75
Trade course *e.g.* Telegraphy, Book-keeping, Shorthand, Typewriting Tailoring, Tanning and Leather Goods manufacture, etc.	*Ad hoc* financial assistance at Rs. 20 p.m. (inclusive of fees).		*Ad hoc* financial assistance at Rs. 30 p.m. (Inclusive of fees).	

ಈ ರೀತಿಯಾಗಿ ನಾವು ಮಾನ್ಯ ಸದಸ್ಯರು ಹೇಳುವುದಕ್ಕಿಂತ ಮುಂಚಿತವಾಗಿಯೇ ಶಿಫಾರಸ್ಸು ಮಾಡಿದ್ದೇವೆ. ಇದರಿಂದಲೇ ತಮಗೆ ಗೊತ್ತಾಗುತ್ತದೆ, ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಕೆಲಸ ಮಾಡಿದ್ದಾರೆ ಎಂದು. ಇಷ್ಟು ಅಂಕಿ ಅಂಶಗಳನ್ನು ಕೊಟ್ಟಮೇಲೂ ಕೂಡ ಮಾನ್ಯ ಸದಸ್ಯರಲ್ಲಿ ಕೆಲವರು ತಿಳಿದುಕೊಂಡಿದ್ದಾರೆ, ಸರ್ಕಾರದವರು ಯಾರಿಗೂ ಏನೂ ಸಹಾಯ ಮಾಡುವುದಿಲ್ಲ ಎಂದು ಅದು ಸರಿಯಲ್ಲ ಇದು ಸರ್ಕಾರದವರಿಗೆ ತಿಳಿಯದೇ ಇರುವ ವಿಷಯವೇನೂ ಅಲ್ಲ. ಅಲ್ಲಿಯೂ ಕಷ್ಟ ಸುಖಗಳನ್ನು ಅರಿತಿರುವವರೇ ಇದ್ದಾರೆ. ಆದ್ದರಿಂದ ನಿಮ್ನವರ್ಗದವರ ಪ್ರಗತಿಯ ಬಗ್ಗೆ ಸರ್ಕಾರದವರು ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ಡಿನಾಮಿನೇಷನ್ ಆದ ಹಾಸ್ಟಲುಗಳಾಗಿವೆ ಎಂದು ಮಾನ್ಯ ಸದಸ್ಯರ ನೇಕರು ಹೇಳಿದ್ದಾರೆ. ಇದನ್ನು ನಾನ್ ಡಿನಾಮಿನೇಷನಲ್ ಆಗಿ ಮಾಡಿದರೆ ಬಹುಶಃ ಅದರಿಂದ ಅಸ್ಪೃಶ್ಯತೆ ನಿವಾರಣೆ ಆಗುವುದಕ್ಕೆ ಒಂದು ಮಾರ್ಗವಾಗುತ್ತದೆ ಎಂದು ನಾವು ಎಲ್ಲಾ ಹಾಸ್ಟಲುಗಳನ್ನೂ ನಾನ್‌ಡಿನಾಮಿನೇಷನಲ್ ಆಗಿ ಮಾಡಿ ಹಲವಾರು ತಿಂಗಳುಗಳಾದುವು. ಬೀರಪ್ಪ ಕಮಿಟಿಯವರು ಶಿಫಾರಸ್ಸು ಮಾಡಿದ್ದನ್ನು ಕಾರ್ಯಗತ ಮಾಡಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಆಕ್ಷೇಪಣೆ ಮಾಡಿದರು. ಆ ವಿಚಾರಕ್ಕೆ ಆಮೇಲೆ ಬರುತ್ತೇನೆ. ಬೀರಪ್ಪ ಕಮಿಟಿಯವರು ಮಾಡಿರ ತಕ್ಕ ಶಿಫಾರಸ್ಸುಗಳಲ್ಲಿ ಒಂದು ಶಿಫಾರಸ್ಸಿನಲ್ಲಿ ಯಾರು ಜನರಲ್ ಹಾಸ್ಟಲಗಳನ್ನು ನಡೆಸುತ್ತಾರೆಯೋ ಅದರಲ್ಲಿ 25 ಜನ ಷೆಡ್ಯೂಲ್ಡ್ ಕ್ಯಾಸ್ಟ್ ಹುಡುಗರನ್ನೂ, ಮತ್ತು ಷೆಡ್ಯೂಲ್ ಟ್ರೈಬ್ಸ್

ಹುಡುಗರನ್ನೂ ಸೇರಿಸಬೇಕೆಂದು ಇದೆ. ಅದರ ಪ್ರಕಾರ ಆದೇಶವನ್ನು ಕೊಟ್ಟು 25 ಹುಡುಗರನ್ನು ಪ್ರತಿಯೊಂದು ಜನರಲ್ ಹಾಸ್ಟಲಿನಲ್ಲಿಯೂ ಸೇರಿಸಬೇಕೆಂದು ಹೇಳಿದ್ದೇವೆ. ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಿಗೆ ಸಹಿತ ಅನೇಕ ಸಂದರ್ಭಗಳಲ್ಲಿ ನಾವು ಗ್ರ್ಯಾಂಟ್ ಕೊಡುತ್ತಿದ್ದೇವೆ. ಈ ವಿಚಾರ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಗ್ರ್ಯಾಂಟನ್ನು ಅನೇಕ ಹಾಸ್ಟಲುಗಳಿಗೆ ಕೊಟ್ಟಿದ್ದೇವೆ. ಒಬ್ಬರು ಮಾನ್ಯ ಸದಸ್ಯರು ಹೇಳಿದರು, ಪ್ರೈವೇಟ್ ಹಾಸ್ಟಲುಗಳ ಬಿಲ್ಡಿಂಗಳಿಗೋಸ್ಕರ ಸರ್ಕಾರದವರು ಗ್ರ್ಯಾಂಟ್ ಕೊಡಬೇಕಾದರೆ ಶೇಕಡಾ 25ರಷ್ಟು ಠೇವಣಿಯನ್ನು ಸರ್ಕಾರದಲ್ಲಿ ಇಡಬೇಕೆಂದು ಸರ್ಕಾರದ ನಿಬಂಧನೆ ಇದೆ. ಅದನ್ನು 1/10 ಭಾಗಕ್ಕೆ ಇಳಿಸಬೇಕೆಂದು ಹೇಳಿದರು. ಖಾಸಗಿಯವರು ಒಂದು ವೇಳೆ ಯಾವ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಮಾಡಿದರೂ ಕೂಡ ಅವರು ತಮ್ಮ ಒಂದು ಸ್ವಂತ ಶಕ್ತಿಯಿಂದ ಮತ್ತು ಸಾರ್ವಜನಿಕರ ಹಣದಿಂದ ಅವುಗಳನ್ನು ಪ್ರಾರಂಭ ಮಾಡುತ್ತಾರೆ ಎಂದು ತಾವುಗಳೆಲ್ಲರೂ ತಿಳಿದುಕೊಂಡಿದ್ದೀರೆಂದು ಕಾಣುತ್ತದೆ. ಸರ್ಕಾರದವರು ಅವರಿಗೆ ಗ್ರ್ಯಾಂಟ್ ಮೂಲಕ ಒಂದು ನೆರವನ್ನು ನೀಡುತ್ತಿದೆ. ಅವರಿಗೂ ಅನೇಕ ಸಂದರ್ಭಗಳಲ್ಲಿ ಸರ್ವಸಾಧಾರಣವಾಗಿ 4 ಪ್ರೈವೇಟ್ ಹಾಸ್ಟಲುಗಳಿಗೆ 65 ಸಾವಿರ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಪ್ರೈವೇಟ್ ಹಾಸ್ಟಲುಗಳ ಕಟ್ಟಡಗಳಿಗೋಸ್ಕರ ಸರ್ಕಾರದವರು ಗ್ರ್ಯಾಂಟ್ ಕೊಡಬೇಕಾದರೆ ಅವರು 25 ಪರ್ಸೆಂಟ್ ಡಿಪಾಜಿಟ್ ಅನ್ನು ಸರ್ಕಾರದಲ್ಲಿ ಇಡಬೇಕೆಂಬ ನಿಬಂಧನೆ ಇದ್ದರೂ ಕೂಡ ಕೆಲವು ಉತ್ತಮವಾದ ರೀತಿಯಲ್ಲಿ ನಡೆಸಿಕೊಂಡು ಬರುವ ವಿದ್ಯಾರ್ಥಿನಿಲಯಗಳಿಗೆ ಗ್ರ್ಯಾಂಟ್ ಕೊಡುವುದರಲ್ಲಿ ಸರ್ಕಾರದ ಒಂದು ಡಿಸ್‌ಕ್ರಿಷನ್ ಇದೆ. ಅದನ್ನು ಉಪಯೋಗಿಸಿ ಕೆಲವು ಸಂದರ್ಭಗಳಲ್ಲಿ ಶೇಕಡಾ 25 ಪರ್ಸೆಂಟ್ ಡಿಪಾಜಿಟ್ ಇಡಬೇಕೆಂಬುದನ್ನು ಮನ್ನಾ ಮಾಡಿದ್ದೇವೆ.

6-30 P.M.

ಈಗ ಇರತಕ್ಕಂಥ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳನ್ನು ಇನ್ನೂ ಹೆಚ್ಚು ಮಾಡಬೇಕೆಂದು ಕೆಲವು ಸದಸ್ಯರುಗಳು ಹೇಳಿದರು. ಈಗ ಇರತಕ್ಕಂಥ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು, ಆ ಹಾಸ್ಟೆಲ್‌ಗಳಲ್ಲಿ ಎಷ್ಟು ಜನ ಇರುವುದಕ್ಕೆ ಅವಕಾಶವಿದೆ ಮತ್ತು ಈಗ ಎಷ್ಟು ಜನ ವಿದ್ಯಾರ್ಥಿಗಳು ಇದ್ದಾರೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ತಮ್ಮ ಮುಂದೆ ಇಟ್ಟರೆ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಬೇಕೇ ಅಥವಾ ಬೇಡವೇ ಎಂಬುದು ತಮಗೇ ಗೊತ್ತಾಗುತ್ತದೆ.

	No. of Hostels	*Sanctioned Strength*	*Actual strength*
Government Hostel for Scheduled Caste for Boys.	187	10,202	8,710
Government Hostel for Girls.	99	3,237	2,644
Government Hostel for Scheduled Tribes, for Boys.	7	449	374
Denotified Tribes for Boys.	21	711	675
Denotified Tribes for Girls.	2	50	25
Ashram Schools for Scheduled Tribes.	44	2,057	1,921
Denotified.	32	1,350	1,257
Nomadic Tribes.	27	1,265	1,189
Residential Schools for Scheduled Castes.	12	1,000	839

ಈ ಅಂಕಿ ಅಂಶಗಳನ್ನು ಏತಕ್ಕೆ ಹೇಳಿದೆನೆಂದರೆ, ಈ ನತದೃಷ್ಟ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಕರ್ತವ್ಯ ಸರ್ಕಾರಕ್ಕೆ ಸೇರಿದ್ದು. ಆ ಒಂದು ದೃಷ್ಟಿಯಿಂದ ಹೇಳುವುದಾದರೆ, ಈಗ ಸ್ಯಾಂಕ್ಷನ್ಡ್ ಸ್ಟ್ರೆಂಗ್ತ್ ಎಷ್ಟು ಇದೆಯೋ ಅಷ್ಟು ಜನ ವಿದ್ಯಾರ್ಥಿಗಳು ಇನ್ನೂ ಬಂದಿಲ್ಲದಿರುವುದರಿಂದ ಹೊಸದಾಗಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭ ಮಾಡುವುದು ಸರಿಯಲ್ಲವೆಂದು ಕಾಣುತ್ತದೆ. ಬೇರೆ ಸ್ಥಳಗಳಲ್ಲಿ ವಿದ್ಯಾರ್ಥಿಗಳು ಇದ್ದು ಅಲ್ಲಿ ಹಾಸ್ಟೆಲ್ ಇಲ್ಲದಿದ್ದರೆ, ಅಂತಹ ಸಂದರ್ಭಗಳಲ್ಲೂ ಸಹ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡಿದ್ದೇವೆ. ಈ ಒಂದು ವರ್ಷದಲ್ಲಿ ಹೆಣ್ಣು ಮಕ್ಕಳು ಮತ್ತು ಗಂಡುಮಕ್ಕಳಿಗೆ ಸಂಬಂಧಪಟ್ಟಂತೆ 15 ಹಾಸ್ಟೆಲ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ.

ಶ್ರೀ ಸಿದ್ಧಯ್ಯ ಕಾಶೀಮಠ್.—ಬೇರೆ ಬೇರೆ ಜಾತಿಗಳ ಹಾಸ್ಟೆಲ್‌ಗಳಿಗೆ ಬದಲು ಜನರಲ್ ಹಾಸ್ಟೆಲ್ ಮಾಡುತ್ತಿದ್ದೇವೆಂದು ಹೇಳಿದಿರಿ. ಯಾವ ನಿಯಮದ ಮೇಲೆ ಈ ತತ್ವವನ್ನು ಅನುಷ್ಠಾನಕ್ಕೆ ತರುತ್ತೀರಿ ?

ಶ್ರೀ ಜಿ. ನಾರಾಯಣ ಗೌಡ.—ಯಾರಾದರೂ ಹಾಸ್ಟೆಲ್ ಪ್ರಾರಂಭ ಮಾಡಿದರೆ ಶೇಕಡ 25ರಷ್ಟು ಬೇರೆ ಕೋಮಿನವರನ್ನು ಆ ಹಾಸ್ಟೆಲ್‌ಗೆ ಸೇರಿಸಬೇಕೆಂದು ಕಡ್ಡಾಯವಾದ ನಿಯಮವನ್ನು ಮಾಡಿದ್ದೇವೆ. ಈಗಿರತಕ್ಕಂಥ ಹಾಸ್ಟೆಲ್‌ಗಳನ್ನು ನಾನ್-ಡಿನಾಮಿನೇಷನ್ ಆಗಿ ಮಾಡಿದ್ದೇವೆ.

ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲ).—ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ಜನ ಹರಿಜನರ ಮಕ್ಕಳಿದ್ದಾರೆ ಮತ್ತು ಅವರಲ್ಲಿ ಎಷ್ಟು ಪ್ರಗತಿಯಾಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ಆ ವಿವರ ಇಲ್ಲ. ಇಷ್ಟು ಮಾತ್ರ ಹೇಳುತ್ತೇನೆ, ನಮ್ಮ ರಾಜ್ಯದೊಳಗೆ ಈಗ 5 ಯೂನಿವರ್ಸಿಟಿ ಹಾಸ್ಟೆಲ್‌ಗಳು ಇವೆ. ಇವುಗಳು ಡೈರೆಕ್ಟರ್ ಆಫ್ ಕೊಲಿಜಿಯೆಟ್ ಎಜುಕೇಷನ್ ಅವರ ಅಧೀನದಲ್ಲಿವೆ. ಎರಡು ಬೆಂಗಳೂರಿನಲ್ಲಿವೆ, ಒಂದು ತುಮಕೂರಿನಲ್ಲಿದೆ; ಒಂದು ಚಿತ್ರದುರ್ಗದಲ್ಲಿದೆ ಮತ್ತೊಂದು ಹಾಸನದಲ್ಲಿದೆ. ಬೆಂಗಳೂರು ಮತ್ತು ತುಮಕೂರಿನಲ್ಲಿರುವ ಹಾಸ್ಟಲಿನ ವಿದ್ಯಾರ್ಥಿಗಳು ಈಗಿನ ಕಾಲಕ್ಕೆ ನಮಗೆ ಹೆಚ್ಚು ಖರ್ಚು ಬರುವುದರಿಂದ ಸರ್ಕಾರದವರು ಸಹಾಯ ಮಾಡಬೇಕೆಂದು ಬಂದು ಕೇಳಿಕೊಂಡರು. ಈಗ ಪರೀಕ್ಷೆ ಸಮಯವಾದ್ದರಿಂದ ಈ ವಿದ್ಯಾರ್ಥಿಗಳಿಗೆ ಹೆಚ್ಚು ಖರ್ಚು ಬರುತ್ತದೆ. ಈಗಿರತಕ್ಕಂಥ ಹಾಸ್ಟೆಲ್‌ಗಳನ್ನು ನಾನ್ ಡಿನಾಮಿನೇಷನ್ ಆಗಿ ಪರಿವರ್ತನೆ ಮಾಡಿದರೆ ಕೇಂದ್ರ ಸರ್ಕಾರದವರಿಂದ ಸಹಾಯ ಪಡೆದು ನೂರು ರೂಪಾಯಿಗಳವರೆಗೆ ಇವರಿಗೆ ಖರ್ಚು ಮಾಡಲು ಹಣ ಕೊಡುವುದಕ್ಕೆ ಅವಕಾಶವಾಗುತ್ತದೆಂದು ಡೈರೆಕ್ಟರ್ ಆಫ್ ಕೊಲಿಜಿಯೆಟ್ ಎಜುಕೇಷನ್ ಅವರಿಗೆ ಹೇಳಿದೆ. ಅದರ ಪ್ರಕಾರ ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಈಗ ಪರೀಕ್ಷೆ ಸಮಯವಾದ್ದರಿಂದ ಬೆಂಗಳೂರು ಮತ್ತು ತುಮಕೂರು ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳಿಗೆ ಬರತಕ್ಕಂಥ ಹೆಚ್ಚಿನ ಖರ್ಚನ್ನು ಸಮಾಜ ಕಲ್ಯಾಣ ಇಲಾಖೆಯವರು ವಹಿಸಿಕೊಳ್ಳಬೇಕೆಂದು ಅಲ್ಲಿನ ಅಧಿಕಾರಿಯವರಿಗೆ ತಿಳಿಸಿದ್ದೇವೆ.

Sri J. P. SARWESH (Serum).—In Gulbarga, there is no such hostel for College. Is there any proposal this year ?

Sri G. NARAYANA GOWDA.—There is no proposal.

ಹರಿಜನರ ಆರ್ಥಿಕ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಮಾನ್ಯ ಸದಸ್ಯರುಗಳು ಕೆಲವರು ಹೇಳಿದರೆ ಮತ್ತೆ ಕೆಲವು ಮಾನ್ಯ ಸದಸ್ಯರುಗಳು ಇವರ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕೆಂದು ಹೇಳಿದರು. ಕೇವಲ ಕೋಳಿ ಮತ್ತು ಕುರಿಗಳನ್ನು ಇವರಿಗೆ ಕೊಟ್ಟರೆ ಇವರ ಏಳಿಗೆಯಾಗುವುದಿಲ್ಲವೆಂದು ಶ್ರೀಮತಿ ನಾಗಮ್ಮನವರು ಹೇಳಿದರು. ಇವುಗಳನ್ನು ಅವರಿಗೆ ಕೊಡುವುದು ಅವರ ಅಭಿವೃದ್ಧಿಯಾಗಲಿ ಎಂದು. ಅಭಿವೃದ್ಧಿಯ ಬಗ್ಗೆ ಇವರಿಗೆ ಸಾಕಷ್ಟು ತಿಳುವಳಿಕೆ ಇಲ್ಲವಾಗಿದೆ. ಇವರ ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ತಂಗಡಿ ಚೆಕ್ಕೆಯನ್ನು ಇವರಿಗೇ ಕೊಡಿ ಎಂದು ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದರು. ಈ ಬಗ್ಗೆ ಒಂದು ಸಹಕಾರ ಸಂಘವನ್ನು ಮಾಡಿ ಆ ಮೂಲಕ ಕೊಡುವುದು ಒಳ್ಳೆಯದೇ ಅಥವಾ ವೈಯುಕ್ತಿಕವಾಗಿ ಕೊಡುವುದು ಒಳ್ಳೆಯದೇ ಎಂಬುದು ಒಂದು ವಿಚಾರವಾಗಿದೆ. ವೈಯುಕ್ತಿಕವಾಗಿ ಕೊಟ್ಟರೆ ಕೋಳಿ, ಕುರಿ ಕೊಟ್ಟಂತೆ ಆಗುತ್ತದೆಯೋ ಏನೋ ಎಂಬ ಅನುಮಾನವಿದೆ.

ಶ್ರೀ ಎ. ಮುನಿಯಪ್ಪ.—ಕೋಳಿ, ಕುರಿ ಕೊಟ್ಟಂತೆ ಆಗುತ್ತದೆಂದು ಹೇಳುವುದಾದರೆ ಬೇರೆ ಜನಾಂಗಕ್ಕೆ ಕೊಟ್ಟ ಅನುಕೂಲಗಳನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಗಣನೆಗೆ ತೆಗೆದುಕೊಂಡಿದ್ದೀರಾ ?

ಶ್ರೀ ಜಿ. ನಾರಾಯಣ ಗೌಡ.—ಹರಿಜನರಿಗೆ ಕೊಟ್ಟ ಅನುಕೂಲಗಳನ್ನು ದುರುಪಯೋಗಪಡಿಸಿಕೊಳ್ಳಲು ಬೇರೆ ಜನಾಂಗದವರು ಪ್ರವೇಶ ಮಾಡುತ್ತಿದ್ದಾರೆ. ತಂಗಡಿಚಕ್ಕೆಯ ಬಗ್ಗೆ ಹರಿಜನರ ಒಂದು ಸಹಕಾರಸಂಘವನ್ನು ಮಾಡಿಕೊಂಡು, ಸರ್ಕಾರದವರು ಟೆಂಡರ್ ಕರೆದಾಗ, ಇವರು ಸಹ ಟೆಂಡರ್ ಹಾಕಿಕೊಂಡರೆ ಕೆಲವೊಂದು ರಿಯಾಯಿತಿಗಳನ್ನು ತೋರಿಸುವ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡುತ್ತಾರೆಂದು ಶ್ರೀಮಾನ್ ಸಿದ್ಧವೀರಪ್ಪನವರಿಗೆ ಹೇಳುತ್ತೇನೆ.

ಇನ್ನು ನಮ್ಮಲ್ಲಿ 225 ವ್ಯವಸಾಯದ ಕಾಲೊನಿಗಳಿವೆ. 1965ರವರೆಗೆ ಕೇಂದ್ರಸರ್ಕಾರದ ಸಹಾಯವನ್ನು ಪಡೆದುಕೊಂಡು ಈ 225 ಕಾಲೋನಿಗಳನ್ನು ಮಾಡಿದ್ದೇವೆ. ಈ ಕಾಲೋನಿಗಳಲ್ಲಿ ಕೆಲಸ ಮಾಡುವವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಮತ್ತು ಎತ್ತು ಗಾಡಿಗಳನ್ನು ಕೊಡಿಸಿದ್ದೇವೆ. ಸಾಕಷ್ಟು ಜಮೀನು ಕೊಡಿಸಿದ್ದೇವೆ. ಆದರೆ ಈ ಅಗ್ರಿಕಲ್ಚರಲ್ ಕಾಲೊನೀಸ್ ಯಾವ ರೀತಿಯಲ್ಲಿವೆ ಎಂದು ಒಂದು ವೇಳೆ ಕೇಂದ್ರ ಸರ್ಕಾರದವರು ಪರಿಶೀಲನೆ ಮಾಡಿದರೆ, ಇದು ಯಾವ ಮಟ್ಟಕ್ಕೆ ಬರಬೇಕಾಗಿತ್ತೋ ಆ ಮಟ್ಟಕ್ಕೆ ಬರಲಿಲ್ಲ. ಆದ್ದರಿಂದ ಇದನ್ನು ಮುಂದೆ ಕೊಡಲು ಸಾಧ್ಯವಿಲ್ಲವೆಂದು ನಿಲ್ಲಿಸಿಬಿಡಬಹುದು. ನಾವು ಇದನ್ನು ಮುಂದುವರಿಸಬೇಕು ಮಲ್ಟಿ ಪರ್ಪಸ್ ಕೋಆಪರೇಟಿವ್ ರಿಹ್ಯಾಬಿಲಿಟೇಶನ್ ಪ್ರಾಜೆಕ್ಟ್ 12 ಮಾಡಿದ್ದೇವೆ. ಅದನ್ನು ಕೂಡ ಸ್ವಲ್ಪ ಯೋಚಿಸಿ ಮಾಡುವುದು ಉತ್ತಮವೆಂದು ಹೋದವರ್ಷ ಶೇಕಡಾ 25 ರಷ್ಟು ನೀರಾವರಿ ಜಮೀನು ಸಿಕ್ಕಿದಲ್ಲಿ ಮಾಡಿದ್ದೇವೆ. ಮುಂದೆ ಇದನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಯೋಚನೆ ಮಾಡುತ್ತೇವೆ. ಅದೇ ರೀತಿ ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಇವೆ. ಇದಕ್ಕೆ ನಾವು ಸ್ವಲ್ಪ ಹಣ ಕೊಡದಿದ್ದರೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಲ್ಯಾಂಡ್ ರಿಕ್ಲಮೇಶನ್, ಮತ್ತು ಇರಿಗೇಶನ್ ವೆಲ್ಸಿಗೆ ಮತ್ತು ಪಂಪ್‌ಸೆಟ್ಟುಗಳಿಗೆ ಹಣ ಬೇಕ . ಹೀಗೆ ಒಟ್ಟು 41 ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳಿಗೆ ನಾವು ಮೂರು ಲಕ್ಷ 18 ಸಾವಿರ ರೂಪಾಯಿ ಕೊಟ್ಟಿದ್ದೇವೆ. ರಿಕ್ಲಮೇಶನ್ ಆಫ್ ಲ್ಯಾಂಡ್ ಮತ್ತು ಇರಿಗೇಶನ್ ವೆಲ್ಸ್‌ಗೋಸ್ಕರ 75 ಪರ್‌ಸೆಂಟ್ ಲೋನ್, 25 ಪರ್‌ಸೆಂಟ್ ಸಬ್ಸಿಡಿ ಕೊಡುತ್ತೇವೆ. ಆಮೇಲೆ ಪಂಪ್‌ಸೆಟ್ಟಿಗೆ ಪೂರಾ ಲೋನ್. ಹೀಗೆ ಮೂರು ಲಕ್ಷ 18 ಸಾವಿರ ಕೊಟ್ಟಿದ್ದೇವೆ. ಅವರಿಗೆ ನೆರವು ಸಿಗಲಿ ಎನ್ನುವ ದೃಷ್ಟಿಯಿಂದ ಡೈರಿ ಫಾರ್ಮ್ ಮತ್ತು ಪೌಲ್ಟ್ರಿ ಫಾರ್ಮಿಂಗ್ ಸಹಾಯವನ್ನು ನಾವು ಕೊಟ್ಟಿದ್ದೇವೆ.

Sri J. P. SARWESH.—Regarding dairy farms you are telling that in Sedum they have registered the land. But since 1½ years up till now you have not looked into it.

Sri G. NARAYANA GOWDA.—No land has been sanctioned to that Society.

Sri J. P. SARWESH.—I want to make one point clear, Sir, I may be given one minute, Sir.

Mr. CHAIRMAN.—The member will please take his seat in the first instance. If he wants to ask anytning he may do it coolly and the Minister will reply. The Minister May be allowed first to reply.

ಶ್ರೀ ಜಿ. ನಾರಾಯಣ ಗೌಡ.—ನಾವು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಡೈರಿ ಫಾರ್ಮಿಂಗಿಗೆ ಕೊಟ್ಟ ಹಣವನ್ನು ಹೇಳುತ್ತೇನೆ. ಷೆಡ್ಯೂಲ್ಡ್ ಕಾಸ್ಟಿಗೆ 91 ಸಾವಿರ 250 ರೂಪಾಯಿ, ಷೆಡ್ಯೂಲ್ಡ್ ಟ್ರೈಬ್ಸ್‌ಗೆ 56 ಸಾವಿರ ರೂಪಾಯಿ, ಡಿನೋಟಿಫೈಡ್‌ಗೆ ಒಂದು ಲಕ್ಷದ 90 ಸಾವಿರ ರೂಪಾಯಿ, ಮತ್ತು ನೊಮ್ಯಾಡಿಕ್ ಮತ್ತು ಸೆಮಿ–ನೊಮಾಡಿಕ್‌ಗೆ 98 ಸಾವಿರ ರೂಪಾಯಿ, ಹೀಗೆ ಒಟ್ಟು ಮೂರು ಲಕ್ಷದ 35 ಸಾವಿರ 250 ರೂಪಾಯಿ. ಆ ಮೇಲೆ ಷೆಡ್ಯೂಲ್ಡ್ ಕಾಸ್ಟಿಗೆ 56 ಸಾವಿರ, ಷೆಡ್ಯೂಲ್ಡ್ ಟ್ರೈಬ್ಸ್‌ಗೆ 8 ಸಾವಿರ, ಡಿನೋಟಿಫೈಡ್ ಟ್ರೈಬ್ಸ್‌ಗೆ 20 ಸಾವಿರ, ನೊಮ್ಯಾಡಿಕ್ ಮತ್ತು ಸೆಮಿ ನೊಮ್ಯಾಢಿಕ್‌ಗೆ 12 ಸಾವಿರ. ಹೀಗೆ ಒಟ್ಟಿಗೆ 96 ಸಾವಿರ ರೂಪಾಯಿ ಕೊಟ್ಟಿದ್ದೇವೆ. ಇದರ ಜೊತೆಗೆ 53 ಟ್ರೈನಿಂಗಿಗೆ ಇನ್ ಟೈಲರಿಂಗ್ ಎಂಬ ಕೇಂದ್ರಗಳು ಇವೆ. ಇದರಲ್ಲಿ ಒಂದು ವರ್ಷ ನಾವು ತರಬೇತಿಯನ್ನು ಕೊಡುತ್ತೇವೆ. ಆನಂತರ ಅವರಿಗೆ ಒಂದು ಪರೀಕ್ಷೆಯನ್ನು ಮಾಡಿ, ಅದರಲ್ಲಿ ಪಾಸಾದರೆ ಅವರಿಗೆ ಒಂದು ಹೊಲಿಗೆ ಯಂತ್ರವನ್ನು ಸಹಿತ ಉಚಿತವಾಗಿ ಕೊಡುತ್ತೇವೆ. ಇದನ್ನು ಅನೇಕರು ತೆಗೆದುಕೊಂಡಿದ್ದಾರೆ; ಮತ್ತು ಅದರಿಂದ ಪ್ರಯೋಜನವನ್ನು ಹೊಂದಿದ್ದಾರೆ. ಟ್ರೈನಿಂಗ್ ಸಮಯದಲ್ಲಿ ತಿಂಗಳಿಗೆ 20 ರೂಪಾಯಿ ಸ್ಟೈಫೆಂಡ್ ಕೊಡುತ್ತೇವೆ. ನಾನು ಒಂದು ಸಲ ಈ ಟ್ರೈನಿಂಗ್ ಸೆಂಟರಿಗೆ ಭೇಟಿ ಕೊಟ್ಟಾಗ ನೋಡಿದ ಪ್ರಕಾರ, ಈ ತರಬೇತಿ ಕಾಲವನ್ನು ಒಂದು ವರ್ಷವಿರುವುದನ್ನು ಎರಡು ವರ್ಷ ಮಾಡಬೇಕೆಂದು ಎನಿಸಿತು. ಬಹುಶಃ ಮುಂದಿನ ವರ್ಷದಿಂದ ಎರಡು ವರ್ಷ ಮಾಡುವುದಕ್ಕೆ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಹಾಗೆ ಕಾಯರ್ ಸೆಂಟರ್ಸ್ 5 ಇವೆ. ಅಲ್ಲಿಯೂ ಸ್ಟೈಫೆಂಡ್ 50 ರೂಪಾಯಿ ಕೊಡುತ್ತಿದ್ದೇವೆ. ಇನ್ನು ಟೈಲರಿಂಗ್ ಕಲಿತಮೇಲೆ ಅನೇಕರಿಗೆ ವೃತ್ತಿ ಸಿಗದಿರಬಹುದು. ಅದರಿಂದ ನಾವು ಒಂದು ಟೈಲರಿಂಗ್ ಪ್ರೊಡಕ್ಷನ್ ಸೆಂಟರ್ ಮಾಡಿ ಅವರನ್ನು

(ಶ್ರೀ ಜಿ. ನಾರಾಯಣ ಗೌಡ)

ಅಲ್ಲಿ ತೆಗೆದುಕೊಂಡು ದಿನ ಕೂಲಿ ಕೊಡುತ್ತಿದ್ದೇವೆ. ಅಂಥ ಯೂನಿಟ್ಟುಗಳು 5 ಇವೆ. ನಮ್ಮಲ್ಲಿ ಆಕ್ಯುಪೇಶನಲ್ ಇನ್‌ಸ್ಟಿಟೂಟ್ ಎರಡು ಇವೆ. ಅದರೊಳಗೆ ಟೈಲರಿಂಗ್ ಮತ್ತು ಸ್ಟೆನೋಗ್ರಾಫಿ ಶಿಕ್ಷಣವನ್ನು ಕೊಡುತ್ತಿದ್ದಾರೆ. ಇದರ ಜೊತೆಗೆ ನಮ್ಮಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಮತ್ತು ಬೇರೆ ಪ್ರಿಂಟಿಂಗ್ ಪ್ರೆಸ್‌ಸ್ ಇವೆ ಮತ್ತು ಬೇರೆ ಕಾರ್ಖಾನೆಗಳಿಗೆ ಶೆಡ್ಯೂಲ್ಡ್ ಕಾಸ್ಟ್ ಶೆಡ್ಯೂಲ್ಡ್ ಟ್ರೈಬ್‌ಗಳನ್ನು ಟ್ರೈನಿಂಗಿಗೆ ಕಳಿಸಿಕೊಡುತ್ತೇವೆ. ಅನೇಕ ಸಂದರ್ಭಗಳಲ್ಲಿ ಟ್ರೈನಿಂಗ್‌ಪಡೆದ ಜನರಿಲ್ಲದಿರುವುದರಿಂದ ಅನಾನುಕೂಲವಾಗಿದೆ. ಆ ದೃಷ್ಟಿಯಿಂದ ಟ್ರೈನಿಂಗ್ ಕೊಡುವುದಕ್ಕೋಸ್ಕರ ನಾವು ಸ್ಟೈಪೆಂಡ್ ಕೊಟ್ಟು ಕಳಿಸಿಕೊಡುತ್ತಿದ್ದೇವೆ. ಅವರ ಟ್ರೈನಿಂಗ್ ಸೆಂಟರ್ ಹೀಗೆ ಇವೆ. ಶೆಡ್ಯೂಲ್ಡ್ ಕಾಸ್ಟ್—896, ಶೆಡ್ಯೂಲ್ಡ್ ಟ್ರೈಬ್ 116, ಡಿನೋಟಿಫೈಡ್ 134. Number of trainees undergoing training in Government printing press :

Scheduled Caste	...	74
Scheduled Tribes	...	8
Denotified Tribes	...	3
Nomadic and Semi-Nomadic tribes	...	1
No. of trainees undergoinig training in private printing press :	...	14
No. of trainees undergoing training at Mat Weavers' Co-operative Society Jogichettihally, Bellary District	...	10
Government Electric Factory	...	45
Central Industrial Workshop	...	10
H. A. L.	...	40

ಅವರಿಗೆಲ್ಲಾ ಸ್ಟೈಪೆಂಡ್ ಕೊಡುತ್ತಿದ್ದೇವೆ.

ಆಮೇಲೆ ಕೆಲವು ಮಾನ್ಯ ಸದಸ್ಯರುಗಳು ವಸತಿ ಸೌಕರ್ಯಗಳನ್ನು ಮಾಡಿಕೊಡಲು ಮನೆ ಕೊಡುವುದರ ಬಗ್ಗೆ ಕೆಲವು ಆಕ್ಷೇಪಣೆಗಳನ್ನು ಎತ್ತಿದರು. ನಾವು 1966ರ ವರೆಗೆ ಒಂದು ಮನೆಗೆ ನಾನೂರು ರೂಪಾಯಿಗಳಂದು ಗ್ರಾಂಟು ರೂಪದಲ್ಲಿ ಕೊಟ್ಟು ಇದುವರೆಗೆ ಸುಮಾರು 43 ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಇದೂ ಅಲ್ಲದೆ 1966ರ ಒಳಗೆ ನಾವು ಷೆಡ್ಯೂಲು ಕ್ಯಾಸ್ಟು ಹಾಗೂ ಟ್ರೈಬ್ಸ್‌ಗಳಿಗಾಗಿ ಒಂದು ಹೌಸಿಂಗು ಕಾರ್ಪೋರೇಷನ್ ಮಾಡಿ ಅವರಿಗೆ ಸುಮಾರು ಮೂರು ವರೆ ಕೋಟಿಯಷ್ಟು ಹಣವನ್ನು ಸಾಲವಾಗಿ ಎಲ್. ಐ. ಸಿ. ಮೂಲಕ ತೆಗೆದುಕೊಂಡು ಕೊಡಲಾಯಿತು ಮತ್ತು ಅವರು ಇದರಿಂದ ಸುಮಾರು ಹತ್ತು ಲಕ್ಷದಷ್ಟು ಹಣವನ್ನು ಷೇರು ಕ್ಯಾಪಿಟಲ್‌ಗಾಗಿ ಉಪಯೋಗಿಸಿಕೊಂಡು ಸುಮಾರು ಮೂರು ಲಕ್ಷ ನಲವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮನೆಗಳನ್ನು ಕಟ್ಟಿದ್ದಾರೆ. ಆದರೆ ಇದರ ಬಗ್ಗೆ ಮಾತನಾಡುತ್ತಾ ಅನೇಕ ಸದಸ್ಯರು ಇದರಿಂದ ಏನೂ ಪ್ರಯೋಜನವಿಲ್ಲ ಎಂದು ಹೇಳಿದರು. ನಾನು ಇವೊತ್ತಿನ ದಿವಸ ತಮಗೆ ಒಂದು ವಿಚಾರ ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಅದು 12,888 ಮನೆಗಳಿಗಾಗಿ ಸುಮಾರು 2,47,84,000 ರೂಪಾಯಿಗಳನ್ನು ಇಲ್ಲಿಯವರೆಗೆ ನಾನು ಮಂಜೂರು ಮಾಡಿದ್ದೇನೆ. ಇದರ ಬಗ್ಗೆ ತಾವು ಸ್ವಲ್ಪ ತಿಳಿದುಕೊಳ್ಳಬೇಕು ಎಂದು ಇಲ್ಲಿ ವಿವರಗಳನ್ನು ಹೇಳುತ್ತಿದ್ದೇನೆ. ಇದರ ಜೊತೆಗೆ ನಾವು ಇನ್ನೂರು ರೂಪಾಯಿಗಳಷ್ಟು ಟಿಂಬರನ್ನು ಪುಕ್ಕಟೆಯಾಗಿ ಇವರಿಗೆ ಕೊಡುತ್ತಿದ್ದೇವೆ. ಅನೇಕ ಸಂದರ್ಭಗಳಲ್ಲಿ ಇವು ಸರಿಯಾಗಿ ಉಪಯೋಗವಾಗುತ್ತಿವೆ. ಆದರೆ ಇಲ್ಲಿ ಸದಸ್ಯರು ಫ್ರೀ ಟಿಂಬರು ಎಂದು ಕೊಡುವುದು ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಿಲ್ಲ ಎಂದು ಹೇಳಿದರು. ಎಲ್ಲೋ ಒಂದೆರಡು ಕಡೆಗಳಲ್ಲಿ ಹಾಗಾಗಿರಬಹುದು. ಅಂತಹ ಕಡೆಗಳಿಂದ ದೂರುಗಳು ಬಂದರೆ ಅದನ್ನು ಕೂಡಲೇ ತನಿಖೆ ಮಾಡಿ ಸರಿಯಾದ ರೀತಿಯಲ್ಲಿ ಹಂಚಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಎಲ್ಲೋ ಒಂದು ಕಡೆ ದುರುಪಯೋಗವಾಗುತ್ತಿದೆ ಎಂದು ಎಲ್ಲಾ ಕಡೆಗಳಲ್ಲಿಯೂ ಹಾಗಾಗುತ್ತಿದೆ ಎಂದು ಹೇಳುವುದು ಸರಿಯಾಗಿರುವುದಿಲ್ಲ. ಎಲ್ಲಿ ದುರುಪಯೋಗವಾಗಿದೆ ಎನ್ನುವ ಸನ್ನಿವೇಶಗಳನ್ನು ತನಿಖೆ ಮಾಡಲು ಅಲ್ಲಲ್ಲಿ ಅಧಿಕಾರಿಗಳನ್ನು ಇಡಲಾಗಿದೆ. ಹಿಂದೆ ಗ್ರಾಮಪಂಚಾಯತಿಗಳವರೇ ಸರ್ಟಿಫಿಕೇಟು ಕೊಟ್ಟರೆ ಸಾಕು ಎಂದು ಈ ಫ್ರೀ ಟಿಂಬರನ್ನು ಕೊಡಲಾಗುತ್ತಿತ್ತು. ಈಗ ಇದನ್ನು

ತಪ್ಪಿಸಿ ಎಲ್ಲರೂ ಆಯಾ ಪ್ರದೇಶದಲ್ಲಿರುವ ಬಿ.ಡಿ.ಓ. ರವರ ಮೂಲಕವೇ ಸರ್ಟಿಫಿಕೇಟನ್ನು ಟಿಂಬರಿಗಾಗಿ ತರಬೇಕೆಂದು ಮತ್ತು ಟಿಂಬರು ತೆಗೆದುಕೊಂಡು ಹೋದಮೇಲೆ ಅದನ್ನು ಉಪಯೋಗಿಸಿದ್ದಾರೆಯೋ ಇಲ್ಲವೇ ಎನ್ನುವುದನ್ನು ಬಿ. ಡಿ. ಓ. ರವರು ನೋಡಿ ತನಿಖೆ ಮಾಡಬೇಕೆಂದೂ ವಿಧಾಯಕ ಮಾಡಲಾಗಿದೆ ಮತ್ತು ಎಲ್ಲಾ ಜವಾಬುದಾರಿಗಳನ್ನೂ ಬಿ. ಡಿ. ಓ. ರವರ ಮೇಲೆಯೇ ಹಾಕಿರುವುದರಿಂದ ಹೆಚ್ಚು ದುರುಪಯೋಗವಾಗುವುದಕ್ಕೆ ಈಗ ಅವಕಾಶವಾಗುವುದಿಲ್ಲ ಮತ್ತು ಪರಿಣಾಮಕಾರಿಯಾಗಿ ಇದರ ಕೆಲಸಗಳು ನಡೆಯಬೇಕೆಂದು ಈ ಅಧಿಕಾರಗಳನ್ನೆಲ್ಲಾ ಆಯಾ ಬಿ. ಡಿ. ಓ. ಗಳಿಗೆ ವಹಿಸಲಾಗಿದೆ. ಶ್ರೀಮಾನ್ ದುಗ್ಗಪ್ಪನವರು ಹಾಗೂ ಇನ್ನಿಬ್ಬರು ಸದಸ್ಯರು ಇಲ್ಲಿ ಹೇಳಿದರು, ಕಾರ್ಪೊರೇಷನ್ ಎಂದು ಮಾಡಿ ಇದಕ್ಕೆ ಒಬ್ಬರು ಡೆವಲಪ್‌ಮೆಂಟು ಕಮಿಷನರು ಎಂದು ದೊಡ್ಡದಾಗಿ ಮಾಡಿದ್ದೀರಿ, ಹಿಂದೆ ಇದು ಇರಲಿಲ್ಲ ಈಗ ಏಕೆ ಮಾಡಲಾಯಿತು ಎಂದು. ಇದು ಪ್ರಥಮತಃ 1966 ರಲ್ಲಿ ಪ್ರಾರಂಭವಾಗಿರುವುದು. ಬಹುಶಃ ಮೂರು ವರ್ಷಗಳ ಕಾಲ ಇವರು ಸರಕಾರದ ಕಡೆಯಿಂದ ನೇಮಕವಾಗಿರುವ ಅಧಿಕಾರಿಗಳಾಗಿರಬಹುದು. ಮೂರು ವರ್ಷಗಳು ಕಳೆದ ನಂತರ ಇದನ್ನು ಖಾಸಗಿಯವರೇ ವಹಿಸಿಕೊಂಡು ಇನ್ನೂ ಚೆನ್ನಾಗಿ ನಡೆಸಬಹುದು. ಇದನ್ನು ಮಾನ್ಯ ಸದಸ್ಯರಾದ ಶ್ರೀ ದುಗ್ಗಪ್ಪನವರು ತಿಳಿದೂ ತಿಳಿದೂ ಸುಮ್ಮನೆ ಇಲ್ಲಿ ಒಂದು ಟೀಕೆ ಮಾಡಬೇಕೆಂದು ಮಾಡುತ್ತಿದ್ದಾರೆ.

ಆಮೇಲೆ ಇದರ ಜೊತೆಗೆ ಬಹಳ ಬಡವರಾಗಿರುವ ಹರಿಜನರಿಗಾಗಿ ಅಶಕ್ತರಾಗಿರುವವರು ಹಾಗೂ ನಿರ್ಗತಿಕರಾಗಿರುವವರಿಗೆ ಅನುಕೂಲ ಮಾಡುವುದಕ್ಕಾಗಿ ಸರಕಾರದವರು ಸಾಧ್ಯವಾದಷ್ಟು ಏನಾದರೂ ಮಾಡೋಣ ಎಂದು ಷೆಡ್ಯೂಲು ಕ್ಯಾಸ್ಟಿನವರಿಗಾಗಿ 50 ಸಾವಿರ ಷೆಡ್ಯೂಲು ಟ್ರೈಬ್ಸ್ ನವರಿಗಾಗಿ 50 ಸಾವಿರ ಮತ್ತು ಡೀನೋಟಿಫೈಡ್ ಟ್ರೈಬ್ಸ್‌ನವರಿಗಾಗಿ 50 ಸಾವಿರ ಎಂದು ಬಡ್ಜೆಟ್ಟಿನಲ್ಲಿ ಇದಕ್ಕಾಗಿ ಪ್ರತ್ಯೇಕವಾಗಿ ತೆಗೆದು ಇರಿಸಲಾಗಿತ್ತು. ಒಂದು ವೇಳೆ ಒಂದೊಂದು ತಾಲ್ಲೂಕಿನಲ್ಲಿ ಇಂತಹ ಜನಾಂಗದವರು ಒಬ್ಬಿಬ್ಬರು ಬರಬಹುದು ಎಂದು ಸರ್ವೆ ಸಾಧಾರಣವಾಗಿ ಇದನ್ನು ಪ್ರಜಾಸಂಖ್ಯೆಯ ಮೇಲೆ ಹಂಚಿಕೆ ಮಾಡಿದ್ದೇವೆ. ಒಂದು ವೇಳೆ ಈ ರೀತಿ ತೆಗೆದು ಇಟ್ಟಿರುವ ಹಣದಿಂದ ತೀರ ನಿರ್ಗತಿಕರಾಗಿರುವವರಿಗೆ ಸ್ವಲ್ಪಮಟ್ಟಿಗಾದರೂ ಪ್ರಯೋಜನವಾಗಲಿ ಎಂದು ಒಂದು ದೃಷ್ಟಿಯಿಂದ ಇದನ್ನೆಲ್ಲಾ ಮಾಡಲಾಗಿದೆ. ಈಚೆಗೆ ತಮಗೆಲ್ಲಾ ತಿಳಿದಂತೆ ಚಿತ್ರದುರ್ಗದಲ್ಲಿ ನಾಲ್ಕು ಮನೆಗಳು ಸುಟ್ಟು ಹೋದವು. ಇಂತಹ ಸಂದರ್ಭಗಳಲ್ಲಿ ಈಗ ನಾವು ತೆಗೆದು ಇಟ್ಟಿರುವ ಹಣದಿಂದ ಸ್ವಲ್ಪಮಟ್ಟಿನ ಸಹಾಯವನ್ನು ಹಿಂದುಳಿದ ಈ ಜನಕ್ಕೆ ಕೊಡಲು ಅನುಕೂಲವಾಗಬಹುದು ಎಂದು ಇಷ್ಟು ಹಣವನ್ನು ಬೇರೆ ನಿಗದಿಮಾಡಿ ಇಡಲಾಗಿದೆ ಮತ್ತು ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ ಅನುಕೂಲವಾಗಲಿ ಎಂದು ಇಂತಹ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ಮಾಡಬಹುದು ಎಂದು ಇದನ್ನು ಮಾಡುತ್ತಿದ್ದೇವೆ.

ಕಡೆಯದಾಗಿ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಹೇಳುತ್ತಾ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಇಲ್ಲಿ ಏನು ಹೇಳಿದರೋ ಅದು ಬಹುಶಃ ಸೂಕ್ತವಾಗಿದೆ. ಇದನ್ನು ನಾವು ತಡೆಗಟ್ಟುವುದಕ್ಕಾಗಿ ಪ್ರಯತ್ನಗಳನ್ನೇನೋ ಮಾಡುತ್ತಿದ್ದೇವೆ. ಸರ್ವೇಸಾಧಾರಣವಾಗಿ ಇದನ್ನು ಮಾಡುವುದರಿಂದ ಎಷ್ಟು ಪ್ರಯೋಜನವಾಗಿದೆ ಎನ್ನುವುದಕ್ಕೆ ಬೇಕಾದರೆ ಇದರ ಬಗ್ಗೆ ಎಲ್ಲ ಅಂಕಿ ಅಂಶಗಳನ್ನು ಕೊಡುತ್ತೇನೆ. ಇದರಿಂದ ಎಷ್ಟುಮಟ್ಟಿನ ಅಸ್ಪೃಶ್ಯತಾ ನಿವಾರಣೆಯಾಗಿದೆ ಎನ್ನುವುದು ತಮಗೆಲ್ಲಾ ಗೊತ್ತಾಗುತ್ತದೆ. ಆಮೇಲೆ ಮಾನ್ಯ ಸದಸ್ಯರಾದ ಶ್ರೀಮಾನ್ ಪುಟ್ಟರಂಗನಾಥರವರು ಅಸ್ಪೃಶ್ಯತಾ ನಿವಾರಣೆ ಬಗ್ಗೆ ಪೂಜ್ಯ ಮಹಾತ್ಮಾ ಗಾಂಧಿಯವರು ಯಾವ ರೀತಿ ಮಾಡಬೇಕೆಂದು ಹೇಳಿದ್ದರೋ ಅದರಂತೆ ಅಸ್ಪೃಶ್ಯತಾ ನಿವಾರಣೆ ಮಾಡಲು ಇನ್ನೂ ಸಾಧ್ಯವಾಗಿಲ್ಲ ಎಂದು ಹೇಳಿದರು. ನಾನು ನೋಡಿದಂತೆ ಕೆಲವು ಕಡೆಗಳಲ್ಲಿ ಪಂಚಾಯತಿಗಳವರು ಬಹಳ ಉಪಯುಕ್ತವಾದ ಕೆಲಸಕಾರ್ಯಗಳನ್ನು ಇದರ ಬಗ್ಗೆ ಮಾಡಿದ್ದಾರೆ. ನಾನೂ ಕೂಡ ಒಂದೆರಡು ಪಂಚಾಯತಿಗಳನ್ನು ಹೋಗಿ ನೋಡಿಕೊಂಡು ಬಂದಿದ್ದೇನೆ. ಹೊನ್ನೆನಹಳ್ಳಿ ಪಂಚಾಯತಿಯನ್ನು ನೋಡಿಕೊಂಡು ಬಂದಿದ್ದೇನೆ, ಅಲ್ಲಿರುವ ಪಂಚಾಯತಿ ಚೇರ್ಮನ್ನರವರು ಮತ್ತು ಇತರ ಸದಸ್ಯರುಗಳು ಬಹಳ ಉತ್ತಮವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ನನಗೆ ಅವರು ಮಾಡಿರುವ ಕೆಲಸವನ್ನು ನೋಡಿ ಬಹಳ ಒಪ್ಪಿಗೆಯಾದುದರಿಂದ ಅವರ ಕೆಲಸಗಳನ್ನು ಇನ್ನೂ ಚೆನ್ನಾಗಿ ಮಾಡಲು ಅನುಕೂಲವಾಗುವಂತೆ ನಾನು ಒಂದು ಸಾವಿರ ರೂಪಾಯಿಗಳಷ್ಟು ದುಡ್ಡನ್ನು ಹೆಚ್ಚಾಗಿ ಕೊಟ್ಟಿದ್ದೇನೆ. ಇದನ್ನೆಲ್ಲಾ ಇನ್ನೂ ಚೆನ್ನಾಗಿ ಪರಿಶೀಲನೆ ಮಾಡಿ ನೋಡೋಣ. ಮುಂದೆ ಬೇಕಾದರೆ ಇದನ್ನು ತೆಗೆಯೋಣ ಎಂದರೆ ಮುಂದೆ ನೋಡೋಣ.

ಹಾಗೇ ಅನೇಕ ಮಾನ್ಯ ಸದಸ್ಯರುಗಳು ಇಲ್ಲಿ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಮಹಾತ್ಮಗಾಂಧಿಯವರು ಏನು ಹೇಳಿದ್ದಾರೆ ಎನ್ನುವುದಕ್ಕಾಗಿ ಅವರ ಹೆಸರನ್ನು ಎತ್ತಿ ಇಲ್ಲಿ ಹೇಳಿದರು. ಅವರು

(ಶ್ರೀ ಬಿ. ನಾರಾಯಣ ಗೌಡ)

ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಏನು ಹೇಳಿದ್ದಾರೆ ಎನ್ನುವುದಕ್ಕೆ ಮಾನ್ಯ ಸದಸ್ಯರು ಮುಂದೆ ಅವರೇ ಹೇಳಿರುವ ಕೆಲವು ಮಾತುಗಳನ್ನು ಇಲ್ಲಿ ಓದುವುದು ಸೂಕ್ತ ಎಂದು ಇಲ್ಲಿ ಕೆಲವು ವಾಕ್ಯಗಳನು ಮಾತ್ರ ಇಲ್ಲ ಓದುತ್ತೇನೆ.

7-00 P.M.

"ದೇವಾಲಯದಲ್ಲಿ ಹೋಗಿ ಪೂಜೆ ಮಾಡುವ ಹಕ್ಕು ನಿಮಗೂ ಇರಲೇ ಬೇಕು. ಪಾಠ ಶಾಲೆಗಳಲ್ಲಿ ಇತರ ಜಾತಿಯ ಮಕ್ಕಳ ಜೊತೆಗೆ ವ್ಯಾಸಂಗ ಮಾಡುವ ಅಧಿಕಾರ ಇವರಿಗೂ ಇರಬೇಕು. ಇದು ಅಸ್ಪೃಶ್ಯತೆಯ ಬಗ್ಗೆ ಇರುವ ನನ್ನ ವಿವರಣೆ."

ಬೆಳಗಾಂನಲ್ಲಿ ಮಾಡಿದ ಭಾಷಣ ಯಂಗ್ ಇಂಡಿಯಾದ 22-1-19೨೦ ರ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಆ ಮೇಲೆ ಅನೇಕ ಮಾನ್ಯ ಸದಸ್ಯರು ಬೀರಪ್ಪ ಕಮಿಟಿ ರಿಪೋರ್ಟ್ ಪ್ರಸ್ತಾಪ ಮಾಡಿ ಅದರ ಶಿಫಾರಸ್ಸುಗಳ ಬಗ್ಗೆ ಏನೂ ಮಾಡಲಿಲ್ಲ ಎಂದು ಹೇಳಿದ್ದಾರೆ. ಬೀರಪ್ಪ ಕಮಿಟಿಯು 22 ಶಿಫಾರಸ್ಸುಗಳನ್ನು ಮಾಡಿದ್ದಾರೆ. ಅದರಲ್ಲಿ 11 ಶಿಫಾರಸ್ಸುಗಳನ್ನು ನಾವು ಈಗಾಗಲೇ ಕಾರ್ಯಗತ ಮಾಡಿದ್ದೇವೆ ಇನ್ನು ಉಳಿದ ಶಿಫಾರಸ್ಸುಗಳಲ್ಲಿ 3 ಶಿಫಾರಸ್ಸುಗಳನ್ನು ಶೇಕಡ 50 ರಿಂದ 75 ರ ವರೆಗೆ ಕಾರ್ಯಗತ ಮಾಡಿದ್ದೇವೆ. ಇನ್ನುಳಿದ 8 ಶಿಫಾರಸ್ಸುಗಳು ಪರಿಶೀಲನೆಯಲ್ಲಿವೆ. ಆದುದರಿಂದ ನಾವು ಏನೂ ಮಾಡಲಿಲ್ಲ ಎಂದು ಹೇಳಿದ್ದು ಸರಿಯಲ್ಲ. ಇದರ ಹೊಣೆಗಾರಿಕೆ ಸರಕಾರದ ಮೇಲೆ ಇದೆ, ಸಾರ್ವಜನಿಕರ ಮೇಲೆ ಇದೆ, ಮುಂಬಂದರ ಮೇಲೆ ಹೊಣೆಗಾರಿಕೆ ಇದೆ. ಸಮಾಜ ಸುಧಾರಣೆಯ ಕೆಲಸದಲ್ಲಿ ಪ್ರತಿಯೊಬ್ಬರೂ ತಮ್ಮ ಕೈಲಾದ ಮಟ್ಟಿಗೆ ಪ್ರಯತ್ನ ಮಾಡಬೇಕಾದುದು ಅಗತ್ಯ ಎಂದು ನಾವು ಮನಗಂಡಿದ್ದೇವೆ. ಇದನ್ನು ತಿಳಿದುಕೊಂಡು ನಾವು ಎಲ್ಲ ರೀತಿಯ ಸಹಾಯ ಸರಕಾರ ನೀಡಲು ಸಿದ್ಧರಾಗಿದ್ದೇವೆ. ಮುಖ್ಯವಾಗಿ ಈ ಸಮಾಜ ಸುಧಾರಣೆಯ ಕೆಲಸ ಪರಿಣಾಮಕಾರಿಯಾಗಬೇಕೆಂದು ವಿದ್ಯಾಭ್ಯಾಸ ಅನುಕೂಲ ಒದಗಿಸಿಕೊಡಲು ಅನೇಕ ಕಾರ್ಯ ಕೈಕೊಂಡಿದ್ದೇವೆ. ಬೋರ್ಡಿಂಗ್ ಚಾರ್ಜಸ್ ವಿಚಾರದಲ್ಲಿ ಒಬ್ಬ ವಿದ್ಯಾರ್ಥಿ ಹಾಸ್ಟೆಲ್ಲಿನಲ್ಲಿ ಕಾಶನ್ ಮನಿ ಕೊಡಬೇಕಾಗುತ್ತದೆ, ಇಲ್ಲವಿದ್ದರೆ ಅವನನ್ನು ಹಾಸ್ಟಲ್ಲಿಗೆ ಸೇರಿಸುವುದಿಲ್ಲ. ಇದಕ್ಕಾಗಿ ಐದೂವರೆ ಲಕ್ಷ ರೂಪಾಯಿ ಕಾಶನ್ ಮನಿ ವಿದ್ಯಾರ್ಥಿಗಳಿಗೋಸ್ಕರ ಕೊಟ್ಟು ಆಮೇಲೆ ರೀಇಂಬರ್ಸ್ ಮಾಡಿಕೊಂಡಿದ್ದೇವೆ. ಈ ರೀತಿ ಸಹಾಯ ಮಾಡಿದ್ದೇವೆ. ಬೋರ್ಡಿಂಗ್ ಫೀಜ್ 100 ರೂಪಾಯಿ ಇಲ್ಲವೆ 75 ರೂಪಾಯಿ ವಸೂಲು ಮಾಡುತ್ತಿದ್ದಾರೆ. 75 ರೂಪಾಯಿಗೆ ಮೇಲ್ಪಟ್ಟು ಇರುವುದನ್ನು 100 ರೂಪಾಯಿವರೆಗೆ ನಾವು ಕೊಡುವುದಕ್ಕೆ ಸಿದ್ಧರಾಗಿದ್ದೇವೆ.

ನಾನು ಈಗಾಗಲೇ ಹೇಳಿದ ಹಾಗೆ ಷೆಡ್ಯೂಲ್ಡ್ ಕ್ಯಾಸ್ಟ್ ಹಾಸ್ಟೆಲ್ಲುಗಳಲ್ಲಿ ಪ್ರಾಯೋಗಿಕವಾಗಿ ಕೋಚಿಂಗ್ ಇಂಟ್ರಡ್ಯೂಸ್ ಮಾಡುವುದಕ್ಕೆ ಈ ವರ್ಷದಿಂದ ಪ್ರಯತ್ನ ಪಡುತ್ತೇವೆ. ಎಂಟು ಹಾಸ್ಟೆಲ್ಲುಗಳಲ್ಲಿ ಪ್ರಾಯೋಗಿಕವಾಗಿ ನಡೆಸಿಕೊಂಡು ಬರುತ್ತೇವೆ. ಗ್ರಾಂಟ್ಸ್ ಡಿಜರ್ವಿಂಗ್ ಇನ್ಸ್ಟಿಟ್ಯೂಷನ್ಸ್‌ಗಳಿಗೆ ಗ್ರಾಂಟ್ಸ್ ಕೊಡುವುದಕ್ಕೆ ಹಿಂತೆಗೆಯುವುದಿಲ್ಲ. ಉತ್ತಮ ಅರ್ಹತೆ ಇರುವ ಇನ್ಸ್ಟಿಟ್ಯೂಷನ್‌ಗಳಿಗೆ ಈಗಾಗಲೇ ದುಡ್ಡು ಕೊಟ್ಟಿದ್ದೇವೆ ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ.

ಕಡೆಯದಾಗಿ ಅನೇಕ ಷೆಡ್ಯೂಲ್ಡ್ ಕಾಸ್ಟ್, ಷೆಡ್ಯೂಲ್ ಟ್ರೈಬ್ಸ್‌ಗೆ ಸಂಬಂಧಪಟ್ಟವರಾ ಗ್ರಾಜ್ಯುಯೇಟ್ಸ್ ಲಾಯರುಗಳಾಗುವುದಕ್ಕೆ ಪುಸ್ತಕ ಭಂಡಾರ ಸಹಾಯಮಾಡಿ ಎಂದು ನಮ್ಮಲ್ಲಿ ಕೇಳುತ್ತಿದ್ದಾರೆ. ಇದನ್ನು ಪರಿಶೀಲನೆ ಮಾಡಿ ನೋಡಲು ಪುಸ್ತಕ ಬಂಢಾರಕ್ಕೆ ಸಹಾಯ ಮಾಡುವುದಕ್ಕಿಂತ ಎನ್‌ರೋಲ್‌ಮೆಂಟ್ ಫೀಜ್ ಕೊಡುವುದು ಒಳ್ಳೆಯದು ಎಂದು ಗೊತ್ತಾಗಿದೆ. ಯಾಕಂದರೆ, ಪುಸ್ತಕ ಬಂಢಾರಕ್ಕೆ ಸಹಾಯ ಕೊಟ್ಟಿರುವುದರಲ್ಲಿ ಪರೀಕ್ಷೆಮಾಡಿ ನೋಡಿದಲ್ಲಿ ಅವರು ಪುಸ್ತಕಗಳನ್ನು ಇಟ್ಟುಕೊಂಡಿಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ.

ಶ್ರೀಮಾನ್ ಮುನಿಯಪ್ಪನವರು ಒಂದು ಸೂಚನೆ ಮಾಡಿದರು. ತಾಲ್ಲೂಕಿನಲ್ಲಿ ಇರತಕ್ಕಂಥ ಹಾಸ್ಟೆಲ್ಲುಗಳನ್ನು ಸೂಪರ್‌ವೈಜ್ ಮಾಡುವುದಕ್ಕೆ ಒಂದು ತಾಲ್ಲೂಕ ಕಮಿಟಿಮಾಡಬೇಕೆಂದು ಅವರು ಹೇಳಿದರು. ಮುಂದಿನ ವರ್ಷದಿಂದ ಇದನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ. ಮಾನ್ಯ ಸದಸ್ಯರು ಅನೇಕ ವಿಷಯಗಳ ಬಗ್ಗೆ ಸೂಚನೆ ಮಾಡಿದ್ದಾರೆ. ಇಷ್ಟೇ ಅಲ್ಲದೆ ಅನೇಕ ಕತ್ತರಿ ನಿರ್ಣಯಗಳ ಮೂಲಕ ಸ್ಥಳೀಯ ವಿಷಯಗಳನ್ನು ತಿಳಿಸಿ ಸೂಚನೆ ಕೊಟ್ಟಿದ್ದಾರೆ. ಅವುಗಳನ್ನು ಪರಿಶೀಲನೆ ಮಾಡಿ ಗಮನಕ್ಕೆ ತೆಗೆದುಕೊಳ್ಳುತ್ತೇವೆ. ನಮಗೆ ಎಷ್ಟು ಮಾಡುವುದಕ್ಕೆ ಸಾಧ್ಯವೋ

ಅಷ್ಟೂ ಮಾಡುತ್ತೇವೆ. ಯಾಕೆಂದರೆ, ಹಾಸಿಗೆ ಇದ್ದಷ್ಟು ಕಾಲು ಚಾಚಬೇಕಾಗುತ್ತದೆ. ಇದು ಎಲ್ಲರಿಗೂ ಗೊತ್ತಿದೆ.

ಈ ಬೇಡಿಕೆಯನ್ನು ಮಾನ್ಯ ಸದಸ್ಯರು ಒಮ್ಮತದಿಂದ ಅಂಗೀಕರಿಸುತ್ತಾರೆಂದು ನಿರೀಕ್ಷಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ನೌಕರಿಯಲ್ಲಿ ಇರತಕ್ಕ ಹರಿಜನರ ಪರ್ಸೆಂಟೇಜ್ ಎಷ್ಟೆಷ್ಟು ಎನ್ನುವುದನ್ನು ಹೇಳಲಿಲ್ಲ ದಯವಿಟ್ಟು ಅದನ್ನು ಹೇಳಬೇಕು.

ಶ್ರೀ ಜಿ. ನಾರಾಯಣ ಗೌಡ.—ಈಗ ನಮ್ಮಲ್ಲಿ ಇರುವುದು 1965ರ ಕೊನೆಯವರೆಗಿನ ಅಂಕಿ ಅಂಶಗಳು. ಒಟ್ಟು 140 ಯುನಿಟ್ಟುಗಳಲ್ಲಿ 57 ಯೂನಿಟ್ಟುಗಳ ಪರಿಶೀಲನೆ ನಡೆಸಿದ್ದೇವೆ. ಕ್ಲಾಸ್ 4 ನೌಕರಿಗಳನ್ನೇ ಶೇಕಡ 15ರಷ್ಟು ಷೆಡ್ಯೂಲ್ ಕ್ಯಾಸ್ಟಿನವರಿಗೆ ಕೊಡುವುದಕ್ಕೆ ಪ್ರಯತ್ನ ಪಟ್ಟಿಲ್ಲ ಎಂದು ಅವರು ಹೇಳಿದರು. ಪರಿಶೀಲನೆ ಮಾಡಿದ 57 ಯೂನಿಟ್ಟುಗಳ ಲೆಕ್ಕಾಚಾರದಲ್ಲಿ ಇದು 14·32 ಪರ್ಸೆಂಟು ಇದೆ. 1965ರ ಅಂಕಿಅಂಶಗಳ ಪ್ರಕಾರ ಕ್ಲಾಸ್ 1 ಇದರಲ್ಲಿ 3·72 ಪರ್ಸೆಂಟ್ ಕ್ಲಾಸ್ 2 ನಲ್ಲಿ 4·03 ಪರ್ಸೆಂಟ್ ಮತ್ತು ಕ್ಲಾಸ್ 3 ನಲ್ಲಿ 6·29 ಪರ್ಸೆಂಟ್ ಇದೆ.

Sri J. P. SARWESH.—There are only two questions, Sir.

The first question is, the Department was spending on each child 10 nP. to 20 nP. in Nursery Schools. Why this amount is reduced now ?

The second question is, according to the directions, of the Department, denotified tribes formed milk societies in Sedum, they registered it. Unfortunately, those societies which were not registered were given in Gulbarga district, but those societies which were registered are not given. Why this discrimination ?

ಶ್ರೀ ಜಿ. ನಾರಾಯಣ ಗೌಡ.—ಕೇರ್ ಸಂಸ್ಥೆಯಿಂದ ಮತ್ತು ಬೇರೆ ಸಂಸ್ಥೆಗಳಿಂದ ಅವರಿಗೆ ಅನೇಕ ರೀತಿಯ ಸಹಾಯ ದೊರೆಯುತ್ತಾ ಇರುವುದರಿಂದ ಈಗ ಅಷ್ಟು ಕಡಿಮೆ ಮಾಡಿದ್ದೇವೆ.

ಸೇಡಂನಲ್ಲಿ ಏಕೆ ಡೈರಿ ಫಾರಂ ಕೊಟ್ಟಿಲ್ಲ ಎಂದರೆ, ನನಗೆ ತಿಳಿದಹಾಗೆ—Subject to correction ಅಲ್ಲಿ ಯಾವ ಸಂಘದ ವಿಷಯವನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ವಶಕ್ಕೆ ಜಮಾನು ಇನ್ನೂ ಬಂದಿಲ್ಲ. ಆ ಜಮೀನು ಬರದೆ ಇರುವುದರಿಂದ ಜಮೀನು ಬರುವ ವರೆಗೂ ಸ್ವಲ್ಪ ಸಾವಕಾಶವಾಗಿದೆ ಎಂದು ತಿಳಿಸಲು ಇಚ್ಛೆ ಪಡುತ್ತೇನೆ.

ಶ್ರೀ ಪಿ. ಅಂಜನಪ್ಪ (ಪಾವಗಡ).—ಹರಿಜನರು, ಗಿರಿಜನರು ಇವರಲ್ಲಿ ಓದಿರುವವರಿಗೆ ಕೆಲಸ ಸಿಕ್ಕುವುದು ಕಷ್ಟವಾಗಿದೆ. ಅವರನ್ನೆಲ್ಲ ಮಿಲಟರಿಗೆ ಸೇರಿಸುತ್ತೀರೋ, ಏನು ಮಾಡುತ್ತೀರಿ ಸ್ವಾಮಿ !

ಶ್ರೀ ಜಿ. ನಾರಾಯಣ ಗೌಡ.—ಇಷ್ಟಪಟ್ಟವರು ಸೇರಬಹುದು.

ಶ್ರೀ ಐ. ಸೋಮಶೇಖರಪ್ಪ.—ನಿಮ್ನ ವರ್ಗದವರ ಅಭಿವೃದ್ಧಿಗೋಸ್ಕರ ಮನೆಗಳನ್ನು ಕಟ್ಟಲು ಕೊಡುವ 400 ರೂಪಾಯಿಗಳು ಬಹಳ ಕಡಮೆ ಆಗಿರುವುದರಿಂದ 700 ರೂಪಾಯಿ ವರೆಗೆ ಹೆಚ್ಚಿಸ ಬೇಕೆಂದು ಸರ್ಕಾರ ಯೋಚನೆ ಮಾಡುತ್ತಿರುವುದಾಗಿ ಕಳೆದ ವರ್ಷ ತಿಳಿಸಿದ್ದರು. ಆ ಬಗ್ಗೆ ಸರ್ಕಾರದ ನಿರ್ಧಾರವೇನಾಗಿದೆ ಎಂದು ತಿಳಿಸುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ಹರಿಜನ ಗಿರಿಜನರಿಗೆ ಮನೆಗಳಿಗಾಗಿ 50,000 ರೂಪಾಯಿ ಇಟ್ಟುಕೊಂಡು ಒಂದೊಂದು ಮನೆಗೆ 700 ರೂಪಾಯಿಗಳನ್ನೂ, ಫ್ರೀ ಟಿಂಬರ್ 200 ರೂಪಾಯಿ ಗಳ ಕಿಮ್ಮತ್ತಿನದನ್ನು ಕೊಡುತ್ತಿದ್ದೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಅಸ್ಪೃಶ್ಯತೆ ನಿವಾರಣೆ ಬಗ್ಗೆ ಹೇಳುತ್ತ ಸಾಕಷ್ಟು ನಿವಾರಣೆ ಮಾಡಿದ್ದೇವೆಂದು ಹೇಳಿದರು. ಚನ್ನರಾಯಪಟ್ಟಣ ತಾಲ್ಲೂಕು ಹೊನ್ನಮಾರನಹಳ್ಳಿ ಯಲ್ಲಿ ನಡೆದ ಪ್ರಕರಣದಲ್ಲಿ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಿಗೂ ಗೃಹಮಂತ್ರಿಗಳಿಗೂ ಅರ್ಜಿ ಸಲ್ಲಿಸಿದ್ದೇನೆ. ಡಿಸೆಂಬರ್ ತಿಂಗಳಿನಲ್ಲಿ ಕೊಟ್ಟ ಅರ್ಜಿಗೆ ಗೃಹಮಂತ್ರಿಗಳು ಈ ತಿಂಗಳು ಉತ್ತರ ಕೊಡುತ್ತಿದ್ದಾರೆ ಮತ್ತು ಈ ಬಗ್ಗೆ ಅವರು ಯಾವ ರೀತಿ ಕ್ರಮ ತೆಗೆದುಕೊಂಡಿದ್ದಾರೆ, ಏನು ಪರಿಶೀಲನೆ ಮಾಡಿದ್ದಾರೆ, ನೀವು ತೆಗೆದುಕೊಳ್ಳುವ ಕ್ರಮವೇನು, ಅವನಿಗೆ ಪರಿಹಾರ ದೊರಕಿದೆಯೋ ಎಂದು ಹೇಳುವುದಕ್ಕೆ ಸಾಧ್ಯವೇ ಸ್ವಾಮಿ ?

Accession No. 4854
Date

ಶ್ರೀ ಜಿ. ನಾರಾಯಣ ಗೌಡ.—ಅದು ಗೃಹ ಶಾಖೆಗೆ ಸಂಬಂಧಪಟ್ಟ ವಿಚಾರ. ಅವರಿಗೆ ನಾವು ಕಳಿಸಿಕೊಡುತ್ತೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ವಿದ್ಯಾರ್ಥಿಗಳಿಗೆ ಈಗ ಕೊಡತಕ್ಕ ಸ್ಕಾಲರ್‌ಷಿಪ್ ಬಹಳ ಕಡಮೆಯಾಗಿರುವುದರಿಂದ, ಈಗಿನ ಕಾಲದಮಟ್ಟಿಗೆ ಧಾರಣೆ ಏರಿರುವುದರಿಂದ ಅದನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ನಾನಾಗಲೇ ಹೇಳಿದೆ. ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಾಗಿದೆ. ಅದನ್ನೆಲ್ಲ ಏಕರೂಪವಾಗಿ ಮಾಡಿ ಒಂದು ವೇಳೆ ಹೆಚ್ಚಿಸುವುದಕ್ಕೆ ಸಾಧ್ಯವಿದ್ದರೆ ನೋಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಸಿದ್ದವೀರಪ್ಪನವರು ಮಾತನಾಡುತ್ತ ಹರಿಜನರ ಕಲ್ಯಾಣಾಭಿವೃದ್ಧಿಗಾಗಿ 90 ಲಕ್ಷ ರೂಪಾಯಿ ಖರ್ಚು ಮಾಡುತ್ತ ಇರುವುದು ಬಹಳ ಕಡಮೆ ಇರುವುದರಿಂದ ಅದನ್ನು ಐದು ಕೋಟಿ ರೂಪಾಯಿಗಳಿಗಾದರೂ ಹೆಚ್ಚಿಸಬೇಕು ಎಂದು ಹೇಳಿದರು. ಅದನ್ನು ಏನು ಮಾಡುತ್ತೀರಿ ? ಪ್ರತಿ ಇಲಾಖೆಯಲ್ಲಿಯೂ 18 ಪರ್ಸೆಂಟ್ ಕೆಲಸಗಳನ್ನು ಕೊಡಿಸಿಕೊಡುವುದಕ್ಕೆ ಏನು ಮಾಡುತ್ತೀರಿ ?

SrI G. NARAYANA GOWDA.—It is a suggestion for action, Sir.

ಶ್ರೀ ಎ. ರಾಮಚಂದ್ರ.—ಟೈಲರಿಂಗ್ ಪ್ರೊಡಕ್ಷನ್ ಸೆಂಟರಿನಲ್ಲಿ ಹಣ ಕೊಡುವಾಗ 25 ಪರ್ಸೆಂಟ್ ಖೋತಾ ಮಾಡಿಕೊಡುತ್ತಿದ್ದಾರೆ. ಇದರಿಂದ ಸುಮಾರು 15 ರೂಪಾಯಿ ಬರುತ್ತದೆ. ಇದನ್ನು ಪೂರ್ತಿಯಾಗಿ ಕೊಡಬಾರದೇ ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಎಸ್. ಅರಕೇರಿ.—ಕಳೆದ ಐದಾರು ವರ್ಷಗಳಲ್ಲಿ ಸಾವಿರಾರು ಪದವೀಧರರು, ಹತ್ತಾರು ಸಾವಿರ ಮೆಟ್ರಿಕ್ಯುಲೇಟ್ಸ್ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ರಿಜಿಸ್ಟರ್ ಮಾಡಿಸಿ ಕೆಲಸವಿಲ್ಲದೆ ಒದ್ದಾಡುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಯಾವರೀತಿ ಪರಿಹಾರ ಮಾಡಬಹುದೆಂದು ವಿಚಾರ ಮಾಡುತ್ತೀರಾ ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಇವಾಲ್ಯುಯೇಷನ್ ಸೆಲ್ ಇದೆ. ಅವರು ಇದನ್ನೆಲ್ಲ ನೋಡುತ್ತಾರೆ.

Mr. CHAIRMAN.—The question is :

"That a sum not exceeding Rs. 3,24,99,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969 in respect of 'Miscellaneous Social and Developmental Organisations'."

The motion was adopted.

Mr. CHAIRMAN.—The motion is adopted and the demand granted.

The House will now adjourn and re-assemble at 1.00 P.M. tomorrow.

The House adjourned at Fifteen Minutes past Seven of the Clock to meet again at One of the Clock on Friday, the 5th April 1968.

WD 10764—GPB—600—16-7-1968

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE THIRTY-FOURTH DAY

OF THE

THIRD SESSION

OF THE

FOURTH LEGISLATIVE ASSEMBLY

SATURDAY, 6TH APRIL 1968

CHAITRA 17, 1890 (SAKA)

Vol. XII—No. 3

BANGALORE :
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1968

Price : 25 Paise

MYSORE LEGISLATIVE ASSEMBLY

Saturday, 6th April 1968.

The House met in the Assembly Chamber, Vidhana Soudha, Bangalore, at Thirty Minutes past Eight of the Clock.

MR. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

Taking over of Roads in the Wet Land areas of Hospet

416. SRI R. NAGAN GOUDA (Hospet).—

Will the Minister for Public Works be pleased to state :—

(*a*) whether the roads in the wet land areas of Hospet taluk have been taken over by Government as Government roads;

(*b*) whether they received representation for their repairs ;

(*c*) whether the Executive Engineer, Bellary has submitted proposals for their repairs ;

(*d*) if so, whether any amounts have been sanctioned for their repairs ;

(*e*) whether it has come to the notice of the Government that during the cane crushing season there is very heavy traffic on these roads ;

(*f*) when they propose to take up the repairs of these roads ?

A.—SRI VEERENDRA PATIL (Minister for Public Works).—

(*a*) Yes.

(*b*) Yes.

(*c*) Yes.

(*d*) Yes.

(*e*) Yes.

(*f*) These roads are being repaired to the extent of funds available.

Sri R. NAGAN GOUDA.—In answer to (*d*) it is stated that some amounts have been sanctioned for the current year ending 31st of March this year. How much of that amount has been spent?

†Sri VEERENDRA PATIL.—We do not sanction specific amount for the maintenance of these roads, because when the roads are formed and handed over to the P.W.D. for maintenance, we will give lumpsum provision to the Executive Engineer under the head '50 Civil Works' for maintenance of these roads, and the Executive Engineer will spend according to the availability of funds.

Sri R. NAGAN GOUDA.—For the year that has just passed, it is understood that Rs. 5 lakhs had been sanctioned for our Sub-division, and the provision was reduced by Rs. 2 lakhs before the end of the year. Is that correct?

Sri VEERENDRA PATIL.—I have no information, Sir.

Sri R. NAGAN GOUDA.—Is it not a fact that no roads have been repaired during the current year in Hospet Sub-Division?

Sri VEERENDRA PATIL.—I do not know whether the Hon'ble Member is referring to the sugar-cane cess fund roads, the Ayakat roads or roads in general. The provision that was kept at the disposal of the Executive Engineer is no doubt meagre, because we have taken a number of roads, and that is why there is some difficulty.

ಶ್ರೀ ಎಚ್. ಡಿ. ದೇವೇಗೌಡ.—ವೆಟ್ ಲ್ಯಾಂಡ್ ಏರಿಯಾದಲ್ಲಿ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ 50 ಸ್ಪೆಷಲ್ ವರ್ಕ್ಸ್‌ನಿಂದ ಹಣ ಖರ್ಚು ಮಾಡುತ್ತೇವೆ ಎಂದು ಹೇಳಿದಿರಿ. ಪ್ರಾಜೆಕ್ಟ್ ಏರಿಯಾದಲ್ಲಿ ಮತ್ತು ಅಚ್ಚುಕಟ್ಟು ಪ್ರದೇಶದಲ್ಲಿ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಪ್ರತ್ಯೇಕವಾಗಿ ಫಂಡನ್ನು ತಾವು ಕ್ರಿಯೇಟ್ ಮಾಡಿ ಈ ರಸ್ತೆಗಳನ್ನು ಅಭಿವೃದ್ಧಿ ಮಾಡತಕ್ಕದ್ದು ಸೂಕ್ತವಲ್ಲವೇ? ಏಕೆಂದರೆ 50 ಸಿವಿಲ್ ವರ್ಕ್ಸ್‌ನಿಂದ ಜನರಲ್ ರೋಡ್ಸ್‌ನ್ನು ಸ್ಟೇಟ್‌ಮೆಂಟೇನ್ ಮಾಡಬೇಕಾದ ಆಬ್ಲಿಗೇಟರಿ ಡ್ಯೂಟಿ ಇದೆ, ಅದಕ್ಕೆ ಹಣ ಕಮ್ಮಿಯಾಗುತ್ತದೆ, ಅದನ್ನು ಇದಕ್ಕೆ ಡೈವರ್ಟ್ ಮಾಡುವುದಾದರೆ ಬಹುಶಃ ಬಾಕಿ ರಸ್ತೆಗಳ ಕೆಲಸಕ್ಕೆ ಕುಂದಾಗುವುದಿಲ್ಲವೇ!

ಶ್ರೀ ವೀರೇಂದ್ರ ಪಾಟೀಲ್.—ಆ ಏರಿಯಾದಲ್ಲಿ ಇದರ ಸಲುವಾಗಿ ಪ್ರತ್ಯೇಕವಾಗಿ ಹಣ ಒದಗಿಸಬೇಕೆಂದರೆ ಟ್ಯಾಕ್ಸ್ ಹಾಕಿ ಫಂಡನ್ನು ಕ್ರಿಯೇಟ್ ಮಾಡಬೇಕಾಗುತ್ತದೆ. ಷುಗರ್‌ಕೇನ್ ಸೆಸ್ ಫಂಡ್ ಅಂತ ಇತ್ತು, ಅದರಿಂದ ಬೇಕಾದಷ್ಟು ಹಣವನ್ನು ಖರ್ಚುಮಾಡಿ ರಸ್ತೆಗಳನ್ನು ಮೇಂಟೇನ್ ಮಾಡುವುದು ಆಗುತ್ತಾ ಇತ್ತು. ಅದೇ ರೀತಿ ಇದಕ್ಕೂ ಕೂಡ ಪ್ರತ್ಯೇಕವಾಗಿ ಫಂಡನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅಯಕಟ್ಟು ಏರಿಯಾದಲ್ಲಿ ಇದಕ್ಕೆ ಪ್ರತ್ಯೇಕವಾಗಿ ಫಂಡ್ ಮಾಡಬೇಕೆಂದರೆ ಇದಕ್ಕೆ ಟ್ಯಾಕ್ಸ್ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ ಅಂತ ಅನ್ನುವುದಾದರೆ ಇದರ ಸಲುವಾಗಿ ಪ್ರತ್ಯೇಕವಾಗಿ ಒಂದು ಫಂಡ್ ಮಾಡಿ ರಸ್ತೆಗಳನ್ನು ಕಟ್ಟುವುದಾಗಲಿ, ಮೇನ್‌ಟೇನ್ ಮಾಡುವುದಾಗಲಿ ಅದರಿಂದ ಮಾಡುವುದಕ್ಕೆ ಸಾಧ್ಯವಾಗುತ್ತದೆ.

Sri SIDDIAH KASIMATH.—May I know whether all the roads in this wet land area of Hospet have been taken over by the Public Works Department?

Sri VEERENDRA PATIL.—Whether it is sugar-cane cess fund road or Ayakat road, the policy of the Government is that the formation of these roads will be the responsibility of the project. Once the roads are formed, they will be handed over to the P.W.D. (Roads and Buildings Wing) and it will be the responsibility of the Roads Wing to maintain these roads.

---

† Indicates that the remarks or speeches have not been revised by the member concerned.

SRI R. NAGAN GOUDA.—The sugarcane cess fund has been abolished and the Government is collecting purchase tax at the rate of 15 per cent from all the cane that has been sent to the factories, and as a result, this year in Hospet area alone they have got an income of Rs. 24 lakhs during the last 4 months, and the Central Government has got an income of Rs. 60 lakhs. Since there is very heavy traffic on this road, may I request the Hon'ble Minister to provide adequate sum for the coming year?

SRI VEERENDRA PATIL.—It is true that the condition of the roads in that area is not good. We require huge sums to maintain those roads and also to bring them to a good condition. I do not know about the budgetary position for the current year, *i.e.*, 1968-69, but as suggested by the Hon'ble Member I shall see that some more funds are made available to that area.

Merger of Village Panchayats in Belgaum Municipality

417. SRI B. B. SAYANAK (Belgaum).—

Will the Minister for Home and Municipal Administration be pleased to state :—

(*a*) the number of Village Panchayats merged in Belgaum Municipality and when ;

(*b*) the number of servants from those Village Panchayats absorbed in Belgaum Municipality ;

(*c*) whether it is a fact that these servants are not paid since the merger ;

(*d*) whether it is a fact that these Panchayats were not willing to merge ?

A.—SRI B. D. JATTI (Minister for Food and Civil Supplies) [On behalf of Sri R. M. PATIL (Minister for Home and Municipal Administration)].—

(*a*) Three entire Panchayats and parts of three others. The merger came into effect from 25th October 1967.

(*b*) 20.

(*c*) The staff has since been paid by the Municipality with effect from 1st November 1967.

(*d*) No.

SRI B. B. SAYANAK.—May I know the names of the villages which are merged in Belgaum Municipality ?

SRI B. D. JATTI (Minister for Food and Civil Supplies).—Angol Vadgaon, Madhavapur and Majgaon.

Sri B. B. SAYANAK.—In answer to (*a*) it is stated that three entire Panchayats and parts of three others have been merged in Belgaum City. But the Hon'ble Minister was pleased to state that 4 villages have been merged. May I know which is correct?

Sri B. D. JATTI.—Four villages are correct, because regarding Angol there was some delay from the Chairman of the Panchayat.

Sri B. B. SAYANAK.—May I know whether the part of Vadagaon village and Madhavapur village have been merged in Belgaum City? If so, may I also know why only part of Madhavapur and Vadagaon has been merged and not the whole portion of the villages, Sir?

Sri B. D. JATTI.—Whatever portion was necessary, has been included and if the other portions also are found necessary that could also be included.

Sri B. B. SAYANAK.—May I know whether there was a proposal to merge 25 villages situated round about Belgaum City, in the Municipal Corporation?

Sri B. D. JATTI.—There is no such proposal.

Sri B. B. SAYANAK.—May I know whether it is not a fact that Vadagaon and Madhavapur villages are the lungs of Belgaum City and these villages have to be immediately merged?

Sri B. D. JATTI.—This is absolutely wrong. The suggestions to include the areas were made by the Chairman of the Panchayat and they were not included on your suggestions.

Sri B. B. SAYANAK.—May I know whether it is not a fact that the salary of the servant was not paid up to 16th February 1968 and only after representation to the Divisional Commissioner the salary was paid to the servant and not before that?

Sri B. D. JATTI.—From the date of absorption of the Government servant working there, salary was paid by the Municipality and for whatever happened before, the Municipality is not responsible.

Compensation to the lands acquired for the construction of godown in Shorapur.

418. Sri RAJA PID NAIK (Shorapur).—

Will the Minister for Revenue and Forests be pleased to state:—

(*a*) when the land bearing S. No. 13-2 was acquired by the Government for the construction of Godown in Shorapur, Gulbarga District;

(*b*) whether compensation has been paid for the land acquired;

(*c*) if not the reasons for such long delay in giving award and compensation?

A.—Sri B. RACHAIAH (Minister for Revenue and Forests).—

(*a*) During the year 1945 (Fasli 1355).

(*b*) No.

(*c*) As there were objections from the villagers, the matter could not be settled early.

Sri RAJA PID NAIK.—May I know what are all the objections raised by the villagers ?

Sri B. RACHAIAH.—The obections were for the tank-bed and the Public Works Department had prepared an estimate for renovating the tank.

Sri RAJA PID NAIK.—Is it not a fact that the objection is only for the well which is situated in the land acquired ?

Sri B. RACHAIAH.—At the time of initiation of this acquisition the proceedings were to acquire the well which is in the land required for the construction of the godown.

Sri RAJA PID NAIK.—Will the Government at least pay the compensation for the part of the land, for which there is no objection ?

Sri B. RACHAIAH.—Till 1961 there were no objections. It is only in the year 1961 the villagers objected to it. Only about 20 guntas of land has been utilised for construction of godown and one acre of land is used for construction of houses and the remaining 35 guntas of land has been un-utilised. For one acre 20 guntas, an award has been passed and it is in the final stage.

ಶ್ರೀ ಎಂ. ನಾಗಪ್ಪ.—1945ರಿಂದ ಕೇಸು ನಡೆಯುತ್ತಾ ಇತ್ತು. 1961ರಲ್ಲಿ ಅಬ್ಜಕ್ಷನ್ ಇಲ್ಲ ಎಂದು ಹೇಳಿದರು. 1961ರಲ್ಲಿ ಅವಾರ್ಡ್ ಮಾಡಿ ಕಾಂಪನ್ಸೇಷನ್ ಕೊಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಬಿ. ರಾಚಯ್ಯ.—ಆ ಭೂಮಿಯಲ್ಲಿರತಕ್ಕಂಥ ಬಾವಿಗೆ 34 ಸಾವಿರ ರೂಪಾಯಿ ಬೆಲೆ ಬೀಳುತ್ತದೆ. ಕಲ್ಲಿನ ಹಂತ ಇರತಕ್ಕ ಬಾವಿ ಇದೆ. ಅದಕ್ಕೆ ಲ್ಯಾಂಡ್ ಅಕ್ವಿಸಿಷನ್ ಕಾಸ್ಟ್ 6 ಸಾವಿರ ರೂಪಾಯಿ ಆಗುತ್ತದೆ. ಬಾವಿ ಬೆಲೆ ಜಾಸ್ತಿ ಎಂದು ಸರ್ಕಾರದವರು 20 ಗುಂಟೆ ಭೂಮಿ ಮಾತ್ರ ಸಾಕು ಎಂದು ಹೇಳುವುದರಿಂದ ಈ ವ್ಯವಹಾರಕ್ಕೆಲ್ಲಾ ಇಷ್ಟು ನಿಧಾನವಾಯಿತು.

ಶ್ರೀ ಎಂ. ನಾಗಪ್ಪ.—1945 ರಿಂದ 1961 ರವರೆಗೆ ಈ ಕೇಸು ಪೆಂಡಿಂಗ್ ಇತ್ತೋ ಅಥವಾ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಇತ್ತೋ ?

ಶ್ರೀ ಬಿ. ರಾಚಯ್ಯ.—ಆ ಸಮಾಚಾರ ಇಲ್ಲಿ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಸರ್ಕಾರದವರು ಈ ದಿವಸ ರಾಜ್ಯದ ಮೂಲೆ ಮೂಲೆಗಳಲ್ಲಿರತಕ್ಕ ಸೊಸೈಟಿಗಳಿಗೆ ಓಪನ್ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡತಕ್ಕ 60 ಪರ್ಸೆಂಟ್ ಸಕ್ಕರೆಯನ್ನೂ ಮತ್ತು ಡೊಮೆಸ್ಟಿಕ್ ಉದ್ದೇಶಗಳಿಗೆ ಕೊಡತಕ್ಕ ಕಂಟ್ರೋಲ್ ದರದ 40 ಪರ್ಸೆಂಟ್ ಸಕ್ಕರೆ ಈ ಎರಡನ್ನೂ ಅವರು ಮಿಕ್ಸ್ ಮಾಡಿ ದುರುಪಯೋಗ ಮಾಡುವದಕ್ಕೆ ಅವಕಾಶವಿಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಆ ಎರಡನ್ನೂ ಮಾರಾಟ ಮಾಡಲು ಒಬ್ಬರಿಗೆ ಎಂದೂ ಕೊಡುವುದಿಲ್ಲ. ಆದುದರಿಂದ ಆ ದುರುಪಯೋಗಕ್ಕೆ ಅವಕಾಶವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಓಪನ್ ಮಾರ್ಕೆಟ್ ಬೆಲೆ ಎಂದು ಏನು ಹೇಳುತ್ತಿದ್ದಾರೋ ಅದೇ ಬ್ಲಾಕ್ ಮಾರ್ಕೆಟ್ ರೇಟಾಗಿದೆ. ಆದ್ದರಿಂದ ಆ ಓಪನ್ ಮಾರ್ಕೆಟ್ ರೇಟನ್ನು ಕಡಮೆ ಮಾಡಲು ಸರ್ಕಾರದವರೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ಬಿ. ಡಿ. ಜತ್ತಿ.—ಓಪನ್ ಮಾರ್ಕೆಟ್ ರೇಟನ್ನು ಬ್ಲಾಕ್ ಮಾರ್ಕೆಟ್ ರೇಟ್ ಎಂದು ಹೇಳುವುದು ಸರಿಯಲ್ಲ. ಮಾಲು ಹೆಚ್ಚಿಗೆ ಬಂದು ಡಿಮ್ಯಾಂಡ್ ಕಡಿಮೆಯಾದರೆ ಬೆಲೆ ಇಳಿಯುತ್ತೆ. ಡಿಮ್ಯಾಂಡ್ ಜಾಸ್ತಿ ಇದ್ದಾಗ ಸಪ್ಲೈ ಕಡಮೆಯಾದರೆ ಬೆಲೆ ಏರುತ್ತೆ. ಅದೇ ಬಿಜಿನೆಸ್ ಎನ್ನುವುದು.

ಶ್ರೀ ಎಂ. ನಾಗಪ್ಪ.—ಸರ್ಕಾರದವರು 3-4 ಜನಕ್ಕೆ ಅನುಕೂಲ ಮಾಡಲು ಸಕ್ಕರೆ ಧಾರಣೆಯನ್ನು ಹೆಚ್ಚಿಸಿ ಅದೇ ನೀತಿಯನ್ನು ದೇಶದಲ್ಲಿರತಕ್ಕ ಬಹು ಸಂಖ್ಯಾತ ರೈತರ ವಿಷಯದಲ್ಲಿ ಅನುಸರಿಸದೆ ಇರುವುದರಿಂದ ದೇಶದಲ್ಲಿರತಕ್ಕ ರೈತರಿಗೆ ಇದರಿಂದ ಬಹಳ ಅನ್ಯಾಯವಾಗಿದೆ ಎನ್ನುವುದು ಅವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ನಮಗೆ ಸಕ್ಕರೆ ಕಂಪೆನಿಯವರು ಸಕ್ಕರೆಯನ್ನು ಕೊಡತಕ್ಕ ದರದಲ್ಲಿ ಅವರಿಗೆ ಕಬ್ಬನ್ನು ಬೆಳೆಯತಕ್ಕ ರೈತರು ಕಬ್ಬನ್ನು ಮಾರಾಟ ಮಾಡುವುದಿಲ್ಲ. ಅವರಿನ್ನೂ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದರಿಂದ ರೈತರಿಗೆ ಇದರಿಂದ ನಷ್ಟವಾಗುವುದಿಲ್ಲ. ಇನ್ನೂ ಲಾಭ ಜಾಸ್ತಿ ಬರುತ್ತೆ.

ಉಪಾಧ್ಯಕ್ಷರು.—ಅಲ್ಪ ಕಾಲಾವಧಿ ಪ್ರಶ್ನೆ ಮುಗಿಯಿತು.

QUESTIONS FOR ANSWERS ON THE DAY

(but not taken up)

General Hospital at Mudigere

419. Sri K. H. RANGANATH (Mudigere).—

Will the Minister for Health and Housing be pleased to state :—

(*a*) whether there is a proposal to construct a General Hospital at Mudigere ; and if so, the estimated cost ;

(*b*) when the work would be taken up ?

A.—Sri K. PUTTASWAMY (Minister for Health and Housing).—

(*a*) Yes—the plans and estimates are not ready.

(*b*) In due course.

Children covered under compulsory Education Scheme

425. Sri G. MADEGOWDA (Kirugavalu).—

Will the Minister for Agriculture and Education be pleased to state :—

(*a*) how many children are covered under compulsory Primary Education Scheme in the State ;

(*b*) whether all these children attending the schools regularly ;

(*c*) the action taken by the Government on such parents who are not sending their children to schools ?

A.—Sri K. V. SHANKARA GOWDA (Minister for Agriculture and Education).—

(*a*) 22,61,470 children are covered under the Compulsory Primary Education Scheme.

(*b*) Average daily attendance is nearly 80 per cent.

(*c*) As the scheme is progressing well through persuasive methods penal provisions of the Act have not been invoked.

Bridge across river Jayamangali at Bychapura

427. Sri B. P. GANGADHAR (Tumkur).—

Will the Minister for Public Works be pleased to state :—

(*a*) whether Government are aware that the plan and estimate have been prepared long back to construct a bridge across the river 'Jayamangali' at Bychapura in Koratagere Taluk;

(*b*) whether they are aware of the longstanding agitation for the construction of the said Bridge at Bychapura by the public as well as the legislators;

(*c*) whether the Government aware of the inconvenience caused to the Public and traffic during rainy season for want of the said bridge;

(*d*) whether Government intend taking up the construction of the bridge urgently?

A.—Sri VEERENDRA PATIL (Minister for Public Works).—

(*a*) Yes.

(*b*) Yes.

(*c*) Yes.

(*d*) Yes, after approval to the estimate.

Batta paid to under-trial prisoners and prosecution witnesses

432. Sri G. AMARE GOWDA (Sindhanoor).—

Will the Minister for Home and Municipal Administration be pleased to state :—

(*a*) the batta (daily allowance) paid to under-trial prisoners in different parts of the State;

(*b*) the batta (daily allowance) paid to prosecution witnesses in different parts of the State;

(*c*) whether uniformity in payment of batta is likely to be maintained in the State?

A.—Sri R. M. PATIL (Minister for Home and Municipal Administration).—

(*a*) The under-trial prisoners in judicial custody are paid batta whenever they are required to undertake journeys to appear before the Courts, at the rates shown in the accompanying statement I appended.

(*b*) As in Statement II appended.

(*c*) Uniformity has been achieved in respect of payment of batta to prosecution witnesses. As regards payment of batta to the under-trial prisoners, provision for payment of uniform rates will be made in the Common Jail Manual under preparation.

STATEMENT-I

Area		*Class of prisoners*		*Rate Per day*
Mysore	...	All Classes	...	0-75
Bombay	...	Class I	...	0-75
		Other Classes	...	0-50
Hyderabad	...	Class A and B	...	1-00
		Class C	...	0-50
Madras	...	Class A and B	...	0-75
		Class C	...	0-37

STATEMENT-II

Under the uniform Rules now in force throughout the State the batta paid to witnesses attending Criminal cases shall consist of :—

(1) a diet allowance varying according to circumstances, but not exceeding the average daily wage of the class to which the witness belongs or the following maxima :

Witness of Class I Rs. 3 } per diem
Witness of Class II Rs. 2 }

Witnesses of Class I include persons having an annual income of Rs. 6,000 or more and witnesses of Class II include persons having an annual income of less than Rs. 6,000.

Travelling Allowance will be paid at the discretion of the court and at the following rates only if the witness had to travel eight Kilometres or more in order to attend the court and had spent for the journey.

(*a*) When the journey is by road.	Witness of Class I.	16 paise per Kilometre.
	Witness of Class I.	11 paise per kilometre or actual expenses whichever is less.
(*b*) When the journey is by railway or steamer or partly by railway and steamer.	Witness of Class I.	II Class Railway or Steamer fare and in exceptional cases for reasons to be recorded, I Class fare.
	Witness of Class II.	Third Class Railway or Steamer fare.

Discretion has been given to the Courts to order payment of travelling allowance when the distance to be travelled by the witness is less than eight kilometres.

Posting of a lady docfor to Holenarsipur General Hospital

433. Sri H. D. DEVEGOWDA (Holenarsipur).—

Will the Minister for Health and Housing be pleased to state :—

(a) whether Government are aware that there is no lady doctor in Holenarsipur General Hospital from the last one year;

(b) whether several representations were sent to Government to post a lady doctor to avoid the inconvenience to the Public;

(c) whether the Government would take necessary steps to provide a lady doctor without any further delay?

A.—Sri K. PUTTASWAMY (Minister for Health and Housing).—

(a) Yes. There is no lady doctor since 7th August 1967.
(b) Yes.
(c) Yes.

Land pertaining to Lingsugur Municipality

434. Sri K. SANGANGOWDA (Lingasugur).—

Will the Minister for Home and Municipal Administration be pleased to state :—

(a) whether any representation has been made by the Lingsugur Municipality, regarding recovery of possession of 50 acres of land pertaining to the said Municipality which has been leased by the Municipality to the Education Department;

(b) if so, the action taken by the Government in this respect?

A.—Sri R. M. PATIL (Minister for Home and Municipal Administration).—

(a) Yes.
(b) The claim for ownership of land by the T. M. C. has seen rejected by Government.

Cultivation of lands in North Kanara District

435. Sri M. M. JALISATGI (Bhatkal).—

Will the Minister for Revenue and Forests be pleased to state :—

(a) the extent of area cultivated in the Talukas of Bhatkal, Honavar and Kumta in North Kanara District (separate figures Talukwise may be given);

(*b*) the extent of Government waste lands and cultivable forest land available in each of the above three talukas;

(*c*) the steps Government proposes to take to utilise the above lands for the purpose of grow more food;

(*d*) whether they propose to revise the land grant rules in order to grant waste lands to genuine cultivators?

A.—SRI B. RACHAIAH (Minister for Revenue and Forests).—

(*a*)

	Taluk		Extent A. G.
1.	Bhatkal	...	17,980–21
2.	Honavar	...	20,989–00
3.	Kumta	...	37,378–34

(*b*)

	Taluk	Govt. waste land A. G.		Cultivable forest land A. G.
1.	Bhatkal	171–14	...	226–06
2.	Honavar	217–00	...	902–00
3.	Kumta	431–00	...	1,006–10

(*c*) The lands will be disposed of according to the Land Grant Rules.

(*d*) No.

CALLING ATTENTION TO A MATTER OF URGENT PUBLIC IMPORTANCE.

SRI M. NAGAPPA (Raichur).—I beg to call the attention of the hon. Minister for Public Works to the unauthorised opening of Right Bank Canal to Rajolibandha Project.

†SRI VEERENDRA PATIL (Minister for Public Works).—In response to the Calling Attention Notice by Sri M. Nagappa, I wish to state that the sanctioned Rajolibandha Project provides only for the Left Bank Canal for irrigation in Raichur District in Mysore State and Mehaboobnagar District of Andhra Pradesh. So far, no work on the execution of the Right Bank Canal has been taken up by Andhra Pradesh.

ಶ್ರೀ ಎಂ. ನಾಗಪ್ಪ.—ಸ್ವಾಮಿ ಇದರ ಬಗ್ಗೆ ಈಗಾಗಲೇ ರೈಟ್ ಬ್ಯಾಂಕ್ ಕೆನಾಲ್ ತೆಗೆದು ನೀರು ತೆಗೆದುಕೊಳ್ಳುತ್ತೇವೆ ಎಂದು ಚೀಫ್ ಇಂಜಿನಿಯರು ಹೇಳಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಅದು ಬಂದಿದ್ದರೆ ಮುಂದೆ ಏನು ಮಾಡುತ್ತೀರಿ? ಅದನ್ನು ಪರ್‌ಪಚ್ಯುಯೇಟ್ ಮಾಡಬೇಕೆಂದು ಸರ್ಕಾರದ ಯೋಚನೆಯಲ್ಲಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ಬಂದಿರುವ ಇನ್‌ಫರ್‌ಮೇಷನ್ ಪ್ರಕಾರ ಅಲ್ಲಿಗೆ ನಮ್ಮ ಸೂಪರಿನ್‌ಟೆಂಡೆಂಟ್ ಇಂಜಿನಿಯರು, ಅಸಿಸ್ಟೆಂಟ್ ಇಂಜಿನಿಯರನ್ನು ಡೆಪ್ಯೂಟ್ ಮಾಡಿ ಆ ವಿಷಯದಲ್ಲಿ ಪರಿಶೀಲನೆ ಮಾಡಿ ರಿಪೋರ್ಟ್ ಮಾಡಬೇಕೆಂದು ಹೇಳಿದ್ದರು. ಅದರ ಪ್ರಕಾರ ಅವರು ರಿಪೋರ್ಟ್ ಮಾಡಿದ್ದಾರೆ. ಅಲ್ಲಿ ಕೆನಾಲ್ ತೆಗೆಯುವ ಬಗ್ಗೆ ಅವರು ಸರ್ವೆ ಮಾಡಿದ್ದಾರೆಯೇ ಹೊರತು, ಕನಾಲ್ ತೆಗೆಯುವಂತ ಕೆಲಸ ಮಾಡಿಲ್ಲ. ಅದು ಇಂಟರ್ ಸ್ಟೇಟ್ ಪ್ರಾಜೆಕ್ಟ್ ಆಗಿರುವುದರಿಂದ ಅವರು ನಮ್ಮ ಸರ್ಕಾರದವರೊಡನೆ ಮಾತುಕತೆ ನಡೆಸದೆ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಇನ್ನೂ ಏನೂ ಮಾಡಿಲ್ಲ. ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿಯೇನೂ ಒದಗಿಲ್ಲ.

ಶ್ರೀ ಎಂ. ನಾಗಪ್ಪ.—ಅಲ್ಲಿ ಇಂಜಿನಿಯರು ಈ ಕೆಲಸ ಪ್ರಾರಂಭ ಮಾಡಬೇಕೆಂದಿದ್ದಾರೆಂದು ತಿಳಿದುಬಂದಿದೆ. ಆದ್ದರಿಂದ ದಯವಿಟ್ಟು ಅಲ್ಲಿಗೆ ಯಾರನ್ನಾದರೂ ಕಳುಹಿಸಿ ಆ ವಿಚಾರವನ್ನು ತಿಳಿದುಕೊಳ್ಳುತ್ತೀರಾ ?

Sri VEERENDRA PATIL.—It is reported by the Assistant Engineer who visited the Project that no canal is excavated or any canal head sluice is constructed on the right bank but surverys have been conducted recently for the canal as chain stones and trial pits are observed along the alignment from the right end of the Anecut.

Member's Representations

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಈ ಸಭೆ ಪ್ರಾರಂಭವಾಗಿ 3 ದಿವಸಗಳಾಯಿತು. ಈ ಸಭೆಯಲ್ಲಿ ಇದುವರೆಗೆ ಈ ದೇಶದ ಮುಖ್ಯ ಮಂತ್ರಿಗಳ ದರ್ಶನ ಆಗಿಲ್ಲ. ಅವರು ಏತಕ್ಕೋಸ್ಕರ ಈ ಸಭೆಗೆ ಬರಲಿಲ್ಲ ? ಏತಕ್ಕೋಸ್ಕರ ಈ ಸಭೆಗೆ ಬರಲಿಲ್ಲ ಎನ್ನುವ ಕಾರಣವನ್ನು ಅವರು ತಮಗೆ ತಿಳಿಸಿದ್ದಾರೆಯೇ ಇದಕ್ಕೆ ಕಾರಣ ಇಷ್ಟು, ಈ ಸಭೆ ಯುಗಾದಿ ಹಬ್ಬದ ವಿರಾಮಕ್ಕೆ ಏಳುವುದಕ್ಕೆ ಮುಂಚೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಗಮನಾರ್ಹವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ದೇಶದಲ್ಲಿ ಮಂತ್ರಿಗಳು ಮತ್ತು ಮಾಜಿ ಮಂತ್ರಿಗಳು ಮತ್ತು ಕಾಂಗ್ರೆಸ್ಸಿನ ಅಧಿಕಾರವರ್ಗಕ್ಕೆ ಸೇರಿದವರು ಯಾರು ಯಾರು ಇದ್ದಾರೆಯೋ ಅವರ ಆಸ್ತಿಪಾಸ್ತಿಗಳನ್ನು ವಿಚಾರಣೆ ಮಾಡತಕ್ಕ ವಿಷಯದಲ್ಲಿ ಒಂದು ವಾರದೊಳಗೆ ಅವರಿಗೆ ನೋಟೀಸ್ ಕೊಟ್ಟು ಅವರಿಂದ ಆಸ್ತಿಪಾಸ್ತಿಗಳ ವಿವರಗಳನ್ನು ತರಿಸುತ್ತೇನೆ, ಯಾರು ಬೇಕಾದರೂ ಆ ಬಗ್ಗೆ ಬರೆಯಬಹುದು ಎಂದು ಈ ದೇಶದಲ್ಲಿ ಒಂದು ಕುತೂಹಲ ಇರತಕ್ಕಂಥ, ಒಂದು ಗಮನಾರ್ಹವಾದ ಹೇಳಿಕೆಯನ್ನು ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಕೊಟ್ಟಿದ್ದಾರೆ. ನಾವು ಭಾವನೆ ಮಾಡಿಕೊಂಡಿದ್ದೆವು, ಒಂದು ವಾರದೊಳಗೆ ಎಲ್ಲರಿಗೂ ಒಂದೊಂದು ನೋಟೀಸ್ ಹೋಗುತ್ತದೆ, ಅವರಿಂದ ವಿವರಣೆ ಬರುತ್ತದೆ, ನಾವೂ ಕೂಡ ಆ ಬಗ್ಗೆ ಏನೇನು ಹೇಳಬೇಕೋ ಅದನ್ನೆಲ್ಲಾ ಹೇಳೋಣ ಎಂದು. ಮುಖ್ಯ ಮಂತ್ರಿಗಳು ಆ ಹೇಳಿಕೆಯನ್ನು ಕೊಟ್ಟಮೇಲೆ ಅವರು ಈ ಸಭೆಗೆ ಮತ್ತೆ ಬಂದೇ ಇಲ್ಲ. ಹೇಳಿಕೆಯನ್ನು ಕೊಟ್ಟು 10-12 ದಿನಗಳಾದರೂ ಏನೂ ಆಗಿಲ್ಲ. ಅದಕ್ಕೋಸ್ಕರವಾಗಿ ನಾನು ಅವರ ಹೇಳಿಕೆಯ ಮತ್ತು ಅವರ ಗೈರು ಹಾಜರಿಯ ಬಗ್ಗೆ ಒಂದು ನಿಜಸ್ಥಿತಿಯನ್ನು ಅರಿಯುವವನಾಗಿದ್ದೇನೆ. ಈ ಸಭೆಯಲ್ಲಿ ಮುಖ್ಯ ಮಂತ್ರಿಗಳ ವಿಚಾರವನ್ನು ನಾನು ಆಗಾಗ್ಯೆ ಪ್ರಸ್ತಾಪ ಮಾಡುತ್ತಾ ಬಂದಿದ್ದೇನೆ. ಈ ವಿಚಾರವನ್ನು ಅಗಿಂದಾಗ್ಯೆ ಈ ಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂಬ ಹಂಬಲ ನನಗಿಲ್ಲ. ಈ ಸಭೆಯ ಘನತೆಯ ದೃಷ್ಟಿಯಿಂದ ಅವರು ಈ ಸಭೆಗೆ ಸಾಕಷ್ಟು ಗೌರವವನ್ನು ತೋರಿಸಬೇಕಾದ್ದು ಅವರ ಕರ್ತವ್ಯ. ಅವರ ಕರ್ತವ್ಯ ದೃಷ್ಟಿಯಿಂದ ನಾನು ಪದೇ ಪದೇ ಈ ವಿಚಾರವನ್ನು ಹೇಳುತ್ತಿದ್ದೇನೆ. ಇವರೊತ್ತು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಏತಕ್ಕೋಸ್ಕರ ಬರಲಿಲ್ಲ ? ಈಗ ಮೂರು ದಿವಸಗಳಿಂದ ಅವರು ಈ ಸಭೆಗೆ ಬಾರದೆ ಇರುವುದಕ್ಕೆ ಅವರು ಅಧ್ಯಕ್ಷರಿಗೆ ಕಾಗದವನ್ನು ಬರೆದು ಕಾರಣವನ್ನು ಸೂಚಿಸಿದ್ದರೆ ತಾವು ಅದನ್ನು ಈ ಸಭೆಗೆ ತಿಳಿಸಬೇಕು. ನಿನ್ನೆಯ ದಿವಸ ಮಾನ್ಯ ಮಂತ್ರಿಗಳು ಒಂದು ಮೀಟಿಂಗ್ ಕರೆದಿದ್ದರು. ಅದಕ್ಕೆ ನನ್ನನ್ನೂ ಆಹ್ವಾನ ಮಾಡಿದ್ದರು. ಆ ಮೀಟಿಂಗ್ ಏತಕ್ಕೋಸ್ಕರ ಎಂದರೆ ದಿವಂಗತ ಮಾಜಿ ಪ್ರಧಾನಿ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳವರ ಮೆಮೋರಿಯಲ್

ಸ್ಥಾಪನೆ ಮಾಡುವುದಕ್ಕೆ ಒಂದು ಫಂಡನ್ನು ನಿರ್ಮಾಣ ಮಾಡಬೇಕು; ಅದಕ್ಕೆ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಡಬೇಕು ಎಂದು. 5ನೇ ತಾರೀಖು 5 ಗಂಟೆಗೆ ವಿಧಾನಸೌಧದಲ್ಲಿ ಒಂದು ಮೀಟಿಂಗ್ ಇದೆಯೆಂದು ನನಗೆ ಒಂದು ಪತ್ರ ಬಂದಿತ್ತು. ನಾನು ಹೋಗಿದ್ದೆ. ಆ ಮೀಟಿಂಗಿಗೆ ಮುಖ್ಯ ಮಂತ್ರಿಗಳು ಬರಲಿಲ್ಲ. ಅದೇರೀತಿ ಈ ಸಭೆಗೂ ಅವರ ದರ್ಶನ ಆಗಲಿಲ್ಲ. ನಿಜವಾಗಿಯೂ ಈ ವಿಷಯವನ್ನು ನಾನು ಈ ಸಭೆಯಲ್ಲಿ ಹೇಳುವುದಕ್ಕೆ ನನಗೆ ವ್ಯಸನವಾಗುತ್ತದೆ. ವೈಯಕ್ತಿಕ ವಾಗಿ ಅವರ ವಿಷಯದಲ್ಲಿ ದ್ವೇಷದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದು ತಾವು ಯಾರೂ ಭಾವನೆ ಮಾಡಿಕೊಳ್ಳಬಾರದು. ಈ ಸಭೆಯಲ್ಲಿ ನಾವು ಎಷ್ಟೋ ಸಾರಿ ಹೇಳಿದ್ದೇವೆ, ಈ ಸಭೆಯು ನಡೆಯುತ್ತಿರುವಾಗ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹಾಜರು ಇರಬೇಕು, ಈ ಸಭೆಗೆ ಗೌರವ ಕೊಡಬೇಕು ಎಂದು. ಅದನ್ನು ಯಃಕಶ್ಚಿತ್ ಆಗಿ ಭಾವಿಸಬಾರದು. ಪುನಃ ಪುನಃ ಅವರು ಅದೇರೀತಿ ಮಾಡುತ್ತಿದ್ದಾರೆ. ಈ ಸಭೆ ನಡೆಯುತ್ತಿರುವಾಗ ಅವರು ಈ ಸಭೆಗೆ ಬಾರದೆ ಇರುವುದು ನಿಜವಾಗಿಯೂ ಈ ದೇಶದ ಈ ಸಭೆಯ ಗೌರವಕ್ಕೆ ತಕ್ಕದಲ್ಲ. ಆದ್ದರಿಂದ ಮುಖ್ಯ ಮಂತ್ರಿಗಳು ತಮಗೆ ಪತ್ರ ಬರೆದಿದ್ದಾರೆಯೇ, ಅವರು ಇಲ್ಲಿಗೆ ಬಾರದೆ ಇರುವುದಕ್ಕೆ ಏನು ಕಾರಣ ಕೊಟ್ಟಿದ್ದಾರೆ. ಅದನ್ನು ತಾವು ಈ ಸಭೆಗೆ ತಿಳಿಸಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಆರ್. ಕಂಠಿ (ನ್ಯಾಯ ಶಾಖೆಯ ಮಂತ್ರಿಗಳು).—ಮುಖ್ಯ ಮಂತ್ರಿಗಳು ಈ ಸಭೆಗೆ ಬಾರದೆ ಇರುವುದರಿಂದ ಯಾವುದೇ ತಪ್ಪು ನಡತೆ ಆಗಿಲ್ಲ. ಅವರು 3ನೇ ತಾರೀಖು ಇಲ್ಲಿಗೆ ಬರಬೇಕಾಗಿತ್ತು. ಏನೋ ಕೆಲಸದ ನಿಮಿತ್ತ ಬರುವುದಕ್ಕೆ ಆಗಲಿಲ್ಲ. ಇವೊತ್ತು ಬರುತ್ತಾರೆ.

ಶ್ರೀ ಎಸ್. ಶಿವಪ್ಪ.—ಆ ಕೆಲಸ ಏನು ?

ಶ್ರೀ ಎಸ್. ಆರ್. ಕಂಠಿ.— ಕೆಲಸ ಏನು ಎನ್ನುವುದು ನನಗೆ ಗೊತ್ತಿಲ್ಲ. ಆದ್ದರಿಂದ ಅವರು ಈ ಸಭೆಗೆ ಬಾರದೆ ಇರುವುದರಿಂದ ಅಗೌರವವಾಗಿದೆ ಎಂದು ತಿಳಿದುಕೊಳ್ಳುವುದು ಸರಿಯಲ್ಲ. ಅವರು ಕಾಲಕ್ಕೆ ಸರಿಯಾಗಿ ಹಿಂತಿರುಗದೆ ಇದ್ದುದರಿಂದ ಕೆಲವರಿಗೆ ತೊಂದರೆಯಾಗಿದೆ ಅದಕ್ಕೆ ನಾನು ವಿಷಾದ ಪಡುತ್ತೇನೆ. ಪುನಃ ಪುನಃ ಈ ಪ್ರಶ್ನೆಯನ್ನು ಅವರು ಎತ್ತುವುದು ಸರಿಯಲ್ಲ. ಅವರು ಈ ಸಭೆಗೆ ಬರಬಾರದು ಎಂದು ಬಿಟ್ಟಿಲ್ಲ. ಅನಿವಾರ್ಯದ ಕೆಲಸಗಳಿಂದ ಅವರು ಬಂದಿಲ್ಲ ಎಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಶಿವಪ್ಪ.—ಅದಕ್ಕೆ ಏತಕ್ಕೆ ಅವಕಾಶವನ್ನು ಕೊಡಬೇಕು ?

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಮೊನ್ನೆ ರಾಜ್ಯ ಸಭೆ ಮತ್ತು ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ನಿಮ್ಮ ಹುರಿಯಾಳುಗಳು ಸೋತುಹೋಗಿದ್ದಾರೆ. ಅದಕ್ಕಾಗಿ ನೀವು ರಾಜೀನಾಮೆಯನ್ನು ಕೊಡಬೇಕು, ಇನ್ನೂ ಏತಕ್ಕೆ ರಾಜೀನಾಮೆಯನ್ನು ಕೊಡಲಿಲ್ಲ ?

ಶ್ರೀ ಎಸ್. ಶಿವಪ್ಪ.—ನಾವು ರಾಜೀನಾಮೆಯನ್ನು ಕೊಡುವ ಪ್ರಶ್ನೆ ಬರುವುದಿಲ್ಲ. ನಿಮ್ಮಿಂದ ಯಾವಾಗ ರಾಜೀನಾಮೆಯನ್ನು ಕೊಡಿಸಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ. ನಿಮ್ಮನ್ನು ಅಗ್ನಿಪರೀಕ್ಷೆಗೆ ಗುರಿ ಮಾಡಿ ನಿಮ್ಮಮೇಲೆ ಏನೇನು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಜನ ಕಾಯುತ್ತಿದ್ದಾರೆ. ಅದು ಇರಲಿ ಈಗ ಮುಖ್ಯ ಮಂತ್ರಿಗಳು ಈ ಸಭೆಗೆ ಬಾರದೇ ಇರುವುದಕ್ಕೆ ಅಧ್ಯಕ್ಷರಿಗೆ ಪತ್ರವನ್ನು ಬರೆದಿದ್ದಾರೆಯೇ ?

ಉಪಾಧ್ಯಕ್ಷರು.—ಮುಖ್ಯ ಮಂತ್ರಿಗಳು ನನಗೆ ಪತ್ರವನ್ನು ಬರೆದಿದ್ದಾರೆ. ಇವೊತ್ತು ಬರುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸ್ವಾಮಿ, ಇವೊತ್ತಿನ ಅಜೆಂಡಾದಲ್ಲಿ ಇನ್ನೊಂದು ಕಾಲ್ ಅಟನ್‌ಷನ್ ನೋಟೀಸ್ ಇದೆ. ಅದನ್ನು ಈಗ ತೆಗೆದುಕೊಳ್ಳುತ್ತೀರಾ ?

ಉಪಾಧ್ಯಕ್ಷರು.—ಈಗ ಅದನ್ನು ತೆಗೆದುಕೊಳ್ಳುವುದಿಲ್ಲ.

10-00 A.M.

† V. N. PATIL (Humnabad).—I raise to a point of order. When the question of hon. member Sri Sarwesh (Q. 424) was being answered, I put a question asking whether it is not a fact that 11 of the important charges enunciated in the complaint were not investigated and so several rowdy elements and lawless elements have taken the law in

(SRI V. N. PATIL)

their own hands and while commiting murders and setting fire to houses, they are shouting Zindabad to Ministers. They want to become great at the cost of human beings At that time, the hon. Minister who is in charge of Home portfolio, who comes once in a blue moon as in-charge Home Minister and scandalises hon' members here, said that some members who were practising pleaders are representing before the Superintendent of Police and it is not correct. I challenge the statement of the Minister. So far as I am concerned, during my tenure of one year as a member here, I have not made a single representation to the Superintendent of Police. If that is proved, I am prepared to resign. But, at the same time, I am prepared to prove that the allegations made are true. If he proves that I have approached the police officers, let him prove and I am prepared to resign my seat. Otherwise, he must gracefully withdraw his remarks. I want a ruling on this.

Mr. DEPUTY SPEAKER.—I will give a considered ruling ; ruling is reserved.

† ಶ್ರೀ ಕೆ. ಎಚ್. ರಂಗನಾಥ್.—ಸ್ವಾಮೀ ನಾನು ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಪ್ರತಿ ನಿತ್ಯವೂ 20 ಪ್ರಶ್ನೆಗಳನ್ನು ಇಲ್ಲಿ ತೆಗೆದುಕೊಳ್ಳಬೇಕು ಎಂದು ಮಾಡುತ್ತಿರುವುದರಿಂದ ಕೆಲವು ಪ್ರಶ್ನೆಗಳು ಈಗ ಲ್ಯಾಪ್ಸ್ ಆಗುತ್ತವೆ ಮತ್ತು ಸಪ್ಲಿಮೆಂಟರಿಗಳನ್ನು ಕೇಳುವುದಕ್ಕೂ ತಾವು ಸರಿಯಾಗಿ ಅವಕಾಶಗಳನ್ನು ಮಾಡಿಕೊಡುತ್ತಿಲ್ಲ. ಇದಕ್ಕಾಗಿ ನಾನು ತಮ್ಮಲ್ಲಿ ಸೂಚನೆ ಮಾಡುವುದು ಹತ್ತು ಪ್ರಶ್ನೆಗಳನ್ನು ಮಾತ್ರ ಒಂದು ದಿನಕ್ಕೆ ಇಟ್ಟುಕೊಂಡರೆ ಎಲ್ಲ ಸದಸ್ಯರಿಗೂ ಅವರ ಹಕ್ಕುಗಳು ಉಳಿಯುತ್ತವೆ ಮತ್ತು ಸಪ್ಲಿಮೆಂಟರಿಗಳನ್ನು ಕೇಳಲು ಹೆಚ್ಚು ಅವಕಾಶ ಸಿಗುತ್ತದೆ. ಇಲ್ಲಿಯವರೆಗೆ ನಾವು ನೋಡುತ್ತಿರುವಂತೆ ಎಲ್ಲ ಪ್ರಶ್ನೆಗಳೂ ಪೂರ್ತಿ ಬರುವುದಿಲ್ಲ. ನಾವು ಕೇವಲ ಇನ್ನು 10–15 ದಿನಗಳು ಮಾತ್ರ ಇಲ್ಲಿ ಸಭೆ ಸೇರುತ್ತೇವೆ. ನಾನು ಇದಕ್ಕಾಗಿ ಕೇಳುವುದು ಇಷ್ಟೇ. ಸುಮ್ಮನೆ ತಾವು ಇಲ್ಲಿ 20 ಪ್ರಶ್ನೆಗಳನ್ನು ಹಾಕಿ ಏನೋ ಒಂದು ರೀತಿಯಾಗಿ ಮಾಡಿಕೊಂಡು ಹೋಗಬೇಕು ಎಂದು ಮಾಡುವುದಾದರೆ ಆ ರೀತಿ ಮಾಡಿಕೊಂಡು ಹೋಗಬಹುದು. ಆದರೆ ಇದರಲ್ಲಿ ಸದಸ್ಯರಿಗೂ ಆಸೆ ಇದೆ ಮತ್ತು ಅವರ ಹಕ್ಕುಗಳಿಗೂ ಚ್ಯುತಿ ಬಾರದಂತೆ ಮಾಡಬೇಕು ಎನ್ನುವ ಆಸೆ ತಮಗಿದ್ದರೆ ಇದರ ಬಗ್ಗೆ ಯಾವ ರೀತಿ ಕಾರ್ಯನಿರ್ವಹಣೆ ಮಾಡಬೇಕೋ ಅದಕ್ಕೆ ಸರಿಯಾದ ಒಂದು ವ್ಯವಸ್ಥೆ ಮಾಡಬೇಕು. ದಿನವೂ ಈಗ ಹತ್ತು ಹದಿನೈದು ಪ್ರಶ್ನೆಗಳೂ ಕೂಡ ಪೂರ್ತಿ ಬರಲು ಆಗುತ್ತಿಲ್ಲ. ಇದೂ ಅಲ್ಲದೆ ಮುಂದೂಡಿದ ಪ್ರಶ್ನೆಗಳೂ ಕೂಡ ಇವೆ. ಮಾನ್ಯ ಮುಖ್ಯ ಮಂತ್ರಿಗಳು ಬರಲಿಲ್ಲ ಎಂದು ಹಿಂದೆ ನನ್ನದೇ ಒಂದು ಪ್ರಶ್ನೆ ಮುಂದೂಡಲಾಗಿತ್ತು. ಇಂದೂ ಮುಖ್ಯ ಮಂತ್ರಿಗಳು ಬರಲಿಲ್ಲ. ಇದರ ಬಗ್ಗೆ ಮಾನ್ಯ ಲಾ ಮಿನಿಸ್ಟರು ಮುಖ್ಯ ಮಂತ್ರಿಗಳು ಬರುವ ಅಗತ್ಯವಿಲ್ಲ ಎನ್ನುವಂತೆ ಒಂದು ರೀತಿಯಾಗಿ ಹೇಳಿದರು. ಹೀಗಿರುವುದರಿಂದ ಸಭೆಯ ನಾಯಕರ ಬಗ್ಗೆ ನಾವು ಏನನ್ನೂ ಇಲ್ಲಿ ಕೇಳಲಾರದಂತಹ ಪರಿಸ್ಥಿತಿಗೆ ಬಂದಿದ್ದೇವೆ. ಈ ರೀತಿಯಾಗಬಾರದು. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಒಂದು ಗಂಟೆಗೆ 20 ಪ್ರಶ್ನೆಗಳನ್ನು ಮಾಡಬೇಕು ಎಂದರೆ ಅದು ಆಗುತ್ತಿಲ್ಲ. ಇದರಲ್ಲಿ ಎಷ್ಟೋ ಮುಖ್ಯವಾದ ಪ್ರಶ್ನೆಗಳು ಇರುತ್ತವೆ. ಕೆಲವು ಪ್ರಶ್ನೆಗಳ ಬಗ್ಗೆ ನಾವು ಕೇಳುವಾಗ ಅದಕ್ಕೆ ಸರಿಯಾದ ಉತ್ತರ ಬರದೇ ಇರುವುದರಿಂದ ನಮ್ಮ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬರುತ್ತದೆ. It is our Privilege.

ಉಪಾಧ್ಯಕ್ಷರು.—20 ಪ್ರಶ್ನೆಗಳು ಒಂದು ಗಂಟೆಯಲ್ಲಿ ಹಾಕಬೇಕು ಎಂದು ತಾವೆಲ್ಲ ಈ ಸಭೆಯಲ್ಲಿ ಒಪ್ಪಿದಂತೆ ಮಾಡಿದೆ. ಈ ಸಭೆಯವರು 20 ಪ್ರಶ್ನೆಗಳು ಬೇಡ ಎಂದು ಹೇಳಿದರೆ ಆಗ ಸಭೆಯವರು ಯಾವ ರೀತಿ ಒಪ್ಪುತ್ತಾರೋ ಅದರಂತೆ ಮಾಡಬಹುದು. ನಾನು ನಿಯಮಗಳ ಪ್ರಕಾರವೇ ಮಾಡುತ್ತಿರುವುದು. ಪಾರ್ಲಿಮೆಂಟಿನಲ್ಲೂ ಸಹ ಕೆಲವು ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್ (ಮೂಡಗೆರೆ).—ಮೊದಲು 15 ಪ್ರಶ್ನೆಗಳು ಮಾತ್ರ ಇರುತ್ತಿತ್ತು. ಈಗ ಅದನ್ನು 20 ಪ್ರಶ್ನೆಗಳವರೆಗೆ ಏರಿಸಲಾಗಿದೆ. ಇದರಿಂದ ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವಾಗುತ್ತಿಲ್ಲ.

ಉಪಾಧ್ಯಕ್ಷರು.—ತಮಗೂ ಗೊತ್ತಿರುವಂತೆ ಪ್ರಶ್ನೆ ಹಾಕುವವರು ಮೂರು ಉಪಪ್ರಶ್ನೆಗಳನು ಹಾಕಬಹುದು ಮತ್ತು ಇತರರು ಮೂರು ಉಪಪ್ರಶ್ನೆಗಳನ್ನು ಹಾಕಬಹುದು ಎಂದು ಒಪ್ಪಲಾಗಿತ್ತು. ಆದರಂತೆ 20 ಪ್ರಶ್ನೆಗಳು ಇರುವಂತೆ ಈಗ ಮಾಡಲಾಗಿದೆ. ತಾವು ಇದನ್ನು ಸರಿಯಾಗಿ ಕ್ರಮವಾಗಿ ಮಾಡಬಹುದು. ತಮ್ಮ ಹಕ್ಕಿಗೆ ಚ್ಯುತಿ ಬಾರದಂತೆ ಇದನ್ನು ಬೇಕಾದರೆ ಮಾರ್ಪಾಡು ಮಾಡಬಹುದು. ಇದನ್ನು ಪರಿಶೀಲನೆ ಮಾಡೋಣ.

ಶ್ರೀ ಹೆಚ್. ಎನ್. ನಂಜೇಗೌಡ.—ಒಂದು ಗಂಟೆ ಕಾಲ ಇರುವ ಪ್ರಶ್ನೋತ್ತರದ ಕಾಲವನ್ನು ಹೆಚ್ಚು ಕಾಲ ವಿಸ್ತರಿಸುವುದು ಅಗತ್ಯವಲ್ಲವೇ ?

ಉಪಾಧ್ಯಕ್ಷರು.—ಈ ಸಭೆಯವರು ಪ್ರಶ್ನೋತ್ತರ ಕಾಲವನ್ನು ನಾಲ್ಕು ಗಂಟೆಗಳು ಬೇಕಾದರೂ ಇಡಿ ಎಂದು ಹೇಳಿದರೆ ಅದರಂತೆ ಮಾಡಲು ನನ್ನದೇನೂ ಅಭ್ಯಂತರವಿಲ್ಲ. ಸಭೆಯವರು ಹೇಗೆ ಹೇಳಿದರೆ ಹಾಗೆ ಮಾಡಬಹುದು.

I have been following the existing Rules.

ಶ್ರೀ ಬಿ. ಡಿ. ಜತ್ತಿ (ಆಹಾರ ಮತ್ತು ನಿತ್ಯೋಪಯೋಗಿ ಸರಬರಾಜಿನ ಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರಾದ ಶ್ರೀ ವಿ. ಎನ್. ಪಾಟೀಲರು ಒಂದು ವಿಚಾರ ಇಲ್ಲಿ ಹೇಳಿದರು ? ನಾನು ಇಲ್ಲಿ ಪ್ರಶ್ನೆಗೆ ಉತ್ತರ ಕೊಡುವಾಗ ಮಾನ್ಯ ಸದಸ್ಯರಾದ ವಿ. ಎನ್. ಪಾಟೀಲರವರ ಹೆಸರನ್ನು ಕುರಿತು ಹೇಳಲಿಲ್ಲ. ಅದು ಇತರ ಅಡ್ವೊಕೇಟುಗಳಿಗೂ ಅನ್ವಯವಾಗುತ್ತದೆ. ಇದರಿಂದ ಮಾನ್ಯ ಸದಸ್ಯರು ನನ್ನ ಬಗ್ಗೆ ತಪ್ಪು ಕಲ್ಪನೆ ಮಾಡಿರುವಂತೆ ಕಾಣುತ್ತದೆ. ಅದು ಸರಿಯಲ್ಲ.

ಶ್ರೀ ಎಂ. ನಾಗಪ್ಪ.—ತಾವು ಇಲ್ಲಿ ರೂಲಿಂಗ್ ಕೊಡುವುದಕ್ಕೆ ಮುನ್ನ ನಾವೆಲ್ಲ ಲಾಯರುಗಳೂ ಇರುವುದರಿಂದ ನಮ್ಮ ವಿಚಾರವನ್ನೂ ಪೂರ್ತಿ ಕೇಳಿ ಆ ನಂತರ ರೂಲಿಂಗು ಕೊಡುವುದು ಒಳ್ಳೆಯದು. I am also an advocate. Shall I have no right to represent the matter even though I have not taken brief ? The explanation given by the Minister is that he has nothing to say against Sri V. N. Patil. Sri V. N. Patil is not the only practising advocate there ; there are so many I am one of them. Can I ask, being an advocate, has he no right to represent unless he has taken the brief ?

Mr. DEPUTY SPEAKER.—I have understood the point and I will give a ruling.

Sri M. NAGAPPA.—When once the ruling is given, can we challenge the ruling even if our feelings are wounded ? There is a ruling of the House Commons and there is also a Standing Order which says that only a member who has received any brief from a particular client and if such matter has come on the floor of the House, in such cases, such advocates are precluded and not all advocates. The insinuation made by the Minister affects all the advocates. I submit it is a matter of privilege of the members. I submit that a considered ruling may be given keeping this point in view.

Mr. DEPUTY SPEAKER.—Yes.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಸ್ವಾಮೀ ತಾವು ರೂಲಿಂಗು ಕೊಡುವುದಕ್ಕೆ ಇಲ್ಲಿ ಮಾನ್ಯ ಸದಸ್ಯರುಗಳು ಲಾಯರುಗಳಾಗಿರುವವರು ಏನು ಹೇಳುತ್ತಾರೆ ಅದನ್ನೂ ಕೇಳಿಕೊಂಡು ಆ ನಂತರ ರೂಲಿಂಗು ಕೊಡುವುದು ಉತ್ತಮ ಮತ್ತು ಇಲ್ಲಿ ಸದಸ್ಯರುಗಳು ಹೇಳುವುದಕ್ಕೂ ಒಂದು ಅವಕಾಶ ಕೊಟ್ಟಂತಾಗುತ್ತದೆ.

ಉಪಾಧ್ಯಕ್ಷರು. ಎಲ್ಲರನ್ನೂ ಕೇಳಲೇ ಬೇಕು ಎಂದಿಲ್ಲ. if necessary ಎಂದು ಇದೆ.

BUDGET ESTIMATES FOR 1968-69

Demands for Grants

DEMAND NOS. 17 AND 3.

(Debate Continued)

ಶ್ರೀಮತಿ ಕೆ. ಲೀಲಾವತಿ ರೈ (ಬಂಟ್ವಾಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಯವರು ತಂದಂತಹ ಡಿಮ್ಯಾಂಡನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ನಾವು ಏನು ಇಂದು ಕಂಪಲ್ಸರಿ ವಿದ್ಯಾಭ್ಯಾಸ ಎಂದು ತಿಳಿದುಕೊಂಡಿದ್ದೇವೆ, ಅದು ವಿದ್ಯೆಯ ಬುನಾದಿಯನ್ನು ಹಾಕುತ್ತಿದೆ. ಕೆಲವು ಸದಸ್ಯರು ಸಲಹೆಗಳನ್ನು ಕೊಟ್ಟಂತೆ ಮೊದಲು ಪ್ರೈಮರಿ ಎಜುಕೇಶನ್ ವಿಚಾರ ಹೇಳುತ್ತೇನೆ. ಅದಕ್ಕೆ ಸಂಪೂರ್ಣ ಸರ್ಕಾರದ ಬೆಂಬಲಬೇಕು. ಇವತ್ತು ಸರ್ಕಾರದವರು ಕೊಡುತ್ತಿರುವುದು ಸಾಕಾಗುತ್ತಾ ಇಲ್ಲ. ಒಂದು ಕೋಣೆಗೆ ಒಂದು ಸಾವಿರ ಕೊಡುತ್ತಿರುವುದು ಸಾಕಾಗುತ್ತಾ ಇಲ್ಲ. ತಾಲ್ಲೂಕು ಬೋರ್ಡಿನಲ್ಲೂ ಹಣವಿಲ್ಲ. ಆದ್ದರಿಂದ ಕಟ್ಟಡಗಳನ್ನು ಸರ್ಕಾರದವರೇ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಎರಡನೆಯದಾಗಿ ಅಲ್ಲಿರುವ ಮಕ್ಕಳ ಸಂಖ್ಯೆ 40 ಇದ್ದರೆ ಒಂದು ಉಪಾಧ್ಯಾಯರನ್ನು ಕೊಡುವಂಥದ್ದು. ಅಲ್ಲಿ 40 ಮಕ್ಕಳು ಇದ್ದರೂ ನಾಲ್ಕು ಕ್ಲಾಸ್ ಇರುತ್ತದೆ. ಅದಕ್ಕೆ ಒಬ್ಬ ಉಪಾಧ್ಯಾಯರನ್ನು ಕಳಿಸಿದರೆ, ನಮ್ಮ ವಿದ್ಯೆಯ ಬುನಾದಿಯು ಎಷ್ಟು ಗಟ್ಟಿಯಾಗಿರುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಆದ್ದರಿಂದ ಅದನ್ನು ಸಡಿಲಗೊಳಿಸಿ, 25 ಹುಡುಗರಿಗೆ ಒಬ್ಬ ಉಪಾಧ್ಯಾಯರನ್ನು ಕೊಡುವಂತೆ ಮಾಡಿದರೆ, ಅಲ್ಲಿನ ಶಾಲಾ ಮಕ್ಕಳಿಗೆ ವಿದ್ಯೆಯ ತಳಪಾಯವು ಗಟ್ಟಿಮಾಡಿದ ಹಾಗೆ ಆಗಿ, ಮುಂದೆ ಬರುವ ಹುಡುಗರಿಗೆ ಬಹಳ ಅನುಕೂಲವಾಗಿ ಅವರ ಭವಿಷ್ಯವು ಉತ್ತಮವಾಗುತ್ತದೆ. ಮಾನ್ಯ ಮಂತ್ರಿಯವರು ಇದಕ್ಕೆ ಖರ್ಚು ಜಾಸ್ತಿಯಾಗುತ್ತದೆಂದು ತಿಳಿದುಕೊಳ್ಳಬಹುದು. ಆದರೂ, ನಮ್ಮ ವಿದ್ಯೆಯ ಏಳಿಗೆಯ ದೃಷ್ಟಿಯಿಂದ ಅದನ್ನು ಮಾಡುವುದು ಸೂಕ್ತವೆಂದು ನಾನು ಸಲಹೆ ಮಾಡಲಿಚ್ಛಿಸುತ್ತೇನೆ. ಪ್ರತಿ ಹಳ್ಳಿಗಳಲ್ಲಿ 5—6 ಮೈಲಿಗಳಿಗೆ ಅಥವಾ 7—8 ಮೈಲಿಗಳಿಗೆ ಹೈಸ್ಕೂಲುಗಳನ್ನು ತೆರೆಯುತ್ತಿದ್ದಾರೆ. ಅಲ್ಲಿಯೂ ಕೂಡ ಕಟ್ಟಡಗಳಿಗೆ ಸಾಕಷ್ಟು ಹಣ ಸಿಗುತ್ತಿಲ್ಲ. ಸರ್ಕಾರದವರು 50 ಪರ್‌ಸೆಂಟ್ ಕೊಡುವ ರೂಲ್ಸ್ ಮಾಡಿಕೊಂಡಿದ್ದಾರೆ. ಅದನ್ನು ಸಡಿಲಗೊಳಿಸಬೇಕು, ಕೆಲವು ಹಿಂದುಳಿದ ಜಾಗಗಳಲ್ಲಿ ಜನರು ಮುಂದೆ ಬರುವುದಿಲ್ಲ, ಅಲ್ಲಿ ಹೈಸ್ಕೂಲು ತೆರೆಯುವುದಾದರೆ, ಸರ್ಕಾರದವರೇ ಅದನ್ನು ತೆಗೆದುಕೊಳ್ಳಬೇಕು. ಏಕೆಂದರೆ ನಮ್ಮ ವಿದ್ಯಾಭ್ಯಾಸ ಬಹಳ ಮುಖ್ಯವಾದುದು. ವಿದ್ಯೆಗೆ ಹಣವಿಲ್ಲವೆಂದು ಹೇಳಿದರೆ, ನಾವು ಬಹಳ ಹಿಂದುಳಿಯುತ್ತೇವೆ. ಪರದೇಶಗಳಿಗಿಂತ ಮೊದಲೇ ನಾವು ಹಿಂದೆ ಬಿದ್ದಿದ್ದೇವೆ. ಆದ್ದರಿಂದ ಅದನ್ನು ಭದ್ರ ಮಾಡಿಕೊಂಡು ಮುಂದೆ ಸಾಗುವುದು ಅಗತ್ಯವೆಂದು ನಾನು ಸೂಚಿಸುತ್ತೇನೆ.

ಇನ್ನು ರಾಜಕೀಯ ಸಂತ್ರಸ್ಥರಿಗೆ ವಿದ್ಯಾ ಸವಲತ್ತನ್ನು ಕೊಡುತ್ತಿದ್ದಾರೆ. ಅದಕ್ಕೆ ಸರಿಯಾದ ರೂಲ್ಸ್ ಅಂಡ್ ರೆಗ್ಯುಲೇಶನ್ ಮಾಡಿದ್ದಾರೆಯೇ ಎಂದು ತಿಳಿದು ಬರುವುದಿಲ್ಲ. ಅದು ಎಲ್ಲಿ, ಎಷ್ಟು ಕೊಡುತ್ತಿದ್ದಾರೆಂಬುದು ಯಾರಿಗೂ ತಿಳಿದು ಬಂದಿಲ್ಲ, ಮತ್ತು ಆರ್ಡರ್ಸ್ ಪಾಸ್ ಮಾಡುವವರು ಯಾರು ಎಂದು ಜನರಿಗೆ ತಿಳಿವಳಿಕೆಗೆ ಬಂದಿಲ್ಲ. ಆದ್ದರಿಂದ ಶಾಲೆಗಳಲ್ಲಿ ಮತ್ತು ಪ್ರೈವೇಟ್ ಟೆಕ್ನಿಕಲ್ ಸ್ಕೂಲುಗಳಲ್ಲಿ, ಈ ರಾಜಕೀಯ ಸಂತ್ರಸ್ಥರ ಮಕ್ಕಳಿಗೆ ಏನು ಸವಲತ್ತು ಕೊಡಬೇಕು, ಯಾರು ಕೊಡಬೇಕು ಎಂಬುದನ್ನು ಸರಿಯಾದ ರೀತಿಯಲ್ಲಿ ಮಾಡುವುದು ಅಗತ್ಯವೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಬಹಳ ಚರ್ಚೆಯಾಗುತ್ತಿದೆ. ಒಂದು ಕಡೆ ಜಾಗ ಕೊಡುವ ವಿಷಯದಲ್ಲಿ, ವಿದ್ಯೆ ಕೊಡುವ ವಿಚಾರದಲ್ಲಿ, ಎಲ್ಲದಕ್ಕೂ ಸರ್ಕಾರದವರು ಸಹಾಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದನ್ನು ಸರ್ಕಾರಿ ಹಾಗೂ ಪ್ರೈವೇಟ್ ಕಾಲೇಜು ಟೆಕ್ನಿಕಲ್ ಸ್ಕೂಲುಗಳಲ್ಲಿ ಸರಿಯಾದ ರೀತಿಯಲ್ಲಿ ಜಾರಿಗೆ ಬರುವಂತೆ ಮಾಡಬೇಕು.

ಇನ್ನು ಪ್ರೈಮರಿ ಸ್ಕೂಲು ಟೀಚರ್ಸ್‌ಗಳ ವಿಚಾರ. ಇವತ್ತು ಏನು ಮಾಡುತ್ತಿದ್ದಾರೆ ಅಂದರೆ, ಈ ಉಪಾಧ್ಯಾಯರುಗಳನ್ನು ದೂರ ದೂರ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡುತ್ತಿದ್ದಾರೆ. ಆ ರೀತಿ ಮಾಡುವುದು ಸರಿಯಲ್ಲ. ಅವರನ್ನು ಜಿಲ್ಲೆಯೊಳಗೆ ಅಲ್ಲಿಂದಲ್ಲಿಗೆ ಟ್ರಾನ್ಸ್‌ಫರ್ ಮಾಡುವುದರಿಂದ ಅವರಿಗೆ ಅನುಕೂಲವಾಗುತ್ತದೆ, ಮತ್ತು ಅವರ ಕಷ್ಟ ಪರಿಹಾರವಾಗುತ್ತದೆ. ಅದೇ ರೀತಿ ಪ್ರತಿ ಶಾಲೆಗಳಲ್ಲೂ ಒಂದೇ ತರವಾದ ಪುಸ್ತಕಗಳು ಇರಬೇಕು. ಒಂದು

ಶಾಲೆಯಲ್ಲಿ ಒಂದು ರೀತಿ, ಇನ್ನೊಂದು ಶಾಲೆಯಲ್ಲಿ ಇನ್ನೊಂದು ರೀತಿ ಪಾಠ ಪುಸ್ತಕಗಳನ್ನು ಮಾಡಿದರೆ, ಕೆಲವರಿಗೆ ಮಧ್ಯದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾವಣೆಯಾಗುವ ಕಾಲದಲ್ಲಿ ಅವರ ಮಕ್ಕಳಿಗೆ, ಈ ರೀತಿ ಪುಸ್ತಕಗಳು ಬೇರೆ ಬೇರೆ ಇರುವುದರಿಂದ ಬಹಳ ತೊಂದರೆ ಯಾಗುತ್ತದೆ. ಆದ್ದರಿಂದ ಅದನ್ನು ಎಲ್ಲಾ ಕಡೆಗಳಲ್ಲೂ ಒಂದೇ ರೀತಿಯಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೆಲವು ಪಾರ್ಟ್ ಟೈಮ್ ಲೆಕ್ಚರರ್ಸ್ ಏನಿದ್ದಾರೆ, ಅವರಿಗೆ ಒಂದು ಜಿಲ್ಲೆಯಲ್ಲಿ ಒಂದು ರೀತಿ, ಇನ್ನೊಂದು ಜಿಲ್ಲೆಯಲ್ಲಿ ಇನ್ನೊಂದು ರೀತಿ ಸಂಬಳ ಕೊಡುತ್ತಿದ್ದಾರೆ. ಕೆಲವರಿಗೆ ಹೆಚ್ಚು ಕೆಲವರಿಗೆ ಕಡಿಮೆ ಕೊಡುತ್ತಿದ್ದಾರೆ. ಅದನ್ನು ಮಾನ್ಯ ಮಂತ್ರಿಯವರು ಗಮನಿಸಿ, ಎಲ್ಲರಿಗೂ ಒಂದೇ ರೀತಿಯಾಗಿ ಮಾಡುವಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಟೆಕ್ನಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಏನು ಅಲಾಟ್ ಮಾಡುತ್ತಿದ್ದಾರೆ, ಅದು ಸರ್ಕಾರಿ ಹಾಗೂ ಪ್ರೈವೇಟ್ ಕಾಲೇಜುಗಳಲ್ಲಿ ತೆಗೆದುಕೊಳ್ಳುವುದಾದರೆ, ಹೊರ ರಾಜ್ಯ ಔಟ್ ಸೈಡ್ ದಿ ಸ್ಟೇಟ್ ಎಂದು ಏನು ಅಲಾಟ್ ಮಾಡುತ್ತಾರೆ, ಅದಕ್ಕೆ ಒಂದು ರಿಸ್ಟ್ರಿಕ್ಷನ್ ಇಟ್ಟುಕೊಳ್ಳಬೇಕು. ಒಂದು ಸರಿಯಾದ ರೀತಿಯಲ್ಲಿ ಹೊರಗಿನವರಿಗೆ ಎಷ್ಟು ಕೊಡಬೇಕು, ರಾಜ್ಯದವರಿಗೆ ಎಷ್ಟು ಕೊಡಬೇಕೆಂದು ಒಂದು ಸಮಾನವಾದ, ರೂಲ್ಸ್ ಮಾಡಿದರೆ, ನಮ್ಮ ರಾಜ್ಯದ ಮಕ್ಕಳಿಗೂ ಬಹಳ ಅನುಕೂಲ ಮಾಡಿದ ಹಾಗೆ ಆಗುತ್ತದೆ. ಏಕೆಂದರೆ ಕೆಲವು ಕಾಲೇಜುಗಳಲ್ಲಿ ಹೊರಗಿನವರು ಹೆಚ್ಚು ದುಡ್ಡು ಕೊಟ್ಟು ಜಾಸ್ತಿ ಜನ ಅಡ್ಮಿಟ್ ಆಗುತ್ತಿದ್ದಾರೆ. ಅದನ್ನು ಸರಿಪಡಿಸಿ ಪ್ರತಿಯೊಂದು ಕಾಲೇಜುಗಳಲ್ಲಿ ಇಂತಿಷ್ಟೇ ಪರ್ಸೆಂಟ್ ಹೊರಗಡೆಯವರಿಗೆ ಕೊಡಬೇಕೆಂದು ರೂಲ್ಸ್ ಮಾಡಿ ರಾಜ್ಯದ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[CHAIRMAN (SMT. NAGARATHNAMMA HIREMATH) in the Chair]

†ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಅಧ್ಯಕ್ಷಣಿಯವರೇ, ಈ ದಿನ ನಮ್ಮ ಮುಂದಿರತಕ್ಕಂತಹ ಸುಮಾರು 36 ಕೋಟಿ ರೂಪಾಯಿಯ ವಿದ್ಯಾಭ್ಯಾಸ ಖಾತೆಯ ಬೇಡಿಕೆಯ ಬಗ್ಗೆ ನಾನು ವಿರೋಧವನ್ನು ವ್ಯಕ್ತಪಡಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಈ 36 ಕೋಟಿ ರೂಪಾಯಿಗಳ ವ್ಯವಹಾರ ಸಾಕಾದಷ್ಟು ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಾ ಇಲ್ಲ, ಇದರಿಂದ ಸರಿಯಾದ ವಿದ್ಯೆ ಬರುವುದಕ್ಕಿಂತ ಹೆಚ್ಚು ಕಡೆಗಳಲ್ಲಿ ಅನಾನುಕೂಲವಾಗುವುದರ ಬಗ್ಗೆ ಕೆಲವು ವಿವರಗಳನ್ನು ಕೊಡುತ್ತೇನೆ. ನನ್ನಲ್ಲಿ ಸಾಕಾದಷ್ಟು ವಿವರ ಇದೆ. ಅದರಲ್ಲಿ ಕಾಲಾವಕಾಶ ಇಲ್ಲದಿರುವುದರಿಂದ ಕೆಲವನ್ನು ಮಾತ್ರ ಹೇಳುತ್ತೇನೆ. ನಾವು ಕೊಡತಕ್ಕ ವಿದ್ಯಾಭ್ಯಾಸದಲ್ಲಿ ಒಂದು ಸಂಖ್ಯೆ ಹೆಚ್ಚಾಗುತ್ತದೆ ಹೊರತು, ಸರಿಯಾದಂತಹ ವಿದ್ಯಾಭ್ಯಾಸ ಆಗುತ್ತದೆಯೇ ಎಂದು ನೋಡಿದರೆ, ಶಿಕ್ಷಣಕ್ಕಿಂತ ಅಶಿಕ್ಷಣವೇ ಹೆಚ್ಚಾಗಿ ಬೆಳೆಯುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಅನೇಕ ಕಡೆ ಇವತ್ತು ಫ್ರೀ ವಿದ್ಯಾಭ್ಯಾಸ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಫ್ರೀ ವಿದ್ಯಾಭ್ಯಾಸದ ವೈಖರಿಯ ಬಗ್ಗೆ ಕೆಲವು ಹೇಳುತ್ತೇನೆ. ನನ್ನ ಮಗನನ್ನು ಫೋರ್ತ್ ಫಾರ್ಮಿಗೆ, ಒಂದು ಖಾಸಗೀ ಶಾಲೆಗೆ ಅಡ್ಮಿಟ್ ಮಾಡಿದ್ದೆ. ಖಾಸಗೀ ಶಾಲೆಗೆ ಸೇರಿಸಿದಾಗ 74 ರೂಪಾಯಿ 40 ಪೈಸೆ ತೆಗೆದುಕೊಂಡು ಅಡ್ಮಿಶನ್ ಕೊಟ್ಟರು. ಅದರ ವಿವರ ಹೀಗಿದೆ :

"Received with thanks from Sri T. R. Shamanna Rs. 40 only as voluntary contribution towards school fund."

ಎರಡನೇ ರಶೀತಿನಲ್ಲಿ :

"Received from Sri T. R. Shamanna, physical education, class, magazines, calendar, duplicate medical certificate, and other fees Rs. 11".

ಇದರ ಜೊತೆಗೆ ಇನ್ನೊಂದು ರಶೀತಿಯಲ್ಲಿ ಸ್ಕೂಲಿನ ಅಡ್ಮಿಷನ್ ಫೀಸ್‌ಗಾಗಿ ಒಂದನೇ ಐಟಂನಲ್ಲಿ ಹಾಗೂ ಇನ್ನಿತರ ಚಿಲ್ಲರೆ ಬಾಬುಗಳಿಗಾಗಿ ಎಂದು 27-40 ಪೈಸೆ ಇದೆ. ಹೀಗೆ ಈ ರೀತಿಯಾಗಿ ಒಟ್ಟಿರಿಗೆ ಒಟ್ಟು 74-40 ಪೈಸೆ ಎಂದು ನಾಲ್ಕನೆ ಫಾರಂಗೆ ನನ್ನ ಹುಡುಗನನ್ನು ಅಡ್ಮಿಷನ್ ಟೈಂ

(ಶ್ರೀ ಟಿ. ಆರ್. ಶಾಮಣ್ಣ)

ನಲ್ಲಿ ಫೀಸ್‌ಗಾಗಿ ನಾನು ಕೊಡಬೇಕಾಯಿತು. ಮೂರು ವರ್ಷಗಳ ಕಾಲ ಹೈಸ್ಕೂಲಿನಲ್ಲಿ ಎಲ್ಲರಿಗೂ ಫ್ರೀ ಎಜುಕೇಷನ್ ಎಂದು ಹೇಳುತ್ತಿದ್ದಾರೆ. ಇಲ್ಲಿ ಪ್ರೈವೇಟು ಹೈಸ್ಕೂಲಿನಲ್ಲಿ ನಮ್ಮ ಹುಡುಗನನ್ನು ಸೇರಿಸಿದಾಗ ಅವನಿಗೆ ತಿಂಗಳೊಂದಕ್ಕೆ ಎಂಟು ರೂಪಾಯಿಗಳ ಫೀಸು ಎಂದು ಬೇರೆ ರೂಪದಲ್ಲಿ ಕೊಡಬೇಕಾಗಿದೆ. ಇಲ್ಲಿ ಫ್ರೀ ಎಜುಕೇಷನ್ ಎಂದು ಇದ್ದರೂ ಕೂಡ ನಾನು 74 ರೂಪಾಯಿಗಳ ದಂಡವನ್ನು ಕೊಡಬೇಕಾಗಿ ಬಂತು.

ಆಮೇಲೆ ಮತ್ತೊಂದು ವಿಚಾರ ಎಂದರೆ ನನ್ನ ಮೂರು ಮಕ್ಕಳನ್ನು ಪ್ರೈಮರಿ ಶಾಲೆ ಒಂದಕ್ಕೆ ಸೇರಿಸಿದ್ದೇನೆ. ಅಲ್ಲಿ ಒಬ್ಬೊಬ್ಬ ಹುಡುಗನಿಗೂ 12 ರೂಪಾಯಿಗಳಷ್ಟನ್ನು ಸೇರುವಾಗ ಕೊಡಬೇಕು, ಅನಂತರ ತಿಂಗಳೊಂದಕ್ಕೆ ಏಳು ರೂಪಾಯಿಗಳಂತೆ ಫೀಸು ಕೊಡಬೇಕು. ಹೀಗೆ ಪ್ರೈಮರಿ ಶಾಲೆಯಲ್ಲಿ ಎಲ್ಲ ಫ್ರೀ ಎಜುಕೇಷನ್ ಇದೆ ಎಂದು ಹೇಳುವ ಶಾಲೆಗಳಲ್ಲಿ ನಾನು 89 ರೂಪಾಯಿಗಳನ್ನು ಕೊಡಬೇಕಾಗಿದೆ. ಬಾಯಲ್ಲಿ ಮಾತ್ರ ಪ್ರೈವೇಟು ಸ್ಕೂಲುಗಳಲ್ಲಿಯೂ ಫ್ರೀ ಎಜುಕೇಷನ್‌ಗಾಗಿ ಪ್ರೊವೈಡು ಮಾಡಲಾಗಿದೆ ಎಂದು ಹೇಳುತ್ತಾರೆ. ಇಲ್ಲಿನ ಫ್ರಿ ಎಜುಕೇಷನ್ ಸಿಸ್ಟಂ ಯಾವ ರೀತಿ ಮತ್ತು ಎಲ್ಲ ವಿಧವಾದ ಸೌಲಭ್ಯಗಳನ್ನು ಸರಕಾರದಿಂದ ಪಡೆಯುತ್ತಿದ್ದರೂ ಇಲ್ಲಿ ಹೀಗಿದೆ. ಇನ್ನು ಸರಕಾರದ ಶಾಲೆಗಳಿರುವ ಕಡೆ ಎಷ್ಟರಮಟ್ಟಿಗೆ ಈ ವಿದ್ಯಾಭ್ಯಾಸ ನಡೆಯುತ್ತಿದೆ ಎನ್ನುವುದನ್ನು ಮುಂದೆ ವಿವರವಾಗಿ ನೋಡೋಣ.

ಎರಡನೇದಾಗಿ ಕಾರ್ಪೊರೇಷನ್ನಿನವರು ಈಗ 14 ಹೈಸ್ಕೂಲುಗಳನ್ನು ನಡೆಸುತ್ತಿದ್ದಾರೆ, ಕೆಲವು ಪ್ರೈಮರಿ ಸ್ಕೂಲುಗಳನ್ನೂ ಹಾಗೂ ನರ್ಸರೀ ಸ್ಕೂಲುಗಳನ್ನೂ ನಡೆಸುತ್ತಿದ್ದಾರೆ. ಕಾರ್ಪೊರೇಷನ್ನಿನವರು ಅವರು ನಡೆಸುವ ಸ್ಕೂಲುಗಳಿಗಾಗಿ ಅವರು ಅಂದಾಜು ಇಟ್ಟುಕೊಂಡಿರುವಂತೆ ಸುಮಾರು ಹದಿನಾಲ್ಕು ಲಕ್ಷ ಚಿಲ್ಲರೆಯಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಮತ್ತು ಕಾರ್ಪೊರೇಷನ್ನಿನಲ್ಲಿರುವ ಹೈಸ್ಕೂಲುಗಳಿಂದ ಎಸ್.ಎಸ್.ಎಲ್.ಸಿ. ಪಬ್ಲಿಕ್ ಎಕ್ಸಾಮಿನೇಷನ್‌ಗಾಗಿ ಹೋಗಿರುವವರ ಸಂಖ್ಯೆ 2,195 ಆದರೆ ಇದರಲ್ಲಿ ಒಟ್ಟು ಪಾಸಾಗಿರುವವರ ಸಂಖ್ಯೆ 227 ಎಂದರೆ ಇದರ ಪರ್ಸೆಂಟೇಜು 10·31 ಬರುತ್ತದೆ. ಇದಕ್ಕಾಗಿ ಕಾರ್ಪೊರೇಷನ್ ಖರ್ಚು ಮಾಡುತ್ತಿರುವುದು 14 ಲಕ್ಷ ಚಿಲ್ಲರೆ, ಆದರೆ ಇಲ್ಲಿ ಪಾಸಾಗಿರುವವರ ಸಂಖ್ಯೆ ಕೇವಲ 227 ಹುಡುಗರು ಮಾತ್ರ. ನಾನು ಇಲ್ಲಿ ಗವರ್ನಮೆಂಟು ಹೈಸ್ಕೂಲುಗಳ ಮತ್ತು ಇತರ ಸ್ಕೂಲುಗಳ ಸಂಖ್ಯೆ ಮತ್ತು ಅದರ ಡೀಟೇಲ್ಸ್‌ಗಳನ್ನು ಸ್ವಲ್ಪ ಹೇಳಬೇಕಾಗಿದೆ. ಒಂದು ಸರಕಾರಿ ಪ್ರೈಮರಿ ಸ್ಕೂಲು ಇದೆ. ಇಲ್ಲಿ ಏಳು ಸ್ಕೂಲುಗಳು ನಡೆಯುತ್ತಿವೆ. 25 × 15 ಅಡಿಗಳಷ್ಟಿರುವ ಸುಮಾರು ಹತ್ತು ರೂಮುಗಳು ಇವೆ. ಇದರಲ್ಲಿ ಬೆಳಗ್ಗೆ ಏಳೂವರೆ ಗಂಟೆಯಿಂದ ಹನ್ನೊಂದೂವರೆ ಗಂಟೆಯವರೆಗೆ ನಾಲ್ಕು ಶಾಲೆಗಳು ಎಂದರೆ ಪ್ರೈಮರಿ ಬಾಯ್ಸ್ ಸ್ಕೂಲು, ಪ್ರೈಮರಿ ಗರ್ಲ್ಸ್ ಸ್ಕೂಲು, ಪ್ರೈಮರಿ ತಮಿಳು ಸ್ಕೂಲು ಮತ್ತು ಪ್ರೈಮರಿ ಉರ್ದು ಸ್ಕೂಲು ನಡೆಯುತ್ತಿದೆ. ಇವೆಲ್ಲ ಸ್ಕೂಲುಗಳಲ್ಲಿ ಒಟ್ಟು ಹುಡುಗರ ಸಂಖ್ಯೆ 1220 ಮತ್ತೆ ಮಧ್ಯಾಹ್ನ ಹನ್ನೊಂದೂವರೆ ಗಂಟೆಯಿಂದ ಐದು ಗಂಟೆಯವರೆಗೆ ಬಾಯ್ಸ್ ಮಿಡಲ್ ಸ್ಕೂಲು, ಗರ್ಲ್ಸ್ ಮಿಡಲ್ ಸ್ಕೂಲು, ಉರ್ದು ಮಿಡಲ್ ಸ್ಕೂಲು ನಡೆಯುತ್ತವೆ. ಇದರಲ್ಲಿರುವ ಒಟ್ಟು ಹುಡುಗರ ಸಂಖ್ಯೆ 2901 ಇಲ್ಲೂ ಕೂಡ ಹತ್ತು ರೂಂಗಳಿವೆ ಮತ್ತು ಈ ಶಾಲೆಗಳ ಹುಡುಗರಿಗೆ ಯಾವ ಆಟದ ಮೈದಾನದ ಸೌಕರ್ಯಗಳೂ ಮಾಡಿಲ್ಲ. ಮತ್ತು ಈ ರೀತಿಯಾಗಿ ಸರಕಾರದ 250 ಸ್ಕೂಲುಗಳು ಇವೆ. ಇವುಗಳ ಸ್ಟ್ಯಾಟಿಸ್ಟಿಕ್ಸನ್ನು ನೋಡಿದರೆ "Worst Results are in Government Schools". ಇದರಿಂದ ಸರಕಾರದವರು ಸುಮಾರು 36 ಕೋಟಿಯಷ್ಟು ವ್ಯವಹಾರ ಮಾಡುವ ವೈಖರಿ ಹೇಗಿದೆ ಎನ್ನುವುದನ್ನು ನಾನು ಇಲ್ಲಿ ಹೇಳಬೇಕಾಗಿದೆ. ಇವುಗಳ ಎಲ್ಲ ಅಂಕೆ ಅಂಶಗಳನ್ನೂ ಇಲ್ಲಿ ನಾನು ಕೊಡಲು ನನ್ನಲ್ಲಿ ವಿವರಗಳೆಲ್ಲಾ ಇವೆ. ಆದರೆ ನನಗೆ ಕಾಲಾವಕಾಶ ಕಡಿಮೆ ಇರುವ ಕಾರಣ ಅವುಗಳ ವಿವರಗಳನ್ನು ಇಲ್ಲಿ ಹೇಳುವ ಗೋಜಿಗೆ ಹೋಗುವುದಿಲ್ಲ. ಬೇರೆ ಒಂದು ಸಂದರ್ಭದಲ್ಲಿ ಅವುಗಳ ವಿವರಗಳನ್ನು ಹೇಳೋಣ.

ಇನ್ನು ಕೆಲವು ಕಡೆಗಳಲ್ಲಿ ಇರುವ ಕಾಲೇಜುಗಳಲ್ಲಿ ಸಾಧಾರಣವಾಗಿ ಅಡ್ಮಿಷನ್ ಟೈಂನಲ್ಲಿ ಹುಡುಗರಿಗೆ ಬಹಳ ತೊಂದರೆಗಳಾಗುತ್ತಿವೆ. ಇದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಕಾಲೇಜುಗಳಿಗೆ ಅಡ್ಮಿಷನ್‌ಗಳನ್ನು ಕೊಡುವ ಬಗ್ಗೆ ಸರಿಯಾದ ಯಾವ ಒಂದು ಯೋಜನೆಯೂ ಇಲ್ಲ. ಆದರೆ ಈಗ ಎಲ್ಲ ಕಡೆಗಳಲ್ಲೂ ಪೂಲು ಮಾಡಿ ಒಂದೊಂದು ಕಾಲೇಜಿಗೆ ಇಷ್ಟಿಷ್ಟು ಸಂಖ್ಯೆಯಲ್ಲಿ ಹುಡುಗರು ಇರಬೇಕೆಂದು ಎಲ್ಲ ಕಾಲೇಜುಗಳಿಗೂ ನಿಗದಿ ಮಾಡಿ ಹಂಚುತ್ತಾರೆ. ಇದರಿಂದ ಯಾವ ಹುಡುಗರು ಯಾವ ಕಾಲೇಜಿನಲ್ಲಿ ಓದಬೇಕೆಂದು ಅಪೇಕ್ಷೆಪಡುತ್ತಾರೋ ಅವರಿಗೆ ಅಲ್ಲಿ ಸೇರಲು ಅವಕಾಶ ಸಿಗುತ್ತಿಲ್ಲ. ಇದರಿಂದ ಬಹಳ ತೊಂದರೆಯಾಗುತ್ತದೆ. ಈಗ ಉದಾಹರಣೆಯಾಗಿ ಹೇಳಬೇಕಾದರೆ

ಮಲ್ಲೇಶ್ವರದಲ್ಲಿರುವ ಒಬ್ಬ ಹುಡುಗನನ್ನು ಬಸವನಗುಡಿಯಲ್ಲಿರುವ ವಿಜಯ ಕಾಲೇಜಿಗೆ ಹೋಗಬೇಕೆಂದು ಮಾಡಿದರೆ ಇಂತಹ ಹುಡುಗನಿಗೆ ದಿನವೂ ಮಲ್ಲೇಶ್ವರದಿಂದ ಬರಬೇಕು ಎಂದರೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ವಿದ್ಯಾರ್ಥಿಗಳು ಯಾವ ಯಾವ ಕಾಲೇಜಿಗೆ ಸೇರಬೇಕೆಂದು ಅಪೇಕ್ಷೆ ಪಡುತ್ತಾರೋ ಅಂತಹ ಕಾಲೇಜುಗಳಿಗೆ ಅವರು ಸೇರಲು ಅವಕಾಶ ಮಾಡಿಕೊಡಬೇಕು. ಹಾಗಿಲ್ಲದೆ ಈಗ ಪೂಲು ಮಾಡ ತ್ತೇವೆ ಎಂದು ಒಬ್ಬೊಬ್ಬರನ್ನು ಒಂದೊಂದು ಕಡೆಗೆ ಹಂಚಿದರೆ ಅದು ಸರಿಯಾಗಿರುವುದಿಲ್ಲ. ಇದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೂ ಒಳ್ಳೆಯದಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮತ್ತೆ ಹೋದ ಸಾರಿ ನಾನು ಇಲ್ಲಿ ಮಾತನಾಡುವಾಗ ಇಲ್ಲಿರುವ ಯೂನಿವರ್ಸಿಟಿಗಳ ಬಗ್ಗೆ ಹೇಳಿದ್ದೆ. ನಮ್ಮಲ್ಲಿ ಮೂರು ಯೂನಿವರ್ಸಿಟಿಗಳಿವೆ. ಈ ಮೂರು ಯೂನಿವರ್ಸಿಟಿಗಳಲ್ಲೂ ಒಂದೊಂದು ರೀತಿಯಾದ ಸಿಲಬಸ್ಸು ಇರುತ್ತದೆ ಮತ್ತು ಪಾಠ ಹೇಳಿ ಕೊಡುವ ಕಾರ್ಯಕ್ರಮವೂ ಬೇರೆ ಬೇರೆ ರೀತಿಯದಾಗಿರುತ್ತದೆ. ಒಂದಕ್ಕೊಂದಕ್ಕೆ ಸರಿಯಾದ ಕೋ-ಆರ್ಡಿನೇಷನ್ ಇರುವುದಿಲ್ಲ. ಮೈಸೂರು ಯೂನಿವರ್ಸಿಟಿಯಲ್ಲಿ ಡಿಗ್ರಿ ಪಡೆಯತಕ್ಕವರು ಒಂದು ರೀತಿಯಾಗಿರುತ್ತಾರೆ. ಹಾಗೆ ಬೇರೆ ಇನ್ನೊಂದು ಯೂನಿವರ್ಸಿಟಿಯಲ್ಲಿರುವ ಪಾಠ ಕ್ರಮವೇ ಬೇರೆಯಾಗಿರುತ್ತದೆ. ಇದು ಸರಿಯಾದ ಕ್ರಮವಲ್ಲ. ಸಾಧ್ಯವಾದಷ್ಟುಮಟ್ಟಿಗೆ ಎಲ್ಲ ಯೂನಿವರ್ಸಿಟಿಗಳಲ್ಲೂ ಯೂನಿಫಾರಂ ಆಗಿರುವ ಸಿಲಬಸ್ ಇರುವಂತೆ ಮಾಡುವುದು ಸರಿಯಾಗಿರುತ್ತದೆ. ಈಗ ವರ್ಗವಾಗಿ ಹೋಗುವ ತಂದೆ ತಾಯಿಗಳಿಗೆ ಅವರು ಹುಡುಗರನ್ನು ಓದಿಸಬೇಕು ಎಂದರೆ ಅವರಿಗೆ ಬಹಳ ಕಷ್ಟಗಳಾಗುತ್ತವೆ. ಇದಕ್ಕಾಗಿ ಎಲ್ಲಾ ಯೂನಿವರ್ಸಿಟಿಗಳಲ್ಲೂ ಒಂದೇ ರೀತಿಯಾಗಿರುವ ಸಿಲಬಸ್ ಇಟ್ಟು ಒಂದು ಯೂನಿಫಾರಂ ಆಗಿರುವ ಪದ್ಧತಿಯನ್ನು ಅನುಸರಿಸಬೇಕು ಎಂದು ಇಲ್ಲಿ ಒತ್ತಾಯದಿಂದ ಸರಕಾರಕ್ಕೆ ಹೇಳಲು ಇಷ್ಟಪಡುತ್ತೇನೆ.

ಇನ್ನೊಂದು ವಿಚಾರ ಎಂದರೆ ಅದು ಬಹು ಮುಖ್ಯವಾದ ಲಾಂಗ್ವೇಜು ಪ್ರಾಬ್ಲಂ. ಇದರ ಬಗ್ಗೆ ಇಲ್ಲಿ ಸಾಕಾದಷ್ಟು ಚರ್ಚೆ ಕೂಡ ಈಗಾಗಲೇ ಆಗಿದೆ. ಇದರ ಬಗ್ಗೆ ನನ್ನ ಸಲಹೆ ಇಷ್ಟು. ಎಲ್ಲ ತಜ್ಞರೂ ಹೇಳುವಂತೆ ಶಿಕ್ಷಣ ಮಾಧ್ಯಮ ಕನ್ನಡದಲ್ಲಿರುವುದು ಒಳ್ಳೆಯದು. ಕನ್ನಡದಲ್ಲಿ ಶಿಕ್ಷಣವನ್ನು ಕೊಡುವುದರ ಜೊತೆಗೆ ಸರಕಾರದ ಬೇರೆ ಬೇರೆ ಕಚೇರಿಗಳಲ್ಲಿಯೂ ಎಲ್ಲ ವ್ಯವಹಾರಗಳೂ ಕನ್ನಡದಲ್ಲೇ ನಡೆಯುವಂತೆ ವ್ಯವಸ್ಥೆ ಮಾಡಬೇಕು. ಆದರೆ ಈಗ ಸರಕಾರದವರು ಕನ್ನಡವನ್ನು ಅಭಿವೃದ್ಧಿ ಮಾಡುವುದಕ್ಕೆ ಎಷ್ಟು ಪ್ರಯತ್ನಗಳನ್ನು ಮಾಡಬೇಕೋ ಅಷ್ಟು ಪ್ರಯತ್ನಗಳನ್ನು ಇದುವರೆಗೂ ಮಾಡದೇ ಇರುವುದು ತುಂಬಾ ಶೋಚನೀಯವಾದುದು. ಅಲ್ಲದೆ ಎಲ್ಲವನ್ನೂ ಈಗ ಮಾಡುವಂತೆ ಅವಸರವಸರವಾಗಿ ಮಾಡುವುದು ಸರಿಯಲ್ಲ. ಅಲ್ಲದೆ ಈಗ ಸರಿಯಾದ ಟೆಕ್ಸ್ಟ್ ಬುಕ್ಕುಗಳು ಇಲ್ಲ ಮತ್ತು ಸರಿಯಾಗಿ ಪಾಠ ಹೇಳಿಕೊಡುವ ಉಪಾಧ್ಯಾಯರುಗಳೂ ಇಲ್ಲ. ಇದರ ಬಗ್ಗೆ ಸರಕಾರದವರು ಒಂದು ಸರಿಯಾದ ಕಾರ್ಯಕ್ರಮ ಹಾಕಿಕೊಂಡು ಮಾಡಬೇಕು. ಮಾನ್ಯ ವಿದ್ಯಾ ಮಂತ್ರಿಗಳಿಗೆ ಕನ್ನಡದ ಬಗ್ಗೆ ತುಂಬಾ ಅಭಿಮಾನ ಇದೆ ಎನ್ನುವುದು ನನಗೂ ಗೊತ್ತಿದೆ. ಮತ್ತು ಅವರು ಸರಿಯಾದ ಒಂದು ತಳಹದಿ ಹಾಕಿ ಕನ್ನಡ ಮಾಧ್ಯಮದ ಬಗ್ಗೆ ಮತ್ತು ಕನ್ನಡದಲ್ಲಿ ಆಡಳಿತ ನಡೆಯುವುದರ ಬಗ್ಗೆ ಒಂದು ಸರಿಯಾದ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈಗ ಮಾಡುವಂತೆ ಅವಸರವಸರವಾಗಿ ಯಾವುದನ್ನೂ ಮಾಡಬಾರದು. ಸರಿಯಾಗಿರುವ ಒಂದು ಕಾರ್ಯಕ್ರಮವನ್ನು ಇದರ ಬಗ್ಗೆ ರೂಪಿಸಿಕೊಂಡು ಸರಿಯಾದ ತಳಹದಿಯ ಮೇಲೆ ನಮ್ಮ ಮಾನ್ಯ ವಿದ್ಯಾ ಮಂತ್ರಿಗಳು ಮಾಡುತ್ತಾರೆ ಎನ್ನುವ ನಂಬಿಕೆಯೂ ನನಗಿದೆ. ಇದರಲ್ಲಿ ತ್ರೀ ಲಾಂಗ್ವೇಜು ಪ್ರಾಬ್ಲಂ ಬಗ್ಗೆ ಒಂದು ಫಾರ್‌ಮುಲಾ ಎಂದು ಮಾಡುತ್ತಿರುವುದು ಬರೀ ಥಿಯರಿಟಿಕಲ್ ಆಗಿದೆ. ಇದರಲ್ಲಿರುವುದು ಬರೀ ಥಿಯರಟಿಕಲ್ ಐಡಿಯಾಸ್‌ಗಳೇ ಆಗಿವೆ. ಇದನ್ನು ಪ್ರಾಕ್ಟಿಕಲ್ ಆಗಿ ಮಾಡುವುದೇ ನಮಗೆ ಬೇಕಾಗಿರುವುದು. ನಮಗೆ ವ್ಯವಹಾರಕ್ಕೆ ಬೇಕಾಗಿರುವುದು ಕನ್ನಡ ಮತ್ತು ಹಾಗೇ ಇಂಟರ್‌ನ್ಯಾಷನಲ್ ವ್ಯವಹಾರಕ್ಕೆ ಬೇಕಾಗಿರುವುದು ಇಂಗ್ಲೀಷು, ಇದರ ಜೊತೆಗೆ ಹಿಂದಿಯನ್ನು ಕಲಿಯುವುದು. ಇದನ್ನು ಯಾರ ಮೇಲೂ ಹೆಚ್ಚು ಹೊರೆ ಬೀಳದಂತೆ ಮಾಡುತ್ತಾರೆ ಎನ್ನುವ ನಂಬಿಕೆ ನನಗೂ ಇದೆ. ಇನ್ನು ಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ಮಾನ್ಯ ವಿದ್ಯಾ ಮಂತ್ರಿಗಳು ಸಾಕಾದಷ್ಟು ಶ್ರದ್ಧೆ ವಹಿಸಬೇಕು. ವಿದ್ಯಾಭ್ಯಾಸಕ್ಕೆಲ್ಲಾ ಮೂಲವಾಗಿರುವುದು ಪ್ರೈಮರಿ ಎಜುಕೇಷನ್ ಮತ್ತು ಸರಕಾರದಿಂದ ಇದಕ್ಕಾಗಿ ಬೇಕಾದಷ್ಟು ದುಡ್ಡೂ ಕೂಡ ಖರ್ಚಾಗುತ್ತಿದೆ. ಆದರೆ ಇಂದು ಕೊಡುತ್ತಿರುವ ಪ್ರೈಮರಿ ವಿದ್ಯಾಭ್ಯಾಸದಿಂದ ಎಷ್ಟು ಮಕ್ಕಳಿಗೆ ಸರಿಯಾದ ಬರವಣಿಗೆ ಬರುತ್ತದೆಯೇ ಸರಿಯಾದ ಕಾಗುಣಿತ ಬರುತ್ತದೆಯೇ ಎನ್ನುವುದನ್ನು ಸರಿಯಾಗಿ ಯೋಚನೆ ಮಾಡಿ ನೋಡಬೇಕು. ಹೈಸ್ಕೂಲುಗಳಿಗಾಗಿ ಖರ್ಚು ಮಾಡುತ್ತಿದ್ದಾರೆ, ಯೂನಿವರ್ಸಿಟಿಗೂ ಸಾಕಾದಷ್ಟು ಖರ್ಚು ಮಾಡುತ್ತಿದ್ದಾರೆ. ಇವಕ್ಕೆಲ್ಲಾ ಖರ್ಚು ಮಾಡುತ್ತಿರು

(ಶ್ರೀ ಟಿ. ಆರ್. ಶಾಮಣ್ಣ)

ವುದು ಕಡಿಮೆ. ಆದರೆ ಇಂದು ಕಡ್ಡಾಯ ಶಿಕ್ಷಣವನ್ನು ಕೊಡಬೇಕೆಂದು ಹೆಚ್ಚು ಖರ್ಚು ಮಾಡಿ ಇದನ್ನು ಒಂದು ಸರಿಯಾದ ತಳಹದಿಯ ಮೇಲೆ ನಿಲ್ಲಬೇಕು ಎಂದು ಮಾಡುತ್ತಿದ್ದಾರೆ. ಇಂದು ಕೊಟ್ಟಿರುವ ಪ್ರಾಥಮಿಕ ಶಿಕ್ಷಣದಿಂದ ಎಷ್ಟು ಹುಡುಗರಿಗೆ ಸರಿಯಾಗಿ ಬರವಣಿಗೆ ಬರುತ್ತದೆ, ಎಷ್ಟು ಹುಡುಗರಿಗೆ ಲೆಕ್ಕ ಮಾಡುವುದು ಬರುತ್ತದೆ ಎಷ್ಟು ಹುಡುಗರಿಗೆ ಕಾಗುಣಿತ ಸರಿಯಾಗಿ ಬರುತ್ತಿದೆ ಮತ್ತು ಎಷ್ಟು ಹುಡುಗರಿಗೆ ಸರಿಯಾಗಿ ವಾಗ್ಮಿ ಬರುತ್ತದೆ ಎನ್ನುವುದನ್ನು ಸರಿಯಾಗಿ ಪರಿಶೀಲನೆ ಮಾಡಿ ನೋಡಿದರೆ ಇದರಲ್ಲಿ ಯಾವ ಪ್ರಗತಿಯೂ ಕಂಡುಬರುತ್ತಿಲ್ಲ. ಅಲ್ಲದೆ ಮಕ್ಕಳ ಮನಸ್ಸನ್ನು ಪರಿವರ್ತನೆ ಮಾಡುವಂತಹ ವಿದ್ಯಾಭ್ಯಾಸವನ್ನು ಇಂದು ಸರಿಯಾಗಿ ಕೊಡುತ್ತಿಲ್ಲ. ಕನ್ನಡವನ್ನು ತಿಳಿದ ಜನರೇ ಸರಿಯಾಗಿ ಪಾಠ ಹೇಳಿಕೊಡಲು ತರಬೇತಿ ಹೊಂದಿಕೊಡುವಂತಹ ಶಿಕ್ಷಕರು ಇಂದು ಇಲ್ಲ. ಇದರಿಂದ ಇಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು ಮುಂದೆ ಯೂನಿವರ್ಸಿಟಿ ಮಟ್ಟಕ್ಕೆ ಹೋಗಿ ವಿದ್ಯಾಭ್ಯಾಸ ಪಡೆಯುವ ಮಕ್ಕಳಿಗೆ ಪಾಠ ಹೇಳಿಕೊಡುವಾಗ ಅವರಿಗೇನೂ ತಿಳಿಯುವುದೇ ಇಲ್ಲ. ಇದರಿಂದ ಅವರ ಜ್ಞಾನವೂ ಸರಿಯಾಗಿ ಅಭಿವೃದ್ಧಿಯಾಗುವಂತಹ ವಿದ್ಯಾಭ್ಯಾಸ ಕೊಡುತ್ತಿಲ್ಲ ಮತ್ತು ಸರಿಯಾಗಿ ಒಂದು ಕಾರ್ಯಕ್ರಮ ಹಾಕಿಕೊಂಡು ಸರಿಯಾಗಿ ಹುಡುಗರ ಮನಸ್ಸನ್ನು ಪರಿವರ್ತನೆ ಮಾಡುವಂತಹ ಶಿಕ್ಷಕರು ಹಾಗೂ ಕಾಗುಣಿತ ಇತ್ಯಾದಿಗಳನ್ನು ಶ್ರದ್ಧೆಯಿಂದ ಹೇಳಿಕೊಡುವ ಶಿಕ್ಷಕರು ಇಂದು ಇಲ್ಲ. ಇದರಿಂದಾಗಿ ವಿದ್ಯಾ ಇಲಾಖೆಯವರು ಹೆಚ್ಚು ಖರ್ಚು ವಿದ್ಯಾಭ್ಯಾಸಕ್ಕಾಗಿ ಮಾಡುತ್ತಿದ್ದರೂ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಫ್ರೀಷಿಪ್ ಸ್ಕಾಲರಶಿಪ್ ಹಂಚುವುದರಲ್ಲಿ ಸಾಕಷ್ಟು ಸರಿಯಾದ ವಿತರಣೆ ಇಲ್ಲ, ಅನುಕೂಲಸ್ಥರಿಗೆ ಮಾತ್ರ ದೊರೆಯುತ್ತದೆ ಎಂಬ ಕೂಗು ಇದೆ. ಯಾವುದೋ ಕಾಲದಲ್ಲಿ ಇದರ ಬಗ್ಗೆ ರೂಲ್ಸ್ ಮಾಡಿದೆ. ಇವುಗಳನ್ನು ಹಂಚುವ ಬಗ್ಗೆ ವಿವರ ತರಿಸಿಕೊಂಡು ಪರಿಶೀಲನೆ ಮಾಡಿ ನ್ಯಾಯವಾಗಿ ಸರಿಯಾಗಿ ವಿತರಣೆಯಾಗುವ ಹಾಗೆ ಮಾಡಿ ಯಾರಿಗೆ ಇದರ ಪ್ರಯೋಜನವಾಗಬೇಕೋ ಅವರಿಗೆ ದೊರೆಯುವ ಹಾಗೆ ಮಾಡಬೇಕು. ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಹಿಂದಿನ ಕಾಲದಲ್ಲಿ ಮಾಡಿದ್ದಾಗಿದೆ. ಆದುದರಿಂದ ರಿಯಲ್ ನೀಡೀ ಪರ್ಸನ್ಸ್‌ಗೆ ಕೊಡುವ ಹಾಗೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

10-30 A.M.

ಕಾಲೇಜುಗಳಿಗೆ ಇಕ್ವಿಪ್‌ಮೆಂಟ್ ಗ್ರ್ಯಾಂಟ್ ಕೊಡುತ್ತೀರಿ. ಇಕ್ವಿಪ್‌ಮೆಂಟ್ ಮತ್ತು ಲೈಬ್ರರಿ ಗ್ರಾಂಟ್ ಬಗ್ಗೆ ಯೋಚನೆ ಮಾಡಿ ಕಾಲೇಜುಗಳು ಇದನ್ನು ಸರಿಯಾಗಿ ನಡೆಸುವ ರೀತಿಯಲ್ಲಿ ಒದಗಿಸುವುದಕ್ಕೆ ಪರಿಶೀಲನೆ ಮಾಡಬೇಕು.

ಇನ್ನು ಲೈಬ್ರರಿ ಸೆಸ್ಸ ಬಗ್ಗೆ ಮೂರು ವರ್ಷಗಳ ಕೆಳಗೆ ಒಂದು ಬಿಲ್ಲು ಪಾಸಾಯಿತು. ಅದನ್ನು ಈಗ ಜಾರಿಗೆ ತರಬೇಕು ಎಂದು ಹೊರಟಿದ್ದೀರಿ. ಬೆಂಗಳೂರು ನಗರದಲ್ಲಿ 12 ರಿಂದ 15 ಲಕ್ಷ ರೂಪಾಯಿವರೆಗೆ ಲೈಬ್ರರಿ ಸೆಸ್ಸ ವಸೂಲು ಆಗುತ್ತದೆ. ಒಂದು ರೂಪಾಯಿಗೆ ಮೂರು ಪೈಸೆ ಪ್ರಕಾರ ತೆರಿಗೆಯ ಮೇಲೆ ಈ ಲೈಬ್ರರಿ ಸೆಸ್ಸ ವಸೂಲ್ಮಾಡುತ್ತಿದ್ದಾರೆ. ಇದರ ಬಗ್ಗೆ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಆಗಬೇಕಾಗಿತ್ತು. ಅದು ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಈ ಸೆಸ್ಸಿನಿಂದ ಜನಗಳಿಗೆ ಏನೂ ಪ್ರಯೋಜನವಾಗುವುದಿಲ್ಲ. ಇದರಿಂದ ಜನರಿಗೆ ತೊಂದರೆಯಾಗುತ್ತದೆ. ಈ ಸೆಸ್ ಹೊರೆ ಹಾಕುವುದು ಸರಿಯಲ್ಲ. ಇದನ್ನು ಪರಿಶೀಲಿಸಿ ಸರಿಪಡಿಸದೇ ಇದ್ದರೆ ನಾವು ಇದಕ್ಕಾಗಿ ಚಳುವಳಿ ಶುರುಮಾಡಬೇಕಾಗುತ್ತದೆ. ಆದುದರಿಂದ ನಾವು ಚಳುವಳಿ ಶುರು ಮಾಡುವ ಮುಂಚೆ ಇದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನಾವು ಯೋಚನೆ ಮಾಡೋಣ. ವಿದ್ಯಾಭ್ಯಾಸ ಇಲಾಖೆಗೆ 36 ಕೋಟಿ ರೂಪಾಯಿ ಖರ್ಚು ಮಾಡತಕ್ಕಂಥಾದ್ದು ಇದೆ. ಇದರಿಂದ ಸರಿಯಾಗಿ ಪ್ರತಿಫಲ ಬರುತ್ತದೆಯೋ ಎನ್ನುವುದನ್ನು ಯೋಚನೆ ಮಾಡಬೇಕು. ಬಡ ಬೋರೇಗೌಡನ ದುಡ್ಡು ಸರಿಯಾಗಿ ವಿನಿಯೋಗವಾಗುವುದಕ್ಕೆ ಯೋಚನೆ ಮಾಡಬೇಕು ಎಂದು ಸೂಚನೆ ಮಾಡುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದನೆ ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷಿಣಿಯರೇ, ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಡಿಮ್ಯಾಂಡನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ನಮ್ಮ ಶಿಕ್ಷಣ ಮಂತ್ರಿಗಳು ಹೊಸದಾಗಿ ಈ ಪೋರ್ಟ್‌ಫೋಲಿಯೋ ತೆಗೆದುಕೊಂಡಿದ್ದಾರಾದ್ದರಿಂದ ಅನೇಕ ವಿಷಯಗಳನ್ನು ಅವರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಎಲ್ಲರಿಗೂ

ತಿಳಿದಿರುವ ಹಾಗೆ ಇವತ್ತು ದೇಶದಲ್ಲಿ ನಿರೀಕ್ಷಣೆ ಮಾಡುತ್ತಾ ಇರುವುದು ಭಾವೀ ಜನಾಂಗ ಯಾವ ರೀತಿ ತಯಾರುಮಾಡುತ್ತೇವೆಯೋ ಆ ರೀತಿ ನಮ್ಮ ರಾಷ್ಟ್ರ ಬೆಳೆಯುತ್ತದೆ. ವಿದ್ಯಾಭ್ಯಾಸ ಎನ್ನುವುದು ನಮ್ಮ ರಾಷ್ಟ್ರದ ತಳಪಾಯ. ಆದರೆ ವಿದ್ಯಾಭ್ಯಾಸದಲ್ಲಿ ಆಗಿಂದಾಗ್ಗೆ ಬದಲಾವಣೆ ಮಾಡುತ್ತಾ ಇರುವುದರಿಂದ ಈ ತಳಪಾಯಿಯು ಬಂದೋಬಸ್ತಾಗಿ ಉಳಿಯುವುದಕ್ಕೆ ಅವಕಾಶ ವಾಗಿಲ್ಲ. ಇದು ಒಂದು ಸರಿಯಾದ ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಮುಖ್ಯವಾಗಿ ಕನ್ನಡವನ್ನು ಎಲ್ಲಾ ಮಟ್ಟದಲ್ಲಿ ಉಪಯೋಗಿಸುವುದನ್ನು ಜಾರಿಗೆ ತರಬೇಕಾಗಿದೆ. ತಾಲ್ಲೂಕ ಮಟ್ಟದಲ್ಲಿ ಇದನ್ನು ಜಾರಿಗೆ ಕೊಡುತ್ತೇವೆಂದು ಹೇಳುತ್ತಾರೆ. ಮಾನ್ಯ ಸದಸ್ಯರು ಅಸೆಂಬ್ಲಿಯಲ್ಲಿ ಮಾತನಾಡುವುದು ಪೇಪರುಗಳಲ್ಲಿ ಬಂದಮೇಲೆ ಅದನ್ನು ನೋಡಿ ಅಸೆಂಬ್ಲಿ ತೀರ್ಮಾನ ತೆಗೆದುಕೊಂಡಿವೆ ಎಂದು ಹಳ್ಳಿಗಳ ಜನ ಮಾತನಾಡುತ್ತಾರೆ. ಆದರೆ ಮಂತ್ರಿಗಳೇ ಅಸೆಂಬ್ಲಿಯಲ್ಲಿ ಹೇಳಿದ್ದು ಸರಿಯಾಗಿ ಜಾರಿಗೆ ಬರುವುದಿಲ್ಲ ಎಂದು ಅನ್ನಿಸುತ್ತದೆ. ಯಾಕೆಂದರೆ ಅಧಿಕಾರಿಗಳ ಪ್ರೋತ್ಸಾಹ ಇದಕ್ಕೆ ಕಡಿಮೆ ಇದೆ. ಇವರು ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ತಾಲ್ಲೂಕ ಮಟ್ಟದಲ್ಲಿ ಕನ್ನಡ ಜಾರಿಗೆ ಕೊಡುತ್ತೇವೆ ಎಂದು ಹೇಳಿದರೂ ಕೂಡ ಒಬ್ಬ ರೈತ ಕನ್ನಡ ದಲ್ಲಿ ಬರೆದು ಅರ್ಜಿ ಕೊಟ್ಟರೆ ಅದರಮೇಲೆ ಆರ್ಡರ್ ಮಾಡುವುದು ಇಂಗ್ಲೀಷಿನಲ್ಲಿ. ಅರ್ಜಿಯ ಮೇಲೆ ಎಂಡೋರ್ಸ್‌ಮೆಂಟ್ ಇಂಗ್ಲೀಷಿನಲ್ಲಿ ಹಾಕುತ್ತಾರೆ. ಆದುದರಿಂದ ಸರಕಾರ ಇದಕ್ಕೆ ತೀವ್ರ ಗಮನ ಕೊಟ್ಟು ಈ ಸಭೆಗೆ ಭರವಸೆ ಕೊಟ್ಟದ್ದನ್ನು ತೀವ್ರ ಜಾರಿಗೆ ತರುವುದಕ್ಕೆ ಸೂಕ್ತ ಕ್ರಮ ತೆಗೆದು ಕೊಳ್ಳಬೇಕು.

ಪ್ರೈಮರಿ ಸ್ಕೂಲ್ಸ್ ಬಹಳ ಸಂಖ್ಯೆಯಲ್ಲಿ ಸ್ಥಾಪನೆ ಮಾಡತಕ್ಕಂಥಾದ್ದಾಗಿದೆ. ತಾಲ್ಲೂಕ್ ಬೋರ್ಡ್ ಶಿಫಾರಸ್ಸು ಮಾಡಿದರೆ ಕೊಟ್ಟು ಬಿಡುತ್ತಾರೆ. ತಾಲ್ಲೂಕು ಬೋರ್ಡ್ ಕೆಲವು ಕಡೆ ರಾಜಕೀಯ ದೃಷ್ಟಿಯಿಂದ ಶಿಫಾರಸ್ಸು ಮಾಡಿದ ಕಡೆ ಸ್ಕೂಲುಗಳಾಗಿವೆ. ಅವಶ್ಯಕತೆ ಇಲ್ಲದಿದ್ದರೂ ಪ್ರೈಮರಿ ಸ್ಕೂಲ್ಸ್ ಜಾಸ್ತಿ ಮಾಡಿದ್ದಾರೆ. ಆದುದರಿಂದ ಸರಕಾರ ಇದರ ಬಗ್ಗೆ ಖಚಿತ ನೀತಿ ಯನ್ನು ಹಾಕಬೇಕು. ಪಾಪ್ಯುಲೇಷನ್ ಬೇಸಿಸ್ ಮೇಲೆ ಸ್ಕೂಲು ಕೊಡಬೇಕು. ಆದರೆ ಅನೇಕ ಕಡೆ 10–12 ಹುಡುಗರು ಇರತಕ್ಕ ಕಡೆ ಸ್ಕೂಲು ಪ್ರಾರಂಭ ಮಾಡುವುದು, ಆಮೇಲೆ ಸ್ಕೂಲನ್ನು ಮುಚ್ಚಿಹಾಕುವುದು ಮಾಡಿದರೆ ಕಟ್ಟಿಸಿದ ಬಿಲ್ಡಿಂಗ್ ಏನುಮಾಡುವುದು ಎಂದು ಯೋಚನೆ ಬರುತ್ತದೆ. ಇದು ಅನೇಕ ಕಡೆ ನೋಟೀಸಿಗೆ ಬಂದಿದೆ. ನನ್ನ ಅನುಭವಕ್ಕೆ ಬಂದದ್ದೇನೆಂದರೆ ನಮ್ಮ ತಾಲ್ಲೂಕಿಗೆ ಕೂಪ್ಪ ತಾಲ್ಲೂಕಿನ ಒಂದು ಹೋಬಳಿ ಸೇರಿತು. ಅಲ್ಲಿ ಕೇವಲ 3 ಫರ್ಲಾಂಗಿಗೆ ಒಂದು ಸ್ಕೂಲ್ ಕೊಟ್ಟು ಬಿಲ್ಡಿಂಗ್ ಕಟ್ಟಲು ಹೊರಟಿದ್ದರು. ಬಿಲ್ಡಿಂಗ್ ಕಟ್ಟಬೇಡಿ ಎಂದು ನಾವು ಹೇಳಿದ್ದೇವೆ. ಸರಕಾರದ ಹಣ ಅನ್ಯಾಯವಾಗಿ ಖರ್ಚಾಗುತ್ತಿದೆ. ಇದರ ಬಗ್ಗೆ ತೀವ್ರ ಕ್ರಮ ತೆಗೆದು ಕೊಳ್ಳಬೇಕು.

ಇನ್ನು ಆಡಳಿತದ ವಿಷಯ ಹೇಳುವುದಾದರೆ ಅದು ಕೆಳಮಟ್ಟಕ್ಕೆ ಹೋಗಿದೆ. ನಾನು ಹೇಳುವುದನ್ನು ಯಾರೂ ತಪ್ಪು ತಿಳಿದುಕೊಳ್ಳಬಾರದು. ಆಡಳಿತ ನಡೆಸುವ ಕೆಲವು ಅಧಿಕಾರಿಗಳು ನರಭಕ್ಷಕರಾಗಿದ್ದಾರೆ. ಅಂದರೆ ಅವರು ಲಂಚ ತೆಗೆದುಕೊಳ್ಳುವುದಕ್ಕೆ ಜನರು ಸಿಕ್ಕದೆ, ಅಧಿಕಾರಿ ಗಳಿಂದಲೇ ಲಂಚ ಪಡೆಯಲು 3 ತಿಂಗಳಿಗೆ, 6 ತಿಂಗಳಿಗೆ ಟ್ರಾನ್ಸ್‌ಫರ್ ಮಾಡಿಬಿಡುತ್ತಾರೆ. ಇದು ವಿದ್ಯಾ ಇಲಾಖೆಯಲ್ಲಿ ಹೆಚ್ಚಾಗಿದೆ. ಇದರಿಂದ ಬಹಳ ಅನ್ಯಾಯ ನಡೆಯುತ್ತಿದೆ. ಎರಡು ಮೂರು ತಿಂಗಳುಗಳಲ್ಲಿ ರಿಟೈರ್ ಆಗತಕ್ಕಂಥ ಒಬ್ಬ ಅಧಿಕಾರಿಯು ಹಣ ಸಂಪಾದನೆ ಮಾಡುವ ಉದ್ದೇಶದಿಂದ 1964ರ ಈಚೆಗೆ ಅಪಾಯಿಂಟ್ ಆದ ಎಲ್ಲಾ ಮೇಷ್ಟರುಗಳನ್ನು ಕೂಡಲೇ ರಿಲೀವ್ ಮಾಡಿ ಅಂತಹ ಆರ್ಡರ್ ಮಾಡಿ ಎಲ್ಲಾ ಸ್ಕೂಲ್ ಮೇಷ್ಟರುಗಳು ಆಫೀಸಿಗೆ ಬರುವಂತೆ ಮಾಡಿ ಸ್ಕೂಲ್ ಬಾಗಿಲು ಹಾಕಿಸಿದರು. ಡಿ.ಎಲ್.ಆರ್.ಸಿ. ನಂಬರು ಆದ ಕ್ಯಾಂಡಿಡೇಟ್ ಅಪಾಯಿಂಟ್ ಮಾಡಿ ಅವರನ್ನು ರಿಲೀವ್ ಮಾಡುವುದನ್ನು ಬಿಟ್ಟು, ಈ ರೀತಿ ಮಾಡಿ, ಎರಡು ಕಡೆಯಿಂದಲೂ ಲಂಚ ಪಡೆಯುವ ಕ್ರಮ ಮಾಡಲು ಹೊರಟರು. ಅವರು ರಿಟೈರ್ಡ್ ಆದರು. ಅವರ ಮೇಲೆ ಕ್ರಮವೇ ತೆಗೆದುಕೊಳ್ಳಲಿಲ್ಲ. ಯಾರಿಗೆ ನಿವೃತ್ತಿ ವೇತನ ಕೊಡುತ್ತೀರಿ, ಅವರ ಮೇಲೆ ಯಾಕೆ ಕ್ರಮ ಕೈಗೊಳ್ಳಬಾರದು. ರಿಟೈರ್ಡ್ ಆದರಲ್ಲ, ಹೋಗಲಿ ಎನ್ನುತ್ತೀರಿ. ಇದರಿಂದ ಆಡಳಿತ ಬಿಗಿ ಬರುವುದು ಹೇಗೆ? ಈ ಟ್ರಾನ್ಸ್‌ಫರ್ ಮಾಡುವ ವಿಚಾರದಲ್ಲಿ ಕೆಲವು ಅಧಿಕಾರಿಗಳು ಸಂಪಾದನೆ ಮಾರ್ಗವೆಂದು ಭಾವಿಸಿದ್ದಾರೆ. ಹೀಗೆ ಆಡಳಿತ ನಡೆಯುತ್ತಿರುವುದರಿಂದ ಆಡಳಿತದಲ್ಲಿ ಬಿಗಿ ತಪ್ಪಿಹೋಗಿದೆ ಎಂದು ವಿಷಾದಪಡಬೇಕಾಗಿದೆ. ಆದುದರಿಂದ, ಸರಕಾರ ಇದಕ್ಕೆ ತೀವ್ರ ಗಮನ ಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅಧಿಕಾರಿಗಳು ಇನ್‌ಸ್ಪೆಕ್ಷನ್‌ಗೆ ಬಂದಾಗ್ಗೆ ಸರಿಯಾಗಿ ತನಿಖೆ ಮಾಡುವುದಿಲ್ಲ, ಟೂರ್ ಮೇಲೆ ಬರು ತ್ತಾರೆ. ಟಿ.ಬಿ. ಯಲ್ಲಿ ಇರುತ್ತಾರೆ. ಆದರೆ ರಿಜಿಸ್ಟರ್ ತರಿಸಿ ಫೈರ್ ತೆಗೆದು ಎಷ್ಟು ತಿಂಗಳಿಗೊಮ್ಮೆ ಬದಲಾಯಿಸಿದ್ದಾರೆ ಎಂಬುದನ್ನು ನೋಡಿ ಕ್ರಮ ತೆಗೆದುಕೊಳ್ಳುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ

(ಶ್ರೀ ಕೆ. ಎನ್. ವೀರಪ್ಪಗೌಡ)

ಸ್ಕೂಲ್ ಅಪ್‌ಗ್ರೇಡ್ ಆಯಿತು. ಅದಕ್ಕೆ ದುಡ್ಡು ಕೊಡಬೇಕಾಗಿ ನಾನು ಹೋಗಿ ವಿಚಾರಿಸಿದ ಮೇಲೆ ಕೊನೆಗೆ ಅದು ಮಂಜೂರು ಆಯಿತು. ಯಾವ ಕೆಲಸವಾಗಬೇಕಾದರೂ ಲಂಚ ಕೊಟ್ಟು ಮಾಡಿಸಿಕೊಳ್ಳಬೇಕಾಗುತ್ತದೆ. ಭಾವೀ ಜನಾಂಗವನ್ನು ತಯಾರುಮಾಡತಕ್ಕಂಥ ವಿದ್ಯಾ ಇಲಾಖೆ ಹೀಗೆ ಆಗಿದೆ ಎಂದು ವ್ಯಥೆ ಪಡಬೇಕಾಗಿದೆ. ಮಾನ್ಯ ಮಂತ್ರಿಗಳು ಈ ವಿಷಯ ತಿಳಿದುಕೊಂಡು ಶೀಘ್ರವಾಗಿ ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಇನ್ನೂ ಅನೇಕ ವಿಷಯ ಹೇಳಬೇಕಾಗಿದೆ. ಆದರೆ ಕಾಲಾವಕಾಶವಿಲ್ಲ. ಹೈಸ್ಕೂಲ್ ವಿಷಯ ಒಂದು ಹೇಳುತ್ತೇನೆ. ಪ್ರೈವೇಟ್ ಹೈಸ್ಕೂಲುಗಳು ಜಾಸ್ತಿಯಾಗುತ್ತಾ ಇವೆ. ಹೈಸ್ಕೂಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 250 ಅಥವಾ 500 ವರೆಗೆ ಇರಬೇಕು ಎಂದು ನಿಗದಿ ಮಾಡಬೇಕು. ಅದರ ಬದಲು ಹಾಸ್ಟಲ್‌ಗಳು ಸ್ಕೂಲ್‌ಗಳು ಜಾಸ್ತಿಯಾದರೆ ಪ್ರತಿವರ್ಷದ ಖರ್ಚು ಜಾಸ್ತಿಯಾಗುತ್ತೆ. ಅದರ ಬದಲು ಹಾಸ್ಟಲುಗಳನ್ನು ಕಟ್ಟಲು ಸರ್ಕಾರ ಮುಂದೆ ಬಂದು 50 ಪರ್ಸೆಂಟು ಲೋಕಲ್ ಕಾಂಟ್ರಿಬ್ಯೂಷನ್ ಪಡೆದು ಆದರೂ ಹಾಸ್ಟಲುಗಳನ್ನು ಮಾಡಿ ಪರ್ಮನೆಂಟ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡತಕ್ಕಂಥಾದ್ದು ಒಳ್ಳೆಯದು. ಹಾಸ್ಟಲುಗಳಿಗೆ ಬಿಲ್ಡಿಂಗ್‌ಗಳನ್ನು ತೆಗೆದುಕೊಂಡರೂ ಚಿಂತೆಯಿಲ್ಲ. ಈಗ ಇರುವ ಹಾಗೆಯೇ ಇದ್ದರೆ ಶಿಕ್ಷಣದ ಮಟ್ಟ ಇಂಪ್ರೂವ್ ಆಗುವುದಿಲ್ಲ. ಹಳ್ಳಿಗಳಿಂದ 4–5 ಮೈಲಿ ನಡೆದು ಬಂದು ಅವರು ಓದುವುದಾದರೂ ಹೇಗೆ? ಸರಿಯಾದ ಶಿಕ್ಷಣ ಪಡೆದ ಮೇಷ್ಟರುಗಳನ್ನು ನೇಮಕ ಮಾಡದೇ ಇರುವುದರಿಂದ ಸ್ಟಾಂಡರ್ಡ್ ಕಡಿಮೆಯಾಗಿದೆ. ಅನೇಕ ಕಡೆ ತಾಲ್ಲೂಕ್ ಬೋರ್ಡ್ ಹೈಸ್ಕೂಲುಗಳನ್ನು ನಡೆಸುತ್ತಿದ್ದಾರೆ.

ತಾಲ್ಲೂಕು ಬೋರ್ಡ್ ಹೈಸ್ಕೂಲುಗಳ ವಿಷಯದಲ್ಲಿ ಒಂದು ದೊಡ್ಡ ತೊಂದರೆಯಾಗಿದೆ. ಅಲ್ಲಿರುವ ಸ್ಕೂಲ್‌ಮಾಸ್ಟರುಗಳನ್ನು ಬದಲಾವಣೆ ಮಾಡುವುದಕ್ಕೆ ಅವಕಾಶವಿಲ್ಲ. ಹೀಗಾಗಿ ಉಪಾಧ್ಯಾಯರುಗಳು ಕೆಟ್ಟವರೋ, ಒಳ್ಳೆಯವರೋ ಅವರನ್ನೇ ಮುಂದುವರಿಸಿಕೊಂಡು ಹೋಗಬೇಕಾಗಿದೆ. ನಮ್ಮ ತಾಲ್ಲೂಕಿನಲ್ಲಿ ಒಂದೇ ಒಂದು ತಾಲ್ಲೂಕು ಬೋರ್ಡ್ ಹೈಸ್ಕೂಲು ಇದೆ. ಅಲ್ಲಿರುವವರನ್ನು ಬೇರೆ ಹೈಸ್ಕೂಲಿಗೆ ವರ್ಗ ಮಾಡಲು ಅವಕಾಶವೇ ಇಲ್ಲ. ಸರ್ಕಾರದವರು ಇದನ್ನು ಹೀಗೆಯೇ ಮುಂದುವರಿಸದೆ ರೂಲ್ಸಿನಲ್ಲಿ ಅಥವಾ ಆಕ್ಟಿನಲ್ಲಿ ಬದಲಾವಣೆ ಮಾಡಿ, ಬೇಕಾದಲ್ಲಿ ಮಾಡಿ ತಾಲ್ಲೂಕು ಬೋರ್ಡ್ ಹೈಸ್ಕೂಲು ಉಪಾಧ್ಯಾಯರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಹೇಳಬಯಸುತ್ತೇನೆ.

ಪಬ್ಲಿಕ್ ಪರೀಕ್ಷೆಯಲ್ಲಿ 20 ಪರ್ಸೆಂಟ್‌ಗಿಂತ ಕಡಮೆ ಜನ ಪಾಸಾಗಿದ್ದರೆ ಅಂಥ ಶಾಲೆಗಳ ಗ್ರಾಂಟ್ ನಿಲ್ಲಿಸಲಾಗುತ್ತದೆ ಎಂದು ಹೇಳುವುದು ಬಹಳ ಅನ್ಯಾಯ. ಶಾಲೆಗಳನ್ನು ನಡೆಸುವವರು ಉಪಾಧ್ಯಾಯರಿಗೆ ಸಂಬಳಗಳನ್ನು ಕೊಟ್ಟು, ಅವರು ಸರಿಯಾಗಿ ಪಾಠ ಹೇಳದೆ ಇದ್ದರೆ ಅವರ ಇನ್‌ಕ್ರಿಮೆಂಟ್ ನಿಲ್ಲಿಸುವುದಾಗಲೀ ಅಥವಾ ಬೇರೆ ರೀತಿಯಲ್ಲಿ ಅವರಿಗೆ ಶಿಕ್ಷೆ ವಿಧಿಸಬೇಕು. ಅದನ್ನು ಮಾಡದೆ ಗ್ರಾಂಟ್ ನಿಲ್ಲಿಸುವುದರಿಂದ ಯಾರಿಗೆ ತೊಂದರೆಯಾಗುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಗ್ರಾಂಟ್ ನಿಲ್ಲಿಸುವುದರಿಂದ ಅಲ್ಲಿ ಶಾಲೆಗಳನ್ನು ನಡೆಸಲು ತೊಂದರೆಯಾಗಿ ಅದರಿಂದ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನಾನುಕೂಲವಾಗುತ್ತದೆ. ಆದುದರಿಂದ ಈಗಿರುವ ನಿಯಮಗಳನ್ನು ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿ ಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಬೇರೆಯವರಿಗೆ ಇನ್‌ಕ್ರಿಮೆಂಟ್ ನಿಲ್ಲಿಸಿ, ಮುಂದಿನ ವರ್ಷ ಚೆನ್ನಾಗಿ ಫಲಿತಾಂಶಗಳು ಬಂದರೆ ಮಾತ್ರ ಇನ್‌ಕ್ರಿಮೆಂಟ್ ಕೊಡುತ್ತೇವೆಂದು ಹೇಳುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಮಾನ್ಯ ಮಂತ್ರಿಗಳು ವಿಪರೀತವಾಗಿರತಕ್ಕ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅನೇಕ ಕಡೆಗಳಲ್ಲಿ ಹೈಸ್ಕೂಲುಗಳನ್ನು ಜಾಸ್ತಿಯಾಗಿ ಕೇಳುತ್ತಿದ್ದಾರೆ. ಶಾಲೆಗಳಿಗೆ ಅನುಮತಿಯನ್ನು ಕೊಡುವುದಕ್ಕೆ ಮುಂಚೆ ಸರಿಯಾಗಿ ವಿಮರ್ಶೆ ಮಾಡಬೇಕು. ಹಿಂದೆ ಸರ್ಕಾರಿ ಹೈಸ್ಕೂಲುಗಳನ್ನು ಕೊಡಬೇಕಾದರೆ ಸರಿಯಾಗಿ ವಿಮರ್ಶೆ ಮಾಡಿ ಅಗತ್ಯ ಕಂಡ ಕಡೆಗಳಿಗೆ ಮಾತ್ರ ಕೊಡುತ್ತಿದ್ದರು. ಅದೇ ರೀತಿಯಾಗಿ ಖಾಸಗಿ ಶಾಲೆಗಳ ವಿಚಾರದಲ್ಲಿಯೂ ಮಾಡುವುದು ಒಳ್ಳೆಯದು. ಇದರಲ್ಲಿ ಇನ್ನೂ ಒಂದು ವಿಷಯವನ್ನು ನೋಡಬಹುದು. ಈಗ ಹೇಗಿದ್ದರೂ ಸೆಂಟ್‌ಪರ್ಸೆಂಟ್ ಸಂಬಳವನ್ನು ಸರ್ಕಾರದವರೇ ಕೊಡುತ್ತಿದ್ದಾರೆ. ಆದ್ದರಿಂದ ಒಂದು ನಿಗದಿಯಾದ ನೀತಿಯನ್ನು ಹಾಕಿಕೊಂಡು ಎಲ್ಲ ಹೈಸ್ಕೂಲುಗಳನ್ನೂ ಸರ್ಕಾರದವರೇ ವಹಿಸಿಕೊಳ್ಳ

ಬೇಕೆಂದೂ, ಹೆಚ್ಚಾಗಿ ಹೈಸ್ಕೂಲುಗಳನ್ನು ಮಾಡಬೇಕಾದ ಸಂದರ್ಭದಲ್ಲಿ ಹಾಸ್ಟಲು ವ್ಯವಸ್ಥೆಯನ್ನು ಮಾಡಿ, ಅದಕ್ಕೆ ಸ್ವಲ್ಪ ದುಡ್ಡು ಕೊಟ್ಟು, ಬಾಡಿಗೆಯ ರೂಪದಲ್ಲಿ ಅದನ್ನು ವಸೂಲು ಮಾಡಿಕೊಳ್ಳಬಹುದೆಂದೂ ಸೂಚಿಸಬಯಸುತ್ತೇನೆ. ಈಗ ನಾಲ್ಕೈದು ಮೈಲಿ ದೂರದಿಂದ ವಿದ್ಯಾರ್ಥಿಗಳು ಹೈಸ್ಕೂಲುಗಳಿಗೆ ನಡೆದುಕೊಂಡು ಬರುತ್ತಿದ್ದಾರೆ. ಇದರಿಂದಲೂ ವಿದ್ಯಾರ್ಥಿಗಳ ಮಟ್ಟ ಉತ್ತಮವಾಗಲು ಅವಕಾಶವಿಲ್ಲದೆ ಪರೀಕ್ಷೆಗಳಲ್ಲಿ ಹೆಚ್ಚು ಜನ ಅನುತ್ತೀರ್ಣರಾಗುವುದಕ್ಕೆ ಕಾರಣವಾಗಿದೆ. ಇದನ್ನು ಕೂಡ ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೂ ಅನೇಕ ವಿಷಯಗಳನ್ನು ಹೇಳಬೇಕಾದ್ದು ಇದ್ದರೂ ಕೂಡ, ನನ್ನ ವೇಳೆಯಾಗಿದೆ ಎಂದು ಅಧ್ಯಕ್ಷರು ಹೇಳುತ್ತಿರುವುದರಿಂದ, ನಾನು ಹೇಳಿರುವ ವಿಷಯಗಳಲ್ಲಿ ಮಾನ್ಯ ಮಂತ್ರಿಗಳು ಗಮನ ಕೊಡುತ್ತಾರೆಂದು ನಂಬಿದ್ದೇನೆ.

ಉಪಾಧ್ಯಾಯರುಗಳ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಅವರನ್ನು ಆಯಾಯಾ ತಾಲ್ಲೂಕುಗಳಲ್ಲಿಯೇ ಇಡುವುದರಿಂದ ಬಹಳ ರಾಜಕೀಯ ನಡೆಯುತ್ತಿದೆ. ಅವರನ್ನು ಜಿಲ್ಲೆಯಿಂದ ಹೊರಗಡೆ ಕಳಿಸಬೇಕು ಎಂದು ನಾನು ಹೇಳುತ್ತಿಲ್ಲ. ಆಯಾ ತಾಲ್ಲೂಕಿನಲ್ಲಿಯೇ ಇಡುವುದಕ್ಕೆ ಬದಲಾಗಿ ಬೇರೆ ತಾಲ್ಲೂಕುಗಳಲ್ಲಿ ಹಾಕಿದರೆ ರಾಜಕೀಯದಲ್ಲಿ ತೊಡಗುವುದು ಕಡಮೆಯಾಗುವುದಕ್ಕೆ ಸಾಧ್ಯವಿದೆ. ಅದೇ ತಾಲ್ಲೂಕಿನಲ್ಲಿಯೇ ಉಪಾಧ್ಯಾಯರನ್ನು ಮುಂದುವರಿಸಿದರೆ ಅವರು ರಾಜಕೀಯದಲ್ಲಿ ತೊಡಗುವುದು ಮಾತ್ರವಲ್ಲದೆ ಮುಂದಿನ ಪೀಳಿಗೆಯವರೂ ರಾಜಕೀಯ, ಜಾತಿ, ನೀತಿ ಇವುಗಳನ್ನು ಕಲಿಯುವುದಕ್ಕೆ ಅವಕಾಶವುಂಟಾಗುತ್ತದೆ. ಆದುದರಿಂದ ಆಯಾಯಾ ತಾಲ್ಲೂಕಿನ ಹೊರಗಡೆ ಇರುವಂತೆ ಮಾಡುವುದು ಒಳ್ಳೆಯದು.

ಉಪಾಧ್ಯಾಯರುಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗವಾದಾಗ ಅವರು ದುಡ್ಡು ಕೊಟ್ಟು ವರ್ಗವಾಗಿರುವುದನ್ನು ಬದಲಾಯಿಸಿಕೊಂಡು ಬರುತ್ತಾರೆ. ಹಾಗೆ ಬಂದಮೇಲೆ ಶಾರದ ಪೂಜೆಗೆ ಒಬ್ಬೊಬ್ಬರೂ ಎರಡೆರಡು ರೂಪಾಯಿ ತರಬೇಕೆಂದು ಹೇಳಿ, 50 ರೂಪಾಯಿಗಳನ್ನು ಪೂಜೆಗೆ ಖರ್ಚುಮಾಡಿ, ವರ್ಗವಾಗಿರುವುದರ ಬಗ್ಗೆ ತಾನು ಕೊಟ್ಟಿರುವ ಹಣವನ್ನು ತುಂಬಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಇದರಿಂದ ಭಾವೀ ಜನಾಂಗದ ಮೇಲೆ ಏನು ಪರಿಣಾಮವಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಇಂಥವೆಲ್ಲ ನಡೆಯದಂತೆ ತಪ್ಪಿಸಿ, ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿ, ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸುತ್ತೇನೆ.

†Smt. WINNIFRED F. FERNANDES (Coondapur).—Hon'ble Speaker, Sir, speaking on Education Demand, I desire to place before you my request with the hope that the Hon'ble Minister for Education will give a keen ear to my request.

Regarding the Three-Language Formula, I want to stress that Kannada should be the official language, English should be the link language and Hindi should not be compulsory. It should not be thrust down the throats of those who do not want to swallow it.

Sri K. V. SHANKARA GOWDA (Minister for Agriculture and Education).—Does it not apply to English also? You want English to be thrust down the throats of the students, but not Hindi!

Smt. WINNIFRED F. FERNANDES.—English is continuing for the last so many years, but not Hindi. You have been seeing with your own eyes the agitation about Hindi that it should not be made compulsory. It should be a gradual process and after some years it can be made compulsory. You must not forget about the spirit of freedom to English, and therefore, English should be continued for some more years. All these days, Hindi was treated as a non-examination subject for the VII Standard. I was told that the Government have passed an order at the last hour, *i.e.*, on 15th March 1968 that the

(SMT. WINNIFRED F. FERNANDES)

students who are appearing for the VII Standard Public Examination should pass Hindi examination also. I know in some schools Hindi was not taught at all, as there were no Hindi teachers. When such is the case, how can you expect the student to pass the Hindi examination ? The Government should have 'give and take' policy. Therefore, I request Government not to have Hindi as an examination subject for this year at least. Let it be for the next year, because the order is passed at the last hour—at the end of the financial year. When the students were not taught Hindi in some schools, how can they answer the Hindi paper in the examination ? I was told that some students have just copied the question paper itself as they were unable to answer it. How can the Government expect tuch students to get a minimum of 35 per cent, and what about their future ? Thousands of students are ruined by this order. I request the Government to consider this aspect of the matter and pass separate orders to the effect that this year Hindi should be a non-examination subject.

Sri K. V. SHANKARA GOWDA.—In the VII Standard Examination, no minimum is required for Hindi though it is an examination subject.

Smt. WINNIFRED F. FERNANDES.—There is an Order, and with the permission of the Chair, I shall read it:

> " After careful consideration of the matter, Government direct that provision in the scheme of the examination for the conduct of the Pry. VII Standard Examination at district level regarding the minima for a pass referred to above be substituted by the following:
>
> A candidate obtaining 35% of the maximum number of marks separately in each subject except "Hindi" shall be declared to have passed:
>
> Provided that if a candidate gets not less than 25% of the marks in Hindi and not less than 30% of the marks in each of the remaining subjects and 35% in the aggregate he/she shall also be declared to have passed."

Therefore, in Hindi, a candidate should get at least 25%, and if he does not get 25% in Hindi he will fail.

Sri K. V. SHANKARA GOWDA.—In the first clause, it is stated that he will have to get 35% in each subject, except Hindi. Therefore, if he gets some marks in Hindi it will be added on.

Smt. WINNIFRED F. FERNANDES.—Supposing a candidate gets zero in Hindi, will he pass ?

Sri K. V. SHANKARA GOWDA.—Even if he gets zero marks in Hindi, he will pass.

Smt. WINNFRED F. FERNANDES.—Then, it is all right—thank you.

Next, I would like to say a few words about grants. Some grant-in-aid, such as equipment grant, etc , is given to aided managements. These grants are sanctioned at the last hour at the end of the financial year. There is one instance, where the sanction order was received by the management on the 30th March 1968 at 2-00 P.M. The Bill had to be countersigned by the District Educational Officer, Mangalore, which is 60 miles away from Coondapur. The person concerned had to rush up to Mangalore to get it countersigned there, where there was a big queue. The Bill was countersigned at 9-00 P.M., and he had to return to Coondapur Sub-Treasury for encashment. But the State Bank at Coondapur said that they had closed the account for the day, and therefore the Bill could not be encashed within the year. Like that so many bills had lapsed. In future, at least, these bills should be sent in the first week of March, so that they are countersigned and encashed. The trouble is, there is no systematic administration with the school authorities. I compare this to a hungry beggar; when the beggar is ready to take the food, the plate is snatched away by somebody else.

[MR. DEPUTY SPEAKER in the Chair]

So, he is just glaring at that food. Such is the fate of the management today. They have been waiting for grant and at the last moment when they receive the Bill, they are not encashed. The Minister should see that in future this state of affairs does not happen again.

Next, about the payment of salaries to primary school teachers, I was told that these primary school teachers are not paid salaries each month. Salaries of December and January were paid in February and salaries for February and March are withheld. How do you expect these low paid primary school teachers to carry on their livelihood with this meagre salary and that too when they are not paid each month? I therefore suggest that salary must be paid to them each month and their salary also should be increased. Just as you do in the case of secondary school teachers, their salary should be paid by cheque.

Next thing is about pension. It is not paid today to teachers who got retired before reorganisation of the State, *i.e.*, those who where serving under the old Madras Government. The Minister had assured me that due consideration will be given and early action will be taken. But so far no action has been taken. There are two or three instances which I have referred to the Hon'ble Minister. Those old persons are not getting any pension. This may kindly be looked into.

Then there is the case of untrained teachers. They have served for more than four years from 1964. They have not been given any increment. Last time I put a question to the Hon'ble Minister and he

(SMT. WINNIFRED F. FERNANDES)

said that it is *sub judice* and he did not give any reply. If he has got the mind, he can go to the rescue of these untrained teachers and give them some increments from now onwards.

Next I come to the question of one school. In my constituency there is one Government school. It is a malnad area. It is a higher elementary school. The betterment Committee of that school has asked the Government to upgrade it. It has been recommended by the Inspector of Schools, and the D.E.O., and the papers had come to D.D.P.I. last year. But not a reply has been given to the President of the Betterment Committee so far as to whether it has been sanctioned or not. It is necessary to sanction it in the interest of the students of that area because there are no schools nearby. There is one high school about 6 miles far off. After completing the 7th standard, these children are compelled to stay at home because most of the children in Malnad area are poor and they cannot go a distance of 6 miles every day. So, the school is necessary here. I feel this year at least you will sanction the upgrading of this school.

Lastly, I must congratulate the Minister because there was one case relating to three teachers of higher elementary schools where increment was not given. It was not their fault. It was not the fault of the management. Just because the management transferred those teachers to another grant school, these increments were not given for the last 4 or 5 years. When I referred this to the Minister, he was too kind to pass the necessary orders and they have got the increment just last month. I thank the Chair for giving me a few minutes to speak.

Mr. DEPUTY SPEAKER.—Before I call upon other Members, I would like to inform the House that I have received a number of requests from several members that they want to participate in the discussion. I have no objection if Members are prepared to sit in the afternoon between 3 P.M. and 6 P.M.

HON'BLE MEMBERS.—Yes.

Mr. DEPUTY SPEAKER.—We will then rise at 12–30 P.M.

ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಸಭಾಪತಿಗಳೇ, ನಾನು ಶಿಕ್ಷಣ ಮಂತ್ರಿಗಳು ಮಂಡಿಸಿರುವ 36,17,27,200 ರೂಪಾಯಿಗಳ ಬೇಡಿಕೆಗೆ ಅನುಮೋದನೆ ನೀಡುತ್ತೇನೆ. ಸರಕಾರದವರು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿದ್ದರಿಂದ ಜನರ ಅಭಿನಂದನೆಗೆ ಪಾತ್ರರಾಗಿದ್ದಾರೆ ಎಂದು ಹೇಳಬಯಸುವೆ. ಆದರೆ ಕಡ್ಡಾಯ ಮಾಡಿದ್ದರಿಂದ ಕೆಲವು ಸಮಸ್ಯೆಗಳು ಉದ್ಭವವಾಗಿದ್ದು ಅವುಗಳ ಬಗ್ಗೆ ಸರಕಾರ ಇನ್ನೂ ಕ್ರಮ ಕೈಕೊಳ್ಳದಿರುವುದು ವಿಷಾದಕರ. ಮೊದಲನೆಯದಾಗಿ ಪ್ರಾಥಮಿಕ ಶಿಕ್ಷಣವನ್ನು ಸಂಸ್ಥಾನದಲ್ಲಿ ಏಕರೂಪವಾಗಿರುವಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಏಕೆಂದರೆ ಕರ್ಣಾಟಕ ಪ್ರದೇಶದಲ್ಲಿ ಒಂದು ರೀತಿ, ಹಳೇ ಮೈಸೂರಿನಲ್ಲಿ ಒಂದು ರೀತಿ, ಹೈದರಾಬಾದು ಕರ್ಣಾಟಕದಲ್ಲಿ ಒಂದು ರೀತಿ ಶಿಕ್ಷಣ ವ್ಯವಸ್ಥೆ ಇರುತ್ತದೆ. ಈ ಭೇದವನ್ನು ತೊಡೆದು ಹಾಕಿ ಎಲ್ಲ ಕಡೆಯೂ ಒಂದೇ ರೂಪದ ಪ್ರಾಥಮಿಕ ಶಿಕ್ಷಣ ಇರುವಂತೆ ಕ್ರಮ ಕೈಕೊಳ್ಳುವುದು ಅತಿ ಅವಶ್ಯವಿರುವುದರಿಂದ ಆ ಪ್ರಕಾರ ತೀವ್ರವಾಗಿ ಸರಕಾರ ಕ್ರಮ ಕೈಕೊಳ್ಳಬೇಕು. ಶಿಕ್ಷಕರಿಗೆ ಟ್ರಿಪಲ್ ಬೆನಿಫಿಟ್ ಕೊಡುತ್ತೇವೆಂದು

ಹೇಳುತ್ತಿದ್ದಾರೆ. ಆದರೆ ಇನ್ನೂವರೆಗೆ ಶಿಕ್ಷಕರಿಗೆ ಇದರ ಲಾಭ ದೊರೆತಿಲ್ಲ ಎಂದು ಹೇಳಬೇಕಾಗಿದೆ. ಮತ್ತು 1-4-63 ರಿಂದ ರಿಟೈರ್ ಆದ ಶಿಕ್ಷಕರಿಗೆ ಟ್ರಿಪಲ್ ಬೆನಿಫಿಟ್ ಸ್ಕೀಂ ಪ್ರಕಾರ ಲಾಭ ಸಿಕ್ಕಬೇಕಾದ್ದು, ಪೆನ್‌ಷನ್ ಸಿಕ್ಕಬೇಕಾದ್ದು ಸಿಕ್ಕಿಲ್ಲ, ಸಿಕ್ಕುವಂತೆ ಮಾಡುವುದು ಸರಕಾರದ ಆದ್ಯ ಕರ್ತವ್ಯವಾಗಿದೆ.

ಮೂರನೆಯ ಪ್ಲಾನಿನಲ್ಲಿ ಶಿಕ್ಷಣ ರಂಗದಲ್ಲಿ ಗುರಿ ಮುಟ್ಟಿಲ್ಲ. ಮೂರನೆಯ ಪ್ಲಾನಿನ ಪ್ರಕಾರ 10 ಲಕ್ಷ ಎನ್‌ರೋಲ್‌ಮೆಂಟ್ ಆಗಬೇಕಾಗಿತ್ತು, 12 ಲಕ್ಷ ಆಗಿದೆ. ಆದರೆ ಈ 12 ಲಕ್ಷಕ್ಕೆ ಸಾಕಾಗುವಷ್ಟು ಶಿಕ್ಷಕರನ್ನು ನೇಮಕ ಮಾಡುವುದು ಸರ್ಕಾರದ ಕರ್ತವ್ಯವಾಗಿತ್ತು. ಹಾಗೆ ಮಾಡದೆ 14 ಸಾವಿರ ಶಿಕ್ಷಕರನ್ನು ನೇಮಕಮಾಡಿದ್ದಾರೆ, ಇನ್ನು 5 ಸಾವಿರ ಶಿಕ್ಷಕರನ್ನು ನೇಮಕ ಮಾಡಿಲ್ಲ. 10 ಲಕ್ಷಕ್ಕೆ ಬದಲಾಗಿ 12 ಲಕ್ಷ ವಿದ್ಯಾರ್ಥಿಗಳ ಎನ್‌ರೋಲ್‌ಮೆಂಟ್ ಆಗಿ ಹೆಚ್ಚಿಗೆ ವಿದ್ಯಾರ್ಥಿಗಳಿದ್ದು ಹೊರೆ ಹೆಚ್ಚಾಗಿರುವುದರಿಂದ ಕೃಪಾ ಕೈಕೊಂಡು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಮಾಡಿರುವಾಗ ಅದಕ್ಕೆ ಸರಿಯಾಗಿ ಶಿಕ್ಷಕರನ್ನು ನೇಮಕ ಮಾಡಬೇಕು.

11-00 A.M.

ಅದೇ ಪ್ರಕಾರ ಸೀನಿಯರ್ ಪ್ರಾಥಮಿಕ ಶಾಲೆಗಳಲ್ಲಿ 4 ಸಾವಿರ ಶಿಕ್ಷಕರಿಗೆ ಬದಲಾಗಿ 1953 ಮಂದಿ ಶಿಕ್ಷಕರನ್ನು ನೇಮಿಸಿದ್ದೀರಿ, ಅಂದರೆ ಇನ್ನೂ ಗುರಿ ಮುಟ್ಟುವುದು ಸಾಕಾದಷ್ಟು ಇದೆ ಅಂತ ಅನಿಸುತ್ತದೆ. ಸ್ವತಂತ್ರ ಬಂದು 20 ವರ್ಷವಾದರೂ ಇನ್ನೂ ಊರುಗಳಲ್ಲಿ ಶಾಲಾ ಮಕ್ಕಳಿಗೆ ಕೂಡ್ರುವ ಸಲುವಾಗಿ ರೂಮ್ಸ್ ಇಲ್ಲ, ತಾಲ್ಲೂಕು ಬೋರ್ಡು ಇದೆ, ಪಂಚಾಯ್ತಿ ಇದೆ, ಸರ್ಕಾರ ಸಾಕಷ್ಟು ಹಣ ಕೊಡುತ್ತಾ ಇದೆ ಆದರೂ ಸಹಿತ ಮೂರನೆ ಪ್ಲಾನ್‌ನಲ್ಲಿ 2865 ರೂಮ್ಸ್‌ಗಳನ್ನು ಕಟ್ಟಬೇಕೆಂಬ ಗುರಿ ಇದ್ದುದ್ದು 1685 ರೂಮ್ಸ್‌ಗಳನ್ನು ಮಾತ್ರ ಕಟ್ಟಿದ್ದಾರೆ. ಟಿ. ಡಿ. ಬೋರ್ಡಿನವರು, ಗ್ರಾಮ ಪಂಚಾಯಿತಿಯವರು ಸರಿಯಾಗಿ ಲಕ್ಷ ಕೊಟ್ಟಿಲ್ಲ ಅಂತ ಹೇಳ ಅನಿಸುತ್ತದೆ. ಅದಕ್ಕೆ ಸರ್ಕಾರದವರು ಈ ಕಡೆಗೆ ಲಕ್ಷ್ಯ ಕೊಟ್ಟು ಎಲ್ಲಾ ಊರುಗಳಲ್ಲೂ ತೀವ್ರ ಮಕ್ಕಳಿಗೆ ಕೂಡ್ರುವುದಕ್ಕೆ ರೂಮ್ಸ್ ಕಟ್ಟಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ಸರ್ಕಾರದವರು ಹಳ್ಳಿಭಾಗದಲ್ಲಿರುವಂತಹ ಶಾಲೆಗಳನ್ನು ಕಟ್ಟುವ ಸಲುವಾಗಿ ಅರ್ಧ ನೀವು ಕೊಡಬೇಕು, ಅರ್ಧ ಸರ್ಕಾರದವರು ಕೊಡಬೇಕೆಂದು ಹೇಳುತ್ತಾರೆ. ಈ ಪ್ರಕಾರ ಮಾಡದೇ ಗ್ರಾಂಟಿನ ಮೂರನೆ ನಾಲ್ಕು ಅಂಶವನ್ನು ಸರ್ಕಾರದವರು ಮತ್ತು ಡಿ. ಡಿ. ಬೋರ್ಡಿನವರು ಕೊಡಬೇಕು ನಾಲ್ಕನೆ ಒಂದು ಅಂಶವನ್ನು ಜನರಿಂದ ವಸೂಲು ಮಾಡುವಂತಹ ವ್ಯವಸ್ಥೆ ಆಗಬೇಕು, ಇದರಿಂದ ಒಂದು ವಿಚಾರ ಕಲ್ಪನೆ ಹೆಚ್ಚಾಗುತ್ತದೆ ಎಂದು ಹೇಳುತ್ತೇನೆ.

ಉತ್ತರ ಕರ್ನಾಟಕದ ಭಾಗದಲ್ಲಿ ಸಂಗೀತ ಶಿಕ್ಷಕರನ್ನು ನೇಮಕ ಮಾಡಿದ್ದೀರಿ. ಅವರಿಗೆ ಸಿಕ್ಕುವಂತಹ ಪಗಾರ ಕೇವಲ 26 ರೂಪಾಯಿ. 26 ರೂಪಾಯಿ ತೆಗೆದುಕೊಂಡು ಅವರು ಶಿಕ್ಷಣ ಹೇಗೆ ಕೊಡಬೇಕೋ ಗೊತ್ತಾಗುವುದಿಲ್ಲ. ಹಳ್ಳಿಯಲ್ಲಿ ಒಂದೂವರೆ ರೂಪಾಯಿ ಕೂಲಿ ಇದೆ. ಹಾಗಿರುವಾಗ 26 ರೂಪಾಯಿ ಪಗಾರ ಕೊಟ್ಟು ಅದನ್ನು ಏಕೆ ವೇಸ್ಟ್ ಮಾಡಬೇಕು? ಅದಕ್ಕೆ ಬದಲಾಗಿ ಆ ಶಿಕ್ಷಕನಿಗೆ ಯೋಗ್ಯ ಆಹಾರ ಸಿಕ್ಕುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಪ್ರಾಥಮಿಕ ಶಾಲೆಗಳಲ್ಲಿ ಕಲಿತಂತಹ ವಿದ್ಯಾರ್ಥಿಗಳು ಹೈಸ್ಕೂಲಿಗೆ ಬರುತ್ತಾರೆ. 5-6-7ನೇ ಇಯತ್ತೆಯಲ್ಲಿ ವಿದ್ಯಾರ್ಥಿಗಳಿಗೆ ಸರಿಯಾಗಿ ಇಂಗ್ಲೀಷ್ ಕಲಿಸದಿದ್ದರೆ ಅಥವಾ ಅವರಿಗೆ ಸರಿಯಾಗಿ ಬರದಿದ್ದರೆ ಹೈಸ್ಕೂಲಿನಲ್ಲಿ ಅವರ ಶಿಕ್ಷಣ ಸರಿಯಾಗಿ ಆಗುವುದಿಲ್ಲ. ಹೈಸ್ಕೂಲಿನಲ್ಲಿ ಶಿಕ್ಷಣ ಸರಿಯಾಗಿ ಆಗದಿದ್ದರೆ ಕಾಲೇಜಿನಲ್ಲಿ ಸರಿಯಾದ ಮಾರ್ಕ್ಸನ್ನು ತೆಗೆದುಕೊಂಡು ಮೇಲ್ ತರಗತಿಗೆ ಹೋಗುವುದಕ್ಕೆ ಅಥವಾ ಫಸ್ಟ್ ಕ್ಲಾಸಿನಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ಕನ್ನಡ ಪ್ರಾಥಮಿಕ ಶಾಲೆಯಲ್ಲಿ 5-6-7ನೇ ಇಯತ್ತೆಯಲ್ಲಿ ಕಲಿಯುವಂತಹ ವಿದ್ಯಾರ್ಥಿಗಳಿಗೆ ಕಲಿಸುವ ಸಲುವಾಗಿ ಬಿ. ಎ. ಪಾಸ್ ಆದಂತಹ ಗ್ರಾಜ್ಯುಯೇಟ್ಸ್‌ನ್ನು ನೇಮಕ ಮಾಡಿದರೆ ಒಳಿತು. ಈಗ ಸಾಕಾದಷ್ಟು ಜನರು ನೌಕರಿ ಇಲ್ಲ ಎಂದು ಅನ್ನುತ್ತಾ ಇದ್ದಾರೆ, ಅಂತಹವರನ್ನು ಹೆಚ್ಚು ಇಂಗ್ಲೀಷ್ ಮತ್ತು ಹಿಂದಿ ಜ್ಞಾನ ಇರುವವರನ್ನು ನೇಮಕ ಮಾಡಿದರೆ ಹೈಸ್ಕೂಲಿನಲ್ಲಿ ಓದತಕ್ಕ ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ಯಲ್ಲಿ ಫೇಲ್ ಆಗುವುದು ಕಡಿಮೆಯಾಗುತ್ತದೆ. ಆದರಿಂದ ಹೆಚ್ಚು ಉಪಯುಕ್ತವಾಗುತ್ತದೆ ಎಂದು ಹೇಳುತ್ತೇನೆ. ಇತ್ತಿತ್ತಲಾಗಿ ಎಸ್. ಎಸ್. ಎಲ್. ಸಿ. ಪಾಸ್ ಆಗಿ ಶಿಕ್ಷಕರಾಗಿ ನೇಮಕ ಮಾಡಲ್ಪಟ್ಟವರು ಯಾರಿದ್ದಾರೆ ಅವರಿಗೆ ಇಂಗ್ಲೀಷು ತಿಳಿಯುವುದಿಲ್ಲ ಅಂತ ಕಾಣಬರುತ್ತಿದೆ, ಇದು

(ಶ್ರೀ ಬಿ. ಎಂ. ಸಾಣಿಕೊಪ್ಪ)

ಸುಧಾರಿಸಬೇಕು. ಹಿಂದಿ, ಇದು ನಮ್ಮ ರಾಷ್ಟ್ರ ಭಾಷೆ ಆದ್ದರಿಂದ 5-6-7ನೇ ತರಗತಿಯ ವಿದ್ಯಾರ್ಥಿಗಳಿಗೆ ಹಿಂದಿಯನ್ನು ಸರಿಯಾಗಿ ಕಲಿಸುವಂತೆ ಮಾಡಲು ಹಿಂದಿ ಶಿಕ್ಷಣ ಪಡೆದಂತಹ ಶಿಕ್ಷಕರನ್ನು ನೇಮಕ ಮಾಡಲು ಏರ್ಪಾಡು ಮಾಡಬೇಕು.

ಪ್ರಾಥಮಿಕ ಶಾಲೆಯ ಕಟ್ಟಡಗಳ ರಿಪೇರಿ ಕಾಲ ಕಾಲಕ್ಕೆ ಆಗುವಂತಹ ವ್ಯವಸ್ಥೆ ಮಾಡಲು ಸಾಕಾದಷ್ಟು ಗಮನ ಕೊಡಬೇಕು.

ಹೆಣ್ಣು ಮಕ್ಕಳ ಶಾಲೆಯಲ್ಲಿ ಶಿಕ್ಷಣ ವ್ಯವಸ್ಥೆ ಸರಿಯಾಗಿದೆ ಎಂದು ಅನಿಸುವುದಿಲ್ಲ. ಏಕೆಂದರೆ ಸರ್ಕಾರದವರು ಆ ಕಡೆಗೆ ಹೆಚ್ಚು ಗಮನ ಕೊಟ್ಟಿದ್ದಾರೆಯೋ ಇಲ್ಲವೋ ಗೊತ್ತಿಲ್ಲ ನನಗೆ ತಿಳಿದಮಟ್ಟಿಗೆ ಹೆಣ್ಣುಮಕ್ಕಳನ್ನು ಶಿಕ್ಷಕಿಯರನ್ನಾಗಿ ನೇಮಕ ಮಾಡುತ್ತಾರೆ, ಅವರು ಗರ್ಭಿಣಿಯರಾಗಿ ಹೆರಿಗೆಯ ಸಲುವಾಗಿ 6 ತಿಂಗಳು ರಜಾ ಹೋದಾಗ ಆ 6 ತಿಂಗಳ ಅವಧಿಯಲ್ಲಿ ಶಿಕ್ಷಕಿಯರು ಯಾರನ್ನೂ ಕೂಡ ನೇಮಕ ಮಾಡದೇ ಇರುವಂತಹ ಉದಾಹರಣೆಗಳು ಇವೆ. ಇಲ್ಲಿ ಯಾವ ರೀತಿ ಇದೆಯೋ ಗೊತ್ತಿಲ್ಲ ನಮ್ಮ ಭಾಗದಲ್ಲಂತೂ ಅಂತಹ ಅನೇಕ ನಿದರ್ಶನಗಳು ಇವೆ. ಆದ್ದರಿಂದ ಅವರಿಗೆ ಬದಲಾಗಿ ಶಿಕ್ಷಕರನ್ನು ಅಥವಾ ಶಿಕ್ಷಕಿಯರನ್ನು ತೀವ್ರವಾಗಿ ನೇಮಕ ಮಾಡಲಿಕ್ಕೆ ವ್ಯವಸ್ಥೆ ಮಾಡಿದರೆ ಹೆಣ್ಣು ಮಕ್ಕಳ ಶಾಲೆಯ ಸಲುವಾಗಿ ಸರ್ಕಾರ ಹೆಚ್ಚು ಉತ್ತೇಜನ ಕೊಟ್ಟಂತೆ ಆಗುತ್ತದೆ, ಅದಕ್ಕೆ ಹೆಚ್ಚು ಪೋಷಕವಾಗುತ್ತದೆ ಎಂದು ಹೇಳುತ್ತೇನೆ.

ಹೆಣ್ಣು ಮಕ್ಕಳ ಶಾಲೆಯಲ್ಲಿ ಗೃಹಕೃತ್ಯಕ್ಕೆ ಸಂಬಂಧಪಟ್ಟ ಕ್ರಾಫ್ಟ್ ಯಾವುದನ್ನಾದರೂ ಕಲಿಸುವಂತಹ ವ್ಯವಸ್ಥೆ ಮಾಡಬೇಕು. ಮಹಾತ್ಮಾ ಗಾಂಧಿಯವರು ಹೇಳುತ್ತಾ ಇದ್ದ ಮೂಲ ಉದ್ಯೋಗ ನೂಲುವ ಕೆಲಸ ನಡೆದಿದೆ. ಈಗಿನ ಪರಿಸ್ಥಿತಿಯಲ್ಲಿ ಅದರಿಂದ ಉಪಯೋಗವಾಗಿಲ್ಲ. ಹತ್ತಿ ತರುತ್ತಾರೆ ನೂಲಲಿಕ್ಕೆ ಪ್ರಯತ್ನ ಮಾಡುತ್ತಾರೆ. ಶಿಕ್ಷಕರು ಹೊಲಸಾದಂತಹ ಅರಿವೆಯನ್ನು ನೂಲಿನಿಂದ ತಯಾರು ಮಾಡಿಸಿದರೆ ಅದನ್ನು ಪಾಲಕರು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಪಾಲಕರು ತೆಗೆದುಕೊಳ್ಳಬಹುದು. ನೂಲುವ ಅರಿವೆ ಚೆನ್ನಾಗಿದ್ದರೆ ಉಪಯೋಗವಾಗುತ್ತದೆ. ಈಗಿನ ಸನ್ನಿವೇಶದಲ್ಲಿ ಮೂಲ ಉದ್ಯೋಗ ಕಲಿಸುವಂತಹದನ್ನು ಬದಲಾವಣೆ ಮಾಡಿ ತಾಂತ್ರಿಕ ವಿಧಾನವನ್ನು ಅನುಸರಿಸುವಂತಹ ಒಂದು ಹೊಸ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮೇಲೆ ಮಾಧ್ಯಮಿಕ ಶಾಲೆಯ ವಿಷಯವನ್ನು ಹೇಳುವುದಾದರೆ, ಉತ್ತರ ಕರ್ನಾಟಕದಲ್ಲಿ ಮಾಧ್ಯಮಿಕ ಶಾಲೆ ಮತ್ತು ಹೈಸ್ಕೂಲುಗಳನ್ನು ಮ್ಯಾನೇಜ್‌ಮೆಂಟಿನವರು ನಡೆಸುತ್ತಾ ಇದ್ದಾರೆ. ನಡೆಸುವಾಗ ಅವರು ಸಾಲ ಮಾಡಿ ಅದರಿಂದ ಕಟ್ಟಡಗಳನ್ನು ಕಟ್ಟಿಸಿದ್ದಾರೆ ಮತ್ತು ಇತರ ಎಕ್ವಿಪ್‌ಮೆಂಟಿಗೂ ಕೂಡ ಅವರು ಆ ಹಣವನ್ನು ಖರ್ಚು ಮಾಡಿದ್ದಾರೆ. ಹೊಸ ಗ್ರಾಂಟ್ ಇನ್ ಏಡ್ ಪ್ರಕಾರ ಈ ವರ್ಷದಲ್ಲಿ ಅವರಿಗೆ ಯಾವುದೇ ಹಣವನ್ನೂ ಕೂಡ ಕೊಟ್ಟಿಲ್ಲ, ಇದರಿಂದ ಮ್ಯಾನೇಜ್‌ಮೆಂಟಿನವರಿಗೆ ಬಹಳ ದೊಡ್ಡ ತೊಂದರೆಯಾಗಿದೆ. ಅದಕ್ಕೆ ಸರ್ಕಾರದವರು ಲಕ್ಷ್ಯ ಕೊಟ್ಟು ನೋಡಬೇಕು. ಇನ್ನೊಂದು ವಿಷಯ ಎಂದರೆ ಮ್ಯಾನೇಜ್‌ಮೆಂಟಿನವರು ನಡೆಸಿದಂತಹ ಹೈಸ್ಕೂಲುಗಳ ರಿಸಲ್ಟ್ ಮತ್ತು ಸರ್ಕಾರದ ಹೈಸ್ಕೂಲಿನ ರಿಸಲ್ಟ್ ಎರಡನ್ನೂ ಹೋಲಿಕೆ ಮಾಡಿ ನೋಡಿದರೆ ಮ್ಯಾನೇಜ್‌ಮೆಂಟಿನವರು ನಡೆಸಿದ ಹೈಸ್ಕೂಲುಗಳಲ್ಲಿಯೇ ಹೆಚ್ಚು ಜನ ಪಾಸ್ ಆಗಿದ್ದಾರೆ ಎಂಬುದು ಕಂಡುಬರುತ್ತದೆ. ಆದ್ದರಿಂದ ಅವರಿಗೆ ಗ್ರಾಂಟ್ ಮತ್ತು ಬಿಲ್ಡಿಂಗ್ ರೆಂಟನ್ನು ಮೊದಲಿನಂತೆಯೇ ಕೊಡುವಂತೆ ತಾವು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಉತ್ತರ ಕರ್ನಾಟಕದ ಭಾಗದಲ್ಲಿ ಅವರಿಗೆ ಲಾಸ್ ಆಗುವಂತೆ ಮಾಡಬಾರದು ಎಂದು ಹೇಳುತ್ತೇನೆ. ಒಂದು ವೇಳೆ ಗ್ರಾಂಟ್ ಕೊಡುವುದಕ್ಕೆ ಆಗದೇ ಇದ್ದ ಪಕ್ಷದಲ್ಲಿ ಅವುಗಳನ್ನೂ ಕೂಡ ತಾವೇ ತೆಗೆದು ಕೊಂಡು ತಾವೇ ನಡೆಸುವುದು ಒಳ್ಳೆಯದು ಎಂದು ಹೇಳುತ್ತೇನೆ. ಮತ್ತು ಬೆಟರ್‌ಮೆಂಟ್ ಫೀ ವಸೂಲು ಮಾಡುವುದನ್ನು ನಿಲ್ಲಿಸಬೇಕು, ಹಣವಂತರಿಂದ ಬೇಕಾದರೆ ವಸೂಲು ಮಾಡಿ ತೀರ ಬಡವರಿಂದ ತೆಗೆದುಕೊಳ್ಳಕೂಡದು ಎಂದು ಹೇಳುತ್ತೇನೆ. ಮತ್ತು ಹೈಸ್ಕೂಲ್ ಬಿಲ್ಡಿಂಗ್ ಕಟ್ಟಿಸುವ ಸಲುವಾಗಿ ಸರ್ಕಾರದವರು ಉದಾರ ಹಸ್ತದಿಂದ ಹಣ ಒದಗಿಸಬೇಕು. ಈ ಪ್ರಕಾರ ಹೆಚ್ಚಿನ ಸುಧಾರಣೆಗಳನ್ನು ಮಾಡಿದರೆ ಶಿಕ್ಷಣ ಖಾತೆಯಿಂದ ಹೆಚ್ಚು ಅನುಕೂಲವಾಗುತ್ತದೆ. ಹಳ್ಳಿಯ ಮಟ್ಟದ ಜನರಿಗೆ ಸೌಕರ್ಯ ಒದಗುತ್ತದೆ ಎಂದು ಹೇಳಿ ನಾಲ್ಕು ಮಾತುಗಳನ್ನು ಆಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸುಬ್ಬರಾವ್ ಹಲ್ಸನಾಡು (ಬೈಂದೂರು).—ಮಾನ್ಯ ಉಪಾಧ್ಯಕ್ಷರೇ ವಿದ್ಯಾ ಪ್ರಸಾರದ ಬಗ್ಗೆ ಸರಕಾರ ಹೆಚ್ಚು ಹೆಚ್ಚು ಹಣ ಖರ್ಚು ಮಾಡುತ್ತಿರುವುದು ಶ್ಲಾಘಿಸ ಬೇಕಾದ ವಿಷಯ. ಆದರೆ ನಮ್ಮ ಈಗಿನ ವಿದ್ಯೆಯು ನಮ್ಮ ಮಕ್ಕಳ ಮುಂದಿನ ಜೀವನೋಪಾಯದ ದಾರಿಯನ್ನು ತೋರಿಸುತ್ತಿಲ್ಲವೆಂಬುದು ಇತ್ತೀಚೆಗೆ ಎಲ್ಲರ ತಿಳುವಳಿಕೆಗೆ ಬಂದ ವಿಷಯ. ಸೆಕೆಂಡರಿ ಶಿಕ್ಷಣ ಮುಗಿಸಿ ಹೊರಬರುವ ವೇಳೆ ನಮ್ಮ ವಿದ್ಯಾರ್ಥಿಗಳು ಸ್ವತಂತ್ರವಾಗಿ ಜೀವಿಸಲು ಸಮರ್ಥ ರಾಗಬೇಕು. ನಮ್ಮ ಶಿಕ್ಷಣ ರೀತಿ ಆ ಕಡೆ ರೂಪಗೊಳ್ಳಬೇಕು. ಇದು ಒಮ್ಮೆಗೆ ಸಾಧ್ಯವಾಗದೆ ಹೋದರೂ ಪ್ರಾರಂಭ ಹಂತದಲ್ಲಿ ತಾಲ್ಲೂಕು ಒಂದರೊಂದರತೆಯಾದರೂ ಅಂತಹ ಶಿಕ್ಷಣ ಸಂಸ್ಥೆ ಯನ್ನು ಯೋಜಿಸುವುದು ಅಗತ್ಯ. ಈ ಕಡೆಗೆ ನಮ್ಮ ಸರ್ಕಾರದ ನೀತಿ ಏನೆಂಬುದನ್ನು ಇನ್ನೂ ತಿಳಿಯಪಡಿಸಲಿಲ್ಲ.

ತ್ರಿಭಾಷಾ ಸೂತ್ರಕ್ಕೇ ನಮ್ಮ ರಾಜ್ಯವು ಹೊಂದಿಕೊಂಡಿರುವುದಾಗಿ ಮಾನ್ಯ ಮಂತ್ರಿಗಳು ತಮ್ಮ ಭಾಷಣದ ಸಮಯದಲ್ಲಿ ಹೇಳಿದ್ದಾರೆ. ತ್ರಿಭಾಷಾ ಸೂತ್ರವೇ ಇರಲಿ, ಏಕಭಾಷಾ ಸೂತ್ರವೇ ಇರಲಿ, ಕಲಿಸುವ ಭಾಷೆಯನ್ನು ಚೆನ್ನಾಗಿ ಕಲಿಸುವಂತೆ ನಮ್ಮ ಸೂತ್ರವಿರಬೇಕು. ತ್ರಿಭಾಷಾ ಎಂದು ಯಾವ ಭಾಷೆಯನ್ನೂ ಚೆನ್ನಾಗಿ ಕಲಿಸದೆ ಇರುವುದು ಸರಿಯಲ್ಲ. ನಮ್ಮ ವಿದ್ಯಾರ್ಥಿಗಳು ಈಗ, ಇಂಗ್ಲಿಷ್, ಹಿಂದಿ ಹೋಗಲಿ, ಕನ್ನಡವನ್ನೂ ಸಹ ಸ್ಪಷ್ಟವಾಗಿ ಮಾತನಾಡಲು ಮತ್ತು ಬರೆಯಲು ತಿಳಿದಂತೆ ಕಾಣುವುದಿಲ್ಲ. ಜನಸಾಮಾನ್ಯರ ಮಕ್ಕಳಿಗೆ ಇಂಗ್ಲಿಷ್ ಕಲಿಯು ವುದು ಕಷ್ಟವಾಗಿ, ಆ ವಿಷಯದಲ್ಲಿ ಪಾಸ್ ಆಗದೇ ಹೋದ ಮಾತ್ರಕ್ಕೆ ಅವರಿಗೆ ಮುಂದಿನ ಶಿಕ್ಷಣ ಇಲ್ಲದಂತಾಗುವುದು ಅನ್ಯಾಯ. ಇದು ನಿಜವಾಗಿ ಇಂಗ್ಲಿಷನ್ನು ಇಂಪೂಜಿಷರ್ ಮಾಡಿದಂತೆ ಸರಿ. ಅಲ್ಲದೆ ನಾವು ಹಿಂದಿಯನ್ನು ಶಿಕ್ಷಣ ಕ್ರಮದಲ್ಲಿ ಕಡ್ಡಾಯವೆಂದು ಹೇಳುತ್ತೇವೆ. ಪರೀಕ್ಷೆಗೆ ಮಾತ್ರ ವರ್ಷದಿಂದ ವರ್ಷಕ್ಕೆ ವಿನಾಯಿತಿ ಕೊಡುತ್ತಾ ಹೋಗುತ್ತೇವೆ. ಇದರಿಂದ ಹೆಚ್ಚಿನ ಮಕ್ಕಳು ಕಲಿಯುವುದಿಲ್ಲ ಮಾತ್ರವಲ್ಲ ಕಲಿಯುವ ಮಕ್ಕಳು ಸಹಾ ಚೆನ್ನಾಗಿ ಕಲಿಯುವುದೂ ಇಲ್ಲ. ಇದಕ್ಕೆ ಖರ್ಚು ಮಾಡುವ ಹಣವು ವ್ಯರ್ಥವಾಗುತ್ತದೆ. ಈ ವಿಷಯದಲ್ಲಿ ಸರಕಾರವು ದೃಢ ನಿಲುವೆಯನ್ನು ತೆಗೆದುಕೊಳ್ಳಬೇಕು.

1970-71 ರಿಂದ ಎರಡು ವರ್ಷದ ಡಿಗ್ರಿ ಪೂರ್ವ (ಪಿ.ಯು.ಸಿ.) ಶಿಕ್ಷಣ ಯೋಜನೆ ಬರಲಿಕ್ಕಿದೆ ಯಾಗಿ ಸಾರಲಾಗಿದೆ. ಈ ಎರಡು ವರ್ಷದ ಶಿಕ್ಷಣ ಎಲ್ಲಿ ಕೊಡಲಾಗುವುದು ? ಈಗ ಇರುವಂತಹ ಹೈಯರ್ ಸೆಕೆಂಡರಿ ಶಾಲೆಗಳಲ್ಲಿಯೋ ಅಥವಾ ಕಾಲೇಜುಗಳಲ್ಲಿಯೋ ? ಈ ವಿಷಯದಲ್ಲಿ ಸರ್ಕಾರವು ದೃಢವಾದ ಒಂದು ನಿಲುವೆಯನ್ನು ತೆಗೆದುಕೊಳ್ಳಬೇಕು. ಈಗ ಹೈಯರ್ ಸೆಕೆಂಡರಿ ಕೊಡಮಾಡಿದ ಅನೇಕ ಶಾಲೆಗಳು ಪಿ.ಯು.ಸಿ. ಶಿಕ್ಷಣ ಕೊಡಲು ಆವಶ್ಯವುಳ್ಳ ಯೋಗ್ಯತೆ ಪಡೆದ ಉಪಾಧ್ಯಾಯರು ಮತ್ತು ಪ್ರಯೋಗಶಾಲೆ, ಪುಸ್ತಕಾಲಯಗಳ ಸೌಕರ್ಯ ಪಡೆದಿಲ್ಲ. ಎಲ್ಲಾ ಹೈಸ್ಕೂಲುಗಳನ್ನು ಅರ್ಧಮರ್ಧ ಹೈಯರ್ ಸೆಕೆಂಡರಿ ಮಾಡಿ ಅರ್ಧಮರ್ಧ ಪಿ.ಯು.ಸಿ. ಶಿಕ್ಷಣ ಕೊಡುವುದಕ್ಕಿಂತ ಕೊಡದಿರುವುದು ಉತ್ತಮ. ಇಲ್ಲಿ ನಿರ್ಣಯಿಸಬೇಕಾದ ವಿಷಯವಿಷ್ಟೆ : ಸರ್ಕಾರಿ 3ನೇ ವರ್ಗದ ನೌಕರರಿಗೆ ಎಸ್. ಎಸ್. ಎಲ್. ಸಿ. ಕನಿಷ್ಠ ಮಿತಿ ಯೋಗ್ಯತೆಯೇ ಅಥವಾ ಪಿ.ಯು.ಸಿ.ಯೇ ಎಂದು. ಪಿ.ಯು.ಸಿ. ಎಂದಾದರೆ ಎಲ್ಲಾ ಹೈಸ್ಕೂಲುಗಳನ್ನು ಹೈಯರ್ ಸೆಕೆಂಡರಿ ಮಾಡುವುದು ಅವಶ್ಯ. ಅದಲ್ಲದಿದ್ದರೆ ಈ ಎರಡು ವರ್ಷದ ಶಿಕ್ಷಣ ಸೌಕರ್ಯ ಹೈಸ್ಕೂಲ ನಲ್ಲಿ ಮಾಡುವ ಆವಶ್ಯಕತೆ ಏನು ? ಅಷ್ಟು ಹಣ ಖರ್ಚು ಮಾಡಬೇಕು ಏಕೆ ? ಪಿ.ಯು.ಸಿ. ಕಲಿಯು ವವರು ಕಾಲೇಜಿಗೆ ಹೋಗಿ ಕಲಿಯುತ್ತಾರೆ.

ಹೈಸ್ಕೂಲು ಶಿಕ್ಷಕರಿಗೆ ನೇರ ವೇತನ ಕ್ರಮ ಜಾರಿಗೆ ಬಂದುದು ಬಹಳ ಸ್ತುತ್ಯ. ಈ ವಿಷಯಕ್ಕೆ ಸಂಬಂಧಪಟ್ಟ ಎಲ್ಲಾ ಉಪಾಧ್ಯಾಯರುಗಳು ಬಹಳ ಸಮಾಧಾನಪಡೆದಿದ್ದಾರೆ. ಆದರೆ ಕೆಲವು ಸದಸ್ಯರು ಇದನ್ನು ಆಕ್ಷೇಪಿಸಿ ತಾಲ್ಲೂಕ್ ಬೋರ್ಡ್‌ಗಳ ಮೂಲಕವೇ ವೇತನವನ್ನು ಕೊಡಮಾಡಬೇಕೆಂದು ಹೇಳುತ್ತಿದ್ದಾರೆ. ಆದರಿಂದ ಬಡ ಉಪಾಧ್ಯಾಯರುಗಳು ಬಹಳ ಕಷ್ಟ ಕ್ಕೀಡಾಗುತ್ತಾರೆಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಅಲ್ಲದೆ ಈ ನೇರವೇತನ ಕ್ರಮವನ್ನು ಪ್ರಾಥಮಿಕ ಶಾಲೆಯ ಉಪಾಧ್ಯಾಯರುಗಳಿಗೂ ಅನ್ವಯಿಸುವಂತೆ ಮಾಡ ಬೇಕಾಗಿ ಒತ್ತಾಯಿಸುತ್ತೇನೆ.

ನಮ್ಮ ತಾಲ್ಲೂಕು ಬೋರ್ಡುಗಳು ಹೈಸ್ಕೂಲುಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಸಮರ್ಥವಾಗಿಲ್ಲ. ಅವುಗಳು ಉಪಾಧ್ಯಾಯರುಗಳನ್ನು ಹೆಚ್ಚು ಹೆಚ್ಚಾಗಿ ರಾಜ ಕೀಯಕ್ಕೆ ಒಳಪಡಿಸುತ್ತಿರುವುದು ಇತ್ತೀಚೆಗೆ ಎಲ್ಲರ ಅನುಭವಕ್ಕೆ ಬಂದ ವಿಷಯ. ಇದರಿಂದ ವಿದ್ಯಾಭಿವೃದ್ಧಿಗೆ ಬಹಳ ತೊಡಕು. ಎಲ್ಲಾ ರಾಜಕೀಯ ಪಕ್ಷಕ್ಕೂ ಬಹಳ ಅಪಾಯ. ಇದನ್ನು ತಡೆಯಬೇಕಿದ್ದರೆ ತಾಲ್ಲೂಕ್ ಬೋರ್ಡ್‌ಗಳ ಆಡಳಿತದಿಂದ ಹೈಸ್ಕೂಲುಗಳನ್ನು ತಪ್ಪಿಸಬೇಕು.

(ಶ್ರೀ ಸುಬ್ಬರಾವ್ ಹಲ್ಸನಾಡು)

ಜಿಲ್ಲಾ ಸ್ಕೂಲು ಬೋರ್ಡುಗಳು ಆಗಲಿಕ್ಕಿವೆಯೆಂದು ಮಾನ್ಯ ವಿದ್ಯಾಮಂತ್ರಿಗಳು ಹೇಳುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟ ನಿಯಮಾವಳಿಗಳನ್ನು ಕೂಡಲೆ ದರ್ಜೆಗೆ ತೆಗೆದುಕೊಳ್ಳುವಂತೆ ಮಾಡಿ ಬರುವ ಜೂನ್‌ನಿಂದರೇ ಸ್ಕೂಲ್ ಬೋರ್ಡುಗಳ ಆಡಳಿತಕ್ಕೆ ಎಲ್ಲಾ ಹೈಸೂಲುಗಳನ್ನು ಒಳಪಡಿಸಬೇಕೆಂದು ಒತ್ತಾಯಿಸುತ್ತೇನೆ.

ನಮ್ಮ ತಾಲ್ಲೂಕ್ ಬೋರ್ಡ್‌ಗಳ ಆಡಳಿತದಲ್ಲಿ ರಾಜಕೀಯವು ತಾಂಡವವಾಡುತ್ತಿದೆಯೆಂದು ಕಳೆದ ಅಸೆಂಬ್ಲಿಯಲ್ಲಿ ಸರ್ಕಾರಕ್ಕೆ ಗಮನಕ್ಕೆ ತಂದಿರುತ್ತೇನೆ. ಉದಾಹರಣೆಗಾಗಿ ನಮ್ಮ ಕುಂದಾಪುರ ತಾಲ್ಲೂಕು ಬೋರ್ಡು ಮಾಡಿದ ಸಾಮೂಹಿಕ ಅನ್ಯಾಯದ ವರ್ಗಾವರ್ಗಿಯನ್ನು ಸರ್ಕಾರಕ್ಕೆ ಬರೆದುಕೊಂಡಿದ್ದೇನೆ. ಮಾನ್ಯ ವಿದ್ಯಾಮಂತ್ರಿಗಳಿಗೆ ಮತ್ತು ಪಂಚಾಯತ ರಾಜ್ ಮಂತ್ರಿಗಳಿಗೆ ಸ್ವತಃ ಮುಖತಃ ಹೇಳಿಕೊಂಡಿದ್ದೇನೆ. ನಾನಲ್ಲದೆ ನಮ್ಮ ಕಡೆ ಇನ್ನಿತರ ಸದಸ್ಯರೂ ಹೇಳಿದ್ದಾರಾಗಿ ತಿಳಿದಿರುತ್ತೇನೆ. ಆದರೂ ನಮ್ಮ ಪಂಚಾಯತ ಮಂತ್ರಿಗಳು ಆ ಸಾಮೂಹಿಕ ವರ್ಗಾವರ್ಗಿ ಆಡಳಿತ ನ್ಯಾಯಪರಿಪಾಲನೆ ದೃಷ್ಠಿಯಿಂದ ನಡೆದುದಾಗಿ ತನಿಖೆಯಿಂದ ತಿಳಿದುಬರುತ್ತದೆಂದು ನನಗೆ ಬರಹ ಮೂಲಕ ತಿಳಿಸಿರುತ್ತಾರೆ. ಇವರು ಎಲ್ಲಿ ತನಿಖೆ ನಡೆಸಿದರೋ ? ದೇವರೇ ಬಲ್ಲ. ಅನ್ಯಾಯ ಮಾಡಿದವರನ್ನೇ ವಿಚಾರಿಸಿ ಅನ್ಯಾಯವಾಗಿಲ್ಲವೆಂದು ತೀರ್ಪು ಇತ್ತರೋ ? ಅಂದರೆ ತೋಳವನ್ನು ಕೇಳಿ ಕುರಿಗೆ ಅನ್ಯಾಯವಾಗಿಲ್ಲ ಎಂದು ಇವರ ತೀರ್ಮಾನ ಇದ್ದ ಹಾಗೆ ಕಾಣುತ್ತದೆ. ಹಾಗೆ ಮಾಡಬಾರದಿತ್ತು, ಕನಿಷ್ಠ ಪಕ್ಷ ಅನ್ಯಾಯ ಹೊಂದಿದ ಉಪಾಧ್ಯಾಯರಿಗೆ ತಮ್ಮ ಹೇಳಿಕೆಯನ್ನು ಕೊಡುವಷ್ಟು ನ್ಯಾಯ ತೋರಬೇಕಿತ್ತು. ಹಾಗೆ ಮಾಡದಿರುವುದು ಬಹಳ ವಿಷಾದಕರ. ಉಪಾಧ್ಯಾಯರನ್ನು ಗೌರವಿಸಬೇಕೆಂದು ಭಾಷಣ ಬಿಗಿಯುವಷ್ಟರಮಟ್ಟಿಗೆ ಮಾತ್ರ ದೊಡ್ಡ ದೊಡ್ಡ ರಾಜಕಾರಣಿಗಳು ಉತ್ಸಾಹಕರಾಗಿದ್ದಾರೆ ಎಂದು ಹೇಳಬೇಕಾಗುತ್ತದೆ.

ನಮ್ಮ ಊರ ಕಡೆ ಆಗುವ ಹೆಚ್ಚು ಕಮ್ಮಿಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ, ಅಧಿಕಾರಿಗಳು ಪ್ರಭಾವಿ ರಾಜಕಾರಣಿಗಳ ಒತ್ತಡದಿಂದ ಆ ದೂರುಗಳ ಕಡೆಗೆ ಗಮನ ಕೊಡದಿರುವುದು ನಿತ್ಯದ ಅನುಭವವಾಗಿರುತ್ತದೆ. ಉದಾಹರಣೆಗೆ ನಮ್ಮ ಪುತ್ತೂರು ಹೈಯರ್ ಎಲಿಮೆಂಟರಿ ಶಾಲೆಯ ಆಟದ ಬಯಲನ್ನು ಆಕ್ರಮಿಸಿದ್ದು. ಕಳೆದ 1 ವರ್ಷದಿಂದ ಈ ತಂಟೆ ನಡೆ ನಡೆಯುತ್ತಿದೆ. ನನ್ನ ಗಮನಕ್ಕೆ ಬಂದೊಡನೆ ನಾನು ಸರ್ಕಾರದ ಗಮನಕ್ಕೆ ತಂದರೆ, ನಮ್ಮ ಕಾಂಗ್ರೆಸ್ ಮಿತ್ರರು ಅದಕ್ಕೆ ಜಾತೀಯತೆಯ ಬಣ್ಣ ಹಚ್ಚಲು ಪ್ರಯತ್ನಿಸುತ್ತಿದ್ದಾರೆ. ಊರಿನ ಎಲ್ಲಾ ಜಾತಿಯವರು ಕೂಡಿ ಮನವಿ ಮಾಡಿಕೊಳ್ಳುತ್ತಿದ್ದರೂ, ಅದು ಜಾತಿಯ ದ್ವೇಷವೆಂದು ಆಗುವುದಾದರೂ ಹೇಗೆ ? ಇಂತಹ ದುಃಸ್ಸಾದನೆಯು ನಿಲ್ಲಬೇಕು. ನಿಷ್ಠೂರವಾದರೂ ನ್ಯಾಯ ಆಗಬೇಕು. ಈ ವಿಷಯ ಮುಖ್ಯಮಂತ್ರಿಗಳು ಮತ್ತು ವಿದ್ಯಾಮಂತ್ರಿಗಳ ಗಮನಕ್ಕೆ ಈ ಮೊದಲೇ ಬಂದಿದೆ. ಇನ್ನಾದರೂ ಕೂಡಲೇ ಕ್ರಮ ತೆಗೆದುಕೊಂಡು ಆಕ್ರಮಣದಾರರನ್ನು ಹೊರಗೆಡವಬೇಕೆಂದು ಒತ್ತಾಯಿಸುತ್ತೇನೆ.

ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಹಿಂದಿನ ಜಿಲ್ಲಾ ಬೋರ್ಡುಗಳ ಉಪಾಧಾಯರುಗಳಿಗೆ ಮತ್ತು ಇತರ ಸಿಬ್ಬಂದಿವರ್ಗಗಳಿಗೆ ಯಾವ ಸರ್ವಿಸ್ ನಿಯಮಗಳು ಅನ್ವಯವಾಗುತ್ತವೆ ಎಂಬ ಬಗ್ಗೆ 5 ವರ್ಷವಾದರೂ ಸಹ ಇನ್ನೂ ಸ್ಪಷ್ಟಪಡಿಸಲಾಗಲಿಲ್ಲ. ಹೊಸ ನಿಯಮಗಳು ಜಾರಿಗೆ ಬರುವವರೆಗೆ ಹಳೇ ನಿಯಮವೇ ಎಂದು ತಾಲ್ಲೂಕ್ ಬೋರ್ಡ್ ಆಕ್ಟ್ ಹೇಳುತ್ತದೆ ಮತ್ತು ಬೇರೆ ಬೇರೆ ಸರ್ಕಾರದ ಹುಕುಂ ಸಹ ಹೇಳುತ್ತದೆ. ಆದರೆ ನಮ್ಮ ತಾಲ್ಲೂಕ್ ಬೋರ್ಡುಗಳು ಅದನ್ನು ಲಕ್ಷಿಸದೆ ತನ್ನದೇ ಆದ ನಿಯಮವನ್ನು ಜಾರಿ ಮಾಡಲು ಪ್ರಯತ್ನಿಸುತ್ತಿದೆ. ಇದರಿಂದ ದೊಡ್ಡ ಗಲಭೆ ಉಂಟಾಗಿದೆ. ನಮ್ಮ ತಾಲ್ಲೂಕಿನ ಮುಖ್ಯ ಉಪಾಧ್ಯಾಯರೊಬ್ಬರು ಹೈಕೋರ್ಟಿಗೆ ರಿಟ್ ಸಹಾ ಮಾಡಬೇಕಾಗಿ ಬಂದಿದೆ. ಅವರಿಗೆ ಏಕೆ ಈ ಕಷ್ಟ ಕೊಡಬೇಕಿತ್ತು ? ನಿಯಮಗಳನ್ನು ಏಕೆ ಸ್ಪಷ್ಟಪಡಿಸದಾರದಿತ್ತು ? ಈ ರಿಟ್‌ನ ನೆಪದಿಂದ ತಾಲ್ಲೂಕ್ ಬೋರ್ಡ್ ಹೇರಳ ಹಣ ಖರ್ಚು ಮಾಡುತ್ತದೆ. ಈ ಖರ್ಚು ಯಾರು ಹೊರಬೇಕು ? ಅನ್ಯಾಯ ಮಾಡಿದವರೋ ಅಥವಾ ಸರಕಾರವೋ ?

ಕೊನೆಯದಾಗಿ ನಮ್ಮ ಸರ್ಕಾರವು ತನ್ನ ಎಲ್ಲಾ ನಿವೃತ್ತ ನೌಕರರಿಗೆ ನಿವೃತ್ತ ವೇತನದ ಸಂಗಡ ಸೇಕಡಾ 50 ಪರ್‌ಸೆಂಟ್ ತುಟ್ಟಿಭತ್ಯ ಕೊಡುವುದೆಂತ ಮಾಡಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲಾ ನಿವೃತ್ತ ಉಪಾಧ್ಯಾಯರ ಗತಿ ಏನೆಂಬುದನ್ನು ಸ್ಪಷ್ಟಪಡಿಸಲಿಲ್ಲ. ದಯವಿಟ್ಟು ಅವರಿಗೆ ಸಹಾ ಅನ್ವಯಿಸುವಂತೆ ಮಾಡಬೇಕಾಗಿ ನಾನು ಹೇಳುತ್ತೇನೆ.

ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದ್ದಿನಬ್ಬ (ಮಂಗಳೂರು-2).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ವಿದ್ಯಾಮಂತ್ರಿಗಳು ಮಂಡಿಸಿರತಕ್ಕ ಈ ಬೇಡಿಕೆಯನ್ನು ಸ್ವಾಗತಿಸಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಈ ದಿವಸ ನಮ್ಮ ದೇಶದಲ್ಲಿ ನಮ್ಮ ನಾಡಿನಲ್ಲಿ ನಮ್ಮ ಅಭಿವೃದ್ಧಿಯಾಗ ಬೇಕಾದರೆ, ಜನತೆಯು ಅಭಿವೃದ್ಧಿಯಾಗಬೇಕು. ಜನತೆಯು ಅಭಿವೃದ್ಧಿಯಾಗಬೇಕಾದರೆ ಅವರಲ್ಲಿ ವಿದ್ಯಾಭ್ಯಾಸ ಇರಬೇಕು. ಆ ಒಂದು ವಿದ್ಯಾಭ್ಯಾಸ ಬಹಳ ಉತ್ತಮವಾಗಿರಬೇಕು. ಅದು ನಮ್ಮನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಿ ಈ ದೇಶವನ್ನು ಪ್ರಗತಿಪಥದಲ್ಲಿ ಸಾಗಿಸುವ ನೀತಿಗನುಗುಣವಾಗಿ ಇರಬೇಕು. 20 ವರ್ಷಗಳ ಹಿಂದೆ ಮೊದಲು ಬ್ರಿಟಿಷರು ನಮ್ಮನ್ನು ಆಳುವ ಕಾಲದಲ್ಲಿ ಒಂದು ರೀತಿಯ ವಿದ್ಯಾಭ್ಯಾಸ ಇತ್ತು. ಸ್ವಾತಂತ್ರ್ಯ ಬಂದನಂತರ ಈಗಿನ ವಿದ್ಯಾಭ್ಯಾಸ ಸುಧಾರಣೆಯಲ್ಲಿ ಮಾರ್ಪಾಟು ಮಾಡಬೇಕೆಂದು ನಮ್ಮ ಮುಖಂಡರು ಹೇಳುತ್ತಾ ಇದ್ದರು. ಆದರೆ ಅದು ಇನ್ನೂ ಪ್ರಗತಿಪಥದಲ್ಲಿ ಬಂದಿಲ್ಲ. ಅದು ಕೂಡಲೇ ಬರಬೇಕಾಗಿದೆ. ಈ ವಿದ್ಯಾಭ್ಯಾಸ ಸುಧಾರಣೆ ಎಲ್ಲಿ ಮಾರ್ಪಾಟು ಆಗಬೇಕಾಗಿತ್ತೋ ಅಲ್ಲಿ ಮಾರ್ಪಾಟು ಆಗುತ್ತಾ ಇಲ್ಲ. ಆ ಕಾರಣ ದಿಂದ ವಿದ್ಯಾರ್ಥಿಗಳಲ್ಲಿ ಶಿಸ್ತು ಇರಲಿಕ್ಕೆ ಕಷ್ಟವಾಗುತ್ತಿದೆ. ವಿದ್ಯಾಭ್ಯಾಸ ಸುಧಾರಣೆಯಲ್ಲಿ ಶಿಸ್ತು ಬರಬೇಕಾಗಿದೆ. ಇವತ್ತು ವಿದ್ಯಾಭ್ಯಾಸದ ಮಟ್ಟವನ್ನು ತೆಗೆದುಕೊಂಡರೆ ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಹೆಚ್ಚಿನ ಬದಲಾವಣೆ ಮಾಡಬೇಕಾಗಿದೆ. ಪಠ್ಯಪುಸ್ತಕಗಳು ಏಕರೂಪತೆಯಿಂದಿರಬೇಕು. ಇಡೀ ಕರ್ಣಾಟಕಕ್ಕೆ ಒಂದೇ ರೀತಿಯ ಪಠ್ಯಪುಸ್ತಕಗಳನ್ನು ಮಾಡಿದರೆ ಒಳ್ಳೆಯದು. ಪಠ್ಯಪುಸ್ತಕಗಳ ಕಮಿಟಿಯನ್ನು ಮಾಡುವಾಗ ಒಳ್ಳೆಯ ಪ್ರಾಮಾಣಿಕರಾದಂಥ, ಬುದ್ಧಿವಂತರಾದಂಥ ಹೆಚ್ಚಿನ ಅನುಭವಸ್ಥರಾದಂಥ ಜನರನ್ನು ಅಲ್ಲಿಗೆ ಹಾಕಬೇಕು. ಪಠ್ಯಪುಸ್ತಕಗಳ ಜೊತೆಗೆ ಉಪ ಪಠ್ಯ ಪುಸ್ತಕಗಳನ್ನು ಬರೆಸಬೇಕು. ಆ ಪುಸ್ತಕಗಳು ಹೇಗಿರಬೇಕೆಂದರೆ, ಅವು ವಿದ್ಯಾರ್ಥಿಗಳಿಗೆ ದೇಶಪ್ರೇಮ ಉಕ್ಕಿಸುವ, ರಾಷ್ಟ್ರಪ್ರೇಮ ಉಕ್ಕಿಸುವ, ಈ ದೇಶದ ಮೇಲೆ ಪ್ರೀತಿ ಬರತಕ್ಕಂಥ ಪಠ್ಯ ಪುಸ್ತಕಗಳಾಗಿರಬೇಕು. ಅವೇ ಇನ್ನುಮುಂದೆ ಹೆಚ್ಚು ಹೆಚ್ಚು ಬರಬೇಕು. ಇವತ್ತಿನ ಮಕ್ಕಳೇ ನಾಳಿನ ಜನಾಂಗ. ಇವತ್ತಿನ ವಿದ್ಯಾರ್ಥಿಗಳೇ ನಾಳಿನ ಆಡಳಿತಗಾರರು. ಆದ್ದರಿಂದ ವಿದ್ಯಾಭ್ಯಾಸ ಸುಧಾರಣೆ ಈಗ ಪ್ರಗತಿಪಥದಲ್ಲಿ ಮುಂದುವರೆದರೆ ವಿದ್ಯಾರ್ಥಿಗಳಿಗೆ ಎಷ್ಟಾದರೂ ಒಂದು ರೀತಿಯ ವಿಶಾಲಭಾವನೆಯಾಗುತ್ತದೆ. ಅವರು ನಿಜವಾಗಿ ಪ್ರತಿಭಾವಂತರಾಗುತ್ತಾರೆ. ಅವರು ಈ ದೇಶದಲ್ಲಿ ಹೆಚ್ಚಿನ ಗೌರವವನ್ನು ತರಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳಿಗಾಗಿ ಇವತ್ತು ನೈತಿಕ ಮಟ್ಟವನ್ನು ಹೆಚ್ಚಿಸುವ ಲೇಖನಗಳು, ಪುಸ್ತಕಗಳು ಬರೆಯುವಂತಹ ವ್ಯವಸ್ಥೆ ಬಹಳ ಚೆನ್ನಾಗಿ ಆಗಬೇಕಾಗಿದೆ. ಇವತ್ತು ದೇವರ ಮೇಲೆ, ಗುರು ಹಿರಿಯರ ಮೇಲೆ ಭಕ್ತಿ ಬರುವಂಥ ವಿಚಾರಗಳನ್ನು ಶಾಲೆಗಳಲ್ಲಿ ಹೇಳುವುದನ್ನೇ ಬಹಳ ಕಡಿಮೆ ಮಾಡಿದ್ದಾರೆ. ಇದರಿಂದ ಹುಡುಗರಲ್ಲಿ ನೈತಿಕ ಮಟ್ಟ ಬಹಳ ಕಡಿಮೆಯಾಗುತ್ತಿದೆ. ಗುರುಹಿರಿಯರು ಎಂಬ ಭಕ್ತಿಯೇ ಈಗಿನ ವಿದ್ಯಾರ್ಥಿಗಳಲ್ಲಿ ಹೋಗಿದೆ. ಸರಿಯಾದ ಗೌರವವನ್ನೇ ಕೊಡುತ್ತಿಲ್ಲ. ಏಕೆಂದರೆ ಈಗ್ಗೆ ನಾಲ್ಕೈದು ವರ್ಷಗಳಿಂದಲೂ ಎಲ್ಲಿ ನೋಡಿದರೂ ವಿದ್ಯಾರ್ಥಿಗಳ ಮುಷ್ಕರ, ಜಾತಾ ಹೋಗುವುದು, ವಿದ್ಯಾರ್ಥಿ ಗಳು ಪ್ರಿನ್ಸಿಪಾಲರನ್ನು ತಡೆಹಿಡಿಯುವುದು, ಲೆಕ್ಚರರುಗಳನ್ನು ಮತ್ತು ಪ್ರೊಫೆಸರ್‌ಗಳನ್ನು ಕೋಣೆ ಗಳಲ್ಲಿ ಹಾಕಿ ಚಿಲಕ ಹಾಕಿರುವುದನ್ನು ನಾವು ಅನೇಕ ಪತ್ರಿಕೆಗಳಲ್ಲಿ ಓದಿದ್ದೇವೆ. ಅನೇಕ ವಿಚಾರ ಗಳನ್ನು ನಾವು ಕಾಣುತ್ತಿದ್ದೇವೆ. ಇದರಿಂದ ಮಕ್ಕಳಿಗೆ ಸಣ್ಣ ಪ್ರಾಯದಲ್ಲಿ ಒಂದು ಶಿಸ್ತು ಬರಬೇಕು. ನೈತಿಕ ಮಟ್ಟ ಅವರಲ್ಲಿ ಬೆಳೆಯುವಂಥಾದ್ದು ಬಹು ಮುಖ್ಯವಾದುದು. ಗುರು ಹಿರಿಯರಲ್ಲಿ ಭಕ್ತಿ ಬರತಕ್ಕಂಥ, ರಾಷ್ಟ್ರಪ್ರೇಮ ಹಾಗೂ ದೇಶಪ್ರೇಮ ಬರತಕ್ಕಂಥ, ನಾವೆಲ್ಲರೂ ಒಂದೇ ಎಂಬುದಾಗಿ ಹೇಳತಕ್ಕ ಭಾವನೆ ಬರತಕ್ಕಂಥ ನೀತಿಗಳನ್ನು ಭೋಧಿಸುವಂತಹ ವಿದ್ಯಾಭ್ಯಾಸ ಈಗ ಅಗತ್ಯವಾಗಿದೆ. ಮೇಲು-ಕೀಳು ಎಂಬ ಭಾವನೆ ವಿದ್ಯಾರ್ಥಿಗಳಲ್ಲಿ ಬಾರದೇ ಇರುವಂಥ ವಿದ್ಯಾಭ್ಯಾಸ ಈಗ ಬರಬೇಕು. ಎಲ್ಲಿಯವರೆಗೂ ಈ ಭಾವನೆ ನಮ್ಮಲ್ಲಿ ಬರುವುದಿಲ್ಲವೋ ನಿಜವಾಗಿ ಈ ದೇಶ ಪ್ರಗತಿಪಥದಲ್ಲಿ ಹೋಗುವುದಕ್ಕೆ ಕಷ್ಟವಾಗುತ್ತದೆ. ಇಡೀ ಕರ್ಣಾಟಕದಲ್ಲಿ ಒಂದೇ ರೀತಿಯ ಪಠ್ಯ ಪುಸ್ತಕಗಳು ಹಾಗೂ ಉಪ ಪಠ್ಯ ಪುಸ್ತಕಗಳು ಬರುವುದಕ್ಕೆ ವಿದ್ಯಾ ಇಲಾಖೆಯವರು ಹೆಚ್ಚು ಹೆಚ್ಚಾಗಿ ಪರಿಶ್ರಮಪಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಪಂಚಾಂಗ ಯಾವಾಗ ಕೆಟ್ಟದ್ದು ಅನಿಸುತ್ತದೋ ಆಗ ಎಲ್ಲವೂ ಕೆಟ್ಟದ್ದು ಇರುತ್ತದೆ. ಪಂಚಾಂಗ ಇಲ್ಲದ ಕಟ್ಟಡವು ಒಳ್ಳೆಯದು ಇರುವುದಿಲ್ಲ. ಸಿಮೆಂಟ್ ಕಾಂಕ್ರೀಟ್ ಹಾಕಿ ಪಂಚಾಂಗ ಗಟ್ಟಿಮಾಡಬೇಕು. ಸಣ್ಣ ಪ್ರಾಯದಲ್ಲೇ ವಿದ್ಯಾರ್ಥಿಗಳಿಗೆ ಕಾಂಕ್ರೀಟ್ ಸಿಮೆಂಟ್ ಹಾಕಿದಂತಹ ಉತ್ತಮ ವಿದ್ಯಾಭ್ಯಾಸದ ಪಂಚಾಂಗ ಹಾಕಬೇಕು. ನಮ್ಮ ಮಕ್ಕಳ ವಿದ್ಯಾಭ್ಯಾಸ ಬೆಳೆಯಲಿಕ್ಕೆ

(ಶ್ರೀ ಬಿ. ಎಂ. ಇದಿನಬ್ಬ)

ಮತ್ತು ಒಳ್ಳೆಯ ಜನತೆಯಾಗಿ ಬಾಳಲಿಕ್ಕೆ, ನಮ್ಮಲ್ಲಿ ಒಗ್ಗಟ್ಟು ಬರುವುದಕ್ಕೆ ಆಗ ಅವಕಾಶವಾಗುತ್ತದೆ. ಏನೇ ಇರಲಿ, ನಾವೆಲ್ಲರೂ ಭಾರತೀಯರು ಎನ್ನುವ ಭಾವನೆ ಬರಬೇಕು, ಒಗ್ಗಟ್ಟು ಬರಬೇಕು. ಅದು ಸಣ್ಣ ಪ್ರಾಯದಿಂದಲೇ ಬರಬೇಕು. ಹೆಚ್ಚು ಹೆಚ್ಚು ಪುಸ್ತಕಗಳು, ಹೆಚ್ಚು ಹೆಚ್ಚು ಲೇಖನಗಳು ಪ್ರಕಟಣೆಯಾಗಿ ಮಕ್ಕಳಿಗೆ ವಿನಿಯೋಗವಾಗಬೇಕು. ಅದು ಎಲ್ಲಿಯವರೆಗೆ ಆಗುವುದಿಲ್ಲವೋ ಅಲ್ಲಿಯವರೆಗೆ ಪ್ರಯೋಜನವಾಗುವುದಿಲ್ಲ ಎಂದು ಹೇಳಲು ಅಪೇಕ್ಷೆ ಪಡುತ್ತೇನೆ.

ಇನ್ನು ನಮ್ಮ ಕನ್ನಡನಾಡಿನಲ್ಲಿ ಕನ್ನಡ ಆಡಳಿತ ಭಾಷೆ ಮತ್ತು ಕನ್ನಡ ಮಾಧ್ಯಮವಾಗಿ ಬರಬೇಕು. 20 ವರ್ಷದಿಂದಲೂ ಇದು ಆಗಬೇಕು ಎನ್ನುವ ಬೇಡಿಕೆ ಇದ್ದೇ ಇದೆ. ಇವೊತ್ತು ಭಾಷಾವಾರು ಪ್ರಾಂತ ಆದುದ್ದು ಏತಕ್ಕೆಂದರೆ ಭಾಷವಾರು ನೆಲೆಯಲ್ಲಿ ರಾಜ್ಯಕ್ಕೆ ಒಳ್ಳೆಯದಾಗಬೇಕು ಎಂದು. ತಮಿಳುನಾಡು, ಕೇರಳ ಮತ್ತು ಆಂಧ್ರದಲ್ಲಿ ನೋಡಿದರೆ ಅವರವರ ಭಾಷೆಯಲ್ಲೇ ವ್ಯವಹಾರ ಮುಂದುವರಿಸುತ್ತಿದ್ದಾರೆ. ಅವರವರ ಭಾಷೆಯನ್ನು ಮಾಧ್ಯಮ ಮಾಡಿದ್ದಾರೆ. ಎಲ್ಲಾ ಹಂತಗಳಲ್ಲೂ ಮಾತೃಭಾಷೆ ಉಪಯೋಗಿಸಿದ್ದಾರೆ. ಆದರೆ ನಮ್ಮ ಕನ್ನಡ ದೇಶದಲ್ಲಿ ಕನ್ನಡ ಇನ್ನೂ ಬರಲಿಲ್ಲ, ಇನ್ನೂ ತಾಲ್ಲೂಕು ಮಟ್ಟದಲ್ಲಿ ಬರುತ್ತದೆ ಎಂದು ಹೇಳಿದ್ದಾರೆ. ಅದು ಸರಿಯಾದುದಲ್ಲ. ನಮ್ಮ ದೇಶಕ್ಕೆ ಕರ್ನಾಟಕ ಎಂದು ಹೆಸರು ಬರಬೇಕು, ಅದೇ ರೀತಿಯಲ್ಲಿ ಕನ್ನಡವೂ ಬರಬೇಕು. 5,000 ಮೈಲಿ ದೂರ ಇರತಕ್ಕಂಥ ಬ್ರಿಟಿಷರು 200 ವರ್ಷಗಳ ಕಾಲ ಇಲ್ಲಿದ್ದು ಪ್ರತಿಯೊಬ್ಬರ ನರನಾಡಿಗಳಲ್ಲಿ ಅವರ ಭಾಷೆಯನ್ನು ತುಂಬಿಸಿಹೋದರು. ನಮ್ಮ ಕನ್ನಡ ನಾಡಿನಲ್ಲಿ ಪಂಪ, ರನ್ನ, ಚನ್ನ ಲಕ್ಷ್ಮೀಶ, ಕುಮಾರವ್ಯಾಸ ಇಂತಹ ಮಹಾ ಮಹಾ ಕವಿಗಳು ಬಂದು ಹೋಗಿದ್ದಾರೆ. 800 ವರ್ಷಗಳ ಮೊದಲೇ ಬಸವೇಶ್ವರರು ತಮ್ಮ ವಚನಗಳನ್ನು ಅಚ್ಚ ಕನ್ನಡದಲ್ಲೇ ರಚಿಸಿದ್ದಾರೆ. ಅವರು ಕನ್ನಡ ನಾಡಿನಲ್ಲಿ ಹುಟ್ಟಿದರು. ಈ ರೀತಿಯಲ್ಲಿ ಒಂದು ಧಾರ್ಮಿಕ ವಚನಗಳನ್ನು ನಮ್ಮ ಕನ್ನಡ ದೇಶಕ್ಕೆ ಕೊಟ್ಟಿದ್ದಾರೆ. ಹಾಗಾದರೂ ನಮ್ಮ ಕನ್ನಡ ದೇಶಕ್ಕೆ ಕನ್ನಡ ಆಡಳಿತ ಭಾಷೆ ಬರಲಿಲ್ಲ, ಕರ್ನಾಟಕ ಎಂದು ಹೆಸರು ಬರಲಿಲ್ಲ, ಕನ್ನಡ ಎಂದು ಹೇಳತಕ್ಕಂಥ ಕನ್ನಡ ಎಲ್ಲಾ ಹಂತಗಳಲ್ಲೂ ಬರಲಿಲ್ಲ, ಕೋರ್ಟು ಭಾಷೆಯಾಗಿ, ಮತ್ತು ವ್ಯವಹಾರದಲ್ಲಿ ಕನ್ನಡ ಬರಲಿಲ್ಲ. ಇದು ನಾಚಿಕೆಗೇಡಿನ ವಿಷಯ. ಭಾಷಾವಾರು ರಾಜ್ಯ ಆದಮೇಲೆ ಯಾವ ಒಬ್ಬ ಸೆಕ್ರೆಟರಿಯವರೂ ಕನ್ನಡದಲ್ಲಿ ಟಿಪ್ಪಣಿ ಬರೆಯಲಿಲ್ಲ. ಮುಖ್ಯಮಂತ್ರಿಗಳು ಟಿಪ್ಪಣಿಯನ್ನು ಕನ್ನಡದಲ್ಲಿ ಬರೆದರು ಎಂದು ನಾನು ಪತ್ರಿಕೆಯಲ್ಲಿ ಓದಿದೆ. ಒಬ್ಬ ಸೆಕ್ರೆಟರಿಯವರು ಮತ್ತು ಡೆಪ್ಯೂಟಿ ಸೆಕ್ರೆಟರಿಯವರು ಬರೆದಿರಬಹುದು ಎಂದು ನಾನು ಹೇಳುತ್ತೇನೆ. ಆದರೆ ನಾವು ಕನ್ನಡಿಗರು, ಕರ್ನಾಟಕದವರು ಎಂದು ಬರೀ ಬಾಯಿನಲ್ಲಿ ಹೇಳಿದರೆ ಬರುವುದಿಲ್ಲ, ಕಾರ್ಯತಃ ರಚನಾತ್ಮಕವಾಗಿ ಬರಬೇಕು, ಆರೀತಿ ಬರಲಿ ಎಂದು ಅಪೇಕ್ಷೆಪಡುತ್ತೇನೆ.

ಇನ್ನು ಪ್ರಾಥಮಿಕ ಶಾಲೆಯ ಅಧ್ಯಾಪಕರ ವಿಚಾರ. ಹಳೇ ಮದ್ರಾಸ್ ರಾಜ್ಯದಿಂದ ಇಲ್ಲಿಗೆ ಬಂದಿರತಕ್ಕಂಥ ಪ್ರಾಥಮಿಕ ಅಧ್ಯಾಪಕರಿಗೆ ಪೆನ್‌ಷನ್ ವಿಷಯದಲ್ಲಿ ಅನ್ಯಾಯವಾಗಿದೆ. ಆದುದರಿಂದ ಅವರಿಗೆ ಅನ್ಯಾಯವಾಗದ ರೀತಿಯಲ್ಲಿ ಆ ನೌಕರರಿಗೆ ಸಹಾನುಭೂತಿ ತೋರಿಸಿ ಒಳ್ಳೆಯ ರೀತಿಯಲ್ಲಿ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಖಾಸಗಿ ಪ್ರೈಮರಿ ಶಾಲೆಗಳಲ್ಲಿ ನಿಗದಿಯಾದ ತಾರೀಕಿಗೆ ಸಂಬಳ ಸಿಕ್ಕುವುದಿಲ್ಲ ಎಂದು ದೂರು ಕೇಳಿದ್ದೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನವಭಾರತ ಪತ್ರಿಕೆಯಲ್ಲೂ ಈ ವಿಚಾರ ಬಂದಿದೆ. ಅಲ್ಲಿ ಒಬ್ಬ ಉಪಾಧ್ಯಾಯರು ಮತ್ತು ಉಪಾಧ್ಯಾಯರ ಸಂಘದ ಸೆಕ್ರೆಟರಿಗಳು ತಿಂಗಳು ತಿಂಗಳು ಸಂಬಳ ಸರಿಯಾಗಿ ಸಿಕ್ಕುವುದಿಲ್ಲ, ಬಹಳ ಕಷ್ಟ ಆಗುತ್ತಿದೆ, ತಿಂಗಳು ತಿಂಗಳು ಸಂಬಳ ಸಿಕ್ಕದೇ ಹೋದರೆ ನಮ್ಮ ದೊಡ್ಡ ಸಂಸಾರವನ್ನು ಸಾಗಿಸುವುದು ಕಷ್ಟ ಎಂದು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರದವರು ಗಮನ ಕೊಟ್ಟು ಸಕಾಲದಲ್ಲಿ ಸಂಬಳ ಕೊಡುವ ವ್ಯವಸ್ಥೆ ಮಾಡಬೇಕು ಎಂದು ಅಪೇಕ್ಷೆಪಡುತ್ತೇನೆ.

ಇನ್ನು ನಮ್ಮ ವಿದ್ಯಾಭ್ಯಾಸದ ವಿಚಾರ ಹೇಳಬೇಕಾದರೆ ಇದು ಜ್ಞಾನಭಂಡಾರವನ್ನು ಸಂಪಾದನೆ ಮಾಡುವಂಥ ವಿದ್ಯಾಭ್ಯಾಸ ಇರಬೇಕೇ ವಿನಃ ಕಾರಕೂನರನ್ನು ತಯಾರುಮಾಡುವ ವಿದ್ಯಾಭ್ಯಾಸ ಆಗಿರಬಾರದು. ಈ ವಿದ್ಯಾಭ್ಯಾಸ ಹೇಗೆ ಇರಬೇಕು ಎಂದರೆ ಬರೀ ಜ್ಞಾನ ಭಂಡಾರ ತುಂಬಿಸತಕ್ಕಂಥ ವಿದ್ಯಾಭ್ಯಾಸ ಅಲ್ಲದೆ ಅವನಿಗೆ ಅದ್ವಿತೀಯ ದೇಶಭಕ್ತಿ, ಒಂದು ಆದರ್ಶವಾದ ಜೀವನ, ತನ್ನ ಕಾಲಮೇಲೆ ನಿಂತು ಸ್ವಸಾಮರ್ಥದಿಂದ ಜೀವನ ನಡೆಸುವ ಯೋಗ್ಯತೆ ಬರಬೇಕು. ಬರೀ

ಕಾರಕೂನರನ್ನು ತಯಾರುಮಾಡುವಂಥ ವಿದ್ಯಾಭ್ಯಾಸ ಆಗಬಾರದು. ವಿದ್ಯಾಭ್ಯಾಸಕ್ಕಾಗಿ ಕೇಂದ್ರದಲ್ಲೂ, ನಮ್ಮ ರಾಜ್ಯದಲ್ಲೂ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಬಡವರು ಎಲ್ಲರೂ ಬಡವರೇ, ವಿದ್ಯಾಭ್ಯಾಸ ಉಳ್ಳವರು, ಅಕ್ಷರಜ್ಞಾನ ಉಳ್ಳವರು ಈ ಶಿಕ್ಷಣದಿಂದ ಮುಂದೆ ಬಂದಿದ್ದಾರೆ ಮತ್ತು ಈ ಶಿಕ್ಷಣಕ್ಕೆ ಉಚಿತ ವಿದ್ಯಾಭ್ಯಾಸ, ಸ್ಲೇಟುಗಳು, ಪುಸ್ತಕಗಳು ಧರ್ಮಾರ್ಥವಾಗಿ ಮಾಡಿದ್ದಾರೆ. ಈರೀತಿ ಮಾಡಿರುವುದು ಬಹಳ ಸಂತೋಷ. ಇನ್ನು ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲ್‌ಗಳನ್ನು ಅನೇಕ ಸ್ಥಳಗಳಲ್ಲಿ ಒಬ್ಬರ ಕೈಯ್ಯಲ್ಲೇ ಕೊಟ್ಟಿದ್ದಾರೆ. ಆರೀತಿ ಆದರೆ ಅವರು ಕೆಲಸ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಇದನ್ನು ತಾಲ್ಲೂಕು ಬೋರ್ಡುಗಳಿಗೆ ವರ್ಗಾವಣೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಕಲೆ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟ ವಿಚಾರ. ಇದಕ್ಕೆ ಸರ್ಕಾರದವರು ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡಬೇಕು. ಇದಕ್ಕಾಗಿ ಹೆಚ್ಚು ಹಣ ಕೊಟ್ಟು ಕವಿಗಳಿಗೆ ಲೇಖಕರಿಗೆ ಒಳ್ಳೊಳ್ಳೆಯ ಪುಸ್ತಕಗಳನ್ನು ಬರೆಯುವಂತೆ ಪ್ರೋತ್ಸಾಹ ಮಾಡಬೇಕು. ಮೈಸೂರಿನಲ್ಲಿ ಜನಪದ ಸಾಹಿತ್ಯ ಅಕಾಡಮಿ ಸಂಸ್ಥೆ ಎಂದು ಇದೆ. ಇದರಲ್ಲಿ ಕ. ರಾ. ಕೃ. ಅವರ ಸಂಪಾದಿತ ಪುಸ್ತಕಗಳು ಸಂಖ್ಯೆಗಟ್ಟಲೆ ಇವೆ. ಇವರ 2 ಪುಸ್ತಕಗಳನ್ನು ಇಲಾಖೆಯವರು ಲೈಬ್ರರಿಗಳಿಗೆ ತರಿಸಿಕೊಂಡರು. ಆದರೆ ಇವೊತ್ತಿನ ದಿವಸ ಅದು ಆಶ್ಲೀಲ ಅದನ್ನು ಯಾವ ಲೈಬ್ರರಿಗೂ ತರಿಸಕೂಡದು ಎಂದು ಸಂಬಂಧಪಟ್ಟ ಇಲಾಖೆಯಿಂದ ಆರ್ಡರ್ ಕೊಟ್ಟಿದ್ದಾರೆ ಎನ್ನುವ ವರ್ತಮಾನ ಕೇಳಿದೆ. ಅದು ಬಹಳ ಅನ್ಯಾಯ. ಒಂದುವೇಳೆ ಆರೀತಿ ನೀವು ನಿಶ್ಚಯ ಮಾಡಿದ್ದರೆ ಯಾವ 2 ಪುಸ್ತಕಗಳು ಒಳ್ಳೆಯದಾಗಿರಲಿಲ್ಲವೋ ಅದನ್ನು ತೆಗೆಯಬಹುದಾಗಿತ್ತು. 15 ವರ್ಷಗಳಿಂದಲೂ ಹಳ್ಳಿಹಳ್ಳಿಗಳಿಗೆ ಹೋಗಿ ಜನಪದ ಸಾಹಿತ್ಯವನ್ನು ಸಂಗ್ರಹ ಮಾಡುವುದಕ್ಕೆ ಅವರು ಬಹಳ ಕಷ್ಟಪಟ್ಟಿದ್ದಾರೆ. ಅದನ್ನು ನೋಡಿ ನೀವು ಮೆಚ್ಚಬೇಕು. ಅದನ್ನು ಬಿಟ್ಟು ನೀವು ಅಕಾಡಮಿಯ 60-70 ಪುಸ್ತಕಗಳನ್ನು ವಾಪಸ್ಸು ಮಾಡಿ ಯಾವ ಲೈಬ್ರರಿಯಲ್ಲೂ ಅಂಗೀಕರಿಸದೇ ಇರುವ ಹಾಗೆ ಮಾಡಿರುವುದು ಸರಿಯಲ್ಲ. ಇದರಲ್ಲಿ ಯಾವ ಅಶ್ಲೀಲವೂ ಕಾಣುವುದಿಲ್ಲ. ಈ ಜನಪದ ಸಾಹಿತ್ಯ ಬಾಯಿನಿಂದ ಬಾಯಿಗೆ ಬಂದಿರತಕ್ಕ ಸಾಹಿತ್ಯವೇ ಹೊರತು ಹಾಗೆಯೇ ಬಂದಿರತಕ್ಕಂಥ ಜನಪದ ಸಾಹಿತ್ಯದ ರೀತಿಯಲ್ಲಿಲ್ಲ. ರಾಮಾಯಣದ ಕಥೆಗಳನ್ನೂ ಜನಪದ ಸಾಹಿತ್ಯದಲ್ಲಿ ಕಾಣಬಹುದು. ಡಿ. ವಿ. ಜಿ. ಯವರು ಬರೆದಿರತಕ್ಕಂಥ ಅಂತಃಪುರದ ಗೀತೆಗಳಲ್ಲಿ ಬರುವ ಪ್ರತಿಯೊಂದು ಚಿತ್ರಗಳನ್ನೂ ಮತ್ತು ಬೇಲೂರು ಶಿಲಾಬಾಲಿಕೆಯರ ಚಿತ್ರಗಳನ್ನೂ ವಿಮರ್ಶಿಸುವುದಾದರೆ ಅದು ಅಶ್ಲೀಲವಾಗಿ ಕಾಣಬಹುದು. ಇವೆಲ್ಲಾ ನೋಡಿದರೆ ಅಂತಃಪುರದ ಗೀತೆಗಳಲ್ಲಿ ಬರುವ ಚಿತ್ರಗಳೆಲ್ಲಾ ಅಶ್ಲೀಲವಾಗಿ ಕಾಣಬಹುದು ಆದರೆ ಅದನ್ನು ಆಶ್ಲೀಲ ಎಂದು ಹೇಳುವುದಕ್ಕೆ ಬರುವುದಿಲ್ಲ. ಅದೇ ರೀತಿಯಲ್ಲಿ ಶರಶ್ಚಂದ್ರರ ದೇವದಾಸ್ ಎನ್ನುವ ಪುಸ್ತಕದಲ್ಲಿ 64ನೇ ಪುಟದಲ್ಲಿ ಬೇಕಾದಷ್ಟು ವಿವರಣೆ ಇವೆ ಮತ್ತು ಉದಯರವಿ ಎನ್ನುವ ಪುಸ್ತಕದಲ್ಲಿ 61ನೇ ಪುಟದಲ್ಲಿ ತೈಲಪರಾಜನ ಸೌಂದರ್ಯ ಅಶ್ಲೀಲವಾಗಿ ಕಾಣಬಹುದು. ನಾನು ಹೇಳತಕ್ಕ ಸಾಹಿತ್ಯದಲ್ಲಿ ಈ ಮೂರು ಪುಸ್ತಕಗಳು ಒಳ್ಳೆಯದಲ್ಲ ಎಂದು ಹೇಳಬಹುದೇ ? ಅದಕ್ಕೆ ನೀವು ಪ್ರೋತ್ಸಾಹ ಕೊಟ್ಟಿದ್ದೀರಿ. ಆದರೆ ಜನಪದ ಸಾಹಿತ್ಯದ ಅಕಾಡಮಿಯ 2 ಪುಸ್ತಕಗಳನ್ನು ನೋಡಿದ್ದೇನೆ. ಅದರಲ್ಲಿರುವ ಚಿತ್ರಗಳನ್ನೂ ನೋಡಿದ್ದೇನ. ಅದು ಒಳ್ಳೆಯದಲ್ಲ ಎಂದರೆ ಆ 2 ಪುಸ್ತಕಗಳನ್ನು ತೆಗೆದುಬಿಡಿ ಆದರೆ ಇಡೀ ಸಂಸ್ಥೆಗೆ ಅನ್ಯಾಯ ಮಾಡಬಾರದು ಕರ್ನಾಟಕದಲ್ಲಿ ಇಂತಹ ಮುದ್ರಿತ ಮತ್ತು ವಿದ್ಯಾಮಾನಗಳು ಇರುವವರಿಗೆ ನೀವು ಪ್ರಶಂಸೆ ಮಾಡದಿದ್ದರೆ ಹೇಗೆ? ಇದನ್ನು ಪುನಃ ಪರಿಶೀಲನೆ ಮಾಡಿ ನ್ಯಾಯ ಒದಗಿಸಬೇಕು ಎಂದು ಹೇಳುತ್ತೇನೆ. ಈ ಜನಪದ ಸಾಹಿತ್ಯ ಯಾರಿಗೂ ಬರುವುದಿಲ್ಲ. ಅದನ್ನು ಕಾಪಾಡುವುದು ಬಹಳ ಕಷ್ಟ ಮತ್ತು ಕ. ರಾ. ಕೃ. ಬಹಳ ಕಷ್ಟಪಟ್ಟು ಬಾಯಿಂದ ಬಾಯಿಗೆ ಬರತಕ್ಕ ಸಾಹಿತ್ಯವನ್ನು ಸಂಗ್ರಹ ಮಾಡಿದ್ದಾರೆ. ಅದುದರಿಂದ ಇದನ್ನು ಉಳಿಸಬೇಕು ಮತ್ತು ಬೆಳೆಸಬೇಕು. ಈ ಕಲೆಯನ್ನು ಯಾರು ಯಾರು ಸಂಗ್ರಹ ಮಾಡಿದರೋ ಅದೇ ನಮ್ಮ ಸಂಪತ್ತು, ಜನಪದ ಸಾಹಿತ್ಯ ಹೇಳುವವರು ಸತ್ತು ಹೋದರೆ ಇದನ್ನು ಹೇಳತಕ್ಕಂಥವರು ಯಾರೂ ಇಲ್ಲ. ಆದ್ದರಿಂದ ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ. ಅದೇರೀತಿಯಲ್ಲಿ ಶಿಕ್ಷಣ ಇಲಾಖೆಯಲ್ಲಿ ಇನ್ನು ಹೆಚ್ಚು ಹೆಚ್ಚು ನೈತಿಕಮಟ್ಟದ ದೇಶಪ್ರೇಮದ ಮತ್ತು ರಾಷ್ಟ್ರಪ್ರೇಮದ ಪಠ್ಯಪುಸ್ತಕಗಳು ಬರುವಹಾಗೆ ಮಾಡಬೇಕು. ಒಂದು ಪಠ್ಯಪುಸ್ತಕದ ಕಮಿಟಿಮಾಡಬೇಕು ಅದರಲ್ಲಿ ಪ್ರಾಮಾಣಿಕರೂ, ಬುದ್ಧಿವಂತರೂ, ಪ್ರೌಢಭಾಷೆ ತಿಳಿದವರೂ, ಕವಿಗಳೂ ಮತ್ತು ಸಾಹಿತಿಗಳೂ ಇರತಕ್ಕಂಥವರು ಇರಬೇಕು. ಸ್ಕೂಲ್ ಬೋರ್ಡ್‌ನಲ್ಲಿ ಭ್ರಷ್ಟಾಚಾರ ಮಾಡತಕ್ಕವರು ಆಗಲಿ ಅಥವಾ ಲಂಚಕ್ಕೆ ಪ್ರೋತ್ಸಾಹಕೊಡತಕ್ಕಂಥವರನ್ನು ನೇಮಕ ಮಾಡಿದರೆ ಲೂಟಿಮಾಡುತ್ತಾರೆ. ಇಷ್ಟು ಹೇಳಿನನಗೆ ಮಾತನಾಡಲು ಹೆಚ್ಚು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11-30 A.M.

†ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತ ನಾಲ್ಕಾರು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಾನು ಮೊಟ್ಟಮೊದಲನೆಯದಾಗಿ ಈ ವಿದ್ಯಾ ಇಲಾಖೆಯ ಮೇಲೆ ಕೆಲವು ಗುರುತರವಾದ ಆಪಾದನೆಗಳನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಆ ಆಪಾದನೆಗಳ ಒಂದು ಪಟ್ಟಿಯನ್ನೂ ಕೂಡ ನಾನು ತಯಾರಿಸಿಕೊಂಡು ತಂದಿದ್ದೇನೆ. ನಾನು ಮೊದಲನೆಯದಾಗಿ ಮಾಡಬೇಕೆಂದಿರುವ ಆಪಾದನೆಯೇನಿದೆ ಅದನ್ನಾಗಲೇ ನಮ್ಮ ಮೇಲ್ಮನೆಯಲ್ಲಿ ಕೆಲವು ಸದಸ್ಯರು ಎತ್ತಿದ್ದಾರೆ. ಅದು ಈ ದಿವಸ ನಮ್ಮ ಪಠ್ಯ ಪುಸ್ತಕಗಳಲ್ಲಿರತಕ್ಕ ಕೆಲವು ಶ್ಲೀಲ-ಅಶ್ಲೀಲ ಶಬ್ದಗಳ ವಿಚಾರದಲ್ಲಿ ಕೆಲವು ಮಾತುಗಳನ್ನು ಮಾನ್ಯ ಇಟನಬ್ಬ ಅವರೂ ಸಹಾ ಹೇಳಿದ್ದಾರೆ. ಆದರೆ ಈ ವಿಚಾರ ಬಹಳ ಜಟಿಲ ವಾದುದು. ಇವರಲ್ಲಿ ಯಾವುದು ಶ್ಲೀಲ ಯಾವುದು ಅಶ್ಲೀಲ ಎಂಬುದನ್ನು ತೀರ್ಮಾನ ಮಾಡತಕ್ಕದ್ದು ಬಹಳ ಕ್ಲಿಷ್ಟಕರವಾದ ವಿಷಯ. ಇದೇ ವಿಚಾರದಲ್ಲಿ ನಮ್ಮ ಮೇಲ್ಮನೆಯಲ್ಲಿ ಕೆಲವು ಶಾಲಾ ಪುಸ್ತಕ ಗಳಲ್ಲಿ ಅಶ್ಲೀಲ ಚಿತ್ರಗಳೂ ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಕೆಲವು ಅಶ್ಲೀಲ ವಾಕ್ಯಗಳೂ ಇರುತ್ತವೆಂದೂ ಆ ಕಾರಣದಿಂದ ಮೇಲ್ಮನೆಯಲ್ಲಿ ಮೂಡಿಬಂದ ಆ ಚರ್ಚೆಯ ಸಂಬಂಧದಲ್ಲಿ ನಮ್ಮ ಸರ್ಕಾರದವರ ನಿಲುವೇನಿತ್ತು ಎನ್ನುವುದು ನಮಗೀಗಾಗಲೇ ತಿಳಿದುಬಂದಿದೆ. ನಮ್ಮ ಮೈಸೂರು ಜನಪದ ಸಾಹಿತ್ಯ ಅಕ್ಯಾಡಮಿಯವರು ಕಳೆದ 8-10 ವರ್ಷಗಳಿಂದ ನಮ್ಮ ಕನ್ನಡ ನಾಡಿನಲ್ಲಿ ಇರತಕ್ಕದ್ದನ್ನೆಲ್ಲಾ ಕ್ರೋಢೀಕರಿಸಿ ಅದನ್ನು ಒಂದು ಪ್ರಕಟಣೆಯ ರೂಪದಲ್ಲಿ ಹೊರಡಿಸುವುದಕ್ಕೆ ಅವರು ಶ್ರಮಿಸಿರುವುದಷ್ಟೇ ಅಲ್ಲ, ಅದರಲ್ಲಿ ನಮ್ಮ ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟ ಅನೇಕ ಕವನಗಳನ್ನೂ ಸಹಾ ಅವರು ಶೇಖರಿಸಿ ಪ್ರಕಾಶನ ಮಾಡುವುದಕ್ಕಾಗಿ 8-10 ವರ್ಷಗಳಿಂದ ಅವಿಶ್ರಾಂತವಾಗಿ ಶ್ರಮಿಸಿದ್ದಾರೆ. ಇಂಥ ಒಂದು ಮಹತ್ಕಾರ್ಯವನ್ನು ಆ ಕರಾಕ್ಯ ಅವರು ಸಾಧಿಸಿ ನಮ್ಮ ಕನ್ನಡ ಸಾಹಿತ್ಯಕ್ಕೆ ಒಂದು ಅಮೋಘವಾದ ಸೇವೆಯನ್ನು ನಡೆಸಿಕೊಂಡು ಬಂದಿದ್ದಾರೆ. ಇಂಥಾ ಒಂದು ಜನಪದ ಸಾಹಿತ್ಯದಲ್ಲಿ ಹಾಗೂ ನಮ್ಮ ಕನ್ನಡ ಸಾಹಿತ್ಯದಲ್ಲಿ ಕೆಲವು ಅಶ್ಲೀಲ ಶಬ್ದಗಳೂ ಮತ್ತು ಇವುಗಳಿಗೆ ಸಂಬಂಧಪಟ್ಟಂತೆ ಕೆಲವು ವಾಕ್ಯಗಳೂ ಇರುವುದರಿಂದ ಈ ಪುಸ್ತಕಗಳನ್ನೆಲ್ಲಾ ಸಂಬಂಧಪಟ್ಟ ಇಲಾಖೆಯವರೇನಿದ್ದಾರೆ ಅವರಿಗೆ ನೀವು ಈ ಪುಸ್ತಕಗಳನ್ನು ಪ್ರಕಟಣೆ ಮಾಡಬಾರದೆಂದು ನಮ್ಮ ಮೈಸೂರು ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಈ ಪುಸ್ತಕಗಳನ್ನು ನಮ್ಮ ರಾಜ್ಯದ ಯಾವ ಶಾಲಾಕಾಲೇಜುಗಳಲ್ಲೂ ಪಠ್ಯಪುಸ್ತಕವನ್ನಾಗಿ ಇಡಬಾರದೆಂದು ಆಜ್ಞೆ ಮಾಡಿದ್ದಾರೆ. ಆದರೆ ಹಾಗೆ ಆಜ್ಞೆ ಹೊರಡಿಸಿರುವುದು ನನ್ನ ದೃಷ್ಟಿಯಲ್ಲಿ ಸಾಧುವಾದ್ದೆಂದು ನಾನು ಹೇಳಲಾರೆ. ಆದರೆ ಇಲ್ಲಿ ಯವರೆಗೂ ನಾವಿನ್ನೂ ಖಚಿತವಾಗಿ ಯಾವುದು ಶ್ಲೀಲ ಯಾವುದು ಯಾವುದು ಅಶ್ಲೀಲ ಎನ್ನುವುದಿನ್ನೂ ತೀರ್ಮಾನವಾಗಿಲ್ಲ. ಹಾಗೆ ಅದರಲ್ಲಿ ಯಾವುದು ಶ್ಲೀಲ ಯಾವುದು ಅಶ್ಲೀಲ ಎಂಬದನ್ನು ತೀರ್ಮಾನ ಮಾಡುವುದು ಅಷ್ಟು ಸುಲಭದ ಕೆಲಸವೂ ಅಲ್ಲ. ಇಲ್ಲಿ ಬಹಳ ಆಳವಾಗಿ ಆಲೋಚನೆ ಮಾಡುವುದಕ್ಕೆ ಅವಕಾಶವಿದೆ, ಶ್ರೀಮಾನ್ ಡಿ. ವಿ. ಗುಂಡಪ್ಪನವರ ಅಂತಃಪುರ ಗೀತೆಗಳಲ್ಲಿ, ಮತ್ತು ಶರತ್ ಚಂದ್ರ ಬೋಸರೂ ದೇವದಾಸ್ ಎಂಬ ಪುಸ್ತಕಗಳಲ್ಲಿ ಅನ್ಯತ ಅಶ್ಲೀಲ ಶಬ್ದಗಳನ್ನು ಬಳಸಲೇಬೇಕಾಗುತ್ತದೆಂದು ಹೇಳಿದ್ದಾರೆ. ಹಾಗೇ ಪುಟ್ಟಸ್ವಾಮಯ್ಯನವರ "ಉದಯರವಿ" ಯಲ್ಲೂ ಬರುತ್ತೆ. ಅಂಥ ನಿದರ್ಶನಗಳು ನಮ್ಮಲ್ಲಿರತಕ್ಕ ಅನೇಕ ಪಠ್ಯ ಪುಸ್ತಕಗಳಲ್ಲಿ ಇವೆ. ಆ ಮಾತು ಹಾಗಿರಲಿ—ಈ ದಿವಸ ನಮ್ಮ ಮೈಸೂರು ರಾಜ್ಯದಲ್ಲಿ ಅಷ್ಟೇಕೆ ನಮ್ಮ ಇಡೀ ಇಂಡಿಯಾ ದೇಶವನ್ನೇ ತೆಗೆದುಕೊಂಡರೂ ನಾವು ಎಲ್ಲ ಯಾವುದೇ ಒಂದು ಕೆತ್ತನೆ ಕೆಲಸವನ್ನು ಬಹಳ ಭವ ವಾದುದು ಎಂದು ಹೇಳುತ್ತೇವೋ ಅದೂ ಅಶ್ಲೀಲವೇ, ನಮ್ಮ ಗೋಮಟೇಶ್ವರನ ವಿಗ್ರಹವೂ ಅಶ್ಲೀಲವೇ. ಇನ್ನು ನಮ್ಮಲ್ಲಿರತಕ್ಕ ಅನೇಕ ಶಿಲಾ ಬಾಲಿಕೀ ಚಿತ್ರಗಳಿವೆ. ಅವೆಲ್ಲಾ ನಗ್ನ ಚಿತ್ರಗಳೇ. ಆದುದರಿಂದ ಅವೂ ಅಶ್ಲೀಲವೇ. ಇಂಥ ಅಶ್ಲೀಲವಾದ ಅನೇಕ ನಗ್ನ ಚಿತ್ರಗಳು ನಮ್ಮ ಬೇಲೂರು ಹಳೇಬೀಡುಗಳಲ್ಲಿ ಕಂಬ ಕಂಬ ಗೋಡೆಗಳ ಮೇಲೆಲ್ಲಾ ಇವೆ. ಅವುಗಳನ್ನೆಲ್ಲಾ ಈ ದಿವಸ ನಾವು ಅಶ್ಲೀಲವೆಂದು ಕರೆಯುವುದಾದರೆ ಆ ಬೇಲೂರಿನಲ್ಲಿರತಕ್ಕ ಶಿಲಾಬಾಲಿಕಿಯರ ನಗ್ನ ಚಿತ್ರಗಳನ್ನು ಸರ್ಕಾರದವರು ಕೂಡಲೆ ಮುಚ್ಚಿಸಬೇಕಾಗುತ್ತದೆ. ಹಾಗೆ ಮುಚ್ಚಿಸತಕ್ಕಂಥ ಜಾಗಗಳನ್ನು ಸರ್ಕಾರದವರೇಕೆ ಈ ದಿವಸ ಅವುಗಳನ್ನು ಒಂದು ಪ್ರವಾಸಿ ಕೇಂದ್ರಗಳನ್ನಾಗಿ ಮಾಡಿದ್ದಾರೆ? ಹಾಗೆ ಅವುಗಳನ್ನು ಅಶ್ಲೀಲ ಎಂದು ಭಾವಿಸಿದ್ದರೆ ಆ ಸ್ಥಳಗಳನ್ನು ಪ್ರವಾಸಿ ಮಂದಿರಗಳಾಗಿ ಮಾಡುವುದಕ್ಕೆ ಅವಕಾಶವಿರಲಿಲ್ಲ. ಹಾಗೆ ಅವೆಲ್ಲಾ ಅಶ್ಲೀಲ ಎಂದು ಸರ್ಕಾರದವರು ಭಾವಿಸುವುದಾದರೆ ಅವುಗಳನ್ನು ಕೂಡಲೆ ಮುಚ್ಚಬೇಕೆಂದು ನಾನು ಹೇಳುತ್ತೇನೆ. ನಮ್ಮ ಸರ್ಕಾರದವರು ಗೋಮಟೇಶ್ವರನ ಮಸ್ತಕಾಭಿಷೇಕಕ್ಕೆ ಏಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದರು ?

ಇದನ್ನು ನೋಡಿದರೆ ಆ ಗೋಮತೇಶ್ವರನ ವಿಗ್ರಹ ನಗ್ನ ಚಿತ್ರವಾಗಿದ್ದರೂ ಅಶ್ಲೀಲ ಆಗಲಿಲ್ಲ ಎಂದು ಅರ್ಥವಾಗುತ್ತದೆ. ಇಂಥ ನಗ್ನ ಚಿತ್ರಗಳು ಅನೇಕಾನೇಕ ನಮ್ಮ ನಿಮ್ಮ ಎಲ್ಲರ ಕಣ್ಣುಮುಂದೆಯೂ ಇರುವಾಗ ಇನ್ನು ಆ ಯಾವುದೋ ಒಂದು ಕೆಲವು ಪುಸ್ತಕಗಳಲ್ಲಿ ಅದೂ ಯಾವುದೋ ಒಂದು ಪಾಠದಲ್ಲಿ ರಮಾದೇವಿ ಅನ್ನತಕ್ಕವಳು ನೀರನ್ನು ಸೇದಿಕೊಂಡು ತನ್ನ ಕಂಕುಳಿನಲ್ಲಿ ಆ ನೀರಿನ ಬಿಂದಿಗೆಯನ್ನು ಇಟ್ಟುಕೊಂಡು ಬರುತ್ತಿದ್ದಾಗ ಆಕೆಯ ಶರೀರದ ಸಂದಿಯಲ್ಲಿ ಏನೋ ಕಾಣಿಸಿತು ಎಂದು ಬರೆದಿರುವುದನ್ನು ಅಶ್ಲೀಲ ಬರವಣಿಗೆ ಅನ್ನುವುದಾದರೆ ಇನ್ನು ಈ ದಿವಸ ನಮ್ಮ ಲೈಬ್ರರಿಗಳಲ್ಲಿ ಅನೇಕ ಪುಸ್ತಕಗಳಿವೆ, ಕಾಮಕಲಾ ಶಾಸ್ತ್ರವಿದೆ. ಅಂಥಾ ಪುಸ್ತಕಗಳ ಗತಿಯೇನಾಗಬೇಕು. ಹೀಗೆ ನಮ್ಮ ಅನೇಕ ಪುಸ್ತಕಗಳಲ್ಲಿ ಇಂಥ ಲೈಂಗಿಕಕ್ಕೆ ಸಂಬಂಧಪಟ್ಟ ವಿಚಾರಗಳು ಅನೇಕವಿವೆ. ಇಂಥ ವಿಚಾರಗಳಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಒಂದು ಒಳ್ಳೆಯ ತಿಳುವಳಿಕೆಯನ್ನು ಕೊಡತಕ್ಕದ್ದು ಒಳ್ಳೆಯದೆಂದು ನಾನು ಹೇಳುತ್ತೇನೆ. ಕಾಮುಕಲೆಯು ನಮ್ಮ ಜೀವನದಲ್ಲಿ ಒಂದು ಭಾಗ. ಅದನ್ನು ಅಶ್ಲೀಲ ಎಂದು ಯಾರೂ ಕರೆಯಬಾರದು, ಇಲ್ಲಿಯತನಕ ಅದನ್ನು ಹಾಗೆ ಅಶ್ಲೀಲ ಎಂದು ಯಾರೂ ಕರೆದಿಲ್ಲ. ಆದರೆ ನಾವೀ ದಿವಸ ಈ ಶಾಸನ ಸಭೆಯಲ್ಲಿ ಕುಳಿತು ಯಾವುದು ಶೀಲ ಯಾವುದು ಅಶ್ಲೀಲ ಎಂಬುದನ್ನು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಅದು ಈ ಸಭೆಗೆ ಸಂಬಂಧಪಟ್ಟ ಕೆಲಸವೂ ಅಲ್ಲ. ಇನ್ನೇನು ಅನೇಕರು ಆ ಪುಸ್ತಕಗಳನ್ನು ಕೊಳ್ಳಬೇಕು ಅನ್ನುವುದರಲ್ಲಿದ್ದಾಗ ಸರ್ಕಾರದವರು ಇಂಥ ಒಂದು ಆಜ್ಞೆಯನ್ನು ಹೊರಡಿಸಿದ್ದರಿಂದ ಆ ಪುಸ್ತಕಗಳ ಮಾರಾಟಕ್ಕೆ ಒಂದು ಅಡಚಣೆ ಉಂಟಾಯಿತು. ಆದರೆ ಸರ್ಕಾರದವರು ಕನ್ನಡ ನುಡಿಗೆ ಇಂಥಾ ಅನ್ಯಾಯವನ್ನು ಎಂದೂ ಮಾಡಬಾರದು. ಹಾಗೆ ಬೇಕಾಗಿದ್ದರೆ ಈ ಬಗ್ಗೆ ಸರ್ಕಾರ ಒಂದು ಪರಿಣತರ ಸಮಿತಿಯನ್ನು ನೇಮಕ ಮಾಡಲಿ. ಅವರು ಅದನ್ನು ತೀರ್ಮಾನ ಮಾಡುತ್ತಾರೆ. ಆದರೆ ಮೇಲ್ಮನೆಯಲ್ಲಿ ಇದೇ ಪಠ್ಯ ಪುಸ್ತಕಗಳ ವಿಚಾರ ಚರ್ಚೆಗೆ ಬಂದಿದ್ದಾಗ ಅಲ್ಲಿ ಕೆಲವರು ಚರ್ಚೆ ಮಾಡಿದ್ದರಲ್ಲಿ, ಅದರಲ್ಲೂ ನಮ್ಮ ಮೈಸೂರು ರಾಜ್ಯದಲ್ಲಿ ನಮ್ಮ ಸರ್ಕಾರ ಜಿಲ್ಲೆಗೊಂದೊಂದು ರೀತಿಯ ಪಠ್ಯ ಪುಸ್ತಕಗಳನ್ನು ಇಟ್ಟಿರುವುದರಿಂದ ಈ ಪುಸ್ತಕಗಳನ್ನು ಪಠ್ಯ ಪುಸ್ತಕವಾಗಿ ಮಾಡಬೇಕೆಂದು ಹೇಳುತ್ತಿದ್ದಾಗ...

ಶ್ರೀ ಕೆ. ವಿ. ಶಂಕರಗೌಡ.—ಆ ಪುಸ್ತಕಗಳನ್ನು ಎಲ್ಲಿಯೂ ಪಠ್ಯ ಪುಸ್ತಕವನ್ನಾಗಿಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಬಹಳ ಸಂತೋಷ. ಕೆಲವು ಟೆಕ್ಸ್ಟ್ ಬುಕ್ ಕಮಿಟಿಗಳೆಂದೇನು ಮಾಡಿದ್ದಾರೆ ಅವರೂ ಮತ್ತು ಪುಸ್ತಕಗಳನ್ನು ಬರೆಯತಕ್ಕವರು ಈ ಇಬ್ಬರೂ ಒಂದಾಗಿರತಕ್ಕ ನಿದರ್ಶನಗಳು ಅನೇಕ ಕಂಡುಬಂದಿವೆ. ಹೀಗಾಗಿ ಕೆಲವು ಸಂದರ್ಭಗಳಲ್ಲಿ ಕೆಟ್ಟ ಪುಸ್ತಕಗಳನ್ನೂ ಕೂಡ ಪಠ್ಯ ಪುಸ್ತಕಗಳನ್ನಾಗಿ ಇಡುವುದಕ್ಕೆ ಅವಕಾಶವಾಗಿದೆ. ಅದನ್ನು ಪತ್ತೆ ಮಾಡಿದ ನಂತರ ಬದಲಾಯಿಸಿದಂಥ ನಿದರ್ಶನಗಳೂ ಇವೆ. ಆದರೆ ಕನ್ನಡ ಜನಪದ ಸಾಹಿತ್ಯದಲ್ಲಿ ಏನೋ ಅಸಾಧಾರಣವಾದ ಅಚಾತುರ್ಯವಾಗಿದೆ ಅನ್ನುವ ಹಾಗೆ ಇಡೀ ಸಾಹಿತ್ಯವನ್ನೇ ಮುಟ್ಟುಗೋಲು ಮಾಡುವುದು ಸರಿಯಲ್ಲ.

ಇನ್ನು ನಾನೀಗ ನೇರವಾಗಿ ವಿದ್ಯಾ ಇಲಾಖೆಯ ಬಗ್ಗೆ ಅಪಾದನೆಗಳನ್ನು ಮಾಡುವುದಕ್ಕೆ ಬರುತ್ತೇನೆ. ಇದರ ಬಗ್ಗೆ ನನ್ನ ಮೊದಲನೆಯ ದೊಡ್ಡ ಒಂದು ಅಪಾದನೆಯೆಂದರೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಫೈಲಾಗುತ್ತಿರುವುದಕ್ಕೆ ಕಾರಣರು ಯಾರು ಎಂಬುದನ್ನು ವಿಮರ್ಶೆ ಮಾಡುತ್ತಾ ನೋಡುವುದಾದರೆ ಇದರಲ್ಲಿ ತಪ್ಪು ವಿದ್ಯಾರ್ಥಿಗಳದೂ ಅಲ್ಲ—ಅತ್ತ ಅಧ್ಯಾಪಕರುಗಳದೂ ಅಲ್ಲ. ಈ ತಪ್ಪು ಯಾರಮೇಲಿದೆ ಎಂದರೆ ನಾನು ಅದು ಸರ್ಕಾರದವರ ತಪ್ಪು ಎಂದು ದೃಢಪಡಿಸುವುದಕ್ಕೆ ಸಾಕಷ್ಟು ಸಾಹಿತ್ಯವನ್ನು ತಂದಿದ್ದೇನೆ. ಈ ಪಠ್ಯ ಪುಸ್ತಕಗಳಲ್ಲಿರತಕ್ಕ ದೋಷಗಳೇನು ಎಂಬುದನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ಹಾಗೆ 5ನೆಯ ಸ್ಟ್ಯಾಂಡರ್ಡಿಗೆ ಇಟ್ಟಿರತಕ್ಕ ಪಠ್ಯ ಪುಸ್ತಕದಲ್ಲಿ ಪಾಠ 7ರಲ್ಲಿ ಪುಟ 20 ರಲ್ಲಿ 3ನೆಯ ಸಾಲಿನಲ್ಲಿ ಒಂದು ಪುಸ್ತಕದಲ್ಲಿ ಇಂಗ್ಲೀಷಿನಲ್ಲಿ ಹೀಗಿದೆ :—

"The teacher is coming to our class from his room"

ಅದೇ ಪಠ್ಯ ಪುಸ್ತಕದಲ್ಲಿ ಅದೇ ಪಾಠದಲ್ಲಿ ಅದೇ ಪುಟದಲ್ಲಿ ಇನ್ನೊಂದು ಪುಸ್ತಕದಲ್ಲಿ ಆ ವಾಕ್ಯಕ್ಕೆ ಬದಲಾಗಿ ಇಲ್ಲಿ ಹೀಗೆ ಹೇಳಿವೆ :—

"Our teacher is not coming to their class from his room".

ಈ ಎರಡು ಪುಸ್ತಕಗಳನ್ನೂ ಸರ್ಕಾರದವರೇ ಅಚ್ಚು ಹಾಕಿಸಿದ್ದಾರೆ. ಒಂದೇ ತರಗತಿಗೆ ಇವನ್ನು ಪಠ್ಯ ಪುಸ್ತಕವನ್ನಾಗಿ ಇಟ್ಟಿದ್ದಾರೆ. ಆದರೆ ಒಂದೊಂದು ಪುಸ್ತಕದಲ್ಲೂ ಒಂದೊಂದು ರೀತಿ ಇದೆ

(ಶ್ರೀ ಕೆ. ವಿ. ಶಂಕರಗೌಡ)

ಹಾಗೆ ಮತ್ತೆ ಲೆಸನ್ 10 ರಲ್ಲಿ :—27ನೇ ಪುಟದಲ್ಲಿ 4ನೆಯ ಲೈನಿನಲ್ಲಿ:—ಒಂದು ಪುಸ್ತಕದಲ್ಲಿ ಹೀಗಿದೆ :—

"Are there two windows and one door" ?

ಇನ್ನೊಂದು ಪುಸ್ತಕದಲ್ಲಿ ಅದೇ ತರಗತಿಗೆ ಇಟ್ಟಿರುವ ಪುಸ್ತಕದಲ್ಲಿ ಹೀಗಿದೆ :—

' Are there two windows and one door in this picture" ?

Lesson 9, page 29 :—In one book it is "Is the teacher standing" and in another book it is printed as "Is the boy standing in his class ?"

Page 27, line 3 :—In one book it is printed as : "The book is in your hand" and in another book it is printed as "It is in your hand."

Page 26, line 2 :—"In the first book it is "yes the boy is standing in his class". In the other book it is printed as "yes, the teacher is standing".

Lesson 13, page 36, line 12 :—"Radha is taking the fruits from the bag". In the other book it is : "Radha is taking the mangoes from the bag".

Lesson 15, page 43, line 11 :—In the first book it is : "Ashok's table is big". In the second book it is : "Ashok's table is". In the same page in one book it is : "Saroja's table is small". In the other book it is "Saroja's table is".

Page 44, line 10 :—In one book it is "yes, it is eating a lot of rice" In the other book it is " yes, it is eating much rice."

Lesson 18, page 51, line 12 :—In one book it is : "We have in all five books with us". In the other book it is : "We have five books with us."

Page 52, line 5, 1st book.—" There are five books on the table 2nd book "Five books are there on the table."

Lesson 19, page 24, line 10 :—In the first book "We are in school today" In the other book "We are at school today".

ಹೀಗೆಲ್ಲಾ ತಪ್ಪು ಪ್ರಿಂಟ್ ಮಾಡಿದ್ದಾರೆ. ಈಗ ಪರೀಕ್ಷೆಯಲ್ಲಿ ವಿದ್ಯಾರ್ಥಿ We are in school. ಎಂದು ಬರೆದಿದ್ದರೆ "in" ತಪ್ಪು ಅದು "at" ಎಂದು ಬರೆಯಬೇಕಾಗಿತ್ತು ಎಂದು ಉಪಾಧ್ಯಾಯರು ಹೇಳುತ್ತಾರೆ. ಪುಸ್ತಕದಲ್ಲಿ ನೋಡಿದರೆ ಈ ರೀತಿ ಪ್ರಿಂಟಾಗಿದೆ. ಹೀಗಿರುವಾಗ ಅಲ್ಲಿ ವಿದ್ಯಾರ್ಥಿ "in" ಎಂದು ಬರೆಯಬೇಕೇ, ಅಥವಾ "at" ಎಂದು ಬರೆಯಬೇಕೇ, ಯಾವುದು ಬರೆಯಬೇಕು ? ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ಹಾಗೆ V ಸ್ಟ್ಯಾಂಡರ್ಡ್‌ಗೆ ಇಟ್ಟಿರತಕ್ಕ ಇಂಗ್ಲೀಷ್ ಪುಸ್ತಕಗಳು ಇವು, ಇವರಲ್ಲಿರತಕ್ಕ ತಪ್ಪುಗಳನ್ನು ಈ ಮಾನ್ಯ ಸಭೆ ಮುಂದೆ ಹಾಗೂ ಸರ್ಕಾರದ ಮುಂದೆ ನಾನು ಇಟ್ಟಿದ್ದೇನೆ. ನಿಮ್ಮ ಪುಸ್ತಕಗಳು ಸರಿಯಾಗಿದ್ದರೆ, ಮೇಸ್ಟ್ರು ಚೆನ್ನಾಗಿ ಪಾಠವನ್ನು ಹೇಳುತ್ತಾರೆ. ಹುಡುಗರದು ತಪ್ಪು ಎಂದು ಹೇಳಬಹುದಾಗಿತ್ತು. ಈಗ ಇದರಲ್ಲಿ ಶಿವಮೊಗ್ಗಾ ಜಿಲ್ಲೆಯ ಹುಡುಗರಿಗೆ ಅನ್ಯಾಯ ಮಾಡಿದ್ದಾರೆ. ಆದ್ದರಿಂದ ಶಿವಮೊಗ್ಗಾ ಜಿಲ್ಲೆಯಲ್ಲಿ ಎಲ್ಲಾ ಹುಡುಗರನ್ನೂ ಇಂಗ್ಲೀಷಿನಲ್ಲಿ ಪಾಸು ಮಾಡಿಸಬೇಕು. ಏತಕ್ಕೆಂದರೆ ಇದು ಇಲಾಖೆಯವರು ಮಾಡಿರುವ ತಪ್ಪು. ಈ ಪುಸ್ತಕಗಳನ್ನು ಅಚ್ಚು ಹಾಕಿಸಿರುವುದು ಸರ್ಕಾರ ಆಮೇಲೆ ಹಾಗೆಯೇ ಪ್ರೈಮರಿ ಸೆಕೆಂಡ್ ಸ್ಟ್ಯಾಂಡರ್ಡ್ ಕನ್ನಡ ಪುಸ್ತಕದಲ್ಲಿ Lesson 11, ಪುಟ 26, ಲೈನು 13 ರಲ್ಲಿ 1 ಆ ಹಸ್ತ ಪತ್ರದಲ್ಲಿ ಕೆಲವು ಪ್ರಾಣಿಗಳ ಚಿತ್ರಗಳು

ಇದ್ದವು, ಎಂದು ಇದೆ. ಕೆಲವು ಪುಸ್ತಕಗಳಲ್ಲಿ ಈ ವಾಕ್ಯವೇ ಇರುವುದಿಲ್ಲ. ಆ ಮೇಲೆ ಪುಟ 27. ಲೈನು 11ರಲ್ಲಿ (1) ಇದು ಹುಲಿ, ಬೆಕ್ಕಿನ ಹಾಗಿದೆ ಎಂದು ಹೇಳಿದನು. ಇನ್ನೊಂದು ಪುಸ್ತಕದಲ್ಲಿ ಇದು ಹುಲಿ ಬೆಕ್ಕಿನ ಹಾಗಿದೆ ಎಂದು ತಂದೆ ಹೇಳಿದನು, ಎಂದು ಇದೆ. ತಾವು ಅಪೇಕ್ಷಿಪಟ್ಟಲ್ಲಿ ಆ ಪುಸ್ತಕಗಳನ್ನು ಕಳುಹಿಸಿಕೊಡುತ್ತೇನೆ. ಯಾವ ಹುಡುಗನೇ ಆಗಲೀ ಪುಸ್ತಕದಲ್ಲಿ ಪ್ರಾಣಿಗಳ ಚಿತ್ರಗಳು ಇಷ್ಟುವು ಎಂದು ಅವನು ಓದಿದ್ದರೆ ಪರೀಕ್ಷೆಯಲ್ಲಿ ಬರೆಯುತ್ತಾನೆ. ಬೇರೆ ಪುಸ್ತಕದಲ್ಲಿ ಆ ಲೈನೇ ಇಲ್ಲವಲ್ಲ ಅವನು ಏನು ಪರೀಕ್ಷೆಯಲ್ಲಿ ಬರೆಯಬೇಕು? ಪ್ರಾಣಿಗಳ ಚಿತ್ರ ಇದ್ದವು ಎಂದು ಬರೆಯಬೇಕೇ ಅಥವಾ ಇಲ್ಲ ಎಂದು ಬರೆಯಬೇಕೇ ಹೇಗೆ? ಈ ರೀತಿಯಾಗಿ ಒಂದೇ ತರಗತಿಯ ಪುಸ್ತಕದಲ್ಲಿ ಎರಡು ರೀತಿಯ ಮುದ್ರಣ ಮಾಡಿರುವುದರಿಂದ ಹುಡುಗರು ಫೇಲಾಗುವುದಕ್ಕೆ ಸರ್ಕಾರದವರೇ ಕಾರಣರಾಗಿದ್ದಾರೆ. ಆದ್ದರಿಂದ ಈ ತಪ್ಪುಗಳು ಏನಿವೆ, ಇವು ವಿದ್ಯಾ ಇಲಾಖೆಯವರು ಮಾಡಿರತಕ್ಕ ತಪ್ಪುಗಳು. ಈ ರೀತಿ ಪಠ್ಯ ಪುಸ್ತಕಗಳನ್ನು ಗೊತ್ತುಮಾಡಲು ಏನು ಕಾರಣ? ಈ ರೀತಿ ತಪ್ಪು ಅಚ್ಚು ಹಾಕಿಸಬೇಕಾದರೆ ಟೆಕ್ಸ್ಟ್ ಬುಕ್ ಕಮಿಟಿಯವರು ಏನು ಮಾಡುತ್ತಿದ್ದರು? ತಪ್ಪು ಅಚ್ಚು ಹಾಕಿಸಿರತಕ್ಕ ಪುಸ್ತಕಗಳು ಒಬ್ಬ ಹುಡುಗನಿಂದ ಇನ್ನೊಬ್ಬ ಹುಡುಗನಿಗೆ ಹೋಗುವುದರಿಂದ ವಿದ್ಯಾರ್ಥಿಗಳ ಜೀವನವನ್ನು ಕುಂಠಿತಗೊಳಿಸಿದಂತಾಗುತ್ತದೆ. ಇಂಥಾ ಪುಸ್ತಕಗಳು, ಕನ್ನಡ ಮತ್ತು ಇಂಗ್ಲೀಷು ಪುಸ್ತಕಗಳು ಶಿವಮೊಗ್ಗಾ ಜಿಲ್ಲೆಯಲ್ಲಿ ಬಹಳಷ್ಟು ಇರಬೇಕು. ಇದನ್ನೆಲ್ಲಾ ಸರ್ಕಾರದವರು ನೋಡಿ ಈ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಮೈಸೂರು ರಾಜ್ಯದಲ್ಲಿರತಕ್ಕ ವಿದ್ಯಾ ಇಲಾಖೆ ಏನಿದೆ ಇದು ಮಾಡತಕ್ಕ ತಪ್ಪುಗಳಿಂದ ವಿದ್ಯಾರ್ಥಿಗಳನ್ನು ತಪ್ಪುದಾರಿಗೆ ಎಳೆದು, ಅವರು ಪರೀಕ್ಷೆಯಲ್ಲಿ ಫೇಲಾಗುವುದು ಮಾತ್ರ ಅಲ್ಲ ಅವರ ಇಡೀ ಜೀವನವನ್ನೇ ಕುಂಠಿತಮಾಡತಕ್ಕ ಪ್ರಶ್ನೆಯಾಗಿದೆ. ಆದ್ದರಿಂದ ಅವರು ಆ ತಪ್ಪನ್ನು ಮುಚ್ಚಿಕೊಳ್ಳುವ ಹಾಗಿಲ್ಲ. ಅವರು ಆ ತಪ್ಪನ್ನು ಒಪ್ಪಿಕೊಳ್ಳಲೇಬೇಕು. ಮತ್ತು ಈ ದೃಷ್ಟಿಯಿಂದ ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ ಈ ವರ್ಷ ಪ್ರೈಮರಿ ಸೆಕೆಂಡ್ ಸ್ಟ್ಯಾಂಡರ್ಡ್ ಮತ್ತು 5ನೇ ಸ್ಟ್ಯಾಂಡರ್ಡಿನ ಎಲ್ಲಾ ವಿದ್ಯಾರ್ಥಿಗಳನ್ನೂ ಪರೀಕ್ಷೆಯಲ್ಲಿ ಪಾಸು ಮಾಡಿಸಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಕೊನೆಯದಾಗಿ ನಮ್ಮ ರಾಜ್ಯದ ಸಂಗೀತ, ನಾಟಕ, ಸಾಹಿತ್ಯ ಅಕ್ಯಾಡಮಿಯವರು ಕೇರಳಕ್ಕೆ ಒಂದು ನಿಯೋಗ ಹೋಗಿದರು. ನಮ್ಮ ರಾಜ್ಯದಲ್ಲಿ ಈ ಒಂದು ಕಲೆಯಲ್ಲಿ ಸಾಕಷ್ಟು ಜನ ಪರಿಣತರು ಇದ್ದಾರೆ. ನಮ್ಮ ಸಂಸ್ಕೃತಿ ಬೆಳೆಯಬೇಕು ಎನ್ನುವ ಬಗ್ಗೆ ಮಂತ್ರಿಗಳು ಹಾಗೂ ದೊಡ್ಡ ದೊಡ್ಡವರು ಎಲ್ಲರೂ ಭಾಷಣ ಮಾಡುತ್ತಾರೆ. ಸಂಸ್ಕೃತಿಯ ಹಿನ್ನಲೆ ಬಹಳ ದೊಡ್ಡದು ಎಂದು ಹೇಳತಕ್ಕಂಥ ಮಾತನ್ನು ನಾವು ಹತ್ತಾರು ವರ್ಷಗಳಿಂದ ಕೇಳಿದ್ದೇವೆ. ಹೀಗಿರುವಾಗ ಕೇರಳಕ್ಕೆ ಒಂದು ಕಲಾನಿಯೋಗವನ್ನು ನಮ್ಮ ರಾಜ್ಯದಿಂದ ಕಳುಹಿಸುವಾಗ ನಮ್ಮ ಮೈಸೂರು ರಾಜ್ಯದಲ್ಲಿ ಇಷ್ಟೊಂದು ಜನ ಕಲಾವಿದರು ನೃತ್ಯ ಪರಿಣತರು ಇದ್ದರೂ ಕೂಡ ದೆಹಲಿಯಿಂದ ಕಲಾವಿದರನ್ನು ಕರೆಸಿ ಅವರನ್ನು ಸೇರಿಸಿಕೊಂಡು ಕೇರಳಕ್ಕೆ ನಿಯೋಗ ಹೋಗಿದ್ದಾರೆ. ಇದರ ಬಗ್ಗೆ ಸರ್ಕಾರದವರು ಕೂಡಲೇ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಮೈಸೂರು ರಾಜ್ಯದಲ್ಲಿ ಉರ್ದು ಭಾಷೆಯ ಬಗ್ಗೆ, ಕನ್ನಡ ಭಾಷೆಯ ಬಗ್ಗೆ, ಬೇರೆ ಬೇರೆ ಭಾಷೆಗಳ ಬಗ್ಗೆ ಆಫೀಸುಗಳು ಕೆಲಸ ಮಾಡುತ್ತವೆ. ಶಿವಮೊಗ್ಗಾದಲ್ಲಿ ನಾನು ಇದನ್ನು ನೋಡಿದ್ದೇನೆ. ಉರ್ದು ಭಾಷೆಗೆ ಸಪರೇಟ್ ರೇಂಜ್ ಇದೆ. ಸ್ಕೂಲ್ ಇನ್ಸ್‌ಪೆಕ್ಟರು ಇದ್ದಾರೆ. ಕನ್ನಡಕ್ಕೆ ಬೇರೆ ರೇಂಜ್ ಇದೆ. ಸ್ಕೂಲು ಇನ್ಸ್‌ಪೆಕ್ಟರು ಇದ್ದಾರೆ. ಈ ರೀತಿ ಎರಡು ಬೇರೆ ಬೇರೆ ರೇಂಜುಗಳು ಇರುವುದು ಸರಿಯಲ್ಲ. ಉರ್ದು ಸ್ಕೂಲುಗಳಲ್ಲಿಯೂ ಕನ್ನಡವನ್ನು ಕಡ್ಡಾಯವಾಗಿ ಐಚ್ಛಿಕ ವಿಷಯವಾಗಿ ಇಡಬೇಕು. ಉರ್ದು ರೇಂಜ್ ಅನ್ನು ವಜಾ ಮಾಡಬೇಕು. ಒಂದೇ ರೇಂಜ್ ಇರಬೇಕು. ಒಂದೇ ರೇಂಜಿಗೆ ಎಲ್ಲಾ ಭಾಷೆಗಳು ಬರುವ ಹಾಗೆ ಮಾಡಬೇಕು. ಈ ವಿದ್ಯಾ ಇಲಾಖೆಯ ವಿಷಯದಲ್ಲಿ ಸಾಧ್ಯವಾದಮಟ್ಟಿಗೆ ಸಾಕಷ್ಟು ವಿಷಯಗಳನ್ನು ನಾನು ಹೇಳಿದ್ದೇನೆ. ನನಗೆ ಇನ್ನು ಹೆಚ್ಚು ಸಮಯ ಇಲ್ಲದ್ದರಿಂದ ಬೇರೆ ಸದಸ್ಯರು ಈ ಬಗ್ಗೆ ಹೇಳುತ್ತಾರೆ. ಇಷ್ಟು ಹೇಳಿ ವಿದ್ಯಾ ಇಲಾಖೆಯ ಬೇಡಿಕೆಗಳನ್ನು ವಿರೋಧಿಸುತ್ತಾ ನನಗೆ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ಎಸ್. ಗೌಡ (ದೇವನಹಳ್ಳಿ).—ಮಾನ್ಯ ಸಭಾಪತಿಗಳೇ, ಶಿಕ್ಷಣ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತೇನೆ. ಸ್ವಾತಂತ್ರ್ಯ ಪೂರ್ವದಲ್ಲಿ ಇಡೀ ದೇಶದಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಏನು ಒಂದು ವಿದ್ಯಾಭ್ಯಾಸದ ಮಟ್ಟ ಮತ್ತು ವಿದ್ಯಾಭ್ಯಾಸದ ಪ್ರಗತಿ ಇತ್ತೋ ಅದಕ್ಕಿಂತ ನೂರರಷ್ಟು ಹೆಚ್ಚು ಪಾಲು ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಪ್ರಗತಿ ಸ್ವಾತಂತ್ರ್ಯ ಬಂದ ಕಳೆದ 20 ವರ್ಷಗಳಲ್ಲಿ ಆಗಿದೆ. ಈ ಒಂದು ಪ್ರಗತಿಯನ್ನು ಈ ದೇಶ

(ಶ್ರೀ ಡಿ. ಎಸ್. ಗೌಡ)

ಹಾಗೂ ಈ ಸರ್ಕಾರ ಸಾಧಿಸಿದೆ. ನಾವು ಒಂದು ವಿಷಯವನ್ನು ಯೋಚನೆ ಮಾಡಬೇಕಾಗಿದೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಇಂದು ಅನೇಕ ಸಮಸ್ಯೆಗಳನ್ನು ನಾವು ನೋಡುತ್ತಿದ್ದೇವೆ. ಈ ಸಮಸ್ಯೆಗಳನ್ನೆಲ್ಲಾ ವಿದ್ಯಾರ್ಥಿಗಳು ಎದುರಿಸಿ ಮುಂದೆ ವಿದ್ಯಾವಂತರಾದಮೇಲೆ ತಮ್ಮ ಕಾಲ ಮೇಲೆ ತಾವು ನಿಂತುಕೊಂಡು ಜೀವನ ಮಾಡುವ ಮಟ್ಟದಲ್ಲಿ ಇದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನಾವು ಸಮಗ್ರವಾಗಿ ಪರಿಶೀಲಿಸಬೇಕಾಗಿದೆ. ಹಿಂದೆ ಬ್ರಿಟಿಷರು ತಮ್ಮ ಅನುಕೂಲಕ್ಕಾಗಿ ತಮ್ಮ ಸ್ವಾರ್ಥಕ್ಕಾಗಿ ಯಾವ ಒಂದು ಬಗೆಯ ವಿದ್ಯಾಭ್ಯಾಸದ ಪದ್ಧತಿಯನ್ನು ಬಿಟ್ಟು ಹೋದರೋ ಅದೇ ಪದ್ಧತಿ ಬೇರೆ ರೂಪದಲ್ಲಿ ಇಂದೂ ಕೂಡ ಮುಂದುವರೆದಿದೆ. ಇಂದಿನ ವಿದ್ಯಾಭ್ಯಾಸದ ಮಟ್ಟ ಯಾವ ರೀತಿಯಿದೆಯೆಂದರೆ, ಇಂಜನಿಯರಿಂಗ್ ವಿದ್ಯಾರ್ಥಿಗಳಾಗಲೀ, ಮೆಡಿಕಲ್ ಪದವೀಧರರಾಗಲೀ ಬಿ.ಎ., ಬಿ.ಎಸ್.ಸಿ. ಮಾಡಿಕೊಂಡವರಾಗಲೀ ಅಥವಾ ಎಂ.ಎ., ಎಂ.ಎಸ್.ಸಿ. ಮಾಡಿಕೊಂಡವರಾಗಲೀ ಎಲ್ಲರೂ ಸಹ ತಮ್ಮ ಜೀವನ ಮಾಡುವುದಕ್ಕೆ ಒಂದು ಕೆಲಸ ಬೇಕೆಂದು ಸರ್ಕಾರದ ಕಡೆ ತಮ್ಮ ಕೈಯನ್ನು ಎತ್ತಿ ನೋಡಬೇಕಾಗಿದೆ. ಈ ಒಂದು ವಿದ್ಯಾಭ್ಯಾಸ ಪದ್ಧತಿಯಿಂದ ಎಷ್ಟರ ಮಟ್ಟಿಗೆ ದೇಶದ ಪ್ರಗತಿ, ಸಮಾಜದ ಪ್ರಗತಿ ಮತ್ತು ಏಳಿಗೆ ಆಗಬಹುದು ಎಂಬ ಮೂಲ ಅಂಶವನ್ನು ಸರ್ಕಾರ ಮತ್ತು ಸಮಾಜ ಪರಿಶೀಲಿಸಬೇಕಾಗಿದೆ. ಈ ದಿನ ನಮ್ಮ ಇಡೀ ರಾಷ್ಟ್ರ ಒಂದಾಗಿದೆ. ಇಡೀ ಭಾರತ ದೇಶ ಒಂದು. ಇಡೀ ಭಾರತ ದೇಶ ಸಮಗ್ರದೇಶವಾಗಿ ಬೆಳೆಯಬೇಕಾಗಿದೆ ಮತ್ತು ಈ ದೇಶಕ್ಕೂ ಒಂದು ಸಮಗ್ರತೆ ಇದೆ. ಈ ದೇಶದಲ್ಲಿ ಸರ್ವಧರ್ಮಗಳು ಇವೆ. ಇವುಗಳನ್ನೆಲ್ಲಾ ಎತ್ತಿ ಹಿಡಿದು ವಿದ್ಯಾರ್ಥಿಗಳಿಗೆ ತೋರಿಸತಕ್ಕಂಥ ಒಂದು ಮೂಲ ಉದ್ದೇಶ ಶಿಕ್ಷಣ ಇಲಾಖೆಗೆ ಸೇರಿದೆ. ಈ ರೀತಿಯ ಉದ್ದೇಶಗಳನ್ನಾಗಲೀ ಅಥವಾ ಆದರ್ಶಪ್ರೇಮವನ್ನಾಗಲೀ ತಿಳಿಸತಕ್ಕಂಥ ಪಠ್ಯ ಪುಸ್ತಕಗಳು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೂ ಸಹ ಹುಡುಕಿದರೂ ಸಿಗುತ್ತಿಲ್ಲ. ಈ ಒಂದು ಯೋಜನೆ ಅಥವಾ ಕಾರ್ಯಕ್ರಮ ಪಠ್ಯಪುಸ್ತಕಗಳಲ್ಲಿ ಕಾಣುತ್ತಿಲ್ಲ. ಈ ವಿಷಯದಲ್ಲಿ ನಾವು ಯಾರನ್ನೂ ದೂಷಿಸಬೇಕಾಗಿಲ್ಲ. ಈ ಒಂದು ನಿರ್ದಿಷ್ಟವಾದಂಥ ಗುರಿಯನ್ನು ನಮ್ಮ ಮೈಸೂರು ಸರ್ಕಾರ ಕೈಕೊಳ್ಳಬೇಕಾಗಿದೆ ಅಥವಾ ಶಿಕ್ಷಣ ಕ್ಷೇತ್ರದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಕೇಂದ್ರ ಸರ್ಕಾರದವರು ಕೈಕೊಳ್ಳಬೇಕಾಗಿದೆ. ಈ ವಿಚಾರದಲ್ಲಿ ಈಗಾಗಲೇ ಅನೇಕ ಸಮಿತಿಗಳನ್ನು ಕೇಂದ್ರ ಸರ್ಕಾರದವರು ನೇಮಕ ಮಾಡಿ, ಆ ಕಮಿಟಿಯವರು ತಮ್ಮ ಒಂದು ವರದಿಯನ್ನು ಕೊಟ್ಟಿದ್ದರೂ ಸಹ, ಅವುಗಳು ವರದಿಯ ರೂಪದಲ್ಲಿಯೇ ಇವೆಯೇ ಹೊರತು ಆ ಬಗ್ಗೆ ಕೇಂದ್ರ ಸರ್ಕಾರದವರು ಇದುವರೆಗೆ ಯಾವ ಒಂದು ನಿಲುವನ್ನೂ ತೆಗೆದುಕೊಂಡಿಲ್ಲ. ವಿದ್ಯಾಭ್ಯಾಸದ ಮಟ್ಟ ಮತ್ತು ವಿದ್ಯಾಭ್ಯಾಸದ ಗುರಿ ಯಾವ ರೀತಿ ಇರಬೇಕು ಎನ್ನತಕ್ಕಂಥ ವಿಚಾರದಲ್ಲಿ ಸ್ವಾತಂತ್ರ್ಯ ಬಂದು 20 ವರ್ಷಗಳಾದರೂ ಸಹ ಒಂದು ನೀತಿಯನ್ನು ರೂಪಿಸುವುದರಲ್ಲಿ ನಾವು ನಿಜವಾಗಿಯೂ ಫಲಪ್ರದವಾಗಿಲ್ಲವೆಂದು ಹೇಳಬೇಕಾಗಿದೆ. ಮಿಗಿಲಾಗಿ ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಕಳಕಳಿಯಿಂದ ಹೇಳಬೇಕಾಗುತ್ತದೆ. ಅದು ಭಾಷಾ ಪ್ರಶ್ನೆ. ಈ ಒಂದು ಭಾಷಾ ಪ್ರಶ್ನೆಯಿಂದ ವಿದ್ಯಾರ್ಥಿಗಳು ಇವತ್ತು ಆಹುತಿಯಾಗಬೇಕಾಗಿದೆ. 15 ರಿಂದ 20 ವರ್ಷಗಳವರೆಗೆ ಅಂದರೆ ತಮ್ಮ ತಮ್ಮ ವಿದ್ಯಾಭ್ಯಾಸ ಮುಗಿಯುವವರೆಗೆ ವಿದ್ಯಾರ್ಥಿಗಳು ರಾಜಕೀಯ ಕ್ಷೇತ್ರದಿಂದ ದೂರವಿರುವುದು ಒಳ್ಳೆಯದು. ವಿದ್ಯಾಭ್ಯಾಸವೇ ಅವರ ಏಕೈಕ ಗುರಿಯಾಗಿರಬೇಕು. ಈ ಗುರಿಯನ್ನು ಅವರು ಸಾಧಿಸಬೇಕಾದರೆ ಮುಂದೆ ಉತ್ತಮ ಜೀವನ ನಡೆಸಬೇಕಾದರೆ ರಾಜಕೀಯ ಕ್ಷೇತ್ರದಿಂದ ದೂರವಿರುವುದು ಒಳ್ಳೆಯದು. ಪ್ರಚಲಿತವಾಗಿರುವ ಕೆಲಸ ಸಮಸ್ಯೆಗಳ ಬಗ್ಗೆ ಇಂದು ವಿದ್ಯಾರ್ಥಿಗಳು ಆಹುತಿಯಾಗಬೇಕಾಗಿದೆ. ರಾಷ್ಟ್ರಭಾಷೆಯ ಬಗ್ಗೆ ಇಂದು ಏನು ಒಂದು ಸಮಸ್ಯೆ ಉದ್ಭವಿಸಿದೆಯೋ ಅದನ್ನು ಕೇಂದ್ರ ಸರ್ಕಾರದವರು ನಿವಾರಣೆ ಮಾಡಬೇಕಾಗಿದೆಯೆಂದು ನಾನಾದರೂ ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದವರು ಒಂದು ನಿರ್ದಿಷ್ಟವಾದಂಥ ನಿಲುವನ್ನು ಭಾಷಾ ಪ್ರಶ್ನೆಯ ಬಗ್ಗೆ ತೆಗೆದುಕೊಳ್ಳದಿದ್ದರೆ ನಿಜವಾಗಿಯೂ ವಿದ್ಯಾರ್ಥಿಗಳು ಆಹುತಿಯಾಗಬೇಕಾಗುತ್ತದೆ. ಈ ಒಂದು ಭಾಷಾ ಸಮಸ್ಯೆಯನ್ನು ಬಿಡಿಸುವ ಬಗ್ಗೆ ಸರ್ಕಾರದ ಜೊತೆ ಸಮಾಜ ಮತ್ತು ಎಲ್ಲಾ ರಾಜಕೀಯ ಪಕ್ಷಗಳು ಸಹ ಸಹಕರಿಸಬೇಕಾಗಿದೆ. ಇದೇ ಒಂದು ಕಾರಣವನ್ನು ಇಟ್ಟುಕೊಂಡು ಇಂದು ರಾಜಕೀಯ ಪಕ್ಷಗಳು ಸಣ್ಣ ಸಣ್ಣ ಕ್ಷುಲ್ಲಕ ಕಾರಣಗಳಿಗಾಗಿ ವಿದ್ಯಾರ್ಥಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ರೀತಿ ಉಪಯೋಗಿಸಿಕೊಂಡು ವಿದ್ಯಾರ್ಥಿಗಳ ಮುಂದಿನ ಜೀವನವನ್ನು ಹಾಳುಮಾಡುತ್ತಿದ್ದಾರೆಂದು ಕಠೋರವಾಗಿ ಹೇಳಬೇಕಾಗಿದೆ ಮತ್ತು ದೂಷಿಸಬೇಕಾಗಿದೆ. ಈ ರೀತಿ ರಾಜಕೀಯ ಪಕ್ಷಗಳು ಉಪಯೋಗಿಸಿ

ಕೊಳ್ಳುವುದು ಸರಿಯಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಈಗ ವಿದ್ಯಾರ್ಥಿಗಳು ರಾಜಕೀಯ ಪಕ್ಷಗಳ ಮಾತನ್ನು ಕೇಳಿ ಕಷ್ಟ ಅನುಭವಿಸುತ್ತಿರುವುದನ್ನು ನೋಡಿದ್ದೇವೆ. ರಾಜಕೀಯ ಪಕ್ಷಗಳು ಯಾವುದೇ ಆಗಿರಲಿ ವಿದ್ಯಾರ್ಥಿಗಳನ್ನು ಮಾತ್ರ ಉಪಯೋಗಿಸಿಕೊಳ್ಳದೆ ದೂರ ವಿಡಬೇಕು. ಮಾತೆತ್ತಿದರೆ ವಿದ್ಯಾರ್ಥಿಗಳಲ್ಲಿ ಒಂದು ಶಿಸ್ತು ಇಲ್ಲ, ಒಂದು ನೀತಿಯಿಲ್ಲ, ವಿದ್ಯಾಭ್ಯಾಸದ ಮಟ್ಟ ಕಡಿಮೆಯಾಗುತ್ತಿದೆಯೆಂದು ಹೇಳತಕ್ಕಂಥ ನಾವುಗಳು ಭಾಷಾ ಪ್ರಶ್ನೆಯ ಬಗ್ಗೆ ಅವರನ್ನು ಸೇರಿಸಿಕೊಂಡು ಮುಂದಿನ ಅವರ ಜೀವನವನ್ನು ಹಾಳುಮಾಡುವುದು ಸರಿಯಲ್ಲ. ಈಗಿರತಕ್ಕಂಥ ಭಾಷಾ ಪ್ರಶ್ನೆಯನ್ನು ಬಿಡಿಸಲು ಸರ್ಕಾರ ಒಂದರಿಂದಲೇ ಸಾಧ್ಯವಿಲ್ಲ, ಸರ್ಕಾರದ ಜೊತೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಸಹ ಸಹಕರಿಸಬೇಕಾಗಿದೆ.

ಇನ್ನು ಪಠ್ಯಪುಸ್ತಕಗಳಲ್ಲಿ ಅನೇಕ ನ್ಯೂನತೆಗಳಿವೆ. ಇದು ಸ್ವಾಭಾವಿಕವಾದಂಥ ಮಾತು. ಅಧಿಕಾರಿಗಳು, ಶಿಕ್ಷಣ ಮಂತ್ರಿಗಳು ಮತ್ತು ಅಸೆಂಬ್ಲಿಯ ಸದಸ್ಯರುಗಳು ಎಲ್ಲರೂ ಸಹ ಈ ಬಗ್ಗೆ ಜವಾಬ್ದಾರಿಯನ್ನು ಹೊರಬೇಕಾಗಿದೆ. ಅಧಿಕಾರಿಗಳು ಹಿರಿಯವರೇ ಇರಲಿ, ಕಿರಿಯವರೇ ಇರಲಿ, ಈ ಬಗ್ಗೆ ಒಂದು ಗುರುತರವಾದ ಜವಾಬ್ದಾರಿ ಇರುತ್ತದೆ. ಪಠ್ಯಪುಸ್ತಕಗಳಿಂದ ಹಿಡಿದು ಇನ್ನೂ ಅನೇಕ ಸಮಸ್ಯೆಗಳು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಇದೆ. ಪ್ರಾಥಮಿಕ ವಿದ್ಯಾಭ್ಯಾಸದಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೆ ವಿದ್ಯಾರ್ಥಿಗಳ ಸಮಸ್ಯೆಗಳು ಏನೇನಿವೆ ಎಂಬ ಬಗ್ಗೆ ಉನ್ನತ ಅಧಿಕಾರಿಗಳು ಮತ್ತು ತಜ್ಞರುಗಳು ಕೂಡಿ ಆಲೋಚನೆ ಮಾಡಿ, ತೀವ್ರವಾಗಿ ಪರಿಶೀಲನೆ ಮಾಡಿ ಸೂಕ್ತ ಮಾರ್ಗಗಳನ್ನು ಕಂಡುಹಿಡಿಯಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಬೇಕೆಂದರೆ ಇನ್ನೂ 10 ಕೋಟಿ ರೂಪಾಯಿಗಳು ಹೆಚ್ಚು ಖರ್ಚಾದರೂ ಸರಿಯೇ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಅತ್ಯಾವಶ್ಯಕವಾಗಿ ಪ್ರಾಥಮಿಕ ಶಾಲೆಯ ಕಟ್ಟಡಗಳು ಬೇಕೋ ಅಲ್ಲೆಲ್ಲಾ ಸರ್ಕಾರದವರೇ ಕಟ್ಟಿಸಿಕೊಡಬೇಕು. ಇವತ್ತಿನದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಮುರುಕಲು ದೇವಸ್ಥಾನ ಮತ್ತು ಚಾವಡಿಗಳಲ್ಲಿ ಶಾಲೆಗಳು ನಡೆಯುತ್ತಿವೆ, ಹಳ್ಳಿಗಾಡು ಪ್ರದೇಶವನ್ನು ಮತ್ತು ಪಟ್ಟಣವನ್ನು ಹೋಲಿಸಿ ನೋಡಿದಾಗ ಪಟ್ಟಣಗಳಲ್ಲಿ ಆರ್ಥಿಕ ಮಟ್ಟದಲ್ಲಿ ದಕ್ಷತೆಯಿಂದ ಕೂಡಿದ ಕಾರ್ಪೊರೇಷನ್ ಅಥವಾ ಮುನಿಸಿಪಾಲಿಟಿಗಳು ಇದ್ದು ಇವುಗಳು ಸರ್ಕಾರದ ಧನಸಹಾಯ ಪಡೆದುಕೊಂಡು ಉತ್ತಮ ಸ್ಕೂಲ್ ಕಟ್ಟಡಗಳನ್ನು ಕಟ್ಟಿಸಿಕೊಂಡು ಚೆನ್ನಾಗಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ನ್ಯೂನತೆಗಳೇನೆಂದರೆ, ತಾಲ್ಲೂಕು ಬೋರ್ಡ್ ಅಥವಾ ಗ್ರಾಮಪಂಚಾಯಿತಿಗಳವರ ಹತ್ತಿರ ಸಾಕಷ್ಟು ಹಣವಿರುವುದಿಲ್ಲವಾದ್ದರಿಂದ ಸ್ಕೂಲ್ ಕಟ್ಟಡಗಳನ್ನು ಕಟ್ಟಿಸಿಕೊಳ್ಳುವುದಕ್ಕೆ ತೊಂದರೆಯಾಗುತ್ತಿದೆ. ಈ ದಿಶೆಯಲ್ಲಿ ಅಲ್ಲಿಯ ಕಟ್ಟಡಗಳನ್ನು ನೋಡುವುದಕ್ಕಾಗುತ್ತಿಲ್ಲ. ಆದ್ದರಿಂದ ಶಿಕ್ಷಣ ಕ್ಷೇತ್ರಕ್ಕೆ ಇನ್ನೂ ಹತ್ತು ಕೋಟಿ ರೂಪಾಯಿಗಳು ಖರ್ಚಾದರೂ ಸರಿಯೆ, ಎಲ್ಲೆಲ್ಲಿ ಸ್ಕೂಲ್ ಕಟ್ಟಡಗಳ ಅವಶ್ಯಕತೆ ಇದೆಯೋ ಅಲ್ಲೆಲ್ಲ ಸರ್ಕಾರದವರೇ ಕಟ್ಟಿಸಿಕೊಡಬೇಕು, ಹಣದ ಕೊರತೆ ಏನಾದರೂ ಇದ್ದರೆ ಮಾದರಿಯಾದಂಥ ಗುಡಿಸಲುಗಳನ್ನಾದರೂ ಕಟ್ಟಿಸಿಕೊಡುವುದು ಒಳ್ಳೆಯದು. ಈ ಬಗ್ಗೆ ಸರ್ಕಾರದವರು ತೀವ್ರವಾದಂಥ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

12-00 NOON

ಇನ್ನೊಂದು ವಿಷಯ ಈ ಸಂದರ್ಭದಲ್ಲಿ ಹೇಳುವುದಾದರೆ, ಕೇರ್ ಸಂಸ್ಥೆಯವರು ಏನೊಂದು ಆಹಾರ ಮತ್ತು ಹಾಲಿನ ಪುಡಿಯನ್ನು ಕೊಡುತ್ತಿದ್ದಾರೆ, ಇದು ಯಾವ ರೀತಿಯಲ್ಲಿ ಬರುತ್ತಿದೆ, ಎಂಬುದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಆದರೆ ಅದರ ವಿನಿಯೋಗವಾಗುವ ರೀತಿಯಲ್ಲಿ ಹಿರಿಯ ಅಧಿಕಾರಿಗಳ ಬಗ್ಗೆ ಮತ್ತು ಕಿರಿಯ ಅಧಿಕಾರಿಗಳ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಆ ವಿಚಾರದಲ್ಲಿ ಅಧಿಕಾರಿಗಳಿಂದ ಹಿಡಿದು ಉಪಾಧ್ಯಾಯರುಗಳ ತನಕ ಎಷ್ಟು ದುರುಪಯೋಗವಾಗುತ್ತದೆ ಎಂಬುದನ್ನು ಬಹಳ ತೀವ್ರವಾಗಿ ಯೋಚಿಸಬೇಕಾಗಿದೆ. ವಿದ್ಯಾ ಕ್ಷೇತ್ರದಲ್ಲಿ ಪವಿತ್ರ ಬೋಧನೆಯನ್ನು ಮಾಡತಕ್ಕ ಕ್ಷೇತ್ರದಲ್ಲಿ ಈ ರೀತಿ ದುರುಪಯೋಗವಾದರೆ ನಮ್ಮ ಏಳಿಗೆ ಹೇಗೆ ಆದೀತು ? ಆದ್ದರಿಂದ ಅದರಲ್ಲಿ ಯಾರ್ಯಾರು ಒಳಗಾಗಿದ್ದಾರೋ, ಮತ್ತು ಯಾರು ದುರುಪಯೋಗ ಮಾಡುತ್ತಾರೋ ಅಂಥವರ ಮೇಲೆ ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕು. ಅದೇ ರೀತಿ ನಮ್ಮ ದೇಶದ ಸಮಸ್ಯೆ ಏನಿದೆ ಅದಕ್ಕನುಗುಣವಾಗಿ ವಿದ್ಯಾವಂತರನ್ನಾಗಿ ಮಾಡಬೇಕು. ಇವತ್ತು ಪದವೀಧರರನ್ನಾಗಿ ಮಾಡಿ ನಿರುದ್ಯೋಗ ಸಮಸ್ಯೆಯನ್ನು ತಯಾರು ಮಾಡಬಾರದು. ಆ ರೀತಿಯಿಂದ ವಿದ್ಯಾಭ್ಯಾಸ ಕ್ರಮವನ್ನು ಮಾಡಿ ವಿದ್ಯಾವಂತರು ತಮ್ಮ ಕಾಲಮೇಲೆ ನಿಲ್ಲುವಂತೆ ದೇಶದ ಸಮಸ್ಯೆಗನುಗುಣವಾಗಿ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri V. N. PATIL.—Mr. Speaker Sir, wish to oppose the demand for education on the following grounds: The first one is that the education is not being imparted to educate the Nation and the State and to create a sense of nationhood among the students or among the educated class. If education is to create frustration and disintegration, then we should call that education 'a hell'. If education is to create frustration among the younger generation, who is to take up that responsibility? The mass student unrest is due to the fact that the Government has failed to create a sense of security in the minds of the young ones who expect and agitate for a fair deal for them in the society. Has the Government ever thought of its responsibility? To quote an instance, the Government has implemented the provisions of the Mysore State Libraries Act to collect cess. But has it ever attempted to establish even 10 per cent more libraries during these years? Several District and Taluka Headquarters suffer due to non-availability of any books, magazines and papers as there are no libraries. Your policy is to collect first and see later about facilities. This is an irresponsible way of betrayal. The present education is not being used as a media of understanding one another. It is not being used to create more and more national-minded people and to create a sense of security among the younger generation. The students' indiscipline is the result of the present day wrong policies of the Government with regard to education. Some people say that more Engineering and Technical Colleges should not be encouraged to be started in future and we must cut admissions to these Colleges. But in my opinion, it is not a correct method to solve this problem. About 30 years back, our National Poet, peoples' poet, Rabindranath Tagore said that education should not be such as to produce clerks for British imperialism to facilitate the ruling of the Britishers, but it is to get the masses of our own country educated to create politicians, great leaders and nation building workers among ourselves, for the welfare of the Nation. Is this being done? I do not blame the Education Minister or I do not blame any individual for this. But the methods and policies adopted by the Congress Government so far are wrong. The policies adopted by Government are themselves wrong. When economic disability is there, how can these polices succeed? Some vested interests are there who can afford to buy education. How about the 90 per cent of the population who are the backbone of the country? You have failed to supply even the minimum of text books to students. What should they do for educating their children? What about the education of the children of those who are fighting at the borders? What is the security we have given to them? There is no equal opportunity given to them. Equal opportunity is not given even in employment. Equal opportunity is not given to 90 per cent of the people to be worthy citizens. You have not created opportunities to secure better jobs for them. You have fattened the richer section at the cost of the nation. Education is being given only for job seeking. The policy should be changed. The pattern itself should be changed. The Janpada Sahitya Academy Books (filled with filth) is not the salvation.

Of course, the Government by recommending the rot have opened the floodgates for mischief. It might have helped the publisher which again is one-man show to fatten himself at the cost of the students' future, but it cannot build healthy boys who are made to read obscene at the age of 14 years leading to premature thinking of sex. Education must be given in order to create a sense of security among those who are educated and not frustration. The problems are not being tackled properly. Equal opportunities are not being given for citizens of Mysore State and castes have taken the place of merit or talent. Even in the allotment of seats in the Colleges, blackmarketing is there. There is corruption in Education Department. There is corruption everywhere. Unless this blackmarketing is removed by abolishing the stigma of capitation fee, how can we create a sense of brotherhood and a sense of security in the minds of the younger generation ? I want to say one thing. The Education Ministry in general and the Congress rule in particular are responsible for the wrong policies thay have adopted. These wrong policies are being adopted from the very beginning. Equality is not being considered and the right of every citizen to get education and employment is not being considered. The right to own property is recognised, but the right to get educated and the right for a job and decent living is not recognised and this valuable right of every citizen is thrown to the winds. This is the fundamental bankruptcy in policy making of the Congress rulers. On the other hand, frustration is being created in the minds of the young people. Compulsory education has failed because of this frustration in the minds of the educated people and also in the minds of the parents. Economic proverty is one of the paramount reasons for this. 80 per cent of the population is very poor. They do not want to send their children to schools. They want to have their children as earning members of the family. Unless the economic disability is removed, how can we succeed in the compulsory education scheme? The Government is shouting from the house tops that they have made secondary education free. Has it been really made free ? No. Every month, they are collecting Rs. 10 to 15 in private institutions. These private institutions are being tolerated. They have become money minting rackets. These private institutions which are running the educational institutions are doing lucrative business under the name of charitable institutions. People of these institutions are minting money. The education has become the medium of corruption. Education is being available to those who have capacity to purchase. We talk of socialism. Is there any meaning in it ? When we allow monopolists to enter the education field and mint money unscrupulously from the education-hungry citizens of ours. Several things have been brought to the notice of the Education Minister. Collection of fees by these private institutions has been brought to the notice of the Minister. These private institutions adopt different methods to collect fees. They won't say it is tuition fees. They say it is the donation for which receipts will be issued not in the name of the students but in the name of the parents. It is for the Department to look into this difficulty. I can say except the

(SRI V. N. PATIL)

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಸಭಾಪತಿಗಳೇ, ಎಲ್ಲಾ ಇಲಾಖೆಗಳಿಗಿಂತ ಹೆಚ್ಚಿನ ಮೊತ್ತವಾದ ಸುಮಾರು 36 ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯದ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಇಷ್ಟು ಹಣವನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದರೂ ಸಹ ವಿದ್ಯಾಭ್ಯಾಸದ ಯೋಜನೆಯಲ್ಲಿ ನಾವು ನಿರೀಕ್ಷಿಸಿದ ಪ್ರಗತಿ ಏನಾದರೂ ಸಾಧ್ಯವಾಗಿದೆಯೇ ಎಂದರೆ ಅದು ಕೇವಲ ಅಂಕೆ ಅಂಶಗಳಲ್ಲಿ ಮಾತ್ರ ಇದೆ. ವಾಸ್ತವಿಕವಾಗಿ ನಾವು ಏನೇನೂ ಸಾಧನೆ ಅಥವಾ ಪ್ರಗತಿಯನ್ನು ಮಾಡುವುದಕ್ಕಾಗಿಲ್ಲ. ನಮ್ಮ ಸ್ವಾತಂತ್ರ್ಯ ಉಳಿಯಬೇಕಾದರೆ, ನಮ್ಮ ದೇಶ ಒಂದು ಆಧುನಿಕ ರಾಷ್ಟ್ರವಾಗಬೇಕಾದರೆ ನಮ್ಮ ಜನತೆಯು ವಿದ್ಯಾಭ್ಯಾಸದ ಮಟ್ಟ ಜಾಸ್ತಿಯಾಗಬೇಕು. ಈ ಕಾರಣದಿಂದಲೇ ಸರ್ಕಾರದವರು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದಿದ್ದಾರೆ. ಸರ್ಕಾರಿ ಲೆಕ್ಕದಲ್ಲಿ ಅಂಕಿ ಅಂಶಗಳ ಮೂಲಕ ಹೆಚ್ಚಿನ ಮಕ್ಕಳನ್ನು ಪ್ರಾಥಮಿಕ ಶಾಲೆಗಳಿಗೆ ಸೇರಿಸಲಾಗಿದೆಯೆಂದು ತೋರಿಸಿದ್ದಾರೆ. ವಾಸ್ತವವಾಗಿ ಶಾಲೆಗಳನ್ನು ನೋಡಿದರೆ ಅಲ್ಲಿಯ ಸ್ಕೂಲ್ ಲೆಕ್ಕದಲ್ಲಿ ಹುಡುಗರ ಹೆಸರುಗಳು ಇರುತ್ತವೆಯೇ ವಿನಃ ನಿಜವಾಗಿಯೂ ಬಡವರ ಮಕ್ಕಳು ಸ್ಕೂಲಿಗೆ ಬರುತ್ತಿಲ್ಲ. ಇದಕ್ಕೆ ಕಾರಣವೆಂದರೆ ನಮ್ಮ ದೇಶದಲ್ಲಿರುವ ಬಡತನವೇ ಕಾರಣ. ಕಾನೂನು ಮೂಲಕ ಬಡವರ ಮಕ್ಕಳನ್ನು ಸ್ಕೂಲಿಗೆ ಸೇರಿಸುವಂತೆ ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಅವರು ತಮ್ಮ ಮಕ್ಕಳಿಗೆ ಸರಿಯಾದ ಬಟ್ಟೆ ಮತ್ತು ಸ್ಲೇಟ್, ಪುಸ್ತಕಗಳನ್ನು ಕೊಡಿಸುವುದಕ್ಕೆ ಶಕ್ತಿಯಿರುವುದಿಲ್ಲ. ಆದ್ದರಿಂದ ಸರ್ಕಾರದವರೇ ಬಡವರ ಮಕ್ಕಳಿಗೆ ಮತ್ತು ಕಾರ್ಮಿಕರ ಮಕ್ಕಳಿಗೆ ಉಚಿತವಾಗಿ ಬಟ್ಟೆ ಮತ್ತು ಸ್ಲೇಟ್, ಪುಸ್ತಕಗಳನ್ನು ಮತ್ತು ಉಚಿತ ಊಟ ಒದಗಿಸಿದರೆ ಮಾತ್ರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ತರುವುದಕ್ಕೆ ಅವಕಾಶವಾಗುತ್ತದೆ. ಇದು ವಿನಃ ಕೇವಲ ಅಂಕಿಅಂಶ ಮೂಲಕ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತರುತ್ತೇವೆಂದು ಹೇಳುವುದು ಹಾಸ್ಯಾಸ್ಪದ.

ಇನ್ನು ಎಲ್ಲಾ ಉದ್ಯೋಗಗಳಿಗಿಂತ ಉಪಾಧ್ಯಾಯರ ಉದ್ಯೋಗ ಜವಾಬ್ದಾರಿ ಇಲ್ಲದ ಉದ್ಯೋಗ ಎಂದು ಹೇಳುವುದು ಒಂದು ವಾಡಿಕೆಯಾಗಿದೆ. ಇದು ನಿಜವಾಗಿಯೂ ಕೂಡ ಸತ್ಯವಾದ ಮಾತು. ಅದೇ ಇಂಜಿನಿಯರ್ ಮತ್ತು ಡಾಕ್ಟರ್ ಹುದ್ದೆಗಳನ್ನು ತೆಗೆದುಕೊಳ್ಳಿ. ಇಂಜಿನಿಯರ್ ಇಷ್ಟು ದಿವಸದಲ್ಲಿ ಇಷ್ಟೇ ಕಟ್ಟಡಗಳನ್ನು ಕಟ್ಟಿಸಬೇಕೆಂದು ಇತ್ಯಾದಿ ಜವಾಬ್ದಾರಿಯನ್ನು ವಹಿಸಿರುತ್ತಾರೆ. ಡಾಕ್ಟರ್ ಆದರೆ ಇಷ್ಟೇ ಜನಕ್ಕೆ ಒಂದು ದಿನಕ್ಕೆ ಔಷಧಿ ಕೊಡಬೇಕೆಂಬ

ಜವಾಬ್ದಾರಿಯಿರುತ್ತದೆ. ಆದರೆ ಉಪಾಧ್ಯಾಯರುಗಳಿಗೆ ಯಾವ ಜವಾಬ್ದಾರಿಯೂ ಸಹ ಇರುವುದಿಲ್ಲ. ಸ್ಕೂಲ್‌ಗೆ ಹೋದರೂ ಸರಿ, ಹೋಗದಿದ್ದರೂ ಸರಿ, ಪಾಠ ಹೇಳಿದರೂ ಸರಿ, ಪಾಠ ಹೇಳದಿದ್ದರೂ ಸರಿ, ಇದನ್ನೆಲ್ಲಾ ಕೇಳುವುದಕ್ಕೆ ಯಾರಿಗೂ ಅಧಿಕಾರವಿಲ್ಲ. ಹಳ್ಳಿಗಳಲ್ಲಿರುವ ಉಪಾಧ್ಯಾಯರುಗಳು ಇನ್‌ಸ್ಪೆಕ್ಟರ್‌ಗೆ ಕೋಳಿಮೊಟ್ಟೆ, ತುಪ್ಪ ಮುಂತಾದವನ್ನು ಕೊಟ್ಟು, ಅವರನ್ನು ಸರಿಮಾಡಿಕೊಂಡು ತಮಗೆ ಇಷ್ಟ ಬಂದಂತೆ ಶಾಲೆಗಳನ್ನು ನಡೆಸುತ್ತಿರುತ್ತಾರೆ. ಕೆಲವು ಉಪಾಧ್ಯಾಯರುಗಳು ರಾಜಕೀಯಕ್ಕೆ ಸೇರಿಕೊಂಡು ಕೆಲಸ ಮಾಡುತ್ತಿದ್ದರೆ ಮತ್ತೆ ಕೆಲವರು ಹಾಲಿನ ಸೊಸೈಟಿ ಮಾಡಿಕೊಂಡು ಬೇರೆ ಸಂಪಾದನೆ ಮಾಡುತ್ತಿರುತ್ತಾರೆ. ಅಡಿಪಾಯದಂತಿರುವ ಪ್ರಾಥಮಿಕ ಶಾಲೆಗಳೇ ಈ ರೀತಿ ನಡೆದರೆ ವಿದ್ಯಾರ್ಥಿಗಳು ಯಾವ ರೀತಿ ಮುಂದೆ ಬರುವುದಕ್ಕೆ ಅವಕಾಶವಾಗುತ್ತದೆ. ಕೆಲವು ಸ್ಕೂಲ್‌ಗಳು ಮೂರು ನಾಲ್ಕು ದಿನಗಳಾದರೂ ಸಹ ತೆಗೆಯುವುದೇ ಇಲ್ಲ. ಉಪಾಧ್ಯಾಯರುಗಳು ಟೌನ್‌ಗಳಲ್ಲಿ ಅಥವಾ ಬೆಂಗಳೂರಿನ ವಿಧಾನಸೌಧದ ಸುತ್ತಲೂ ಅದೂ ಅವರ ಇನ್‌ಸ್ಪೆಕ್ಟರ್ ಮುಂದೆಯೇ ಓಡಾಡಿಕೊಂಡಿರುತ್ತಾರೆ. ಇವರಿಗೆ ದೇಶ ಮುಂದುವರಿಯಬೇಕು, ನಮ್ಮ ಹುಡುಗರು ಮುಂದುವರಿಯಬೇಕು ಎನ್ನುವಂಥ ಅಭಿಮಾನ ಇಲ್ಲವಾಗಿದೆ. ಇವರಿಗೆ ತಿಂಗಳಿಗೆ ಸರಿಯಾಗಿ ಸಂಬಳ, ಸೀನಿಯಾರಿಟಿ ಪ್ರಕಾರ ಬಡ್ತಿ ಬಂದರೆ ಸಾಕು. ಕಡ್ಡಾಯ ಪ್ರಾಥಮಿಕ ಶಿಕ್ಷಣ ಮುಂದುವರೆಯಬೇಕಾದರೆ ಮೇಲಿನ ಅಧಿಕಾರಿಗಳ ಈ ಇನ್‌ಸ್ಪೆಕ್ಷನ್ ವಾರಕ್ಕೆ ಒಂದು ಸಾರಿಯಾದರೂ ನಡೆಯಬೇಕು. ಬಿ. ಡಿ. ಓ. ಅವರಿಗೆ ಓಡಾಡಲು ಜೀಪ್‌ಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದೇ ಒಬ್ಬ ಜಿಲ್ಲಾ ವಿದ್ಯಾಧಿಕಾರಿಯವರಿಗೆ ಏತಕ್ಕೆ ಕೊಡಬಾರದು. ವಿದ್ಯಾಭ್ಯಾಸಕ್ಕಾಗಿ ಇಷ್ಟೊಂದು ಹಣ ಖರ್ಚು ಮಾಡುವಾಗ ಇವರಿಗೂ ಒಂದು ಜೀಪ್ ಮತ್ತು ಸಾಕಷ್ಟು ಸಿಬ್ಬಂದಿಗಳನ್ನು ಕೊಟ್ಟರೆ ಎಲ್ಲಾ ಕಡೆಯಲ್ಲಿಯೂ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಜೊತೆಗೆ ಎಲ್ಲಾ ಕಡೆಗಳಲ್ಲಿಯೂ ಸಹ ಸರಿಯಾಗಿ ಶಾಲೆಗಳು ನಡೆಯುತ್ತಿವೆಯೇ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಒಂದು ವಿಜಿಲೆನ್ಸ್ ಸೆಲ್‌ನ್ನು ಮಾಡಿ ನಿಷ್ಠಾವಂತರಾದ ಅಧಿಕಾರಿಗಳನ್ನು ನೇಮಿಸಬೇಕು. ಈ ರೀತಿ ಮಾಡಿದರೆ ಸ್ಕೂಲ್‌ಗಳು ಚೆನ್ನಾಗಿ ನಡೆಯಬಹುದೆಂದು ನನಗೆ ಆಶೆಯಿದೆ. ಕೆಲವು ಸ್ಕೂಲ್‌ಗಳಲ್ಲಿ ಉಪಾಧ್ಯಾಯರುಗಳು ರಜಾ ಹೋಗುವಾಗ ರಜಾ ಚೀಟಿಯನ್ನು ಬರೆದಿಟ್ಟು ಹೋಗಿರುತ್ತಾರೆ. ಮತ್ತೆ ಕೆಲವರು ಬರೆಯುವುದೇ ಇಲ್ಲ. ವಿಜಿಲೆನ್ಸ್ ಸೆಲ್‌ನ್ನು ನೇಮಕ ಮಾಡಿದರೆ ಇದನ್ನೆಲ್ಲಾ ಕಂಡುಹಿಡಿಯುವುದಕ್ಕೆ ಅವಕಾಶವಾಗುತ್ತದೆ.

ಇನ್ನು ರಿಜಲ್ಟ್ ತೆಗೆದುಕೊಂಡರೆ ಕೆಲವು ಹೈಸ್ಕೂಲ್‌ಗಳಲ್ಲಿ ಕೇವಲ ಒಂದು ಪರ್‌ಸೆಂಟ್ ಅಥವಾ ಎರಡು ಪರ್‌ಸೆಂಟ್ ಮಾತ್ರ ಬರುತ್ತಿದೆ. ನಮ್ಮ ಕೋಲಾರದ ಹೈಸ್ಕೂಲ್‌ನಲ್ಲಿ 6 ಪರ್‌ಸೆಂಟ್ ಮಾತ್ರ ಬಂದಿದೆ. ಕೋಲಾರದ ಹೈಸ್ಕೂಲಿನಲ್ಲಿ 1,800 ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ಇದ್ದಾರೆ. ಇದರಲ್ಲಿ ಸುಮಾರು 500 ರಷ್ಟು ವಿದ್ಯಾರ್ಥಿನಿಯರೇ ಇದ್ದಾರೆ. ಸುಮಾರು 40 ಜನ ಉಪಾಧ್ಯಾಯರುಗಳು ಇದ್ದಾರೆ. ಹೆಣ್ಣು ಹುಡುಗಿಯರಿಗೇ ಒಂದು ಪ್ರತ್ಯೇಕವಾದಂಥ ಹೈಸ್ಕೂಲ್‌ನ್ನು ಮಾಡಿ ಎಂದು ಸರ್ಕಾರಕ್ಕೆ ತಿಳಿಸಿದ್ದರೂ ಸಹ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಈ ಹೈಸ್ಕೂಲಿನಲ್ಲಿರುವಂತಹ ಹೆಡ್‌ಮಾಸ್ಟರ್‌ಗೆ ಡಯಾಬಿಟಿಸ್ ಕಾಯಿಲೆ ಇರುವುದರಿಂದ ಎರಡು ದಿನ ಸ್ಕೂಲ್‌ಗೆ ಬಂದರೆ 6 ತಿಂಗಳು ಆಸ್ಪತ್ರೆಯಲ್ಲಿರುತ್ತಾರೆ. ಈಗ ಪರೀಕ್ಷೆಗಳು ಹತ್ತಿರ ಬಂದಿದ್ದರೂ ಸಹ ಕೆಲವೊಂದು ಸಬ್ಜೆಕ್ಟ್‌ಗಳ ಪಾಠಗಳು ಇನ್ನೂ ಮಾಡಿ ಮುಗಿಸಿಲ್ಲ. ಈ ರೀತಿಯಾದರೆ ವಿದ್ಯಾರ್ಥಿಗಳು ಯಾವ ರೀತಿ ಪಾಸು ಮಾಡುತ್ತಾರೆ. ನನ್ನ ಲೆಕ್ಕದಲ್ಲಿ ಈ ಸಾಲಿನಲ್ಲಿ ಎರಡು ಅಥವಾ ಮೂರು ಪರ್‌ಸೆಂಟ್ ರಿಜಲ್ಟ್ ಬರಬಹುದೆಂದು ಕಾಣುತ್ತದೆ. ಈಗ ಬೇಕಾದಷ್ಟು ಜನ ಜಾಯಿಂಟ್ ಡೈರೆಕ್ಟರ್‌ಗಳು, ಡೆಪ್ಯೂಟಿ ಡೈರೆಕ್ಟರ್‌ಗಳು, ಅಡಿಷನಲ್ ಡೈರೆಕ್ಟರ್‌ಗಳು ಇದ್ದಾರೆ. ಇವರುಗಳು ಆಗಾಗ್ಗೆ ಎಲ್ಲಾ ಹೈಸ್ಕೂಲ್‌ಗಳಿಗೂ ಸರ್‌ಪ್ರೈಸ್ ವಿಸಿಟ್ ಕೊಟ್ಟು ಅಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಕಂಡು ಹಿಡಿದು ತಪ್ಪಿತಸ್ಥ ಉಪಾಧ್ಯಾಯರುಗಳನ್ನು ಬೇರೆ ಕಡೆಗೆ ವರ್ಗ ಮಾಡಬೇಕು. ಇನ್‌ಕ್ರಿಮೆಂಟ್ ನಿಲ್ಲಿಸಬೇಕು. ಎಷ್ಟು ಪರ್‌ಸೆಂಟ್ ಆದರೂ ರಿಜಲ್ಟ್ ಬರಲಿ, ನಮ್ಮ ಸಂಬಳ ಮತ್ತು ಬಡ್ತಿ ಬಂದರೆ ಸರಿ ಎಂದು ಉಪಾಧ್ಯಾಯರುಗಳು ತಿಳಿದುಕೊಂಡಿದ್ದಾರೆ. ಇದು ಸರಿಯಲ್ಲ. ಇದರಿಂದ ನಾವು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುವ ಹಣ ನಿಜವಾಗಿಯೂ ದುರುಪಯೋಗವಾಗುತ್ತದೆಂದು ತಿಳಿಸುತ್ತೇನೆ.

4–30 P.M.

ಇನ್ನು ಒಂದೇ ಒಂದು ವಿಷಯ ಹೇಳುತ್ತೇನೆ. ಕೋಲಾರದ ಹೈಸ್ಕೂಲಿನ ವಿಷಯ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಇಲ್ಲಿಯ ಹೈಸ್ಕೂಲಿನಲ್ಲಿ ಹುಡುಗರಿಗೆ ಕುಳಿತುಕೊಳ್ಳುವುದಕ್ಕೆ ಸ್ಥಳವಿಲ್ಲ. ಇಲ್ಲಿ ವಿದ್ಯಾಭ್ಯಾಸ ಮಾಡುವ ಹೆಣ್ಣು ಮಕ್ಕಳು 500 ಜನ ಇದ್ದಾರೆ. ಈ ಸ್ಕೂಲಿನ ಕಥೆ ಕೇಳಿ ಬಿಟ್ಟರೆ

(ಶ್ರೀ ಪಿ. ವೆಂಕಟಗಿರಿಯಪ್ಪ)

ವಿದ್ಯಾಭ್ಯಾಸ ಇಲಾಖೆ ಇದೆಯೇ ? ದೇಶದಲ್ಲಿ ಇದಕ್ಕೆ ಯಾರಾದರೂ ಜವಾಬ್ದಾರರು ಇದ್ದಾರೆಯೇ ? ಎಂದು ಆಶ್ಚರ್ಯವಾಗುತ್ತದೆ. ಇದು ನಮ್ಮ ದುರ್ದೈವ. ಇಂಥ ಪರಿಸ್ಥಿತಿ ನಡೆಯದಂತೆ ಮಾಡಬೇಕು. ಸ್ಥಳಾವಕಾಶ ಸಾಕಷ್ಟು ಒದಗಿಸಬೇಕು. ಕೋಲಾರವು ಜಿಲ್ಲೆಯ ಕೇಂದ್ರವಾಗಿದೆ. ಇಲ್ಲಿ ಹೆಣ್ಣು ಮಕ್ಕಳಿಗೆ ಬೇರೆ ಒಂದು ಪ್ರೌಢ ಶಾಲೆ ಸ್ಥಾಪನೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು ಎಂದು ಹೇಳುತ್ತೇನೆ. ಪ್ರೈವೇಟ್ ಸ್ಕೂಲ್ ಮಾಡಿ ಎಂದು ಹೇಳುವುದು ಸರಿಯಲ್ಲ. ಕೆಲವು ಪ್ರೈವೇಟ್ ಸ್ಕೂಲುಗಳಿಗೆ ಗ್ರ್ಯಾಂಟ್ ಕೊಟ್ಟು ಸರಕಾರದ ಹಣ ಹಾಳು ಮಾಡುತ್ತಿದ್ದೀರಿ. ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಇದರ ಪಾಪ ನಿಮಗೆ ಬರುತ್ತದೆ. ಆದುದರಿಂದ ವಿದ್ಯಾ ಇಲಾಖೆಗೆ ಒದಗಿಸಿದ ಹಣವನ್ನು ವ್ಯವಸ್ಥಿತ ರೀತಿಯಲ್ಲಿ ಖರ್ಚು ಮಾಡುವಂತೆ ಸಚಿವರು ಆಸಕ್ತಿವಹಿಸ ಬೇಕು ಎಂದು ಸಲಹೆ ಮಾಡಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಕೆ. ಸಂಗನಗೌಡ (ಲಿಂಗಸೂಗೂರು).—ಸನ್ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ಶಿಕ್ಷಣ ಸಚಿವರು ನಮ್ಮ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಒಂದು ದೃಷ್ಟಿಯಿಂದ ನಮ್ಮ ರಾಜ್ಯ ಸರಕಾರವು ಇತರ ರಾಜ್ಯ ಸರಕಾರಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದೆ, ಶಿಕ್ಷಣ ಕ್ಷೇತ್ರದಲ್ಲಿ ಹೇಳಬೇಕಾದಂಥ ಪ್ರಗತಿ ಸಾಧಿಸಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇನೆಂದರೆ ಉಚಿತ ಪ್ರಾಥಮಿಕ ಶಿಕ್ಷಣ ಸೌಲಭ್ಯ ಒದಗಿಸಿ ಕೊಟ್ಟಿದೆ. ಹಲವಾರು ದೊಡ್ಡ ರಾಜ್ಯಗಳಾದ ಬಂಗಾಲ, ಬಿಹಾರ, ಅಸ್ಸಾಮು, ಉತ್ತರ ಪ್ರದೇಶ ರಾಜ್ಯಗಳು ಇದುವರೆಗೆ ಪ್ರಾಥಮಿಕ ಶಿಕ್ಷಣ ಉಚಿತವಾಗಿ ಕೊಡಲು ವಿಫಲವಾಗಿರುವಾಗ ನಮ್ಮ ರಾಜ್ಯ ಸರಕಾರ ಇದನ್ನು ಉಚಿತವಾಗಿ ಮಾಡಿದೆ. 1966–67 ರಿಂದ ಮಾಧ್ಯಮಿಕ ಶಿಕ್ಷಣ ಉಚಿತ ಸೌಲಭ್ಯ ಕೊಟ್ಟು ಅದನ್ನು ಜಾರಿಗೆ ತಂದಿದ್ದಾರೆ ಎಂದು ನಾವು ಹೆಮ್ಮೆ ಪಡಬೇಕಾಗಿದೆ. ಇವರು ಒಂದು ಅಸಾಧಾರಣ ಕೆಲಸ ಮಾಡಿದ್ದಾರೆ ಕಡ್ಡಾಯ ಶಿಕ್ಷಣ ಜಾರಿಗೆ ತಂದಮೇಲೆ ಇದರಲ್ಲಿ ಕ್ರಾಂತಿಯಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಕಡ್ಡಾಯ ಶಿಕ್ಷಣ ಜಾರಿಗೆ ತಂದಿದ್ದಾರೆ. ಈ ವರ್ಷ ಬಜೆಟ್ಟಿನಲ್ಲಿ ಶಿಕ್ಷಣ ಖಾತೆಗೆ 36 ಕೋಟಿಗೆ ಮೇಲ್ಪಟ್ಟು ಹಣ ಒದಗಿಸಿದ್ದರೂ ನಮ್ಮ ಹೈದರಾಬಾದ ಕರ್ನಾಟಕ ದೃಷ್ಟಿ ಯಿಂದ ನಮಗೆ ಸಾಕಷ್ಟು ಹಣ ಒದಗಿಸಿಲ್ಲ, ಒದಗಿಸಿರತಕ್ಕ ಹಣ ಬಹಳ ಕಡಿಮೆಯಾಗಿದೆ. ಅರೇಳು ಕೋಟಿ ಒದಗಿಸಿರುವುದು ಅಷ್ಟೇನೂ ಹೆಚ್ಚಲ್ಲ ಎಂದು ವಿಷಾದದಿಂದ ಹೇಳಬಯಸುತ್ತೇನೆ. ವಿಶ್ವ ವಿದ್ಯಾನಿಲಯಕ್ಕೆ ಕೊಡಬೇಕಾದ ಗ್ರಾಂಟು ಹಣದ ದೃಷ್ಟಿಯಿಂದ ನೋಡಿದರೂ ಕರ್ನಾಟಕ ಯುನಿವರ್ಸಿಟಿಗೆ 37 ಲಕ್ಷ ರೂಪಾಯಿ ಕೊಟ್ಟಿರುವುದು ಬಹಳ ಕಡಿಮೆ. ಬೆಂಗಳೂರು ಮೈಸೂರು ಯುನಿವರ್ಸಿಟಿ 74 ಲಕ್ಷ ರೂಪಾಯಿ ಗ್ರಾಂಟ ಮೂಲಕ ಕೊಡತಕ್ಕಂಥಾದ್ದು ಇದನ್ನು ಸರಕಾರ ಗಮನಕ್ಕೆ ತಗೆದುಕೊಳ್ಳಬೇಕಾದ ವಿಷಯ ಎಂದು ಹೇಳುತ್ತೇನೆ.

ಪ್ರಾಥಮಿಕ ಶಾಲೆಗಳಿಗೆ ಕಾಲೇಜ ಶಿಕ್ಷಣಕ್ಕೆ ಒದಗಿಸಿದ ಹಣ ನೋಡಿದರೆ ಹೈದರಾಬಾದ ಕರ್ನಾಟಕಕ್ಕೆ ಕೊಡತಕ್ಕಂಥ ಹಣ ಬಹಳ ಕಡಿಮೆಯಾಗಿದೆ ಎಂದು ವ್ಯಥೆಯಿಂದ ಹೇಳುತ್ತೇನೆ. ಹೈದರಾಬಾದ ಕರ್ನಾಟಕ ಪ್ರದೇಶವಾದ ಬೀದರ್, ಗುಲಬರ್ಗ, ರಾಯಚೂರು ಜಿಲ್ಲೆಗಳನ್ನು ಹಿಂದೆ ಇದ್ದ ಆಗಿನ ಸರಕಾರ ಕಡೆಗಣಿಸಿದೆ, ಹಾಗು ಶಿಕ್ಷಣ ಪ್ರಗತಿ ಸಾಧಿಸಿಲ್ಲ. ನಮ್ಮ ಈಗಿನ ಸರಕಾರ ಕೂಡ ಅದೇ ರೀತಿ ಮಲತಾಯಿ ಧೋರಣೆ ಅನುಸರಿಸಿ ಅನುಕೂಲ ಮಾಡಿ ಕೊಡದೇ ಇದ್ದರೆ ಈ ಮೂರು ಜಿಲ್ಲೆಗಳು ಮುಂದೆ ಬರಲಿಕ್ಕೆ ಆಗುವುದಿಲ್ಲ. ಬಜೆಟ್ಟಿನಲ್ಲಿ ಈ ಮೂರು ಜಿಲ್ಲೆಗಳಿಗೆ ಹೆಚ್ಚು ಹಣ ಒದಗಿಸಿ ಇತರ ಜಿಲ್ಲೆಗಳ ಮಟ್ಟಕ್ಕೆ ಬರುವಂತೆ ಮಾಡಬೇಕು ಹಾಗು ಅದುವರೆಗೆ ಹೆಚ್ಚು ಹಣ ಒದಗಿಸಬೇಕು ಎಂದು ಈ ಪ್ರಸಂಗದಲ್ಲಿ ಇದರ ಕಡೆ ಸರಕಾರದ ಗಮನ ಸೆಳೆಯ ಬಯಸುತ್ತೇನೆ.

ಇಂದು ಪ್ರಾಥಮಿಕ ಶಾಲೆಗಳೇ ಇರಲಿ, ಮಾಧ್ಯಮಿಕ ಶಾಲೆಗಳೇ ಇರಲಿ ಕಾಲೇಜುಗಳೇ ಇರಲಿ ಅವುಗಳ ಸಂಖ್ಯೆ ಬೆಳೆಯುತ್ತಿದೆ. ಹೈದರಾಬಾದ ಕರ್ನಾಟಕದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಈ ಸಂಖ್ಯೆ ಇಮ್ಮಡಿ ಮುಮ್ಮಡಿಯಾಗಿದೆ ಎಂದು ಹೇಳುತ್ತೇನೆ. ಹೈದರಾಬಾದ ಕರ್ನಾಟಕದಲ್ಲಿ ಒಂದು ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂಬ ಅಗತ್ಯದ ಬೇಡಿಕೆಯನ್ನು ಪೂರೈಸಲು ಪ್ರಯತ್ನ ಮಾಡಬೇಕು. ಮುಂಬಾಯಿ ಕರ್ನಾಟಕ ಪ್ರದೇಶಕ್ಕೆ ಕರ್ನಾಟಕ ಯುನಿವರ್ಸಿಟಿ ಇದೆ, ಇತ್ತ ಕಡೆ ಬೆಂಗಳೂರು ಯುನಿವರ್ಸಿಟಿ ಇದೆ, ಮೈಸೂರು ಯುನಿವರ್ಸಿಟಿ ಇದೆ. ಹೈದರಾಬಾದ ಕರ್ನಾಟಕ ಪ್ರದೇಶ ಹಿಂದುಳಿದ ಪ್ರದೇಶವಾಗಿದೆ. ಹಾಗು ಶಾಲೆಗಳ ಸಂಖ್ಯೆ ಬೆಳೆಯುತ್ತಿದೆ. ಆದುದರಿಂದ ಒಂದು ವಿಶ್ವವಿದ್ಯಾನಿಲಯ ಸ್ಥಾಪಿಸುವುದು ಯೋಗ್ಯವಾಗಿದೆ ಎಂದು ತಿಳಿಸುತ್ತೇನೆ.

ಇನ್ನು ಆಡಳಿತದ ದೃಷ್ಟಿಯಿಂದ ಮತ್ತು ಶಿಕ್ಷಣ ಅಭ್ಯಾಸ ಕ್ರಮದ ಬಗ್ಗೆ ಒಂದು ವಿಷಯ ಹೇಳ ಬಯಸುತ್ತೇನೆ. ಹೈದರಾಬಾದ ಕರ್ನಾಟಕದಲ್ಲಿ ಆಡಳಿತ ವಿಷಯದ ಕ್ರಮವೇ ಬೇರೆ ಬಳ್ಳಾರಿ ಜಿಲ್ಲೆಯಲ್ಲಿಯ ಕ್ರಮವೇ ಬೇರೆ ಮೈಸೂರು ಬೆಂಗಳೂರುಗಳಲ್ಲಿ ಅನುಸರಿಸುವ ಪದ್ಧತಿಯ ರೀತಿಯೇ ಬೇರೆಯಾಗಿದೆ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಸ್ಕೂಲು ಬೋರ್ಡ್ ಮುಖಾಂತರ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನು ನಡೆಸುತ್ತಿದ್ದಾರೆ. ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಇದನ್ನು ಹೆಚ್ಚಾಗಿ ಸರಕಾರದವರು ನಡೆಸುತ್ತಿದ್ದಾರೆ. ಇದಲ್ಲದೆ ಖಾಸಗಿ ಸಂಸ್ಥೆಗಳು ತಮ್ಮ ಮುಖಾಂತರ ಸ್ಕೂಲ್ಸ್ ನಡೆಸುತ್ತಿದ್ದಾರೆ. ಬಳ್ಳಾರಿಯ ಕೆಲವೊಂದು ತಾಲ್ಲೂಕುಗಳಲ್ಲಿ ಖಾಸಗಿ ಸಂಸ್ಥೆಗಳು ಸ್ಕೂಲ್ಸ್ ನಡೆಸುತ್ತವೆ. ಮೈಸೂರು ಬೆಂಗಳೂರು ಪ್ರದೇಶದಲ್ಲಿ ನೇರವಾಗಿ ಶಾಲೆ ಕಾಲೇಜುಗಳನ್ನು ಸರಕಾರವೇ ನಡೆಸತಕ್ಕಂಥ ಪದ್ಧತಿ ಇದೆ. ಹತ್ತು ಹನ್ನೆರಡು ವರ್ಷ ಗಳಾದರೂ ಕೂಡ ಆಡಳಿತ ಮತ್ತು ಅಭ್ಯಾಸ ಕ್ರಮದಲ್ಲಿ ಏಕರೂಪತೆ ಕಂಡುಕೊಂಡಿಲ್ಲ ಎಂದು ವಿಷಾದದಿಂದ ಹೇಳಬಯಸುತ್ತೇನೆ. ಈ ದೃಷ್ಟಿಯಿಂದ ರಾಜ್ಯಾದ್ಯಂತ ಒಂದೇರೀತಿಯ ಆಡಳಿತ ವ್ಯವಸ್ಥೆಯನ್ನೂ ಏಕರೂಪತೆಯನ್ನು ಜಾರಿಗೆ ತರಬೇಕು. ಈ ರೀತಿ ಏಕರೂಪತೆ ಜಾರಿಗೆ ತಂದರೆ ಪಾಲಕರಿಗೂ, ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಅನುಕೂಲವಾಗುತ್ತದೆ. ಬೆಳಗಾಂನಲ್ಲಿದ್ದ ಒಬ್ಬ ಅಧಿಕಾರಿಯು ವರ್ಷದ ಮಧ್ಯದಲ್ಲಿ ಬೇರೆ ಕಡೆಗೆ ಟ್ರಾನ್ಸಫರ್ ಆದರೆ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಕ್ಕೆ ತೊಂದರೆಯಾಗುತ್ತದೆ. ಮಕ್ಕಳ ಶಿಕ್ಷಣಕ್ಕಾಗಿ ಬೆಳಗಾಂನಲ್ಲಿ ಮನೆ ಇಡುವುದು ತಾವು ಒಬ್ಬರೇ ಬೆಂಗಳೂರಿನಲ್ಲಿ ಇರುವ ಪ್ರಸಂಗ ಬರುತ್ತದೆ. ಇಂಥ ನೂರಾರು ಉದಾಹರಣೆ ಗಳಿವೆ. ಈ ದೃಷ್ಟಿಯಿಂದ ರಾಜ್ಯಾದ್ಯಂತ ಅಭ್ಯಾಸ ಕ್ರಮದಲ್ಲಿ ಯುನಿಫಾರ್ಮ ಸಿಲ್ಲೆಬಸ್ಸ ಮಾಡ ಬೇಕು ಮತ್ತು ಆಡಳಿತ ಒಂದೇ ರೀತಿ ಮಾಡಬೇಕು. ಮಾನ್ಯ ಸಚಿವರು ಸ್ಕೂಲ್ ಬೋರ್ಡ್ ರಚನೆಯ ವಿಚಾರ ಹೇಳಿದರು, ಬಹಳ ಸಂತೋಷದ ಸಂಗತಿ. ಅದನ್ನು ವಿಳಂಬ ಮಾಡದೆ ತೀವ್ರ ಜಾರಿಗೆ ತರಬೇಕು ಎಂದು ತಿಳಿಸುತ್ತೇನೆ.

ಇನ್ನು ಶಾಲೆಗಳು ಹೆಚ್ಚಿದ್ದು ವಿದ್ಯಾರ್ಥಿಗಳ ಸಂಖ್ಯೆ ಬೆಳೆಯುತ್ತಿದೆ. ಆದರೆ ಶಾಲಾ ತನಿಖೆ ಸಿಬ್ಬಂದಿ ಮಾತ್ರ ಅಷ್ಟೇ ಇದೆ. ಆದುದರಿಂದ ಪರಿಶೀಲನೆ ಮಾಡತಕ್ಕ ಸಿಬ್ಬಂದಿ ಹೆಚ್ಚು ಮಾಡಬೇಕು. 50 ಶಾಲೆಗಳಿಗೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ಸರ್ಪರೈಜ್ ವಿಜಿಟ್ಸ ಮಾಡುವ ಕ್ರಮ ಜಾರಿಗೆ ತಂದರೆ ಆಡಳಿದ ಪದ್ಧತಿ ಮತ್ತು ಶಿಕ್ಷಣದ ಮಟ್ಟ ಸಾಧಿಸಲು ಅನುಕೂಲವಾಗುತ್ತದೆ ಎಂದು ತಿಳಿಸುತ್ತೇನೆ.

ಹೈದರಾಬಾದ ಕರ್ನಾಟಕದ ಶಿಕ್ಷಕರ ಪತಿಯಿಂದ ಒಂದು ವಿಷಯ ಸರಕಾರದ ಗಮನಕ್ಕೆ ತರಬಯಸುತ್ತೇನೆ. ರಾಜ್ಯ ಪುನರ್ವಿಂಗಡಣೆಯಾದ ಮೇಲೆ ಶಿಕ್ಷಕರ ಸೀನಿಯಾರಿಟಿ ಪಟ್ಟಿ ತಯಾರ್ಮಾಡುವುದರಲ್ಲಿ ಬಹಳ ಅನ್ಯಾಯವಾಗಿದೆ. ಇದಕ್ಕಾಗಿ ಕೆಲವರು ಹೈಕೋರ್ಟಿನಲ್ಲಿ ರಿಟ್ ಅರ್ಜಿ ಹಾಕಿ ಅದರ ಮೂಲಕ ಕಾರವಾಯಿ ನಡೆಸಿದ್ದಾರೆ. ಇದು ಪರಿಶೀಲನೆಯಲ್ಲಿ ಇದ್ದುದರಿಂದ ಅನೇಕ ಶಿಕ್ಷಕರ ಕೇಸು ವಿಲೇವಾರಿಯಾಗಿಲ್ಲ, ಸರಕಾರ ನಿರ್ಣಯ ತೆಗೆದುಕೊಂಡಿಲ್ಲ ಹಾಗೆ ಉಳಿದಿವೆ. ಕೆಲವು ಪ್ರಸಂಗದಲ್ಲಿ ಎರಡು ಮೂರು ವಿಷಯಗಳು ನನ್ನ ಕಿವಿಗೆ ಬಿದ್ದಾಗ ಅದನ್ನು ಶಿಕ್ಷಣ ಇಲಾಖೆಯ ಸೆಕ್ರೆಟರಿಯವರಿಗೆ ತಿಳಿಸುವುದಕ್ಕೆ ನಾನು ಹೋದೆನು. ಇದನ್ನು ಅವರ ಗಮನಕ್ಕೆ ತಂದಾಗ್ಗೆ ಶಿಕ್ಷಣ ಇಲಾಖೆಯ ಸೆಕ್ರೆಟರಿಯವರು ಸಹಾನುಭೂತಿಯಿಂದ ನೋಡುವುದಾಗಿಯೂ ಯೋಗ್ಯ ಪರಿಹಾರ ಕೊಡುವುದಾಗಿಯೂ ಭರವಸೆ ಕೊಟ್ಟರು. ಆದರೆ ಹಿಂದಿನಿಂದ ಆಮೇಲೆ ಒಂದು ಆರ್ಡರ್ ತೆಗೆದು ಆ ಶಿಕ್ಷಕರ ಮೇಲೆ ಡಿಸಿಪ್ಲನರಿ ಆಕ್ಷನ್ ಏತಕ್ಕೆ ತೆಗೆದುಕೊಳ್ಳಬಾರದು, ಇವರು ಪೊಲಿಟಿಕಲ್ ಪ್ರೆಶರ್ ಏತಕ್ಕೆ ಉಪಯೋಗ ಮಾಡಿದರು ಎಂದು ಕೇಳಿರುವುದು ತಿಳಿದು ಬಂದಿದೆ. ಇದು ಬಹಳ ವಿಷಾದದ ಸಂಗತಿ. ಕೆಳಗಿನ ಅಧಿಕಾರಿಗಳು ಮೇಲ್ಪಟ್ಟ ಅಧಿಕಾರಿಗಳಲ್ಲಿ ಬಂದು ತಮ್ಮ ದೂರು ಗಳನ್ನು, ಕುಂದುಕೊರತೆಗಳನ್ನು ಹೇಳುವ ಒಂದುಪರಿಪಾಠವನ್ನು ತಪ್ಪಿಸುವ ವಿಚಾರವನ್ನು ಮಾಡ ಬಾರದು. ಶಿಕ್ಷಣ ಖಾತೆಯ ಸೆಕ್ರೆಟರಿಯವರು ಈ ಬಗ್ಗೆ ವಿಚಾರ ಮಾಡಬೇಕು ಮತ್ತು ಇನ್ನು ಮುಂದೆ ಇಂಥ ಸಾಹಸಕ್ಕೆ ಇಳಿಯಬಾರದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶಿಕ್ಷಕರಿಗೆ ತಮ್ಮ ಕೆಲಸಗಳನ್ನು ಬಿಟ್ಟು, ಸಾಕಷ್ಟು ಹಣ ಸುರಿದು, ಹಿಂದುಗಡೆ ಕೋರ್ಟಿನಲ್ಲಿ ಹಣ ಸುರಿದು ಯಶಸ್ವಿಯಾಗಿ ಸರ್ಕಾರದಿಂದ ಹಣವನ್ನು ಪಡೆಯುವ ಪದ್ಧತಿಯನ್ನು ತಪ್ಪಿಸಲು ನಮ್ಮ ಸರ್ಕಾರ ಪ್ರಯತ್ನ ಮಾಡಬೇಕು ಎಂದು ಸಲಹೆಯನ್ನು ಕೊಡಬಯಸುತ್ತೇನೆ.

† Sri G. CHANDRAKANTH (Bidar).—Hon. Speaker, while opposing the demands placed before this House by the hon. Minister for Education to the tune of Rs. 36,17,27,200, I would like to offer certain criticisms of my own.

(SRI G. CHANDRAKANTH)

Sir, we are going to spend Rs. 36 crores and odd. Before we permit the Government to spend it, it is better we review the past expenditure. When we look into the past expenditure for education the fruits reaped from it are rather very bleak. In order to see that we get the return from the money we spend, it is better we bring about a fundamental and radical change in our educational policies, which are, at present, faulty and defective. Due to the blemishes in the educational policy of the Government, to-day even degree holders and diploma holders in technical education are becoming unemployed. As a matter of fact, time was there when we badly needed technicians. But within a short period of five or ten years, we find that they are in excess. What does this go to show? This is because there is no bearing between the economic policies and educational policies. As a matter of fact, if both the policies had gone hand in hand this problem would not have been faced by us.

Secondly, we ought to know that we are producing nothing but clerks. This is what Acharya J. B. Kripalini has also told on the floor of the Parliament. I would leave it at that.

One more important thing I would like to tell the Government. And that is, the Teachers in Chikamagalur area are undergoing great harassment from the D. E.O. there. One Mr. Mulla Khan is the District Educational Officer in Chickmaglur. Immediately after the communal riots broke out there, he went on visiting the villages. Even now, he is going on with his visits to the villages. Wherever he goes, the first question he puts to the teacher is, to which caste does he belong. After ascertaining it, he would commence his harassment. I wanted to bring to the notice of the hon. Minister concerned the fear he has struck in the minds of a section of the Teachers through a representation but later I thought it was better to bring it to the notice of the Government on the floor of this House. In spite of the fact that the examinations are hardly ten days ahead he has indiscriminately ordered transfers of Teachers. In one village called Belwadi, there is one Teacher by name Mr. K. V. Sitharam Sastry, against whom there are no complaints. Still he has been transferred from that place, particularly at a juncture when examinations are going on. In another village by name Narsipur, a couple were working. Both have been separated and transferred to different places, which is quite against rules. In yet another village by name Budikrubarhalli, he has committed something, which I feel delicate to reveal on the floor of this hon. House. I do not wish to go into the further details of the misconduct and misdeeds of this D.E.O. I hope the hon. Education Minister will take serious note of them and put an end to his bad activities.

The report of the Education Commission was received in the year 1965. We find that several States excepting the State of Mysore,

have already implemented the recommendations given by the Educa- tion Commission in its report. This Report of the Education Commission envisages policies and programmes with regard to syllabus, duration of courses, qualifications of teachers and pay structure. None of its recommendations has been followed by this Government. Whenever there was a representation or a deputation to remind this aspect to the hon. Education Minister he would give some evasive replies. One of the arguments advanced by the Minister is that this is confined only to the Plan period and that Government will have to bear the burden involved in implementing those recommendations. If this is his stock argument, those state of affairs apply with equal force to the other States also, which have accepted the recommendations of the Education Commission. When other States are able to implement their recommendations, why should we also not do ?

When we go to the College level, there are two kinds of colleges ; one run by the Government and the other run by private organisations. Again here, we find disparities in pay structure, promotions, etc., between the Government Colleges and others. With regard to promotions and pay-scales, in the Government Degree Colleges, the C. C. A. Rules are followed. The same C. C. A. Rules are not followed in the institutions run by private organisations. This is nothing but social disparity, inequality and what not.

One more problem which agitating the minds of the people at large, is the language for medium of instruction. Personally, I am of the opinion that we should not stick to the three language formula. On the contrary, we should adopt the regional languages as medium of instructions up to the higher Secondary level. And, at the same time, we must develop the link language, Hindi. There is one school of thought that says that Hindi is not fully developed, and therefore, we cannot make this as our national language. I am one of those who does not agree with that opinion. Unless we switch on to Hindi and use it, we cannot say that it has not developed. For example, in the erstwhile Hyderabad State, even during the time of the Nizam, education was being imparted through Urdu right up to the University level. Even technical education was given in Urdu. Even the High Court used to pronounce judgement in Urdu. When a small State like Hyderabad could teach all subjects in Urdu even in colleges, decades ago, I do not know why we cannot do it. It is nothing but our laziness.

Secondly in an autonomous body like the university the politicians should have least interference. But as a matter of fact we see many of our ministers interfering in the day to day affairs. I being a Senate member attended three meetings of the university wherein bitter criticisms were made but nothing came out from the Vice-Chancellor. Probably he had been made a prey to the presures brought to bear on him. In the day today affairs of making appointments, we find there is a lot of irregularities and casteism and all sorts of tardy things are going on which should be stopped immediately. For the

(SRI G. CHANDRAKANTH)

appointment of professor in the faculty of geology applications were called for and several persons were interviewed. But incapable and persons who have no merit, have been appointed. In the case of Sri M. G. Chakrapani Naidu, he was one of the applicants who had put in about 28 years' service.

Mr. CHAIRMAN.—It is not fair to mention anybody's name.

Sri G. CHANDRAKANTH.—I am quoting from the authentic report. He had 21 years teaching experience. As against this one Dr. C. Naganna has been appointed. Compared to the experience of the previous gentleman, this person had put in about 15 years of experience and he has 31 publications to his credit. As against this gentleman the previous man is entertained and such irregularities are going on, and I hope it will soon be put an end to.

Lastly, I wish to say that when compared to other areas of the Mysore State, a great injustice has been done to Hyderabad Karnatak area. As a matter of fact we should have got larger amounts than what we are spending there now. Only six crores have been provided.

Mr. CHAIRMAN.—Smt. Nagamma will speak.

ಶ್ರೀಮತಿ ನಾಗಮ್ಮ (ಕಲಮಾಲ).—ಮಾನ್ಯ ಅಧ್ಯಕ್ಷರೇ, ವಿದ್ಯಾ ಇಲಾಖೆಯ ಬೇಡಿಕೆಯ ಮೇಲೆ ಒಂದೆರಡು ಮಾತುಗಳನ್ನಾಡಬೇಕೆಂದು ನಾನು ಬಯಸುತ್ತೇನೆ. ನಮ್ಮ ರಾಯಚೂರು ಡಿಸ್ಟ್ರಿಕ್ಟ್, ಬಹಳ ಹಿಂದುಳಿದ ಡಿಸ್ಟ್ರಿಕ್ಟ್, ಅಲ್ಲಿ ಇದುವರೆಗೆ ಕಟ್ಟಡಗಳಾಗಿಲ್ಲ ಹೊಸ ಕಟ್ಟಡಗಳಾಗದೆ ಇರುವುದರಿಂದ ಬಾಡಿಗೆಯ ಮನೆಗಳಲ್ಲಿ ಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಆದುದರಿಂದ ಅಲ್ಲಿ ಕಟ್ಟಡಗಳನ್ನು ಜಾಗ್ರತೆ ಕಟ್ಟಿಸಬೇಕು ಎಂದು ಹೇಳುತ್ತೇನೆ. ಅಲ್ಲಿನ ಜನರು ನಮ್ಮ ಸ್ವರಾಜ್ಯ ಬಂದಾಗಿನಿಂದ ಅಲ್ಲೇನೂ ಆಗಿಲ್ಲವೆಂದು ಹೇಳುತ್ತಿದ್ದಾರೆ, ಬೇಕಾದಷ್ಟು ಕೆಲಸಗಳಾಗಿವೆ. ಆದರೆ ಇನ್ನೂ ಹೆಚ್ಚು ಕೆಲಸಗಳಾಗಬೇಕು ಎಂದು ಮನವಿಮಾಡುತ್ತೇನೆ. ಏಕೆಂದರೆ ಹಳ್ಳಿಗಳಲ್ಲಿ ಇನ್ನೂ ಸಾಕಾದಷ್ಟು ಕಟ್ಟಡಗಳಾಗಿಲ್ಲ, ಶಾಲೆಗಳಿಗೆ ಕಟ್ಟಡಗಳಿಲ್ಲ. ಇದರ ಸಲುವಾಗಿ ಕಟ್ಟಡಗಳನ್ನು ಕಟ್ಟಿಸಬೇಕೆಂದು ಸಲಹೆಮಾಡುತ್ತೇನೆ. ಕಟ್ಟಡಗಳಿಲ್ಲದಿರುವುದರಿಂದ ರಾಯಚೂರು ಜಿಲ್ಲೆಯಲ್ಲಿ ಶಾಲೆಗಳೆಲ್ಲಾ ಬಾಡಿಗೆ ಮನೆಗಳಲ್ಲಿವೆ, ಗುಡಿಸಲುಗಳಲ್ಲಿವೆ. ಇದುವರೆವಿಗೂ ಸರಕಾರಕ್ಕೆ ಅಂತಃಕರಣ ಬಂದಿಲ್ಲ. ಹೈದರಾಬಾದು ಕರ್ಣಾಟಕ ಬಹಳ ಹಿಂದುಳಿದಿದೆ. ಅಲ್ಲಿ ಏನೂ ಸೌಕರ್ಯವಿರಲಿಲ್ಲ, ಸ್ವರಾಜ್ಯ ಬಂದಮೇಲೆ ನಾವು ಸ್ವಲ್ಪ ಮುಂದೆ ಬರುತ್ತಿದ್ದೇವೆ. ಅದನ್ನು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ, ಸಾಕಷ್ಟು ಆಗಿದೆ, ಇನ್ನೂ ಮುಂದೆ ಆಗಬೇಕು ಎಂದು ಮನವಿಮಾಡುತ್ತೇನೆ ಹಳ್ಳಿಗಳಲ್ಲಿ ಆಗಾಗ್ಯೆ ಹೋಗಿ ಇನ್‌ಸ್ಪೆಕ್‌ಷನ್ ಮಾಡಿ ಉಪಾಧ್ಯಾಯರು ಕಾಲಕ್ಕೆ ಸರಿಯಾಗಿ ಹೋಗಿ ಚೆನ್ನಾಗಿ ಪಾಠ ಮಾಡುವರೇ ಇಲ್ಲವೇ ಎಂಬುದನ್ನು ನೋಡಿ ಸರಿಯಾಗಿಲ್ಲದಿದ್ದರೆ ಕ್ರಮ ತೆಗೆದುಕೊಂಡು ಸರಿಪಡಿಸಬೇಕು. ಪೇಟೆಗಳಲ್ಲಿ, ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಹೋಗಿ ನೋಡುತ್ತಾರೆ, ಹಳ್ಳಿಗಳಲ್ಲಿ ಹೋಗಿ ನೋಡುವುದು ಕಡಿಮೆ. ಹಳ್ಳಿಗಳಲ್ಲಿರುವವರನ್ನು 3 ವರ್ಷಗಳಿಗೊಂದು ಸಲ ವರ್ಗ ಮಾಡಿ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಹಾಕಬೇಕು. ಏಕೆಂದರೆ ಹಳ್ಳಿಗಳಲ್ಲಿ ಅವರ ಮನಸ್ಸು ನಿಲ್ಲುವುದಿಲ್ಲ, ಹಳ್ಳಿಗಳಲ್ಲಿ ಸೌಲಭ್ಯಗಳಿರುವುದಿಲ್ಲ. 10-15 ವರ್ಷ ಪೇಟೆಗಳಲ್ಲಿ ಕೆಲವರಿರುತ್ತಾರೆ, ಏಕೆಂದರೆ ಅಲ್ಲಿ ಬೇಕಾದ ಅನುಕೂಲಗಳಿರುತ್ತವೆ, ಅವರು ಹಳ್ಳಿಗಳಿಗೆ ಹೋಗಲು ಇಷ್ಟಪಡುವುದಿಲ್ಲ ಹಳ್ಳಿಗಳಲ್ಲಿ ವಾಸಕ್ಕೆ ಮನೆ ಸಿಕ್ಕುವುದಿಲ್ಲ. ಆದರ ಸಲುವಾಗಿ ಹಳ್ಳಿಗಳಲ್ಲಿ ಸರಕಾರದವರು ಕಟ್ಟಡಗಳನ್ನು ಕಟ್ಟಿಸಬೇಕು. ಪೇಟೆಗಳಲ್ಲಿ, ಜಿಲ್ಲೆಗಳಲ್ಲಿ, ಮೈಸೂರು-ಬೆಂಗಳೂರುಗಳಲ್ಲಿ ಬಂಗಲೆಗಳನ್ನು ಕಟ್ಟಿಸುತ್ತಾರೆ, ಹಳ್ಳಿಗಳಲ್ಲಿ ಕಟ್ಟಿಸುವುದಿಲ್ಲ. ಆದುದರಿಂದ ಉಪಾಧ್ಯಾಯರು ಹಳ್ಳಿಗಳಿಗೆ ಹೋದರೆ ವನವಾಸವಾಗುತ್ತದೆ ಅಲ್ಲಿ ಗುಡಿಸಲು ಸಹ ಸಿಕ್ಕುವುದಿಲ್ಲ. ಸಣ್ಣ ಸಣ್ಣ ಹಳ್ಳಿಗಳಲ್ಲಿ ಬಹಳ ತೊಂದರೆಯಿದೆ, ಅದರ ಸಲುವಾಗಿ ಅವರಿಗೆ ಕಟ್ಟಡ ಕಟ್ಟಿಸಬೇಕು ಎಂದು ಪದೇ ಪದೇ ಹೇಳುತ್ತಿದ್ದೇವೆ. ಹೈದರಾಬಾದು

ಕರ್ನಾಟಕ ಅದರಲ್ಲೂ ರಾಯಚೂರು ಜಿಲ್ಲೆ ಬಡತನದ ಪ್ರದೇಶ, ನಮ್ಮ ಭಾಗದ 3 ಜಿಲ್ಲೆಗಳೂ ಬಹಳ ಹಿಂದುಳಿದಿವೆ, ಅದರ ಸಲುವಾಗಿ ಈ ಭಾಗಕ್ಕೆ ಹೆಚ್ಚು ಗಮನ ಕೊಡಬೇಕೆಂದು ಪದೇಪದೇ ಬೇಡುತ್ತಿದ್ದೇನೆ. ಈ ವಿಚಾರ ಎಲ್ಲರಿಗೂ ತಿಳಿದಿವೆ, ಅಧಿಕಾರಿಗಳಿಗೂ ಗೊತ್ತಿದೆ, ನಿಜವಾಗಿಯೂ ಹೈದರಾಬಾದು ಕರ್ನಾಟಕ ಹಿಂದುಳಿದಿದೆಯೆಂಬುದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ರಾಯಚೂರು ಜಿಲ್ಲೆಯಲ್ಲಿ ಹೈಸ್ಕೂಲು ಕಟ್ಟಡ ಆಗಬೇಕು, ತಾಲ್ಲೂಕುಗಳಲ್ಲಿ ಹೈಸ್ಕೂಲಾಗಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಮನವಿಮಾಡುತ್ತೇನೆ.

ಇನ್ನೊಂದು ವಿಚಾರ. ಈಗ 40 ಮಕ್ಕಳಿದ್ದರೂ ಒಬ್ಬರೇ ಉಪಾಧ್ಯಾಯರು 50 ಮಕ್ಕಳಿಗೂ ಒಬ್ಬರೇ ಉಪಾಧ್ಯಾಯರು ಇದ್ದಾರೆ. ಒಬ್ಬರು ಸಾಲದು, ಇನ್ನೊಬ್ಬ ಉಪಾಧ್ಯಾಯರನ್ನು ಕೊಡಬೇಕು ಎಂದು ಮನವಿಮಾಡುತ್ತೇನೆ. 40–50 ಮಕ್ಕಳನ್ನು ಒಬ್ಬರಿಗೆ ವಹಿಸಿದರೆ ಅವರು ಪಾಠ ಸರಿಯಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಮಕ್ಕಳು ಚೆನ್ನಾಗಿ ಕಲಿಯುವುದಕ್ಕೂ ಸಾಧ್ಯವಿಲ್ಲ. ಇದರ ಸಲುವಾಗಿ ಇನ್ನೊಬ್ಬ ಉಪಾಧ್ಯಾಯರನ್ನು ಕೊಡಬೇಕು ಎಂದು ಮನವಿಮಾಡುತ್ತೇನೆ. ರಾಯಚೂರು ಜಿಲ್ಲೆಯಲ್ಲಿ ಕಟ್ಟಡ ಇಲ್ಲದೆ ಕುರಿಗಳನ್ನು ಕೂಡುವಂತೆ ಗುಡಿಸಲುಗಳಲ್ಲಿ ಮತ್ತು ಸಣ್ಣ ಕಟ್ಟಡಗಳಲ್ಲಿ ಹೆಚ್ಚು ಮಕ್ಕಳನ್ನು ತುಂಬಿ ಪಾಠ ಹೇಳುತ್ತಾರೆ. ಪರಿಸ್ಥಿತಿ ಹೀಗಿದೆ. ನಮ್ಮ ಜಿಲ್ಲೆಯಲ್ಲಿ ಬಾಡಿಗೆ ಮನೆಗಳಲ್ಲಿ ನಡೆಯುವಾಗ ಸ್ಥಳ ಸಾಲದೆ ಕುರಿಗಳಂತೆ ಮಕ್ಕಳನ್ನು ಕೂಡಿಹಾಕಿ ಓದಿಸುತ್ತಾರೆ. ಇದರ ಸಲುವಾಗಿ ಹೆಚ್ಚು ಖರ್ಚುಮಾಡಿ ಕಟ್ಟಡ ಮಾಡಬೇಕೆಂದು ಪದೇಪದೇ ಹೇಳುತ್ತಿದ್ದೇವೆ. ಹಿಂದೆ ಮಂತ್ರಿಗಳು ನಮ್ಮ ಕಡೆ ಬಂದು ಫೌಂಡೇಷನ್ ಹಾಕಿ ಬಂದಿರುವ ಕಡೆ ಇದುವರೆಗೂ ಕಟ್ಟಡವೇ ಆಗಿಲ್ಲ. ಇದರ ಸಲುವಾಗಿ ಹೇಳುವುದು ನಮ್ಮ ಸರಕಾರ ಬೇಕಾದಷ್ಟು ಕೆಲಸ ಮಾಡಿದೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ಇನ್ನು ಹೆಚ್ಚು ಸೌಕರ್ಯ ಒದಗಿಸಬೇಕಾಗಿದೆ.

ನಮ್ಮ ಉಪಾಧ್ಯಾಯರು ಕೆಲವರಿಗೆ ಇನ್ನೂ ಇನ್‌ಕ್ರಿಮೆಂಟ್ ಕೊಟ್ಟಿದ್ದಾರೋ ಇಲ್ಲವೋ ತಿಳಿಯದು. ಕೊಟ್ಟಿಲ್ಲದಿದ್ದರೆ ಕೊಡಬೇಕೆಂದು ಮನವಿಮಾಡುತ್ತೇನೆ. ಬೇಕಾದರೆ ಉಪಾಧ್ಯಾಯರಿಂದ ಚೆನ್ನಾಗಿ ಕೆಲಸ ತೆಗೆದುಕೊಳ್ಳಿ, ಅವರಿಗೆ ಸಂಬಳ ಹೆಚ್ಚುಮಾಡಿ ಚೆನ್ನಾಗಿ ಕೆಲಸ ಮಾಡಿಸಿ. ಆಗಾಗ್ಯೆ ಹೋಗಿ ಹಳ್ಳಿಗಳು ಮತ್ತು ತಾಲ್ಲೂಕುಗಳಲ್ಲಿ ಇನ್‌ಸ್ಪೆಕ್‌ಷನ್ ಮಾಡಿ, ಚೆನ್ನಾಗಿ ಪಾಠ ಹೇಳುವರೇ, ಇಲ್ಲವೇ ಎಂದು ನೋಡಿ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಮನವಿಮಾಡುತ್ತೇನೆ.

5.00. P.M.

ಏನಿದ್ದರೂ ನೋಡೋಣ ಎಂದರೆ, ಅದೆಲ್ಲಾ ಆಗೋದಿಲ್ಲಾ ಮಕ್ಕಳು ಕಲಿಯುವುದಿಲ್ಲ ಬಡತನದ ದೇಶದಲ್ಲಿ ಮಕ್ಕಳನ್ನು ತಯಾರು ಮಾಡತಕ್ಕ ಟೀಚರ್‌ಗಳು ಇಲ್ಲ ಎಂದರೆ ಮಕ್ಕಳು ಶಾಲೆಗೆ ಬರುವುದಿಲ್ಲ. ಅದರ ಸಲುವಾಗಿ ಮೇಲಿನ ಅಧಿಕಾರಿಗಳು ಆಗಾಗ್ಗೆ ತಿಂಗಳಿಗೆ ಒಂದು ಸಾರಿ ರಿಪೋರ್ಟ್ ತರಿಸಿಕೊಳ್ಳಬೇಕು. ಪುಸ್ತಕದಲ್ಲಿ ಮಕ್ಕಳ ಹೆಸರು ಇರುತ್ತದೆಯೇ ಹೊರತು ಸ್ಕೂಲ್‌ನಲ್ಲಿ ಅವರು ಇರುವುದಿಲ್ಲ, ಏಕೆಂದರೆ ಟೀಚರ್ ಇಲ್ಲ ನಾವೇನು ಮಾಡೋಣ, ಟೀಚರ್ ಬರಲಿಲ್ಲ ಮನೆಗೆ ಹೋಗ್ರಿ ಅಂದರೂ ಅಂತ ಅನ್ನುತ್ತಾರೆ. ಅದರ ಸಲುವಾಗಿ ಆಗಾಗೆ ಇನ್‌ಸ್ಪೆಕ್ಷನ್ ಮಾಡಿ ತಿಂಗಳು ತಿಂಗಳು ರಿಪೋರ್ಟು ತರಿಸಿಕೊಳ್ಳಬೇಕು. ಹಾಗಾದರೆ ಮಾತ್ರ ವಿದ್ಯೆ ಮುಂದುವರಿಯುತ್ತದೆ ಅಂತ ನಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಬೇಕಾದಷ್ಟು ಹಣ ಖರ್ಚುಮಾಡುತ್ತಾ ಇರುವಾಗ ಅದು ಫಲಕಾರಿಯಾಗಬೇಕೆಂದು ಪದೇಪದೇ ಹೇಳುತ್ತಾ ಇದ್ದೇನೆ. ಆ ರೀತಿ ಆಗಬೇಕಾದರೆ ಪ್ರೈವೇಟ್ ಸ್ಕೂಲುಗಳಿಗೆ ಗ್ರಾಂಟ್ ಕೊಡುವುದಕ್ಕೆ ಬದಲಾಗಿ ಎಲ್ಲಾ ಸ್ಕೂಲುಗಳನ್ನೂ ಸರ್ಕಾರದವರೇ ವಹಿಸಿಕೊಂಡು ನಡೆಸಬೇಕೆಂದು ಹೇಳುತ್ತೇನೆ. ಡೈರೆಕ್ಟರ್ ಸಾಹೇಬರಾಗಲೀ, ಮಿನಿಸ್ಟರ್ ಸಾಹೇಬರಾಗಲಿ ಎಲ್ಲಾ ರೀತಿಯಿಂದ ಇದರ ಬಗ್ಗೆ ಗಮನ ಕೊಟ್ಟು ಕೆಲಸ ಮಾಡಬೇಕೆಂದು ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಈ ವಿದ್ಯಾ ಇಲಾಖೆಯ ಬೇಡಿಕೆಯನ್ನು ನಾನು ವಿರೋಧಿಸುತ್ತಾ ಖಾಸಗಿ ಶಾಲೆಗಳ ಬಗ್ಗೆ ಕೆಲವು ಮಾತುಗಳನ್ನು ಆಡಬೇಕಾಗಿದೆ. ಇವತ್ತು ತಾವು ಏನು ಸರ್ಕಾರದ ಧನ ಸಹಾಯವನ್ನು ಈ ಖಾಸಗಿ ಶಾಲೆಗಳಿಗೆ ಕೊಡುತ್ತಾ ಇದ್ದೀರಿ ಅದು ನಿಜವಾಗಲೂ ಕೆರೆಗೆ ಮಣ್ಣನ್ನು ಹೊತ್ತಂತೆ ಆಗಿದೆ. ಈ ದಿನ ನಾನಾದರೂ ಹೇಳುತ್ತೇನೆ ಇದೇ ರೀತಿ ಮಾಡುತ್ತಾ ಹೋದರೆ ವಿದ್ಯಾ ಖಾತೆಯಲ್ಲಿ ಒಂದು ದೊಡ್ಡ ದುರವಸ್ಥೆಯನ್ನು ರೂಪಿಸಿದ ರೀತಿಯಲ್ಲಿ ಆಗುತ್ತದೆ. ಅಂತಹ ಒಂದು ವ್ಯವಸ್ಥೆಯನ್ನು ಮಾಡುತ್ತಾ ಇದ್ದೀರಿ. ಇವತ್ತು ಹೇಳುತ್ತೇನೆ ಈ ಶಾಲೆಗಳು ನಾಯಿಕೊಡೆ ಬೆಳೆದಂತೆ ಬೆಳೆಯುತ್ತಾ ಇದೆ. ಅದಕ್ಕೆ ಸರ್ಕಾರದ ಸಹಾಯ ಧನವನ್ನು ನೀಡಿ ಸಹಕಾರವನ್ನು ಕೊಡುತ್ತಾ ಇದ್ದೀರಿ. ಎಲ್ಲಾ ಖಾಸಗೀ ಶಾಲೆಗಳಲ್ಲೂ ನೂರಕ್ಕೆ 70 ಭಾಗ ಮಕ್ಕಳು ಕುಳಿತುಕೊಳ್ಳುವುದಕ್ಕೆ ಸ್ಥಳ ಇಲ್ಲ, ಬೆಂಚು

(ಶ್ರೀ ವಾಟಾಳ್ ನಾಗರಾಜ್)

ಇಲ್ಲ, ಕುರ್ಚಿ ಇಲ್ಲ, ಕುರಿ ದೊಡ್ಡಿ ಇದ್ದ ಹಾಗೆ, ದನದ ದೊಡ್ಡಿ ಇದ್ದ ಹಾಗೆ ಇದೆ. ಅದರ ವ್ಯವಸ್ಥಾಪಕರೆಲ್ಲಾ ಡಿಸ್‌ಮಿಸ್ ಆದ ಕ್ಲಾರ್ಕ್‌ಗಳು. ಅವರು ನಿಮ್ಮ ಸಹಾಯವನ್ನು ಪಡೆದು ದೊಡ್ಡ ದೊಡ್ಡ ಶ್ರೀಮಂತರಾಗಿದ್ದಾರೆ. ಇವತ್ತು ಹೇಳುತ್ತಾ ಇದ್ದೇನೆ. ಸಂಪೂರ್ಣವಾಗಿ ಇವನ್ನು ರದ್ದುಮಾಡಿ ಸರ್ಕಾರದವರೇ ಈ ಖಾಸಗೀ ಶಾಲೆಗಳನ್ನು ವಹಿಸಿಕೊಂಡು ನಡೆಸಬೇಕು ಎಂದು. ತಮ್ಮ ಮುಂದೆ ಒತ್ತಾಯಮಾಡಿ ಈ ಸಭೆಯಲ್ಲಿ ಹೇಳುತ್ತಾ ಇದ್ದೇನೆ. ನಾನು ಕೆಲವು ಸ್ಕೂಲುಗಳಿಗೆ ಹೋಗಿದ್ದೇನೆ. ತಾವು ಬಹಳ ಹೆಚ್ಚಿನ ರೀತಿಯಲ್ಲಿ ಅವುಗಳಿಗೆ ಹಣವನ್ನು ಕೊಡುತ್ತಾ ಇದ್ದೀರಿ. ಆದರೂ ಕೂಡ ಅವರು ಒಂದು ಪಕ್ಕದಲ್ಲಿ ಒಂದು ಕಡೆ ಕೋಳಿ ಕಟ್ಟಿದ್ದಾರೆ, ಮತ್ತೊಂದು ಕಡೆ ದನ ಕಟ್ಟಿದ್ದಾರೆ, ಇವುಗಳ ಮಧ್ಯೆ ಸ್ಕೂಲು ನಡೆಸುತ್ತಾ ಇದ್ದಾರೆ, ಇಂತಹ ಶಾಲೆಗಳು ನೂರಕ್ಕೆ 70—80 ಭಾಗ ನಡೆಯುತ್ತಾ ಇವೆ. ಅವರು ರಾಜ್ಯದ ಧನಸಹಾಯವನ್ನು ಪಡೆದು ದುರ್ವಿನಿಯೋಗ ಮಾಡುತ್ತಾ ಇದ್ದಾರೆ ಎಂದರೆ ತಪ್ಪಾಗಲಾರದು. ಮತ್ತು ಇದಕ್ಕೆ ನಮ್ಮ ಸರಕಾರದವರು ಯಾವ ರೀತಿಯಾದ ಸಹಾಯವನ್ನು ಕೊಡುತ್ತಾ ಇದ್ದಾರೆ ಎಂದರೆ ಎಲ್ಲ ರೀತಿಯ ಸೌಲಭ್ಯಗಳನ್ನೂ ಕೊಟ್ಟು ಇವುಗಳು ಅಭಿವೃದ್ಧಿಗೆ ಬರಬೇಕೆಂಬ ದೃಷ್ಟಿಯಿಂದ ಕೆಲಸ ಮಾಡುತ್ತಾ ಇದ್ದಾರೆ. ಈ ರೀತಿ ಮಾಡುತ್ತಾ ಒಬೇರಾಯನ ಕಾಲದ ಪದ್ಧತಿಯನ್ನು ಅನುಸರಿಸುತ್ತಾ ಹೋದರೆ ಇನ್ನು ಹತ್ತು ಸರ್ಕಾರಗಳು ಬಂದರೂ ಕೂಡ ಖಾಸಗಿ ಶಾಲೆಗಳು ಉದ್ಧಾರವಾಗುವುದಿಲ್ಲ. ಆದ್ದರಿಂದ ಕೂಡಲೇ ಮನಸ್ಸುಮಾಡಿ ಸರ್ಕಾರದವರು ಎಷ್ಟೇ ಕಷ್ಟಬಂದರೂ ಚಿಂತೆ ಇಲ್ಲ, ಇದನ್ನು ರದ್ದುಮಾಡಿ ಸರ್ಕಾರದವರೇ ನಡೆಸಬೇಕು ಎಂದು ಹೇಳುತ್ತೇನೆ.

ಎರಡನೆಯದಾಗಿ ಇವತ್ತಿನವರೆಗೂ ಯಾರ್‍ಯಾರು ಈ ಖಾಸಗಿ ಶಾಲೆಗಳನ್ನು ನಡೆಸುತ್ತಾ ಇದ್ದಾರೆ ಈ ವ್ಯವಸ್ಥಾಪಕರ ಆಸ್ತಿ ಬಗ್ಗೆ ತನಿಖಾ ಸಮಿತಿಯನ್ನು ನೇಮಕಮಾಡಿ ಯಾರ್‍ಯಾರು ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ ಎಂಬುದನ್ನು ಕಂಡುಹಿಡಿಯಬೇಕು ಎಂದು ಹೇಳುತ್ತೇನೆ. ಬೇಕಾದರೆ ಇವತ್ತು ಎವಿಡೆನ್ಸ್ ಕೊಡುತ್ತೇನೆ, ಇವತ್ತಿನದಿವಸ ಲಕ್ಷಾಂತರ ರೂಪಾಯಿನ ವ್ಯಾಪಾರ ಅವರು ಮಾಡುತ್ತಾ ಇದ್ದಾರೆ. ವಿದ್ಯಾರ್ಥಿಗಳು ಮತ್ತು ವಿದ್ಯಾ ಸಂಸ್ಥೆಗಳ ಹೆಸರಿನಲ್ಲಿ ಲಕ್ಷಾಧೀಶ್ವರರು ಆಗುತ್ತಾ ಇದ್ದಾರೆ. ನಾನು ಹೇಳುತ್ತೇನೆ. ವಿದ್ಯಾ ಇಲಾಖೆಯಲ್ಲಿ ಒಂದು ರೀತಿಯಿಂದ ಹೊಸ ಕ್ರಾಂತಿ ಮಾಡಬೇಕಾದರೆ ಇವತ್ತಿನ ದಿವಸ ಖಾಸಗಿ ಶಾಲೆಗಳನ್ನು ರದ್ದು ಮಾಡಿ ಸರ್ಕಾರದವರೇ ಆ ಎಲ್ಲಾ ಶಾಲೆಗಳನ್ನೂ ನಡೆಸಬೇಕು. ತಾವು ಕೊಡತಕ್ಕ ಗ್ರಾಂಟನ್ನು ಆಗಲಿ ಅಥವಾ ಆ ರೀತಿ ಸ್ಕೂಲುಗಳನ್ನು ನಡೆಸತಕ್ಕ ಮಂಜೂರಾತಿಯನ್ನಾಗಲಿ ಯಾವುದೇ ಹೈಸ್ಕೂಲು ಆಗಲಿ, ಇತರ ಶಾಲೆಗಳಿಗಾಗಲಿ ಕೊಡಬಾರದು ಎಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತಾ ಇದ್ದೇನೆ.

ಚೆಕ್ ಸಿಸ್ಟಂ ತಂದಿದ್ದೀರಿ. ಇದು ಪ್ರೌಢ ಶಾಲೆಗಳಿಗೆ ಅನ್ವಯ ಮಾಡಿದ್ದೀರಿ, ಇದೇ ಪ್ರಕಾರ ಪ್ರೈಮರಿ ಶಾಲೆಗಳಿಗೂ ಕೂಡ ಚೆಕ್ ಸಿಸ್ಟಂ ಮಾಡಿದರೆ ಅಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಾ ಇದ್ದೇನೆ. ಇವತ್ತು ಅಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳ ಗೋಳು, ದುರಂತ ನಿಜವಾಗಿಯೂ ನಾವು ನಮ್ಮ ಕಣ್ಣೆದುರಿಗೆ ಅನೇಕ ಶಾಲೆಗಳಲ್ಲಿ ನೋಡುತ್ತಾ ಇದ್ದೇವೆ. ಅಲ್ಲಿನ ವ್ಯವಸ್ಥಾಪಕರು ಆ ಉಪಾಧ್ಯಾಯರಿಗೆ ತಿಂಗಳಿಗೆ 120 ರೂಪಾಯಿ ಸಂಬಳ ಕೊಡಬೇಕಾದರೆ ಇವತ್ತು 10 ರೂಪಾಯಿ, ಮುಂದಿನವಾರ 20 ರೂಪಾಯಿ ಕೊನೆ ವಾರ 50 ರೂಪಾಯಿ—ಈ ರೀತಿ ಕೊಡುತ್ತಾ ಇದ್ದಾರೆ. ಈ ರೀತಿ ಸಂಬಳವನ್ನು ಕೊಡುತ್ತಾ ಇರುವುದರಿಂದ ಅನೇಕ ಜನ ಬಹಳ ವ್ಯಥೆಯಿಂದ ಬಡ ಮೇಷ್ಟರುಗಳು ಇವತ್ತಿನ ದಿವಸ ಅವರಿಗೆ ಶಾಪಹಾಕುತ್ತಾ ಇದ್ದಾರೆ. ಈ ಶಾಪ ಮಂತ್ರಿಗಳಿಗೂ ತಟ್ಟಿ ನಿಮ್ಮ ಪ್ರಖ್ಯಾತಿ ಕೆಡುತ್ತದೆ ಎಂಬ ಮಾತನ್ನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಆದ್ದರಿಂದ ಪ್ರೈಮರಿ ಸ್ಕೂಲ್ ಮೇಷ್ಟರುಗಳಿಗೂ ಕೂಡ ಚೆಕ್ ಮೂಲಕ ಸಂಬಳ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪಠ್ಯಪುಸ್ತಕಗಳ ವಿಷಯದಲ್ಲಿ ನಮ್ಮಲ್ಲಿ ಬಹಳ ಕೊರತೆ ಇದೆ. ಒಬ್ಬ ಮೇಷ್ಟರು ಒಂದು ಹುಡುಗನಿಗೆ ಯಾವ ರೀತಿ ಪಾಠ ಹೇಳುತ್ತಾರೆ ಎಂಬುದನ್ನು ಒಬ್ಬರು ಬಹಳ ಸ್ವಾರಸ್ಯವಾಗಿ ಹೇಳಿದರು, ಆ ಒಂದು ಮಾತನ್ನು ಹೇಳುತ್ತೇನೆ. ಉಪಾಧ್ಯಾಯರು ಹುಡುಗನಿಗೆ ಹೇಳಿದರಂತೆ ಮೈ ಹೆಡ್, ಅಂದರೆ, ನನ್ನ ತಲೆ ಅಂತ. ಹುಡುಗ ಮನೆಗೆ ಹೋಗಿ, ಮೈ ಹೆಡ್ ಅಂದರೆ ನನ್ನ ಮೇಷ್ಟರ ತಲೆ. ಮೈ ಹೆಡ್ ಅಂದರೆ ನನ್ನ ಮೇಷ್ಟರ ತಲೆ, ಅಂತ 20 ಸಲ ಉರು ಹೊಡೆಯುತ್ತಾ ಇದ್ದನಂತೆ, ಅಷ್ಟು ಹೊತ್ತಿಗೆ ಅವರ ಅಪ್ಪ ಬಂದನಂತೆ ಬಂದು ಏನೋ ಅದು ನಿಮ್ಮ ಮೇಷ್ಟರ ತಲೆ, ನಿಮ್ಮ ಅಪ್ಪನ ತಲೆ ಎಂದು ಅಂದನಂತೆ. ಸರಿ ಅವನು ಅದನ್ನು ಬಿಟ್ಟು, ಮೈ ಹೆಡ್ ಅಂದರೆ ನಮ್ಮ ಅಪ್ಪನ ತಲೆ ಅಂತ ಶುರು ಮಾಡಿದನಂತೆ. ಈ ಒಂದು ಮಟ್ಟದಲ್ಲಿ ನಮ್ಮ ವಿದ್ಯಾಭ್ಯಾಸದ ಕ್ರಮ ಹೋಗುತ್ತಾ ಇದೆ. ಆದ್ದರಿಂದ ಈ ವಿದ್ಯಾಭ್ಯಾಸದ ಇಲಾಖೆಯಲ್ಲಿ ಏನಾದರೂ ಒಂದು ಕ್ರಾಂತಿ

ಕಾರಕವಾದ ಕೆಲಸ ನಡೆಯಬೇಕು, ಎಂದರೆ ಶ್ರದ್ಧೆವಹಿಸಿ, ನೀತಿಯಿಂದ, ದಕ್ಷತೆಯಿಂದ ಕೆಲಸ ನಡೆಸಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಾ ಇದ್ದೇನೆ.

ಈಗ ಅನೇಕ ಸ್ಕೂಲುಗಳಲ್ಲಿ ಅಮೆರಿಕಾ ದೇಶದ ಕೇರ್ ಸಂಸ್ಥೆಯವರು ಕೊಟ್ಟ ಹಾಲಿನ ಪುಡಿಯಿಂದ ಲಾಭವನ್ನು ಸಂಪಾದನೆ ಮಾಡುತ್ತಾ ಇದ್ದಾರೆ, ಇದು ನಿಜವಾಗಿಯೂ ನಮ್ಮ ದೇಶಕ್ಕೆ ಅಗೌರವವಾದ ವಿಷಯ. ನಾವು ಇವತ್ತು ಅಮೆರಿಕಾ ದೇಶದಿಂದ ತರಿಸಿಕೊಂಡ ರವೆ ಮತ್ತು ಹಾಲಿನಪುಡಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಒಂದು ಧರ್ಮ ದೃಷ್ಟಿಯಿಂದ ಹಂಚುತ್ತಾ ಇದ್ದೇವೆ. ಅದನ್ನು ಅನೇಕ ಸಂಸ್ಥೆಗಳವರು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾ ಇದ್ದಾರೆ. ಅಂತಹವರು ಅನೇಕರು ಇವತ್ತು ಅಂತಹ ಕೇಸುಗಳಲ್ಲಿ ಸಿಕ್ಕಿಕೊಂಡಿದ್ದಾರೆ. ಇದು ನಿಜವಾಗಲೂ ವ್ಯಥೆಪಡಬೇಕಾದ ವಿಚಾರ. ಇದನ್ನು ದಯವಿಟ್ಟು ಖಂಡಿತ ನಿಲ್ಲಿಸಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಮಕ್ಕಳಿಗೆ ಆಹಾರ ಕೊಡುವುದು ಬೇಡ ಅನ್ನುತ್ತೀರಾ ?

ಶ್ರೀ ವಾಟಾಳ್ ನಾಗರಾಜ್.—ಬ್ಲಾಕ್ ಮಾರ್ಕೆಟ್ ಆಗುತ್ತಾ ಇದೆ ಅದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಈ ಸಂಬಂಧವಾಗಿ ಒಂದು ಹೊಸ ಲಾ ಕೂಡ ಮಾಡುವವರು ಇದ್ದೇವೆ, ಇಷ್ಟರಲ್ಲೇ ಬರುತ್ತದೆ. ತಾವು ಬ್ಲಾಕ್ ಮಾರ್ಕೆಟ್ ಆಗುತ್ತದೆ ಎಂದು ಹೇಳುತ್ತಾ ಇದ್ದೀರಿ, ಅದು ಸತ್ಯವಲ್ಲ.

ಶ್ರೀ ವಾಟಾಳ್ ನಾಗರಾಜ್.—ಪ್ರೈವೇಟ್ ಸ್ಕೂಲುಗಳಿಗೆ ಕೊಡತಕ್ಕ ರೆಂಟ್ ಏನಿದೆ ಅದು 150 ರೂಪಾಯಿ ಇದ್ದರೆ. ಲಂಚ ಕೊಟ್ಟು 400 ರೂಪಾಯಿ ಅಂತ ಸರ್ಟಿಫಿಕೇಟ್ ಮಾಡಿಸಿಕೊಳ್ಳುತ್ತಾ ಇದ್ದಾರೆ. ಅಲ್ಲಿ ಅವರಿಗೆ ಒಂದು ಫರ್ನೀಚರ್ ಇರುವುದಿಲ್ಲ. ಒಂದು ಬೆಂಚ್ ಇರುವುದಿಲ್ಲ. ಕೊನೆಗೆ ಉಪಾಧ್ಯಾಯ ಕೂತುಕೊಳ್ಳುವುದಕ್ಕೆ ಕುರ್ಚಿಯೂ ಇಲ್ಲ. ಅಂತಹ ಸ್ಕೂಲುಗಳಿವೆ. ಮಾನ್ಯ ಶ್ರೀ ಕಂಠಿಯವರ ಕಾಲದಲ್ಲಿ ಈ ಕೊಳೆ ಬೆಳೆದದ್ದು, ಖಾಸಗೀ ಶಾಲೆಗಳ ಕರ್ಮಕಾಂಡ, ಅನ್ಯಾಯ, ಮಾನ್ಯ ಶ್ರೀ ಕಂಠಿಯವರ ಕಾಲದಲ್ಲಿ ಆದುದೇ. ಆದರೆ ಮಾನ್ಯ ಶ್ರೀ ಶಂಕರೇಗೌಡರ ಕಾಲದಲ್ಲಿಯೂ ಅದು ಇನ್ನೂ ಮುಂದುವರಿಯುತ್ತಿದೆ. ದೇಶದ್ರೋಹ ಮಾಡುತ್ತಿದ್ದಾರೆ. ಅಂತಹವರು ಇವತ್ತು ಉಪಮಂತ್ರಿಗಳು ಆಗಿರುತ್ತಾರೆ. ಮುಂದೆ ಜನ ಒಂದು ಪ್ರಚಂಡ ಧಾಳಿ ಮಾಡಬೇಕಾಗಿ ಬರುತ್ತದೆಂದು ನಾನು ಘಂಟಾಘೋಷವಾಗಿ ಹೇಳುತ್ತಿದ್ದೇನೆ. ಖಾಸಗೀ ಶಾಲೆಗಳ ಬಗ್ಗೆ ಈಗಲೂ ಒಂದು ವಿಜಿಲೆನ್ಸ್ ಕಮಿಷನ್ ಮಾಡಿ. ಸುಮಾರು ಸೇಕಡ 75ರಷ್ಟು ಲೋಪ ದೋಷಗಳು ಆ ಕಮಿಷನ್ನಿಗೆ ಸಿಗುತ್ತವೆ. ಆಗ ನಿಮ್ಮ ನಾಟಕ ಗೊತ್ತಾಗುತ್ತದೆ. ಇದೇ ಸಭೆಯ ಒಬ್ಬ ಉಪ ಮಂತ್ರಿಗಳು ಖಾಸಗೀ ಶಾಲೆಯನ್ನು ಇಡಿಸಿ ಸಾವಿರಾರು ರೂಪಾಯಿಗಳನ್ನು ಗ್ರ್ಯಾಂಟ್ ರೂಪದಲ್ಲಿ ತೆಗೆದುಕೊಳ್ಳುತ್ತಿದ್ದಾರೆಂಬುದು ನನಗೆ ಗೊತ್ತಿದೆ. ಖಾಸಗೀ ಶಾಲೆಗಳಿಂದ ಎಷ್ಟೋ ಬ್ಲಾಕ್‌ಮಾರ್ಕೆಟ್ ಆಗುತ್ತಿದೆ. ಕೆಲವು ಖಾಸಗೀ ಸ್ಕೂಲುಗಳು ಬ್ಲಾಕ್‌ಮಾರ್ಕೆಟ್ ಸಂಸ್ಥೆಗಳಾಗಿವೆ. ಅವು ವ್ಯಾಪಾರ ಸಂಸ್ಥೆಗಳಾಗಿವೆ. ಆದ್ದರಿಂದ ಸರ್ಕಾರದವರು ಅದರ ಬಗ್ಗೆ ಖಂಡಿತ ಸಹಕಾರ ಕೊಡಬೇಡಿ. ಒಂದು ಸಹಕಾರ ನೀಡಿದ್ದೇ ಆದರೆ, ನಿಜವಾಗಿ ನಮ್ಮ ದೇಶದಲ್ಲಿ ವಿದ್ಯೆಯೇ ಹಾಳಾಗುತ್ತದೆ, ಮಕ್ಕಳು ಹಾಳಾಗುತ್ತಾರೆ, ದೇಶವೂ ಹಾಳಾಗುತ್ತದೆ, ಅನ್ಯಾಯವಾಗಿ ಸಮಾಜದ ದುಡ್ಡೂ ಸಹ ಹಾಳಾಗುತ್ತದೆ.

ಕೊನೆಯದಾಗಿ ನಾನು ಜನಪದ ಸಾಹಿತ್ಯದ ವಿಚಾರವಾಗಿ ಒಂದು ಮಾತನ್ನು ಹೇಳುತ್ತೇನೆ. ಜನಪದ ಸಾಹಿತ್ಯದಲ್ಲಿ ಒಂದು ರಸಿಕತೆ ಇದೆ. ಅದನ್ನು ಓದುತ್ತಿದ್ದರೆ ಒಂದು ಸಂತೋಷ. ಮನಸ್ಸಿಗೆ ಒಂದು ಆನಂದ. ಹಿಂದೆ ಹಳ್ಳಿಯ ಜನ ಏನೇನು ಹೇಳುತ್ತಿದ್ದರೋ ಅದನ್ನು ಕ್ರೋಢೀಕರಿಸಿ ಯಾರೋ ಕೆಲವರು ಒಳ್ಳೆಯ ಸಾಹಿತ್ಯಗಳನ್ನು ಬರೆದಿದ್ದಾರೆ. ದೊಡ್ಡ ದೊಡ್ಡ ಸಾಹಿತಿಗಳೇ ಬರೆದಿದ್ದಾರೆ. ಕೆಲವರು ಅದು ಅಶ್ಲೀಲ, ಓದುವುದು ಬೇಡವೆಂದು ಹೇಳಿದರು. ಅದು ಸರಿಯಾದುದಲ್ಲ. ಹಾಗಾದರೆ ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರನ ಪೂಜೆ ಮಾಡುವುದು ಸಹ ಸರಿಯಲ್ಲವೆಂದು ಹೇಳುವ ಮಟ್ಟಕ್ಕೆ ಹೋಗಬೇಕಾಗುತ್ತದೆ. ಆದರೆ ಅದು ಸರಿಯಲ್ಲ. ಬಹಳ ಸ್ವಾರಸ್ಯಕರವಾದಂಥ ಕೆಲವು ಸಾಹಿತ್ಯಗಳೂ ಇವೆ. ಇತ್ತೀಚೆಗೆ ಅನೇಕ ಸಿನಿಮಾ ಮಂದಿರಗಳಲ್ಲಿ ಇಂಗ್ಲೀಷ್ ಫಿಲಂಗಳನ್ನು ತೋರಿಸುವಾಗ ಬಟ್ಟೆ ಬಿಚ್ಚಿಕೊಂಡು ಇರತಕ್ಕ ಅನೇಕ ಅಶ್ಲೀಲವಾದ ಚಿತ್ರಗಳನ್ನು ತೋರಿಸುತ್ತಾ ಇರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಸರ್ವಜ್ಞ ವಚನಗಳಲ್ಲಿ ಕೆಲವನ್ನು ಇಲ್ಲಿ ಹೇಳಬೇಕಾಗಿದೆ. 'ಉಚ್ಚೆಯ ಬಚ್ಚಲವ, ತುಚ್ಛವೆಂದೆನಬೇಡ, ಅಚ್ಯುತ ಬಿದ್ದನಜಬಿದ್ದ, ದೇವೇಂದ್ರ ನಚ್ಚತ್ತು ಬಿದ್ದ ಸರ್ವಜ್ಞ' ಎಂದು ಹೇಳಿದೆ. ಇದು ಎಂಥಾ ಮಾತು ? 'ಗಂಡನಿಲ್ಲದ ನಾರಿ, ಪಿಂಡನಿಲ್ಲದ ಸೂಳೆ, ಬಂಡವಿಲ್ಲದನ ಬೇಹಾರ, ಮದಿನಾಯಿಕುಂಡೆಯಂತಿಕ್ಕು ಸರ್ವಜ್ಞ—

(ಶ್ರೀ ವಾಟಾಳ್ ನಾಗರಾಜ್)

ಹೀಗೆ ಸರ್ವಜ್ಞಮೂರ್ತಿ ಬರೆದಂಥ ಪುಸ್ತಕಗಳೂ ಇವೆ. ಇವು ಎಂತಹ ಪುಸ್ತಕಗಳು? ಈ ರೀತಿ ಸಾಹಿತ್ಯವಿದೆಯೆಂದು ಅಂತಹ ಪುಸ್ತಕಗಳನ್ನೂ ಸಹ ನಾಳೆ ಸುಡಬೇಕಾಗುತ್ತದೆಂದು ಹೇಳಬಹುದು. ನಮಗೇಕೆ ಸಾಹಿತ್ಯ, ಸಂಸ್ಕೃತಿ ಎಂದು ಹೇಳುವಹಾಗೆ ಇಲ್ಲ. ಹಳೆಯಬೀಡು, ಬೇಲೂರು ಶಿಲಾ ಶಾಸನಗಳನ್ನು ನೋಡಿದರೆ, ಅವು ಎಷ್ಟು ರಮ್ಯವಾಗಿವೆ, ಅವನ್ನು ನೋಡುವುದಕ್ಕೆ ಎಷ್ಟೋ ಸಂತೋಷವಾಗುತ್ತದೆ, ಅದರ ಒಂದು ರಶಿಕತೆ ನೋಡಿ ನಾವು ಸಂತೋಷಪಡಬೇಕು,

ಕಟ್ಟಕಡೆಯದಾಗಿ ಕೆಲವು ಚಿತ್ರಗಳನ್ನು ಕೆಲವಾರು ಪುಸ್ತಕಗಳಿಂದ ಸಭೆಯಲ್ಲಿ ತೋರಿಸುವುದಕ್ಕೆ ಪ್ರಯತ್ನಮಾಡುತ್ತೇನೆ. ಈ ದೇಶದಲ್ಲಿ ಇವತ್ತು ನಾವು ಸೌಮ್ಯಭಾವನೆಯುಳ್ಳ ಜನಪದ ಸಾಹಿತ ಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಬೇಕು.

ಚೇರ್‌ಮನ್ ಅವರು.—ಮುಂದೆ ಹೇಳುವುದನ್ನು ರಿಕಾರ್ಡ್ ಮಾಡಬೇಕಾದುದಿಲ್ಲ. ಮಾನ್ಯ ಸದಸ್ಯರು ಏನೇನು ಇಲ್ಲಿ ಹೇಳಬೇಕೆಂದು ಇದ್ದಿರೋ ಅವನ್ನು ಸಚಿವರಿಗೆ ಕೊಡಬಹುದು.

ಶ್ರೀ ವಾಟಾಳ್ ನಾಗರಾಜ್—ಅನೇಕ ರಮ್ಯವಾದ ಚಿತ್ರಗಳು ಇರತಕ್ಕಂಥ ಪುಸ್ತಕಗಳನ್ನು ಲೈಬ್ರರಿಗಳಲ್ಲಿ ಇಟ್ಟಿದ್ದಾರೆ.

ಚೇರ್‌ಮನ್ ಅವರು.—ಮಾನ್ಯ ಸದಸ್ಯರು ಮಾತನಾಡಿದ್ದು ಯಾವುದೂ ಈಗ ರಿಕಾರ್ಡ್ ಆಗಲಿಲ್ಲ. ವೇಳೆಯಾಯಿತು. ಅವರು 20 ನಿಮಿಷಗಳನ್ನು ತೆಗೆದುಕೊಂಡಿದ್ದಾರೆ. ಜಾಗ್ರತೆ ಅವರು ಭಾಷಣ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಸಂಪೂರ್ಣವಾದಂಥ ಅನುಮೋದನೆಯನ್ನು ಕೊಟ್ಟು ಹಲವಾರು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಅನೇಕ ಜನ ಸ್ನೇಹಿತರು ಮಾತನಾಡಿದ್ದಾರೆ. ಆದರೆ ಅವರು ಹೇಳಿರುವ ಮಾತುಗಳನ್ನೇ ಪುನಃ ನಾನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಸರ್ಕಾರದವರು ಪ್ರಾಥಮಿಕ ಶಾಲೆಗಳ ಕಟ್ಟಡದ ಬಗ್ಗೆ ಒಂದು ಹೊಸ ಕಾನೂನನ್ನು ಮಾಡಿದ್ದಾರೆ. ಸುಮಾರು 8-10 ವರ್ಷಗಳ ಕೆಳಗೆ ಅನೇಕ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳಿಗಾಗಿ ಅನೇಕ ಗ್ರಾಮಪಂಚಾಯತಿಯವರೂ ಮತ್ತು ಗ್ರಾಮಸ್ಥರೂ ಹಣವನ್ನು ಸರ್ಕಾರದಲ್ಲಿ ಡಿಪಾಜಿಟ್ ಮಾಡಿದ್ದಾರೆ. ಆದರೆ ಆ ರೀತಿ ಡಿಪಾಜಿಟ್ ಮಾಡಿದಂಥ ಮೊಬಲಗು ಹಾಗೆಯೇ ಇಲಾಖೆಯಲ್ಲಿ ಕೊಳೆಯುತ್ತಲೇ ಇದೆ. ಸುಮಾರು ಹತ್ತು ವರ್ಷಗಳಾದರೂ ಆ ದುಡ್ಡಿನ ಬಗ್ಗೆ ಸರ್ಕಾರ ಯಾವ ರೀತಿಯಲ್ಲಿಯೂ ಯೋಚನೆ ಮಾಡಲಿಲ್ಲ. ಜನರಿಂದ ಚಂದಾ ಎತ್ತಿ ಸರ್ಕಾರಕ್ಕೆ ಕೊಟ್ಟಿದ್ದ ದುಡ್ಡಿನ ಉಪಯೋಗ ಸದ್ವಿನಿಯೋಗವಾಗಿ ಮಾಡಲು ಸರ್ಕಾರಕ್ಕೆ ಆಗಿಲ್ಲ. ಅದರಿಂದ ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಿ ಕಟ್ಟಡ ಗಳನ್ನು ಜಾಗ್ರತೆಯಾಗಿ ಏನು ಕಾನೂನು ಈಗ ಜಾರಿಯಲ್ಲಿದೆಯೋ ಆ ಕಾನೂನು ಪ್ರಕಾರ ಕಟ್ಟಿಸಬೇಕು. ಆ ರೀತಿ ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುವುದು ಸರ್ಕಾರದಮೇಲೆ ಇರತಕ್ಕ ಜವಾಬ್ದಾರಿ. ಆ ಜವಾಬ್ದಾರಿಯನ್ನು ಸರ್ಕಾರದವರು ವಹಿಸಬೇಕು. ಉದಾಹರಣೆಗೆ ಹೇಳುವುದಾದರೆ, ತುರುವೇಕೆರೆ ತಾಲ್ಲೂಕಿನಲ್ಲಿ ಒಂದು ಊರು ಇದೆ. ಅಲ್ಲಿ ತಂಡಗ ಎಂಬ ಒಂದು ಗ್ರಾಮವಿದೆ. ಅಲ್ಲಿ ಒಂದು ಶಾಲಾ ಕಟ್ಟಡ ಕಟ್ಟುವುದಕ್ಕಾಗಿ ಸರ್ಕಾರಕ್ಕೆ ದುಡ್ಡು ಕಟ್ಟಿ 8 ವರ್ಷಗಳಾಗಿವೆ. ಸರ್ಕಾರದಲ್ಲಿ ಡಿಪಾಜಿಟ್ ಮಾಡಿದ್ದೂ ಆಗಿದೆ. ಅದರಿಂದ ಇದುವರೆಗೆ ಏನೂ ಪ್ರಯೋಜನವಾಗಲಿಲ್ಲ. ಅಷ್ಟು ದುಡ್ಡನ್ನು ಹಾಗೆಯೇ ಯಾವುದಾದರೂ ಒಂದು ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟಿದ್ದರೆ ಅದಕ್ಕೆ ಬಡ್ಡಿ ಇದುವರೆಗೂ ಬರುತ್ತಿತ್ತು. ಆದ್ದರಿಂದ ಈಗಲಾದರೂ ಜಾಗ್ರತೆಯಾಗಿ ಅಲ್ಲಿ ಎರಡು ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕು. ಅದಕ್ಕೆ ಸಂಬಂಧಪಟ್ಟ ರಿಕಾರ್ಡ್‌ಗಳನ್ನು ತರಿಸಿ ಕೂಡಲೇ ಅದನ್ನು ಮಾಡಬೇಕೆಂದು ಸರ್ಕಾರ ದವರಲ್ಲಿ ನಾನು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಎರಡನೆಯದಾಗಿ, ಇನ್ನು ವಿಜ್ಞಾನಮಂದಿರದ ಬಗ್ಗೆ ಎರಡು ಮಾತುಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ಅಂತಹವು ಈ ದೇಶದಲ್ಲಿ ಏಳೆಂಟು ಇವೆ. ಈ ವಿಜ್ಞಾನ ಮಂದಿರಗಳನ್ನು ಭಾರತ ಸರ್ಕಾರದವರು ಸ್ಥಾಪನೆ ಮಾಡಿದ್ದರೂ ಮೂರನೆಯ ಪಂಚವಾರ್ಷಿಕ ಯೋಜನೆವರೆಗೆ ಹಣವನ್ನು ಅದಕ್ಕಾಗಿ ಕೊಟ್ಟಿದ್ದರು. ಆದರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯೊಳಗೆ ಭಾರತ ಸರ್ಕಾರದವರು ಯಾವ ಹಣವನ್ನು ಅದಕ್ಕಾಗಿ ಒದಗಿಸದೆ ಮೈಸೂರು ಸರ್ಕಾರವನ್ನೇ

ಪೂರ್ತಿ ಅದರ ಖರ್ಚನ್ನು ವಹಿಸಬೇಕೆಂದು ಹೇಳಿದ್ದಾರೆ. ಆದರೆ ಈ ವಿಜ್ಞಾನಮಂದಿರಗಳಿಂದ ಆಗಿರತಕ್ಕ ಪ್ರಯೋಜನವಾದರೂ ಏನೆಂಬುದನ್ನು ನಾವು ಈಗ ಯೋಚನೆ ಮಾಡಿ ನೋಡ ಬೇಕಾಗಿದೆ. ಹಿಂದೆ ಭಾರತ ಸರ್ಕಾರದವರು ಇದಕ್ಕಾಗಿ ದುಡ್ಡು ಕೊಡುತ್ತಿದ್ದರು. ನಾವು ಖರ್ಚುಮಾಡುತ್ತಿದ್ದೆವು. ಈಗ ನಾವೇ ಆ ದುಡ್ಡನ್ನೂ ಕೊಡುವ ಕಾಲದಲ್ಲಿ, ಅದನ್ನು ಸ್ವಲ್ಪ ಮಟ್ಟಿಗೆ ಯೋಚನೆ ಮಾಡಿದರೆ, ಆ ವಿಜ್ಞಾನ ಮಂದಿರಗಳು ಒಂದೇ ಶಬ್ದದಲ್ಲಿ ಹೇಳುವುದಾದರೆ, ಮುಂದೆ ಅವು ಅಜ್ಞಾನಮಂದಿರಗಳು ಆಗುತ್ತವೆಂದು ಹೇಳಿದರೆ ಅದು ಏನೂ ತಪ್ಪಾಗುವುದಿಲ್ಲ ವೆಂದು ನನಗೆ ಅರ್ಥವಾಗುತ್ತದೆ.

ನಮ್ಮ ಸರ್ಕಾರದ ಕಾರ್ಯದರ್ಶಿಗಳೂ ಅದನ್ನು ನೋಡಿದ್ದಾರೆ. ಇತರ ಅಧಿಕಾರಿಗಳೂ ನೋಡಿದ್ದಾರೆ. ಹಳ್ಳಿಗಾಡಿನ ರೈತರಿಗೆ ಅನುಕೂಲವಾಗುವ ಹಾಗೆ ಅದನ್ನು ಆಧುನಿಕ ರೀತಿಯಲ್ಲಿ ವ್ಯವಸ್ಥೆ ಮಾಡತಕ್ಕದ್ದು ಮುಖ್ಯ. ಯಾವ ಉದ್ದೇಶಕ್ಕಾಗಿ ಅದು ಸ್ಥಾಪನೆಯಾಗಿತ್ತೋ ಅದರಲ್ಲಿ ಕೇವಲ ಒಂದು ಅಂಶ ಕೂಡ ಕಾರ್ಯಗತವಾಗಿಲ್ಲ. ರೈತರ ಬೇಡಿಕೆಗಳನ್ನು ಪೂರೈಸುವುದ ಕ್ಕೋಸ್ಕರ ಸರ್ಕಾರದವರು ಏನು ಖರ್ಚು ಮಾಡುತ್ತಿದ್ದಾರೆ ಅದನ್ನು ಅನ್ಯಾಯವಾಗಿ ಪೋಲು ಮಾಡುತ್ತಿದ್ದಾರೆ. ಅದ್ದರಿಂದ ಆ ವಿಜ್ಞಾನ ಮಂದಿರವನ್ನು ಆದಷ್ಟು ಜಾಗ್ರತೆ ಮುಚ್ಚಿದರೆ ದೇಶಕ್ಕೆ ಕ್ಷೇಮವಾಗುತ್ತದೆ. ನಾಲ್ಕು ಪಾಠಶಾಲೆಗಳನ್ನು ತೆರೆಯುವುದರಿಂದ ದೇಶಕ್ಕೆ ಕಲ್ಯಾಣವಾಗುತ್ತದೆ. ಅದನ್ನು ಮುಚ್ಚುವ ವ್ಯವಸ್ಥೆ ಮಾಡಬೇಕು. ಅಲ್ಲಿ ಏನೂ ಕೆಲಸ ಆಗಿಲ್ಲ. ಅಲ್ಲಿಗೆ ಎಂ.ಎಸ್.ಸಿ. ಪಾಸು ಮಾಡಿರುವವರನ್ನು ಹಾಕಿದ್ದಾರೆ. ಅವರನ್ನು ಅನ್ಯಾಯವಾಗಿ ಸೋಮಾರಿಗಳನ್ನಾಗಿ ಮಾಡುತ್ತಿ ದ್ದಾರೆ. ಅವರನ್ನು ಬೇರೆ ಕಡೆಗಾದರೂ ಹಾಕಿದರೆ ಅವರು ಸ್ವಲ್ಪ ಮಟ್ಟಿಗಾದರೂ ಕೆಲಸ ಮಾಡು ತ್ತಾರೆ. ಅವರಿಗೆ ಕೆಲಸ ಮಾಡುವುದಕ್ಕೆ ಮನಸ್ಸು ಬರುತ್ತದೆ. ಅವರನ್ನು ಹೀಗೆಯೇ ಬಿಟ್ಟರೆ ಅವರು ಸೋಮಾರಿಗಳಾಗುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಈ ಬಗ್ಗೆ ಹಿಂದೆ ಮಾನ್ಯ ವಿದ್ಯಾ ಮಂತ್ರಿಗಳಾದ ಶ್ರೀ ಶಂಕರ ಗೌಡರನ್ನು ಪ್ರಶ್ನೆ ಕೇಳಿದಾಗ ಅವರು ನಾನು ಈಗತಾನೆ ಈ ಇಲಾ ಖೆಯ ಚಾರ್ಜನ್ನು ಹೊಸದಾಗಿ ತೆಗೆದುಕೊಂಡಿದ್ದೇನೆ. ಅದನ್ನು ನೋಡಿ ಅದನ್ನು ಒಪ್ಪುವುದೇ ಅಥವಾ ಬಿಡುವುದೇ ಎನ್ನುವುದರ ಬಗ್ಗೆ ಒಂದು ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬರುತ್ತೇನೆ ಎಂದು ಹೇಳಿದ್ದರು. ಅವರು ಅದನ್ನು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದಷ್ಟು ಜಾಗ್ರತೆ ಆ ಒಂದು ತೀರ್ಮಾನವನ್ನು ಕೈಗೊಳ್ಳುವುದು ಉತ್ತಮ ಎಂದು ನಾನು ಪ್ರಾರ್ಥನೆ ಮಾಡು ತ್ತೇನೆ.

ಇನ್ನು ಮೂರನೆಯದಾಗಿ ನಮ್ಮ ಅನೇಕ ಜನ ಸ್ನೇಹಿತರು ಎಲ್ಲಾ ಖಾಸಗೀ ಶಾಲೆಗಳವರೂ ಬಹಳ ಅನ್ಯಾಯ ಮಾಡುತ್ತಿದ್ದಾರೆ. ಆದ್ದರಿಂದ ಖಾಸಗಿ ಶಾಲೆಗಳನ್ನೆಲ್ಲಾ ಮುಚ್ಚಿಸಿ ಎಂದು ಹೇಳಿದರು. ನಮ್ಮ ಸ್ನೇಹಿತರು ಮಾತನಾಡುವಾಗ ಯಾವುದೋ ಒಂದು ದೃಷ್ಟಿಯಿಂದ, ಯಾವುದೋ ಕೆಲವು ಖಾಸಗೀ ಸಂಸ್ಥೆಗಳವರು ನಡೆಸತಕ್ಕ ಶಾಲೆಗಳನ್ನು ನೋಡಿ ಅದರ ಮೇಲೆ ಎಲ್ಲಾ ಖಾಸಗಿ ಸಂಸ್ಥೆಗಳು ನಡೆಸತಕ್ಕ ಶಾಲೆಗಳನ್ನು ಮುಚ್ಚಿ ಎಂದು ಹೇಳುವುದು ಸರಿಯಲ್ಲ ಎಂದು ಹೇಳುವವರಲ್ಲಿ ನಾನೂ ಒಬ್ಬ. ಇವೊತ್ತಿನ ದಿವಸ ಅನೇಕ ವಿದ್ಯಾ ಸಂಸ್ಥೆಗಳು ಖಾಸಗಿಯವರು ನಡೆಸತಕ್ಕವುಗಳು ಉತ್ತಮವಾಗಿ ಕೆಲಸ ಮಾಡತಕ್ಕ ಸಂಸ್ಥೆಗಳು ಇವೆ. ಅವು ಪಟ್ಟಣಗಳಲ್ಲಿಯೂ ಇವೆ. ಹಳ್ಳಿಗಾಡುಗಳಲ್ಲಿಯೂ ಇವೆ. ಈಗ ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಲ್ಲಿ ನ್ಯಾಷನಲ್ ಹೈಸ್ಕೂಲು, ನ್ಯಾಷನಲ್ ಕಾಲೇಜುಗಳು ಯಾವ ಕಾಲದಲ್ಲಿ ಪ್ರಾರಂಭ ಆದವೋ ಅವು ಬಹಳ ಚೆನ್ನಾಗಿ ಕೆಲಸ ಮಾಡುತ್ತವೆ ಮತ್ತು ಅತ್ಯುತ್ತಮವಾದ ಫಲಿತಾಂಶವನ್ನು ಕೊಡುತ್ತವೆ. ಈಗ ಇನ್ನೊಂದು ಉದಾ ಹರಣೆಗೆ ಹೇಳುವುದಾದರೆ ಸಿದ್ಧಗಂಗಾ ಇಂಜಿನಿಯರಿಂಗ್ ಕಾಲೇಜು, ಸಿದ್ಧ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು ಇತ್ಯಾದಿ ವಿದ್ಯಾ ಸಂಸ್ಥೆಗಳನ್ನು ಶ್ರೀ ಸಿದ್ಧಗಂಗಾ ಸ್ವಾಮೀಜಿ ಯವರು ಸ್ಥಾಪನೆ ಮಾಡದಿದ್ದರೆ ತುಮಕೂರಿನಲ್ಲಿ ಅನೇಕ ಜನ ಮಕ್ಕಳು ಪಿ.ಯು.ಸಿ. ಯಿಂದ ಮುಂದಕ್ಕೆ ಹೋಗುವುದಕ್ಕೆ ಅವಕಾಶ ಇಲ್ಲದಂತಹ ಪರಿಸ್ಥಿತಿ ಇತ್ತು. ಆಗ ಅವರೇನೋ ದೊಡ್ಡ ಮನಸ್ಸು ಮಾಡಿ ಅವುಗಳನ್ನು ಸ್ಥಾಪನೆ ಮಾಡಿದರು. ಇವೊತ್ತು ಆ ವಿದ್ಯಾ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಹೀಗೆ ಯಾವ ಖಾಸಗಿ ವಿದ್ಯಾ ಸಂಸ್ಥೆಗಳೇ ಆಗಲೀ ಚೆನ್ನಾಗಿ ಕೆಲಸ ಮಾಡುವುದಾದರೆ ಅವುಗಳಿಗೆ ಆದಷ್ಟು ಮಟ್ಟಿಗೆ ಸರ್ಕಾರದವರು ಜಾಸ್ತಿ ಹಣ ಸಹಾಯವನ್ನು ಮಾಡ ಬೇಕು ಚೆನ್ನಾಗಿ ಕೆಲಸ ಮಾಡದೇ ಇರುವ ಕಡೆ ಕಟ್ಟು ನಿಟ್ಟಾಗಿ ರೆಕಗ್ನಿಷನ್ ಕಿತ್ತುಹಾಕಿ ಅದನ್ನು ವ್ಯವಸ್ಥಿತವಾಗಿ ನಡೆಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಒಂದೇ ದೃಷ್ಟಿಯಿಂದ, ರಾಜಕೀಯ ದೃಷ್ಟಿಯಿಂದಲಾಗಲೀ ಅಥವಾ ಯಾವುದೇ ದೃಷ್ಟಿಯಿಂದಾಗಲೀ ಖಾಸಗೀ ವಿದ್ಯಾ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಮತ್ತು ಅವುಗಳನ್ನು ಕಿತ್ತುಹಾಕುವುದಕ್ಕೆ ಕ್ರಮಕೈಗೊಳ್ಳಿ ಎಂದು ಹೇಳುವುದು ತಪ್ಪು, ಅವರು ಆ ರೀತಿ ದುರುದ್ದೇಶ ದಿಂದ ಹೇಳಬಹುದು ಎಂದು ಹೇಳಿದರೆ ತಪ್ಪಾಗುವುದಿಲ್ಲ, ಎಂದು ನನಗನ್ನಿಸುತ್ತದೆ.

(ಶ್ರೀ ಎಂ. ಎನ್. ರಾಮಣ್ಣ)

ಇನ್ನು ನಾಲ್ಕನೆಯದಾಗಿ ಕೆಲವು ಕಡೆ ಎಚ್.ಟಿ.ಸಿ. ಕಾಲೇಜುಗಳನ್ನು ತೆರೆದು ಅವುಗಳಲ್ಲಿ ಉಪಾಧ್ಯಾಯರಿಗೆ ತರಪೇತಿಯನ್ನು ಕೊಡುತ್ತಿದ್ದಾರೆ. ಕೇವಲ ಒಂದೆರಡು ವರ್ಷಗಳಲ್ಲಿ ಪ್ರತಿಯೊಬ್ಬ ಉಪಾಧ್ಯಾಯರಿಗೂ ತರಪೇತಿಯನ್ನು ಕೊಟ್ಟು 100ಕ್ಕೆ 90 ಜನಗಳನ್ನು ಪಾಸುಮಾಡಿಸುತ್ತಿದ್ದಾರೆ. ಇಂಥವರು ಭಾವಿ ಜನಾಂಗವನ್ನು ಭಾವಿ ಪ್ರಜೆಗಳನ್ನು ತಯಾರುಮಾಡುವುದಕ್ಕಾಗಿ ಪ್ರಾಥಮಿಕ ಪಾಠಶಾಲೆಗಳಲ್ಲಿ ಪಾಠವನ್ನು ಹೇಳಬೇಕಾಗಿದೆ. ಉತ್ತಮವಾದ ಪ್ರಜೆಗಳನ್ನಾಗಿ ಮಾಡತಕ್ಕ ಒಂದು ದೊಡ್ಡ ಜವಾಬ್ದಾರಿಯನ್ನು ಹೊತ್ತಿರತಕ್ಕ ಉತ್ತಮವಾದ ಉಪಾಧ್ಯಾಯರನ್ನು ತಯಾರು ಮಾಡತಕ್ಕ ಕ್ಷೇತ್ರ ಯಾವ ರೀತಿ ಇದೆ ಎನ್ನತಕ್ಕ ವಿಷಯವನ್ನು ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಉಪಾಧ್ಯಾಯರ ಮಟ್ಟ ಏನಿದೆ ಎಂಬುದನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಉಪಾಧ್ಯಾಯರು ಯಾವ ರೀತಿ ಇರಬೇಕೆಂದರೆ, ಅವರು ಒಳ್ಳೆಯ ಸುಸಂಸ್ಕೃತರಾಗಿರಬೇಕು. "ಗುರು ಬ್ರಹ್ಮೋ ಗುರುವಿಷ್ಣೋ ಗುರು ದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರುವೇನಮಃ" ಎನ್ನುವ ಹಾಗೆ ಗುರುವಾಗಿರುವವನಿಗೆ ತ್ರಿಮೂರ್ತಿಗಳಿಗಿರುವ ಎಲ್ಲಾ ವಿಧವಾದ ಗುಣಗಳೂ ಮತ್ತು ಬೆಳೆಯೂ ಇದ್ದು ಅವರು ಭಾವೀ ಜನಾಂಗವನ್ನು ತಯಾರು ಮಾಡತಕ್ಕ ಉಪಾಧ್ಯಾಯರಾಗಿರಬೇಕು. ಅಂಥಾ ಉಪಾಧ್ಯಾಯರುಗಳು ಈಗ ಸಿಕ್ಕದೇ ಇರುವುದರಿಂದ ಉತ್ತಮವಾದ ವಿದ್ಯಾರ್ಥಿಗಳನ್ನು ತಯಾರುಮಾಡುವುದಕ್ಕೆ ಆಗಿಲ್ಲ. ಈ ಮಧ್ಯೆ ಸ್ಟ್ರೈಕು, ಗಲಾಟೆಗಳು ಬೇರೆ ನಡೆಯುತ್ತಿರುತ್ತವೆ. ಸ್ಕೂಲುಗಳಲ್ಲಿ ಸರಿಯಾಗಿ ರಿಜಲ್ಟುಬಾರದೇ ಇದ್ದರೆ ಅದಕ್ಕೆ ಉಪಾಧ್ಯಾಯರು ಕಾರಣವೇ ವಿನಾ ಅದಕ್ಕೆ ಮ್ಯಾನೇಜ್‌ಮೆಂಟಿನವರು ಕಾರಣರಲ್ಲ. ಅವಕ್ಕೆ ಮನ್ನಣೆ ನೀಡಿರತಕ್ಕ ಸರ್ಕಾರದವರೂ ಕಾರಣರಲ್ಲ. ಉಪಾಧ್ಯಾಯರನ್ನು ಸೆಲೆಕ್ಟ್ ಮಾಡತಕ್ಕ ಕಾಲದಲ್ಲಿ ಉತ್ತಮವಾದ ಉಪಾಧ್ಯಾಯರನ್ನು ಆರಿಸಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ಪ್ರೈಮರಿ ಸ್ಕೂಲುಗಳಿಗೆ ಆದಷ್ಟೂ ಜಾಸ್ತಿ ಹೆಣ್ಣು ಮಕ್ಕಳನ್ನೇ ಉಪಾಧ್ಯಾಯರನ್ನಾಗಿ ನೇಮಿಸಿಕೊಳ್ಳಬೇಕು. ಇವರಿಂದ ಹೆಚ್ಚು ಮಕ್ಕಳನ್ನು ಪುರೋಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಪ್ರೈಮರಿ ಶಾಲೆಗಳಲ್ಲಿ ಚಿಕ್ಕವಯಸ್ಸಿನ ಮಕ್ಕಳು ಇರುವುದರಿಂದ ಅವರು ಗಂಡಸು ಉಪಾಧ್ಯಾಯರ ಹತ್ತಿರ ಸರಿಯಾಗಿ ಹೊಂದಿಕೊಳ್ಳುವುದು ಕಷ್ಟ. ಆದರೆ ಮಹಿಳಾ ಉಪಾಧ್ಯಾಯರ ಹತ್ತಿರ ಬೇಗ ಮಕ್ಕಳು ಹೊಂದಿಕೊಳ್ಳುತ್ತವೆ. ಈ ದೃಷ್ಟಿಯಿಂದ ಪ್ರೈಮರಿ ಸ್ಕೂಲುಗಳಲ್ಲಿ ಅದಷ್ಟು ಮಟ್ಟಿಗೆ ಜಾಸ್ತಿಯಾಗಿ ಹೆಣ್ಣುಮಕ್ಕಳನ್ನೇ ಉಪಾಧ್ಯಾಯಿನಿಯರನ್ನಾಗಿ ನೇಮಿಸಿಕೊಂಡರೆ ಅಲ್ಲಿ ಆ ಮಟ್ಟದಲ್ಲಿ ಮಕ್ಕಳಿಗೆ ಉತ್ತಮವಾದ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಕಡೆಯದಾಗಿ ಹೇಳುವುದಾದರೆ ವಯಸ್ಕರ ಶಿಕ್ಷಣದ ಸಮಿತಿಯ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಮೊಟ್ಟಮೊದಲನೆಯದಾಗಿ ಅನೇಕ ಜನ ಹಿರಿಯರು ವಯಸ್ಕರಿಗೆ ಒತ್ತಾಯದಿಂದ ವಿದ್ಯಾದಾನ ಮಾಡಬೇಕು ಎನ್ನುವ ದೃಷ್ಟಿಯಿಂದ ವಯಸ್ಕರ ಶಿಕ್ಷಣ ಸಮಿತಿಯನ್ನು ಪ್ರಾರಂಭ ಮಾಡಿದರು. ಕಾಲೇಜಿನ ವಿದ್ಯಾರ್ಥಿಗಳು ಅನೇಕ ಜನ ಸ್ವಯಂಸೇವಕರು ಕೆಲಸ ಮಾಡಿ ಈ ದೇಶದಲ್ಲಿ ಏನು ಅಜ್ಞಾನ ಇದೆ ಅದನ್ನು ಹೊಡೆದು ಓಡಿಸಬೇಕಾದರೆ ವಯಸ್ಕರ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕೆಂದು ಮನಗಂಡು ಸ್ವಂತವಾಗಿ ಪ್ರಯತ್ನಮಾಡಿ ಆ ಒಂದು ಕಾರ್ಯವನ್ನು ಮಾಡಿದರು. ಈಗ ಅದೇನೋ ಈ ವಯಸ್ಕರ ಶಿಕ್ಷಣ ಸಮಿತಿಯ ಮೇಲೆ ಸರ್ಕಾರದ ವಕ್ರದೃಷ್ಟಿ ಬಿದ್ದಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಶ್ರೀಮಾನ್ ಕಂಠಿಯವರು ವಿದ್ಯಾಮಂತ್ರಿಗಳಾಗಿದ್ದಾಗ ಈ ವಯಸ್ಕರ ಶಿಕ್ಷಣ ಸಮಿತಿಯ ಮೇಲೆ ಸ್ವಲ್ಪಮಟ್ಟಿಗೆ ಸರ್ಕಾರದ ವಕ್ರದೃಷ್ಟಿ ಬಿದ್ದಿದೆ ಎಂದು ಗೊತ್ತಾಯಿತು. ಯಾವ ಸಂಸ್ಥೆ 25 ವರ್ಷಗಳ ಕಾಲ ಖಾಸಗಿಯವರ ಆಡಳಿತದಲ್ಲಿ ಬಹಳ ಚೆನ್ನಾಗಿ ನಡೆಸಲ್ಪಟ್ಟಿತು ಎಂದು ಹೊರದೇಶಗಳಲ್ಲಿ ಕೂಡ ಮಾನ್ಯತೆಯನ್ನು ಪಡೆದಿದೆ. ಇಂಥಾ ಸಂಸ್ಥೆಯ ಬಗ್ಗೆ ಸರ್ಕಾರದವರು ಅನುಮಾನ ಪಡುವುದಕ್ಕೆ ಪ್ರಾರಂಭ ಮಾಡಿದ್ದಾರೆ ಎಂದು ನಾನಾದರೂ ಹೇಳುತ್ತೇನೆ. ಇವೊತ್ತು ಈ ಮಂತ್ರಿಮಂಡಲದಲ್ಲಿ ಇರತಕ್ಕವರು ಯಾರು ಇದ್ದಾರೆಯೋ ಅವರೆಲ್ಲರೂ ಖಾಸಗಿಯವರು ಮತ್ತು ಜನಗಳಿಂದ ಚುನಾಯಿತರಾದವರು. ಹಾಗೆಯೇ ಮೈಸೂರು ವಯಸ್ಕರ ಶಿಕ್ಷಣ ಸಮಿತಿಯಲ್ಲಿರತಕ್ಕ ಸದಸ್ಯರು ಯಾರು ಇದ್ದಾರೆ ಅವರಿಂದ ಚುನಾಯಿತರಾದಂಥವರೇ ಈ ಸಮಿತಿಯ ಎಗ್ಸಿಕ್ಯೂಟೀವ್ ಕಮಿಟಿಯಲ್ಲಿ ಇದ್ದಾರೆ. ಮತ್ತು ಅಧ್ಯಕ್ಷರಾಗಿದ್ದಾರೆ. ಈ ವಯಸ್ಕರ ಶಿಕ್ಷಣ ಸಮಿತಿಯವರು ಬಹಳ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ, ಅದರಲ್ಲಿ ಯಾವುದೂ ಅಡ್ಡಿಯಿಲ್ಲ ಎಂದು ನನಗೆ ಅನಿಸುತ್ತದೆ. ಆ ಸಮಿತಿಯಲ್ಲಿ ಲೆಕ್ಕಪತ್ರಗಳ ಆಡಿಟ್ ಕೂಡ ಮಾಡುತ್ತಿದ್ದಾರೆ. ಹೀಗಿರುವಾಗ ಆ ಸಮಿತಿಯಲ್ಲಿ ಸರ್ಕಾರದವರು

ಹಸ್ತಕ್ಷೇಪ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಇವರು ಈ ರೀತಿ ಮಾಡುವುದಾದರೆ ಒಂದು ಕಡೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಎಂದು ಹೇಳುತ್ತಾರೆ. ಇನ್ನೊಂದು ಕಡೆ ಎಲ್ಲಾ ಅಧಿಕಾರವೂ ನಮ್ಮ ಹತ್ತಿರವೇ ಇರಬೇಕು ಎಂದು ಹೇಳಿದ ಹಾಗಾಗುತ್ತದೆ. ಯಾವ ಸಂಸ್ಥೆ ಅತ್ಯುತ್ತಮವಾಗಿ ಕೆಲಸ ಮಾಡಿ ಹೊರದೇಶಗಳಿಂದ ಮಾನ್ಯತೆಯನ್ನು ಪಡೆದು ಸಹಾಯವನ್ನು ಪಡೆಯುತ್ತಿದೆಯೋ ಅಂಥಾ ಸಂಸ್ಥೆಗೆ ಅಧ್ಯಕ್ಷರನ್ನು ನಾಮಕರಣ ಮಾಡುತ್ತಾರೆ ಎಂದು ಗೊತ್ತಾಗಿದೆ ಅದು ಸರಿಯಲ್ಲ, ಅಧ್ಯಕ್ಷರನ್ನು ನಾಮಕರಣ ಮಾಡುವುದರ ಜೊತೆಗೆ ಚೀಫ್ ಎಗ್ಜಿಕ್ಯುಟೀವ್ ಅಫೀಸರೊಬ್ಬರನ್ನೂ ಡಿಪಾರ್ಟ್‌ಮೆಂಟಿನಿಂದ ಅಲ್ಲಿಗೆ ಹಾಕುತ್ತಿದ್ದಾರೆಂದು ಹೇಳುತ್ತಿದ್ದಾರೆ. ನನಗಾದರೂ ಅನಿಸುತ್ತದೆ ಸರ್ಕಾರಿ ನೌಕರಿಯಲ್ಲಿರತಕ್ಕವರು ಬೃಹಸ್ಪತಿಗಳು ಚೆನ್ನಾಗಿ, ಕೆಲಸ ಮಾಡುತ್ತಾರೆ, ಅವರನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ಎನ್ನುವ ವಾದವನ್ನು ನಾನು ಒಪ್ಪುವುದಿಲ್ಲ. ಸರ್ಕಾರದಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವೊತ್ತಿನ ದಿವಸ ಸರ್ಕಾರಕ್ಕೆ ನಾನು ಒಂದು ಸವಾಲು ಹಾಕುತ್ತೇನೆ. ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕೆಲಸ ಮಾಡತಕ್ಕವರು, ವಿದ್ಯಾ ಇಲಾಖೆಯಲ್ಲಿ ತಾಲ್ಲೂಕು ಮಟ್ಟದಿಂದ ಹಿಡಿದು ರಾಜ್ಯಮಟ್ಟದವರೆಗೂ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲ, ಅವರಿಗಿಂತ ನಿಷ್ಠೆಯಲ್ಲಿ, ಪ್ರಾಮಾಣಿಕತೆಯಲ್ಲಿ ಮತ್ತು ಕೆಲಸ ಮಾಡುವುದರಲ್ಲಿ ಈ ವಯಸ್ಕರ ಶಿಕ್ಷಣ ಸಮಿತಿಯವರು ಒಂದು ಹೆಜ್ಜೆ ಮುಂದೆ ಇದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಕಾಲಾವಕಾಶ ಇಲ್ಲದೆ ಇರುವುದರಿಂದ ಹೆಚ್ಚು ವಿಷಯಗಳನ್ನು ಹೇಳುವುದಕ್ಕೆ ಅವಕಾಶವಾಗಲಿಲ್ಲ. ಆದ್ದರಿಂದ ಇಷ್ಟು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

5-30 P.M.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕ 36ಕೋಟಿ 17ಲಕ್ಷ 27ಸಾವಿರದ 200ರೂಪಾಯಿಗಳ ಶಿಕ್ಷಣ ಇಲಾಖೆಯ ಬೇಡಿಕೆಯನ್ನು ನಾನು ವಿರೋಧಿಸುತ್ತ ಒಂದೆರಡು ವಿಷಯಗಳನ್ನು ಸಭಾಧ್ಯಕ್ಷರ ಮೂಲಕ ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಪ್ರಾಥಮಿಕ ಶಾಲೆಗಳ ಅವ್ಯವಸ್ಥೆಯನ್ನು ನೋಡಿದರೆ ದುಃಖವಾಗುತ್ತದೆ ಮತ್ತು ಈ ಶಾಲೆಗಳ ಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಅದರ ಒಂದು ವ್ಯವಸ್ಥೆ, ಧೋರಣೆ ಮತ್ತು ಧ್ಯೇಯ ಹೇಗಿದೆ ಎನ್ನುವುದು ಆ ಗ್ರಾಮಾಂತರ ಪ್ರದೇಶಗಳಲ್ಲೇ ಹುಟ್ಟಿ ಬೆಳೆದಿರತಕ್ಕ ನಮ್ಮ ಮಾನ್ಯ ಸಚಿವರಿಗೆ ಚೆನ್ನಾಗಿ ಮನವರಿಕೆಯಾಗಿದೆ. ಹಾಗೆ ಅವರು ಈ ಶಾಲೆಗಳ ವಿಷಯ ಚೆನ್ನಾಗಿ ಮನಗಂಡಿದ್ದರೂ ಅವರು ಈ ವಿದ್ಯಾ ಇಲಾಖೆಯನ್ನು ವಹಿಸಿಕೊಂಡು ಒಂದು ವರ್ಷದ ಮೇಲಾಗಿದ್ದರೂ ಈ ಶಾಲೆಗಳ ಅವ್ಯವಸ್ಥೆಯನ್ನು ಇನ್ನೂ ಸರಿಪಡಿಸದಿರುವುದನ್ನು ನೋಡಿದರೆ ನನಗೆ ಬಹಳ ವ್ಯಥೆಯಾಗುತ್ತದೆ. ಅಲ್ಲಿ ಒಂದೊಂದು ಪ್ರಾಥಮಿಕ ಶಾಲೆಯಲ್ಲೂ 40ರಿಂದ ಹಿಡಿದು 130ರವರೆಗೂ ವಿದ್ಯಾರ್ಥಿಗಳಿರುತ್ತಾರೆ. ಅಂಥ ಶಾಲೆಗೂ ಒಬ್ಬರೇ ಉಪಾಧ್ಯಾಯರು. ಇದನ್ನು ಮಾನ್ಯ ಸಚಿವರು ಮನಗಂಡರೂ ಕಾಣದ ಹಾಗೆ ಇದ್ದಾರೆ. ಕೆಲವು ಶಾಲೆಗಳಲ್ಲಿರತಕ್ಕ ಉಪಾಧ್ಯಾಯರು ಅಲ್ಲಿ ಸರಿಯಾಗಿ ಒಂದು ಗಂಟೆ ಕಾಲ ಕೂಡ ಪಾಠ ಮಾಡುತ್ತಿಲ್ಲ. ಇದನ್ನು ಸರಿಯಾದ ರೀತಿಯಲ್ಲಿ ಸರ್ಕಾರದವರು ಪರಿಶೀಲನೆ ಮಾಡತಕ್ಕದ್ದು ಅವಶ್ಯಕ; ಹಾಗೂ ಸೂಕ್ತವಾದುದೆಂದು ಹೇಳುತ್ತೇನೆ. ಇನ್ನಾದರೂ ಸರ್ಕಾರ ಈ ಶಾಲೆಗಳ ಹಾಗೂ ಉಪಾಧ್ಯಾಯರುಗಳ ಅವ್ಯವಸ್ಥೆಯನ್ನು ಸರಿಪಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳದಿರುವುದು ಶೋಚನೀಯ. ಇಂದಿನ ನಮ್ಮ ಮಕ್ಕಳೇ ಮುಂದಿನ ದೇಶದ ಪ್ರಜೆಗಳು. ಇವರು ಒಳ್ಳೆಯ ಸತ್ಪ್ರಜೆಗಳಾಗಬೇಕಾಗಿದ್ದರೆ, ಇವರ ಅಭಿವೃದ್ಧಿ ಇವರ ಶ್ರೇಯಸ್ಸು ಆಗಬೇಕಾದರೆ ಅವರಿನ್ನೂ ಆ ವಿದ್ಯಾರ್ಥಿ ದೆಶೆಯಲ್ಲಿರತಕ್ಕ ಕಾಲದಲ್ಲೇ ಅವರಿಗೆ ನಾವು ಒಂದು ಒಳ್ಳೆಯ ವಿದ್ಯೆಯನ್ನು ಕೊಡಬೇಕಾದ್ದು ನಮ್ಮ ಆದ್ಯ ಕರ್ತವ್ಯ. ನಮ್ಮ ಸಮಾಜದ ಏಳಿಗೆಗೆ ಸಾಧನವಾಗತಕ್ಕ ಮೂಲ ಧ್ಯೇಯ ಧೋರಣೆಗಳೇನೆಂಬುದನ್ನು ಅವರಿಗೆ ಮನವರಿಕೆ ಮಾಡಿಕೊಟ್ಟು ಅವರನ್ನು ಸತ್ಪ್ರಜೆಗಳನ್ನಾಗಿ ಮಾಡತಕ್ಕದ್ದನ್ನು ನಾವಿನ್ನೂ ಅರ್ಥ ಮಾಡಿಕೊಂಡಿಲ್ಲ ಎಂದು ಕಾಣುತ್ತಿದೆ. ನಮ್ಮ ವಿದ್ಯಾಭ್ಯಾಸದಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡತಕ್ಕ ಬಗ್ಗೆ ಕಳೆದ 20 ವರ್ಷಗಳಿಂದ ಅಪಾರವಾಗಿ ಹಣವನ್ನು ಖರ್ಚುಮಾಡಿದ್ದರೂ ಅನೇಕ ವರದಿಗಳನ್ನು ತರಿಸಿಕೊಂಡಿದ್ದರೂ ಅವುಗಳಲ್ಲಿ ಯಾವುದೊಂದನ್ನೂ ಕಾರ್ಯಗತ ಮಾಡಲಿಲ್ಲ. ಎಲ್ಲವೂ ಬುಟ್ಟಿಯಲ್ಲಿ ಬಿದ್ದಿವೆ. ನಿಷ್ಕಾರಣವಾಗಿ ಲಕ್ಷಾಂತರ ರೂಪಾಯಿಗಳು ವ್ಯಯವಾದವು. ಹಿಂದೆ ಇದು ಯಾವರೀತಿಯಾಗಿ ನಡೆದುಕೊಂಡು ಬರುತ್ತಿತ್ತೋ ಅದೇ ಹಳೆಯ ಹಾದಿಯಲ್ಲೇ ಇದು ಈಗಲೂ ಮುಂದುವರಿಯುತ್ತಿದೆ. ಯಾವ ಒಂದು ಹೊಸ ಬದಲಾವಣೆಯೂ ನಮ್ಮ ವಿದ್ಯಾಭ್ಯಾಸದಲ್ಲಿ ಆಗಲಿಲ್ಲ.

(ಶ್ರೀ ಬಿ. ದೊಡ್ಡಬೋರೇಗೌಡ)

ಇನ್ನು ನಮ್ಮ ವಿದ್ಯಾ ಮಂತ್ರಿಗಳೂ ಮತ್ತು ಇನ್ನಿತರೇ ಸಚಿವರೂ ನಮ್ಮ ರಾಜ್ಯದಲ್ಲಿ ನಮ್ಮ ಮಾತೃಭಾಷೆಯಾದ ಕನ್ನಡವೇ ರಾಜ್ಯ ಭಾಷೆಯಾಗಬೇಕು, ಆಡಳಿತ ಭಾಷೆಯಾಗಬೇಕು ಎಂದು ಎಲ್ಲರೂ ಬಾಯಲ್ಲಿ ಹೇಳತಕ್ಕವರೇ ಆಗಿದ್ದಾರೆ. ಆದರೆ ಈ ಎಲ್ಲ ಮಂತ್ರಿಗಳ ಮಕ್ಕಳು ಯಾರೂ ಕನ್ನಡ ಶಾಲೆಗಳಿಗೆ ಹೋಗುತ್ತಿಲ್ಲ, ಅವರೆಲ್ಲಾ ಇಂಗ್ಲೀಷ್‌ನ್ನು ಬೋಧಿಸತಕ್ಕ ಕಾನ್‌ವೆಂಟ್ ಸ್ಕೂಲುಗಳಿಗೆ ಹೋಗುತ್ತಿದ್ದಾರೆ. ಹೀಗೆ ಮಂತ್ರಿಗಳಾದವರು ತಾವು ನುಡಿಯುತ್ತಿರುವುದೇ ಒಂದು ಅವರು ನಡೆಯುತ್ತಿರುವುದೇ ಇನ್ನೊಂದು. ಇದನ್ನು ನೋಡಿ ನನಗೆ ಬಹಳ ವ್ಯಸನವಾಗಿದೆ. ಸಚಿವರೇ ಇಂಥ ಒಂದು ಅಡ್ಡ ಹಾದಿ ಹಿಡಿದಿರುವುದೇ ದೇಶಕ್ಕೆ ವಿನಾಶಕರವಾದ್ದು. ಎಲ್ಲಿ ನೋಡಲಿ ಯಾವ ವೇದಿಕೆಯ ಮೇಲೆ ನೋಡಿದರೂ ಈ ಮಂತ್ರಿಗಳು ಕನ್ನಡ ರಾಜ್ಯ ಭಾಷೆಯಾಗಬೇಕು, ಅದು ಆಡಳಿತ ಭಾಷೆಯಾಗಬೇಕು, ಅದು ನಮ್ಮ ಮಾತೃ ಭಾಷೆ; ಅದನ್ನು ಮುಂದಕ್ಕೆ ತರಬೇಕು ಎಂದು ಬಾಯಲ್ಲಿ ಹೇಳುತ್ತ ಕಾರ್ಯದಲ್ಲಿ ಅದನ್ನು ಮಾಡದೆ ಕೈಬಿಟ್ಟಿದ್ದಾರೆ. ಇದನ್ನು ಕಂಡು ಅಧಿಕಾರಿಗಳು ಕೂಡ ಅದೇ ಹಾದಿ ಹಿಡಿದಿದ್ದಾರೆ. ಅವರೂ ಕೂಡ ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳುಹಿಸುತ್ತಿಲ್ಲ. ಆದರೆ ಇನ್ನಾದರೂ ಸರ್ಕಾರದವರು ಎಚ್ಚೆತ್ತು ಗ್ರಾಮಾಂತರ ಪ್ರದೇಶಗಳ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಅಲ್ಲಿರತಕ್ಕ ಆ ಅವ್ಯವಸ್ಥೆಗಳನ್ನು ಕೂಡಲೆ ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನು ಆ ಶಾಲೆಗಳಿಗೆ ಹೋಗತಕ್ಕ ಚಿಕ್ಕ ಚಿಕ್ಕ ಮಕ್ಕಳಿಗೆ ಮಧ್ಯಾಹ್ನದಲ್ಲಿ ಒಂದು ಉಪಾಹಾರ ಕೊಡತಕ್ಕ ಪದ್ಧತಿ ಇದೆ. ಇದರ ಬಗ್ಗೆ ನಡೆಯುತ್ತಿರುವ ಅನ್ಯಾಯಗಳನ್ನು ಹೇಳಲಸಾಧ್ಯ. ಅಮೇರಿಕಾ ದೇಶದ ಕೇರ್ ಸಂಸ್ಥೆಯಿಂದ ತಂದ ಹಾಲಿನ ಪುಡಿ, ರವೆ ಮತ್ತು ತುಪ್ಪ ಇವುಗಳನ್ನೆಲ್ಲಾ ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಇದು ಕೆಲವು ರಾಜಕೀಯ ಮುಖಂಡರ ಕೈವಾಡವಾಗಿದೆ. ಅನೇಕ ಪಾಠಶಾಲೆಗಳಲ್ಲಿ ಇದೇ ಒಂದು ವ್ಯಾಪಾರವೇ ಆಗಿದೆ.

ಶ್ರೀ ಕೆ. ವಿ. ಶಂಕರೇಗೌಡ.—ಮಾನ್ಯ ಸದಸ್ಯರು ಸರಿಯಾಗಿ ತಿಳಿದುಕೊಳ್ಳದೆ ಮಾತನಾಡ ತಕ್ಕದ್ದು ಸರಿಯಾದ್ದಲ್ಲ. ಇದರಿಂದ ಜನರಲ್ಲಿ ಒಂದು ತಪ್ಪು ಭಾವನೆಗೆ ಅವಕಾಶವಾಗಬಹುದು. ಅಲ್ಲಿ ಈ ದಿವಸ ಅವರು ಯಾವ ಹಾಲಿನ ಪುಡಿಯನ್ನೂ ಸಪ್ಲೈಮಾಡುತ್ತಿಲ್ಲ. ತುಪ್ಪವನ್ನೂ ಕೊಡುತ್ತಿಲ್ಲ. ರವೆಯನ್ನೂ ಕೊಡುತ್ತಿಲ್ಲ. ಒಂದು ಬಗೆಯ ಗುಳಿಗೆಗಳನ್ನು ಮಾತ್ರ ಕೊಡುತ್ತಿದ್ದಾರೆ, ಅಷ್ಟೇ.

ಶ್ರೀ ಬಿ. ದೊಡ್ಡಬೋರೇಗೌಡ.—ಅಮೇರಿಕಾ ದೇಶದ ಕೇರ್ ಸಂಸ್ಥೆಯವರು ಒದಗಿಸುತ್ತಿದ್ದಾಗ ಎಲ್ಲಾ ಜಿಲ್ಲೆಗಳಲ್ಲೂ ಅವುಗಳ ದುರುಪಯೋಗವಾಗುತ್ತಿತ್ತು, ಅದರ ಬಗ್ಗೆ ಅನೇಕ ಕಡೆ ವಿಚಾರಣೆಗಳಾದವು. ಆದರೆ ಆ ಬಗ್ಗೆ ಎಷ್ಟು ಜನರಿಗೆ ಇದುವರೆಗೂ ಶಿಕ್ಷೆಯಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಸವಿಸ್ತಾರವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನಗೆ ಕಂಡಹಾಗೆ 4–5 ಕೇಸುಗಳ ವಿಚಾರಣೆ ಆಯಿತು. ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ 16 ವರ್ಷ ಕಾಲ ಬೇಕೇ? ಇದಕ್ಕೆ ಸರ್ಕಾರದವರು ಕೂಡಲೇ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಹೈಸ್ಕೂಲುಗಳಲ್ಲಿ ಅಭ್ಯಾಸ ಮಾಡತಕ್ಕ ಹುಡುಗರು ಬಹು ಸಂಖ್ಯೆಯಲ್ಲಿ ಪಬ್ಲಿಕ್ ಪರೀಕ್ಷೆಗಳಲ್ಲಿ ಫೇಲಾಗುತ್ತಿರುವ ವಿಚಾರದಲ್ಲಿ ಮೊನ್ನೆತಾನೆ ಇದೇ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ನಮ್ಮ ಮಂತ್ರಿಗಳು ಮಂಡ್ಯಾ ಜಿಲ್ಲೆಯಲ್ಲಿ ಒಂದು ಪರ್ಸೆಂಟಿನಿಂದ ಏಳು ಪರ್ಸೆಂಟ್‌ವರೆಗೆ ಮಾತ್ರ ಪಾಸಾಗಿದ್ದಾರೆಂದು ತಿಳಿಸಿದರು. ಅದಕ್ಕೆ ಕಾರಣರು ಅಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರು ಮತ್ತು ಆ ಹುಡುಗರ ತಂದೆತಾಯಿಗಳು ಜವಾಬ್ದಾರರು ಎಂದು ಹೇಳಿದರು. ಆದರೆ ಅಂಥ ಉಪಾಧ್ಯಾಯರಮೇಲೆ ಇಲ್ಲಿಯವರೆಗೆ ಆಡಳಿತ ವರ್ಗದವರು ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರ ಕೊಡತಕ್ಕ ಕಾಲದಲ್ಲಿ ವಿವರವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ಈ ಹೈಸ್ಕೂಲುಗಳೆಲ್ಲಾ ಅವ್ಯವಸ್ಥೆಯನ್ನು ತಾಳುತ್ತಿವೆ. ಎಲ್ಲಿ ಕಾಂಗ್ರೆಸ್ಸಿನವರ ಪ್ರಭಾವ ಇದೆಯೋ ಅಲ್ಲೆಲ್ಲಾ ಬರಿ ತಾಲ್ಲೂಕ್‌ಬೋರ್ಡ್ ಹೈಸ್ಕೂಲುಗಳು ಮಾತ್ರ ಇರುತ್ತವೆ. ಇನ್ನು ಆ ಆಡಳಿತ ಗುಂಪಿನವರು ಎಲ್ಲಿ ಹೆಚ್ಚಿಗೆ ಇದ್ದಾರೋ ಅಲ್ಲೆಲ್ಲಾ ಸರ್ಕಾರಿ ಹೈಸ್ಕೂಲುಗಳಿವೆ. ಇದು ನಮ್ಮ ಮಂಡ್ಯಾ ಜಿಲ್ಲೆಗೆ ಬಂದಿರತಕ್ಕ ಒಂದು ಮನೋ ರೋಗ. ಎಲ್ಲಿ ವಿದ್ಯಾವಂತರ ಸಂಖ್ಯೆ ಬಹಳ ಕಡಮೆ ಇದೆಯೋ ಎಲ್ಲಿ ಸರ್ಕಾರಿ ಹೈಸ್ಕೂಲುಗಳಿಲ್ಲವೋ ಅಂಥ ಕಡೆಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪ್ರಾಥಮಿಕ ಶಾಲೆಗಳಿಗೆ ಮಾನ್ಯ ಸಚಿವರು ಹೆಚ್ಚಿನ ಗಮನ ಕೊಡಬೇಕೆಂದು ಹೇಳಿ ನನಗೆ ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಸಭಾಪತಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ (ಬಳ್ಳಾರಿ).—ಮಾನ್ಯ ಸಭಾಪತಿಗಳೇ, ನಮ್ಮ ಮಾನ್ಯ ಶಿಕ್ಷಣ ಮಂತ್ರಿಗಳು ಶಿಕ್ಷಣ ಖಾತೆ ಬಗ್ಗೆ ಇಟ್ಟಿರುವ ಬೇಡಿಕೆಗಳನ್ನು ಸಮರ್ಥಿಸಿ ಕೆಲವು ಮಾತು ಗಳನ್ನು ಹೇಳಲು ಬಯಸುತ್ತೇನೆ. ನಮ್ಮ ಜೀವನದಲ್ಲಿ ಶಿಕ್ಷಣ ಎಂಬುದು ಮಹತ್ತರವಾದ ವಿಷಯ. ಅದು ಒಂಧು ಹೊಸ ಮಾನವೀಯತೆಯನ್ನು ಸ್ಪಷ್ಟನೆ ಮಾಡತಕ್ಕಂಥ ಮಹತ್ತರವಾದ ವಿಷಯ. The aim of education is to produce refined human material. ಇಂತಹ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡಬೇಕಾದ್ದು ಮುಖ್ಯ. ಇದನ್ನು ಸರ್ಕಾರ ಅರಿತುಕೊಂಡು ಅಷ್ಟೇ ಮಹತ್ವವನ್ನು ಈ ಶಿಕ್ಷಣಕ್ಕೆ ಕೊಟ್ಟಿದೆ. ಅದಕ್ಕೋಸ್ಕರವಾಗಿ ಈ ಶಿಕ್ಷಣ ಖಾತೆಗೆ 36 ಕೋಟಿ ರೂಪಾಯಿಗಳ ಬೇಡಿಕೆಯನ್ನು ಮಂಡಿಸಿದ್ದಾರೆ. ಅಷ್ಟೇ ಅಲ್ಲದೆ ಶಿಕ್ಷಣ ವಿಚಾರದಲ್ಲಿ ನಮ್ಮ ಸರ್ಕಾರವು ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಮುಖ್ಯವಾಗಿ ಈ ಶಿಕ್ಷಣವನ್ನು ಉಚಿತವಾಗಿ ಮಾಡಿರುವುದಲ್ಲದೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದು, ಈ ವಿಚಾರದಲ್ಲಿ ನಮ್ಮ ಸರ್ಕಾರ ಒಂದು ಮಹತ್ತರವಾದ ಪ್ರಗತಿಯನ್ನು ಸಾಧಿಸಿದೆ ಎಂಬುದನ್ನು ಎತ್ತಿ ತೋರಿಸಿದೆ. ಅಷ್ಟೇ ಅಲ್ಲದೆ ಕೊಠಾರಿ ಆಯೋಗದ ಶಿಫಾರಸ್ಸನ್ನು ಕೂಡ ಒಪ್ಪಿಕೊಂಡು ಹೆಚ್ಚಿನ ಒಂದು ಸುಧಾರಣೆಯನ್ನು ಮಾಡಲಿಕ್ಕೆ ಭರವಸೆ ಕೊಟ್ಟಿದ್ದಾರೆ. ಆದರೆ ನಾನು ಹೇಳುವುದು ಈ ಕೊಠಾರಿ ಆಯೋಗದ ಶಿಫಾರಸ್ಸು ಆಮೂಲಾಗ್ರವಾಗಿ ಬದಲಾವಣೆಯಾಗಬೇಕು ಮತ್ತು ಈಗಿರುವ ಶಿಕ್ಷಣ ಪದ್ಧತಿ ಹೆಚ್ಚು ಸುಧಾರಣೆಯಾಗಬೇಕು ಎಂದು. ಪೂರ್ವದಲ್ಲಿ ಇದ್ದಂಥ ಶಿಕ್ಷಣ ಪದ್ಧತಿಗೂ, ಈಗಿರುವಂಥ ಶಿಕ್ಷಣ ಪದ್ಧತಿಗೂ ಅಷ್ಟೊಂದು ವ್ಯತ್ಯಾಸ ಏನೂ ಕಾಣುವುದಿಲ್ಲ. ಈಗಿರತಕ್ಕಂಥ ಶಿಕ್ಷಣ ಜೀವನೋಪಾಯ ಕ್ಕಾಗಿ ಇದೊಂದು ಮಾರ್ಗ ಎನ್ನುವ ಭಾವನೆ ಜನರಲ್ಲಿ ಕಾಣುತ್ತದೆಯೇ ವಿನಃ ಇದು ಒಂದು ನಮಗೆ ಜ್ಞಾನವನ್ನು ಸಂಪಾದನೆ ಮಾಡತಕ್ಕಂಥ ಒಂದು ಶಿಕ್ಷಣ ಎಂಬ ಭಾವನೆ ವಿದ್ಯಾರ್ಥಿಗಳಲ್ಲಾಗಲಿ, ಜನಗಳಲ್ಲಾಗಲಿ ಇನ್ನೂ ಮೂಡಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಇದು ಒಂದು ಬರೀ ಜೀವನೋಪಾಯದ ಶಿಕ್ಷಣದ ಮಾರ್ಗ ಆಗಬಾರದು. ಮುಖ್ಯವಾಗಿ ನಮ್ಮ ಮಕ್ಕಳನ್ನು ಹೆಚ್ಚು ಜ್ಞಾನವನ್ನು ಸಂಪಾದಿಸಿ ಉತ್ತಮವಾದ ಪ್ರಜೆಗಳನ್ನಾಗಿ ಮಾಡಲು ಒಂದು ಮಹತ್ತರವಾದ ಸಾಧನೆ ಈ ಶಿಕ್ಷಣದಲ್ಲಿ ಆಗಬೇಕು. ಆದುದರಿಂದ ಇದಕ್ಕೆ ಹೆಚ್ಚು ಮಹತ್ವ ಕೊಡಬೇಕಾಗಿದೆ. ನಮ್ಮ ಜೀವನಕ್ಕೆ ಒಂದು ನೈತಿಕ ನೆಲೆಗಟ್ಟಿಯಾಗಿರಬೇಕು. ಇದರಲ್ಲಿ ಧಾರ್ಮಿಕ ಭಾವನೆ ಹಾಗೂ ರಾಷ್ಟ್ರದ ಭಾವನೆ ಇರತಕ್ಕಂಥ ಶಿಕ್ಷಣವನ್ನು ಜಾರಿಗೆ ತರಬೇಕು. ಕೊಠಾರಿ ಆಯೋಗದ ಶಿಫಾರಸ್ಸನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು ಎಂದು ಹೇಳುತ್ತೇನೆ.

ಇನ್ನು ಭಾಷೆಯ ಬಗ್ಗೆ ಹೇಳುವುದಾದರೆ ಸರ್ಕಾರದವರು ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದ್ದಾರೆ. ಆದರೆ ನಮ್ಮ ರಾಜ್ಯದ ಭಾಷೆಯಾಗಿರತಕ್ಕ ಕನ್ನಡಕ್ಕೆ ಯಾವ ಶಿಕ್ಷಣ ಸಂಸ್ಥೆ ಗಳಲ್ಲೂ ಸಹಿತ ಸಿಕ್ಕಬೇಕಾದ ಸ್ಥಾನಗಳು ಸಿಕ್ಕುತ್ತಾ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಇನ್ನು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಪ್ರೌಢ ಶಾಲಾ ಮಟ್ಟದಲ್ಲೂ ಕೂಡ ಕನ್ನಡ ಮಾಧ್ಯಮವಾಗ ಬೇಕು. ವೈಜ್ಞಾನಿಕ ವಿಷಯದಲ್ಲಿ ಆಗಲಿ, ಕನ್ನಡದಲ್ಲಿ ಅರ್ಥವಾಗುವಷ್ಟು ಬೇರೆ ಭಾಷೆಯಲ್ಲಿ ಅರ್ಥವಾಗುವುದಕ್ಕೆ ಸಾಧ್ಯವಿಲ್ಲ. ನಮ್ಮ ನಾಡಿನ ಮಹಾ ಮಹಾ ಕವಿಗಳು, ಶಿಕ್ಷಣ ತಜ್ಞರು ವಿಜ್ಞಾನದಲ್ಲಿ ಆಗಲಿ, ತತ್ವಬೋಧನೆಯಲ್ಲಿ ಆಗಲಿ ಈ ತಾಯಿನಾಡಿನಲ್ಲಿ ಬೇರೆ ಭಾಷೆಯಲ್ಲಿ ಬೋಧಿಸು ವುದಕ್ಕೆ ಸಾಧ್ಯ ಇಲ್ಲ. ಆದಕಾರಣ ನಮ್ಮ ಶಿಕ್ಷಣ ಸಂಸ್ಥೆಗಳು ಎಲ್ಲಾ ಮಟ್ಟದಲ್ಲೂ ಕೂಡ ಕನ್ನಡ ಮಾಧ್ಯಮವಾಗಬೇಕೆಂದು ಅದಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ಮಹತ್ತರವಾದ ವಿಚಾರ ಏನೆಂದರೆ ಶಿಕ್ಷಕರ ಸುಧಾರಣೆ. ಇದರಲ್ಲಿ ಶಿಕ್ಷಣ ಕೊಡುವುದು ಮುಖ್ಯವಾದ ಉದ್ದೇಶ. ಇವರು ಸಂಪೂರ್ಣ ಮಾನವನ್ನಾಗಿ ಮಾಡುವ ಒಂದು ಮಹತ್ತರವಾದ ಯೋಜನೆಯ ಉದ್ದೇಶ ಇಟ್ಟುಕೊಂಡು ಕಾರ್ಯಗತ ಮಾಡಿದ್ದೇ ಆದರೆ ನಿಜವಾಗಿಯೂ ಶಿಕ್ಷಣ ವಿಚಾರದಲ್ಲಿ ಹೆಚ್ಚಿನ ಪ್ರಗತಿ ಸಾಧನೆಯಾಗುತ್ತದೆ. ಮತ್ತು ದೇಶವೂ ಸುಧಾರಣೆಯಾಗುತ್ತದೆ. ಅದಲ್ಲದೆ ಬರೀ ನೌಕರಿಗೋಸ್ಕರವಾಗಿಯೇ ಶಿಕ್ಷಣ ಕೊಡುವುದಾದರೆ ಇದರ ಮೂಲ ಉದ್ದೇಶ ಈಡೇರಿದಂತಾಗುವುದಿಲ್ಲ. ಪ್ರಾಥಮಿಕ ಶಿಕ್ಷಕರ ವಿಚಾರದಲ್ಲಿ ಹೇಳುವು ದಾದರೆ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಒಂದು ಖಾಸಗೀ ಪ್ರಾಥಮಿಕ ಶಾಲೆ ಇದೆ. ಅದು ಏಡಡ್ ಸ್ಕೂಲ್. ಅಲ್ಲಿ ಉಪಾಧ್ಯಾಯರಲ್ಲಿ ಬಹಳ ಅತೃಪ್ತಿ ಇದೆ. ಅವರಿಗೆ ದೊರಕಬೇಕಾದ ಅರಿಯರ್ಸ್

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಸಂಬಳದ ಬಾಕಿ, ಇಂಕ್ರಿಮೆಂಟ್ 3 ವರ್ಷದಿಂದಲೂ ಬಾಕಿ ಇದೆ. ಸಂಬಳ ಸಾರಿಗೆಗಳ ಬಗ್ಗೆ ತುಂಬಾ ವ್ಯಥೆ ಇದೆ. ಇದರ ಬಗ್ಗೆ ಶಿಕ್ಷಣ ಸಚಿವರ ಗಮನಕ್ಕೂ ತಂದಿದ್ದಾರೆ. ಇದುವರೆಗೂ ಏನೂ ಕೆಲಸ ಆಗಿಲ್ಲ ಎಂದು ಬಹಳ ವ್ಯಥೆಪಟ್ಟು ಹೇಳಬೇಕಾಗಿದೆ. ಇದರ ಬಗ್ಗೆ ಕೂಡಲೇ ಶಿಕ್ಷಕರಿಗೆ ಸುಧಾರಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಈಗ ಸರ್ಕಾರದವರು ತಾಲ್ಲೂಕ್‌ಬೋರ್ಡ್ ಆಡಳಿತ ಮಟ್ಟದಲ್ಲಿರುವ ಶಾಲಾ ಉಪಾಧ್ಯಾಯರುಗಳಿಗೆ ಸಂಬಳ ಕೊಡಲು ಚೆಕ್ ಸಿಸ್ಟಂ ಎಂದು ಏನು ಮಾಡಿದ್ದೀರೋ ಅದರಿಂದ ಶಿಕ್ಷಕರಿಗೆ ಅಷ್ಟು ಅನುಕೂಲವಾಗಿಲ್ಲ. ಎಷ್ಟೋ ಸಲ ಅವರಿಗೆ ಬರಬೇಕಾದ ಅವರ ಬಡ್ತಿ, ಸ್ಪೆಶಲ್ ಅಲೋಯನ್ಸ್ ಬಂದಿರುವುದಿಲ್ಲ. ಇದರಿಂದ ಅವರಿಗೆ ತೊಂದರೆ ಆಗಿ ಅವರ ಮನಸ್ಸು ನೊಂದಿರುತ್ತದೆ. ಶಿಕ್ಷಕರ ಉದ್ಧಾರವೇ ಆಡಳಿತ ಸಂಸ್ಥೆಯ ಗುರಿ. ಯಾವುದೋ ಒಂದು ಖಾಸಗಿ ಶಾಲೆಯಲ್ಲಿ ಅವ್ಯವಸ್ಥೆ ಆಗಿವೆ ಎಂದು ಅದನ್ನು ತಪ್ಪಿಸುವ ಸಲುವಾಗಿ ಎಲ್ಲಾ ಕಡೆಯೂ ಈ ಪದ್ಧತಿಯನ್ನು ಹೇರಿಸುವುದು ಸರಿಯಲ್ಲ. ಬಹುಶೇಕ ಸಂಸ್ಥೆಯಾಗಿರುವ ತಾಲ್ಲೂಕು ಬೋರ್ಡ್‌ನವರು ನಡೆಸುವ ಶಾಲೆಗಳಲ್ಲಿ ಶಿಕ್ಷಕರಿಗೆ ಆಡಳಿತ ಮುಖಾಂತರವೇ ಸಂಬಳ ವಗ್ಯೆರೆ ಕೊಡುವ ವ್ಯವಸ್ಥೆಯಾಗಬೇಕು. ನೇರವಾಗಿ ಕೊಡುವ ಚೆಕ್‌ಸಿಸ್ಟಂ ಪದ್ಧತಿಯನ್ನು ತೆಗೆಯಬೇಕು ಎಂದು ಹೇಳುತ್ತೇನೆ. ಅದರಲ್ಲೂ ಬಳ್ಳಾರಿ ವಿಚಾರದಲ್ಲಿ ಒಂದು ಮಾತನ್ನು ಹೇಳಲು ಇಚ್ಛೆ ಪಡುತ್ತೇನೆ. ಬಳ್ಳಾರಿ ಜಿಲ್ಲೆಯ ಶಾಲೆಗಳ ವ್ಯವಸ್ಥೆ ಬಹಳ ವಿಚಿತ್ರವಾಗಿವೆ. ಅಲ್ಲಿ ಹಿಂದೆ ಡಿಸ್ಟ್ರಿಕ್ಟ್ ಬೋರ್ಡ್ ಆಡಳಿತ ಇದ್ದಂಥ ಕಾಲದಲ್ಲಿ ಮದ್ರಾಸ್ ಸರ್ಕಾರದಲ್ಲಿದ್ದಾಗ ಯಾವ ರೀತಿ ಮುಂದುವರಿಯುತ್ತಾ ಇತ್ತೋ ಅದೇ ರೀತಿ ಡಿಸ್ಟ್ರಿಕ್ಟ್ ಬೋರ್ಡ್ ಹೋದರೂ ಯಾವ ರೀತಿಯೂ ಬದಲಾವಣೆಯಾಗಲಿಲ್ಲ. ಅಲ್ಲಿ ಶೇಕಡ 100ರಷ್ಟು ಗ್ರಾಂಟನ್ನು ಕೊಡುತ್ತಾ ಇದ್ದಾರೆ. ಆದರೂ ಸಹ ಸರಕಾರ ಇದರ ಆಡಳಿತವನ್ನು ವಹಿಸಿಕೊಂಡಿಲ್ಲ. ಡಿಫಂಕ್ಟ್ ಡಿಸ್ಟ್ರಿಕ್ಟ್ ಹೈಸ್ಕೂಲ್ ಎಂದು ಅವನ್ನು ಕರೆಯುತ್ತಿದ್ದಾರೆ. ಸರ್ಕಾರ ಇದರ ಬಗ್ಗೆ ಏಕೆ ಗಮನ ಕೊಡುತ್ತಾ ಇಲ್ಲವೋ ಗೊತ್ತಿಲ್ಲ. ಇದು ಅಡ್ಮಿನಿಸ್ಟ್ರೇಟರ್ ಆಡಳಿತದಲ್ಲಿ ಬಹಳ ದಿನದಿಂದಲೂ ಇದೆ. ಅಲ್ಲಿರುವ ಅಡ್ಮಿನಿಸ್ಟ್ರೇಟರ್ ಬಹಳ ವಿಚಿತ್ರ. ಇದರ ಬಗ್ಗೆ ಮಾನ್ಯ ಮಂತ್ರಿಗಳ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಸಾಕಷ್ಟು ತಂದಿದ್ದಾಗಿದೆ. ಇದರಲ್ಲಿ ಬೇಕಾದಷ್ಟು ಅವ್ಯವಹಾರ ನಡೆಯುತ್ತಾ ಇದೆ. ಉದ್ಧಟತನ ಬೇಕಾದಷ್ಟು ನಡೆಯುತ್ತಾ ಇದೆ. ಆದುದರಿಂದ ಇದರ ಆಡಳಿತ ವ್ಯವಸ್ಥೆಯನ್ನು ಸುಧಾರಿಸಬೇಕೆಂದು ಈಗಾಗಲೇ ಬಳ್ಳಾರಿ ಜಿಲ್ಲೆಯ ಶಾಸಕರು ನಿವೇದನೆ ಮಾಡಿದ್ದಾರೆ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಯೋಗ್ಯವಾದ ಕ್ರಮ ತೆಗೆದುಕೊಂಡು ಈಗಿನ ಆಡಳಿತವನ್ನು ಸುಧಾರಿಸುವುದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಮತ್ತೊಮ್ಮೆ ಮಾನ್ಯ ಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಒತ್ತಿ ಹೇಳುತ್ತೇನೆ.

ಇನ್ನು ಸಾಹಿತ್ಯದ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ. ಜನಪದ ಸಾಹಿತ್ಯದ ಬಗ್ಗೆ ಒಂದು ಅಶ್ಲೀಲವಾದಂಥ ಮಾತು ಕೇಳಿಬಂತು. ಕೆಲವು ಪುಸ್ತಕಗಳನ್ನು ಪರಿಣಿತರು ಬಹಳ ಉನ್ನತ ಮಟ್ಟದಲ್ಲಿ ಪರೀಕ್ಷೆ ಮಾಡಿ ಇದರಲ್ಲಿ ಅಶ್ಲೀಲವೇನೂ ಇಲ್ಲವೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಈ ಪುಸ್ತಕಗಳನ್ನು ಓದುವುದರಿಂದ ಸಣ್ಣ ವಿದ್ಯಾರ್ಥಿಗಳ ಬುದ್ಧಿ ಕೆಡುತ್ತದೆಂದು ನಾವುಗಳು ನಿರೀಕ್ಷಿಸುವುದು ತಪ್ಪಾಗುತ್ತದೆ. ಆದರೆ ಇಂತಹ ಕೆಲವು ಪುಸ್ತಕಗಳನ್ನು ವಿದ್ಯಾರ್ಥಿಗಳ ಬುದ್ಧಿಮಟ್ಟ ಹೆಚ್ಚಾಗಲಿ ಎಂದು ಓದುವುದಕ್ಕೆ ಲೈಬ್ರರಿಯಲ್ಲಿ ಇಡುವುದು ಸರಿಯಲ್ಲ. ವಿದ್ಯಾರ್ಥಿಗಳ ಮನರಂಜನೆಗಾಗಿ, ವಿಹಾರಕ್ಕಾಗಿ ಇಂತಹ ಅಶ್ಲೀಲ ಪುಸ್ತಕಗಳನ್ನು ಇಂತಹ ಅಶ್ಲೀಲ ಸಾಹಿತ್ಯಗಳನ್ನು ಪ್ರಕಟಣೆ ಮಾಡುವುದು ಸರಿಯಲ್ಲ. ಇಂತಹ ಅಶ್ಲೀಲ ಸಾಹಿತ್ಯಗಳನ್ನು ವಿದ್ಯಾರ್ಥಿಗಳಿಗೆ ಉಪದೇಶ ಮಾಡುವುದು ಸಹ ಸರಿಯಲ್ಲ. ಆದರೆ ಕೆಲವೊಂದು ಸಾಹಿತ್ಯಗಳನ್ನು ಅಶ್ಲೀಲವೆಂದು ಕರೆಯುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರೊಬ್ಬರು ಶ್ರವಣಬೆಳಗೊಳದ ಗೊಮಟೇಶ್ವರ ವಿಗ್ರಹದ ಬಗ್ಗೆ ಹೇಳಿದರು. ನಾವು ಯಾವ ಮನಸ್ಸಿನಲ್ಲಿ ನೋಡುತ್ತೇವೋ ಅದರ ಮೇಲೆ ಹೋಗುತ್ತದೆ. ಮಾನ್ಯ ಸದಸ್ಯರು ಅಕ್ಕಮಹಾದೇವಿಯ ಫೋಟೋವನ್ನು ಸಹ ಅದೇ ರೀತಿ ಬೇಕಾದರೆ ನೋಡಬಹುದು. ಮಕ್ಕಳು ಸಣ್ಣ ದೃಷ್ಟಿಯಿಂದ ಈ ವಿಗ್ರಹಗಳನ್ನು ನೋಡಿದರೆ ಅದು ತಪ್ಪಾಗುವುದಿಲ್ಲ. ಉದಾತ್ತ ಬುದ್ಧಿಯನ್ನು ಸಣ್ಣ ಮಕ್ಕಳಲ್ಲಿ ಕಾಣುವುದು ಕಷ್ಟವಾಗುತ್ತದೆ. ಮಕ್ಕಳಲ್ಲಿ ನೀತಿ ಮತ್ತೆ ಹುಟ್ಟಿಸುವಂತಹ ವಿಚಾರಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಬೇಕು. ಉದಾತ್ತ ಬುದ್ಧಿಯನ್ನು ಇಟ್ಟುಕೊಂಡು ಒಂದೇ ಸಾರಿ ಎಲ್ಲ ವಿಚಾರಗಳನ್ನು ವಿದ್ಯಾರ್ಥಿಗಳ ತಲೆಯಲ್ಲಿ ತುಂಬುವುದಕ್ಕೆ ಹೋದರೆ ಅದು ನಿರರ್ಥಕವಾಗುತ್ತದೆ ಮತ್ತು ಅಪಾರ್ಥಕವಾಗುತ್ತದೆ. ಈ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ತಜ್ಞರುಗಳು ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ರೀತಿ ಸಾಹಿತ್ಯ ಮತ್ತು ಕಲೆಗೆ ಸರ್ಕಾರದವರು

ಕೊಡುತ್ತಿರುವ ಪ್ರೋತ್ಸಾಹ ಸಾಲದು. ಹೆಚ್ಚಿನ ಪ್ರೋತ್ಸಾಹ ಕೊಡುವುದು ಅವಶ್ಯಕವಾಗಿದೆ. ಈಗ ದೇಶದ ಮಟ್ಟದಲ್ಲಿ ಭಾರತರತ್ನ ಎಂಬ ಬಿರುದನ್ನು ಕೊಡುತ್ತಿರುವಂತೆ ರಾಜ್ಯದ ಮಟ್ಟದಲ್ಲಿ ಕರ್ನಾಟಕರತ್ನ ಮತ್ತು ಕರ್ಣಾಟಕದ ದೊಡ್ಡ ಕವಿ ಎಂಬ ಬಿರುದನ್ನು ಕೊಡುವ ವಿಧಾನವನ್ನು ಸರ್ಕಾರದವರು ಇಟ್ಟುಕೊಳ್ಳಬೇಕು. ಶಿಕ್ಷಣ ಖಾತೆಯ ಬೇಡಿಕೆಗಳನ್ನು ನಾನು ಸಮರ್ಥನೆ ಮಾಡುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದಿರ ತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವಾರು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡು ತ್ತೇನೆ. ಮುಖ್ಯವಾಗಿ ಈ ಬೇಡಿಕೆಯಲ್ಲಿ ವಿಶ್ವವಿದ್ಯಾನಿಲಯಗಳಿಗೆ ಒದಗಿಸಿರತಕ್ಕಂಥ ಹಣ ಕಡಮೆ ಅನ್ನತಕ್ಕಂಥ ನನ್ನ ಭಾವನೆಯಾಗಿದೆ. ಈ ಮಾತನ್ನು ಮತ್ತೆ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಬೆಂಗಳೂರು ಯೂನಿವರ್ಸಿಟಿ ಏನಿದೆ, ಅದನ್ನು ಪ್ರಾರಂಭ ಮಾಡುವಾಗ ಇದನ್ನು ಸೆಂಟ್ರಲ್ ಯೂನಿವರ್ಸಿಟಿಯನ್ನಾಗಿ ಮಾಡುತ್ತೇವೆಂದು ಆಗಿನ ವಿದ್ಯಾ ಮಂತ್ರಿಗಳಾಗಿದ್ದ ಶ್ರೀ ಕಂಠಿಯವರು ಹೇಳಿದ್ದರು. ಈ ಬಗ್ಗೆ ಈಗಿನ ಮಂತ್ರಿಗಳು ತಮ್ಮ ಸತತವಾದ ಪ್ರಯತ್ನ ಮಾಡಬೇಕು. ಬೆಂಗಳೂರು ಯೂನಿವರ್ಸಿಟಿಯನ್ನು ಸೆಂಟ್ರಲ್ ಯೂನಿವರ್ಸಿಟಿಯನ್ನಾಗಿ ಮಾಡುವ ಬಗ್ಗೆ ಎಲ್ಲಾ ಕಾರ್ಯಕ್ರಮನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೆಲವು ಸರ್ಕಾರೀ ಕಾಲೇಜುಗಳು ಬೆಂಗಳೂರಿನಲ್ಲಿವೆ. ಈ ರೀತಿ ಇರತಕ್ಕಂಥ ಮಹಾರಾಣಿ ಕಾಲೇಜು, ಸರ್ಕಾರಿ ಆರ್ಟ್ಸ್ ಕಾಲೇಜು, ಕಾಮರ್ಸ್ ಕಾಲೇಜು ಇವುಗಳನ್ನು ಬೆಂಗಳೂರು ಯೂನಿವರ್ಸಿಟಿಯ ಆಡಳಿತಕ್ಕೆ ಒಳಪಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈಗ ಬೆಂಗಳೂರು ಯುನಿವರ್ಸಿಟಿಯ ಕೆಲವು ವಿಷಯಗಳ ಬಗ್ಗೆ ಅಲ್ಲಲ್ಲಿ ಸ್ವಲ್ಪ ಅಸಮಾಧಾನ ಕೇಳಿಬರುತ್ತಿದೆ. ಇದು ಸತ್ಯವೋ ಅಸತ್ಯವೋ ಎಂಬುದು ಬೇರೆ ಮಾತು. ಇದು ಸತ್ಯವಾಗಿದ್ದರೆ ಸರ್ಕಾರ ಈ ಬಗ್ಗೆ ತನ್ನ ಹೊಣೆ ಇಲ್ಲವೆಂದು ಹೇಳುವುದಕ್ಕೆ ಬದಲು ಯಾವುದಾದರೂ ಒಂದು ರೀತಿಯಿಂದ ಈ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ ಕಾನೂನು ರೀತ್ಯ ಸರ್ಕಾರ ತನಗೆ ಸಾಧ್ಯವಿಲ್ಲ ವೆಂದು ಹೇಳುವ ಹಾಗಿಲ್ಲ.

ಇನ್ನು ವಿದ್ಯಾಭ್ಯಾಸದ ಕ್ರಮದ ಬಗ್ಗೆ ಮಾನ್ಯ ಸದಸ್ಯರುಗಳೆಲ್ಲರೂ ಸಹ ಹೇಳಿದ್ದಾರೆ. ಇವತ್ತಿನದಿವಸ ಏನು ಒಂದು ವಿದ್ಯಾಭ್ಯಾಸದ ಕ್ರಮವಿದೆ, ಅದು ನಿರುದ್ಯೋಗಿಗಳನ್ನು ತಯಾರು ಮಾಡತಕ್ಕಂಥದ್ದರಲ್ಲಿ ಹೆಚ್ಚು ದಕ್ಷತೆ ವಹಿಸಿದೆಯೇ ವಿನಃ ಉದ್ಯೋಗಸ್ಥರನ್ನಾಗಿ ಮಾಡುವ ಒಂದು ತತ್ವವನ್ನು ಒಳಗೊಂಡಿಲ್ಲ. ಈ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡುವುದು ಇದೆ.

ಇನ್ನು ವಿದ್ಯಾಭ್ಯಾಸದ ಸ್ಟ್ಯಾಂಡರ್ಡ್ ಬಗ್ಗೆ ಹೇಳುವುದಾದರೆ ಯಾವ ಒಂದು ಹೈಸ್ಕೂಲಿನಲ್ಲೂ ಸಹ ನಾವು ನಿರೀಕ್ಷೆ ಮಾಡಿದಷ್ಟು ರಿಜಲ್ಟ್ ಬರುತ್ತಿಲ್ಲ. ಇದರಿಂದ ನಾವು ಹಾಸ್ಯಾಸ್ಪದವಾಗಿ ಮಾತನಾಡುವ ಪರಿಸ್ಥಿತಿಗೆ ಬಂದಿದೆ. ಈ ಬಗ್ಗೆ ಯಾರು ಕಾನೂನುಗಳನ್ನು ಮಾಡಿದ್ದಾರೋ, ಅದರಂತೆ ಯಾವ ಖಾಸಗೀ ಸಂಸ್ಥೆಗಳಲ್ಲಿ ಹೆಚ್ಚು ರಿಜಲ್ಟ್ ಬರುವುದಿಲ್ಲವೋ ಅಂತಹ ಸಂಸ್ಥೆಗಳಿಗೆ ಗ್ರ್ಯಾಂಟ್ ನಿಲ್ಲಿಸಿದರೆ ಉತ್ತಮವಾಗಿ ರಿಜಲ್ಟ್ ಬರುತ್ತದೆಂದು ಹೇಳುವುದು, ಇಲ್ಲವೇ ಯಾವ ಕ್ರಮ ವನ್ನೂ ತೆಗೆದುಕೊಳ್ಳದಿದ್ದರೆ ತನ್ನಷ್ಟಕ್ಕೆ ತಾನೇ ರಿಜಲ್ಟ್ ಚೆನ್ನಾಗಿ ಬರುತ್ತದೆಂದು ಹೇಳುವುದು ಅರ್ಥ ವಿಲ್ಲದ ಮಾತು. ಈ ವಿದ್ಯಾಖಾತೆಯ ಬಡ್ಜೆಟ್‌ನ್ನು ನಾನು ನೋಡಿದ್ದೇನೆ. ಶಾಲೆಗಳ ಇನ್‌ಸ್ಪೆಕ್ಷನ್ ಗಾಗಿ ಬೇಕಾದಷ್ಟು ಹಣವನ್ನು ಇಟ್ಟಿದ್ದಾರೆ. ಈಗ ಬೇಕಾದಷ್ಟು ಡಿ.ಪಿ.ಐ.ಗಳು, ಡಿ.ಇ.ಓ.ಗಳು, ಜಾಯಿಂಟ್ ಡೈರೆಕ್ಟರುಗಳು ಮುಂತಾದ ಅನೇಕ ಜನ ಅಧಿಕಾರಿಗಳು ವಿದ್ಯಾ ಇಲಾಖೆಯಲ್ಲಿದ್ದಾರೆ. ಇವರುಗಳು ತಮ್ಮ ಹೊಣೆಗಾರಿಕೆಯನ್ನು ಅರಿತುಕೊಂಡು ರಿಜಲ್ಟ್ ಕಡಿಮೆ ಬರುವುದಕ್ಕೆ ಕಾರಣ ವೇನು ಎಂಬುದನ್ನು ನೋಡಬೇಕಾಗಿದೆ. ಅಲ್ಲದೆ ಈ ಬಗ್ಗೆ ಮಾನ್ಯ ವಿದ್ಯಾ ಮಂತ್ರಿಗಳು ಸಹ ವಿಚಾರ ಮಾಡಬೇಕಾಗಿದೆ. ಇಲ್ಲದಿದ್ದರೆ ನಾವು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುವ ಹಣ ನಿರರ್ಥಕ ವಾಗುತ್ತದೆ. ಇವತ್ತಿನ ದಿವಸ ಹಳ್ಳಿಗಳ ಕಡೆ ತಮ್ಮ ಮಕ್ಕಳನ್ನು ಎಸ್.ಎಸ್.ಎಲ್.ಸಿ. ವರೆಗೆ ಓದಿಸುವುದು ದುರ್ಲಭವಾಗಿದೆ. ತಮ್ಮ ಮಗ ಮತ್ತು ಮಗಳು ವಿದ್ಯಾಭ್ಯಾಸದಲ್ಲಿ ಪರಿಣತೆ ಪಡೆಯಲಿಲ್ಲವೆಂದರೆ ಅದು ದೇಶಕ್ಕೂ ಅವಮಾನ, ನಮಗೂ ಅವಮಾನ. ವಿದ್ಯಾಭ್ಯಾಸದ ಮಟ್ಟ ವನ್ನು ಹೆಚ್ಚಿಸುವ ವಿಚಾರದಲ್ಲಿ ಈ 20 ವರ್ಷಗಳಲ್ಲಿ ಒಂದು ತಪ್ಪು ಮಾಡಿದ್ದೇವೆ. ಇದಕ್ಕೆ ಕಾರಣ ಅಧಿಕಾರಿಗಳನ್ನು ನಂಬಿದ್ದು, ಅವರು ಹೇಳಿದ ಮಾತಿಗೆಲ್ಲಾ ತಲೆಹಾಕಿದ್ದು ಕಾರಣವಾಯಿತು. ಈ ವಿಚಾರದಲ್ಲಿ ಅಧಿಕಾರಿಗಳು ಸರಿಯಾದ ತಿಳುವಳಿಕೆ ಕೊಟ್ಟರೆ ನಾವು ಒಪ್ಪೋಣ, ಇಲ್ಲದಿದ್ದರೆ ನಮ್ಮ ಬುದ್ಧಿಯನ್ನು ಉಪಯೋಗಿಸಬೇಕಾಗುತ್ತದೆ. ಇದೇ ನಮ್ಮ ರಾಜ್ಯದಲ್ಲಿ ಹಿಂದೆ ಸಿ. ಆರ್. ರೆಡ್ಡಿ

(ಶ್ರೀ ಕೆ. ಎಚ್. ರಂಗನಾಥ್)

ಅವರು ವಿದ್ಯಾ ಖಾತೆಯ ಡೈರೆಕ್ಟರ್ ಆಗಿದ್ದಾಗ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿತ್ತು. ಅವರು ಮೇಧಾವಿಗಳಾಗಿದ್ದರು ಮತ್ತು ಒಳ್ಳೆಯ ಎಜುಕೇಷನಿಷ್ಟ್ ಆಗಿದ್ದರು. ಇದೇ ರೀತಿ ವಿದ್ಯಾ ಖಾತೆಯಲ್ಲಿ ಶ್ರೀ ಎನ್. ಎಸ್. ಸುಬ್ಬರಾವ್ ಅವರು ಇದ್ದರು ಮತ್ತು ಶ್ರೀ ಮೆಕಾಲ್ ಪ್ರೈರ್ ಇದ್ದರು. ಇವರ ಕಾಲದಲ್ಲಿ ವಿದ್ಯಾಭ್ಯಾಸದ ಪ್ರಗತಿ ಇಷ್ಟೊಂದು ಬರಡಾಗಿರಲಿಲ್ಲ. ಇವತ್ತಿನ ದಿವಸ ನಾವು ವಿದ್ಯಾ ಕ್ಷೇತ್ರದಲ್ಲಿ ಯಾವ ಒಂದು ಸ್ಥಿತಿಗೆ ಬಂದಿದ್ದೇವೆಂದರೆ, ವಿದ್ಯಾಕ್ಷೇತ್ರದಲ್ಲಿ ಕೆಲಸ ಮಾಡು ವವರು ತಮ್ಮ ಒಂದು ಬಡ್ತಿಗಾಗಿ ನನ್ನಂಥವರನ್ನು ಹಿಡಿದುಕೊಂಡು ಬಡ್ತಿ ಪಡೆದು ಕೇವಲ ತಮ್ಮ ಒಂದು ಅನುಕೂಲತೆಗಳನ್ನು ನೋಡಿಕೊಂಡು ಕಾಲಕಳೆಯುವ ಸ್ಥಿತಿಗೆ ಬಂದಿದ್ದಾರೆ. ಇದು ದೇಶಕ್ಕೆ ಒಳ್ಳೆಯದನ್ನು ಮಾಡುವುದಿಲ್ಲ. ಈ ವಿಚಾರದಲ್ಲಿ ಅಧಿಕಾರಿಗಳು ಹೆಚ್ಚು ನಿಗಾ ವಹಿಸುವುದು ಅವಶ್ಯಕತೆ ಇದೆ. ಅದರಲ್ಲೂ ಡಿ.ಪಿ.ಐ. ಅವರ ಹೊಣೆ ಜಾಸ್ತಿಯಾಗಿದೆ. ಅವರು ಇರೆಸ್ಪಾನ್ಸಿಬಲ್ ಆಗಿರುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಕೆಲವು ಅಧಿಕಾರಿಗಳನ್ನು ರಾಜ್ಯದಾದ್ಯಂತ ಕಳುಹಿಸಿ ಕಳೆದ ನಾಲ್ಕಾರು ವರ್ಷಗಳಲ್ಲಿ ಎಲ್ಲಾ ಹೈಸ್ಕೂಲುಗಳಲ್ಲಿಯೂ ಎಷ್ಟು ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತ್ತಿದ್ದರು ಮತ್ತು ಎಷ್ಟು ಪರ್‌ಸೆಂಟ್ ಪಾಸಾಗಿದ್ದಾರೆ, ಕಡಿಮೆ ಪರ್‌ಸೆಂಟ್ ಪಾಸಾಗುವುದಕ್ಕೆ ಕಾರಣವೇನು ಎಂಬ ವಿವರ ಗಳನ್ನು ತರಿಸಿಕೊಂಡು ಈ ಸಭೆಯ ಮುಂದೆ ಇಡಬೇಕು. ಮತ್ತು ಕಡಿಮೆ ಪರ್‌ಸೆಂಟ್ ಬರುವುದಕ್ಕೆ ಕಾರಣರು ಯಾರಾಗಿದ್ದರೆಂಬುದನ್ನು ನೋಡಿ ಈ ದಿಶೆಯಲ್ಲಿ ಒಂದು ರಿಪೋರ್ಟ್‌ನ್ನು ಸಹ ಈ ಸಭೆಯ ಮುಂದೆ ಇಡಬೇಕು. ಅಲ್ಲದೆ ಈ ವಿಚಾರದಲ್ಲಿ ಸರ್ಕಾರದವರು ಕೂಲಂಕುಷವಾಗಿ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಜನಪದಸಾಹಿತ್ಯದ ಬಗ್ಗೆ ಕೆಲವಾರು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈ ಬಗ್ಗೆ ಶೀಲ ಯಾವುದು, ಅಶ್ಲೀಲ ಯಾವುದು ಎಂಬ ಬಗ್ಗೆ ಮಾತನಾಡುವುದಕ್ಕೆ ನಾನು ಈಗ ಹೋಗು ವುದಿಲ್ಲ. ಜನಪದ ಸಾಹಿತ್ಯವನ್ನು ಸಾಹಿತ್ಯ ಅಕ್ಯಾಡೆಮಿಯವರು ಪ್ರಕಟಿಸುತ್ತಿದ್ದಾರೆ. ಈ ಅಕ್ಯಾ ಡೆಮಿಯವರು ಬಹಳ ಕಷ್ಟಪಟ್ಟು ಸಂಗ್ರಹಿಸಿ ಒಂದು ರೂಪಕ್ಕೆತಂದು ಪ್ರಕಟಿಸುತ್ತಿದ್ದಾರೆ. ಈ ರೀತಿ ಹತ್ತಾರು ಪುಸ್ತಕಗಳು ಪ್ರಕಟವಾಗಿವೆ. ಈ ಪುಸ್ತಕಗಳಲ್ಲಿ ಒಂದೆರಡು ಪುಸ್ತಕಗಳು ಅಶ್ಲೀಲವೆಂದು ಭಾವವೆಯಾಗುವುದಾದರೆ ಅವುಗಳನ್ನು ಪುಸ್ತಕ ಭಂಡಾರಕ್ಕೆ ತೆಗೆದುಕೊಳ್ಳಬಾರದೆಂದು ಬೇಕಾದರೆ ಸೂಚನೆಯನ್ನು ಡಿ.ಪಿ.ಐ. ಅವರು ಕೊಡಬಹುದು. ಆದರೆ ಯಾವುದೋ ಒಂದು ವಯೋಪರಿಮಿತಿ ಯನ್ನು ಲೆಕ್ಕಕ್ಕೆ ತೆಗೆದುಕೊಂಡು ಸಾಹಿತ್ಯಕ್ಕೆ ಸಂಬಂಧಪಟ್ಟ ಯಾವ ಒಂದು ಪುಸ್ತಕವನ್ನೂ ಸಹ ಸ್ಕೂಲ್ ಲೈಬ್ರರಿಗೆ ತೆಗೆದುಕೊಂಡರೆ ತಪ್ಪಾಗುತ್ತದೆಂದು ಡಿ.ಪಿ.ಐ. ಅವರು ಹೊರಡಿಸಿರತಕ್ಕಂಥ ಆರ್ಡರ್ ನೋಡಿದರೆ ಹಾಸ್ಯಾಸ್ಪದವಾಗಿ ಕಾಣುತ್ತದೆ. ನನ್ನಲ್ಲಿ ಈ ಒಂದು ಗೌರ್ನಮೆಂಟ್ ಆರ್ಡರ್ ಇದೆ, ಓದುತ್ತೇನೆ :

ಶ್ರೀ ಕೆ. ವಿ. ಶಂಕರಗೌಡ.—ನನಗೂ ಗೊತ್ತಿದೆ.

ಶ್ರೀ ಕೆ. ಎಚ್. ರಂಗನಾಥ್—ಗೊತ್ತಿದ್ದರೆ ವಿಚಾರ ಮಾಡಿ ಸರಿಪಡಿಸಬೇಕು.

6-00 P.M.

ಇದರಲ್ಲಿ ರಾಜಕೀಯ ಇರಲೇಬೇಕು. ಡಿ.ಪಿ.ಐ. ಎಲ್ಲಾ ಪಬ್ಲಿಕೇಶನ್ಸ್ ವಿತಡ್ರಾ ಮಾಡುವುದಕ್ಕೆ ಆರ್ಡರ್ಸ್ ಕಳಿಸಿ, ಡಿ.ಈ.ಓ. ದುಡ್ಡು ಕೊಡಬೇಡಿ ಎಂದು ಹೇಳಿದರೆ ಇದರ ಅರ್ಥ ಏನು ? ಪುಸ್ತಕ ಭಂಡಾರದಿಂದ ತೆಗೆದುಬಿಡಿ ಎಂದು ಹೇಳಿದುದರಿಂದ ಅನೇಕ ಪಬ್ಲಿಷರ್ಸ್ ವಿತಡ್ರಾ ಮಾಡಿದ್ದಾ ರೆಂದು ನನ್ನ ಗಮನಕ್ಕೆ ಬಂದಿದೆ. ತಾವು ಈ ಒಂದು ಸುಸ್ಥಿಯನ್ನು ಭಹಿಷ್ಕಾರ ಮಾಡುವುದಾದರೆ, ಈ ಸಾಹಿತ್ಯವನ್ನು ಉದ್ಧಾರ ಮಾಡುವುದಕ್ಕೆ ಯಾವ ವಿಧವಾದ ಅವಕಾಶ ಕೊಡುವುದಿಲ್ಲವೆಂದು ಭಾವಿಸಬೇಕಾಗಿದೆ. ಆದ್ದರಿಂದ ಅದನ್ನು ದಯವಿಟ್ಟು ವಿಚಾರ ಮಾಡಬೇಕು.

ಇನ್ನೊಂದು ವಿಚಾರ. ಈ ವರ್ಕಿಂಗ್ ಅವರ್ಸ್ ಏನಿದೆ, ಇವತ್ತು ಎಸ್.ಎಸ್.ಎಲ್.ಸಿ. ಹುಡುಗರು ಸುಮಾರು 150 ದಿವಸ ಹೋದರೆ, ಅವರು ಪರೀಕ್ಷೆಗೆ ಕೂತುಕೊಳ್ಳಬಹುದು. ಜೂನಿನಲ್ಲಿ ಶಾಲೆಗೆ ಸೇರಿ, ಏಪ್ರಿಲ್ ತಿಂಗಳಲ್ಲಿ ಪರೀಕ್ಷೆಯಾಗುತ್ತದೆ. 8 ತಿಂಗಳಲ್ಲಿ 150 ದಿವಸ ಹೋದರೆ ಸಾಕಾಗುತ್ತದೆ. ಪರಿಣತರು ಸ್ಟೂಡೆಂಟ್ಸ್ ಶುಡ್ ಆಲ್‌ವೇಸ್ ಬಿ ಕೆಪ್ಟ್ ಎಂಗೇಜಡ್ ಎಂದು ಹೇಳಿದ್ದಾರೆ. ಆ ರೀತಿ ಒಂದು ಕರಿಕುಲಮ್ ಮಾಡಬೇಕು. ಅವರು 8 ತಿಂಗಳು ಕೂಡ

ಕೆಲಸ ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಸುಮ್ಮನೆ ಕಾಲಹರಣ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ವಿಚಾರವನ್ನು ಪುನರ್ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಟೆಕ್ನಿಕಲ್ ಎಜುಕೇಶನ್ ಬಗ್ಗೆ ಒಂದು ಮಾತು. ಇವತ್ತು ಟೆಕ್ನಿಕಲ್ ಸ್ಕೂಲುಗಳಲ್ಲಿ ಸಂಬಳ ಸಾರಿಗೆ ಬಹಳ ಕಡಿಮೆ ಇದೆ. ಅಲ್ ಇಂಡಿಯಾ ಟೆಕ್ನಿಕಲ್ ಎಜುಕೇಶನ್ ಬೋರ್ಡಿನವರು ಒಂದು ಸಂಬಳದ ವ್ಯವಸ್ಥೆಯನ್ನು ಹೆಚ್ಚು ಮಾಡಬೇಕೆಂದು ಹೇಳಿದರೂ ಅದನ್ನು ಮಾಡಲಿಲ್ಲ. ಅದರ ಹೆಚ್ಚು ಖರ್ಚನ್ನು ಕೇಂದ್ರ ಸರ್ಕಾರ ವಹಿಸುತ್ತದೆ ಎಂದು ಹೇಳಿದರೂ, ರಾ ್ಯ ಸರ್ಕಾರ ಅದನ್ನು ಮಾಡುವುದಕ್ಕೆ ಏನು ತೊಂದರೆ ಇದೆ? ಆದ್ದರಿಂದ ಅದನ್ನು ಪುನರ್‌ವಿಮರ್ಶೆ ಮಾಡಬೇಕು. ಇವತ್ತು ಕಾಲೇಜುಗಳಲ್ಲಿ ಯುಜಿಸಿ ಸ್ಕೇಲನ್ನು ಕೊಡುತ್ತಿದ್ದಾರೆ. ಆದರೆ ಟೆಕ್ನಿಕಲ್ ಸ್ಕೂಲುಗಳಲ್ಲಿ ಇದು ಇಲ್ಲ, ಏಕೆಂದರೆ ಅವರು ಯುನಿವರ್ಸಿಟಿಯಲ್ಲಿಲ್ಲ. ಎಂದು ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಕ್ಯಾಪಿಟೇಶನ್ ಫೀಯನ್ನು ಪ್ರೈವೇಟ್ ಸಂಸ್ಥೆಯವರು ಬಹಳ ತೆಗೆದುಕೊಳ್ಳುತ್ತಿದ್ದಾರೆ. ಅದನ್ನು ಸರ್ಕಾರದವರು ಜರೂರಾಗಿ, ಜಾಗ್ರತೆಯಾಗಿ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಖಾಸಗಿ ಸಂಸ್ಥೆಯವರ ವಿದ್ಯಾಸಂಸ್ಥೆಗಳು ಒಂದು ವ್ಯಾಪಾರ ಕೇಂದ್ರಗಳಾಗಿವೆ. ಅದರಿಂದ ಜನರಿಗೆ ಬಹಳ ಕಷ್ಟವಾಗುತ್ತದೆ. ಸರ್ಕಾರದವರು ಹೇಳುತ್ತಾರೆ, ಎಲ್ಲರಿಗೂ ಫ್ರೀ ಎಜುಕೇಶನ್ ಕೊಡುತ್ತಿದ್ದೇವೆಂದು. ಬೆಂಗಳೂರಿನಲ್ಲಿರತಕ್ಕ ಖಾಸಗಿ ನರ್ಸರಿ ಸ್ಕೂಲುಗಳಲ್ಲೇ 5-10-15 ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕೆ ರಶೀದಿ ಡೊನೇಶನ್ ಎಂದು ಕೊಡುತ್ತಾರೆ. ಒಂದು ಕಡೆ ಸರ್ಕಾರದವರು ಫ್ರೀ ಎಂದು ಹೇಳುತ್ತಾರೆ, ಇನ್ನೊಂದು ಕಡೆ ಈ ರೀತಿ ಮಾಡತಕ್ಕದ್ದು. ಇದನ್ನು ಸರ್ಕಾರದವರು ಕೂಲಂಕುಷವಾಗಿ ವಿಚಾರಿಸಿ, ಎಲ್ಲಾ ಖಾಸಗೀ ಸಂಸ್ಥೆಗಳನ್ನು ಸರ್ಕಾರ ತೆಗೆದುಕೊಂಡು ವಿದ್ಯಾಭ್ಯಾಸ ಕ್ರಮದಲ್ಲಿ ಅತೀ ಜರೂರಾಗಿ, ಒಂದು ಕ್ರಾಂತಿಕಾರಕವಾದ ಬದಲಾವಣೆಯನ್ನು, ಪಾಲಿಸಿಯನ್ನು ಮಾಡಬೇಕು. ಮಾನ್ಯ ಮಂತ್ರಿಗಳಿಗೆ ಅದನ್ನು ಮಾಡುವುದಕ್ಕೆ ಆಸಕ್ತಿ ಇದೆ, ಮಂಡ್ಯ ಜಿಲ್ಲೆಯಲ್ಲೂ ಒಂದು ಇಂಜಿನಿಯರಿಂಗ್ ಕಾಲೇಜು ಮಾಡಿದ್ದಾರೆ. ಈ ರೀತಿ ಮಾಡಿ ರಾಜ್ಯದ ಎಲ್ಲಾ ಮಕ್ಕಳು ನ್ಯಾಯವಾದ ರೀತಿಯಲ್ಲಿ ವಿದ್ಯಾವಂತರಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—Now it is 6-5 P.M. As per schedule, the Hon'ble Minister is expected to begin his reply now. I would like to know the pleasure of the House. If the Hon'ble Members wish to sit longer, there are a few more Members to speak, and they can be accommodated.

Sri H. SIDDAVEERAPPA.—He may begin his reply. Before that I would like to bring to his notice only two important points so that this may also be covered by his reply. I am not making any speech.

One is, the Hon'ble Minister is well aware of the case about temporary lecturers that are working in the various Government colleges. Only very recently the Director of Collegiate Education on 2nd April 1968 has addressed letter to the various Principals of the Colleges with regard to Lecturers in English, Kannada, political science, physics, chemistry, botony, geology, music, Hindi and demonstrators in chemistry, physics, botony, zoology. There are nearly 45-47 lecturers who are working for the last 9 years. Some of them for 10 years. Some of them are working for nearly six years. Sir, in this connection, there was a G.O. passed on 5th January 1968 with reference to some those who were lucky in getting that G.O. In that G.O. they

(SRI H. SIDDAVEERAPPA)

have clearly said: that there is no purpose of entering into their age and qualification at this length of time because it is presumed that the University looked into all these points before their appointment.

According to this order of the Director of Collegiate Education, about 45 lecturers who have put in more than 8 years service have now been called upon to appear before the P.S.C. And I see today the P.S.C. has also notified. And before the P.S.C. they have to take the age limit into consideration and it will be fixed at 28 years. Some of these people are nearly 40 years of age. To avoid this difficulty, Government passed an order on 5th January 1968 wherein 10 lucky people got exemption. The case of others numbering nearly 40-45 who are more or less in the same position, some in a better position, they are asked to appear before the P.S.C. With regard to this, I am requesting the Hon'ble Minister that in the interest of purity of administration and taking the human factor into consideration, to withdraw this list and see that these cases are regularised without sending them to the P.S.C. You have already done this in the case of a lucky few people and presumably there was some pressure brought upon the Government or the matter was pointedly brought to the notice of Government and their cases have been considered. In the case of others, if you do not extend the same concession, you will be committing a grave injustice and a palpable injustice. It is tantamount to asking them to go home after serving the Department for ten years. That is one point.

The other point is, the Hon'ble Minister for Education Mr. Kanthi has been responsible for bringing up an Act called the Mysore Libraries Act 1965. That has come into force in the year 1966. Up to this day, although there is a Director, nothing has been done to popularise this Act and collect the cess or to see that the Act is enforced. I ask, why do you pass such legislation and take the assent of the President to make it a dead-letter? Have you no better business? Why do you pass Acts and keep them in cold storage? I am referring to the Mysore Libraries Act.

What has happened is you have no doubt introduced the Act. I would like to know during the last two years whether you have done anything to implement the Act in the District level or in Bangalore. In Bangalore alone, you have collected nearly Rs. 15 lakhs from the tax-payers for the purpose of introducing it. Now is the time when there is enlightenment and people want to read something useful. Therefore, on these two points, I would like to know the views of the Government and particularly with regard to these appointments and equally so with regard to this Act.

ಶ್ರೀ ಪಿ. ವಿ. ಐತಾಳ (ಸುರತ್ಕಲ್).—ಅಧ್ಯಕ್ಷರೇ, ನಾನು ಮೂಲ ಪೀಠಿಕೆಯನ್ನು ಹಾಕದೆ, ಪ್ರಥಮತಃ ಡಿ.ಪಿ.ಐ. ಆಫೀಸಿನಲ್ಲಿ ಏನು ಭ್ರಷ್ಟಾಚಾರ ಎಕ್ವಿಪ್‌ಮೆಂಟ್ ಗ್ರಾಂಟ್ ಬಗ್ಗೆ ನಡೆದಿದೆ ಅದನ್ನು ಹೇಳುತ್ತೇನೆ. ಎಕ್ವಿಪ್‌ಮೆಂಟ್ ಗ್ರಾಂಟ್ ವಿಚಾರವಾಗಿ ಕೇಳಿದಾಗ ಕಳೆದ ವರ್ಷ

ಬಜೆಟ್ ಅಂಗೀಕಾರವಾಗಿದ್ದರೂ ಖಾಸಗಿ ಹೈಸ್ಕೂಲುಗಳವರಿಗೆ ಇದೇ ಕಳೆದ ಮಾರ್ಚಿ 27ನೇ ತಾರೀಖಿನವರೆಗೂ ಗ್ರಾಂಟ್ ಇಲ್ಲ ಎಂದು ಹೇಳಿ, 28ನೇ ತಾರೀಖಿನಂದು ಅವರಿಗೆ ಬೇಕಾದಂಥ ಕೆಲವು ಮ್ಯಾನೇಜ್‌ಮೆಂಟಿನವರಿಗೆ ಹೇಳಿ ಕಳುಹಿಸಿ, ಅವರಿಂದ ಅಪ್ಲಿಕೇಷನ್ ತೆಗೆದುಕೊಂಡು, ಅವರಿಗೆ ಅದೇ ದಿವಸ ಪಾಸ್ ಮಾಡಿ 29ನೇ ತಾರೀಖು ಆರ್ಡರ್ ಕೊಟ್ಟಿದ್ದಾರೆ. ಹೀಗೆ ಅವರಿಗೆ ಬೇಕಾದ ಕೆಲವು ಶಾಲೆಗಳವರಿಗೆ ಮಾತ್ರ ಎಕ್ವಿಪ್‌ಮೆಂಟ್ ಗ್ರಾಂಟ್ ಸ್ಯಾಂಕ್ಷನ್ ಮಾಡಿದ್ದಾರೆ. ಇದು ನಿಮ್ಮದೇ ರಾಜ್ಯವೇ ? ಮೂರು ಲಕ್ಷ ರೂಪಾಯಿಗಳನ್ನು ಈ ರೀತಿ ತಮಗೆ ಬೇಕಾದವರಿಗೆ ಹಂಚಿದ್ದಾರೆ. ರಿಕಾರ್ಡ್ ತರಿಸಿ, ನಾನು ರುಜುವಾತು ಕೊಡುತ್ತೇನೆ. ಕಳೆದ ವರ್ಷ ಬಜೆಟ್ ಮಂಜೂರಾಗಿದ್ದರೂ ಎಕ್ವಿಪ್‌ಮೆಂಟ್ ಗ್ರಾಂಟನ್ನು ಹೈಸ್ಕೂಲುಗಳಿಗೆ ಈ ವರ್ಷದ ಮಾರ್ಚಿ ತಿಂಗಳ 28ನೇ ತಾರೀಖುವರೆಗೂ ಕೊಡದೆ, ಗ್ರಾಂಟ್ ಇಲ್ಲ ಎಂದು ಹೇಳಿ, 28ನೇ ತಾರೀಖು ತಮಗೆ ಬೇಕಾದವರಿಂದ ಅರ್ಜಿಗಳನ್ನು ತೆಗೆದುಕೊಂಡು 29ನೇ ತಾರೀಖು ಪಾಸ್ ಮಾಡಿ 30ನೇ ತಾರೀಖು ಒಳಗೆ ಹಣ ತೆಗೆದುಕೊಳ್ಳಬೇಕೆಂದು ಮಾಡಿದರು. ಆದರೂ ಕೆಲವರಿಗೆ ಕ್ಯಾಷ್ ಮಾಡುವುದಕ್ಕೆ ಸಾಧ್ಯವಾಗದೆ ಅದೂ ಕೂಡ ಲ್ಯಾಪ್ಸ್ ಆಗಿದೆ. ಬೆಂಗಳೂರಿನವರಿಗೆ, ಡಿ.ಪಿ.ಐ. ಮತ್ತು ಮಂತ್ರಿಗಳಿಗೆ ಬೇಕಾದಂಥ ಹೈಸ್ಕೂಲುಗಳವರಿಗೆ ಮಾತ್ರ ಸಿಕ್ಕುವಂಥ ಗ್ರಾಂಟೇ ಇದು ? 27ನೇ ತಾರೀಖಿನವರೆಗೆ ಗ್ರಾಂಟ್ ಇಲ್ಲ ಎಂದು ಹೇಳಿ 28ಕ್ಕೆ ಹೇಗೆ ಬಂತು ! ರಾಜ್ಯದಲ್ಲಿ 1200 ಹೈಸ್ಕೂಲುಗಳಿವೆ. ಇವರಿಗೆ ಏನೂ ಸಹಾಯ ಸಿಕ್ಕಬೇಡವೇ ! ಸ್ವಾಮಿ, ಇದರ ಬಗ್ಗೆ ಒಂದು ವಿಚಾರಣೆ ನಡೆಯಬೇಕು, ಎಲ್ಲ ರಿಕಾರ್ಡ್‌ಗಳನ್ನು ತರಿಸಬೇಕು. ಎಕ್ವಿಪ್‌ಮೆಂಟ್ ಗ್ರಾಂಟ್ ಯಾವಾಗ ಕೊಟ್ಟದ್ದು ? ಒಂದು ದಿವಸದೊಳಗೆ, 24 ಗಂಟೆಯೊಳಗೆ ಕೊಡುವಂಥ ಪ್ರಮೇಯವೇನಿತ್ತು ? ಈ ಗ್ರಾಂಟನ್ನು ಕೊಡುವಾಗ ಅವರು ಇಷ್ಟು ಭ್ರಷ್ಟಾಚಾರವನ್ನು ನಡೆಸಿದರೆ, ಇನ್ನು ಬೇರೆ ವಿಷಯಗಳಲ್ಲಿ ಎಷ್ಟು ನಡಸಲಿಕ್ಕಿಲ್ಲ ಸ್ವಾಮಿ !

ಮೇಂಟಿನೇನ್ಸ್ ಗ್ರಾಂಟ್ ಎಂದು ಹೇಳುವಂಥದ್ದು ಕೂಡ, ಒಂದು ವರ್ಷದ ಹಿಂದೆ ಬಜೆಟ್ಟನ್ನು ಪಾಸ್ ಮಾಡಿರುತ್ತೇನೆ. ಆದರೂ ಕೂಡ ವರ್ಷದ ಕೊನೆಯಲ್ಲಿ, ಮಾರ್ಚಿ ತಿಂಗಳ ಕೊನೆಯಲ್ಲಿ ಏಕೆ ಕೊಡುತ್ತೀರಿ ? ನಿಮಗೆ ಬೇಕಾದವರಿಗೆ ಮಾತ್ರ ಹೇಳಿ ಕಳುಹಿಸಿ ಕೊನೇ ಘಳಿಗೆಯಲ್ಲಿ ಆರ್ಡರ್ ಮಾಡಿ ಕೊಡುವುದು ಯಾವ ನ್ಯಾಯ ? ಆ ರೀತಿ ಕೊಡುವುದಕ್ಕೆ ನಿಮಗೆ ಏನು ಅಧಿಕಾರವಿದೆ ? ರಿಕಾರ್ಡುಗಳನ್ನು ತರಿಸಿ, ನಾನು ಎಲ್ಲವನ್ನೂ ತೋರಿಸಿಕೊಡುತ್ತೇನೆ. ನನಗೆ ಖಚಿತವಾಗಿ ಗೊತ್ತಾಗಿದೆ. ಇದೂ ಒಂದು ದೊಡ್ಡ ಭ್ರಷ್ಟಾಚಾರ. ಇದರ ಬಗ್ಗೆಯೂ ರಿಕಾರ್ಡ್ ತರಿಸಿ ಎಂದು ಹೇಳುತ್ತಿದ್ದೇನೆ.

ಲೈಬ್ರರಿ ಗ್ರಾಂಟ್ ಎಂದು ಕೊಡುತ್ತೀರಿ. ಇದರಲ್ಲಿ ನೂರಕ್ಕೆ 75 ರೂಪಾಯಿ ಮಾತ್ರ ಕೊಟ್ಟು, ಉಳಿದ 25 ರೂಪಾಯಿಗಳನ್ನು ಸರ್ಕಾರದವರೇ ಹಿಡಿದುಕೊಂಡು, ನಿಮಗೆ ಬೇಕಾದವರ ನಿಮ್ಮ ಚೇಲರ ಪುಸ್ತಕಗಳನ್ನು ಆ 25 ಪರ್ಸೆಂಟಿಗೆ ಭರ್ತಿ ಮಾಡಿ ಕಳಿಸುತ್ತೀರಿ. ಇದು ಯಾವ ನ್ಯಾಯ ಎಂದು ಕೇಳುತ್ತೇನೆ. ಈ ರೀತಿ ಕಳಿಸುವುದಕ್ಕೆ ಬೇಕಾದಷ್ಟು ಸಾಕ್ಷ್ಯ ಕೊಡಬಹುದು. ಲೈಬ್ರರಿ ಗ್ರಾಂಟನ್ನು ಪೂರ್ತಿಯಾಗಿ ಕೊಡದೆ ಇಷ್ಟು ಅನ್ಯಾಯವನ್ನು ಏಕೆ ಮಾಡುತ್ತೀದ್ದೀರೆಂದು ಕೇಳುತ್ತಿದ್ದೇನೆ.

ಸೆಕೆಂಡರಿ ಶಿಕ್ಷಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಮಾನ್ಯ ಹಣಕಾಸು ಮಂತ್ರಿಗಳು ಹೇಳುತ್ತಿದ್ದರು, ಕೇರಳದಲ್ಲಿ ಸೇಲ್ಸ್ ಟ್ಯಾಕ್ಸ್ ಜಾಸ್ತಿ ಇದೆ, ಮದ್ರಾಸಿನಲ್ಲಿ ಜಾಸ್ತಿ ಇದೆ, ಆದಕಾರಣ ನಾವು ಜಾಸ್ತಿ ಮಾಡಿದ್ದು ದೊಡ್ಡದೇನೂ ಅಲ್ಲ ಎಂದು. ಮದ್ರಾಸಿನಲ್ಲಿ ಕೇರಳದಲ್ಲಿ ಸೆಕೆಂಡರಿ ಎಜುಕೇಷನ್ ಮಟ್ಟದವರೆಗೆ ಮೊದಲಿನಿಂದಲೂ ಪ್ರೈವೇಟ್ ಮ್ಯಾನೇಜ್‌ಮೆಂಟಿನಲ್ಲಿ ಶಿಕ್ಷಕರ ಸಂಬಳವನ್ನು ಪೂರ್ತಿಯಾಗಿ, ಗ್ರಾಂಟ್ ರೂಪದಲ್ಲಿ ಕೊಡುತ್ತಿದ್ದಾರೆ, ಮೇಂಟಿನೆನ್ಸ್ ಗ್ರಾಂಟ್ ಕೊಡುತ್ತಿದ್ದಾರೆ, ಅದರ ಮೇಲೆ 15 ಪರ್ಸೆಂಟ್ ಆಫ್ ದಿ ಟೋಟಲ್ ಎಕ್ಸ್‌ಪೆಂಡಿಚರ್ ಕೊಡುತ್ತಿದ್ದಾರೆ. ನಮ್ಮಲ್ಲಿ 1963ನೇ ಇಸವಿಯವರೆಗೂ ಆ ರೀತಿಯಾಗಿ ಕೊಡುತ್ತಿದ್ದುದನ್ನು ಈ ಸಭೆಯ ಅನುಮತಿ ಪಡೆಯದೆ, ಒಂದು ಸರ್ಕಾರಿ ಆದೇಶದ ಮೂಲಕ ಅದನ್ನು ಪೂರ್ತಿಯಾಗಿ ನಿಲ್ಲಿಸಿದ್ದಾರೆ. ಹೆಣ್ಣುಮಕ್ಕಳ ಹೈಸ್ಕೂಲುಗಳಲ್ಲಿ ಸಹಿತ 1963-64 ರಿಂದ ಗ್ರಾಂಟ್ ಕೊಟ್ಟಿಲ್ಲ. ಇದಕ್ಕೆ ಮಾನ್ಯ ಹಣಕಾಸಿನ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ? ಖಾಸಗಿಯವರು ಹೈಸ್ಕೂಲುಗಳನ್ನು ಪ್ರಾರಂಭ ಮಾಡಿದರೆ ಅವರಿಗೆ ಪ್ರಾರಂಭದಲ್ಲಿ ಸಹಾಯ ಮಾಡಬೇಕು, ಆದರಿಂದ ಒಳ್ಳೆಯದಾಗುತ್ತದೆ. ಆದರೆ ಮೂರು ವರ್ಷದವರೆಗೂ ಪಾವಾಣಿ ಕೂಡ ಕೊಡುವುದಿಲ್ಲ, ಬಿಲ್ಡಿಂಗ್ ಗ್ರಾಂಟ್ ಕೊಡುವುದಿಲ್ಲ. ವಿದ್ಯಾ ಇಲಾಖೆಯಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ನಾನು ತೋರಿಸುತ್ತಿದ್ದೇನೆ. ಇದು ಸರ್ಕಾರದ ಎಂಥ ನೀತಿ ? ನಿಮಗೆ ಹೈಸ್ಕೂಲುಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ರಾಜ್ಯದಲ್ಲಿ 1200 ಹೈಸ್ಕೂಲುಗಳಿವೆ. ಅದಕಾರಣ ಪ್ರೈವೇಟ್

(ಶ್ರೀ ಪಿ. ವಿ. ಐತಾಳ)

ಮ್ಯಾನೇಜ್‌ಮೆಂಟಿನವರು ಹೈಸ್ಕೂಲುಗಳನ್ನು ನಡೆಸಬೇಕು ಎನ್ನುವುದು ನಿಮ್ಮ ಧೋರಣೆಯೋ ? ನೀವೇ ಅವುಗಳನ್ನು ನಡೆಸುವುದಾದರೆ ಹಾಗೆಯೇ ಮಾಡಿ. ಆದರೆ ಮ್ಯಾನೇಜ್‌ಮೆಂಟಿನವರ ಬಗ್ಗೆ ಮಲತಾಯಿ ಧೋರಣೆ ಏಕೆ ಎಂದು ಕೇಳುತ್ತಿದ್ದೇನೆ.

ರೀಜನಲ್ ಇಂಜನಿಯರಿಂಗ್ ಕಾಲೇಜ್, ಸುರತ್ಕಲ್, ಇದಕ್ಕೆ ಕೋಟಿಗಟ್ಟಲೆ ರೂಪಾಯಿ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ, ಅಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಬನ್ನಿ ಮಂತ್ರಿಗಳೇ, ನಾವು ಹೋಗಿ ನೋಡಿ ಬರುವ. ಬೆಳಗ್ಗೆ ಒಂದು ಗಂಟೆ ಕಾಲ ಮಾತ್ರ ವಿದ್ಯಾರ್ಥಿಗಳಿಗಾಗಿ ನೀರನ್ನು ಕೊಡುತ್ತಾರೆ. ಮೊನ್ನೆ ಇಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ರಾಂಗ್ ರಿಪ್ಲೈ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಆ ದಿನ ಸಭೆಯ ಮುಂದೆ ಬರಲಾಗಲಿಲ್ಲ. ಅದು ಬರದಂತೆ ತಡೆಗಟ್ಟಿದರೋ ಏನೋ ಎಂದು ನನಗನ್ನಿಸುತ್ತದೆ. ಅಲ್ಲಿ ಬೇಕಾದಷ್ಟು ನೀರು ಉಂಟು ಎಂದು ಅವರ ಉತ್ತರದಲ್ಲಿ ಹೇಳಿದ್ದಾರೆ. ವಿದ್ಯಾರ್ಥಿಗಳಿಗೆ ಮಾತ್ರ ಬೆಳಗ್ಗೆ ಒಂದು ಗಂಟೆ ಕಾಲ ನೀರು ಸಿಕ್ಕುತ್ತದೆ, ಸಿಬ್ಬಂದಿಯವರಿಗೆ ಕುಡಿಯಲು ನೀರಿಲ್ಲ. ಅಲ್ಲಿರುವ ಪ್ರಿನ್ಸಿಪಾಲರು ಏನು ಮಾಡುತ್ತಾರೆಂದರೆ ವಿದ್ಯಾರ್ಥಿಗಳು ಆಂದೋಳನ ಮಾಡುತ್ತಾರೆಂದು ಒಂದು ಗಂಟೆ ಕಾಲ ನೀರು ಕೊಡುತ್ತಾರೆ. ಸಿಬ್ಬಂದಿ ವರ್ಗದವರು ನೀರು ಬೇಕಾದರೆ ಹುಡುಗರ ಕೋಣೆಯಿಂದ ಕದ್ದು ತರಬೇಕು. ಇಂಥ ವ್ಯವಸ್ಥೆ ನೀರಿನ ವಿಚಾರದಲ್ಲಿ ಅಲ್ಲಿದೆ. ಅಲ್ಲಿ ಓಪನ್ ವೆಲ್ ತೆಗೆಯಿರಿ ಎಂದು ಇಂಜನಿಯರುಗಳು ಹೇಳಿದರು. ಹತ್ತಿರ ಹೊಳೆಗಳಲ್ಲಿ ಬೇಕಾದಷ್ಟು ನೀರಿದೆ, ಓಪನ್ ವೆಲ್ ತೆಗೆಸಿರಿ ಎಂದು ಹೇಳಿದ್ದನ್ನು ಕೇಳದೆ ಬೋರವೆಲ್ ತೆಗೆಸಿದರು. ಅದು ಫೇಲ್ಯೂರ್ ಆಗಿದೆ. ಈ ವರ್ಷ ಮಳೆಗಾಲವೂ ಬೇಗ ನಿಂತುಹೋಗಿದೆ. ಕುಡಿಯುವುದಕ್ಕೆ ನೀರಿಲ್ಲ. ನಾನು ಹೇಳುವುದು ಸತ್ಯವಿದೆ. ಈ ಅಧಿವೇಶನ ಮುಗಿದ ಮೇಲಾದರೂ ನನ್ನ ಜೊತೆಯಲ್ಲಿ ಅಲ್ಲಿಗೆ ಬಂದು ಖುದ್ದಾಗಿ ನೋಡಿ. ಅಲ್ಲಿ ಉಪಾಧ್ಯಾಯರು, ಸಿಬ್ಬಂದಿವರ್ಗ, ವಿದ್ಯಾರ್ಥಿಗಳು ಅವರಿಂದಲೇ ಸತ್ಯ ಸಂಗತಿಯನ್ನು ಕೇಳಿ ತಿಳಿದುಕೊಳ್ಳಿ. ಇಂಜನಿಯರಿಂಗ್ ಕಾಲೇಜ್ ಮಾಡಿದ್ದೇವೆ, ದಕ್ಷಿಣ ಕನ್ನಡ ಜಿಲ್ಲೆಗೆ ಬೇಕಾದಷ್ಟು ಡೆವೆಲಪ್‌ಮೆಂಟು ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಸುರತ್ಕಲ್ ಕಾಲೇಜಿಗೆ ಕೇಂದ್ರ ಸರ್ಕಾರದವರು ಮುಕ್ಕಾಲು ಭಾಗದಷ್ಟು ಹಣವನ್ನು ಹಾಕಿದ್ದಾರೆ. ನಮ್ಮ ರಾಜ್ಯದ್ದು ಅದರಲ್ಲಿ ಏನೂ ಇಲ್ಲ. ಇಂಜನಿಯರಿಂಗ್ ಕಾಲೇಜ್ ಒಳ್ಳೆಯದಾಗಬೇಕು ಎಂದು ಇದ್ದರೆ ಅದಕ್ಕೆ ಬೇಕಾದಂಥ ನೀರನ್ನು ತರುವುದಕ್ಕೆ ಹತ್ತಿರ ಚೇಳಾರ್ ಕಟ್ಟದ ಬಳಿ ನದಿ ನೀರಿನ ಅನುಕೂಲ ಇದೆ. ಅದನ್ನು ಬಿಟ್ಟು ಪ್ರತಿ ವರ್ಷವೂ ಒಂದೊಂದು ಬೋರವೆಲ್ ಮಾಡಿಸುತ್ತೇವೆ ಎನ್ನುವ ಧೋರಣೆ ಇರಬಾರದು. ನೀರು ಸರಬರಾಜು ಇಲ್ಲದೆ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಬಹಳ ಕಷ್ಟ ಪಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೂಡಲೇ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಕೇರ್ ಸಂಸ್ಥೆಯಿಂದ ಸಹಾಯ ಪಡೆದು ಬಡ ಮಕ್ಕಳಿಗೆ ತಿಂಡಿ ಕೊಡುತ್ತೇವೆಂದು ಜಂಭ. ಅಮೆರಿಕದ ಇನ್ನೂ ಕೆಲವು ಸಂಸ್ಥೆಗಳನ್ನು ಕೇಳಿ, ಅವರಿಂದಲೂ ಸಹಾಯ ಪಡೆದು ಬಡ ಉಪಾಧ್ಯಾಯರುಗಳಿಗೆ ಹೊಟ್ಟೆಗೆ ಏನಾದರೂ ಕೊಡುವಂತೆ ಮಾಡಿ. ನಮ್ಮ ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ವಿದ್ಯಾರ್ಥಿಗಳಿಗಿಂತ ಹೆಚ್ಚು ಈ ಕೇರ್ ಸಂಸ್ಥೆಯ ಅಗತ್ಯವಿದೆ. ಈ ಉಪಾಧ್ಯಾಯರು ಅರೆಹೊಟ್ಟೆಯಿಂದ ಇದ್ದು, ಮಕ್ಕಳು ಸಜ್ಜಿಗೆ ತಿನ್ನುವುದನ್ನು ನೋಡಿ ಹಸಿವೆಯಿಂದ ಇರುತ್ತಾರೆ. ಈ ಉಪಾಧ್ಯಾಯರುಗಳಿಗೆ ಮನೆಯಲ್ಲಿ ಐದಾರು ಜನ ಮಕ್ಕಳಿರುತ್ತಾರೆ ; ನೀವು ಕೊಡುವ 80 ರೂಪಾಯಿ ಸಂಬಳದಲ್ಲಿ ಅರೆಹೊಟ್ಟೆಯಲ್ಲಿ ಶಾಲೆಗೆ ಬರುತ್ತಾರೆ. ಅಧ್ಯಾಪಕರಿಗೂ ಮಧ್ಯಾಹ್ನ ಸಜ್ಜಿಗೆ ಸಿಕ್ಕುತ್ತಿದ್ದರೆ ಬಹಳ ಒಳ್ಳೆಯದಿತ್ತು. ಉಚಿತ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ, ದೊಡ್ಡದಾಗಿ ಹೇಳಿದ್ದಾರೆ. ಆದರೆ ಅದನ್ನು ಉಪಾಧ್ಯಾಯರಿಗೆ ಅನ್ವಯಿಸುವುದಿಲ್ಲ. 80 ರೂಪಾಯಿ ಸಂಬಳ ಅವರಿಗೆ ಬರುವುದು ಏನೇನೂ ಸಾಲದು. ನನಗೂ ಒಬ್ಬ ಕಾಂಗ್ರೆಸ್ ನಾಯಕರಿಗೂ ಚರ್ಚೆ ಆಯಿತು. ಅದು ಬಹಳ ಸ್ವಾರಸ್ಯವಾಗಿತ್ತು. ಅಮೆರಿಕಾ ದೇಶದಲ್ಲಿ ಎಲ್ಲ ಉದ್ಯೋಗಗಳಿಗಿಂತ ಜಾಸ್ತಿ ಪ್ರಾಶಸ್ತ್ಯವನ್ನು ಉಪಾಧ್ಯಾಯ ವೃತ್ತಿಗೆ ಕೊಡುತ್ತಾರೆ. ಅಲ್ಲಿ ಒಬ್ಬ ಪ್ರಾಥಮಿಕ ಶಾಲಾ ಉಪಾಧ್ಯಾಯನಿಗೆ ವರ್ಷ ಒಂದಕ್ಕೆ 25,000 ರೂಪಾಯಿ ಸಂಬಳ ಸಿಕ್ಕುತ್ತದೆ. 25 ಸಾವಿರ ರೂಪಾಯಿ ಎಂದರೆ 3,600 ಡಾಲರುಗಳು. You may say that the cost of living is 7 times more in America than in India Making allowance

for this the primary school teacher in America gets Rs. 3600 per annum. He owns a car; he owns a transistor; he gives the best of education to his children.

ಶ್ರೀಮತಿ ಕೆ. ಲೀಲಾವತಿ ರೈ.—ಇಂಗ್ಲೆಂಡಿನಲ್ಲಿ ವರಮಾನ ತೆರಿಗೆ ಎಷ್ಟು ಕೊಡುತ್ತಾರೆ ಎಂದು ಹೇಳುತ್ತೀರಾ ?

ಶ್ರೀ ಪಿ. ವಿ. ಐತಾಳ.—I want notice. ನಾನು ಅಮೆರಿಕಾ ದೇಶದ ವಿಷಯ ಹೇಳುತ್ತಿದ್ದೇನೆ. ಇಂಗ್ಲೆಂಡ್ ವಿಷಯ ನನಗೆ ಗೊತ್ತಿಲ್ಲ.

ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲಾ).—ಮಾನ್ಯ ಅಧ್ಯಕ್ಷರೇ, ಶಿಕ್ಷಣ ಬಾಬಿನ ಬೇಡಿಕೆಯ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಸವಿಸ್ತಾರವಾಗಿ ಈ ವಿಷಯ ಹೇಳುವುದಕ್ಕೆ ಹೋಗುವುದಿಲ್ಲ. ನಮಗೆ ಇರತಕ್ಕ ಕಷ್ಟ ಏನು ಎನ್ನುವುದನ್ನು ನಾನು ಹೋದ ಸಲ ಮಾತನಾಡಿದಾಗ್ಗೆ ಎಲ್ಲ ವಿಷಯ ನಮೂದಿಸಿದ್ದೇನೆ. ಶಿಕ್ಷಣ ಖಾತೆಯು ಪವಿತ್ರವಾದುದು. ಶಿಕ್ಷಣವೂ ಕೂಡ ಪವಿತ್ರವಾದುದು ಇಂಥ ಪವಿತ್ರ ಖಾತೆಗೆ ಒಂದು ಶಾಪ ಇದ್ದ ಹಾಗೆ ಇದೆ. ಈ ಖಾತೆಯಲ್ಲಿ ಜಾತೀಯತೆ, ವಶೀಲೀಬಾಜಿ, ಲಂಚಗುಳಿತನ, ನಾಲಾಯಖತನ ಇವು ಶಾಪ ಇದ್ದ ಹಾಗೆ ಇವೆ ಎಂದು ಹೇಳಿದರೆ ತಪ್ಪಲ್ಲ. ಈ ಪವಿತ್ರ ಶಿಕ್ಷಣ ಖಾತೆಗೆ ಇವು ಅಂಟಿಕೊಂಡಿವೆ. ನಮ್ಮ ಉತ್ತರ ಕನ್ನಡ ಜಿಲ್ಲೆಯು ಬಡ ಜಿಲ್ಲೆಯಾಗಿದೆ. ಶಿಕ್ಷಣ ಪಡೆಯಲು ಬಹಳ ಕಷ್ಟಪಡಬೇಕಾಗುತ್ತದೆ. ಅರ್ಥ ಮಂತ್ರಿಗಳು ನಮ್ಮ ಜಿಲ್ಲೆಯವರೇ ಆಗಿದ್ದರೂ ಕೂಡ ನಮ್ಮ ಜಿಲ್ಲೆಯು ದುರ್ಲಕ್ಷಿಸಲ್ಪಟ್ಟಿದೆ. ನಮ್ಮ ಜಿಲ್ಲೆಗೆ ಕಷ್ಟವಿದ್ದರೂ ಕೂಡ ನಮಗೆ ಹಣದ ಉಪಯೋಗ ಸಿಕ್ಕುವುದಿಲ್ಲ. ನಮ್ಮ ಜಿಲ್ಲೆಯಲ್ಲಿ 20 ಲಕ್ಷ ಎಕರೆ ಕಾಡು ಇದೆ. ಮೈಸೂರು ರಾಜ್ಯದಲ್ಲಿ 100ಕ್ಕೆ 50ರಷ್ಟು ಭಾಗ ಇರತಕ್ಕ ಕಾಡು ನಮ್ಮ ಜಿಲ್ಲೆಯೊಂದರಲ್ಲಿಯೇ ಇದೆ. ನಮ್ಮ ಜಿಲ್ಲೆಯಲ್ಲಿ 4000 ಚದುರ ಮೈಲಿ ಕ್ಷೇತ್ರದಲ್ಲಿ 7 ಲಕ್ಷ ಜನಸಂಖ್ಯೆ ಇದೆ. ಅಂದರೆ ಒಂದು ಮೈಲಿಗೆ 174 ಜನರ ಸಂಖ್ಯೆ ಬೀಳುತ್ತದೆ. ಇಡೀ ಮೈಸೂರು ರಾಜ್ಯದಲ್ಲಿಯ 19 ಜಿಲ್ಲೆಗಳಲ್ಲಿ ಇಷ್ಟು ಕನಿಷ್ಠ ಪ್ರಮಾಣದ ಜನಸಂಖ್ಯೆ ಇರುವುದು ಇದೊಂದೇ ಜಿಲ್ಲೆ.

ಈ ಮಲೆನಾಡು ಪ್ರದೇಶ ಅಭಿವೃದ್ಧಿ ಪಡಿಸುತ್ತೇವೆ ಅನುಕೂಲ ಮಾಡಿ ಕೊಡುತ್ತೇವೆ ಎಂದು ಹೇಳಿದ್ದರೂ ಕೂಡ ಇದುವರೆಗೆ ಯಾವ ಕೆಲಸವಾಗಿಲ್ಲ. ಮಲೆನಾಡು ಪ್ರದೇಶದ ಜನರ ಪರವಾಗಿ ಶಿಕ್ಷಣ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಅವರಿಗೆ ನಿಜವಾಗಿಯೂ ಈ ಜನರ ಬಗ್ಗೆ ಕಳಕಳಿಯಿದ್ದರೆ ಇಲ್ಲಿಯ ಜನರ ಕೆಲಸ ಮಾಡಿಕೊಡಬೇಕು. ಇಲ್ಲಿಯ ಅರಣ್ಯ ಸಂಪತ್ತಿನಿಂದ ಅರಣ್ಯ ಇಲಾಖೆಗೆ 4 ಕೋಟಿ ರೂಪಾಯಿ ಉತ್ಪತ್ತಿ ಅದು ಸರಕಾರದ ಬೊಕ್ಕಸಕ್ಕೆ ಬರುತ್ತದೆ. ನಮ್ಮ ಜಿಲ್ಲೆಗೆ ಅನುಕೂಲ ಒದಗಿಸಲಿಕ್ಕೆ ಹೊರಗಿನಿಂದ ಹಣ ನೀವು ತರಬೇಕಾಗಿಲ್ಲ. ಅರಣ್ಯ ಸಂಪತ್ತಿನಿಂದ ಬರತಕ್ಕ ನಾಲ್ಕು ಕೋಟಿ ನಿವ್ವಳ ಲಾಭದಿಂದ ನಮ್ಮ ಜಿಲ್ಲೆಗಾಗಿ ಹಣ ಖರ್ಚು ಮಾಡಬೇಕು. ನಮ್ಮ ಮಲೆನಾಡಿನಲ್ಲಿ ಒಂದು ಗುಡ್ಡದ ಮೇಲೆ ಒಂದು ಮನೆ ಇನ್ನೊಂದು ಗುಡ್ಡದ ಮೇಲೆ ಎರಡು ಮನೆ ಇನ್ನೊಂದು ಕಡೆ ನಾಲ್ಕು ಮನೆ ಹೀಗೆ ಇರುತ್ತವೆ. ಐದಾರು ವರ್ಷದ ಮಕ್ಕಳು ಶಾಲೆಗೆ ಬರಬೇಕಾದರೆ ಎರಡು ಮೂರು ಮೈಲಿ ನಡೆದುಕೊಂಡು ಬರಬೇಕಾಗುತ್ತದೆ. ಹೀಗಾದರೆ ಮಕ್ಕಳು ಶಾಲೆಗೆ ಹೋಗುವುದು ಹೇಗೆ ? ಕಾಡಿನಲ್ಲಿ ಮೋಟಾರ್ ರಸ್ತೆ ಇಲ್ಲ. ಕಾಲು ದಾರಿಯಲ್ಲಿ ನಡೆದುಕೊಂಡು ಹೋಗಬೇಕಾಗುತ್ತದೆ. ಹೀಗೆ ನಾನಾ ತೊಂದರೆಗಳಿವೆ. ಇಂಥ ಕಡೆ ನಾಲ್ಕನೇ ಇಯತ್ತೆವರೆಗೆ ಶಾಲೆ ಒದಗಿಸಬಹುದು. ಮಲೆನಾಡಿನಲ್ಲಿ ನಾಲ್ಕನೇ ಇಯತ್ತೆಯಿಂದ ಏಳನೇ ಇಯತ್ತೆವರೆಗೆ ಬರತಕ್ಕ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ ಇರುತ್ತದೆ. ಯಾಕೆಂದರೆ ಅವರಿಗೆ ಉಪದ್ರವ ಜಾಸ್ತಿ ಇರುತ್ತದೆ. ಒಂದು ಕ್ಲಾಸಿನಲ್ಲಿ ಇಷ್ಟು ಮಕ್ಕಳು ಇರಬೇಕು ಎಂದು ಒಂದು ಮಿತಿ ಹಾಕಿದರೆ, ಒಂದು ಮೈಲಿಗೆ 174 ಜನ ಇರತಕ್ಕಂತ ಕಾಡಿನಲ್ಲಿ ಶಾಲೆ ನಡೆಸುವುದು ಅಸಾಧ್ಯ ಸಂಗತಿ. ಮಿತಿ ಇಟ್ಟರೆ ಶಾಲೆ ಮಾಡುವುದು ಅವಶ್ಯಕವಾಗಿದೆ. ಆದುದರಿಂದ ನಾನು ಸೂಚಿಸುವುದು ಏನೆಂದರೆ ಒಂದು ಗ್ರೂಪ್ ಆಫ್ ವಿಲೇಜಸ್ ಮಾಡಿ ಆ ಎಲ್ಲ ಹಳ್ಳಿಗಳಿಗೆ ಒಂದು ಸ್ಕೂಲು ಸೆಂಟ್ರಲ್ ಪ್ಲೇಸ್‌ನಲ್ಲಿ ಮಾಡಿ ಅಲ್ಲಿ ಹಾಸ್ಟೆಲ್ ವ್ಯವಸ್ಥೆ ಮಾಡಬೇಕು. ಎಲ್ಲ ಮಕ್ಕಳೂ ಹಾಸ್ಟೆಲಿನಲ್ಲಿ ಇರಬೇಕು. ಅನುಕೂಲಸ್ಥರು ಅಂಥ ಮಕ್ಕಳ ಪಾಲಕರು ಖರ್ಚು ಕೊಡುತ್ತಾರೆ; ಅವರಿಗೆ ದುಡ್ಡಿನ ಅನುಕೂಲವಿರುತ್ತದೆ. ಆದರೆ ಸಿದ್ಧಿ ಜನರು ಹರಿಜನರು ಇವರು ಬಡವರು. ಇಂಥವರ ಮಕ್ಕಳಿಗೆ ಶಿಕ್ಷಣ ಪಡೆಯುವುದಕ್ಕೆ ಅನುಕೂಲ ಮಾಡಿಕೊಡಬೇಕು. ಬೆಂಗಳೂರಿನಂಥ ದೊಡ್ಡ ದೊಡ್ಡ ಶಹರುಗಳಲ್ಲಿ ಹಾಸ್ಟೆಲ್ ಮಾಡುತ್ತೀರಿ. ಆದರೆ ಹಳ್ಳಿಗಳಲ್ಲಿ ಹಾಸ್ಟೆಲ್ ವ್ಯವಸ್ಥೆ ಮಾಡುವುದಿಲ್ಲ. ಆದುದರಿಂದ ಹಳ್ಳಿಗಳಲ್ಲಿ ಒಂದು ತಾಲ್ಲೂಕಿನಲ್ಲಿ ಎರಡು ಮೂರು ಗ್ರೂಪ್ ಮಾಡಿ ಹಾಸ್ಟೆಲ್ ವ್ಯವಸ್ಥೆ ಮಾಡಬೇಕು. ಈ ಪ್ರಶ್ನೆ ಹೈಸ್ಕೂಲಿಗೂ ಅನ್ವಯಿಸುತ್ತದೆ. ಅಂಕಿ ಸಂಖ್ಯೆಗಳ ಪ್ರಕಾರ ಹೈಸ್ಕೂಲುಗಳು ಹೆಸರಿಗೆ ಮಾತ್ರ ಇವೆ. ಅಲ್ಲಿ ಶಿಕ್ಷಣ ಸರಿಯಾಗಿಲ್ಲ. ಇಂಥ ಕಾಡು ಪ್ರದೇಶದಲ್ಲಿ ವಾಸಿಸುವುದಕ್ಕೆ ಮನೆ ಇಲ್ಲ ಎಂದು ಮೇಷ್ಟ್ರುಗಳು

(ಶ್ರೀ ಡಿ. ಎಸ್. ನಾಡಕರ್ಣಿ)

ನೇಮಕ ಮಾಡಿದರೂ ಕೂಡ ಹೋಗುವುದಿಲ್ಲ. ಆದುದರಿಂದ ನಾನು ವಿನಂತಿ ಮಾಡುವುದು ಏನೆಂದರೆ ನಮ್ಮ ಜಿಲ್ಲೆಯ ಮಲೆನಾಡು ಭಾಗಕ್ಕೆ ಒಂದು ವಿಶಿಷ್ಟ ಯೋಜನೆ ಮಾಡಬೇಕು. ಈ ವಿಚಾರದಲ್ಲಿ ಕೇಂದ್ರ ಸರಕಾರದ ಒಂದು ಕಮಿಟಿಯು ಕೂಡ ಈ ಬಗ್ಗೆ ಸೂಚನೆ ಕೊಟ್ಟಿದೆ. ಉತ್ತರ ಕನ್ನಡ ಜಿಲ್ಲೆ, ಅಸ್ಸಾಮಿನ ಗುಡ್ಡಗಾಡು ಪ್ರದೇಶಕ್ಕೆ ಕೇಂದ್ರ ಸರಕಾರದವರು ಹಣ ಒದಗಿಸುತ್ತಾರೆ. ಆದರೆ ಅಂಥ ಒಂದು ಯೋಜನೆ ಮಾಡುವ ಯೋಗ್ಯತೆ ಈ ಸರಕಾರಕ್ಕೆ ಇಲ್ಲ ಅಂದರೆ ಬಹಳ ದುಃಖವಾಗಿದೆ. ಶಿಕ್ಷಣವು ಮುಖ್ಯವಾದ ವಿಷಯವಾಗಿದೆ ಆದರೆ ಇದಕ್ಕೆ ಲಕ್ಷ್ಯ ಕೊಡುವುದಿಲ್ಲ. ವಸತಿ ಸೌಕರ್ಯ ಇಲ್ಲದೆ ಸ್ಕೂಲು ಟೀಚರುಗಳಿಗೆ ಬಹಳ ತೊಂದರೆಯಾಗಿದೆ. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾಡಿದ್ದರೂ ಅದನ್ನು ಮುಫತ್ ಕೊಡುತ್ತೇವೆ ಎಂದು ಹೇಳುವುದು ಶಿಕ್ಷಣದ ಫಾರ್ಸು ನಡೆಯುತ್ತಿದೆ. ಬ್ರಿಟಿಷರ ಕಾಲದಲ್ಲಿ ತಿಂಗಳಿಗೆ ಒಂದು ಆಣೆ ಫೀಜ್ ತೆಗೆದುಕೊಳ್ಳುತ್ತಿದ್ದರು. ಆದರೆ ಇಂದು ಉಚಿತವಾದ ಶಿಕ್ಷಣ ಇದೆ ಎಂದು ಹೇಳಿದರೂ ಲೈಬ್ರರಿ ಸ್ಪೋರ್ಟ್ಸ್ ಫೀಜ್ ಮತ್ತೆ ಬೇರೆ ಬೇರೆ ಫೀಜ್ ಅದು ಇದು ಎಂದು ಒಂದು ವರ್ಷಕ್ಕೆ 16 ರೂಪಾಯಿ ವಸೂಲ್ಮಾಡುತ್ತಾರೆ. ಇದನ್ನು ಎಲ್ಲಿಂದ ವಸೂಲ್ಮಾಡುತ್ತಾರೆ ಯಾರನ್ನೂ ಬಿಡುವುದಿಲ್ಲ. ಇದರಿಂದ ಬಹಳ ಕಷ್ಟವಾಗಿದೆ. ಹಣ ವಸೂಲ್ಮಾಡುವುದಕ್ಕೆ ಮಕ್ಕಳನ್ನು ಮನೆಗೆ ಕಳಿಸುತ್ತಾರೆ. ಬಡ ಜನರ ಮಕ್ಕಳಿಗೆ ಬಹಳ ತೊಂದರೆಯಾಗಿವೆ. ಬಡವರ ಮಕ್ಕಳು ನನ್ನ ಕಡೆ ಬಂದು ನೀವು ಎಂ. ಎಲ್. ಎ. ಆಗಿದ್ದೀರಿ ನೀವು ವಂತಿಗೆ ಕೊಡಿ ಎಂದು ನನಗೆ ಕೇಳುತ್ತಾರೆ. ನಾನು ಈ ರೀತಿ ಹಣ ಅನೇಕ ಬಡವರಿಗೆ ಕೊಟ್ಟಿದ್ದೇನೆ. ಆದುದರಿಂದ ನಾನು ಕೇಳುತ್ತೇನೆ ಈ ಮೋಫತ ಶಿಕ್ಷಣ ಎಂದು ಏತಕ್ಕೆ ಮಾಡಿದ್ದೀರಿ? ಸ್ಪೋರ್ಟ್ಸ್‌ಗೆ ಆಟದ ಬೈಲು ಇದೆಯೇ? ಲೈಬ್ರರಿಯಲ್ಲಿ ಪುಸ್ತಕಗಳು ಇವೆಯೇ? ಇವತ್ತಿನ ದಿವಸ ಪಠ್ಯ ಪುಸ್ತಕಗಳಿಗೇ ಗತಿ ಇಲ್ಲ. ಸ್ಕೂಲಿನಲ್ಲಿ ಬ್ಲಾಕ್ ಬೋರ್ಡ್ ಇರುವುದಿಲ್ಲ ಯಾವ ಸಾಧನೆಯೂ ಇರುವುದಿಲ್ಲ. ಏತಕ್ಕೆ ಈ ದುಂದು ವೆಚ್ಚ ಮಾಡುತ್ತೀರಿ ಎಂದು ಕೇಳುತ್ತೇನೆ. ಶಿಕ್ಷಕರು ಸಾಕಷ್ಟು ಇಲ್ಲವೇ ಇಲ್ಲ. ಇರತಕ್ಕ ಶಿಕ್ಷಕರಲ್ಲಿ ಟ್ರೇನಿಂಗ್ ಆದವರು ಇಲ್ಲ. ಒಂದು ವರ್ಷದಲ್ಲಿ ಎರಡು ಮೂರು ಸಾವಿರ ಜನ ಶಿಕ್ಷಕರಿಗೆ ಟ್ರೇನಿಂಗ್ ಕೊಡುವ ಯೋಗ್ಯತೆ ನಿಮಗೆ ಇದೆಯೇ? 20 ವರ್ಷ ಈ ರೀತಿ ಟ್ರೈನಿಂಗ್ ನಡೆದರೂ ಇದು ಸಾಧ್ಯವಾಗುವುದಿಲ್ಲ ಟ್ರೈನಿಂಗ್ ಇಲ್ಲದ ಶಿಕ್ಷಕರಿಗೆ ಬಡತಿ ಇಲ್ಲ. ಅಂಥವರಿಗೆ ಕಲಿಸಲು ಯೋಗ್ಯತೆ ಇಲ್ಲ. ಅವರಿಗೆ ಯಾವ ಅನುಕೂಲತೆ ಇಲ್ಲ. ಇಂಥ ಸರಕಾರಕ್ಕೆ ಏನು ಹೇಳುವುದು ತಿಳಿಯುವುದಿಲ್ಲ. ಆದುದರಿಂದ ಅಂಥ ಶಿಕ್ಷಕರಿಗೆ ಟ್ರೇನಿಂಗ್ ಕೊಡುವ ಕಾಲೇಜು ಮಾಡಿ ಟ್ರೇನಿಂಗ್ ಕೊಟ್ಟು ಅವರಿಗೆ ಬಡತಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

6–30 P.M.

ನಾವು ಕೆಲವು ಸೆಕೆಂಡರಿ ಶಾಲೆಗಳನ್ನು ನಡೆಸುತ್ತಿದ್ದೇವೆ. ಕೆಲವು ಮಿತ್ರರು ಹೇಳಿದರು, ಖಾಸಗಿ ಸಂಸ್ಥೆಯವರು ಬಹಳ ಅನ್ಯಾಯ ಮಾಡುತ್ತಿದ್ದಾರೆ, ದುಡ್ಡು ತಿನ್ನುತ್ತಾರೆ ಎಂದು. ನನ್ನ ಹತ್ತಿರ ರಿಪೋರ್ಟ್ ಇದೆ. ಅದನ್ನು ಸಭೆಯ ಮುಂದೆ ಇಡುವುದಕ್ಕೆ ತಯಾರಾಗಿದ್ದೇನೆ. ನನ್ನ ಜಿಲ್ಲೆಯಲ್ಲಿ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದಾರೆ. ತಮ್ಮ ಸ್ವತಃ ಸ್ವತ್ತನ್ನು ಹಾಕಿ, ವೇಳೆ ಹಾಕಿ ಕೆಲಸ ಮಾಡುತ್ತ ಇದ್ದಾರೆ. ಶಾಲೆಗಳು ಚರೋ ನಡೆಯುತ್ತಿವೆ. ಯಾವುದೋ ಕಡೆ ಏನೋ ಆಯಿತು ಎಂದು ಎಲ್ಲರಿಗೂ ಅದೇ ರೀತಿ ಹೇಳುವುದು ಸರಿಯಲ್ಲ. ನಮಗೆ ಹಿಟ್ಟು ಬೂದಿ ಒಂದು ಮಾಡಲಿಕ್ಕೆ ಬರೋದಿಲ್ಲ. ಉತ್ತರ ಕರ್ನಾಟಕದ ಜನರು ಬಡ ಜನರು. ದೇಣಿಗೆ ವಸೂಲು ಅಲ್ಲಿ ಆಗೋದಿಲ್ಲ. ಮುಂಬೈ ರಾಜ್ಯದೊಳಗೆ ಇದ್ದಾಗ ಕೈಕಾಲು ಬಿದ್ದು ಭಿಕ್ಷೆ ಬೇಡಿ ಸಂಸ್ಥೆ ಮಾಡಿ ಶಾಲೆಗಳನ್ನು ನಡೆಸುತ್ತಿದ್ದೇವೆ. ಇದಕ್ಕೆ ಸ್ವಲ್ಪ ಮೂಲಧನ ಮಾಡಿಕೊಂಡು ಶಿಕ್ಷಣ ಕೊಡುತ್ತಿದ್ದೇವೆ. ಸ್ವಂತ ಕಟ್ಟಡಗಳಲ್ಲಿ ಶಾಲೆಗಳನ್ನು ನಡೆಸುವವರಿಗೆ ಬಾಡಿಗೆ ಕೊಡುವುದಿಲ್ಲ ಎಂದು ಕಾಯಿದೆ ಮಾಡಿದ್ದಾರೆ. ಇದನ್ನು ನೋಡಿದರೆ ನಾವುಗಳು ಸ್ವಂತ ಕಟ್ಟಡಗಳನ್ನು ಮಾರಿಕೊಂಡು ಬೇರೆಯವರ ಹೆಸರಿನಲ್ಲಿ ಮಾಡಿ ಅದಕ್ಕೆ ಬಾಡಿಗೆ ತೆಗೆದುಕೊಳ್ಳಬೇಕಾಗಿತ್ತು ಎಂದು ಕಾಣುತ್ತದೆ. ಸರ್ಕಾರದವರೇ ಜನರಿಗೆ ಕಳ್ಳತನ, ಫಟಿಂಗತನ ಕಲಿಸುತ್ತಿದ್ದಾರೆ. ಉತ್ತರ ಕರ್ನಾಟಕದೊಳಗೆ ಎಲ್ಲ ಮ್ಯಾನೇಜ್‌ಮೆಂಟಿನವರೂ ಕೂಡಿಕೊಂಡು ನಮ್ಮ ಮಾನ್ಯ ಮಂತ್ರಿಗಳಿಗೆ ಭೇಟಿಯಾಗಿ ಎಲ್ಲವನ್ನೂ ತಿಳಿಸಿದ್ದೇವೆ. ಈಗ ವೇಳೆ ಇಲ್ಲದ್ದರಿಂದ ಅದನ್ನೆಲ್ಲ ಓದಿ ಹೇಳುವುದಕ್ಕೆ ಹೋಗುವುದಿಲ್ಲ. ಒಳ್ಳೆಯ ಕೆಲಸ ಮಾಡಿದರೆ ಶಿಕ್ಷೆ ಮಾಡೋದು ನಿಮ್ಮ ಧೋರಣೆಯೇ? ಬೇಕಾದರೆ ಎಲ್ಲ ಶಾಲೆಗಳನ್ನೂ ನೀವೇ ವಹಿಸಿಕೊಂಡು, ನಾವು ಅದಕ್ಕಾಗಿ ಖರ್ಚು ಮಾಡಿರುವ ಹಣವನ್ನು ಕೊಟ್ಟು ಛಾತಿ ಇದ್ದರೆ,

ಯೋಗ್ಯತೆ ಇದ್ದರೆ ಅವುಗಳನ್ನು ನಡೆಸಿ. ಸರ್ಕಾರಿ ಶಾಲೆಗಳಲ್ಲಿನ ಪರಿಣಾಮ ಮೂರು, ನಾಲ್ಕು ಅಥವಾ ಐದು ಪರ್ಸೆಂಟ್. ನಮ್ಮ ಶಾಲೆಗಳಲ್ಲಿ ಸರಾಸರಿ 60—70 ಪರ್ಸೆಂಟ್ ಇದೆ ಎಂದು ಧೈರ್ಯವಾಗಿ ಹೇಳುತ್ತಿದ್ದೇನೆ. ಉತ್ತರ ಕರ್ಣಾಟಕದಲ್ಲಿ, ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ಖಾಸಗಿ ಶಾಲೆಗಳಲ್ಲಿ ಪರಿಣಾಮ ಜಾಸ್ತಿಯಾಗುತ್ತಿದೆ. ಇಷ್ಟು ಹಣವನ್ನು ಲುಕ್ಸಾನು ಮಾಡಿಕೊಂಡು ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ನೂರಕ್ಕೆ 60 ಪರ್ಸೆಂಟ್‌ಗಿಂತ ಹೆಚ್ಚು ಜನ ಪಾಸಾಗುತ್ತಿಲ್ಲ ಎಂದರೆ ಎಂಥ ಹ್ಯೂಜ್ ವೇಸ್ಟ್, ಎಂಥ ಭಾರಿ ಲುಕ್ಸಾನು ಅಗುತ್ತಿದೆ ಎನ್ನುವುದವಿನ್ನು ಚಾರ ಮಾಡಿದ್ದೀರಾ ? ಈ ರೀತಿ ಲುಕ್ಸಾನು ಆಗುವುದನ್ನು ತಪ್ಪಿಸದೆ ಖಾಸಗಿ ಶಾಲೆಗಳವರಿಗೆ ಬಾಡಿಗೆ ಕೊಡುವುದಿಲ್ಲ ಎನ್ನುವುದರ ಅರ್ಥವಾದರೂ ಏನು ? ನಿಮಗೆ ಸಹಾನುಭೂತಿಯೂ ಇಲ್ಲ, ಶಿಕ್ಷಣ ಕೊಡುವ ಮನಸ್ಸೂ ಇಲ್ಲ ಎಂದು ದುಃಖದಿಂದ ಹೇಳಬೇಕಾಗುತ್ತದೆ. ಶಿಕ್ಷಣ ಖಾತೆಯ ಕಾರ್ಯದರ್ಶಿಯವರಿದ್ದಾರೆ. ಅವರು ವಿದ್ಯಾವಂತರು, ಪ್ರಾಮಾಣಿಕರು, ದಕ್ಷರು. ಆದರೆ ಅವರಿಗೆ ಸಹಾನುಭೂತಿ ಮಾತ್ರ ಇಲ್ಲ. ಸರ್ಕಾರಿ ಬೊಕ್ಕಸದಿಂದ ಕೊಡುವ ದುಡ್ಡನ್ನು ಧರ್ಮವಾಗಿ ಕೊಡುವಂತೆ ಅವರು ಭಾವಿಸುತ್ತಾರೆಂದು ಕಾಣುತ್ತದೆ. ಅವರು ಮಿಲಿಟರಿ ಖಾತೆಯವರು ಎಂದು ಕಾಣುತ್ತದೆ. ಅವರಿಗೆ ಯೋಗ್ಯತೆ ಇದೆ. ಶಿಕ್ಷಣ ಖಾತೆಯಿಂದ ಅವರನ್ನು ತೆಗೆದು ಗೃಹ ಖಾತೆಗೆ ಬದಲಾಯಿಸಿದರೆ ಬಹಳ ಉತ್ತಮ ಕೆಲಸವಾದೀತು ಎಂದು ನನಗೆ ಅನ್ನಿಸುತ್ತದೆ. ನಮ್ಮ ಮಾನ್ಯ ಮಂತ್ರಿಗಳು ಶಿಕ್ಷಣದ ಬಾಬಿಗೆ ಹೆಚ್ಚು ಆಸ್ಥೆ ವಹಿಸಬೇಕು. ಶಿಕ್ಷಣ ಖಾತೆಯ ಮಂತ್ರಿಗಳು ನಮ್ಮ ಹಾಗೆಯೇ ಕಾಲೇಜನ್ನು ನಡೆಸುತ್ತಿದ್ದಾರೆ. ಅವರಿಗೆ ಆಸ್ಥೆ ಇದೆ. ಅವರಿಗೆ ಈಗ ವ್ಯವಸಾಯ ಖಾತೆಯನ್ನೂ ವಹಿಸಿಕೊಟ್ಟಿದ್ದಾರೆ. ಅದರೆ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಒಂದೇ ಒಂದು ಪೋರ್ಟ್‌ಫೋಲಿಯೋ ಇಟ್ಟುಕೊಳ್ಳಿ, ಶಿಕ್ಷಣ ಖಾತೆಯ ಮಂತ್ರಿಯಾಗಿಯೇ ಕೆಲಸ ಮಾಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ (ವ್ಯವಸಾಯ ಮತ್ತು ಶಿಕ್ಷಣ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಈ ಬೇಡಿಕೆಯ ಮೇಲೆ ಎರಡು ದಿನಗಳಿಂದ ಈ ಸಭೆಯ 37 ಜನ ಸದಸ್ಯರು ಮಾತನಾಡಿದ್ದಾರೆ. ಅನೇಕ ಮಾನ್ಯ ಸದಸ್ಯರು ಉಪಯುಕ್ತವಾದ ಹಾಗೂ ರಚನಾತ್ಮಕವಾದ ಟೀಕೆಗಳನ್ನು ಮಾಡಿದ್ದಾರೆ. ಮತ್ತೆ ಕೆಲವರು ಉಗ್ರವಾದ ಟೀಕೆಗಳನ್ನು ಮಾಡಿ ಹೆದರಿಸಿದ್ದಾರೆ. ಪ್ರತಿಯೊಂದು ವಸ್ತುವಿನಲ್ಲಿಯೂ ಕೇವಲ ದೋಷವನ್ನೇ ಹುಡುಕತಕ್ಕ ಜನ ಒಂದು ವಿಧ ಪ್ರತಿಯೊಂದು ವಸ್ತುವಿನಲ್ಲಿಯೂ ಕೇವಲ ಒಳ್ಳೆಯದನ್ನೇ ಹುಡುಕತಕ್ಕ ಜನ ಮತ್ತೊಂದು ವಿಧ; ಪ್ರತಿಯೊಂದು ವಸ್ತುವಿನಲ್ಲಿಯೂ ವಾಸ್ತವಿಕವಾಗಿರತಕ್ಕ ಒಳ್ಳೆಯದು, ಕೆಟ್ಟದ್ದು ಎರಡನ್ನೂ ಗುರುತಿಸತಕ್ಕವರು ಮೂರನೆ ವಿಧ. ಈ ವರ್ಗೀಕರಣಕ್ಕೆ ಈ ಸಭೆಯ ಮಾನ್ಯ ಸದಸ್ಯರು ಹೊರಗಲ್ಲ. ಅವರವರ ಪ್ರಕೃತಿಗೆ ಅನುಗುಣವಾಗಿ ಅವರು ಮಾತನಾಡುವಂಥ ಧಾಟಿಯಲ್ಲಿ ಮತ್ತು ಅವರ ವಿನ್ಯಾಸದಲ್ಲಿ ವ್ಯತ್ಯಾಸವನ್ನು ತೋರಿಸುತ್ತಾರೆ.

ಶಿಕ್ಷಣ ಇಲಾಖೆಯಲ್ಲಿರತಕ್ಕ ಎಲ್ಲ ಶಿಕ್ಷಕರೂ ಕೂಡ ಅದಕ್ಷರು, ಅಪ್ರಾಮಾಣಿಕರು, ಅನರ್ಹರು ಎಂದು ಕೆಲವರು ಟೀಕೆ ಮಾಡಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು. ಎಲ್ಲರೂ ಯೋಗ್ಯರೇ ಇದ್ದಾರೆ, ಎಲ್ಲರೂ ದಕ್ಷರಾಗಿದ್ದಾರೆ, ಎಲ್ಲರೂ ಪ್ರಾಮಾಣಿಕರಾಗಿದ್ದಾರೆ ಎಂಬುದಾಗಿ ಹೇಳತಕ್ಕ ಸಾಹಸಕ್ಕೆ ನಾನು ಹೋಗದೆ ಇದ್ದರೂ ಅಂಥವರ ಸಂಖ್ಯೆ ಬಹಳ ಕಡಮೆ ಎಂದು ವಿನಯದಿಂದ ನಾನು ಮನವಿ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಮನುಷ್ಯರು ಸೇರಿ ಕೆಲಸ ಮಾಡತಕ್ಕ ಕಡೆಯಲ್ಲಿ ಕೆಲವರು ಕೆಟ್ಟವರು ಇರಬಹುದು. ಆದರೆ ಅಂಥವರ ಸಂಖ್ಯೆ ಅತ್ಯಲ್ಪ. ಅವರುಗಳನ್ನು ಕೂಡ ಗುರುತಿಸಿ ಅವರ ಮೇಲೆ ಸಕಾಲದಲ್ಲಿ ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಇಲಾಖೆ ಹಿಂಜರಿಯುವುದಿಲ್ಲ. ಈಗಾಗಲೇ ಅಂಥ ಕ್ರಮಗಳನ್ನು ತೆಗೆದುಕೊಂಡಿದೆ.

ಯಾವ ಶಾಲೆಗೂ ಕೂಡ ಕಟ್ಟಡವಿಲ್ಲ, ವೈಜ್ಞಾನಿಕ ಉಪಕರಣಗಳಿಲ್ಲ, ಪೀಠೋಪಕರಣಗಳಿಲ್ಲ ಎಂದು ಬಂದಿರತಕ್ಕ ಟೀಕೆ ಏನಿದೆ ಇದೂ ಕೂಡ ಸತ್ಯಕ್ಕೆ ದೂರವಾದ ಮಾತು. ಅನೇಕ ಶಾಲೆಗಳಿಗೆ ಬೇಕಾಗುವಂಥ ಉಪಯುಕ್ತವಾದ ಕಟ್ಟಡಗಳನ್ನು ಕಟ್ಟಿಸಲಾಗಿದೆ. ಸರ್ಕಾರದವರು, ತಾಲ್ಲೂಕು ಬೋರ್ಡ್‌ನವರು ಇಬ್ಬರೂ ಸೇರಿಕೊಂಡು ಅನೇಕ ಸ್ಥಳಗಳಲ್ಲಿ ಹೊಸ ಹೊಸ ಕಟ್ಟಡಗಳನ್ನು, ನೂರಾರು ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಇನ್ನೂ ಕೆಲವು ಕಡೆ ಕಟ್ಟಿಸಿಲ್ಲ. ಇದಕ್ಕೆ ಕಾರಣವೇನು ಎನ್ನುವುದನ್ನು ಮಾನ್ಯ ಸದಸ್ಯರನೇಕರು ತಿಳಿದುಕೊಂಡಿದ್ದಾರೆ. ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ಸೌಲಭ್ಯಗಳ ವಿಸ್ತರಣೆ ಎಷ್ಟು ವೇಗದಿಂದ ನಡೆದಿದೆ ಎನ್ನುವುದನ್ನು ಮುಂದೆ ತಿಳಿಸುತ್ತೇನೆ. ಹೀಗೆ ವೇಗವಾಗಿ ನಡೆಯುವಾಗ ಸಾವಿರಾರು ಸಂಖ್ಯೆಯಲ್ಲಿ ಪಾಠಶಾಲೆಗಳು ಪ್ರಾರಂಭವಾಗಿವೆ, ಸಾವಿರಾರು ಸಂಖ್ಯೆಯಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಬೇಕಾಗಿದೆ. ಆದುದರಿಂದ ಎಲ್ಲ ಕಡೆಗಳಲ್ಲಿಯೂ ಏಕಕಾಲಕ್ಕೆ ಕಟ್ಟಡಗಳನ್ನು ಕಟ್ಟಿಸುವುದು, ವೈಜ್ಞಾನಿಕ ಉಪಕರಣಗಳನ್ನು ಒದಗಿಸುವುದು,

(ಶ್ರೀ ಕೆ. ವಿ. ಶಂಕರಗೌಡ)

ಪಿಠೋಪಕರಣಗಳನ್ನು ಒದಗಿಸುವುದು ಕಷ್ಟವಾಗಬಹುದು. ಎಲ್ಲೋ ಕೆಲವು ಕಡೆ ಈ ರೀತಿ ಇರಬಹುದು. ಆದರೆ ಮುಖ್ಯಾಂಶಭಾಗ ಶಾಲೆಗಳಲ್ಲಿ ಇಂಥ ಅಭಾವವಿಲ್ಲ. ಆದುದರಿಂದ ಎಲ್ಲ ಶಾಲೆಗಳಲ್ಲಿ ಇಂಥ ದುಸ್ಥಿತಿ ಇದೆ ಎಂದು ಹೇಳತಕ್ಕುದು ಸತ್ಯಕ್ಕೆ ದೂರವಾದ ಮಾತು.

ಕಳೆದ ಹತ್ತು ವರ್ಷಗಳಲ್ಲಿ ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಏನು ಪ್ರಗತಿ ನಡೆದಿದೆ ಎನ್ನುವುದರ ಸೂಕ್ಷ್ಮ ಪರಿಚಯವನ್ನು ಸಭೆಗೆ ಮಾಡಿಕೊಡುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ಹತ್ತು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಆಗಿರತಕ್ಕ ವಿಸ್ತರಣೆಯ ಕಾರ್ಯ ಅಸಾಧಾರಣವಾದುದು ಹಾಗೂ ಅಗಾಧವಾದುದು. ವಿದ್ಯಾರ್ಥಿಗಳ ಸಂಖ್ಯೆ ದೃಷ್ಟಿಯಿಂದ, ಶಾಲಾ ಕಾಲೇಜುಗಳ ದೃಷ್ಟಿಯಿಂದ ವಿಸ್ತರಣೆ ಬಹಳ ದೊಡ್ಡ ಪ್ರಮಾಣದಲ್ಲಿ ಆಗಿದೆ. 1956-57 ರಲ್ಲಿದ್ದ ಮಾಧ್ಯಮಿಕ ಶಾಲೆಗಳ ಸಂಖ್ಯೆ 4,369, 1966ಕ್ಕೆ 10,124 ಆಗಿದ್ದು ಇಲ್ಲಿಯವರೆಗೆ ತೆಗೆದುಕೊಂಡರೆ 12 ಸಾವಿರದವರೆಗೂ ಆಗುತ್ತದೆ. ಇವುಗಳಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆ 1956-57ರಲ್ಲಿ 4·3 ಲಕ್ಷ ಇದ್ದುದು 1966ಕ್ಕೆ 7·8 ಲಕ್ಷಕ್ಕೆ ಏರಿದೆ. ಹಾಗೆಯೇ ಪ್ರೌಢಶಾಲೆಗಳ ಸಂಖ್ಯೆ 1956ರಲ್ಲಿ 535 ಮಾತ್ರ ಇತ್ತು. 1966ರಲ್ಲಿ 1670ಕ್ಕೆ ಏರಿದೆ; ಇಂದು 1800 ಇದೆ. ವಿದ್ಯಾರ್ಥಿಗಳ ಸಂಖ್ಯೆ 1956ರಲ್ಲಿ 1·8 ಲಕ್ಷ ಇದ್ದುದು ಈಗ 4.4 ಲಕ್ಷ ಆಗಿದೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಖರ್ಚು 1956ರಲ್ಲಿ 6.7 ಕೋಟಿ ರೂಪಾಯಿ ಇದ್ದುದು ಈಗ 21·8 ಕೋಟಿ ರೂಪಾಯಿ ಆಗಿದೆ. 1956ರಲ್ಲಿ ಕೇವಲ 49 ಕಾಲೇಜುಗಳಿದ್ದುವು, ಈಗ 128 ಕಾಲೇಜುಗಳಿವೆ, ವಿಶ್ವವಿದ್ಯಾನಿಲಯಗಳು 1956ರಲ್ಲಿ 2 ಇದ್ದುವು, ಈಗ 4 ಆಗಿವೆ. ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವವರ ಸಂಖ್ಯೆ 31 ಸಾವಿರದಿಂದ 83 ಸಾವಿರಕ್ಕೆ ಏರಿದೆ. ಹೀಗೆ ಈ ವಿಸ್ತರಣಾ ಕಾರ್ಯ ಬಹಳ ಅಗಾಧ ಪ್ರಮಾಣದಲ್ಲಿ ನಡೆದಿದೆ. ಆದರೆ ಈ ವಿಸ್ತರಣೆ ಯಾವರೀತಿ ನಡೆಯಿತೋ ಅದಕ್ಕೆ ಹೊಂದಿಕೊಂಡು ಬಾಕಿ ವ್ಯವಸ್ಥೆ ಮಾಡಲು ಸ್ವಲ್ಪಮಟ್ಟಿಗೆ ತಾಪತ್ರಯವಾಗಿದೆ. ಇದಕ್ಕೆ ಹಣದ ಕೊರತೆಯೇ ಕಾರಣ.

ಇಲ್ಲಿ ಕೆಲವರು ಸೌಮ್ಯವಾಗಿ ಮಾತನಾಡಿದ್ದಾರೆ, ಮತ್ತೆ ಕೆಲವರು ಕಠಿಣವಾಗಿ ಮಾತನಾಡಿದ್ದಾರೆ. ಆದರೆ ಎಲ್ಲರಿಗೂ ಇರುವ ಕಾತುರತೆ ಒಂದೇ. ಅವರ ಬೇಡಿಕೆ ಒಂದೇ. ನಮ್ಮ ಮಕ್ಕಳಿಗೆ ಕೊಡುವ ಶಿಕ್ಷಣ ಕಡ್ಡಾಯವಾಗಿರಬೇಕು, ವಿಧಾಯಕವಾದದ್ದಾಗಿರಬೇಕು, ನಮ್ಮ ಸಂಸ್ಕೃತಿಗನುಗುಣವಾಗಿರಬೇಕು, ನಮ್ಮ ಆಸೆಯನ್ನು ಈಡೇರಿಸುವಂಥಾದ್ದಾಗಿರಬೇಕು, ನಮ್ಮ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಅಭಿವೃದ್ಧಿಯಾಗುವಂತಿರಬೇಕು ಎಂಬುದೇ ಅವರ ಹೆಬ್ಬಯಕೆ. ಇದನ್ನು ಸಾಧಿಸುವುದಕ್ಕೆ ಶಿಕ್ಷಣವನ್ನು ಧ್ಯೇಯಾತ್ಮಕವಾದದ್ದು ವಿಧಾಯಕವಾದದ್ದು ಹಾಗೂ ಸತ್ವಶಾಲಿಯಾದುದು ಆಗಿ ಮಾಡುವುದಕ್ಕೆ ಪ್ರಗತಿದಾಯಕವಾದ ಯೋಜನೆಗಳನ್ನು ಜಾರಿಗೆ ಕೊಡಲಾಗಿದೆ. ಇದರಲ್ಲಿ ಕೆಲವನ್ನು ಮಾತ್ರ ಸಭೆಯ ಗಮನಕ್ಕೆ ತರುತ್ತೇನೆ. ಪ್ರೀ ಪ್ರೈಮರಿ ಶಿಕ್ಷಣದ ಜವಾಬ್ದಾರಿಯನ್ನು ಈಗ ಹೆಚ್ಚಾಗಿ ಸರಕಾರ ವಹಿಸಿಲ್ಲ. ಏಕೆಂದರೆ ನಾವು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ಮಾತ್ರ ಹೊತ್ತಿದ್ದೇವೆ, ಪ್ರೀಪ್ರೈಮರಿ ಮಟ್ಟದ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಕ್ಕೆ ಅಡ್ಡಿ ಆತಂಕವಿದೆ, ಹಣದ ಮುಗ್ಗಟ್ಟಿದೆ. ಆದರೂ ಅದನ್ನೂ ಸಹ ಮರೆತಿಲ್ಲ. ಪ್ರೀಪ್ರೈಮರಿ ಹಂತದಲ್ಲಿ ಒಂದು ಏಕರೂಪವಾದ ಪಠ್ಯಕ್ರಮವನ್ನು ಗೊತ್ತುಮಾಡಲಾಗಿದೆ ಮತ್ತು ಅಲ್ಲಿ ಶಿಕ್ಷಣವನ್ನು ಕೊಡುವ ಶಿಕ್ಷಕರಿಗೆ ಸರಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ತರಬೇತಿ ಕೊಡುತ್ತೇವೆ. ಇದಲ್ಲದೆ ಅವರಿಗೆ ಸರಕಾರದವರು ನಿಗದಿಮಾಡುವ ಸ್ಕೇಲುಗಳನ್ನು ಕೊಡಲಾಗಿದೆ. ಇದರ ಜೊತೆಗೆ ಪ್ರೀಪ್ರೈಮರಿ ಹಂತದ 4 ಲಕ್ಷ ಮಕ್ಕಳಿಗೆ ಮಧ್ಯಾಹ್ನ ಉಪಹಾರ ಕೊಡುವ ವ್ಯವಸ್ಥೆಮಾಡಲಾಗಿದೆ. ಇದೊಂದು ಮಹತ್ತರವಾದ ಸಾಧನೆ ಅಂದುಕೊಂಡಿದ್ದೇವೆ.

ಇನ್ನು ಪ್ರೈಮರಿ ಮತ್ತು ಪ್ರಾಥಮಿಕ ಮಟ್ಟದಲ್ಲಿ ಆಗಿರುವ ಸಾಧನೆಯ ಬಗ್ಗೆ ಅಂಕಿಸಂಖ್ಯೆಗಳು ಮಾನ್ಯ ಸದಸ್ಯರಿಗೆ ಗೊತ್ತಿದೆ. 1961ರಲ್ಲಿ ಕಡ್ಡಾಯ ಉಚಿತ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ಕೊಡಲು ಆಕ್ಟನ್ನು ಜಾರಿಗೆ ತರಲಾಗಿದೆ. ಅದರ ಪ್ರಕಾರ ಎನ್ಯೂಮರೇಟ್ ಆಗಿರುವ ಸಂಖ್ಯೆ ಸುಮಾರು 37 ಲಕ್ಷ, ಎನ್‌ರೋಲ್ ಆಗಿರುವುದು ಸುಮಾರು 31 ಲಕ್ಷ. ಸುಮಾರು 25 ಲಕ್ಷ ಮಕ್ಕಳಿಗೆ ಪ್ರಾಥಮಿಕ ಉಚಿತ ಶಿಕ್ಷಣವನ್ನು ಕೊಡಲಾಗಿದೆ. ಎನ್‌ರೋಲ್ ಆಗಿರುವವರ ಪೈಕಿ ಸೇಕಡ 80ರಷ್ಟು ಮಕ್ಕಳು ಪಾಠಶಾಲೆಗಳಿಗೆ ಹೋಗುತ್ತಿದ್ದಾರೆ. ಇದಕ್ಕೆ ಕಾನೂನು ಮಾಡಿದ್ದರೂ ಕಾನೂನನ್ನು ಯಾವ ವಿಧವಾದ ಮಕ್ಕಳಿಗೆ ಅನ್ವಯಿಸಿದೆಯೋ ಅವರಿಗೆ ಕೆಲವು ವಿಶೇಷ ಸೌಲಭ್ಯಗಳನ್ನು ಕಲ್ಪಿಸಿ ಮಕ್ಕಳು ಪಾಠಶಾಲೆಗೆ ಬರುವಂತೆ ಆಕರ್ಷಿಸಲಾಗಿದೆ. ವಿಶೇಷ

ಸೌಲಭ್ಯಗಳಲ್ಲಿ ಕೆಲವನ್ನು ಮಾತ್ರ ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ ಮೊದಲನೆಯದು ಮಧ್ಯಾಹ್ನ ಉಪಹಾರ. ಸುಮಾರು 9 ಲಕ್ಷ ಮಕ್ಕಳಿಗೆ ಈ ವ್ಯವಸ್ಥೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಬಂದಿರುವ ಟೀಕೆಗೆ ಉತ್ತರ ಕೊಡುತ್ತೇನೆ. ಇದಕ್ಕಾಗಿ ಕೊಡುತ್ತಿರುವ ಆಹಾರವೇನಿದೆ ಅದನ್ನು ಕದ್ದು ಮಾರುತ್ತಿದ್ದಾರೆ, ದುರುಪಯೋಗಪಡಿಸುತ್ತಿದ್ದಾರೆ ಎಂದು ಕೆಲವರು ಆಕ್ಷೇಪಣೆ ಮಾಡಿದರು ಹಾಲಿನಪುಡಿ ದುರುಪಯೋಗವಾಗುತ್ತಿದೆ ಎಂದು ಹೇಳಿದರು. ಈಗ ಹಾಲಿನಪುಡಿ, ರವೆ, ತುಪ್ಪ ಬರುತ್ತಿಲ್ಲ, ಅದಕ್ಕೆ ಪ್ರತ್ಯೇಕ ಗುಳಿಗೆ ಮಾಡಿದ್ದಾರೆ, ಅದು ಮಾತ್ರ ಬರುತ್ತಿದೆ. ಹಿಂದೆ ಹಾಲಿನ ಪುಡಿ ವಗೈರೆ ಬರುತ್ತಿದ್ದಾಗ ಅದನ್ನು ಎಲ್ಲೋ ಯಾವುದೋ ಮೂಲೆಯಲ್ಲಿ ಯಾರೋ ಕದ್ದು ಒಂದು ಕಡೆ ದುರುಪಯೋಗಮಾಡಿರಬಹುದು. ಅದನ್ನು ಪತ್ತೆಹಚ್ಚಿ ಕ್ರಮ ಕೈಕೊಂಡಿದ್ದೇವೆ. ಈ ಉಪಹಾರ ವ್ಯವಸ್ಥೆ ಬಹಳ ಚೆನ್ನಾಗಿ ನಡೆಯುತ್ತಿದೆ, ಅತ್ಯುತ್ತಮವಾಗಿ ನಡೆಯುತ್ತಿದೆ ಎಂದು ಹೊರದೇಶಗಳವರೂ ಕೂಡ ತಮ್ಮ ಮೆಚ್ಚಿಗೆಯನ್ನು ಸೂಚಿಸಿದ್ದಾರೆ. ಹಾಗಿರುವಾಗ ಯಾವುದೋ ಒಂದು ಮೂಲೆಯಲ್ಲಾದ ಸಣ್ಣ ದುರುಪಯೋಗದ ವಿಚಾರವನ್ನು ದೊಡ್ಡದುಮಾಡಿ ಅದಕ್ಕೆ ಬಣ್ಣ ಕಟ್ಟಿ ಹೇಳುವುದು ಯೋಗ್ಯವಲ್ಲ ಹಾಗೆ ಮಾಡುವುದರಿಂದ ನಮ್ಮ ಗೌರವವನ್ನು ನಾವೇ ಕಳೆದುಕೊಂಡ ಹಾಗಾಗುತ್ತದೆ. ಸೇಕಡ 25 ಮಕ್ಕಳಿಗೆ ಉಚಿತವಾಗಿ ಪುಸ್ತಕಗಳನ್ನು ಕೊಡಲಾಗುತ್ತಿದೆ. ಸಮವಸ್ತ್ರ ಕೊಡಲಾಗುತ್ತಿದೆ. ಹೀಗೆ ಇಂಥ ಸೌಲಭ್ಯಗಳನ್ನು ಕೊಟ್ಟು ಪ್ರಾಥಮಿಕ ಶಾಲೆಗೆ ಮಕ್ಕಳು ಬಹುವಂತೆ ಏರ್ಪಾಡುಮಾಡಲಾಗಿದೆ. ಇದಲ್ಲದೆ ಪ್ರಾಥಮಿಕ ಶಾಲೆಗಳಲ್ಲಿ ಪಾಠ ಹೇಳುವ ಉಪಾಧ್ಯಾಯರ ಅರ್ಹತೆಯನ್ನು ಹೆಚ್ಚಿಸಲಾಗಿದೆ, ಮೊದಲು ಪ್ರಾಥಮಿಕ ಶಾಲೆಗಳಲ್ಲಿ ಹಿಂದೆ ಲೋಯರ್ ಸೆಕೆಂಡರಿ ಎಂದೇನು ಹೇಳುತ್ತಿದ್ದರು ಆ ಪರೀಕ್ಷೆಯನ್ನು ಪಾಸು ಮಾಡಿದವರನ್ನು ನೇಮಕಮಾಡುತ್ತಿದ್ದೆವು. ಅದನ್ನು ತೆಗೆದು ಈಗ ಅಲ್ಲಿಗೆ ಎಸ್.ಎಸ್.ಎಲ್.ಸಿ ಆದವರನ್ನು ಹಾಕುತ್ತಿದ್ದೇವೆ. ಇದಲ್ಲದೆ ಮೊದಲು ಟ್ರೈನಿಂಗು ಕೇವಲ ಒಂದು ವರ್ಷ ಮಾತ್ರ ಇತ್ತು, ಅದನ್ನು ಈಗ ಎರಡು ವರ್ಷ ಮಾಡಲಾಗಿದೆ. ಹೀಗೆ ಮಾಡಿ ಪ್ರಾಥಮಿಕ ಶಿಕ್ಷಣ ಯಶಸ್ವಿಯಾಗುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಂಡಿದ್ದೇವೆ. ಇದರಿಂದ ಸುಮಾರು 100ಕ್ಕೆ 87 ಜನ ಮಕ್ಕಳು ಪಾಠಶಾಲೆಗೆ ಬರುತ್ತಿದ್ದಾರೆ. ಅವರು ಇದರ ಉಪಯೋಗ ಪಡೆಯುತ್ತಿದ್ದಾರೆ. ಇದು ಸಂತೋಷವನ್ನುಂಟುಮಾಡುವ ವಿಷಯ. ಟೀಚರ್ಸ್ ಟ್ರೈನಿಂಗ್ ಸಂಸ್ಥೆಯ ಮೇಲ್ವಿಚಾರಣೆ ನೋಡುವುದಕ್ಕೆ ಮತ್ತು ಪ್ರೈಮರಿ ವಿದ್ಯಾಭ್ಯಾಸವನ್ನು ಉತ್ತಮ ಪಡಿಸುವುದಕ್ಕೆ ಸ್ಟೇಟ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ. ಅಲ್ಲದೆ 1959 ರಲ್ಲಿ ಎಲ್ಲಾ ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳಿಗೆ ಏಕರೀತಿಯ ಪಾಠಕ್ರಮ—ಸಿಲಬಸ್ ಗೊತ್ತು ಮಾಡಿದೆ. ಇದರ ಜೊತೆಗೆ ಇಂಗ್ಲೀಷ್ ಪಾಠ ಹೇಳುವ ವಿಧಾನವನ್ನು ಸುಧಾರಿಸಲಾಗಿದೆ. ಇದಕ್ಕೆ ಸೂಕ್ತ ತರಬೇತಿ ಕೊಡುವ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲೀಷ್ ಎಂಬ ಒಂದು ಸಂಸ್ಥೆಯನ್ನು ಪ್ರಾರಂಭಿಸಿದೆ. ಅದು ಉತ್ತಮವಾದ ಕೆಲಸಮಾಡುತ್ತಿದೆ.

ಇಷ್ಟು ವಿಷಯ ಹೇಳಿ ಇನ್ನುಮುಂದೆ ಪ್ರೌಢಶಾಲೆ ವಿಚಾರ ಹೇಳುತ್ತೇನೆ. ಪ್ರೌಢಶಾಲೆಯಲ್ಲಿ ಮಾನ್ಯ ಸದಸ್ಯರಿಗೆ ಗೊತ್ತಿರುಹಾಗೆ ಶಿಕ್ಷಣ ಉಚಿತವಾಗಿದೆ. 1965—66 ರಿಂದ ಉಚಿತ ಶಿಕ್ಷಣ ಕೊಡುವುದಕ್ಕೆ ಅವಕಾಶಮಾಡಿದೆ. ಬಹುಶಃ ಈಗ ಇದನ್ನು ಮಾಡಿರುವ ರಾಜ್ಯಗಳಲ್ಲಿ ಮೈಸೂರು ಪ್ರಥಮ ಸ್ಥಾನ ಪಡೆದಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಬಿಲ್ಡಿಂಗ್ ಫಂಡ್ ಮಾತ್ರ ಕೊಡಬೇಕಾಗಿದೆ.

ಶ್ರೀ ಕೆ. ವಿ. ಶಂಕರಗೌಡ.—ಅದನ್ನೂ ಕೊಡುತ್ತಿದ್ದೇವೆ, ಮೈಂಟೆನೆನ್ಸ್ ಗ್ರಾಂಟನ್ನೂ ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಆದರೆ ಅದನ್ನು ವಸೂಲುಮಾಡುತ್ತಿದ್ದಾರೆ.

ಶ್ರೀ ಕೆ. ವಿ. ಶಂಕರಗೌಡ.—ಮಾಡಿದರೆ ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲಾ ಸೆಕೆಂಡರಿ ಶಾಲೆಗಳಿಗೂ 1963ರಲ್ಲಿ ಏಕ ರೂಪದ ಗ್ರಾಂಟ್ ಇನ್ ಏಡ್ ಕೋಡನ್ನು ಜಾರಿಗೆ ತಂದಿದೆ, ಅದನ್ನು 1967 ರಲ್ಲಿ ಲಿಬರಲೈಜ್ ಮಾಡಿದೆ. ಪ್ರೌಢ ಶಿಕ್ಷಣದ ಹಂತದಲ್ಲಿ ಮಾಡಿರುವ ಕೆಲವು ಹೆಚ್ಚು ಸುಧಾರಣೆಗಳೆಂದರೆ ಖಾಸಗಿ ಶಾಲೆಗಳಿಗಳಲ್ಲಿ ಇರುವ ಉಪಾಧ್ಯಾಯರಿಗೆ ಚೆಕ್ ಮೂಲಕ ಸಂಬಳ ಕೊಡುವ ವ್ಯವಸ್ಥೆಮಾಡಿದೆ. ಇದರಿಂದ ಪ್ರೌಢಶಾಲೆಯ ಉಪಾಧ್ಯಾಯರ ಗುಂಪಿಗೆ ಅನುಕೂಲವಾಗಿದೆ. ಉಪಯೋಗವಾಗಿದೆ. ಇವರಿಗೆ ಹಿಂದೆ ಸಂಬಳ ಸರಿಯಾಗಿ ಸಿಕ್ಕುತ್ತಿರಲಿಲ್ಲ ಎಂಬ ದೂರಿತ್ತು. ಈಗ ಅದನ್ನು ನಿರ್ಮೂಲಮಾಡಲಾಗಿದೆ. ಪ್ರೈಮರೀ ಶಾಲೆಗಳಿಗೂ ಈ ಸೌಲಭ್ಯವನ್ನು ವಿಸ್ತರಿಸುವುದಕ್ಕೆ ವಿಚಾರಮಾಡುತ್ತಿದ್ದೇವೆ. ಪ್ರಾರಂಭಿಕವಾಗಿ ಬೆಂಗಳೂರು

(ಶ್ರೀ ಕೆ. ವಿ. ಶಂಕರಗೌಡ)

ಜಿಲ್ಲೆಯಲ್ಲಿ ಜಾರಿಗೆ ತಂದು ನಿದಾನವಾಗಿ ಇಡೀ ರಾಜ್ಯದಲ್ಲಿ ಜಾರಿಗೆ ತರಲು ಯೋಚನೆಮಾಡುತ್ತಿದ್ದೇವೆ. ದರ ಜೊತೆಗೆ ಪ್ರೌಢ ಶಾಲಾ ಶಿಕ್ಷಕರಿಗೆ ತರಬೇತಿ ಕೊಡಲು ಜಂಮಖಂಡಿ ಮತ್ತು ಬಿಜಾಪುರದಲ್ಲಿ ಹೊಸದಾಗಿ ಎರಡು ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ.

ಈಗ ಆಧುನಿಕ ಜಗತ್ತಿನ ವಿಜ್ಞಾನಕ್ಕೆ ಹೆಚ್ಚಿನ ಪ್ರಾಶಸ್ತ್ಯ ಇದೆ. ವಿಜ್ಞಾನದಲ್ಲಿ ಆಗಬಹುದಾದಂತ ಸಂಶೋಧನೆಗಳು ನಡೆದಿವೆ. ಯಾವ ದೇಶ ವೈಜ್ಞಾನಿಕವಾಗಿ ಮುಂದುವರಿಯುವುದಿಲ್ಲವೋ ಆ ದೇಶ ಪ್ರಗತಿಯನ್ನು ಸಾಧಿಸುವುದು ಕಷ್ಟ. ಶೀಘ್ರವಾಗಿ ಕೈಗಾರಿಕೀಕರಣವಾಗಬೇಕಾದರೆ ವಿಜ್ಞಾನ ಮುಂದುವರಿದಿರಬೇಕು. ಆದ್ದರಿಂದ ನಮ್ಮಲ್ಲಿ ವಿಜ್ಞಾನಕ್ಕೆ ಹೆಚ್ಚು ಗಮನಕೊಟ್ಟು ಅದರ ಸೌಲಭ್ಯವನ್ನು ಹೆಚ್ಚು ಮಾಡುವುದಕ್ಕೂ ಮತ್ತು ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಯೋಚನೆ ಮಾಡಿ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೂ ಸ್ಟೇಟ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ಒಂದು ಸಂಸ್ಥೆಯನ್ನು ಪ್ರಾರಂಭ ಮಾಡಿದ್ದೇವೆ. ಮತ್ತು ಈ ಸಂಸ್ಥೆ ದೇಶದಲ್ಲಿ ಇರತಕ್ಕ ಎಲ್ಲಾ ಶಾಲೆಗಳಿಗೂ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ವೈಜ್ಞಾನಿಕ ಉಪಕರಣಗಳನ್ನು ಕೊಂಡುಕೊಳ್ಳುವುದಕ್ಕೂ, ಅಲ್ಲಲ್ಲೇ ಪರೀಕ್ಷೆ ಮಾಡಿ, ಶಿಫಾರಸುಮಾಡಿ ದುಡ್ಡುಗಳನ್ನು ಕೊಟ್ಟು ವೈಜ್ಞಾನಿಕ ಉಪಕರಣಗಳನ್ನು ಕೊಂಡುಕೊಳ್ಳುವುದಕ್ಕೆ ಏರ್ಪಾಡು ಮಾಡಲಾಗಿದೆ. ಶ್ರೀಮಾನ್ ಸಿದ್ಧವೀರಪ್ಪನವರು, ವಿಸ್ತರಣೆಯಾಗಿದೆ ಆದರೆ ಕ್ವಾಲಿಟಿ ಹೇಗೆ ಇದೆ ಅಂತ ಹೇಳಿ ಪ್ರಶ್ನೆ ಕೇಳಿದರು, ಈ ಸಂದರ್ಭದಲ್ಲಿ ಅದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸೈನ್ಸ್ ಟ್ಯಾಲೆಂಟ್ಸ್ ಅಂತ ಹೇಳಿ ಆಲ್ ಇಂಡಿಯಾ ಕಾಂಪಿಟೆಷನ್ ಇದೆ. ಯಾರು ವಿಜ್ಞಾನದ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾರೆಯೋ ಅವರನ್ನು ಆರಿಸಿ ಅವರಿಗೆ ಕಾಲೇಜಿನಲ್ಲಿ ವಿದ್ಯಾರ್ಥಿ ವೇತನವನ್ನು ಕೊಟ್ಟು ಶಿಕ್ಷಣಕ್ಕೆ ಏರ್ಪಾಡುಮಾಡತಕ್ಕ ಒಂದು ವ್ಯವಸ್ಥೆ ಜಾರಿಯಲ್ಲಿದೆ. ಈ ಪರೀಕ್ಷೆಗೆ ಕುಳಿತುಕೊಳ್ಳತಕ್ಕ ವಿದ್ಯಾರ್ಥಿಗಳಲ್ಲಿ ಇಬ್ಬರು ಸೆಕೆಂಡ್ ಅಂಡ್ ಥರ್ಡ್ ರ್‍ಯಾಂಕ್ ಪಡೆದಿದ್ದಾರೆ ಎಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಹೆಮ್ಮೆಯಾಗುತ್ತದೆ. ಆದ್ದರಿಂದ ನಮ್ಮ ಗುಣ ಕೂಡ ಹೆಚ್ಚು ಮಟ್ಟಕ್ಕೆ ಏರಿದೆ ಎಂದು ಹೇಳುವುದಕ್ಕಾಗುವುದಿಲ್ಲ, ಸಾಕದಷ್ಟು ಆಗಿದೆ. ಆದರೆ ನಿರೀಕ್ಷಣೆ ಮಾಡಿದಷ್ಟು ಗುಣ ಹೆಚ್ಚುಮಾಡಲಿಕ್ಕೆ ಆಗಿಲ್ಲ ಕಾರಣವೇನೆಂದರೆ ಒಂದು ವಿಷಯವನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು, ಹಿಂದೆ ನಾವೆಲ್ಲರೂ, ಶ್ರೀಮಾನ್ ಸಿದ್ಧವೀರಪ್ಪನವರೂ ಕೂಡ ಬಹುಶಃ ವ್ಯಾಸಂಗ ಮಾಡುತ್ತಾ ಇದ್ದಾಗ ಯಾರು ವಂಶಪಾರಂಪರ್ಯವಾಗಿ ವಿದ್ಯಾವಂತರಾಗಿದ್ದರೋ ಅಂತಹ ಮನೆಗಳಿಂದ ಬರತಕ್ಕ ಹುಡುಗರೇ ವಿದ್ಯಾಭ್ಯಾಸಕ್ಕೆ ಶಾಲಾ ಕಾಲೇಜುಗಳಿಗೆ ಹೋಗುತ್ತಾ ಇದ್ದರು. ಅಂತಹ ಪರಿಸ್ಥಿತಿ ಇದ್ದಾಗ್ಯೂ ಕೂಡ ನಾವು ಪರೀಕ್ಷೆಯಲ್ಲಿ ಪಾಸ್ ಮಾಡುತ್ತಾ ಇದ್ದೆವು. ನನಗೆ ಗೊತ್ತಿರುವಹಾಗೆ ನಾನು ಇಂಟರ್‌ಮೀಡಿಯೆಟ್ ಪರೀಕ್ಷೆಗೆ ಕುಳಿತಾಗ ನೂರು ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತರೆ 16 ಜನ 17 ಜನ ಪಾಸ್ ಆಗುತ್ತಾ ಇದ್ದರು, ಅದರಮೇಲೆ ಆಗುತ್ತಾ ಇರಲಿಲ್ಲ. ಇವತ್ತು ಮಾಸ್ ಎಜ್ಯುಕೇಷನ್—ಸಾಮೂಹಿಕ ಶಿಕ್ಷಣ ಇದೆ. ಇದರಲ್ಲಿ ಯಾವ ಹಿನ್ನೆಲೆಯೂ ಇಲ್ಲದೇ ಇರುವ ಹುಡುಗರು ಪಾಠಶಾಲೆಗೆ ಬರುತ್ತಾರೆ, ಅವರಿಗೆ ಹೊಸ ವಿಷಯಗಳನ್ನು ತಿಳಿದುಕೊಳ್ಳುವುದು ಕಷ್ಟ, ಗ್ರಹಿಸುವುದು ಕಷ್ಟ, ಆದರಿಂದ ಪರೀಕ್ಷೆಗಳಲ್ಲಿ ಹೆಚ್ಚಿನ ಫೇಲ್ಯೂರ್ಸ್ ನೋಡಬೇಕಾಗಿದೆ. ಅಂದಮಾತ್ರಕ್ಕೆ ಗುಣ ಕಡಿಮೆಯಾಗಿದೆ ಎಂದು ವ್ಯಥೆಪಟ್ಟುಕೊಳ್ಳಬೇಕಾಗಿಲ್ಲ. ನಮ್ಮ ಇಂಜನಿಯರುಗಳು ಹೊರ ದೇಶಗಳಲ್ಲಿ ಹೆಸರುಗಳಿಸಿದ್ದಾರೆ. ನಮ್ಮ ವೈದ್ಯರು ಈ ದೇಶದಲ್ಲೇ ಅಲ್ಲ ಇಂಗ್ಲೆಂಡು ಅಮೆರಿಕಾ ದೇಶಗಳಿಗೆ ಹೋಗಿ ತಮ್ಮ ಹೆಸರನ್ನು ಸ್ಥಾಪನೆ ಮಾಡಿದ್ದಾರೆ. ಆದ್ದರಿಂದ ಗುಣ ಕಡಿಮೆಯಾಗಿಲ್ಲ. ಅದನ್ನು ಇನ್ನೂ ಹೆಚ್ಚು ಮಾಡಬೇಕಾದ್ದು ಅತ್ಯವಶ್ಯಕ, ಇದರಲ್ಲಿ ಎಲ್ಲರಿಗೂ ಒಂದು ಕಾತುರತೆ ಇದೆ ಎಂಬುದನ್ನು ಮನಗಂಡಿದ್ದೇವೆ, ಇನ್ನು ಮುಂದೆ ವಿಸ್ತರಣಾ ಕಾರ್ಯವನ್ನು ನಿಲ್ಲಿಸಿ, ಆಗಿರತಕ್ಕ ವಿಸ್ತರಣೆಯನ್ನು ಕ್ರೋಢೀಕರಿಸಿ ಗುಣವನ್ನು ಹೆಚ್ಚು ಮಾಡುವುದಕ್ಕೆ ಹೆಚ್ಚಿನ ಗಮನವನ್ನು ಕೊಡುವುದಕ್ಕೆ ಏರ್ಪಾಡು ಏರ್ಪಡುಮಾಡತ್ತಾ ಇದ್ದೇವೆ.

ಇನ್ನು ಹೈಯರ್ ಸೆಕೆಂಡರಿ ವ್ಯವಸ್ಥೆಯನ್ನು ಜಾರಿಗೆ ತಂದು ಅನೇಕ ಸ್ಕೂಲು ಗಳಲ್ಲಿ 11ನೇ ತರಗತಿಯನ್ನು ಪ್ರಾರಂಭಮಾಡಿದ್ದೇವೆ. ಸುಮಾರು ಈಗ ಇದುವರೆಗೂ 230-240 ಪ್ರೌಢಶಾಲೆಗಳಲ್ಲಿ 11ನೇ ತರಗತಿ ಇರಬಹುದು, ಇದರಿಂದ ಒಂದು ವಿಶೇಷ ಅನುಕೂಲತೆ ಏನಾಗಿದೆಯೆದರೆ ಗ್ರಾಮಾಂತರಗಳಲ್ಲಿರತಕ್ಕ ಮಕ್ಕಳಿಗೆ ವಿದ್ಯಾಭ್ಯಾಸದ ಸೌಲಭ್ಯ ಅವರವರ ಮನೆಬಾಗಿಲನಲ್ಲೇ ದೊರೆತಂತಾಗಿದೆ. ಇದು ಹೆಚ್ಚಿನ ಸಾಧನೆ. ಆದರೆ ಎಲ್ಲಾ ಶಾಲೆಗಳಿಗೂ ಕೂಡ 11ನೇ ತರಗತಿಯನ್ನು ಕೊಡುವುದಕ್ಕೆ ಬರುವುದಿಲ್ಲ. ಎಲ್ಲೆಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದಂತಹ ಉಪಾಧ್ಯಾ

ಯರು ಇದ್ದಾರೆ, ವೈಜ್ಞಾನಿಕ ಉಪಕರಣಗಳು ಇವೆ ಮತ್ತು ಕಟ್ಟಡ ಇದೆ, ಅಂತಹ ಕಡೆ ನೋಡಿಕೊಂಡು ಬಹಳ ಎಚ್ಚರಿಕೆಯಿಂದ ಈ ಕೆಲಸವನ್ನು ನಿರ್ವಹಿಸಬೇಕಾಗಿದೆ. ಅರ್ಜಿಗಳೇನೋ ನಮ್ಮ ಶಾಲೆಯಲ್ಲಿ 11ನೇ ಸ್ಟ್ಯಾಂಡರ್ಡ್ ಕೊಡಬೇಕು ಅಂತ ಹೇಳಿ ಹೆಚ್ಚಾಗಿ ಬರುತ್ತಿವೆ. ಆದರೆ ಎಲ್ಲಾ ಕಡೆಯಲ್ಲೂ ಅವನ್ನು ಪ್ರಾರಂಭ ಮಾಡುವುದು ಕಷ್ಟ. ಏಕೆಂದರೆ ಅಲ್ಲಿ ಗುಣಕ್ಕೆ ಊನವಾಗುತ್ತದೆ. ಆದ್ದರಿಂದ ಯಾವ ಯಾವ ಶಾಲೆಗಳಲ್ಲಿ ಸಾಕಾದಷ್ಟು ಉಪಾಧ್ಯಾಯರು ಇದ್ದಾರೆ, ಯಾವ ಯಾವ ಶಾಲೆಗಳಲ್ಲಿ ಪೀಠೋಪಕರಣಗಳು ಇವೆ, ಯಾವ ಯಾವ ಶಾಲೆಗಳಲ್ಲಿ ವೈಜ್ಞಾನಿಕ ಉಪಕರಣಗಳು ಇವೆ ಅದನ್ನು ನೋಡಿಕೊಂಡು ಅಂತಹ ಕಡೆ ಮಾತ್ರ ಅಂತಹ ಸ್ಕೂಲುಗಳನ್ನು ಪ್ರಾರಂಭ ಮಾಡುವುಕ್ಕೆ ಏರ್ಪಾಡು ಮಾಡಿದ್ದೇವೆ. ಇದರ ಜೊತೆಗೆ ಬಿಜಾಪುರದಲ್ಲಿ ಸೈನಿಕ ಪಾಠಶಾಲೆಯನ್ನು ಕೂಡ ಪ್ರಾರಂಭ ಮಾಡಿದ್ದೇವೆ. ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಸುವುದಕ್ಕೆ ಒಂದು ಸ್ಟ್ಯಾಟ್ಯುಟರಿ ಬೋರ್ಡ್ ಸ್ಥಾಪನೆ ಮಾಡಿದ್ದೇವೆ. ಆ ಬೋರ್ಡು ಪರೀಕ್ಷೆಗಳನ್ನು ನಡೆಸುತ್ತ ಇದೆ. ಈಗ ಪರೀಕ್ಷೆಯ ಪದ್ಧತಿಯಲ್ಲಿ ಅನೇಕ ಲೋಪದೋಷಗಳು ಇವೆ. ಪರೀಕ್ಷಾ ಪದ್ಧತಿಯನ್ನೂ ಕೂಡ ಸುಧಾರಣೆ ಮಾಡಬೇಕಾದ್ದು ಅತ್ಯವಶ್ಯಕ. ಇದನ್ನು ಸುಧಾರಣೆ ಮಾಡುವುದಕ್ಕೆ ಇವ್ಯಾಲ್ಯುಯೇಷನ್ ಯೂನಿಟ್ ಅಂತ ಹೇಳಿ ಒಂದು ಯೂನಿಟ್‌ನ್ನು ಸ್ಥಾಪನೆ ಮಾಡಲಾಗಿದೆ. ಅದು ಕೆಲಸ ಮಾಡಿ ಆಗಾಗ್ಗೆ ಪರೀಕ್ಷೆಗಳಲ್ಲಿ ಏನು ಸುಧಾರಣೆ ತರಬಹುದು ಎಂಬ ಸೂಚನೆಯನ್ನು ಇಲಾಖೆಗೆ ಕೊಡುತ್ತಾ ಇವೆ. ಇದರ ಜೊತೆಗೆ ಎಜ್ಯುಕೇಷನಲ್ ರಿಸರ್ಚ್ ಬ್ಯೂರೋ ಅಂಡ್ ಗೈಡೆನ್ಸ್ ಯೂನಿಟ್ ಅಂತ ಮಾಡಿದ್ದೇವೆ. ಶಿಕ್ಷಣದ ಮಟ್ಟವನ್ನು ಹೆಚ್ಚಿಸುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ವಿಚಾರದಲ್ಲಿ ಸಂಶೋಧನೆ ನಡೆಸಿ ಇಲಾಖೆಗೆ ಅದರ ಸಲಹೆಗಳು ಆಗಾಗ್ಗೆ ಬರುತ್ತಾ ಇದೆ. ಇಷ್ಟೆಲ್ಲಾ ಇದ್ದರೂ ಕೂಡ ನಮ್ಮ ಶಿಕ್ಷಣದ ಮಟ್ಟ ಹೆಚ್ಚಬೇಕಾದರೆ ಮುಖ್ಯವಾದಂತಹ ಮಾರ್ಗ ನಮ್ಮ ಉಪಾಧ್ಯಾಯರ, ಶಿಕ್ಷಕರ ಮಟ್ಟ ಹೆಚ್ಚಬೇಕು, ಅವರಲ್ಲಿ ಅರ್ಹತೆ ಹೆಚ್ಚಬೇಕು. ಯೋಗ್ಯರನ್ನು ಶಿಕ್ಷಣವೃತ್ತಿಗೆ ಆಕರ್ಷಿಸಬೇಕು. ಅನೇಕ ಜನರು ಹೇಳುತ್ತಾರೆ ಶಿಕ್ಷಕರಿಗೆ ಹೊಟ್ಟೆಗೆ ಆಹಾರ ಇಲ್ಲ, ಬಳಲುತ್ತಾ ಇದ್ದಾರೆ, ಕೇವಲ 80 ರೂಪಾಯಿ ಸಿಕ್ಕುತ್ತದೆ, ಎಂದು. 80 ರೂಪಾಯಿ ಅಲ್ಲ 130 ರೂಪಾಯಿ ಸಿಕ್ಕುತ್ತದೆ. ಶಿಕ್ಷಕರಿಗೆ ಕೊಡತಕ್ಕ ಸಂಬಳ ಇಷ್ಟೇ ಕೊಡಬೇಕು ಎಂಬ ವಾದಕ್ಕೆ ನಾನು ಹೋಗುವುದಿಲ್ಲ. ಅದು ಸಾಧಾರಣವಾಗಿ ತೃಪ್ತಿಕರವಾಗಿದೆ. ನಮ್ಮ ದೇಶದಲ್ಲಿರತಕ್ಕ ಸಾಮಾನ್ಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆ ವಿಷಯವನ್ನು ಮಾತನಾಡುವಾಗ ವಿಚಾರಪರರಾಗಿ ಮಾತನಾಡಬೇಕು, ವಿಕಾರವಶರಾಗಬಾರದು. ಶಿಕ್ಷಕರಿಗೆ ಕೊಡತಕ್ಕ ಸಂಬಳ ಬಹುಶಃ ಅಷ್ಟೇನೂ ಕಡಿಮೆ ಅಲ್ಲ ಅಂತ ನನ್ನ ಭಾವನೆ, ಇದಕ್ಕಿಂತಲೂ ನಿಕೃಷ್ಟಸ್ಥಿತಿಯಲ್ಲಿರತಕ್ಕ ಜನರು ಅನೇಕರಿದ್ದಾರೆ. ಅವರ ಸಂಬಳವನ್ನು ಎರಡು ಸಾರಿ ಪುನರ್ವಿಮರ್ಶೆ ಮಾಡಿದೆ. ಈಗ ಪುನಃ ವಿಮರ್ಶೆಯಾಗತಕ್ಕ ಸಂಭವ ಇದೆ. ಪೇ ಕಮಿಷನ್ ಮುಂದೆ ಈ ಪ್ರಶ್ನೆ ಪರಿಶೀಲನೆಯಲ್ಲಿದೆ. ಅವರು ಏನು ಶಿಫಾರಸು ಮಾಡುತ್ತಾರೆ ಆ ಶಿಫಾರಸಿನಂತೆ ನಾವು ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಉಪಾಧ್ಯಾಯರ, ಶಿಕ್ಷಕರ ವೇತನವನ್ನು ಆಗಾಗ್ಗೆ ಹೆಚ್ಚುಮಾಡಿದ್ದೇವೆ, ಇನ್ನೂ ಹೆಚ್ಚುಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದು ಸಾಲದೇ ಇರಬಹುದು, ಅದನ್ನು ಹೆಚ್ಚುಮಾಡುವುದಕ್ಕೆ ಸರ್ಕಾರ ಆದಷ್ಟು ಜಾಗ್ರತೆ ಪ್ರಯತ್ನ ಮಾಡುತ್ತದೆ. ಇದರ ಜೊತೆಗೆ ತ್ರಿವಿಧ ಸೌಲಭ್ಯವನ್ನು ಜಾರಿಗೆ ತರಲಾಗಿದೆ. ಅನೇಕ ಸರ್ಕಾರಿ ಶಾಲೆಗಳಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಪೆನ್‌ಷನ್ ಮುಂತಾದುವುಗಳನ್ನು ಏನು ಕೊಟ್ಟಿದೆ ಅದೇ ರೀತಿ ಖಾಸಗಿ ಶಾಲೆಯಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳಿಗೆ ಪೆನ್‌ಷನ್ ಮೊದಲಾದ ಸೌಲಭ್ಯ ಇರಲಿಲ್ಲ. ಆ ಕುಂದುಕೊರತೆಯನ್ನು ನಿವಾರಣೆ ಮಾಡುವುದಕ್ಕೆ ತ್ರಿವಿಧ ಸೌಲಭ್ಯವನ್ನು ಈಗ ಜಾರಿಗೆ ತರಲಾಗಿದೆ. ಇದರಿಂದ ಖಾಸಗಿ ಶಾಲೆಯಲ್ಲಿರತಕ್ಕ ಉಪಾಧ್ಯಾಯರುಗಳಿಗೂ ಕೂಡ ಸರ್ಕಾರಿ ಶಾಲೆಗಳಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಕೊಡತಕ್ಕ ಪೆನ್‌ಷನ್ ಮೊದಲಾದ ಸೌಲಭ್ಯ ದೊರೆಯುತ್ತದೆ. ಇದರ ಜೊತೆಗೆ ಟೀಚರ್ಸ್ ವೆಲ್‌ಫೇರ್ ಫಂಡ್ ಅಂತ ಹೇಳಿ ಒಂದು ನಿಧಿಯನ್ನೂ ಕೂಡ ಸ್ಥಾಪನೆ ಮಾಡಿದ್ದೇವೆ. ಕೇಂದ್ರದ ಮಟ್ಟದಲ್ಲಿ ನ್ಯಾಷನಲ್ ಫಂಡ್ ಫಾರ್ ಟೀಚರ್ಸ್ ಅಂತ ಹೇಳಿ ಒಂದು ನಿಧಿ ಇದೆ. ಅದರ ಜೊತೆಗೆ ರಾಜ್ಯದ ಮಟ್ಟದಲ್ಲಿ ಟೀಚರ್ಸ್ ವೆಲ್‌ಫೇರ್ ಫಂಡ್ ಅಂತ ಹೇಳಿ ಒಂದು ನಿಧಿಯನ್ನು ಪ್ರಾರಂಭ ಮಾಡಿದ್ದೇವೆ. ಕಷ್ಟದಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಈ ನಿಧಿಯಿಂದ ಆಗಾಗ್ಗೆ ಸಹಾಯವನ್ನು ಮಾಡಲಾಗುತ್ತದೆ.

ಇನ್ನು ಟೆಕ್ಸ್ಟ್‌ಬುಕ್ಸ್ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ಸಾಧಾರಣವಾಗಿ 7ನೇ ಸ್ಟ್ಯಾಂಡರ್ಡ್‌ವರೆಗೂ ಎಲ್ಲಾ ಪುಸ್ತಕಗಳನ್ನೂ ರಾಷ್ಟ್ರೀಕರಣ ಮಾಡಲಾಗಿದೆ. ಅಲ್ಲಿಂದ ಮುಂದೆ 10ನೇ ಸ್ಟ್ಯಾಂಡರ್ಡ್ ವರೆಗೆ ರಾಜ್ಯವನ್ನು ವಿವಿಧ ವಲಯಗಳನ್ನಾಗಿ ಮಾಡಿ ಒಂದೊಂದು ವಲಯಕ್ಕೆ ಒಂದೊಂದು ವಿಷಯದಲ್ಲಿ ಒಂದೊಂದು ಪಠ್ಯಪುಸ್ತಕವನ್ನು ನೇಮಕ

(ಶ್ರೀ ಕೆ. ವಿ. ಶಂಕರಗೌಡ)

ಮಾಡತಕ್ಕ ಪದ್ಧತಿ ಇತ್ತು. ಇದರಿಂದ ಎರಡು ದೊಡ್ಡ ತೊಂದರೆಗಳು ಆಗುತ್ತಾ ಇದ್ದವು, ಒಂದು ಏಕರೂಪವಾಗಿ ಪಠ್ಯಪುಸ್ತಕ ಇಲ್ಲದೇ ಇರುವುದರಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಜನರು ವರ್ಗಾಯಿಸಲ್ಪಟ್ಟು ಹೋದಾಗ ಅವರ ಮಕ್ಕಳಿಗೆ ತೊಂದರೆಯಾಗುತ್ತಾ ಇತ್ತು. ಜೊತೆಗೆ ಗುಣ ಇರತಕ್ಕ ಪಠ್ಯಪುಸ್ತಕಗಳನ್ನು ಪಡೆದುಕೊಳ್ಳುವುದಕ್ಕೆ ಕಷ್ಟವಾಗುತ್ತಾ ಇತ್ತು. ಇವೆರಡನ್ನೂ ನಿವಾರಣೆ ಮಾಡುವುದಕ್ಕೆ ಈ ವಲಯಗಳನ್ನು ತೆಗೆದುಹಾಕಿ ಈಗ ಇಡೀ ರಾಜ್ಯವನ್ನು ಒಂದೇ ವಲಯವನ್ನಾಗಿ ಮಾಡಿ ಪ್ರತಿಯೊಂದು ವಿಷಯದಲ್ಲೂ ಒಂದೇ ಒಂದು ವಿಧವಾದ ಪಠ್ಯ ಪುಸ್ತಕವನ್ನು ದೊರಕಿಸಲು 1968–69 ರಿಂದ ವ್ಯವಸ್ಥೆ ಮಾಡಲಾಗಿದೆ. ಇದು ಒಂದು ಮಹತ್ ಕಾರ್ಯ ಎಂದು ಈ ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

7–00 P.M.

ಶ್ರೀ ಎಚ್. ಸಿದ್ಧವೀರಪ್ಪ.—ಅದರ ಜೊತೆಗೆ ಒಮ್ಮೆ ಪಠ್ಯಪುಸ್ತಕವನ್ನು ಇಟ್ಟಮೇಲೆ ಕನಿಷ್ಠ ಪಕ್ಷ 10 ವರ್ಷಗಳಾದರೂ ಬದಲಾಯಿಸಬಾರದೆಂದು ನನ್ನ ಅಭಿಪ್ರಾಯ.

ಶ್ರೀ ಕೆ. ವಿ. ಶಂಕರಗೌಡ.—5 ವರ್ಷಗಳು ಎಂದು ಮಾಡಬಹುದು. ಈ ಪಠ್ಯ ಪುಸ್ತಕಗಳ ವಿಚಾರವಾಗಿ ಮಾತನಾಡುವಾಗ ಮಾನ್ಯ ಶ್ರೀ ಬಂಗಾರಪ್ಪನವರು ಎತ್ತಿದ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ. ಅವರು ಕೆಲವು ಪುಸ್ತಕಗಳನ್ನು ಈ ಸಭೆಯಲ್ಲಿ ಎತ್ತಿ ತೋರಿಸಿದರು. ಅವು ಸರ್ಕಾರದಿಂದ ಅಚ್ಚು ಆಗಿಲ್ಲ. ಅದು ಕೃತಿಚೌರ್ಯಕ್ಕೆ ಸಂಬಂಧಪಟ್ಟ ವಿಷಯ. ಸರ್ಕಾರದಿಂದ ಅಂತಹ ಪುಸ್ತಕಗಳನ್ನು ಪ್ರಿಂಟ್ ಮಾಡಿಲ್ಲ.

ಇನ್ನು ಲೈಬ್ರರಿ ಆಕ್ಟ್ ಜಾರಿಗೆ ಕೊಟ್ಟಿರುವ ಬಗ್ಗೆ ಮಾನ್ಯ ಶ್ರೀ ಸಿದ್ಧವೀರಪ್ಪನವರು ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಸೆಸ್‌ಗಳನ್ನು ವಸೂಲು ಮಾಡುವುದು ಮುನಿಸಿಪಾಲಿಟಿಗಳಿಗೆ ಸಂಬಂಧಪಟ್ಟ ವಿಷಯ. ಕೆಲವು ತಾನುಗಳು ಬಹಳ ಕಷ್ಟವಾಗಿದ್ದುದರಿಂದ ಅವನ್ನು ಅವರು ಮಾಡಲಿಕ್ಕಾಗಲಿಲ್ಲ. ಕಾನೂನು ಇಲಾಖೆಯವರು ಅದೇನು ಎಂಬುದನ್ನು ನೋಡಿ ವಿಚಾರ ಮಾಡುತ್ತಾರೆ. ಈಗ ಪ್ರತಿಯೊಂದು ಜಿಲ್ಲೆಯಲ್ಲಿಯೂ ಲೋಕಲ್ ಲೈಬ್ರರಿ ಅಥಾರಿಟಿ ಎಂಬುದಾಗಿ ರಚನೆ ಮಾಡಿದ್ದಾರೆ. ಅದರಿಂದ ದೇಶದ ಮೂಲೆಮೂಲೆಗಳಲ್ಲಿಯೂ ಗ್ರಂಥ ಭಂಡಾರಗಳನ್ನು ರಚನೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ಫಿಸಿಕಲ್ ಎಜುಕೇಷನ್ ವಿಚಾರದಲ್ಲಿ ಸಾಕಷ್ಟು ಆಸಕ್ತಿಯನ್ನು ಸರ್ಕಾರ ವಹಿಸಿರುವುದಾಗಿದೆ. ಇದಕ್ಕಾಗಿ ಒಂದು ಕಾಲೇಜನ್ನು ಪ್ರಾರಂಭ ಮಾಡಿದೆ. ಎಲ್ಲಾ ಹೈಸ್ಕೂಲ್‌ಗಳಲ್ಲಿಯೂ ಫಿಸಿಕಲ್ ಎಜುಕೇಷನ್ ಬಗ್ಗೆ ಮಕ್ಕಳು ಭಾಗವಹಿಸಬೇಕೆಂಬ ನಿಯಮವನ್ನು ವಿಧಿಸಿದ್ದೇವೆ. ಈಗ ಫಿಸಿಕಲ್ ಎಜುಕೇಷನ್ ಕಾಲೇಜು ಏನಿದೆಯೋ ಅದರಲ್ಲಿ ಡಿಗ್ರಿ ತರಗತಿಗಳನ್ನೂ ಸಹ ಪ್ರಾರಂಭ ಮಾಡುವುದನ್ನೂ ಸರ್ಕಾರ ಯೋಚನೆ ಮಾಡುತ್ತಿದೆ.

ಇನ್ನು ಡಿಪಾರ್ಟ್‌ಮೆಂಟ್ ಆಫ್ ಕೊಲಿಜಿಯೇಟ್ ಎಜುಕೇಷನ್ 1960ನೇ ಇಸವಿಯಲ್ಲಿ ಪ್ರಾರಂಭವಾಯಿತು. 1965ನೇ ಇಸವಿಯಲ್ಲಿ ಎಲ್ಲಾ ಕಾಲೇಜುಗಳಿಗೂ ಅನ್ವಯವಾಗುವಂತೆ ಏಕರೂಪವಾದ ಕಾನೂನನ್ನು ಜಾರಿಗೆ ಕೊಟ್ಟು ಎಲ್ಲಾ ಕಾಲೇಜುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿವೇತನಗಳನ್ನು ಕೊಡುವುದನ್ನು ಏರ್ಪಾಡು ಮಾಡಲಾಗಿದೆ. ಕಾಲೇಜುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳ ಪೈಕಿ ಸೇಕಡ 30ರಷ್ಟು ಭಾಗಕ್ಕೆ ಆ ಸೌಕರ್ಯವನ್ನು ಕೊಟ್ಟಿದೆ. ಸೇಕಡ 50 ಭಾಗಕ್ಕೆ ಅವರ ಆದಾಯ 2,400 ರೂಪಾಯಿಗಳಿಗೆ ಕಡಿಮೆ ಇದ್ದರೆ ಅಂತಹವರು ಟ್ಯೂಷನ್ ಫೀಸ್ ಕೊಡಬೇಕಾಗಿಲ್ಲವೆಂದು ವಿನಾಯಿತಿ ಕೊಟ್ಟಿದೆ. ಅದರ ಜೊತೆಗೆ ಕೇಂದ್ರ ಸರ್ಕಾರದ ಸ್ಕಾಲರ್‌ಷಿಪ್, ರಾಜ್ಯ ಸರ್ಕಾರದ ಸ್ಕಾಲರ್‌ಷಿಪ್ ಕೊಡುವ ಏರ್ಪಾಡು ಮಾಡಿರುವುದರಿಂದ ಅನೇಕ ಜನ ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗಿದೆ. ಆದರೆ ಈ ಕಾಲೇಜುಗಳಿಗೆ ಇತ್ತೀಚೆಗೆ ಬಹು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ನುಗ್ಗುತ್ತಿದ್ದಾರೆ. ಅವನ್ನು ಈಗ ತಪ್ಪಿಸಬೇಕಾದುದು ಬಹಳ ಮುಖ್ಯವಾದಂಥ ಕೆಲಸ. ಇದು ಅಷ್ಟು ಸುಲಭವಾಗಿ ಆಗುತ್ತದೆಂದು ನನಗನ್ನಿಸುವುದಿಲ್ಲ. ಮೂಲಭೂತವಾಗಿ ನಾವು ಅನುಸರಿಸುತ್ತಾ ಇರತಕ್ಕ ಪದ್ಧತಿಯಲ್ಲಿ ದೋಷವಿದೆ. ವಿದ್ಯಾರ್ಥಿಗಳ ಪ್ರವೃತ್ತಿ, ಅರ್ಹತೆ, ಮತ್ತು ಅವಶ್ಯಕತೆ, ಮ್ಯಾನ್‌ಪವರ್ ರಿಕ್ವೈರ್‌ಮೆಂಟ್ಸ್—ಇವುಗಳ ಆಧಾರದಮೇಲೆ ವಿವಿಧ ಬಾಬುಗಳಿಗೆ ನಾವು ವಿದ್ಯಾರ್ಥಿಗಳನ್ನು ಚುನಾಯಿಸುವ ಪದ್ಧತಿಯನ್ನು ಇನ್ನೂ ಜಾರಿಗೆ ತಂದಿಲ್ಲ. ಇದನ್ನು ಜಾರಿಗೆ

ತರುವುದಕ್ಕೂ ಕೂಡ ಮುಂದೆ ಅನೇಕ ಮಾನ್ಯ ಸದಸ್ಯರ ವಿರೋಧ ಬರುತ್ತದೆಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಇದನ್ನು ಜಾರಿಗೆ ಕೊಟ್ಟಾಗ್ಗೆ ಸಮಾಜದಲ್ಲಿ ಹಿಂದುಳಿದಂಥ ಪಂಗಡಗಳಿಗೆ ತುಂಬಾ ಅನ್ಯಾಯವಾಗುತ್ತದೆಂಬ ಕೂಗು ಕೇಳಿ ಬರುತ್ತದೆ. ಹೀಗೆ ಅನೇಕ ತೊಂದರೆಗಳಿವೆ. ಈ ಒಂದು ಪ್ರವೃತ್ತಿ, ಅರ್ಹತೆ, ಆವಶ್ಯಕತೆ ಆಧಾರದಮೇಲೆ ವಿದ್ಯಾರ್ಥಿಗಳನ್ನು ಚುನಾಯಿಸ ಬೇಕಾಗುತ್ತದೆ. ಇದರಿಂದ ಸರ್ಕಾರದ ಕೆಲಸಕ್ಕಾಗಿ ಬಿ.ಎ., ಬಿ.ಎಸ್‌ಸಿ. ಪಾಸ್‌ಮಾಡಿರಬೇಕೆಂದು ಅನೇಕರು ಆಸೆ ಪಡುತ್ತಾರೆ. ಇಂಜಿನಿಯರುಗಳು ಆಗಬೇಕೆಂದು ಆಶೆಪಡುತ್ತಾರೆ ಮತ್ತು ವೈದ್ಯರು ಆಗಬೇಕೆಂದು ಆಶೆಪಡುತ್ತಾರೆ. ಇದನ್ನು ಸಾಧ್ಯವಾದಷ್ಟುಮಟ್ಟಿಗೆ ತಡೆಗಟ್ಟಬೇಕಾದುದು ಅವಶ್ಯಕ. ಇದನ್ನು ತಡೆಗಟ್ಟಬೇಕಾದರೆ ಬೇರೆ ವಿಧವಾದ, ಉಪಯುಕ್ತವಾದ ಕೋರ್ಸುಗಳನ್ನು ಪ್ರಾರಂಭಮಾಡುವುದು ಅವಶ್ಯಕ. ಈ ದೇಶದಲ್ಲಿ ಸರ್ಕಾರ ಈಗ ಅದನ್ನೇ ಯೋಚನೆಮಾಡುತ್ತಿದೆ. ಆ ರೀತಿಯಾಗಿ ಯೋಚನೆ ಮಾಡಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸಾದಮೇಲೆ ಸೆಕ್ರೆಟೇರಿಯಲ್ ಪ್ರ್ಯಾಕ್ಟೀಸ್, ಅಟೊಮೊಬೈಲ್ಸ್, ಎಲೆಕ್ಟ್ರಿಫಿಕೇಷನ್, ಅಗ್ರಿಕಲ್‌ಚರ್, ಇಂಜನಿಯರಿಂಗ್—ಅಂತಹ ವಿವಿಧವಾದ ಕೋರ್ಸುಗಳಿಗೆ ಪ್ರತ್ಯೇಕವಾಗಿ ವಿದ್ಯಾರ್ಥಿಗಳನ್ನು ಕಳುಹಿಸಿ, ಕಾಲೇಜುಗಳಲ್ಲಿರತಕ್ಕ ನೂಕು ನುಗ್ಗಲುಗಳನ್ನು ತಪ್ಪಿಸಬೇಕೆಂಬ ಆಶೆ ಸರ್ಕಾರಕ್ಕೆ ಮೂಡಿದೆ. ಅದನ್ನು ಅತಿ ಶೀಘ್ರವಾಗಿ ಜಾರಿಗೆ ತರುತ್ತಿದ್ದೇವೆ. ಆದ್ದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಒಂದು ಕಮರ್ಷಿಯಲ್ ಪ್ರ್ಯಾಕ್ಟೀಸ್ ಎಂದು ಪ್ರಾರಂಭಮಾಡುವುದಕ್ಕೆ ಸೆಕ್ರೆಟೇರಿಯಲ್ ಪ್ರಾಕ್ಟೀಸ್ ಮತ್ತು ಇತರ ಕೋರ್ಸುಗಳನ್ನು ಈಗ ಬೆಂಗಳೂರಿನಲ್ಲಿ ಪ್ರಾರಂಭಮಾಡಬೇಕೆಂದು ಆಶೆ ಇಟ್ಟುಕೊಂಡಿದ್ದಾರೆ.

ಇನ್ನು ಈ ದೇಶದಲ್ಲಿರತಕ್ಕ ವಿಶ್ವವಿದ್ಯಾನಿಲಯಗಳು ಬಹಳ ಚೆನ್ನಾಗಿ ಬೆಳೆದಿವೆ. ಅನೇಕ ಹೊಸ ಹೊಸ ಫ್ಯಾಕಲ್ಟಿಗಳನ್ನು ಪ್ರಾರಂಭಮಾಡಿದ್ದೇವೆ. ಕಾಲೇಜಿನ ಅಧ್ಯಾಪಕರಿಗೆ 4ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಯು.ಜಿ.ಸಿ. ಸಂಬಳವನ್ನು ಕೊಡುವುದಕ್ಕೆ ಈಗಾಗಲೇ ಸರ್ಕಾರ ನಿರ್ಧಾರ ಮಾಡಿದೆ. ಈ ವಿಚಾರದಲ್ಲಿ ಅವರಿಗೂ ಮತ್ತು ಸರ್ಕಾರಕ್ಕೂ ಕೆಲವು ವಿಷಯಗಳಲ್ಲಿ ಭೇದಭಾವ ಇತ್ತು. ಅದನ್ನು ಮನವರಿಕೆ ಮಾಡಿದಮೇಲೆ ನಮ್ಮ ಸೂಚನೆಗೆ ಅವರು ಈಗ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಖಾಸಗಿ ಕಾಲೇಜಿನವರಿಗೆ ಮತ್ತು ಸರ್ಕಾರಿ ಕಾಲೇಜಿನವರಿಗೆ 1966 ನೇ ಇಸವಿಯಿಂದ ಯು.ಜಿ.ಸಿ. 4ನೇ ಪಂಚವಾರ್ಷಿಕ ಯೋಜನೆಯ ಸಂಬಳಗಳನ್ನು ಕೊಡುವುದಕ್ಕೆ ತೀರ್ಮಾನ ಮಾಡಿದೆ. ಅದರಂತೆ ಅವರಿಗೆ ಕೊಡಲಾಗುತ್ತದೆ.

ಇನ್ನು ತಾಂತ್ರಿಕ ಶಿಕ್ಷಣದ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಗೊತ್ತುಗುರಿ ಇಲ್ಲದೆ ನಡೆಯುತ್ತಿದೆ. ಇದರಲ್ಲಿ ಶಿಕ್ಷಣವನ್ನು ಪಡೆದಂಥ ವಿದ್ಯಾರ್ಥಿಗಳು ಅನೇಕ ಜನರು ನಿರುದ್ಯೋಗಿಗಳಾಗಿದ್ದಾರೆನ್ನುವ ವಾದವನ್ನು ಅನೇಕ ಜನ ಮಾನ್ಯ ಸದಸ್ಯರು ಮುಂದೂಡಿ ತಾಂತ್ರಿಕ ಶಿಕ್ಷಣಶಾಲೆಗಳನ್ನು ಮುಚ್ಚಿಬಿಡಬೇಕು ಎನ್ನುವವರೆಗೂ ಅವರು ಹೋಗಿದ್ದಾರೆ. ಈ ಸಂದರ್ಭದಲ್ಲಿ ಈ ರೀತಿ ಯೋಚನೆ ಮಾಡತಕ್ಕದ್ದು ಸರಿಯಲ್ಲ. ನಮ್ಮ ದೇಶ ತೀವ್ರಗತಿಯಲ್ಲಿ ಕೈಗಾರಿಕಾ ಪ್ರಗತಿಯನ್ನು ಸಾಧಿಸುತ್ತಾ ಇದೆ. ಇಂತಹ ಸಂದರ್ಭದಲ್ಲಿ ತಾಂತ್ರಿಕ ಶಿಕ್ಷಣವನ್ನು ಪಡೆದಂಥ ಜನರ ಅವಶ್ಯಕತೆ ನಮಗೆ ಬಹಳ ಹೆಚ್ಚಾಗಿದೆ. ಈಗ ಬಂದಿರತಕ್ಕ ನಿರುದ್ಯೋಗವೇನಿದೆ ಇದು ತಾತ್ಕಾಲಿಕವಾದ ವ್ಯವಸ್ಥೆ. ಇದು ಹೀಗೆಯೇ ಮುಂದುವರಿಯುತ್ತದೆ ಎಂಬುದಾಗಿ ಹೇಳಿ ನಾವು ಭಾವಿಸುವುದು ತಪ್ಪಾಗುತ್ತದೆ. ಅದ್ದರಿಂದ ಇವನ್ನು ಮುಚ್ಚುವುದಕ್ಕೆ ಬದಲಾಗಿ ಬೇರೆ ಯಾವ್ಯಾವ ಕೋರ್ಸುಗಳನ್ನು ಪ್ರಾರಂಭಮಾಡಬಹುದು ಎಂಬುದನ್ನು ನಾವು ಈಗ ಯೋಚನೆಮಾಡ ಬೇಕಾಗಿದೆ. ಅದಕ್ಕಾಗಿ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಅವರು ಇದ್ದಾರೆ. ನಾವು ಅವರ ಒಂದು ನೇತೃತ್ವದಲ್ಲಿ ಒಂದು ಸಣ್ಣ ಕಮಿಟಿಯನ್ನು ಮಾಡಿ ಆ ವಿಚಾರದಲ್ಲಿ ಸೂಕ್ತ ಸಲಹೆ ಗಳನ್ನು ಕೊಡಬೇಕೆಂದು ಹೇಳಿದ್ದೇವೆ. ಯಾವ್ಯಾವ ಹೊಸ ಕೋರ್ಸುಗಳಿಂದ ವಿದ್ಯಾರ್ಥಿಗಳನ್ನು ಸ್ವಾವಲಂಬಿಗಳಾಗಿ ಮಾಡಬಹುದು, ಯಾವ್ಯಾವ ಕೋರ್ಸುಗಳನ್ನು ಅದಕ್ಕಾಗಿ ಹೊಸದಾಗಿ ಪ್ರಾರಂಭಮಾಡಬಹುದು ಎಂಬ ಬಗ್ಗೆ ಅವರು ಶಿಫಾರಸುಗಳನ್ನು ಮಾಡಬೇಕೆಂದು ಕೇಳಿದ್ದೇವೆ. ಹಾಗೆಯೇ ಅವರೂ ಕೂಡ ಶೀಘ್ರವಾಗಿ ಅದರ ಬಗ್ಗೆ ಶಿಫಾರಸ್ಸುಗಳನ್ನು ಮಾಡುತ್ತಾರೆ. ಕೆಲವು ಹೊಸ ಕೋರ್ಸುಗಳನ್ನು ಪ್ರಾರಂಭಮಾಡಿ ತಾಂತ್ರಿಕ ಶಾಲೆಗಳನ್ನು ಹಾಗೆಯೇ ಇಟ್ಟುಕೊಳ್ಳ ಬೇಕೆಂಬುದು ನನ್ನ ಆಶೆ. ಏಕೆಂದರೆ ಎಸ್.ಎಸ್.ಎಲ್.ಸಿ. ಪಾಸ್ ಮಾಡಬೇಕಾದರೆ 15 ವರ್ಷ ಗಳಾಗಿರುತ್ತದೆ. ಆಮೇಲೆ ಕೆಲಸಕ್ಕೆ ಹೋಗಬೇಕಾದರೆ 18 ವರ್ಷಗಳಾಗಿರಬೇಕು. ಮಧ್ಯೆ ಈ ಮೂರು ವರ್ಷಗಳ ಕಾಲದಲ್ಲಿ ಅವರಿಗೆ ಏನಾದರೂ ಸ್ವಾವಲಂಬಿಯಾಗಿ ಜೀವಿಸುವುದಕ್ಕೆ ಒಂದು ಮಾರ್ಗವನ್ನು ತೋರಿಸಬೇಕು. ಇಲ್ಲದಿದ್ದರೆ ಅವರೆಲ್ಲರೂ ಕಾಲೇಜಿಗೆ ಹೋಗಲು ಇಚ್ಛೆಪಡುತ್ತಾರೆ. ಆಗ ಕಾಲೇಜಿನಲ್ಲಿ ನೂಕು ನುಗ್ಗಲು ಜಾಸ್ತಿಯಾಗುತ್ತದೆ. ಆದ್ದರಿಂದ ಈಗ ತಾಂತ್ರಿಕ ಶಿಕ್ಷಣಶಾಲೆ ಗಳಲ್ಲಿ ಕೊಡುವ ಕೋರ್ಸುಗಳನ್ನು ಬದಲಾವಣೆಮಾಡಿ ಅವರನ್ನು ತಾಂತ್ರಿಕ ಶಿಕ್ಷಣಶಾಲೆಗಳಿಗೆ

(ಶ್ರೀ ಕೆ. ವಿ. ಶಂಕರಗೌಡ)

ಕಳುಹಿಸುವುದು ಸೂಕ್ತವೆಂದು ಸರ್ಕಾರದವರು ಪರಿಶೀಲನೆಮಾಡುತ್ತಿದ್ದಾರೆ. ಈಗ ಅಲ್ಲಿರತಕ್ಕ ಕೋರ್ಸುಗಳನ್ನು ಬದಲಾವಣೆ ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಆ ರೀತಿಯಲ್ಲಿ ಬದಲಾವಣೆ ಮಾಡುವುದಕ್ಕೋಸ್ಕರ ಇನ್‌ಸ್ಟಿಟ್ಯೂಟ್ ಆಫ್ ಫುಡ್‌ಕ್ರಾಫ್ಟ್ಸ್, ಕೇಟರಿಂಗ್ ಟೆಕ್ನಾಲಜಿಗಳನ್ನು ಪ್ರಾರಂಭ ಮಾಡಿದ್ದೇವೆ. ಸೆಕ್ರೆಟೇರಿಯಲ್ ಪ್ರಾಕ್ಟೀಸ್ ಎಂಬುದಾಗಿ ಬೆಂಗಳೂರಿನಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ಅಗ್ರಿಕಲ್‌ಚರಲ್ ಮೆಕಾನಿಕ್ಸ್ ಮುಂತಾದ ಬಗ್ಗೆ ಕೋರ್ಸುಗಳನ್ನು ಪ್ರಾರಂಭಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ಕೈಗಾರಿಕೆಗಳನ್ನು ನೋಡಿಕೊಂಡು ಎಲ್ಲಿ ಏನು ಅವಶ್ಯಕತೆ ಇದೆ ಅದನ್ನು ಮಾಡಬೇಕು. ಎಲ್ಲರೂ ಎಲೆಕ್ಟ್ರಿಕಲ್, ಮೆಕಾನಿಕ್‌ಕಲ್ ಇಂಜನೀಯರುಗಳು ಆಗುತ್ತಿದ್ದಾರೆ.

ಶ್ರೀ ಕೆ. ವಿ. ಶಂಕರಗೌಡ.—ಅದನ್ನು ಬದಲಾವಣೆ ಮಾಡಿ ಬೇರೆ ಕೋರ್ಸ್‌ಗಳಿಗೆ ಕಳುಹಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ತಜ್ಞರ ಕಮಿಟಿಯ ಅಭಿಪ್ರಾಯ ತೆಗೆದುಕೊಳ್ಳುವುದು ಸೂಕ್ತ.

ಶ್ರೀ ಕೆ. ವಿ. ಶಂಕರಗೌಡ.—ಮಾನ್ಯ ಸದಸ್ಯರು ಕನ್ನಡವನ್ನು ಆಡಳಿತ ಭಾಷೆ ಮಾಡುವುದರಲ್ಲಿ ಸಾಕಾದಷ್ಟು ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ ಎಂದು ಆರೋಪಣೆ ಮಾಡಿದರು. ಅದರಲ್ಲಿ ಸರ್ಕಾರ ಬಹಳ ತೀವ್ರ ಆಸಕ್ತಿಯನ್ನು ವಹಿಸಿದೆ ಎಂದು ಬಿಡುಗಡೆ ಮನಸ್ಸಿನಿಂದ ಹೇಳಬೇಕಾಗಿದೆ. ಇದುವರೆಗೆ ನಡೆದ ಪ್ರಯತ್ನ ಅತೃಪ್ತಿಕರವಾಗಿದೆ. ಇಷ್ಟರೊಳಗೆ ಆಡಳಿತ ಭಾಷೆ ಪ್ರಾಂತೀಯ ಭಾಷೆಯಲ್ಲಿ ಬರಬೇಕಾಗಿತ್ತು. ಈ ರೀತಿ ಆದುದ್ದು ದೊಡ್ಡ ದೋಷ. ಆದಷ್ಟು ಜಾಗ್ರತೆ ಕನ್ನಡವನ್ನು ಆಡಳಿತ ಭಾಷೆ ಮಾಡುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮುಖ್ಯ ಮಂತ್ರಿಗಳು ಫೈಲ್ಸ್‌ಗಳ ಮೇಲೆ ಕನ್ನಡದಲ್ಲಿ ಟಿಪ್ಪಣಿಗಳನ್ನು ಬರೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಶ್ರೀ ರಾಮಕೃಷ್ಣ ಹೆಗ್ಗಡೆಯವರೂ ಇದೇರೀತಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಕನ್ನಡವನ್ನು ಮಧ್ಯಮ ಭಾಷೆಯನ್ನಾಗಿ ಮಾಡುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಈ ದೃಷ್ಟಿ ಇಟ್ಟುಕೊಂಡು ಕನ್ನಡ ಟೈಪರೈಟಿಂಗ್ ಎಕ್ಸಾಮಿನೇಷನ್ 1967 ನೇ ಇಸವಿ ನವಂಬರ್‌ನಿಂದ ನಡೆಸಿದ್ದೇವೆ. ಕನ್ನಡ ಟೈಪರೈಟಿಂಗ್‌ನಲ್ಲಿ ಪರಿಣತರಾದವರಿಗೆ ಅಲೋಯನ್ಸ್ ಕೊಡುವ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಆದಷ್ಟು ಜಾಗ್ರತೆ ಕನ್ನಡ ಆಡಳಿತ ಭಾಷೆ ಆಗದ ಹೊರತು ಬೋಧನ ಮಾಧ್ಯಮ ಕನ್ನಡ ಆಗುವುದು ಕಷ್ಟ. ಈ ದೃಷ್ಟಿಯನ್ನು ಇಟ್ಟುಕೊಂಡು ಆದಷ್ಟು ಜಾಗ್ರತೆ ಕನ್ನಡ ಆಡಳಿತ ಭಾಷೆ ಮಾಡುವುದು ಅಗತ್ಯ. ಎನ್‌ಸೈಕ್ಲೋಪೀಡಿಯಾ ಕೆಲಸವನ್ನು ಒಂದು ಕಮಿಟಿ ನೆರವೇರಿಸುತ್ತಿತ್ತು. ಆ ಕೆಲಸ ತೃಪ್ತಿಕರವಾಗಿ ನಡೆದಿರಲಿಲ್ಲ. ಈ ಕೆಲಸವನ್ನು ಪೂರೈಸುವುದಕ್ಕಾಗಿ ಮೈಸೂರು ಯೂನಿವರ್ಸಿಟಿಗೆ ಕೊಡಲಾಗಿದೆ. ಇದನ್ನು ಮೈಸೂರು ಯೂನಿವರ್ಸಿಟಿಯವರು ವಹಿಸಿಕೊಂಡಿರುವುದಕ್ಕೆ ತುಂಬಾ ಸಂತೋಷವಾಗುತ್ತದೆ. 5 ವರ್ಷದೊಳಗೆ ಈ ಕೆಲಸವನ್ನು ಮುಗಿಸುವ ಆಶ್ವಾಸನೆ ಕೊಟ್ಟಿದ್ದಾರೆ. 5 ವರ್ಷದೊಳಗೆ ಕನ್ನಡ ವಿಶ್ವಕೋಶ ಹೊರಗಡೆ ಬರುತ್ತದೆ ಎನ್ನುವ ಆಸೆಯನ್ನು ಇಟ್ಟುಕೊಳ್ಳಬಹುದು.

ಇನ್ನು ಅಡಲ್ಟ್ ಎಜುಕೇಶನ್ ವಿಷಯವಾಗಿ ಎರಡು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಅಡಲ್ಟ್ ಎಜುಕೇಷನ್ ಕೌನ್ಸಿಲ್ ಏನು ಇದೆ ಅದು ಹಿಂದೆ ನಮ್ಮ ರಾಜ್ಯದಲ್ಲಿ ಬಹಳ ಕೆಲಸ ಮಾಡಿದೆ. ಮತ್ತು ಅಲ್ಲಿ ಕೆಲಸ ಮಾಡಿದಂಥ ಅನೇಕ ಜನ ಹೊರಗೆ ಹೋಗಿ ಹೆಸರು ಪಡೆದಿದ್ದಾರೆ. ಉತ್ತಮ ಕೆಲಸವನ್ನು ವಯಸ್ಕರ ಶಿಕ್ಷಣಕ್ಕಾಗಿ ಮಾಡಿದ್ದಾರೆ. ಅನೇಕ ವಿದ್ಯಾಪೀಠಗಳನ್ನು ಸ್ಥಾಪನೆ ಮಾಡಿದ್ದಾರೆ. ಅದಕ್ಕೆ ಒಂದು ಕಾನೂನು ಸ್ವರೂಪ ಕೊಡಬೇಕು ಎನ್ನುವ ಆಸೆ ಇಟ್ಟುಕೊಂಡು ಇದನ್ನು ಒಂದು ಸ್ಟ್ಯಾಚುಟರಿ ಬಾಡಿ ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ಅದಕ್ಕಾಗಿ ಬಿಲ್ ತಯಾರಾಗುತ್ತಾ ಇದೆ. ಆದಷ್ಟು ಜಾಗ್ರತೆ ಆ ಸ್ಟ್ಯಾಚುಟರಿ ಬಾಡಿಯ ಕಾರ್ಯವ್ಯಾಪ್ತಿ ಇಡೀ ರಾಜ್ಯಕ್ಕೆ ಅನ್ವಯವಾಗುವುದಿದ್ದು ಅದರಿಂದ ಹೆಚ್ಚಿನ ಕೆಲಸವನ್ನು ನಿರೀಕ್ಷಿಸಬಹುದಾಗಿದೆ. ಇಷ್ಟು ವಿಷಯ ಹೇಳಿ ಮಾನ್ಯ ಸದಸ್ಯರು ಹೇಳಿದಂಥ ಕೆಲವು ವಿಷಯಗಳಿಗೆ ನನ್ನ ಉತ್ತರವನ್ನು ಸಂಕ್ಷೇಪವಾಗಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮೊಟ್ಟ ಮೊದಲನೆಯದಾಗಿ ಈ ಸಭೆಯಲ್ಲಿ ಚರ್ಚೆಗೆ ಬಂದಿರತಕ್ಕಂಥಾದ್ದು ತ್ರಿಭಾಷಾ ಸೂತ್ರ. ವಿರೋಧ ಪಕ್ಷದ ನಾಯಕರಾದ ಮಾನ್ಯ ಶಿವಪ್ಪನವರು ಕಳೆದ ಆಯವ್ಯಯದ ಅಧಿವೇಶನದಲ್ಲಿ ಮಾತನಾಡುತ್ತಾ ತ್ರಿಭಾಷಾ ಸೂತ್ರ ಕಟ್ಟುನಿಟ್ಟಾಗಿ ಜಾರಿಗೆ ಕೊಡಬೇಕು. ಎಂದು ಅಗ್ರಹ ಪೂರ್ವಕವಾಗಿ

ಒತ್ತಾಯ ಮಾಡಿದರು. ಈ ವರ್ಷ ಮಾತನಾಡುವಾಗ ಅಷ್ಟು ಅಗ್ರಹ ತೋರಿಸಲಿಲ್ಲ. ಆದರೆ ಅವರ ಭಾಷಣವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದೇನೆ. ಅವರು ತ್ರಿಭಾಷಾ ಸೂತ್ರಕ್ಕೆ ವ್ಯತಿರಿಕ್ತವಾಗಿದ್ದಾರೆಂದು ಅರ್ಥವಾಗಲಿಲ್ಲ, ಪರವಾಗಿದ್ದಾರೆ. ಆದರೆ ಒಂದು ಬದಲಾವಣೆ ಮಾಡಿಕೊಂಡಿದ್ದಾರೆ. ಕನ್ನಡ ಪ್ರಾದೇಶಿಕ ಭಾಷೆ ಕಡ್ಡಾಯವಾಗಲಿ, ಉಳಿದ ಇಂಗ್ಲೀಷ್ ಅಥವಾ ಹಿಂದಿಯನ್ನು ಇಚ್ಛೆಪಟ್ಟರೆ ಕಲಿಯಲಿ ಅಥವಾ ಬಿಡಲಿ ಎಂದು ಹೇಳಿದ್ದಾರೆ. ಈ ವಾದ ಅಷ್ಟು ಸರಿಹೋಗಲಾರದು ಎಂದು ನನಗೆ ಅನಿಸುತ್ತದೆ. ಈ ತ್ರಿಭಾಷಾ ಸೂತ್ರವನ್ನು ಕೈಬಿಟ್ಟರೆ ರಾಷ್ಟ್ರಕ್ಕೆ ಭವಿಷ್ಯವೂ ಇಲ್ಲ ಎಂದು ತಿಳಿದುಕೊಂಡಿರುವವರಲ್ಲಿ ನಾನೂ ಒಬ್ಬ. ರಾಷ್ಟ್ರಕ್ಕೆ ಅವಶ್ಯಕವಾಗಿ ಬೇಕಾಗಿರುವುದು ತ್ರಿಭಾಷಾ ಸೂತ್ರ.

ಶ್ರೀ ಹೆಚ್. ಸಿದ್ಧವೀರಪ್ಪ.—ರಾಷ್ಟ್ರಕ್ಕೆ ಬೇಕಾಗಿರುವುದು ಭಾಷೆಯ ವಿಚಾರ ಅನೇಕ ವರ್ಷಗಳ ಕಾಲ ಮಾತನಾಡದೇ ಇರತಕ್ಕದ್ದು.

ಶ್ರೀ ಕೆ. ವಿ. ಶಂಕರಗೌಡ.—ಭಾಷೆ, ಜಾತಿ, ಪ್ರಾಂತ್ಯ ಈ ಮೂರೂ ಸೂಕ್ಷ್ಮವಾದ ವಿಷಯಗಳು. ಈ ಮೂರೂ ಕೂಡ ನಮ್ಮ ಭಾವನೆಗಳನ್ನು ಉದ್ರೇಕಗೊಳಿಸತಕ್ಕ ವಿಷಯಗಳು. ಆದುದರಿಂದ ಅದರ ವಿಚಾರವಾಗಿ ಮಾತನಾಡುವಾಗ ಬಹಳ ದೀರ್ಘವಾಗಿ ಯೋಚನೆ ಮಾಡಿ ಮಾತನಾಡಬೇಕು. ವಿಚಾರಪರರಾಗಿರಬೇಕು, ವಿಕಾರವಶರಾಗಿರಬಾರದು. ದೀರ್ಘವಾಗಿ ಆಲೋಚನೆ ಮಾಡಿದರೆ ನಮ್ಮ ರಾಷ್ಟ್ರಕ್ಕೆ ಬೇಕಾಗಿರುವುದು ತ್ರಿಭಾಷಾ ಸೂತ್ರ. ಯಾವ ರಾಜ್ಯವೇ ಆಗಲಿ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಇದನ್ನು ಅನೇಕ ರಾಜ್ಯಗಳವರು ಒಪ್ಪಿಕೊಂಡಿದ್ದಾರೆ. ನಮ್ಮ ರಾಜ್ಯವು 10—15 ವರ್ಷದಿಂದಲೂ ಈ ತ್ರಿಭಾಷಾ ಸೂತ್ರವನ್ನು ಜಾರಿಗೆ ತಂದಿದೆ. ಅದು ನಡೆದುಕೊಂಡು ಹೋಗುತ್ತಿದೆ. ನಮ್ಮ ಮಕ್ಕಳು ಹಿಂದಿ, ಇಂಗ್ಲೀಷ್, ಕನ್ನಡ ಕಲಿಯುತ್ತಿದ್ದಾರೆ. ಈ ಗೊಂದಲ ಉಂಟಾಗಿರುವುದಕ್ಕೆ ಕಾರಣಕರ್ತರು ಹಿಂದೀ ಮಾತನಾಡತಕ್ಕಂಥ ಪ್ರದೇಶದ ಜನಗಳು ಎಂದು ವಿಷಾದದಿಂದ ಹೇಳಬೇಕಾಗಿದೆ. ಅವರ ಸ್ವಾರ್ಥದಿಂದ ಅವರ ಸಂಕುಚಿತ ಬುದ್ಧಿಯಿಂದ ಈ ಒಂದು ಪರಿಸ್ಥಿತಿ ಉದ್ಭವವಾಗಿದೆ. ಮೊನ್ನೆ ಲೋಕಸಭೆಯಲ್ಲೂ ಈ ಭಾಷೆಗೆ ಸಂಬಂಧಪಟ್ಟ ಹಾಗೆ ಒಂದು ಆಕ್ಟನ್ನು ಸ್ವೀಕರಿಸಿದರು. ಅದಕ್ಕೆ ಅನುಸಂಗಿಕವಾಗಿ ಒಂದು ಠರಾವನ್ನು ಸ್ವೀಕಾರ ಮಾಡಿದ್ದಾರೆ. ಈ ಒಂದು ಆಕ್ಟ್‌ನ ಜೊತೆಯಲ್ಲಿ ಠರಾವನ್ನು ಸ್ವೀಕಾರ ಮಾಡತಕ್ಕ ಪದ್ಧತಿ ಪ್ರಜಾಪ್ರಭುತ್ವದಲ್ಲಿ ತೀರಾ ಹೊಸದು. ಅದು ಯಾವ ರೀತಿ ನಡೆಯಿತೋ ನನಗೆ ಗೊತ್ತಾಗಲಿಲ್ಲ. ಈ ಠರಾವಿನಲ್ಲಿ ಕೇಂದ್ರದ ಹುದ್ದೆಗಳಿಗೆ ಸೇರತಕ್ಕವರಿಗೆ ಹಿಂದೀ ಅಥವಾ ಇಂಗ್ಲೀಷ್ ಜ್ಞಾನ ಇರಬೇಕು ಎಂದು ಇದೆ. ಅದರ ವಿಚಾರವಾಗಿ ಒಂದು ಗೊಂದಲ ಉಂಟಾಯಿತು. ಹಿಂದೀ ಮಾತನಾಡತಕ್ಕ ಜನ ಕೇವಲ ಹಿಂದಿ ಕಲತರೆ ಸಾಕು, ಬೇರೆ ಪ್ರದೇಶದ ಜನ ಹಿಂದಿ ಕಲಿಯಬೇಕು, ಇಂಗ್ಲೀಷ್ ಕಲಿಯಬೇಕು, ಜೊತೆಗೆ ಪ್ರಾದೇಶಿಕ ಭಾಷೆ ಕಲಿಯಬೇಕು. ನಾವು ಮೂರು ಭಾಷೆಯನ್ನು ಕಲಿಯಬೇಕು ಎಂದು ಇದೆ. ಇದರಿಂದ ಹೊರೆ ಅಸಮಾನವಾಗುತ್ತದೆ. ಇದು ಸರಿಯಲ್ಲ. ಇದನ್ನು ತಿಳಿದು ಯೋಚನೆಮಾಡಿ ವಿದ್ಯಾರ್ಥಿಗಳು ಆಂಧೋಳನ ನಡೆಸಿದರು. ಮತ್ತು ಗೊಂದಲವನ್ನು ಉಂಟು ಮಾಡಿದರು. ಈ ರೀತಿ ಗೊಂದಲ ಉಂಟಾಗುವುದಕ್ಕೆ ಲೋಕಸಭೆಯೇ ಕಾರಣ. ಲೋಕಸಭೆ ಈ ರೀತಿ ಅವರ ಮೇಲೆ ಒತ್ತಾಯದ ಹೊರೆಯನ್ನು ಹೊರಿಸಿದರು. ಹಿಂದಿ ಮಾತನಾಡತಕ್ಕ ಜನಗಳ ಸ್ವಾರ್ಥ ಮತ್ತು ಸಂಕುಚಿತ ಭಾವನೆ ಕೆಲವರ ಅಸಮಾಧಾನಕ್ಕೆ ಕಾರಣವಾಯಿತು ಎಂದು ಹೇಳಬೇಕಾಗಿದೆ. ಕೇಂದ್ರ ಸರ್ಕಾರಕ್ಕೆ ಈ ಸಭೆಯ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪಾರ್ಲಿಮೆಂಟಿನವರು ಏನು ನಿರ್ಣಯ ಮಾಡಿದ್ದಾರೋ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಕೇಂದ್ರದ ಹುದ್ದೆಗಳಿಗೆ ಸೇರುವ ಪ್ರತಿಯೊಬ್ಬರಿಗೂ ಕೂಡ ಮೂರು ಭಾಷೆಯಲ್ಲಿ ಜ್ಞಾನ ಇರಬೇಕು ಎಂದು ವಿಧಾಯಕ ಮಾಡಬೇಕು. ಯಾವನಿಗೇ ಆಗಲಿ ಪ್ರಾದೇಶಿಕ ಭಾಷೆ, ಹಿಂದಿ ಮತ್ತು ಇಂಗ್ಲೀಷ್ ಈ ಮೂರು ಭಾಷೆಗಳ ಜ್ಞಾನ ಇರಬೇಕು.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಈ ವಾದಕ್ಕೆ ಕೇಂದ್ರ ಸರ್ಕಾರದವರು ಒಪ್ಪದೇ ಹೋದರ ಏನು ಮಾಡುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ದೇಶಾಭಿಮಾನ ಇರತಕ್ಕ ಯಾರಾದರೂ ಒಪ್ಪಲೇಬೇಕು. ದೇಶದ ಭವಿಷ್ಯವನ್ನು ಉಜ್ವಲ ಮಾಡಬೇಕಾದರೆ, ಸ್ವಾತಂತ್ರ್ಯ ಉಳಿಯಬೇಕಾದರೆ ಸಂಕುಚಿತ ಭಾವನೆಯನ್ನು ಬದಿಗೊತ್ತಬೇಕಾದುದು ಅತ್ಯಾವಶ್ಯಕ. ಈ ರೀತಿ ಎಲ್ಲರೂ ಮಾಡುತ್ತಾರೆ ಎನ್ನುವ ಆಸೆ ಇಟ್ಟುಕೊಂಡಿದ್ದೇನೆ. ನಮ್ಮ ಕಾನ್‌ಸ್ಟಿಟ್ಯೂಷನ್‌ನಲ್ಲಿ ಹಿಂದಿ ಸಂಪರ್ಕ ಭಾಷೆ ಆಗಿ ಇರಬೇಕು ಎಂದು ವಿಧಾಯಕ ಮಾಡಲಾಗಿದೆ. ಹಿಂದಿಯನ್ನು ಬಿಟ್ಟುಬಿಡಿ ಎಂದು ಹೇಳತಕ್ಕದ್ದು ವಿವೇಕತನದ ಮಾರ್ಗವಲ್ಲ; ವಿವೇಕದಿಂದ ಕೂಡಿದ ಯೋಚನೆ ಅಲ್ಲ. ಹಿಂದೀ ಭಾಷೆಸಾಧ್ಯವಿಲ್ಲ,

(ಶ್ರೀ ಕೆ. ವಿ. ಶಂಕರಗೌಡ)

ಬೇರೆ ಯಾವುದಾದರೂ ಸಂಪರ್ಕ ಭಾಷೆ ಆಗಬೇಕು ಎಂದು ಇಚ್ಛಿಪಡುವುದಾದರೆ ಅದು ಮೂರ್ಖತನದ ಪರಮಾವಧಿ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಇಂಗ್ಲೀಷ್ ಈ ದೇಶದಲ್ಲಿ ಎಂದೆಂದಿಗೂ ಸಂಪರ್ಕ ಭಾಷೆಯಾಗಿರುವುದಕ್ಕೆ ಸಾಧ್ಯ ಇಲ್ಲ. ಅದು ದಾಸ್ಯದ ಕುರುಹು ಆದೀತು. ಸಂಪರ್ಕ ಭಾಷೆ ಆಗಬೇಕಾದರೆ, ನಮ್ಮ ರಾಷ್ಟ್ರದಲ್ಲಿ ಹೆಚ್ಚಿನ ಜನ ಮಾತನಾಡತಕ್ಕ ಭಾಷೆ ಸಂಪರ್ಕ ಭಾಷೆಯಾಗುವುದೇ ಹೊರತು ಬೇರೆ ಭಾಷೆ ಅಲ್ಲ. ಹಿಂದಿಗೆ ಒಂದು ಅನುಕೂಲತೆ ಇದೆ. ಹಿಂದಿಯಲ್ಲಿ 100ಕ್ಕೆ 50 ಪದಗಳು ಸಂಸ್ಕೃತ ಪದಗಳು; ಇತರ ಭಾಷೆಗಳಲ್ಲೂ ಕೂಡ ಸಾಧಾರಣವಾಗಿ ಕಂಡುಬರುವಂಥ ಪದಗಳು, ಹಿಂದಿಯನ್ನು ಸಂಪರ್ಕ ಭಾಷೆಯಾಗಿ ಒಪ್ಪಿಕೊಳ್ಳಲೇಬೇಕು. ಪ್ರಪಂಚದ ವ್ಯವಹಾರವನ್ನು ತಿಳಿದುಕೊಳ್ಳುವುದಕ್ಕಾಗಿ ಇಂಗ್ಲೀಷ್ ಇರಬೇಕಾದ್ದು ಅವಶ್ಯಕ. ನಮ್ಮ ಮಕ್ಕಳ ವ್ಯಕ್ತಿತ್ವ ಪೂರ್ಣವಾಗಿ ವಿಕಾಸ ಆಗಬೇಕಾದರೆ ಅವರ ಶಿಕ್ಷಣ ಅವರ ಮಾತೃಭಾಷೆಯಲ್ಲಿ ಪ್ರಾದೇಶಿಕ ಭಾಷೆಯಲ್ಲಿ ಇರಬೇಕಾದುದು ಅತ್ಯಾವಶ್ಯಕ. ಇದರಿಂದ ಪ್ರಾದೇಶಿಕ ಭಾಷೆ ಇರಬೇಕು. ಈ ರೀತಿ ಮೂರು ಭಾಷೆಗಳು ಕಲಿಯಬೇಕಾದುದು ಅನಿವಾರ್ಯ. ಅದಕ್ಕಾಗಿ ಈ ಮಾನ್ಯ ಸಭೆ, ಸರ್ಕಾರದವರು ಎಲ್ಲರೂ ಕೂಲಂಕಷವಾಗಿ ಯೋಚನೆ ಮಾಡಿ, ದೀರ್ಘವಾಗಿ ಯೋಚನೆ ಮಾಡಿ ಸೂಕ್ತ ಪರಿಹಾರ ಕಂಡುಹಿಡಿಯಬೇಕು ಎಂದು ನಾನು ವಿನಯ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

7-30 P.M.

ಶ್ರೀ ಎಚ್. ಸಿದ್ದವೀರಪ್ಪ.—ನಿಮಗೆ ಭಾಷೆ ವಿಚಾರದಲ್ಲಿ ಎಷ್ಟು ಅಭಿಮಾನವಿದೆ ಎಂಬುದು ನಿಮ್ಮ ವರ್ತನೆಗಳಿಂದಲೇ ಅದು ವ್ಯಕ್ತವಾಗುತ್ತಿದೆ. ಈಗಾಗಲೇ ಅನೇಕ ರಾಜ್ಯ ಸರ್ಕಾರಗಳು ಭಾಷಾ ವಿಚಾರದಲ್ಲಿ ಏನೊಂದು ಧೋರಣೆಯನ್ನು ತಾಳಬೇಕು ಎನ್ನತಕ್ಕ ವಿಚಾರದಲ್ಲಿ ಒಂದು ನಿರ್ಧಾರಕ್ಕೆ ಬರಲು ಅಲ್ಲಿನ ಶಾಸನ ಸಭೆಗಳನ್ನು ಕರೆದು ಅನೇಕ ಕಡೆ ಅವು ತಮ್ಮ ಅಖೈರು ತೀರ್ಮಾನವನ್ನು ತೆಗೆದುಕೊಂಡಿದ್ದರೂ ಇಲ್ಲಿ ನಮ್ಮ ಸರ್ಕಾರ ಇನ್ನೂ ತೂಕಡಿಸುತ್ತಿದೆ. ಆದ್ದರಿಂದ ಇವರಿಗೆ ಭಾಷಾ ವಿಚಾರದಲ್ಲಿ ಎಷ್ಟು ಅಭಿಮಾನವಿದೆ ಎಂಬುದು ಇದರಿಂದ ವ್ಯಕ್ತವಾಗುವುದಿಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಇನ್ನು ನಮ್ಮ ವಿದ್ಯಾಭ್ಯಾಸದಲ್ಲಿ ಸುಧಾರಣೆಗಳನ್ನು ಜಾರಿಗೆ ಕೊಡತಕ್ಕ ವಿಚಾರವಾಗಿ ಕೆಲವರು ಕೆಲವು ಮಾತುಗಳನ್ನಾಡಿದ್ದಾರೆ. ಈ ವಿಚಾರದಲ್ಲಿ ಕೊಠಾರಿ ಕಮಿಷನ್ನಿನವರು ಕೊಟ್ಟಿರತಕ್ಕ ಸುಧಾರಣೆಗಳಲ್ಲಿ ಕೆಲವನ್ನು ನಾವು ಜಾರಿಗೆ ತಂದರೆ ಅದರಿಂದ ನಮ್ಮ ವಿದ್ಯಾಭ್ಯಾಸದಲ್ಲಿ ಬಹುಮಟ್ಟಿಗೆ ಸುಧಾರಣೆಯಾಗಬಹುದೆಂದು ನನಗನಿಸುತ್ತಿದೆ. ಆದುದರಿಂದ ಅವುಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಇಲ್ಲಿ ಜಾರಿಗೆ ತರಬೇಕೆಂಬ ಪ್ರಯತ್ನದಲ್ಲಿ ಇದ್ದೇವೆ ನಾವು. ಈ ವಿಚಾರದಲ್ಲಿ ಯಾರೂ ಸಂಶಯಪಡಬೇಕಾಗಿಲ್ಲ ಇಷ್ಟು ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೆಲವರು ಶಾಲೆಗಳಲ್ಲಿ ಬೆಟರ್‌ಮೆಂಟ್ ಫೀಯನ್ನು ಕಲೆಕ್ಟ್ ಮಾಡುತ್ತಿದ್ದಾರೆ, ಅದರಿಂದ ಅನೇಕ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಅಂಥಾ ಹುಡುಗರಿಗಾಗಿ ಈಗ ಸಹಾಯ ಮಾಡುವುದಕ್ಕಾಗಿ ಸ್ಟೂಡೆಂಟ್ಸ್ ವೆಲ್ ಫೇರ್ ಫಂಡ್ ಎಂಬ ಒಂದು ಫಂಡನ್ನು ಮಾಡಿದೆ. ಯಾರು ಅಂಥ ಒಂದು ಅನಾನುಕೂಲ ಪರಿಸ್ಥಿತಿಯಲ್ಲಿದ್ದಾರೋ ಅವರು ಆ ಫಂಡಿಗೆ ಒಂದು ಅರ್ಜಿಯನ್ನು ಹಾಕಿಕೊಂಡರೆ ಅದರಿಂದ ಅವರಿಗೆ ಸಹಾಯ ಸಿಕ್ಕುತ್ತದೆ. ಇನ್ನು ಮುಂದಕ್ಕೆ ಅವರಿಗೆ ಆ ತೊಂದರೆಯಿರುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಶ್ರೀಮಾನ್ ಸಿದ್ದವೀರಪ್ಪನವರು ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವ ಕೆಲವು ಲೆಕ್ಚರರ್‌ಗಳ ಸರ್ವೀಸನ್ನು ರೆಗ್ಯುಲರೈಜ್ ಮಾಡತಕ್ಕ ವಿಚಾರ ಪ್ರಸ್ತಾಪಮಾಡಿದ್ದಾರೆ. ಆದರೆ ಆಗ ಯಾರನ್ನು ಆ ಕೆಲಸಗಳಿಗೆ ನೇಮಕ ಮಾಡಿಕೊಳ್ಳಲಾಗಿತ್ತೋ ಅವರುಗಳಿಗೆ ಅಗತ್ಯವಾಗಿ ಬೇಕಾಗಿದ್ದ ಕ್ವಾಲಿಫಿಕೇಷನ್ ಇರಲಿಲ್ಲ. ಇನ್ನು ಕೆಲವರಿಗೆ ವಯಸ್ಸಾಗಿತ್ತು. ಈ ಬಗ್ಗೆ ಎಗ್ಸಾಮಿನ್ ಮಾಡಲು ಆ ವ್ಯವಹಾರವನ್ನು ಲಾ ಇಲಾಖೆಗೆ ಕಳುಹಿಸಲಾಗಿತ್ತು. ಅದನ್ನೆಲ್ಲಾ ಅವರು ಪರಿಶೀಲನೆ ಮಾಡಿ ಅವರು ಹಾಗೆ ರೆಗ್ಯುಲರೈಜ್ ಮಾಡುವುದಕ್ಕೆ ಬರುವುದಿಲ್ಲ ಎಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ಯಾವಾಗ ಅವರನ್ನು ಕೆಲಸಕ್ಕೆ ನೇಮಕ ಮಾಡಿಕೊಂಡರೋ ಆಗಲೇ ಆ ವಿಚಾರವನ್ನು ಅವರಿಗೆ ತಿಳಿಸಬೇಕಾಗಿತ್ತು. ಹಿಂದೇನೋ ಹಾಗೆ ನಡೆಯಿತು. ಆದರೆ ಈಗ ತಾವು ಹೊರಡಿಸಿರತಕ್ಕ ಆಜ್ಞೆಯಲ್ಲಿ ಏನು ಹೇಳಿದ್ದೀರಿ ಎಂದರೆ.—

"There is also no need now to go into their age and qualifications at this length of time as it is presumed that the University looked into these points before their appointment."

ನೀವು ಈ ಪ್ರಶ್ನೆಯನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾದ್ದು ಬಹು ಮುಖ್ಯವಾದ ವಿಷಯ.

ಶ್ರೀ ಕೆ. ವಿ. ಶಂಕರಗೌಡ.—ಇದನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕೆಂಬ ವಿಚಾರದಲ್ಲಿ ಸರ್ಕಾರದವರಿಗೂ ಮಾನ್ಯ ಸದಸ್ಯರಿಗೂ ಏನೂ ಅಭಿಪ್ರಾಯಗಳಲ್ಲಿ ವ್ಯತ್ಯಾಸವಿಲ್ಲ. ಆದಾಗ್ಯೂ......

Sri H. SIDDAVEERAPPA.—I request you to direct your Director to withdraw the order issued on 2nd April 1968. ಇಲ್ಲಿಯತನಕ ಅವರ ಸರ್ವೀಸ್ ಬೇಕಾಗಿಲ್ಲ. ಅಲ್ಲಿರತಕ್ಕವರೆಲ್ಲಾ ಅಮ್ಮಾ ಅಮ್ಮ ಎಂದರೆ 30—40 ಜನಗಳಿದ್ದರೆ ಹೆಚ್ಚಾಯಿತು. ಇಂಥ ಶಂಕರಗೌಡರು ವಿದ್ಯಾಮಂತ್ರಿಗಳಾಗಿದ್ದ ಕಾಲದಲ್ಲಿ ನಮಗೆಲ್ಲಾ ಹೀಗಾಯಿತು ಎಂದು ಅವರು ನೊಂದುಕೊಂಡರೆ ಖಂಡಿತವಾಗಿ ನೀವು ರೌರವ ನರಕಕ್ಕೆ ಹೋಗಬೇಕಾದೀತು.

ಶ್ರೀ ಕೆ. ವಿ. ಶಂಕರೇಗೌಡ.—ನಾನು ಲಾ ಇಲಾಖೆಯವರ ಸಲಹೆಯನ್ನು ಧಿಕ್ಕರಿಸಿ ಕೆಲಸ ಮಾಡಿದರೆ ಇದರಲ್ಲಿ ಇವರಿಗೇನೋ........

Sri H. SIDDAVEERAPPA.—If your Law Department is stupid, you must tell them to behave better.

Sri S. R. KANTHI.—I want to solve this question. That is why I am saying, let my friend Sri Shankara Gowda, sit with the Law Secretary and Education Secretary and solve the problem.

ಶ್ರೀ ಕೆ. ವಿ. ಶಂಕರಗೌಡ.—ಒಂದು ವೆಸ್ಟೆಡ್ ಇಂಟ್ರೆಸ್ಟಿದೆ ಎಂದು ಆಗಲೂ ಇಲ್ಲ ಕೆಲವರು ಆ ಬಗ್ಗೆಯೂ ಟೀಕೆ ಮಾಡಬಹುದು.

ಶ್ರೀ ಎಚ್. ಸಿದ್ಧವೀರಪ್ಪ.—ಲಾ ಇಲಾಖೆಯವರು ತಿಳಿಸತಕ್ಕದ್ದು ಅವರ ಒಂದು ಅಭಿಪ್ರಾಯ ಮಾತ್ರ. ಆದರೆ ಆಜ್ಞೆ ಮಾಡತಕ್ಕವರು ನೀವು. You will have to do things which are human and proper in the circumstances of the case.

Sri K. V. SHANKARA GOWDA.—We will examine that question and explore the possibility of withdrawing this order.

ಇನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಮಾನ್ಯ ಶ್ರೀ ನಂಜೇಗೌಡರು ಕೆಲವು ಮಾತುಗಳನ್ನಾಡಿದ್ದಾರೆ. ಆದರೆ ಅವರು ಹೇಳಿರತಕ್ಕದ್ದನ್ನೆಲ್ಲಾ ಪೂರ್ತಿಯಾಗಿ ನಾನು ಸರಿಯಾಗಿದೆ ಎಂದು ಹೇಳಲಾರೆ. ಹಾಗೂ ಒಪ್ಪಲಾರೆ. ನಮ್ಮ ಇಡೀ ದೇಶಕ್ಕೆ ಬಹಳ ಪ್ರಖ್ಯಾತರಾದಂಥ ಒಬ್ಬ ಮೇಧಾವಿಗಳೂ ದಕ್ಷರೂ ಆದ ಉಪಕುಲಪತಿಗಳು ಅಲ್ಲಿಯ ಆಡಳಿತ ಮತ್ತು ಇತರೇ ಕೆಲಸ ಕಾರ್ಯಗಳನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲಿಯಾವ ಒಂದು ಹುದ್ದೆಯನ್ನು ಭರ್ತಿ ಮಾಡಬೇಕಾಗಿದ್ದರೂ ಅಲ್ಲಿ ಬೆಂಗಳೂರು ಯೂನಿವರ್ಸಿಟಿ ಆಕ್ಟ್ ಎಂದು ಒಂದು ಆಕ್ಟಿದೆ. ಅದರ ನಿಯಮಗಳನ್ನು ಅನುಸರಿಸಿ ಅಲ್ಲಿ ಅಪಾಯಿಂಟ್‌ಮೆಂಟುಗಳನ್ನು ಮಾಡಲಾಗುತ್ತದೆ. ಅಲ್ಲಿ ಒಂದು ಅಪಾಯಿಂಟ್‌ಮೆಂಟ್ ಬೋರ್ಡ್ ಎಂತಲೇ ಇದೆ. ಆ ಬೋರ್ಡಿನವರು ಬಹಳ ಎಚ್ಚರಿಕೆಯಿಂದ ಕೆಲಸಗಳನ್ನು ಮಾಡುತ್ತಿದ್ದಾರೆ. ಆ ವಿಚಾರದಲ್ಲಿ ಆಕ್ಷೇಪ ಒಪ್ಪಿಗೆಯನ್ನು ಕೊಡುವುದು ಬಿಡುವುದು ಸಿಂಡಿಕೇಟಿಗೆ ಸೇರಿದ್ದು. ಆದುದರಿಂದ ಅಲ್ಲಿ ನೇಮಕಮಾಡಿರತಕ್ಕದ್ದೆಲ್ಲಾ ಕಾನೂನು ಬದ್ಧವಾಗೇ ಇರುತ್ತದೆ ಎಂದು ನಾನು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ತಮ್ಮ ಛೇಂಬರಿಗೆ ಬಂದು ತಮಗೆ ಮನವರಿಕೆಯಾಗುವಂತೆ ಹೇಳಿದರೆ ಆಗಲಾದರೂ ತಾವು ಒಪ್ಪುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಅವರು ರೂಲ್ಸನ್ನು ಬಿಟ್ಟು ಅಪಾಯಿಂಟ್ ಮಾಡಿದ್ದಾರೆಂಬುದನ್ನು ನೀವು ರುಜುವಾತು ಮಾಡಿಕೊಟ್ಟರೆ, ಧೃಡಪಡಿಸಿದರೆ ನಾನು ಅವರ ಬಗ್ಗೆ ಉಗ್ರಕ್ರಮಗಳನ್ನು ಕೈಗೊಳ್ಳುತ್ತೇನೆ.

ಇನ್ನು ಜನಪದ ಸಾಹಿತ್ಯ ಅಕ್ಯಾಡಮಿ ವಿಚಾರದಲ್ಲಿ ಅನೇಕರು ಮಾತನಾಡಿದ್ದಾರೆ. ಸ್ವಾಮಿ, ಅಧ್ಯಕ್ಷರೇ—ನಮ್ಮಲ್ಲಿ ಶೀಲ ಯಾವುದು? ಅಶ್ಲೀಲ ಯಾವುದು? ಎನ್ನುತಕ್ಕ ಬಗ್ಗೆ ಅದನ್ನು ಇಲ್ಲಿಯವರೆಗೂ ತೀರ್ಮಾನ ಮಾಡುವುಕ್ಕಾಗಿಲ್ಲ. ಕಾರಣ ಇದು ಅಂಥಾ ಒಂದು ಕಠಿಣವಾದ ಪ್ರಶ್ನೆ. ಈ ವಿಚಾರದಲ್ಲಿ ಆ ತಜ್ಞರಲ್ಲಿ ಕೂಡ ಇನ್ನೂ ಭಿನ್ನಾಭಿಪ್ರಾಯಗಳಿದ್ದೇ ಇವೆ. ಹೀಗಾಗಿ ಇದು ಇನ್ನೂ ಹಾಗೇ ಒಂದು ಯಕ್ಷಪ್ರಶ್ನೆಯಾಗೇ ಉಳಿದಿದೆ. ಆದುದರಿಂದ ಇದನ್ನು ತೀರ್ಮಾನ ಮಾಡುವುದು ಬಹಳ ಕಷ್ಟ. ಈ ದಿವಸ ಬೇಲೂರು ಹಳೇಬೀಡುಗಳಲ್ಲಿರುವ ಶಿಲಾ ಪ್ರತಿಮೆಗಳನ್ನು ನೋಡಿದಾಗ ಅವುಗಳನ್ನು ನಾವು ಅಶ್ಲೀಲ ಎಂದು ಹೇಳುವುದಾದರೆ ಅವೇಕೆ ಈ ದಿವಸ ಇಡೀ ಜಗದ್ವಿಖ್ಯಾತ ಶಿಲ್ಪಕಲಾ ಶಾಸ್ತ್ರಗಳು ಎಂದು ಹೆಸರು ಪಡಿದಿವೆ ? ಅವುಗಳನ್ನು ನಾವು ಈ ದಿವಸ ಅಶ್ಲೀಲ ಎಂದು ಅಳಿಸುವುದಕ್ಕೆ ಸಾಧ್ಯವೇ ? ಇದನ್ನು ಯಾರು ತಾನೆ ಒಪ್ಪುತ್ತಾರೆ ? ನಮ್ಮ ಕ.ರಾ.ಕೃ ಅವರು ಬಹಳ ಶ್ರಮವಹಿಸಿ ಅನೇಕ ಹಳ್ಳಿ ಹಳ್ಳಿಗಳನ್ನು ತಿರುಗಿ ಈ ಕ್ಷೇತ್ರದಲ್ಲಿ ಬಹಳ ಉಪಯುಕ್ತವಾದ ಸೇವೆಯನ್ನು ಸಲ್ಲಿಸಿದ್ದಾರೆ. ನಮ್ಮ ನಾಡಿನ ಮಕ್ಕಳು ಕಂಡ ಕಹಿ ಸಿಹಿಗಳನ್ನು ನೇರವಾಗಿ ಹೃದಯದಿಂದ ಹೃದಯಕ್ಕೆ ಒಯ್ಯುತಕ್ಕಂಥ ಒಂದು ಅಪೂರ್ವ ಸಾಹಿತ್ಯ ಇದು. ಇಂಥಾ ಅಪೂರ್ವ ಸಾಹಿತ್ಯವನ್ನು ಕಾಪಾಡಿಕೊಂಡು ಬರಬೇಕಾದ್ದು ನಮ್ಮ ಆದ್ಯ ಕರ್ತವ್ಯ. ಆ ಕ.ರಾ.ಕೃ ಅವರು ಹಳ್ಳಿ ಹಳ್ಳಿಗೂ ಹೋಗಿ ಜನರ ಹತ್ತಿರ ಆವರ ಸಂಪರ್ಕ ಬೆಳೆಸಿ ಈ ಕವನಗಳನ್ನು ಸಂಗ್ರಹಿಸಿದ್ದಾರೆ. ಹೀಗೆ ಬಹಳ ಶ್ರಮವಹಿಸಿ ಆ ಅಕ್ಯಾಡಮಿಯವರು ಒಂದು ಸ್ತುತ್ಯವಾದ ಕೆಲಸವನ್ನು ಮಾಡಿದ್ದಾರೆ. ಆದರೆ ಅವರ ಎರಡು ಪುಸ್ತಕಗಳಲ್ಲಿ ಮಾತ್ರ ಅವರು ಕೊಟ್ಟಿರತಕ್ಕ ಚಿತ್ರಗಳು ಅವು ಶೀಲವೋ—ಅಶ್ಲೀಲವೋ ಆ ವಿಚಾರ ಬೇರೆ ಇರಲಿ. ಆದರೆ ಆ ಚಿತ್ರಗಳನ್ನು ಆ ಪುಸ್ತಕಗಳಲ್ಲಿ ಕೊಡತಕ್ಕ ಅಗತ್ಯವಿರಲಿಲ್ಲ ಎಂಬುದಾಗಿ ಒಂದು ಅಭಿಪ್ರಾಯವನ್ನು ಪಟ್ಟ ಕಾರಣ ಆ ಎರಡು ಪುಸ್ತಕಗಳನ್ನು ತಡೆಹಿಡಿಯಲಾಗಿತ್ತು. ಆ ಬಗ್ಗೆ ಇನ್ನೊಮ್ಮೆ ಸೂಕ್ತ ಪರಿಶೀಲನೆ ಮಾಡಿ ಅವುಗಳನ್ನು ಎಲ್ಲ ಲೈಬ್ರರಿಗಳೂ ಕೊಳ್ಳುವಂತೆ ಏರ್ಪಾಡನ್ನು ಮಾಡಲು ಪ್ರಯತ್ನಿಸಲಾಗುತ್ತದೆ.

ಇನ್ನು ಮಿಲ್ಕ್‌ಪೌಡರ್ ಸಪ್ಲೈ ವಿಚಾರಕ್ಕೆ ಬಂದರೆ ಈ ಬಗ್ಗೆ ನಾನಾಗಲೇ ಸಾಕಷ್ಟು ವಿಚಾರಗಳನ್ನು ತಿಳಿಸಿರುವುದರಿಂದ ಇದರ ಬಗ್ಗೆ ನಾನಿನ್ನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಡೆಮೊರೋರವರು ಆಂಗ್ಲೋ ಇಂಡಿಯನ್ ಸ್ಕೂಲುಗಳ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಆದರೆ ಆ ಸ್ಕೂಲುಗಳು ಆ ಗ್ರ್ಯಾಂಟ್ ಇನ್ ಏಯ್ಡ್ ಕೋಡಿನ ವ್ಯಾಪ್ತಿಗೆ ಒಳಪಟ್ಟಿಲ್ಲ. ಒಳಪಡದಿದ್ದರೆ ಆ ಗ್ರ್ಯಾಂಟ್ ಬರುವುದಿಲ್ಲ. ಅದರ ವಿಚಾರ ಇಷ್ಟೇ. ನಾನು ಇಲ್ಲಿಯವರೆಗೂ ಮಾನ್ಯ ಸದಸ್ಯರುಗಳು ಏನೇನು ಪ್ರಶ್ನೆಗಳನ್ನೆತ್ತಿದ್ದರೋ ಅವುಗಳಿಗೆಲ್ಲಾ ಸಾಕಷ್ಟು ಸವಿಸ್ತಾರವಾಗಿ ಉತ್ತರಗಳನ್ನು ನೀಡಿದ್ದೇನೆ. ಎಲ್ಲಾ ಮಾನ್ಯ ಸದಸ್ಯರುಗಳೂ ಇಲ್ಲಿಯತನಕ ಇಷ್ಟು ಸಾವಧಾನದಿಂದ ನನ್ನ ಭಾಷಣವನ್ನು ಕೇಳಿದ್ದಕ್ಕಾಗಿ ಅವರೆಲ್ಲರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ. ನಮ್ಮ ವಿರೋಧಪಕ್ಷದವರೂ ಕೂಡ ನನ್ನ ಮಾತುಗಳನ್ನು ಕೇಳಿ ಆದರಿಂದ ಅವರಿಗೂ ಸಾಕಷ್ಟು ತೃಪ್ತಿಯಾಗಿರುವುದರಿಂದ ಅವರೂ ಕೂಡ ಈಗ ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡುಗಳನ್ನು ಸರ್ವರೂ ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಪ್ರಾರ್ಥಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—The question is :

"That the respective sums not exceeding the amounts mentioned in Demands Nos. 17 and 37 which include the sums already voted on account be granted to the Government to defray the charges which will come in course of payment during the financial year for period ending with the 31st day of March 1969."

The motion was adopted.

As ordered by the Chair the motion for Demands for grants adopted by the House, are reproduceed belows.

DEMAND NO. 17.—EDUCATION.

28. Education.

"That a sum not exceeding Rs. 36,17,27,200 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Education'."

DEMAND NO. 37.—STATIONERY AND PRINTING.

68. Stationery and Printing.

"That a sum not exceeding Rs. 1,13,39,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Stationery and Printing'."

MR. CHAIRMAN.—The House will now rise and meet again on Monday, the 8th instant at 1 P.M.

The House adjourned at Thirty Minutes past Seven of the Clock to meet again at One of the Clock on Monday the 8th April 1968.

WD 10849—GPB—600—17-8-1968

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE THIRTY-SIXTH DAY

OF THE

THIRD SESSION

OF THE

FOURTH LEGISLATIVE ASSEMBLY

WEDNESDAY, 10TH APRIL 1968

CHAITRA 21, 1890 (SAKA)

Vol. XII—No. 5

BANGALORE:

PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS

1968

Price: 25 Paise

CONTENTS

	PAGES
Starred Questions and Answers ...	397—428
Short Notice Questions and Answers ...	428—433
Questions for Answers on the day (but not taken up) ...	433—437
Member's Representation ...	437—438
Calling Attention to a matter of urgent Public Importance ...	438—439
Member's Representation ...	439—440
Calling Attention to a matter of urgent Public Importance ...	441
Members' Representation ...	441—443
Budget Estimates for 1968-69—Demands for Grants—	
Demand No. 22—(33)—Animal Husbandary (Voted); ,, 26—(36)—Labor Employment (Voted); ,, 15—(26)—Miscellaneous Departments ...; ,, 53—(124)—Capital Outlay on Schemes of Government Trading —(Debate not concluded) ...	444—484

MYSORE LEGISLATIVE ASSEMBLY

Wednesday, 10th April 1968

The House met in the Assembly Chamber, Vidhana Soudha, Bangalore, at One of the Clock.

Mr. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

MR. DEPUTY SPEAKER.—Starred Question No. 456. Member absent. Next question

Inter-State Seniority Dispute Cases

457. SRI G. DUGGAPPA (Bharamasagar).—

Will the Chief Minister be pleased to state:—

(*a*) the number of Inter-State Seniority Dispute cases pending before the Government ;

(*b*) since when they are pending disposal before the Government;

(*c*) the number of such cases in respect of Gazetted and non-Gazetted officers (Departmentwise information may be furnished) ;

(*d*) the reason for delay in disposing of these cases ?

A.—SRI B. D. JATTI (Minister for Food and Civil Supplies) [On behalf of SRI S. NIJALINGAPPA (Chief Minister)]. —

(*a*) (*b*) and (*c*) The final authority for Integration of services vests in the Government of India under section 115 of the State Reorganisation Act. The procedure prescribed for publication of the lists, is that the State Government will publish a provisional Inter-State Seniority List inviting objection from the aggrieved. The representations received against the provisional Inter-State Seniority list with the comments of the State Government thereon will be forwarded to the C.A.C. or S.A.C. as the case may be for its consideration and making suitable recommendations to the Government of India for their decision. In the light of the decisions of the Government of India the final list is prepared and published by the State Government. The department where final Inter

(Sri B. D. Jatti)

State Seniority lists in different cadres have not yet been finally published, number of Gazetted and non-Gazetted officers in the lists and the dates from which they are pending are indicated below.—

Sl. No.	Name of the Department	No. of employees in the list		Date from which the lists in different cadres of the Departments are pending	
		G. Os.	N. G. Os.	With State Govt. or Head of the Dept.	With Govt. of India or C.A.C. or S.A.C.
1	Public Works (Executive)	548	1,812	1-8-67 6-2-67 19-3-68	...
*2	Public Works (I Dn. Clerk & Draftsmen).	...	642	21-3-68	...
3	State Accounts ...	...	402	21-10-67	...
*4	Sericulture ...	...	467	24-11-67	...
*5	Marketing ...	...	99	27-11-67	...
6	Revenue ...	278	1,360	18-6-66	...
7	Survey Settlement & Land Records.	...	770	27-3-68	...
8	Commercial Taxes ...	...	495	10-2-67	27-12-67
9	Public Instruction ...	...	734	29-7-67	...
10	Collegiate Education ...	...	300	28-10-67	...
11	Technical Education ...	...	247	...	29-1-68
12	Agriculture ...	...	1,218	9-8-67	...
13	Forest (Ministerial) ...	...	79	...	18-12-67
14	Animal Husbandry and Veterinary Services. ...	...	1,935	...	23-1-68
15	Excise (Executive) ...	...	221	20-10-67	...
16	Road Transport ...	...	2,663	1-11-66	...
17	Police (Radio Grid) ...	...	234	...	1-5-67 and 28-5-66
18	Development ...	...	343	...	27-12-67
19	Mysore Government Secretariat.	...	101	...	...
20	Labour & Employment ...	...	302	23-3-68	...
21	Food & Civil Supplies ...	...	37	8-3-68	...
22	Medical ...	...	751	23-2-68 28-2-68	... ...
23	Local Self Government Department.	...	66	19-3-68	...

* Has since been finalised and sent for publication.

(*d*) The delay is inevitable because of the complicated nature of work and the fact that the procedure prescribed is necessarily time consuming one as several authorities *e. g.*, the Head of Department, the State Government, the Central Advisory Committee, State Advisory Committee and the Government of India are required to examine the claims. In some cases, the provisional lists had to be republished as per court directions thus involving unavoidable delay in those cases. However efforts are being made to complete the work as early as possible.

SRI G. DUGGAPPA.—In reply to (d) you have stated that however efforts are being made to complete the work as early as possible. May I know the cases pending before the State Advisory Committee and in how many cases recommendations have been made to the Central Advisory Committee ?

SRI B. D. JATTI.—The gradation list had to be prepared and published in respect of 2,858 Gazetted Officers and 35,620 Non-gazetted Officers. Now the balance remaining with the Government is Gazetted Officers: 826 and Non-gazetted Officers: 16,530. Then regarding different departments and the two advisory committees before whom the cases are pending, I will have to give the list separately and I will give it Sir. The other details are as follows.—

	No. of representations.	*No. of employees in the list*
First category.		
Cases where draft final inter-State Seniority lists have been finalised and sent to Government Press for publication.	169	1,208
Second category		
Cases where approval of this Government has been obtained, but held up for want of certain clarifications from the Government of India.	102	1,218
Third category		
Cases where draft final list has been approved by Government and put up for approval of the Governor.	13	402

(SRI B. D. JATTI)

	No. of representations.	No. of employees in the list
Fourth category		
Cases where preparation of list held up because of High Court Stay orders for publication.	610	1,812
Fifth category		
Cases where draft final inter-state seniority list are under preparation.	113	1,034
Sixth category		
Cases where information has been called for from the Heads of Departments or concerned State Governments for preparing the draft seniority list.	83	1,023
Seventh category		
Cases where decision of the Government of India have been received recently and further action on the same is under examination.	430	1,422

Sri G. DUGGAPPA.—In case of Public Works Department the Central Government have given their decision in the matter of Inter-State Seniority List concerning Supervisors and inspite of this, the Government of Mysore have given promotions to juniors in the list overlooking the claims of people who are seniors and who were seniors in their parent State, i.e., erstwhile Bombay State. May I know whether it is not a fact Sir? If so, whether the Government will take immediate action to do justice to those people whose seniority has been-over looked?

Sri B. D. JATTI.—Sir, regarding the Public Works Department, the final decisions of the Government were received on 3rd February 1967. In accordance with the decision of the Government of India, a draft final list has been prepared and forwarded to the Public Works Department Secretary for concurrence and after the receipt of the list from the Public Works Department, it has to be sent to the Government of India for approval and the final list can be published in the Gazette only after the approval of the Government of India. In this particular case, that is what has happened. Generally after getting the

approval of the Government of India, the list is finally published in the Gazette by the Government. But here the Government of India have specifically asked us to finalise the list and send it back once again to get the final approval. That is the reason for the delay.

Sri G. DUGGAPPA.—Pending finalisation of the Inter-State Seniority List, in how many cases, the Government have given promotions ?

Sri B. D. JATTI.—I do not know the exact number. But in some cases if it is absolutely necessary, temporary arrangement has been made subject to the final list which is to be published.

ಶ್ರೀ ಸಿದ್ದಯ್ಯ ಕಾಶೀಮಠ.—ಸೀನಿಯಾರಿಟಿ ಲಿಸ್ಟ್ ಗೊಂದಲ ಮೇಲಿಂದ ಮೇಲೆ ಬರುತ್ತಾ ಇರುವುದರಿಂದ ರಿಟೈರ್ಡ್ ಹೈಕೋರ್ಟ್ ಜಡ್ಜನ್ನು ನೇಮಿಸಿ 1968 ನೇ ಇಸವಿ ಮುಗಿಯುವುದರೊಳಗಾದರೂ ಕೂಡ ಕೊನೆ ನಿರ್ಣಯ ಕೈಗೊಳ್ಳುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಕೆಲಸವೆಲ್ಲಾ ಆಗಿದೆ. ಗೆಜೆಟೆಡ್ ಆಫೀಸರ್ಸ್ 2,858 ಇತ್ತು. ನಾನ್ ಗೆಜೆಟೆಡ್ ಆಫೀಸರ್ಸ್ 35620 ಇತ್ತು. ಈಗ ಉಳಿದದ್ದು ಕೇವಲ ಗೆಜೆಟೆಡ್ 826 ನಾನ್ ಗೆಜೆಟೆಡ್ 15,530. ಇದರದ್ದೂ ಎಲ್ಲಾ ಡಿಟೈಲ್ ಕೊಟ್ಟಿದ್ದೇನೆ. ಎಲ್ಲಾ ಫೈನಲ್ ಆಗಿ ಬಂದಿದೆ. ಬಹಳಕಾಲ ಬೇಕಾಗುವುದಿಲ್ಲ. ಹೈಕೋರ್ಟ್ ಆಫೀಸರ್ಸ್ ಬೇಕಾಗಿಲ್ಲ, ಜಡ್ಜ್ ಕೂಡ ಬೇಕಾಗಿಲ್ಲ.

ಶ್ರೀ ಎಚ್. ಬಿ. ಜ್ವಾಲಯ್ಯ.—ಅಂತರರಾಜ್ಯ ಸೀನಿಯಾರಿಟಿ ಪಟ್ಟಿ ಪ್ರಕಾರಯಾರು ಯಾರಿಗೆ ಸೀನಿಯಾರಿಟಿ ಸಿಕ್ಕುತ್ತದೋ ಅವರು ರಿಟೈರ್ಡ್ ಆಗುತ್ತಾ ಇದ್ದಾರೆ. ಯಾವ ಕಾಲದಲ್ಲಿ ಈ ಅಂತರ ರಾಜ್ಯ ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡಿದರೋ ಅಹೊತ್ತಿನಿಂದಾದರೂ ಅವರುಗಳಿಗೆ ಪೆನ್ಷನ್ ಸೌಲಭ್ಯ ಸಿಕ್ಕುವಂತೆ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಯಾವ ಡೇಟ್‌ನಿಂದ ಯಾವ ಕೇಡರ್‌ಗೆ ಬರಬೇಕಾಗಿತ್ತೋ, ಸೀನಿಯಾರಿಟಿ ಸಿಕ್ಕಬೇಕಾಗಿತ್ತೋ ಆ ತಾರೀಕಿನಿಂದ ಪೆನ್ಷನ್ ಸಿಕ್ಕುತ್ತದೆ. ಹಾನಿಯಾಗುವುದಿಲ್ಲ.

Sri DIGAMBARA RAO B. KALMANKAR.—With regard to the Department of Public Instruction, may I know whether it is a fact that many writ petitions have been filed because the so-called Inter-State Seniority List was not prepared by the Government as per the procedure laid down and objections were not called for ?

ಶ್ರೀ ಬಿ .ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳಿದ ಮಾತು ಸರಿಯಲ್ಲ. 4–5 ಕ್ರೈಟೀರಿಯಾ ಏನು ಕೊಟ್ಟಿದ್ದಾರೆ ಅದರ ಪ್ರಕಾರ ಲಿಸ್ಟ್ ಮಾಡುತ್ತೇವೆ. ಹೈಕೋರ್ಟಿನಲ್ಲಿ ರಿಟ್ ಫೈಲ್ ಮಾಡಿದ ನಂತರ ಸ್ಟೇ ಮಾಡಬೇಕಾಗುತ್ತದೆ. ಮಾಡದಿದ್ದರೆ ತಪ್ಪಾಗುತ್ತದೆ.

Sri H. SIDDAVEERAPPA.—Will the Hon'ble Minister be pleased to state that after the formation of the new State in 1956, whether there are any States in India where this question is hanging for such a long time as this or is this the only State ?

Sri B. D. JATTI.—I had never any occasion to study cases of other States. If an opportunity is given, I can study and inform the Hon'ble Member.

Sri S. R. BOMMAI.—Is it a fact that the Inter-State Seniority List of Agricultural Officers recommended to Central Government long back had come before the Cabinet and it was postponed on account of senior Officers ?

Sri B. D. JATTI.—It is absolutely incorrect. Beyond that, I cannot say anything.

Sri G. DUGGAPPA.—May I know in how many cases, the Government have not given effect to the list though it has been approved by the Central Government ?

Sri B. D. JATTI.—If there are any cases, it must be in the Public Works Department because the Government of India has asked us to submit once again the list which is to be finalised by them. In that Department there may be cases. Wherever the list has been finalised, we have sent it for publication in the Gazette and there is no need to withhold it.

Sri H. SIDDAVEERAPPA.—In the case of non-gazetted Officers, do you require Government of India's concurrence ?

Sri B. D. JATTI.—Yes, Sir, because there are two Advisory Committees; one is Central Advisory Committee and another is State Advisory Committee. We have to send the list to the State Advisory Committee and finally we have to get the approval of the Government of India.

Sri G. DUGGAPPA.—Is it not a fact that the final list of Inter-State Seniority list concerning the P.W. Overseers and staff nurses of the Medical Department has been very recently received by the Government from the Central Covernment ?

Sri B. D. JATTI.—No, Sir.

Sri G. DUGGAPPA.—Please refer to your Deputy Secretary. He will give you the information.

Sri B. D. JATTI.—If the Hon'ble Member gives information, I will get it examined, Sir.

Construction of a bridge at Railway Crossing Gate, Birur

458. Sri M. MALLAPPA (Birur).—

Will the Minister for Public Works be pleased to state :—

(*a*) has it come to the notice of the Government that the Public of Birur and Lingadahalli are urging for construction of an under or over bridge in lieu of existing railway crossing gate within the Town limits of Birur ;

(*b*) is it not a fact that the Government of India are prepared to take up the construction of providing a bridge in lieu of railway crossing gate provided the proposals are sent by the State Government ;

(*c*) is it not a fact that estimates are prepared for providing roads to cross the proposed bridge ;

(*d*) what action the Government proposes to take for obtaining sanction of the Central Government ?

A.— Sri VEERENDRA PATIL (Minister for Public Works).—

(*a*) Yes.

(*b*) No reference has been received from Government of India in this case.

(*c*) No.

(*d*) The proposal will be considered at the time of forwarding the list of works to the Railway authorities, subject to the availability of funds for the formation of approaches.

Sri M. MALLAPPA.—Sir, what is the adopted policy of the State Government in sending proposals to construct bridges by the Central Government ?

† Sri VEERENDRA PATIL.—We have already sent a number of proposals. Where is the point in sending merely proposals ?

Sri. M. MALLAPPA.—What is the adopted policy in sending proposals for the construction of bridges to the Central Government. and what is the expenditure incurred by the State Government, and the Central Government in this behalf ?

Sri VEERENDRA PATIL.—So far as Railway over or under bridges are concerned, the matter is, the bridge is constructed by the Railway and the approaches have to be constructed by the State Government, wherever it is the State Highway or other P. W. roads. If it is within the municipal area, 50 per cent of the cost will have to be borne by the Municipalities. Taking into consideration the importance of the roads and the traffic potential, we make certain recommendations to the railway authorities every year.

ಶ್ರೀ ಸಿದ್ದಯ್ಯ ಕಾಶೀಮಠ್.—ಆ ಬಿರೂರಲ್ಲಿರುವ ಹಾಗೇ ಆ ಹುಬ್ಬಳ್ಳಿ ಮತ್ತು ಧಾರ್ವಾಡ ನಡುವೆ ಈ ಓವರ್ ಬ್ರಿಡ್ಜನ್ನು ಕಟ್ಟತಕ್ಕ ಅವಶ್ಯಕತೆ ಇದ್ದು ನಾವು ಸರ್ಕಾರಕ್ಕೆ ಮೇಲಿಂದ ಮೇಲೆ ಬರೆದರೂ ಅವರು ರೈಲ್ವೆ ಇಲಾಖೆಯುವರಿಗೆ ಬರೆಮ ಕಾರ್‍ಯಕ್ರಮ ಕೈಗೊಳ್ಳದಿರುವುದಕ್ಕೂ ಕಾರಣಗಳೇನು ?

ಶ್ರೀ ವೀರೇಂದ್ರ ಪಾಟೀಲ್.—ಅನೇಕ ಕಡೆಗಳಲ್ಲಿ ಈ ನ್ಯಾಷನಲ್ ಹೈವೇ ಮೇಲೆ ಹರಿಹರ, ದಾವಣಗೆರೆ, ಹಾವೇರಿ ಮತ್ತು ರಾಣೆಬೆನ್ನೂರು ಇತ್ಯಾದಿ ಕಡೆಗಳಲ್ಲಿ ಈ ಸೇತುವೆಗಳು ಅಗತ್ಯವಾಗಿ ಬೇಕಾಗಿರುತ್ತವೆಂದು. ನಾವು ಆ ರೈಲ್ವೆ ಇಲಾಖೆಯುವರಿಗೆ ಮೇಲಿಂದ ಮೇಲೆ ತಿಳಿಸುತ್ತಿದ್ದರೂ ಅವರು ಹಣದ ಅಭಾವದಿಂದಲೋ ಏನೋ ಕೈಗೊಂಡಿಲ್ಲ.

Sri M. MALLAPPA.—Has it come to the notice of the Government that I have forwarded a copy of letter sent by the Central Railway Ministry that they were prepared to take up the construction of the bridge provided firm proposals are sent by the Mysore Government and the State Government is hesitating to sent proposals ?

Sri VEERENDRA PATIL.—The pattern is that they construct bridges and we have to construct approaches. This is well within the municipal limits and let my friend say that the municipality is prepared to construct approaches, I will send the proposals tomorrow itself.

---

† Indicates that the speeches or remarks have not been revised by the member concerned.

Sri M. MALLAPPA.—The approaches are already there. Only the bridge will have to be constructed and a proposal will have to be sent to the Central Government. There is a lapse on the part of the State Government. The approach is already there. The existing gate will have to be taken away and a bridge will have to be constructed.

Sri VEERENDRA PATIL.—It is very difficult to accept this position, whether the approach road is necessary or not. When it is on a high embankment. the cost of the approach may be little. We have to examine the position. That is why I suggest that if the municipality is prepared to meet that much of the expenditure, I am prepared to forward this proposal tomorrow itself. Let the Municipality pass a resolution and forward it to the State Government.

ಶ್ರೀ ಎಚ್. ಬಿ. ಜ್ವಾಲನಯ್ಯ.—ಎಲ್ಲ ವೆಚ್ಚವನ್ನೂ ಪೌರ ಸಭೆಯವರೇ ವಹಿಸಿಕೊಳ್ಳುವುದಕ್ಕೆ ಬದಲಾಗಿ ಸ್ವಲ್ಪ ಹಣವನ್ನು ಪೌರಸಭೆಯವರೂ ಮತ್ತು ಸ್ವಲ್ಪ ಹಣವನ್ನು ಸರ್ಕಾರದವರೂ ವಹಿಸಿಕೊಳ್ಳುವಂತೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ನಾನಾಗಲೇ ಹೇಳಿದೆ ಅವರು 50 ಪರ್ಸೆಂಟ್ ಹಾಕಿದರೆ ಸರ್ಕಾರದವರು ಇನ್ನುಳಿದ 50 ಪರ್ಸೆಂಟನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು.

ಶ್ರೀ ಬಿ. ದೊಡ್ಡ ಬೋರೇಗೌಡ.—ಆ ರಾಮನಗರ ಮತ್ತು ಮಂಡ್ಯ ಅಲ್ಲೆಲ್ಲಾ ಹೈವೇ ರೈಲ್ವೆ ಲೈನನ್ನು ಕ್ರಾಸ್ ಮಾಡುವಲ್ಲಿ ಏಕೆ ಈ ಓವರ್ ಬ್ರಿಡ್ಜಗಳನ್ನು ಮಾಡಿಸಿಲ್ಲ !

ಶ್ರೀ ವೀರೇಂದ್ರ ಪಾಟೀಲ್.—ಎಲ್ಲೆಲ್ಲಿ ನ್ಯಾಷನಲ್ ಹೈವೇ ರೈಲ್ವೆ ಲೈನನ್ನು ಕ್ರಾಸ್ ಮಾಡುತ್ತದೋ ಅಲ್ಲೆಲ್ಲಾ ಓವರ್ ಅಥವಾ ಅಂಡರ್ ಬ್ರಿಡ್ಜಗಳನ್ನು ಮಾಡಿಸಲೇ ಬೇಕು. ಆದರೆ, ಅವುಗಳ ಪ್ರಾಮುಖ್ಯತೆ, ಅಲ್ಲಿರತಕ್ಕ ಟ್ರಾಫಿಕ್ ಮತ್ತು ವಾಹನಗಳ ಸಂಚಾರ ಇತ್ಯಾದಿಗಳನ್ನೆಲ್ಲಾ ನೋಡಿಕೊಂಡು ಅವುಗಳನ್ನು ಕಾರ್ಯಗತ ಮಾಡುತ್ತಿದ್ದೇವೆ.

Mr. DEPUTY SPEAKER.—Question No. 459 may be put by Smt. Winnifred F. Fernandes.

Dearth of Water in Katipalla Rehabilitation Centre

459. **Smt. WINNIFRED F. FERNANDES** (Coondapur) [On behalf of Sri P. V. AITHALA (Surathkal)].—

Will the Minister for Revenue and Forests be pleased to state :—

(*a*) whether there is great dearth of water both for drinking as well as for construction of buildings in the 3rd Block of Katipalla Rehabilitation Centre in Iddya and Kuthethoor villages of Mangalore Taluk ;

(*b*) whether the construction of houses and a Roman Catholic Church and other buildings are hindered for want of necessary water in the said area ;

(*c*) whether it is a fact that there is no sufficient water in the two wells in this Block ;

(*d*) whether the 3rd well in this block is in a valley about 100 feet below the building in the 3rd block and it is very difficult to draw

and take water to the residential or other buildings nearly 100 feet above;

(e) whether from this well in the valley water is not pumped up to the residential locality till the end of March every year?

A.—Sri B. RACHAIAH (Minister for Revenue and Forests).—

(a) No.
(b) No.
(e) No.
(d) No. This well is about 40 below the Church under construction.
(e) No.

Smt WINNIFRED F. FERNANDES.—Supplementary to (a) do you mean to say that there is ample supply of water for construction and for drinking purposes?

Sri B. RACHAIAH.—Yes.

Smt. WINNIFRED F. FERNANDES.—I was told that representations were given to the Minister concerned. Has this come to the notice of Government?

Sri B. RACHAIAH.—Even though 530 house sites have been allotted in the 3rd Block, only 150 famillies are living there and there are 14 wells in that Block. In addition to these 14 open wells, there are two bore wells from which water is drawn and water is pumped out through pipes.

Smt. WINNIFRED F. FERNANDES.—I was told that due to dearth of water construetion work could not be taken up. Will you please sec that ample supply of water is provided in future?

Sri B. RACHAIAH.—There will be no difficulty. We will try.

Mr. DEPUTY SPEAKER.—I hold over Question No. 460 as the Minister concerned could not come on account of ill-health. Next question.

Kadur-Moravanji Road

461. Sri K. M. THAMMAIAH (Kadur).—

Will the Minister for Public Works be pleased to state:—

(a) whether it is a fact that lands have been acquired long back for the construction of Kadur-Moravanji road in Kadur Taluk;

(b) whether it is a fact that compensation has not been paid so far to the ryots whose lands have been acquired in spite of many representations;

(c) whether they would take immediate action to pay the compensation to the ryots who have been put to hardships?

A.— Sri VEERENDRA PATIL (Minister for Public Works).—

(*a*) No.

(*b*) Does not arise in view of reply to clause (*a*) above.

(*c*) The compensation will be paid as soon as award is passed.

ಶ್ರೀ ಕೆ. ಎಚ್. ತಮ್ಮಯ್ಯ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಜಮೀನನ್ನು ಅಕ್ವೈರ್ ಮಾಡಿಕೊಂಡಿರುವುದು ನಿಜವಲ್ಲ,' ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ, 1949ನೇ ಇಸವಿಯಲ್ಲಿ ಕಡೂರು ತಾಲ್ಲೂಕಿನಲ್ಲಿ 23 ಮೈಲಿ ರಸ್ತೆಯನ್ನು ಮಾಡಿ ಅಲ್ಲಿಂದ ಇಲ್ಲಿಯವರೆಗೂ ಜಮೀನನ್ನು ಅಕ್ವೈರ್ ಮಾಡಿಕೊಂಡ ರೈತರಿಗೆ ಕಾಂಪೆನ್‌ಸೇಷನ್ನೂ ಕೊಡದೆ, ಆ ಜಮೀನಿಗೆ ಆ ರೈತರಿಂದ ಕಂದಾಯವನ್ನು ವಸೂಲು ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಈಗ ತಾವು ಪ್ರಶ್ನೆಯಲ್ಲಿ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದೀರಾ ಎಂದು ಕೇಳಿದ್ದೀರಿ. ಅದಕ್ಕೆ ಇಲ್ಲ ಎಂದು ಹೇಳಿದ್ದೇವೆ ಏತಕ್ಕೆಂದರೆ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಇನ್ನೂ ನಡೆಯುತ್ತಿದೆ. ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಪೂರ್ತಿ ಆದಮೇಲೆ ಕಾಂಪೆನ್‌ಸೇಷನ್ ಕೊಡುವ ಪ್ರಶ್ನೆ ಬರುತ್ತದೆ. ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಇನ್ನೂ ಕಂಪ್ಲೀಟಾಗಿಲ್ಲ ಅದಕ್ಕೋಸ್ಕರ ಆ ರೀತಿ ಉತ್ತರವನ್ನು ಕೊಟ್ಟಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಸರ್ಕಾರಕ್ಕೆ ಕೊಡಬೇಕಾದ ಬಾಕಿಯನ್ನು ಕೊಡದಿದ್ದರೆ ರೈತರ ಎತ್ತು ಕರುಗಳನ್ನು ಹೊರಗೆ ಎಳೆಯುತ್ತೀರಿ, ಈಗ 19 ವರ್ಷಗಳಿಂದಲೂ ಅಕ್ವೈರ್ ಮಾಡಿಕೊಂಡ ಜಮೀನಿಗೆ ಕಾಂಪೆನ್‌ಸೇಷನ್ ಕೊಡದೆ ಆ ಜಮೀನಿಗೆ ಕಂದಾಯವನ್ನು ವಸೂಲು ಮಾಡುತ್ತಿರವುದು ನ್ಯಾಯವೇ ?

ಶ್ರೀ ವೀರೇಂದ್ರ ಪಾಟೀಲ್.–ಕಂದಾಯ ವಸೂಲು ಮಾಡುವುದು ಗೊತ್ತಿಲ್ಲ. ಅಲ್ಲಿ ಈಗಾಗಲೇ ರೋಡು ಫಾರ್ಮೇಷನ್ ಆಗಿದ್ದರೆ ಆ ಜಮೀನಿಗೆ ಕಂದಾಯವನ್ನು ವಸೂಲು ಮಾಡುವುದು ಸರಿಯಲ್ಲ. ಅದನ್ನು ರೀಫಂಡ್ ಮಾಡಬೇಕಾಗುತ್ತದೆ. ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಆಗುವುದು ಬಹಳ ಕಂಬರ್‌ಸಮ್. ಒಂದು ವರ್ಷದಲ್ಲಿ ಅದು ಮುಗಿಯುವುದಿಲ್ಲ. ದುರುದೃಷ್ಟವಶಾತ್ ಮಾನ್ಯ ಸದಸ್ಯರು ಹೇಳಿದಂತಹ ಪರಿಸ್ಥಿತಿ ಅನೇಕ ಸಲ ಒದಗುತ್ತದೆ. ಈ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ನಡೆಯುವುದು ತಡವಾದರೂ ಅವರಿಗೆ ಕೊಡಬೇಕಾಗಿರತಕ್ಕ ಕಾಂಪೆನ್‌ಸೇಷನ್ನಿಗೆ ಬಡ್ಡಿಯನ್ನು ಕೊಡುತ್ತೇವೆ. ಆದ್ದರಿಂದ ಕಾಂಪೆನ್‌ಸೇಷನ್ ಸಿಕ್ಕುವುದು ತಡವಾಗುತ್ತದೆಯೇ ಹೊರತು ರೈತನಿಗೆ ಸಿಕ್ಕಬೇಕಾದ ಅನುಕೂಲತೆಯಲ್ಲೇನೂ ಕಷ್ಟವಾಗುವುದಿಲ್ಲ.

ಶ್ರೀ ಎನ್. ಜಿ. ಹಾಲಪ್ಪ.—ಈ ಅಕ್ವಿಜಿಷನ್ ಕೆಲಸ 1949ನೇ ಇಸವಿಯಲ್ಲಿ ಪ್ರಾರಂಭವಾಗಿದೆ ಈಗ ಸುಮಾರು 19 ವರ್ಷಗಳಾಗಿವೆ. ಆ ಜಮೀನಿಗೆ ಕೊಡಬೇಕಾದ ಕಾಂಪೆನ್ ಸೇಷನ್ನಿಗೆ ಸರ್ಕಾರದವರು ಬಡ್ಡಿಯನ್ನು ಕೊಡಬೇಕಾಗಿರುವುದರಿಂದ ಇದು ಸರ್ಕಾರಕ್ಕೆ ನಷ್ಟ ಅಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅದು 19 ವರ್ಷ ಆಗಿಲ್ಲ. 1962ರಲ್ಲಿ ಅಲ್ಲಿ ರೋಡು ಮಾಡುವುದಕ್ಕೆ ಸ್ಯಾಂಕ್ಷನ್ ಮಾಡಿದ್ದಾರೆ. 63–64ರಲ್ಲಿ ಫಾರ್ಮೇಷನ್ ಆಗಿದೆ. 3–4 ವರ್ಷ ಆಗಿದೆ. ಅದರೆ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಸ್ವಲ್ಪ ತಡವಾಗುತ್ತಿದೆ.

ಶ್ರೀ ಜಿ. ದುಗ್ಗಪ್ಪ.—ರೈತರ ಜಮೀನನ್ನು ಅಕ್ವೈರ್ ಮಾಡಿಕೊಂಡು ಅವರಿಗೆ ಕಾಂಪೆನ್ ಸೇಷನ್ನೂ ಕೊಡದೆ ಆ ಜಮೀನಿಗೆ ಕಂದಾಯವನ್ನು ವಸೂಲು ಮಾಡುವುದು ನ್ಯಾಯವೆ ? ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಆಗುವುದು ಸ್ವಲ್ಪ ಕಂಬರ್‌ಸಮ್, ಅದು ತಡವಾಗುತ್ತದೆ ಎಂದು ತಾವೇ ಒಪ್ಪಿಕೊಳ್ಳುತ್ತೀರಿ, ಹೀಗಿರುವಾಗ ಆ ಜಮೀನಿಗೆ ಕಂದಾಯವನ್ನು ವಸೂಲು ಮಾಡಕೂಡದು ಎಂದು ಖಚಿತವಾಗಿ ರೆವಿನ್ಯೂ ಅಧಿಕಾರಿಗಳಿಗೆ ಇನ್‌ಸ್ಟ್ರಕ್ಷನ್ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್:—ಅಲ್ಲಿ ರೋಡ್ ಫಾರ್ಮೇಷನ್ ಆದಮೇಲೆ ಕಂದಾಯವನ್ನು ವಸೂಲು ಮಾಡಿದ್ದರೆ ಅದನ್ನು ರೀಫಂಡ್ ಮಾಡಬೇಕಾಗುತ್ತದೆ. ಆ ಊರಿನಲ್ಲಿ ಜಮಾಬಂದಿ ಮಾಡುವ ಮುನ್ನ ಸಂಬಂಧಪಟ್ಟವರು ತಹಶೀಲ್ದಾರರು ಅಥವಾ ಅಸಿಸ್ಟೆಂಟ್ ಕಮೀಷನರ್ ಅವರನ್ನು ನೋಡಿ ಆ ಜಮೀನಿಗೆ ಕಂದಾಯವನ್ನು ವಸೂಲು ಮಾಡಬೇಡಿ ಎಂದು ಹೇಳಿದರೆ ಅವರು ಹೇಗೆ ಕಂದಾಯವನ್ನು ವಸೂಲು ಮಾಡುತ್ತಾರೆ ? ಅಕ್ವಿಜಿಷನ್ ತಡವಾಗುವುದನ್ನು ನಾನು ಒಪ್ಪಿಕೊಂಡಿದ್ದೇನೆ. ಅದು ಎಷ್ಟೇ ತಡವಾದರೂ ಅವರಿಗೆ ಕೊಡಬೇಕಾದ ಕಾಂಪೆನ್‌ಸೇಷನ್ನಿಗೆ ಇಂಟರೆಸ್ಟ್ ಬರುತ್ತದೆ ಎನ್ನುವ ಮಾತನ್ನು ನಾನು ಹೇಳಿದ್ದೇನೆ.

ಶ್ರೀ ಕೆ. ಎಚ್. ತಮ್ಮಯ್ಯ.—ಈ ರಸ್ತೆಯ ನಿರ್ಮಾಣಕ್ಕಾಗಿ 1962ರಲ್ಲಿಯೇ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡಿದ್ದೀರಿ. ಮೊದಲು ಇದು ಡಿಸ್ಟ್ರಿಕ್ಟ್ ಬೋರ್ಡ್‌ಗೆ ಸೇರಿತ್ತು. ಇವತ್ತಿನ ದಿವಸ ಕಡೂರು ತಾಲ್ಲೂಕಿನಲ್ಲಿ ಖುಷ್ಕಿ ಜಮೀನಿಗೆ ಒಂದು ಎಕರೆಗೆ 500 ರೂಪಾಯಿಯಾಗುತ್ತದೆ. ಬಾಗಾಯಿತು ಜಮೀನಿಗೆ ಒಂದು ಎಕರೆಗೆ 4 ರಿಂದ 5 ಸಾವಿರ ರೂಪಾಯಿಗಳಾಗುತ್ತದೆ. ಆದ್ದರಿಂದ ಈ ಜಮೀನಿನ ಬಗ್ಗೆ ಜಾಗ್ರತೆ ಹಣ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹಣ ಎಷ್ಟು ಕೊಡಬೇಕೆಂಬುದು ನನ್ನ ಕೈಯಲ್ಲಿ ಇಲ್ಲ. ಭೂಸ್ವಾಧೀನದ ಕಾನೂನು ಪ್ರಕಾರ ಇಷ್ಟು ಹಣ ಕೊಡಬೇಕೆಂದು ಒಂದು ನಿರ್ಣಯ ಮಾಡುತ್ತೇವೆ. ಸಂಬಂಧಪಟ್ಟ ರೈತ ಸಮಾಧಾನವಿದ್ದರೆ ತೆಗೆದುಕೊಳ್ಳುತ್ತಾರೆ, ಇಲ್ಲದಿದ್ದರೆ ಕೋರ್ಟಿಗೆ ಹೋಗಿ ಹೆಚ್ಚು ತೆಗೆದುಕೊಳ್ಳುತ್ತಾನೆ. ತೀವ್ರವಾಗಿ ಈ ಕೆಲಸವನ್ನು ತೀರ್ಮಾನ ಮಾಡುವುದು ಒಳ್ಳೆಯದೆಂದು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಭೂಮಿಯನ್ನು ಕೆಲವು ಕಾರಣಕ್ಕೆ ವಶಪಡಿಸಿಕೊಂಡು ಪರಿಹಾರವನ್ನು ಸಂಬಂಧಪಟ್ಟವರಿಗೆ ಕೊಡುವುದು ಒಂದು ಕಡೆ ಇರಲಿ, ಭೂಮಿಯನ್ನು ವಶಪಡಿಸಿಕೊಂಡ ಮೇಲೂ ಸಹ ಕಂದಾಯವನ್ನು ವಸೂಲು ಮಾಡುವುದು ಇನ್ನೊಂದು ಕಡೆ ಇರಲಿ, ಆ ಭೂಮಿಯ ಬಗ್ಗೆ ಲೇವಿಯನ್ನು ಸಹ ಕೊಡಬೇಕೆಂದು ಕೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಗಮನಕ್ಕೆ ಬಂದಿರುವ ಪ್ರಕಾರ, ಅಂದರೆ ನಾನು ಟೂರ್ ಹೋಗುವಾಗಲೆಲ್ಲಾ ಯಾವ ಯಾವ ಭಾಗಗಳಲ್ಲಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡರೂ ಸಹ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆಂದು ತಿಳಿದುಬಂದಾಗ, ತಹಶಿಲ್ದಾರರಿಗೆ ಮತ್ತು ಜಿಲ್ಲಾಧಿಕಾರಿಯವರಿಗೆ ವಸೂಲು ಮಾಡಬಾರದೆಂದು ಹೇಳಿದ್ದೇನೆ. ಲೆವಿ ವಸೂಲು ಮಾಡುತ್ತಿರುವ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಎಂ. ನಾಗಪ್ಪ.—ಪರಿಹಾರ ಧನವನ್ನು ಕೊಡುವುದು ತಡವಾದರೆ ಬಡ್ಡಿ ಸೇರಿಸಿ ಕೊಡುತ್ತೇವೆಂದು ಈಗ ಹೇಳಿದಿರಿ. ಅದರ ಬದಲು ಯಾವ ವರ್ಷ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತೀರೋ ಆ ವರ್ಷವೇ ಆ ಭೂಮಿಯ ರೇಟನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ಮತ್ತು ಈ ರೀತಿ ಮಾಡುವುದಕ್ಕೆ ಒಂದು ಅಮೆಂಡ್‌ಮೆಂಟನ್ನು ಮಾಡಿದರೆ ರೈತನಿಗೆ ಅನುಕೂಲವಾಗುವುದಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಈ ರೀತಿ ಮಾಡುವುದಾದರೆ ಲೋಕೋಪಯೋಗಿ ಇಲಾಖೆಯ ಕಾಮಗಾರಿ ಕೆಲಸಗಳು ನಿಂತುಹೋಗುತ್ತವೆ.

ಶ್ರೀ ಬಿ. ಪಿ. ಗಂಗಾಧರ್.—ಲೋಕೋಪಯೋಗಿ ಇಲಾಖೆಯವರು ಕೆಲವೊಂದು ಕಾರಣಕ್ಕಾಗಿ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಬಹಳ ದಿನದ ವರೆಗೆ ಹಣ ಕೊಡದಿರುವುದು ಸಹಸ್ರಾರು ಇವೆ. ಈ ವಿಚಾರದಲ್ಲಿ ನಾನು ಸಹ ಒಂದು ಅಲ್ಪಕಾಲಾವಧಿ ಪ್ರಶ್ನೆಯನ್ನು ಕಳಿಸಿದ್ದೇನೆ. ಕೊರಟಗೆರೆ ತಾಲ್ಲೂಕ್ ಇರಕಸಂದ್ರದ ಬಳಿ ಒಂದು ಪ್ರಾಜೆಕ್ಟ್ ಕಟ್ಟುವ ಸಲುವಾಗಿ 1956ನೇ ಇಸವಿಯಲ್ಲಿ ಜಮೀನು ಸ್ವಾಧೀನಪಡಿಸಿಕೊಂಡಿದ್ದರೂ ಸಹ ಇದುವರೆಗೆ ಪರಿಹಾರ ಧನವನ್ನು ಕೊಟ್ಟಿಲ್ಲ. ಇದರಿಂದ ಬಡವರಿಗೆ ತೊಂದರೆಯಾಗುತ್ತಿವೆ. ಈ ಬಗ್ಗೆ ಸರ್ಕಾರಕ್ಕೆ ಅನೇಕ ಅರ್ಜಿಗಳನ್ನು ಕೊಡಲಾಗಿದೆ ಮತ್ತು ರಿಜಿಸ್ಟರ್ಡ್ ನೋಟೀಸ್ ಸಹ ಕೊಡಲಾಗಿದೆ. ಆದರೂ ಸಹ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ತಾವು ರೆವಿನ್ಯೂ ಅಧಿಕಾರಿಗಳಿಗೆ ಮತ್ತು ರೆವಿನ್ಯೂ ಮಂತ್ರಿಗಳಿಗೆ ಹೇಳಿ ಬಡವರಿಗೆ ಅನುಕೂಲವಾಗುವಂತೆ ಏನಾದರೂ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇರುವ ಪರಿಸ್ಥಿತಿಯನ್ನು ನಾನು ಒಪ್ಪಿಕೊಂಡಿದ್ದೇನೆ. ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಮೇಲೆ ಸಹ ಹಣ ಕೊಡುವುದು ತಡವಾಗುತ್ತಿದೆ ಎಂಬುದನ್ನು ನಾನು ಒಪ್ಪಿಕೊಂಡಿದ್ದೇನೆ. ಈ ಬಗ್ಗೆ ನಾನು ರೆವಿನ್ಯೂ ಮಂತ್ರಿಗಳಿಗೆ ಅನೇಕ ಸಲ ಹೇಳಿದ್ದೇನೆ. ಅಧಿಕಾರಿಗಳಿಂದ ತಡವಾಗುತ್ತದೆಂದು ಹೇಳುವುದು ಸರಿಯಲ್ಲ. ಈ ಬಗ್ಗೆ ಇರತಕ್ಕಂಥ ಪ್ರೊಸೀಜರ್ ಬಹಳ ತೊಡಕಾಗಿದೆ. ಸೆಕ್ಷನ್ 5ರ ಪ್ರಕಾರ ನೋಟಿಫಿಕೇಷನ್ ಆಗಬೇಕು. ಸೆಕ್ಷನ್ 6ರ ಪ್ರಕಾರ ನೋಟಿಫಿಕೇಷನ್ ಆಗಬೇಕು. ಮತ್ತು ಸಬ್‌ಕ್ಲಾಸ್‌ಗಳು ಸಹ ನೋಟಿಫಿಕೇಷನ್ ಆಗಬೇಕು. ಇದೆಲ್ಲಾ ಆಗಬೇಕಾದ್ದರಿಂದ ತಡವಾಗುತ್ತದೆ. ಇಷ್ಟೇ ಅಲ್ಲದೆ ರೆವಿನ್ಯೂ ಆಫೀಸರ್ ಅವರೇ ಸೆಮಿ ಜುಡಿಷಿಯಲ್ ಆಫೀಸರ್ ಕೂಡ ಆಗಿರುವುದರಿಂದ ಇಷ್ಟೇ ಕಾಲದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುವುದು ಕಷ್ಟವಾಗುತ್ತದೆ. ನಮ್ಮ ಗುಡ್ ಆಫೀಸಸ್‌ಗಳನ್ನು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವೋ ಅಷ್ಟರ ಮಟ್ಟಿಗೂ ಉಪಯೋಗಿಸಿಕೊಂಡು ಜಾಗ್ರತೆ ಕೆಲಸಗಳು ಆಗುವುದಕ್ಕೆ ಏರ್ಪಾಡು ಮಾಡಲಾಗುತ್ತಿದೆ.

ಶ್ರೀ ವಿ. ಎನ್, ಪಾಟೀಲ್.—ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಪರಿಹಾರಧನವನ್ನು ಕೊಡುವುದು ತಡವಾಗುತ್ತಿದೆಯೆಂದು ಹೇಳಿದಿರಿ. ಈ ರೀತಿ ವಶಪಡಿಸಿಕೊಂಡ ಜಮೀನಿನ ಮೇಲೂ ಸಹ ಕಂದಾಯ ವಸೂಲು ಮಾಡುತ್ತಿರುವ ಬಗ್ಗೆ ಸರ್ಕಾರಕ್ಕೆ ಏನಾದರು ಕಂಪ್ಲೈಂಟ್ ಬಂದಿದೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಇದೀಗ ಒಪ್ಪಿಕೊಂಡಿದ್ದೇನೆ. ಈ ರೀತಿ ಭೂಕಂದಾಯವನ್ನು ವಸೂಲು ಮಾಡುತ್ತಿದ್ದಾರೆಂದು ನನ್ನ ಗಮನಕ್ಕೆ ಬಂದಾಗಲೆಲ್ಲಾ ವಸೂಲು ಮಾಡಬಾರದೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ.

ಉಪಾಧ್ಯಕ್ಷರು.—ಶ್ರೀ ಎಲ್, ಶ್ರೀಕಂಠಯ್ಯನವರ ಪರವಾಗಿ ಶ್ರೀ ಎಚ್. ಎನ್. ನಂಜೇಗೌಡರು ಪ್ರಶ್ನೆ ಹಾಕಬಹುದು.

CARE Organisation

462. SRI H. N. NANJEGOWDA (Nanjangud) [On behalf of SRI L. SRIKANTAIAH (Nanjangud)].—

Will the Minister for Agriculture and Education be pleased to state :—

(*a*) whether there is an organisation called 'CARE' which is supplying milk and other products to the various Primary and Secondary Schools in the State ;

(*b*) whether the Government requested the C. I. A. to provide funds to feed the childern in Primary Schools ;

(*c*) whether it is a fact that the entire school and its staff have become veritable kitchens and its staff whole time cooks to the neglect of teaching and that 'CARE' products are sold in the market by Head Masters and that prosecution is launched in several cases ;

(*d*) whether the Government would take steps to disband help from this 'CARE' and organise canteens entirely from Government funds ?

A.—SRI K. V. SHANKARA GOWDA (Minister for Agriculture and Education).—

(*a*) The CARE Organisation supplies articles of food to Nursery Schools, Balwadies and Primary Schools only and not to Secondary Schools. Milk Powder is not supplied to schools in this programme now.

(*b*) No.

(*c*) No. The midday meals programme provides necessary work experience and is also used to impart education in principles of nutrition, hygiene and sanitation. A few cases of misuse of food articles were discovered and the staff concerned were dealt with according to law.

(*d*) Government are already examining the question of providing midday meals from local resources.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, (ಇ) ಪ್ರಶ್ನೆಗೆ ಉತ್ತರವಾಗಿ ಮಧ್ಯಾಹ್ನ ಊಟದ ಕಾರ್ಯಕ್ರಮವು ಅವಶ್ಯಕ, ಕೆಲಸದ ಅನುಭವವನ್ನು ಒದಗಿಸುತ್ತದೆಂದು ಹೇಳಿದ್ದೀರಿ. ಅಂದರೆ ಅಡಿಗೆ ಮಾಡುವುದು, ಪಾತ್ರೆ ತೊಳೆಸುವ ಅನುಭವವನ್ನು ಮಕ್ಕಳಿಗೆ ಹೇಳಿಕೊಡಲಾಗುತ್ತದೆಂದು ಅರ್ಥವೆ ?

ಶ್ರೀ ಕೆ. ವಿ. ಶಂಕರಗೌಡ.—ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವುದನ್ನು ಕಲಿಸುವುದು, ಕಿಚನ್ ಗಾರ್ಡನ್‌ನಲ್ಲಿ ಎಲ್ಲರೂ ಒಟ್ಟಿಗೆ ಕೆಲಸ ಮಾಡುವುದನ್ನು ಕಲಿಸುವುದು, ಎಲ್ಲರೂ ಒಟ್ಟಿಗೆ ಸೇರಿಕೊಂಡು ವ್ಯವಹರಿಸುವುದು, ಇಂತಹ ಗುಣಗಳನ್ನು ಮಕ್ಕಳಲ್ಲಿ ಬೆಳೆಸುವುದು ಎಂದು ಅರ್ಥ.

ಶ್ರೀ ವಾಟಾಳ್ ನಾಗರಾಜ್.—ಈ ಕೇರ್ ಸಂಸ್ಥೆಗೆ ಸಿ. ಐ. ಎ. ಅವರ ಸಂಪರ್ಕವಿರುವುದರಿಂದ ಈಗ ಕೊಡತಕ್ಕ ಆಹಾರಪದಾರ್ಥಗಳನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸುವುದು ಸಾಧ್ಯವೇ ?

ಶ್ರೀ ಕೆ. ವಿ. ಶಂಕರಗೌಡ.—ಅದು ಬೇರೆ ಪ್ರಶ್ನೆ.

ಶ್ರೀ ಎಚ್. ಎನ್. ನಂಜೇಗೌಡ.—ಉತ್ತರದಲ್ಲಿ ಆಹಾರಪದಾರ್ಥಗಳನ್ನು ದುರುಪಯೋಗ ಮಾಡಿದ ಕೆಲವು ಸಂದರ್ಭಗಳನ್ನು ಪತ್ತೆಹಚ್ಚಲಾಗಿದ್ದು ಸಂಬಂಧಪಟ್ಟ ಸಿಬ್ಬಂದಿವರ್ಗದವರ ಮೇಲೆ ಕಾನೂನು ಮೇರೆಗೆ ಕ್ರಮವನ್ನು ಕೈಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಎಷ್ಟು ಇಂಥ ಸಂದರ್ಭಗಳನ್ನು ಪತ್ತೆಹಚ್ಚಿದ್ದೀರಿ, ಅದರ ಬಗ್ಗೆ ಎಷ್ಟು ಜನರ ಮೇಲೆ ಕ್ರಮವನ್ನು ಕೈಗೊಂಡಿದ್ದೀರಿ ?

Sri K. V. SHANKARA GOWDA.—Sir, instances are very rare; Only one per cent is misused and in how many cases it is misused—the figures are not available. If a separate question is put, I will get the information.

ಶ್ರೀ ಎಚ್. ಎನ್. ನಂಜೇಗೌಡ.—ಉತ್ತರ (ಈ) ಯಲ್ಲಿ ಸ್ಥಳೀಯ ಸಾಧನಸಂಪತ್ತುಗಳಿಂದ ಮಧ್ಯಾಹ್ನದ ಊಟಗಳನ್ನು ಒದಗಿಸುವ ವಿಷಯವನ್ನು ಸರ್ಕಾರದವರು ಈಗಾಗಲೇ ಪರಿಶೀಲಿಸುತ್ತಿರುವರು ಎಂದು ಹೇಳಿದ್ದೀರಿ. ಯಾವಾಗ ನೀವು ಈ ಕೇರ್ ಸಂಸ್ಥೆಯಿಂದ ಬೇಡುತ್ತಿದ್ದ ಭಿಕ್ಷೆಯನ್ನು ಕರಾರುವಾಕ್ಕಾಗಿ ನಿಲ್ಲಿಸುತ್ತೀರಿ, ಅದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಭಿಕ್ಷೆ ಬೇಡತಕ್ಕದ್ದು ಎಂಬ ಪದವನ್ನು ಉಪಯೋಗಿಸತಕ್ಕದ್ದು ಸರಿಯಲ್ಲ. ನಾವು ಏನೂ ಭಿಕ್ಷೆ ಬೇಡುತ್ತಾ ಇಲ್ಲ. ಎಲ್ಲಾ ಮುಂದುವರಿದ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳಿಗೆ ಸಹಾಯ ಮಾಡುತ್ತಿದೆ. ಅದರಲ್ಲಿ ತಪ್ಪೇನೂ ಇಲ್ಲ. ಆದ್ದರಿಂದ ಭಿಕ್ಷೆ ಎಂದು ಹೇಳತಕ್ಕದ್ದು ಸರಿಯಲ್ಲ.

ಶ್ರೀ ಕೆ. ಎಚ್. ತಮ್ಮಯ್ಯ.—ಒಬ್ಬರೇ ಉಪಾಧ್ಯಾಯರು ಇರತಕ್ಕ ಸ್ಕೂಲುಗಳಲ್ಲಿ ಎಲ್ಲಾ ತರಗತಿಗಳಿಗೆ ಪಾಠ ಹೇಳುವುದಕ್ಕೆ ಅವರಿಗೆ ಸಮಯವಿರುವುದಿಲ್ಲ. ಅಂಥದರಲ್ಲಿ ಅವರಿಗೆ ಇದನ್ನೂ ಹಚ್ಚಿದರೆ, ಇನ್ನೂ ತೊಂದರೆಯಾಗುತ್ತದೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಇದನ್ನು ಉಪಾಧ್ಯಾಯರು ಮಾಡಬೇಕೆಂದು ಇಲ್ಲ. ಸ್ಕೂಲು ಬೆಟರ್‌ಮೆಂಟ್ ಕಮಿಟಿ ಎಂದು ಇದೆ. ಆ ಕಮಿಟಿಯವರು ಇದಕ್ಕೆ ಏರ್ಪಾಟು ಮಾಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಈಗ ಹಂಚುತ್ತಿರುವ ಆಹಾರದ ಪ್ರಮಾಣವೆಷ್ಟು ?

ಶ್ರೀ ಕೆ. ವಿ. ಶಂಕರಗೌಡ.—ಮೊದಲು ಮೂರು ಔನ್ಸು ರವೆ ಕೊಡುತ್ತಿದ್ದರು. ಈಗ ಎರಡು ಔನ್ಸು ಸಿ ಎಸ್ ಎಂ ಗುಳಿಗೆಯನ್ನು ಕೊಡುತ್ತಿದ್ದಾರೆ.

Sri DIGAMBARA RAO B. KALMANKAR.—Supplementary to (c): does not Government think that the entire time of the school hours is consumed in this process of preparing meals, cooking, etc., and virtually no time is left for the education of the children ?

Sri K. V. SHANKARA GOWDA.—It is not correct. They will attend to that in leisure hours and the School Betterment Committee will look after it. It is not entirely correct that school hours are lost.

ಶ್ರೀ ಶರಣಗೌಡ ಇನಾಂದಾರ್.—(ಎ) ಗೆ ಉತ್ತರವಾಗಿ ಹೇಳಿದಂತೆ ಈಗ ಕೇರ್ ಆರ್ಗನೈಸೇಶನ್‌ನವರು ನೇರವಾಗಿ ಸ್ಕೂಲುಗಳಿಗೆ ಕೊಡುತ್ತಾರೋ, ಅಥವಾ ತಮ್ಮ ಮುಖಾಂತರ ಕೊಡುತ್ತಾರೋ ? ಮತ್ತು ಒಂದು ವರ್ಷಕ್ಕೆ ಇವರು ಅಂದಾಜು ಎಷ್ಟು ಎಂದು ಕೊಡುತ್ತಾರೋ ?

ಶ್ರೀ ಕೆ. ವಿ. ಶಂಕರಗೌಡ.—ಇದು ನೇರವಾಗಿ ಕೊಡುವುದಿಲ್ಲ. ನಮ್ಮ ಮುಖಾಂತರವೇ ಕೊಡುತ್ತಾರೆ. 1967 ನೇ ವರ್ಷದಲ್ಲಿ ಕೊಟ್ಟದ್ದು, ಅದರ ಬೆಲೆ 5 ಕೋಟಿ ರೂಪಾಯಿ ಯಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಂಥ ಕಾರ್ಯಕ್ರಮ ನಡೆಯುತಕ್ಕ ಕಡೆ ಯಾವುದಾದರೂ ಸ್ಕೂಲಿಗೆ ವಿದ್ಯಾ ಮಂತ್ರಿಯವರು ಹೋಗಿ ಭೇಟಿಕೊಟ್ಟು, ಏನು (ಸಿ) ಗೆ ಉತ್ತರವಾಗಿ ಹೇಳಿದ್ದೀರಿ, ಆ ರೀತಿ ವಿದ್ಯಾರ್ಥಿಗಳಿಗೆ ಅಥವಾ ಉಪಾಧ್ಯಾಯರಿಗೆ ಪ್ರಯೋಜನ ದೊರಕುತ್ತಿದೆಯೇ ಎಂದು ನೋಡಿದ್ದಾರೆಯೇ ? ಅಥವಾ ಅದರ ದುರುಪಯೋಗ ಏನಾದರೂ ನಡೆದಿದೆಯೇ ಎಂದು ಕಂಡು ಹಿಡಿದಿದ್ದಾರೆಯೇ, ಹಾಗೆ ನಡೆದಿದ್ದರೆ ಅದರ ಫಲಿತಾಂಶವೇನು ?

ಶ್ರೀ ಕೆ. ವಿ. ಶಂಕರಗೌಡ.—ಅಂಥದ್ದು ಎಷ್ಟೋ ಕಡೆ ನೋಡಿದ್ದೇನೆ. ಅಡಿಗೆ ಮಾಡಿ ಬಡಿಸಿದ್ದೇನೆ. ಅದರ ಅನುಭವ ಸಾಕಷ್ಟು ಇದೆ. ಇದರಿಂದ ಹೆಚ್ಚು ಪ್ರಯೋಜನವಾಗುತ್ತದೆ. ದುರುಪಯೋಗವಾಗುತ್ತಾ ಇಲ್ಲ. ಎಲ್ಲೋ ಕೆಲವು ಕಡೆ ದುರುಪಯೋಗವಾಗಿದೆ. ಅಂಥದ್ದರ ಮೇಲೆ ತೀವ್ರ ಕ್ರಮ ತೆಗೆದುಕೊಂಡಿದ್ದೇವೆ.

1-30 P.M.

ಶ್ರೀ ಪಿ. ಎನ್. ಪಾಟೀಲ್.—ಚಿಕ್ಕ ಮಕ್ಕಳು ಇದನ್ನು ಮಾಡಿದರೆ ಅವರ ಸ್ವಾಭಿಮಾನ ಹೆಚ್ಚುತ್ತದೆ ಎಂದು ಮಾಡುತ್ತಿದ್ದೀರಿ ಎಂದು ಹೇಳಿದಿರಿ. 5, 8 ಹಾಗೂ ಹತ್ತು ವಯಸ್ಸಿನ ಮಕ್ಕಳಿಗೆ ಈ ರೀತಿ ಊಟ ಕೊಡುವುದರಿಂದ ನಮ್ಮ ಸ್ವಾಭಿಮಾನ ಕಡಿಮೆಯಾಗಿ ಹೊರಗಡೆ ಹೋಗಿ ಭಿಕ್ಷೆ ಮಾಡುವಂತೆ ಆಗುತ್ತದೆ. ಆದುದರಿಂದ ಸರಕಾರ ಇದನ್ನು ನಿಲ್ಲಿಸಲು ಪ್ರಯತ್ನ ಮಾಡುತ್ತೀರಾ ?

Sri K. V. SHANKARA GODWA.—It is not a matter of information. It is a matter of opinion.

ಶ್ರೀ ಬಿ. ದೊಡ್ಡಬೋರೇ ಗೌಡ.—ಅಧಿಕಾರಿಗಳ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳುತ್ತಿದ್ದೀರಿ. ಯಾವ ಯಾವ ತಾಲ್ಲೂಕುಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಎಲ್ಲೆಲ್ಲಿ ಹಿಡಿದಿದ್ದೀರಿ ಮತ್ತು ಅವರ ಮೇಲೆ ಯಾವ ರೀತಿಯ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಕೆ. ವಿ. ಶಂಕರ ಗೌಡ.—ನಾನು ಆಗಲೇ ಉತ್ತರ ಹೇಳಿದೆ. ಇದರ ವಿವರಗಳು ಈಗ ನನ್ನಲ್ಲಿಲ್ಲ. ಬೇರೆ ಪ್ರಶ್ನೆ ಕೇಳಿದರೆ ಆಗ ವಿವರಗಳನ್ನು ಒದಗಿಸಬಹುದು.

ಶ್ರೀ ಹಂಜಿ ಶಿವಣ್ಣ.—ತರೀಕೆರೆ ತಾಲ್ಲೂಕಿನಲ್ಲಿ ಕೆಲವು ಕಡೆಗಳಲ್ಲಿ ದುರುಪಯೋಗವಾಗಿರುವುದನ್ನು ಜನರೇ ಹಿಡಿದು ಪೋಲೀಸಿನವರಿಗೆ ಹಿಡಿದುಕೊಟ್ಟರೂ ಕೂಡ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳದೇ ಹಾಗೇ ಬಿಟ್ಟು ಬಿಟ್ಟರು ! ಈಗಲಾದರೂ ಅಂತಹ ವಿವರಗಳನ್ನು ಕೊಟ್ಟರೆ ತೀವ್ರವಾದ ಕಾರ್ಯಕ್ರಮಗಳನ್ನು ತಿಳಿದುಕೊಳ್ಳುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಇದು ಸತ್ಯಕ್ಕೆ ದೂರವಾದ ಮಾತು.

ಶ್ರೀ ಶರಣಗೌಡ ಇನಾಂದಾರ್.—ಕೇರ್ ಸಂಸ್ಥೆಯಂತೆಯೇ ನಮ್ಮ ದೇಶದ ವಿದ್ಯಾರ್ಥಿಗಳಿಗಾಗಿ ರಷ್ಯಾ ದೇಶದಿಂದ ಏನಾದರೂ ಪದಾರ್ಥಗಳು ಬರುತ್ತಿವೆಯೇ ? ಹಾಗೆ ಬಂದಿದ್ದರೆ ಎಷ್ಟು ಮಟ್ಟಿನ ಸಹಾಯ ಬರುತ್ತಿದೆ ?

ಶ್ರೀ ಕೆ. ವಿ. ಶಂಕರಗೌಡ.—ರಷ್ಯಾದಿಂದ ನಮಗೆ ಯಾವ ಸಹಾಯವೂ ಬಂದಿಲ್ಲ.

ಶ್ರೀ ಹಂಜಿ ಶಿವಣ್ಣ.—ನಾನೇ ಹಿಡಿದು ಕೊಟ್ಟಿರುವ ಊರುಗಳ ಹೆಸರನ್ನು ಕೊಡುತ್ತೇನೆ. ಆ ಊರಿನ ಜನರೇ ಪೋಲೀಸಿನವರಿಗೆ ಹಿಡಿದು ಕೊಟ್ಟಾಗ ಅವರ ಮೇಲೆ ಏನೂ ಆಕ್ಷನ್ ತೆಗೆದುಕೊಳ್ಳದೇ ಹಾಗೇ ಬಿಟ್ಟು ಬಿಟ್ಟರು.

ಶ್ರೀ ಕೆ. ವಿ. ಶಂಕರ ಗೌಡ.—ತಾವೇ ಕಂಡು ನೋಡಿದ್ದನ್ನು ಹೇಳುತ್ತಿದ್ದೀರೋ ಇಲ್ಲವೇ ಬೇರೆ ಯಾರಾದರೂ ಕಂಡುಹಿಡಿದುದನ್ನು ಹೇಳುತ್ತಾರೋ ?

ಶ್ರೀ ಹಂಜಿ ಶಿವಣ್ಣ.—ಇದರ ಮೇಲೆ ಬೇಕಾದಷ್ಟು ಕರೆಸ್‌ಪಾಂಡೆನ್ಸ್ ಆಗಿವೆ. ಊರುಗಳ ವಿವರಗಳನ್ನು ಬೇಕಾದರೆ ನಾನು ಕೊಡುತ್ತೇನೆ.

Allotment of Stainless Steel quota

463. SRI H. SIDDAVEERAPPA (Harihar).—

Will the Minister for Finance, Planning and Commerce and Industries be pleased to state :—

(a) the persons to whom licences are issued for the allotment of Stainless Steel quota in Davanagere City ;

(b) how many of them were in that line of business previously and how many are new entrants in the field, their names may be furnished ;

(c) the quantity of stainless steel allotted to each one of them in Davanagere City from January 1967 to end of January 1968 ;

(d) how many of them have factories to manufacture utensils and other articles out of their allotment ?

A.—SRI A. P. APPANNA (Deputy Minister for Industries).—

(a) (1) M/s. Hombanna Rajappa Bethur Metal Merchant and Mfg., Vijayalakshmi Road, Davanagere City.

(2) M/s. H. Basavalingappa, Mfr., Barline Road, Davanagere City.

(3) M/s. Gowdara Gangadharappa, 1333, Chowkipet, Davanagere.

(4) M/s. Vardhamana Industries, Prop: V. I. Chalegere, P.B. No. 87, Davanagere City.

(5) M/s. Bellulli Murigappa and Sons, Bellulli Murigappa's Street, Davanagere City.

(b) All the above 5 units are reported to have been equipped for processing articles out of stainless steel sheets.

(c) The following units were allotted S. S. Sheets under direct Imports as well as under Barter Import from January 1967 to end of January 1968 :—

	66–67	*67–68*	*Barter AS. 64 Quota allotment released in 1967*
(1) M/s. H. R. Bethur Metal Mfg., Davanagere City.	2,535	...	0.95 M.T.
(2) M/s. Basavalingappa Mfr., Davanagere City.	2,535	...	0.95 M.T.
(3) M/s. Gowdara Gangadharappa, Davanagere City.	2,435	...	1.90 M.T.
(4) M/s. Vardhamana Industries, Davanagere City.	2,535	1,268	0.95 M.T.
(5) M/s. Bellulli Murigappa and Sons, Davanagere City.	2,535	...	0.95 M.T.

(SRI A. P. APPANNA)

(*d*) All the above five units are having factories and have registered for the end products.

SRI H. SIDDAVEERAPPA.—In answer to my question (*b*) it is stated that all the above 5 units are reported to have been equipped for processing articles out of stainless steel sheets. May I know whether it is an answer to my question?

ಶ್ರೀ ಎಂ. ನಾಗಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ ಕುಂದಾಪುರದಲ್ಲಿ 1965-66ರಲ್ಲಿ 13 ಅರ್ಜಿಗಳು ಪೆಂಡಿಂಗ್ ಇವೆಯೆಂದು ಹೇಳಿದ್ದೀರಿ. ಅದೇ ಸ್ಟೇಟ್‌ಮೆಂಟ್‌ನಲ್ಲಿ ಒಂದು ಅರ್ಜಿ ಮಂಜೂರಾಗಿ ಮತ್ತೊಂದು ರಿಜೆಕ್ಟ್ ಆಯಿತೆಂದು ಹೇಳಿದ್ದೀರಿ. ಅಂದರೆ 11 ಅರ್ಜಿಗಳು ಪೆಂಡಿಂಗ್ ಇವೆಯೆಂದು ಅರ್ಥ ಬರುತ್ತದೆ. 1965-66ರಿಂದ 11 ಅರ್ಜಿಗಳು ಪೆಂಡಿಂಗ್ ಇದ್ದರೆ ಸಾಧಾರಣ ವಾಗಿ 3 ವರ್ಷದಿಂದ ಬಾಕಿ ಇವೆಯೆಂದು ಅರ್ಥವಾಗುತ್ತದೆ. ಇದರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇಷ್ಟು ಅರ್ಜಿಗಳು ಆಫೀಸ್‌ನಲ್ಲಿಯೇ ಪೆಂಡಿಂಗ್ ಇವೆ ಎಂದು ಅರ್ಥವಲ್ಲ. ಕೆಲವು ಸಂದರ್ಭಗಳಲ್ಲಿ ಅಪೂರ್ಣವಾದ ಮಾಹಿತಿ ಕೊಟ್ಟಿದ್ದರೆ ಅರ್ಜಿಗಳನ್ನು ವಾಪಸ್ ಕಳಿಸಬೇಕಾಗುತ್ತದೆ. ಯಾವ ಯಾವ ಮಾಹಿತಿಗಳು ಬೇಕು, ಯಾವ ಯಾವ ಪರ್ಟಿಕ್ಯುಲರ್‌ಗಳು ಬೇಕೋ ಅವೆಲ್ಲಾ ಸಂಬಂಧಪಟ್ಟವರಿಂದ ಬರದಿರುವುದರಿಂದ ನಿಧಾನವಾಗುತ್ತಿದೆ.

ಉಪಾಧ್ಯಕ್ಷರು.—497ನೇಯ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳುತ್ತೇನೆ. Mr. Nanje Gowda, has been authorised to put question No. 498.

Construction of Quarters by the Housing Board, Tumkur

498 Sri H. N. NANJE GOWDA (Arkalgud) [On behalf of Sri B. P. GANGADHAR (Tumkur)].—

Will the Minister for Health and Housing be pleased to state :—

(*a*) the number of quarters constructed by the Housing Board in Tumkur Town;

(*b*) if no quarters are constructed, the reasons for the same ;

(*c*) whether they are aware that most of the officials have been put to hardships due to the non-availability of the quarters;

(*d*) what action Government proposes to take in this matter ?

A.—Sri K. PUTTASWAMY (Minister for Health and Housing).—

(*a*) Nil

(*b*) Suitable land for construction of houses has not been availabl so far.

(*c*) and (*d*) The Housing Board proposes to take up construction of some houses as soon as the land is secured.

ಶ್ರೀ ಎಚ್ ಎನ್. ನಂಜೇಗೌಡ.— ಸ್ವಾಮಿ, ಮನೆಗಳನ್ನು ನಿರ್ಮಿಸಲು ಈವರೆಗೆ ಸೂಕ್ತ ಜಮೀನು ದೊರೆತಿರುವುದಿಲ್ಲವೆಂದು ಹೇಳಿದ್ದೀರಿ. ತುಮಕೂರು ಮತ್ತು ಬೆಂಗಳೂರು ಮಧ್ಯಯಿರುವ ಕ್ಯಾತಸಂದ್ರದ ಬಳಿ ಬೇಕಾದಷ್ಟು ಜಮೀನು ಇದೆ. ಆ ಜಮೀನನ್ನು ಸ್ವಾಧೀನಪಡಿಸಿಕೊಂಡು ಮನೆಗಳನ್ನು ಕಟ್ಟಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಜಮೀನು ದೊರಕಿಸಿಕೊಳ್ಳುವುದಕ್ಕೆ ಕ್ರಮ ಅನುಸರಿಸುತ್ತಿಲ್ಲ. ಜಮೀನು ದೊರಕಿಸಿಕೊಡಬೇಕೆಂದು ಪುರಸಭೆಯವರಿಗೆ ಹೇಳುತ್ತಿದ್ದೇವೆ. ಪುರ ಸಭೆಯವರು ಜಮೀನು ಕೊಂಡುಕೊಟ್ಟರೂ ಸಹ ನಾವು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ. ಆದರೆ ಅವರು ಒದಗಿಸಿಕೊಟ್ಟಿಲ್ಲ. ನಾವು ಸಹ ಜಮೀನು ದೊರಕಿಸಿಕೊಳ್ಳುವ ವಿಚಾರದಲ್ಲಿ ತರದೂದಿನಲ್ಲಿದ್ದೇವೆ. ಬೇರೆ ಒಂದು ಜಮೀನಿನ ವಿಷಯದಲ್ಲಿ ಮಾತುಕತೆ ನಡೆಸುತ್ತಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ತುಮಕೂರಿನಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಬೇಕೆಂದು ಸ್ಕೀಮ್ ಇಟ್ಟುಕೊಂಡಿದ್ದೀರಿ, ಮತ್ತು ಈ ಬಗ್ಗೆ ಪ್ಲಾನ್ ಏನಾದರು ತಯಾರು ಮಾಡಿದ್ದೀರಾ ? ಮುನಿಸಿ ಪಾಲಿಟಿಯವರು ಎಷ್ಟು ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿದ್ದಾರೆ ?

ಶ್ರೀ ಕೆ. ಪುಟ್ಟಸ್ವಾಮಿ.—ಮುನಿಸಿಪಾಲಿಟಿಯವರು ಕಟ್ಟಿಸಿಕೊಡಿ ಎಂದು ಹೇಳುತ್ತಾರೆ, ಆದರೆ ಅವರು ಜಮೀನು ಒದಗಿಸಿಕೊಡದಿದ್ದರೆ ಕಟ್ಟಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್. ಐ. ಸಿ. ಫಂಡ್‌ನಿಂದ 21 ರೆಂಟಲ್ ಕ್ವಾರ್ಟರ್ಸ್ ಕಟ್ಟಿದ್ದೇವೆ. ಅಯಾ ಊರಿನಲ್ಲಿ ಎಷ್ಟು ಮನೆಗಳನ್ನು ಕಟ್ಟಿಸ ಬೇಕಾಗುತ್ತದೆ ಎಂಬ ಬಗ್ಗೆ ಅಂದಾಜನ್ನು ತಯಾರಿಸಿಲ್ಲಿ. ಎಲ್ಲಿ ಜಮೀನು ಸಿಗುತ್ತದೆಯೋ ಅಲ್ಲಿ ಮನೆಗಳನ್ನು ಕಟ್ಟಿಸುವುದಕ್ಕೆ ನಮ್ಮಲ್ಲಿ ಹಣವಿಲ್ಲದಿರುವುದರಿಂದ ಯಾವ ಯಾವ ಊರುಗಳಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಬೇಕೆಂಬ ವಿಷಯದಲ್ಲಿ ಇನ್ನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಎಂ.ಎಚ್. ಜಯಪ್ರಕಾಶ್‌ನಾರಾಯಣ್.—ತುಮಕೂರಿನಲ್ಲಿ ಮನೆಗಳನ್ನು ಕಟ್ಟಿಸಲು ಜಾಗ ಸಿಗಲಿಲ್ಲವೆಂದು ಹೇಳಿದಿರಿ. ಜಾಗ ದೊರಕಿಸಿಕೊಳ್ಳಲು ಯಾವ ರೀತಿ ಪರಿಶೀಲನೆ ನಡೆಸಿದ್ದೀರಿ ಮತ್ತು ಮುನಿಸಿಪಾಲಿಟಿಯವರು ರೆವಿನ್ಯೂ ಜಾಗವನ್ನು ಕೊಡಿಸುವುದಕ್ಕೆ ತಯಾರು ಇದ್ದರೂ ಸಹ ಸರ್ಕಾರದವರು ಹಣ ಒದಗಿಸದೇ ಇರುವುದು ಕಾರಣವಲ್ಲವೆ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹತ್ತಾರು ಪ್ರಶ್ನೆಗಳನ್ನು ಸೇರಿಸಿ ಹಾಕಿದ್ದಾರೆ. ಸಾಮಾನ್ಯವಾಗಿ ಮುನಿಸಿಪಾಲಿಟಿಯವರು ಜಾಗವನ್ನು ಒದಗಿಸಿಕೊಟ್ಟಿದ್ದರೆ ಮನೆಯನ್ನು ಕಟ್ಟಿಸುತ್ತಿದ್ದೆವು. ಮುನಿಸಿಪಾಲಿಟಿಯವರನ್ನು ಈ ಬಗ್ಗೆ ಪ್ರಾರ್ಥಿಸಿದಾಗ ಅವರು ನಿವೇಶನವನ್ನು ಒದಗಿಸಿಕೊಡದಿದ್ದರಿಂದ ನಾವೇ ಜಾಗವನ್ನು ಸ್ವಾಧೀನಪಡಿಸಿಕೊಳ್ಳುವ ವಿಷಯದಲ್ಲಿ ತರದೂದಿನಲ್ಲಿದ್ದೇವೆ. ಈ ಕಾರಣದಿಂದ ಗೃಹನಿರ್ಮಾಣ ಮಂಡಲಿಯವರು ಇದುವರೆಗೆ ಯಾವ ಮನೆಯನ್ನು ಕಟ್ಟುವುದಕ್ಕೂ ಸಹ ಸಾಧ್ಯವಿಲ್ಲ. ಯಾವ ಯಾವ ಊರಿನಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಬೇಕೆಂದು ನಿರ್ಧಾರ ಮಾಡುವುದಕ್ಕೆ ನಮ್ಮಲ್ಲಿ ಸಾಕಷ್ಟು ಹಣವಿಲ್ಲ. ಮೊದಲು ಎಲ್ಲಿ ಜಮೀನು ಸಿಗುತ್ತದೋ ಅಲ್ಲಿ ಮೊದಲು ಮನೆಗಳನ್ನು ಕಟ್ಟಿಸುತ್ತೇವೆ. ತುಮಕೂರು ಸಹ ಒಂದು ಪ್ರಾಮುಖ್ಯವಾದ ಸ್ಥಳವಾದ್ದರಿಂದ ಅಲ್ಲಿಯೂ ಕೂಡ ಜಾಗ್ರತೆ ಮನೆಗಳನ್ನು ಕಟ್ಟಿಸುವುದಕ್ಕೆ ಏರ್ಪಾಡು ನಡೆಯುತ್ತಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಪೌರಸಭೆಗಳಿಂದ ಸ್ಥಳವನ್ನು ಕೊಟ್ಟು ಕಂಟ್ರಾಕ್ಟರುಗಳು ಕೆಲಸಗಳನ್ನೇ ಮಾಡದೇ ಅಲ್ಲಿ ತಂದ ಸಾಮಾನುಗಳನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ಸರಕಾರದ ಗಮನಕ್ಕೆ ತಂದರೂ ಇದುವರೆಗೂ ಮನೆಗಳನ್ನು ಕಟ್ಟದೇ ಇರುವವರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಈಗಲಾದರೂ ಬೇಗನೆ ಮನೆಗಳನ್ನು ಇಂತಹ ಕಡೆಗಳಲ್ಲಿ ಕಟ್ಟಲು ಪ್ರಾರಂಭಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಹೊಸ ಪ್ರಶ್ನೆ. ಈಗ ಇದಕ್ಕೆ ಖಚಿತವಾಗಿ ಉತ್ತರ ಹೇಳುವುದಕೆ ಸಾಧ್ಯವಾಗಲಾರದು.

ಶ್ರೀ ಎಲ್. ಶ್ರೀಕಂಠಯ್ಯ.—ಮನೆಗಳನ್ನು ಕಟ್ಟುವುದಕ್ಕಾಗಿ ಹೌಸಿಂಗ ಬೋರ್ಡಿಗೆ ಕೆಲಸಗಳನ್ನು ವಹಿಸಿರುವುದೇನೋ ಒಳ್ಳೆಯದು. ಪ್ರಮುಖವಾದ ನಗರಗಳಲ್ಲಿ ಸಿಟಿ ಇಂಪ್ರೂವ್‌ಮೆಂಟು ಟ್ರಸ್ಟ್‌ಬೋರ್ಡು ಎಂದಿದೆ. ಇದು ಹತ್ತು ಸಾವಿರ ಪ್ರಜಾ ಸಂಖ್ಯೆಗಿಂತ ಮೇಲ್ಪಟ್ಟಿರುವ ನಗರಗಳಲ್ಲಿ ಎಂದರೆ ಮಂಡ್ಯ ಮುಂತಾದ ನಗರಗಳಲ್ಲಿ ಒಂದೊಂದು ಲೋಕಲ್ ಟ್ರಸ್ಟ್‌ಬೋರ್ಡ್ ಎಂದು ಮಾಡಿ ಅದರ ಮೂಲಕ ಮನೆಗಳನ್ನು ಕಟ್ಟುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹೇಳತಕ್ಕ ವಿಚಾರಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಆದರೂ ಒಂದು ವಿಚಾರ ಇಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಈಗಿರತಕ್ಕ ಪೌರಸಭೆಗಳಿಗೆ ಕಾನೂನು ಪ್ರಕಾರ ಆಯಾ ಪೌರಸಭೆಗಳವರು ಇಂಪ್ರೂವ್‌ಮೆಂಟು ಟ್ರಸ್ಟ್ ಬೋರ್ಡು ಎಂದು ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಇಂತಹ ಸಿಟಿ ಇಂಪ್ರೂವ್‌ಮೆಂಟು ಬೋರ್ಡು ನೇಮಕ ಮಾಡುವುದರಿಂದ ಆಯಾ ನಗರಗಳಲ್ಲಿ ಎಕ್ಸ್‌ಟೆನ್‌ಷನ್‌ಗಳನ್ನು ಮಾಡಬಹುದು. ಆದರೆ ಅವರುಗಳಿಗೆ ಮನೆಗಳನ್ನು ಕಟ್ಟುವುದಕ್ಕೆ ಹಣವೇ ಇಲ್ಲ. ಹೌಸಿಂಗು ಬೋರ್ಡಿನವರಿಗೇ ಮನೆಗಳನ್ನು ಕಟ್ಟಲು ಹಣ ಸಾಲದೇ ಇರುವಾಗ ಇಂತಹ ಸಿಟಿ ಇಂಪ್ರೂವ್‌ಮೆಂಟು ಟ್ರಸ್ಟ್ ಬೋರ್ಡನ್ನು ಮಾಡುವುದರಿಂದ ಈ ಪ್ರಶ್ನೆ ಪರಿಹಾರವಾಗುವುದಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ.—ತುಮಕೂರು ಬಳಿ ಮನೆಗಳನ್ನು ಕಟ್ಟಲು ಸ್ಥಳವನ್ನು ದೊರಕಿಸಿಕೊಳ್ಳಲು ತರದೂದು ಮಾಡುತ್ತಿದ್ದೇವೆಂದು ಹೇಳಿದಿರಿ. ಆ ಸ್ಥಳ ಯಾವುದು, ಎಷ್ಟು ಎಕರೆಗಳಿವೆ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರೇ ನನ್ನೊಡನೆ ಬಂದರೆ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಸರಕಾರದವರು ಹೌಸಿಂಗು ಬೋರ್ಡಿನವರು ಸ್ಥಳವನ್ನು ಅಕ್ವೈರು ಮಾಡಿಕೊಳ್ಳುವ ತರದೂದಿನಲ್ಲಿದ್ದಾರೆ ಎಂದು ಹೇಳಿದರು. ಇದರಲ್ಲಿ ಎಷ್ಟು ಮನೆಗಳನ್ನು ಕಟ್ಟಬೇಕೆಂದು ಮಾಡಿದ್ದೀರಿ ಮತ್ತು ಎಷ್ಟು ಜಾಗವನ್ನು ಅಕ್ವೈರು ಮಾಡಬೇಕೆಂದು ಇದೆ ? ಇದರ ಮಾಹಿತಿಗಳನ್ನು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಸುಮಾರು ಐವಾರು ಎಕರೆಗಳಷ್ಟು ಜಾಗವನ್ನು ನಮಗೆ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಆದರೆ ಇದನ್ನು ಖಾಸಗಿಯಾಗಿ ಕೊಂಡುಕೊಂಡರೆ ಅದರಿಂದ ನಮಗೆ

ಇದರ ಟೈಟಲ್ ಇತ್ಯಾದಿಗಳು ಎಫೆಕ್ಟೀವ್ ಆಗಿ ಬರುತ್ತೋ ಇಲ್ಲವೋ ಎನ್ನುವ ಸಂಶಯವಿರುವುದರಿಂದ ಅವರು ಕೊಡತಕ್ಕ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅಕ್ವಿಸಿಷನ್ ಆಕ್ಟ್ ಪ್ರಕಾರ ಕ್ರಮಜರುಗಿಸಬೇಕು ಎಂದು ಇದ್ದೇವೆ.

Mr. DEPUTY SPEAKER---Question No. 499, Member absent. Next question.

Mysoreans in Central Government Industries

500. Sri VATAL NAGARAJ (Chickpet).—

Will the Minister for Finance, Planning, Commerce and Industries be pleased to state:—

(*a*) whether it has come to the notice of Government that Mysoreans are not getting even the Class IV posts in the Central Government Industries ;

(*b*) the steps taken by them in this regard ?

A.— Sri RAMAKRISHNA HEGDE (Minister for Finance, Planning, Commerce and Industries).—

(*a*) The Government have received representations that Mysoreans are not getting employment in the Industries owned by the Government of India in the State.

(*b*) The State Government moved the Government of India to give preference in the recruitment to local people. In response to this, the Government of India have issued revised procedure of recruitment according to which preference is to be given to the local people in the matter of recruitment of unskilled workers.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿರುವ ಕೇಂದ್ರ ಸರಕಾರದ ಕೈಗಾರಿಕೆಗಳಲ್ಲಿ ಕನ್ನಡಿಗರನ್ನು ಕೆಲಸಕ್ಕೆ ತೆಗೆದುಕೊಳ್ಳುವುದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಇಲ್ಲಿ ಜನರಿಗೆ ಕೆಲಸವೇ ಸಿಗುತ್ತಿಲ್ಲ ಎನ್ನುವ ನಿರ್ಧಾರಕ್ಕೆ ಬಂದಿದ್ದಾರೆ. ಇದು ನಿಜವಲ್ಲ :

ಶ್ರೀ ಎಂ. ಎಸ್. ಕೃಷ್ಣನ್.—ಕೇಂದ್ರ ಕೈಗಾರಿಕೆಗಳು ಎಂದರೆ ಹೆಚ್.ಎ.ಎಲ್., ಬಿ. ಇ.ಎಲ್. ಬಿ. ಇ. ಎಂ. ಎಲ್., ಹೆಚ್. ಎಂ. ಟಿ., ಇತ್ಯಾದಿ ಕೈಗಾರಿಕೆಗಳಲ್ಲಿ ಎಷ್ಟೆಷ್ಟು ಜನ ಲೋಕಲ್ ಪೀಪಲ್‌ನ್ನು ತೆಗೆದುಕೊಂಡಿದ್ದೀರಿ ಎನ್ನುವ ವಿವರಗಳನ್ನು ಇಲ್ಲಿ ತಿಳಿಸುವುದಕ್ಕಾಗುತ್ತದೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—ವಿವರಗಳೆಲ್ಲಾ ಸರಕಾರದಲ್ಲಿದ. ಈಗ ನನ್ನ ಹತ್ತಿರ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಆಗ ವಿವರಗಳನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಬಿ. ಇ. ಎಂ. ಎಲ್. ಕಾರ್ಖಾನೆಯಲ್ಲಿ ಕನ್ನಡಿಗರಿಗೆ ಹೆಚ್ಚು ಪ್ರಾಶಸ್ತ್ಯ ಕೊಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಕಾರ್ಖಾನೆಗಳಲ್ಲಿ ಸ್ವಲ್ಪ ಹೆಚ್ಚು ಕನ್ನಡಿಗರಿಗೆ ನೌಕರಿ ಕ್ಕಿರಬಹುದು. ಕೆಲವು ಕಡೆಗಳಲ್ಲಿ ಸಿಕ್ಕದೇ ಇರಬಹುದು. ಆದರೆ ಎಲ್ಲಾ ಕಾರ್ಖಾನೆಗಳಲ್ಲಿಯೂ ಕನ್ನಡಿಗರಿಗೆ ಕೆಲಸಗಳೇ ಸಿಕ್ಕಿಲ್ಲ ಎಂದು ಹೇಳುವುದು ಸರಿಯಾಗಲಾರದು.

Sri C. K. RAJAIAH SETTY.—Has it come to the notice of the Government that the General Manager or the Appointing Authority, if, he comes from Kerala, more Kerala people will be appointed, if he is a Maharashtrian more Maharashtrians will be appointed, if he is a Tamilian, more Tamilnad people will be appointed, ignoring the interest of Mysoreans ? .

Sri RAMAKRISHNA HEGDE.—The General Manager is not the appointing Authority. Mostly, it is the Personnel Officer. In some of the Public Sector Industries, the personnel officers are Mysore Government servants. May be, where these personnel officers are from other States, they may be inclined to take people from their respective States. It is a human weakness but the Government of India has made a very clear policy statement. This was placed before the Parliament in 1960, which is absolutely clear and these public sector industries have to follow those principles.

ಶ್ರೀ ಬಿ. ದೊಡ್ಡ ಬೋರೇಗೌಡ.—ಮಂಡ್ಯ ಅಸಿಟೇಟ್ ಕೆಮಿಕಲ್ ಫ್ಯಾಕ್ಟರಿಯಲ್ಲಿ ಮೈಸೂರು ರಾಜ್ಯದ ಅಧಿಕಾರಿ ವರ್ಗದವರು ಎಷ್ಟು ಜನ ಇದ್ದಾರೆ, ಹಾಗು ಹೊರಗಿನವರು ಎಷ್ಟು ಜನ ಇದ್ದಾರೆ ಇದನ್ನು ತಿಳಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಕೊಡಬಲ್ಲೆ. ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಹಾಕಬೇಕು ಅಂದರೆ ಉತ್ತರ ಹೇಳುತ್ತೆನೆ.

Offices of the Commercial Taxes and Intelligence Section, Davanagere City

502. Sri H. SIDDAVEERAPPA (Harihar).—

Will the Minister for Finance, Planning, Commerce and Industries be pleased to state :—

(a) on what date the offices of the Commercial Taxes and Intelligence Section were transferred to the existing building on Poona-Bangalore Road within the Municipal limits of Davanagere City ;

(b) where it was housed earlier ;

(c) the reasons for transfer ;

(d) the rent per month fixed for the present building and the rent fixed to the previous building ;

(e) whether it has come to the notice of the Government that the present building selected is absolutely inconvenient to all concerned both to the Department and to the merchants as it is far away from the town ;

(f) whether it is not with a view to favour an individual who is the owner of the present building that this change is effected and thereby causing inconvenience to all :

(g) whether the present building is not located under insanitary factory surroundings ?

A.— Sri RAMAKRISHNA HEGDE (Minister for Finance, Planning, Commerce and Industries).—

(*a*) 30th December 1967.

(*b*) The offices were housed in the building owned by Sri Gurunathappa Bondade, House No. 234/1, Hadadi Road, Davangere

(*c*) It was required by the owner for his own use.

(*b*) Rent fixed for the present buliding is Rs. 560 p.m. The rent fixed for the previous building was Rs. 312 p.m.

(*e*) No.

(*f*) No.

(*g*) No.

Sri H. SIDDAVEERAPPA.—May I know what is the plinth area of the old building and the area of the present building in which that office has now been housed ?

Sri RAMAKRISHNA HEGDE.—I am sorry I do not have the exact information. But the plinth area of the present building is bigger than the old building.

Sri H. SIDDAVEERAPPA.—May I know who fixed the rent for this building ?

Sri RAMAKRISHNA HEGDE.—It is fixed by the P. W. D. Officers.

Sri H. SIDDAVEERAPPA.—May I know whether the building that you have now left over has now been taken on a rent of Rs. 1,000 per month although he was receiving Rs. 312 per month ?

Sri RAMAKRISHNA HEGDE.—I have no idea. May be, it was for this reason he wanted to have the Government Office shifted.

Sri H. SIDDAVEERAPPA.—Did he write to the Government that he wanted the building for himself ? I think he has never writtern.

Sri RAMAKRISHNA HEGDE.—He sent a legal notice to the Government that this building should be vacated.

Sri G. DUGGAPPA.—May I know whether the local Executive Engineer has furnished his opinion about the rental value of the building ?

Sri RAMAKRISHNA HEGDE.—It is only on the recommendation of the Executive Engineer that the rent was fixed.

ಶ್ರೀ ಎನ್. ಜಿ. ಹಾಲಪ್ಪ.—ಈ ಮನೆ ಮಾಲೀಕರಿಗೆ ಬೇರೆ ಕೆಲಸಕ್ಕಾಗಿ ಮನೆ ಇದೆಯೋ ಇಲ್ಲವೇ ಎನ್ನುವುದನ್ನು ವೆರಿಫೈ ಮಾಡಿದ್ದೀರಾ ? ಬೋನಾಫೈಡ್ ಡ್ವೆಲ್ಲಿಂಗ್ ಪರ್ಪಸಿಗೆ ಮನೆ ಬೇಕು ಎಂದು ಲೀಗಲ್ ನೋಟೀಸ್ ಕೊಟ್ಟಿದ್ದಾರೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—ತಮ್ಮ ಉಪಯೋಗಕ್ಕೆ ಬೇಕು ಮನೆ ಕೊಡಬೇಕು ಎಂದು ಹೇಳಿದ್ದಾರೆ.

ಶ್ರೀ ಎಚ್. ಶ್ರೀಕಂಠಯ್ಯ.—ರೆಂಟ್ ಫಿಕ್ಸ್ ಮಾಡುವಾಗ ಮುನಿಸಿಪಲ್ ರೆಂಟಲ್ ವ್ಯಾಲ್ಯುಯೇಷನ್ ಎಷ್ಟು ಫಿಕ್ಸ್ ಆಗಿದೆ ತಿಳಿಸುತ್ತೀರಾ ? ಪಿ.ಡಬ್ಲ್ಯು.ಡಿ. ಅಧಿಕಾರಿಗಳು ಎಷ್ಟು ಇರಬೇಕು ಎಂದು ತಿಳಿಸಿದ್ದಾರೆ ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*)

Name of Scheme	*Estimated cost*	*Area benefited*
	Rs.	acres.
(1) Kamasamudra	52,000	200
(2) Chikkanahalli	70,000	200
(3) Mulekalenahalli	68,000	220

(*c*) During 1965.

(*d*) No.

ಶ್ರೀ ಎಚ್. ಡಿ. ದೇವೇಗೌಡ.—1963ನೇ ಇಸವಿಯಲ್ಲಿ ನಾನು ಕಳಿಸಿದ್ದ ಚುಕ್ಕೆ ಗುರುತಿನ ಪ್ರಶ್ನೆ 1141 ಕ್ಕೆ ಉತ್ತರ ಕೊಡುತ್ತ ಈ ವಿಷಯ ಪರಿಶೀಲನೆಯಲ್ಲಿದೆ, ಅದು ಮಂಜೂರಾಗುವುದರ ಬಗ್ಗೆ ಕ್ರಮತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಈಗ ಕೇಳಿರುವ ಪ್ರಶ್ನೆಗೆ ಉತ್ತರ ಕೊಡುತ್ತ 1965ರಲ್ಲಿ ಮನವಿಗಳು ಬಂದಿವೆ ಎಂದು ಹೇಳಿದ್ದಾರೆ. ಇವೆರಡರಲ್ಲಿ ವ್ಯತ್ಯಾಸವಿರುವುದಕ್ಕೆ ಕಾರಣ ವೇನು ? 1963ರಲ್ಲಿ ಕೊಟ್ಟಂಥ ಉತ್ತರ ಸತ್ಯಕ್ಕೆ ದೂರವಾದುದೇ ಅಥವಾ ಸರಿಯೇ ಎಂಬುದನ್ನು ತಿಳಿಸುತ್ತಾರೆಯೇ ?

† ಶ್ರೀ ಆಲೂರು ಹನುಮಂತಪ್ಪ.—ಉತ್ತರದಲ್ಲಿ ಏನೂ ವ್ಯತ್ಯಾಸವಿಲ್ಲ. ಮಾನ್ಯ ಸದಸ್ಯರು ಈ ಕೆಲಸ ವಿಳಂಬವಾಗುತ್ತಿದೆ, ಬೇಗ ಮಂಜೂರಾಗಬೇಕು ಎನ್ನುವುದರ ಬಗ್ಗೆ 1965ರಲ್ಲಿ ಒಂದು ಪತ್ರವನ್ನು ಬರೆದರು. ಅದಕ್ಕೆ ಮೊದಲು ಆ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ಯೋಜನೆ ಆಗಬೇಕು ಎಂದು ಸಾರ್ವಜನಿಕರಿಂದ ಮತ್ತು ಮಾನ್ಯ ಸದಸ್ಯರಿಂದ ಸಲಹೆಗಳು ಬರುತ್ತಿದ್ದುವು.

ಶ್ರೀ ಎಚ್. ಡಿ. ದೇವೇಗೌಡ.—1963ರಲ್ಲಿ ಕೊಟ್ಟಿರುವ ಉತ್ತರದ ಪ್ರಕಾರ ಆ ಯೋಜನೆಯನ್ನು ಇನ್ನೂ ತೆಗೆದುಕೊಳ್ಳುವ ಸೂಚನೆಗಳು ಕಾಣುತ್ತಿಲ್ಲ. ಈ ಯೋಜನೆಯನ್ನು ಬೇಗ ಮಂಜೂರು ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇದೆಯೇ ಎನ್ನುವುದನ್ನು ತಿಳಿಸುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಸರ್ಕಾರಕ್ಕೆ ತೀವ್ರವಾದ ಆಸಕ್ತಿ ಇದೆ. ಅದಕ್ಕೆ ಬೇಕಾದ ಹಣ ಬೇಕು. ಇಂಥ ಯೋಜನೆಗಳನ್ನು ತೆಗೆದುಕೊಂಡರೆ ಅವು ಫಲಕಾರಿಯಾಗುತ್ತವೆಯೇ, ಫಲಪ್ರದವಾಗುತ್ತವೆಯೇ ಎನ್ನುವ ವಿಚಾರದಲ್ಲಿ ಪ್ರಯೋಗಾರ್ಥ ಪರಿಶೀಲನೆಗಳು ನಡೆಯುತ್ತ ಇವೆ. ಈ ಯೋಜನೆಗಳಿಗೆ ಕೇಂದ್ರದಿಂದ ಬಹಳ ತ್ವರಿತವಾಗಿ ಹಣವನ್ನು ನಿರೀಕ್ಷೆ ಮಾಡುತ್ತ ಇದ್ದೇವೆ. ಇತ್ತೀಚೆಗೆ ಲೋಕಸಭೆಯಲ್ಲಿ ಕೇಂದ್ರ ಸರ್ಕಾರದ ಆಹಾರ ಮತ್ತು ವ್ಯವಸಾಯ ಮಂತ್ರಿಗಳು ಒಂದು ಭಾಷಣದಲ್ಲಿ, ರಾಜ್ಯ ಸರ್ಕಾರಗಳಿಗೆ ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಕೊಡಬೇಕು ಎನ್ನುವ ವಿಷಯದಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಎಷ್ಟು ಹಣ ಕೇಂದ್ರದಿಂದ ಬರುತ್ತದೆ ಎನ್ನುವುದನ್ನು ನೋಡಿಕೊಂಡು ಖಚಿತವಾಗಿ ಒಂದು ಅಭಿಪ್ರಾಯಕ್ಕೆ ಬರುವ ನಿರೀಕ್ಷೆ ಇದೆ. ಕೇಂದ್ರದಿಂದ ಹಣ ಬಂದಮೇಲೆ ಈ ಯೋಜನೆಗಳನ್ನೆಲ್ಲ ಅತ್ಯಾವಶ್ಯಕವಾಗಿ ಮಂಜೂರು ಮಾಡಬೇಕು ಎಂದು ಸರ್ಕಾರಕ್ಕೆ ಆಸಕ್ತಿ ಇದೆ.

8–30 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—31 ಯೋಜನೆಗಳನ್ನು ಕೇಂದ್ರ ಸರಕಾರ ಮಂಜೂರು ಮಾಡುವ ಸ್ಥಿತಿಯಲ್ಲಿದ್ದರೂ ಕೂಡ ಮಂಜೂರಾತಿಗೆ ಕಳಿಸಿರಲಿಲ್ಲವೆಂದು ನನಗೆ ತಿಳಿದು ಬಂದಿದೆ. ಏಕೆ ಮಂಜೂರಾತಿಗೆ ಕಳಿಸಲಿಲ್ಲ ? ಈಗಲಾದರೂ ಕೇಂದ್ರ ಸರಕಾರಕ್ಕೆ ಬರೆದು ಮಂಜೂರು ಮಾಡಿಸಲು ಸಾಧ್ಯವೇ ?

† Indicates that the remarks or speeches have not been revised by the member concerned

ಶ್ರೀ ರಾಮಕೃಷ್ಣ ಹೆಗಡೆ.—ಮುನಿಸಿಪಲ್ ಅಸೆಸ್ಸಮೆಂಟಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—1947ರಲ್ಲಿ ರೆಂಟಲ್ ವ್ಯಾಲ್ಯೂಯೇಷನ್ ಏನು ಇತ್ತು?

[*No Answer*]

ಶ್ರೀ ಎಂ. ನಾಗಪ್ಪ.—ದಾವಣಗೆರೆಯಲ್ಲಿ ಅವರಿಗೆ ಎಂಟು ಮನೆಗಳು ಇವೆ ಎನ್ನುವುದು ತಮಗೆ ಗೊತ್ತಿದೆಯೇ? ಬೇರೆ ಮನೆ ಇರುವಾಗ ಪರ್ಸನಲ್ ವಾಸಕ್ಕೆ ಮನೆ ಏತಕ್ಕೆ ಬೇಕಾಯಿತು?

Mr. DEPUTY SPEAKER.—How does it arise?

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಉಪಾಧ್ಯಕ್ಷರು.—ಅದು ಇದಕ್ಕೆ ಸಂಬಂಧವಿಲ್ಲ. ಸಂಬಂಧವಿರುವ ಪ್ರಶ್ನೆ ಕೇಳಬೇಕು.

ಶ್ರೀ ಎಲ್. ಶ್ರೀಕಂಠಯ್ಯ.—ಇದು ನಾಟ್ ರೆಲೆವಂಟ್ ಅಂದರೆ ನನಗೆ ಅದು ಅರ್ಥವಾಗುವುದಿಲ್ಲ.

Mr. DEPUTY SPEAKER.—It does not arise.

Sri L. SRIKANTAIAH.—May I know what was the municipal assessment of the building and on what basis was the rent fixed if not on the municipal assessment?

Sri RAMAKRISHNA HEGDE.—I cannot give that information now. I want notice, but one thing is very clear because the Hon'ble member Sri Siddaveerappa just now stated this is an old building where the Commercial Tax Offices were located before and that it has been now rented to somebody on a monthly rent of Rs. 1,000 or so. The rent has been fixed strictly in accordance with the recommendation made by the local Executive Engineer. I do not know what exactly is the assessment made by the municipal authorities.

ಶ್ರೀ ಎಂ. ನಾಗಪ್ಪ.—ಶ್ರೀ ಗುರುನಾಥಪ್ಪ ಬೊಂಡಾಡೆ ಅವರಿಗೆ ಎಷ್ಟು ಮನೆಗಳಿವೆ ಎನ್ನುವುದನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದೀರಾ ಎಂದು ಕೇಳಿದ್ದಕ್ಕೆ ಉತ್ತರ ಬಂದಿಲ್ಲ, ಸ್ವಾಮಿ. ಅದಕ್ಕೆ ಉತ್ತರ ಕೊಡಿಸಬೇಕು.

ಉಪಾಧ್ಯಕ್ಷರು.—ಬೇರೆ ಪ್ರಶ್ನೆಯನ್ನು ಕರೆದಾಗಿದೆ. ತಾವು ಬರೆದು ಕಳುಹಿಸಿ. ಉತ್ತರವನ್ನು ನಿಮಗೆ ತಿಳಿಸುವ ವ್ಯವಸ್ಥೆ ಮಾಡುತ್ತೇನೆ.

Lift Irrigation Schemes in Holenarasipur Taluk

503. **Sri H. D. DEVEGOWDA** (Holenarasipur).—

Will the Minister for Public Works be pleased to state :—

(*a*) whether the estimates have been prepared for Lift Irrigation Scheme at (1) Kamasamudra, (2) Chikkenahalli and (3) Mulekalenahalli Villages in Holenarasipur Taluk.

(*b*) the estimated cost of each Scheme and the area going to be benefited by each Scheme;

(*c*) when the representation was received by the Government to sanction the same;

(*d*) whether the Government would take necessary steps to sanction these estimates this year?

ಶ್ರೀ ಅಲೂರು ಹನುಮಂತಪ್ಪ.—ಕ್ರ್ಯಾಷ್ ಪ್ರೋಗ್ರಾಂ ಪ್ರಕಾರ ಕೆಲವು ಯೋಜನೆಗಳು ಮಂಜೂರಾಗಿವೆ. ಅದರಲ್ಲಿ ಈ ಜಿಲ್ಲೆಯ ಕೆಲವು ಕೂಡ ಮಂಜೂರಾಗಿರಬಹುದು, ತಕ್ಷಣ ಅದನ್ನು ಖಚಿತವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಯೋಜನೆಗಳನ್ನು ರಾಜ್ಯ ಸರಕಾರವೇ ಮಂಜೂರು ಮಾಡಬೇಕೆಂಬ ಅಭಿಪ್ರಾಯವನ್ನಿಟ್ಟುಕೊಂಡಿರುವುದರಿಂದ ಅವನ್ನು ಕೇಂದ್ರ ಸರಕಾರಕ್ಕೆ ಕಳಿಸಬೇಕಾಗಿಲ್ಲ.

ಶ್ರೀ ಎಚ್. ಡಿ ದೇವೇಗೌಡ.—ಮಂಜೂರುಮಾಡಬೇಕೆಂದು ಸರಕಾರಕ್ಕೆ ಯಾವಾಗ ಮನವಿ ಬಂತು ಎಂದು ಕೇಳಿರುವುದಕ್ಕೆ 1965ರಲ್ಲಿ ಎಂದು ಹೇಳಿ ಮಂಜೂರುಮಾಡಲು ಈ ಸಲ ತಕ್ಕ ಕ್ರಮ ಕೈಕೊಳ್ಳುವುದಿಲ್ಲ ಎಂದು ಉತ್ತರ ಕೊಡಲಾಗಿದೆ. ಖಂಡಿತವಾಗಿ ತೆಗೆದುಕೊಳ್ಳುವುದಾಗಿ ಹೇಳಿರ ಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.(ಮುಖ್ಯಮಂತ್ರಿಗಳು).—ಈ ವರ್ಷ ಅಜ್ಞರಾಗುತ್ತಾ ಬಂದಿರುವುದರಿಂದ ಹಾಗೆ ಹೇಳಿದ್ದಾರೆ. Let me make it quite clear that the Government is extremely anxious to see that these lift irrigation schemes are taken up as far as possible. Not only what have been sanctioned by the Central Government, but we are also thinking of taknig up these schemes Hassan District is going to receive a very large amount of consideration at the hands of Government. Let me assure my friend and others that lift irrigation is a must in this State. Subject to the condition that we get sufficient funds, we are going to take them up as early as possible.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಏನೊಂದು ಈಗ ಆಶ್ವಾಸನೆ ಕೊಟ್ಟರು ಅದಕ್ಕೆ ನಾನು ಅಭಾರಿಯಾಗಿದ್ದೇನೆ. ಅವರು ಜನರಲ್ಲಾಗಿ ಹಾಸನ ಜಿಲ್ಲೆಯಲ್ಲಿ ಕೆಲವು ಯೋಜನೆಗಳನ್ನು ತೆಗೆದುಕೊಳ್ಳುವುದನ್ನು ಸರಕಾರ ಆಲೋಚನೆಮಾಡುವುದೆಂದು ಹೇಳಿದ್ದಾರೆ. ನಾನು ಕೇಳಿರುವ 3 ಯೋಜನೆಗಳಿಂದ 200 ರಿಂದ 220 ಎಕರೆಗಳವರೆಗೆ ಪ್ರಯೋಜನ ಪ್ರತಿ ಯೋಜನೆಯಿಂದ ಆಗುತ್ತದೆ. ಕಾಸ್ಟ್ ಪರ್ ಎಕರ್ 230 ರೂಪಾಯಿ, 240 ರೂಪಾಯಿ 250 ರೂಪಾಯಿ ಆಗುವದು ಎಮೇಲೆ ಟೆಕ್ನಿಕಲ್ ಫೀಜಬಿಲಿಟಿ ವಿಚಾರ ಮಾಡಲಾಗಿದೆ. ಬೇರೆ ಯಾವಕಾರಣ ವನ್ನೂ ಹೇಳದೆ ಈ ವರ್ಷ ಈ ಯೋಜನೆಗಳನ್ನು ಮಂಜೂರುಮಾಡುವ ವಿಚಾರದಲ್ಲಿ ಖಚಿತವಾಗಿ ಭರವಸೆ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಆಫೀಸಿಗೆ ಬಂದು ಮಾತನಾಡಿ ವಿಚಾರ ವಿಶದವಾಗಿ ತಿಳಿಸಿದರೆ ಮಾಡಬಹುದು, ಇದು ಫೀಜಬಲ್ ಎಂದು ಕಾಣುತ್ತದೆ.

Untouchability among Converted Christains

504. Sri J. P. SARWESH (Serum).—

Will the Minister for Social Welfare be pleased to state :—

(*a*) whether the Government is aware that in rural areas the converted Christians also suffer from the Stigma of untouchability ;

(*b*) if not whether a committee would be appointed to go into this question ?

A.—Sri G. NARAYANA GOWDA (Minister for Social Welfare).—

(*a*) No.

(*b*) The question does not arise.

Sri J. P. SARWESH.—To my question whether particularly those Christians who are converted from Scheduled Castes are subjected to the stigma of untouchability in almost all the villages of the State and whether the Government is aware of that, the reply is 'No'. Will Government kindly consider to appoint a Committee to go into this problem ?

†Sri G. NARAYANA GOWDA.—We have given a definite reply because we have received definite information that there is no such stigma.

Sri P. F. D'MELLOW.—With due respect to the Minister, in reply to a supplementary on a similar question a few days ago he was pleased to concede the possibility of some such disability. In view of that fact will Government appoint a Committee of this House to go into this question because this question has been coming up very often ? While we admit the necessity of the Government of Mysore to follow the all-India pattern, will Government appoint such a Committee of the members of this House if only to disabuse the public mind that there is such a stigma ?

Sri G. NARAYANA GOWDA.—If at all a Committee is to be appointed, it must be appointed by the Government of India and not by the State Government.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಅಸ್ಪೃಶ್ಯತೆ ರಾಷ್ಟ್ರಕ್ಕೆ ಅಂಟುಕೊಂಡಿರುವ ಜಾಡ್ಯ, ಈ ಜಾಡ್ಯವನ್ನು ನಿವಾರಣೆ ಮಾಡುವುದಕ್ಕೆ ಮೈಸೂರು ಸರಕಾರದವರು ಗ್ರಾಮಾಂತರಗಳಲ್ಲಿ ಕೈಕೊಂಡಿರುವ ಕಾರ್ಯಕ್ರಮ ಯಾವುದು ?

ಶ್ರೀ ಜಿ. ನಾರಾಯಣಗೌಡ.—ಅದಕ್ಕೂ ಈ ಪ್ರಶ್ನೆಗೂ ಸಂಬಂಧವಿಲ್ಲ. ಒಂದು ವೇಳೆ ಬೇರೆ ಪ್ರಶ್ನೆ ಹಾಕಿದರೆ ತಿಳಿಸುತ್ತೇನೆ ಮತ್ತು ಈಗಾಗಲೇ ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ.

Sri G. DUGGAPPA.—In answer to (*a*), the reply given is 'No'. If it is brought to the notice of the Government that Christians also suffer from the Stigma of untouchability, may I know whether they would take immediate steps to see that these things are put an end to ?

Sri G. NARAYANA GOUDA.—It will be got examined.

ಶ್ರೀ ಎಂ. ಎಸ್. ಕೃಷ್ಣನ್.—ಆದಿದ್ರಾವಿಡರು ಮತ್ತು ಆದಿಕರ್ಣಾಟಕರು ಕನ್‌ವರ್ಟ್ ಆಗಿದ್ದಾರಲ್ಲಾ ಅವರನ್ನು ಕ್ರಿಶ್ಚಿಯನ್‌ರು ಅಂತ ಪರಿಗಣಿಸುತ್ತೀರಾ ಅಥವಾ ಷೆಡ್ಯೂಲ್ ಕ್ಯಾಸ್ಟ್‌ನವರು ಅಂತ ಪರಿಗಣಿಸುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ಕನ್‌ವರ್ಟ್ ಆದಮೇಲೆ ಕ್ರಿಶ್ಚಿಯನ್‌ರು ಅಂತಲೇ ಪರಿಗಣಿಸುವುದು.

Sri DIGAMBAR RAO B. KALMANKAR.—Will Government take steps to recommend this matter to the Central Government ?

Sri G. NARAYANA GOWDA.—There is no necessity.

Sri J. P. SARWESH.—If it is found true that they also suffer from the Stigma of untouchability, will Government at least give educational safeguards to them also ?

Sri G. NARAYANA GOWDA.—It is an hypothetical question.

Construction of Tanks in Lingasugur Taluk

505. Sri K. SANGAN GOWDA (Lingasugur).—

Will the Minister for Public Works be pleased to state :—

(*a*) whether the Government has received any representation to construct the following tanks in Lingasugar Taluk, Raichur District ;

(i) Mattur Tank

(ii) Ulemeshwar Tank

(iii) Bommanahally Tank

(*b*) the action taken by Government in this regard ;

(*c*) whether Hire-Nagnoor tank, Lingasugur Taluk, Raichur District, will be completed by the end of this year, what was the schedule time fixed for completion of this tank?

A.—ALUR HANUMANTHAPPA (Deputy Minister for Minor Irrigation).—

(*a*) Yes.

(*b*) Necessary investigation has been made regarding the construction of tank at Mattur.

Survey work of Ulemeshwar tank is under progress.

The Bommanahally tank is yet to be investigated.

(*c*) Yes. It is programmed to be completed before June, 1968.

The schedule time for completion as per agreement was before 15-6-1966.

ಶ್ರೀ ಕೆ. ಸಂಗನಗೌಡ.—ಮತ್ತೂರು ಟ್ಯಾಂಕ್ ಬಗ್ಗೆ ಇನ್‌ವೆಸ್ಟಿಗೇಷನ್ ಪೂರ್ಣವಾಗಿದೆ ಎಂದು ಹೇಳಿದ್ದೀರಿ. ಎಸ್ಟಿಮೇಟ್ ಕಾಸ್ಟ್ ಎಷ್ಟು ಮತ್ತು ನೀರಾವರಿಯಾಗತಕ್ಕ ಪ್ರದೇಶ ಎಷ್ಟು? ಅದೇ ರೀತಿ ಹಿರೇನಾಗನೂರು ಟ್ಯಾಂಕ್‌ಗೆ ಎಸ್ಟಿಮೇಟ್ ಎಷ್ಟು ಮತ್ತು ನೀರಾವರಿ ಎಷ್ಟಾಗುತ್ತದೆ ?

†ಶ್ರೀ ಆಲೂರು ಹನುಮಂತಪ್ಪ.—ಮತ್ತೂರು ಟ್ಯಾಂಕ್‌ಗೆ ಎರಡು ಲಕ್ಷ 50 ಸಾವಿರ ರೂಪಾಯಿ ಅಂದಾಜಾಗಿದೆ. 250 ಎಕರೆ ನೀರಾವರಿಯಾಗುತ್ತದೆ. ಅದು ಈಗಾಗಲೇ ಮಂಜೂರಾಗಿದೆ. ಉಲಮೇಶ್ವರ ಟ್ಯಾಂಕ್‌ನ ಇನ್‌ವೆಸ್ಟಿಗೇಷನ್ ಆಗಬೇಕಾಗಿದೆ. ಬೊಮ್ಮನಹಳ್ಳಿ ಟ್ಯಾಂಕ್‌ದ್ದೂ ಕೂಡ ಇನ್‌ವೆಸ್ಟಿಗೇಷನ್ ಆಗಬೇಕಾಗಿದೆ.

ಶ್ರೀ ಕೆ. ಸಂಗನಗೌಡ.—ಹಿರೇ ನಾಗನೂರು ಟ್ಯಾಂಕ್ ಬಗ್ಗೆ ಎಷ್ಟು ಖರ್ಚಾಗುತ್ತದೆ? ಮತ್ತು ಈಗ ಖರ್ಚಾದ ಹಣ ಎಷ್ಟು? ಈಗ ಕೆಲಸ ಏನಾಗಿದೆ? ಅದು 1966ನೇ ಇಸವಿಯಲ್ಲೆ ಮುಗಿಯ ಬೇಕಾದುದು ಇದ್ದು ಎರಡು ವರ್ಷ ವಿಳಂಬವಾಗುವುದಕ್ಕೆ ಕಾರಣವೇನು ? ಕಂಟ್ರಾಕ್ಟುದಾರರ ತೊಂದರೆಯೇನಾದರೂ ಇದೆಯೇ? ಅದನ್ನು ನಿವಾರಣೆ ಮಾಡಲು ಪ್ರಯತ್ನ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಈ ಕೆಲಸದ ಬಗ್ಗೆ ಈಗಾಗಲೆ ಒಂದು ಲಕ್ಷದ 49 ಸಾವಿರದ 769 ರೂಪಾಯಿ ಖರ್ಚಾಗಿದೆ. 1966ನೇ ಜೂನ್‌ಗೆ ಮುಗಿಯಬೇಕಾಗಿತ್ತು, ಕಂಟ್ರಾಕ್ಟುದಾರರು ಸ್ವಲ್ಪ ನಿಧಾನ ಮಾಡಿದ್ದರಿಂದ 1968ನೇ ಜೂನ್‌ಗೆ ಈ ಕಾರ್ಯ ಮುಗಿಯುತ್ತಾ ಇದೆ.

ಶ್ರೀ ಪಿ. ಎನ್. ಪಾಟೀಲ್.—ಎರಡು ಲಕ್ಷಕ್ಕಿಂತ ಹೆಚ್ಚು ಖರ್ಚಾಗಿ, 250 ಎಕರೆ ನೀರಾವರಿ ಯಾಗಬಹುದು ಎಂದು ಉತ್ತರ ಕೊಟ್ಟಿರಿ. ಎರಡು ಲಕ್ಷ ರೂಪಾಯಿಗಳನ್ನು ಹಾಳು ಮಾಡುವುದಕ್ಕಿಂತ ಬಾವಿ ತೆಗೆದು ಲಿಫ್ಟ್ ಇರಿಗೇಷನ್ ಸ್ಕೀಂ ಮಾಡಿದ್ದರೆ 50 ಸಾವಿರ ರೂಪಾಯಿಗಳಲ್ಲೇ ಆಗುತ್ತಾ ಇರಲಿಲ್ಲವೇ ?

ಶ್ರೀ ಅಲೂರು ಹನುಮಂತಪ್ಪ.—ಎಲ್ಲಾ ಕಡೆಗಳಲ್ಲೂ ಬಾವಿಗಳಿಂದ ಪ್ರಯೋಜನವಾಗುವುದಿಲ್ಲ. ಕೆರೆ ಎಲ್ಲಿ ಆಗಬೇಕೋ ಅಲ್ಲಿ ಅದು ಆಗಲೇಬೇಕಾಗುತ್ತದೆ. ಯಾವ ಯಾವ ಪ್ರದೇಶದಲ್ಲಿ ಬಾವಿ ಆಗಬೇಕೋ ಅದಕ್ಕೆ ಲ್ಯಾಂಡ್ ಡೆವಲಪಮೆಂಟ್ ಬ್ಯಾಂಕ್‌ನಿಂದ ಹೆಚ್ಚು ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡಿದೆ.

ಶ್ರೀ ಎಂ. ನಾಗಪ್ಪ.—ಹಿರೇನಾಗನೂರು ಟ್ಯಾಂಕ್ 1966ನೇ ಇಸವಿಯಲ್ಲಿ ಮುಗಿಯಬೇಕಾಗಿತ್ತು, ಒರಿಜಿನರ್ ಎಸ್ಟಿಮೇಟ್ ಪ್ರಕಾರ ಆಗದೆ ಇದ್ದು ರಿವೈಸ್ಡ್ ಎಸ್ಟಿಮೇಟ್ ಆಗಿದ್ದ ಪಕ್ಷದಲ್ಲಿ ಅದರ ಮೊಬಲಗು ಎಷ್ಟು ?

ಶ್ರೀ ಅಲೂರು ಹನುಮಂತಪ್ಪ.—ರಿವೈಸ್ಡ್ ಎಸ್ಟಿಮೇಟ್ ಆಗಿಲ್ಲ, ಅದಕ್ಕೆ ಎಸ್ಟಿಮೇಟ್ ಆಗಿದ್ದೇ ಲಕ್ಷದ 49 ಸಾವಿರ ಚಿಲ್ಲರೆ ರೂಪಾಯಿ.

Tenders for construction of different components of Harangi Reservoir Project

606. Sri H. N. NANJE GOWDA (Arkalgud).—

Will the Minister for Public Works be pleased to state :—

(a) the number of times that tenders were called for the construction of the different components of Harangi Reservoir Project (the date of tenders, the number of contractors who tendered, the aggregates of each tender amount as compared with the estimated cost may kindly be given);

(b) whether the tenders were processed and decisions taken ;

(c) whether there were occasions when tenders were postponed from date to date and if so, the reasons therefor ?

A.—Sri VEERENDRA PATIL (Minister for Public Works).—

(a) (1) Twice, the First tender was for the work of foundation excavation of masonry portion of Dam from Ch. 450 to Ch. 1800 and appurtenant works like tail channel and wing walls, invited under Chief Engineer, I.P. (defunct) Notification No. HRG/TND/TAI/2051-56 dated 20th January 1966.

(i) Estimated cost put to tender.	Rs. 11,00,000
(ii) No. of contractors who had tendered for	Three.
(iii) Tendered amount	15,76,517
	17,60,049
	22,60,976

(2) The second tender was for the work of construction of Dam across Harangi River including overflow, non-overflow portions, training walls for flanks near Hudgur Village, Somwarpet Taluk, Coorg District, called for under Chief Engineer, Irrigation (South) Office Notification No. DRP TND/HRG/67-68/1827 dated 23rd September 1967.

(i) Estimated cost ...	2,86,85,597
(ii) No. of contractors who have tendered for	12

(SRI VEERENDRA PATIL)

(*b*) Decision has been taken on first tender. Regarding second tenders the tenders are under study.

(*c*) The last date for the receipt of tenders in respect of 2nd tender, was extended from 22nd November 1967 to 8th January 1968, and finally to 8th February 1968 as the tender papers had to be based on the recent designs and Estimates.

ಶ್ರೀ ಎಚ್. ಎನ್. ನಂಜೇಗೌಡ.—ಇನ್ನೂ ಎರಡನೇ ಟೆಂಡರ್ ಬಗ್ಗೆ ತೀರ್ಮಾನ ತೆಗೆದು ಕೊಂಡಿಲ್ಲ ಎಂದು ಹೇಳಿದ್ದೀರಿ. ಏನಾದರು ಕಂಟ್ರಾಕ್ಟ್‌ದಾರರು ಬಂದು ತಮ್ಮನ್ನು ನೋಡಿ ಮುಂದೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಮಾಡಿದ್ದೀರಾ?

†ಶ್ರೀ ವೀರೇಂದ್ರ ಪಾಟೀಲ್.—ಕಂಟ್ರಾಕ್ಟ್‌ದಾರರ ಜೊತೆಯಲ್ಲಿ ಮಿನಿಸ್ಟರ್ ಮಾತನಾಡುವ ಪ್ರೊಸೀಜರ್ ಇಲ್ಲ. ಚೀಫ್ ಇಂಜಿನಿಯರ ಆಫೀಸಿನಲ್ಲಿ ಟೆಂಡರ್‌ನ್ನು ಸ್ಕ್ರೂಟಿನಿ ಮಾಡುತ್ತಾರೆ, ಚೀಫ್ ಇಂಜಿನಿಯರು ಅವರ ರೆಕಮಂಡೇಷನನ್ನು ಕಳುಹಿಸುತ್ತಾರೆ, ಆಮೇಲೆ ಅದು ಮೇಜರ್ ಇರಿಗೇಷನ್ ಕಂಟ್ರೋಲ್ ಬೋರ್ಡ್ ಮುಂದೆ ಹೋಗುತ್ತದೆ. ಕಡೆಗೆ ಅದು ಟೆಕ್ನಿಕಲ್ ಸಬ್ ಕಮಿಟಿ ಮುಂದೆ ಬಂದು ನಂತರ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ.

Sri G. DUGGAPPA.—Is there no currency period for tenders?

Sri VEERENDRA PATIL.—May be, some validation period will be there.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—(ಸಿ) ಪ್ರಶ್ನೆಗೆ ಉತ್ತರವಾಗಿ 3 ಸಾರಿ ಟೆಂಡರ್‌ಗಳನ್ನು ಮುಂದುವರಿಸಲಾಯಿತು ಎಂದು ಹೇಳಿದ್ದೀರಿ, ಅದಕ್ಕೆ ಕಾರಣ ಎಸ್ಟಿಮೇಟ್ ಮತ್ತು ಡಿಸೈನ್ ಬದಲಾವಣೆಯಾಗಬೇಕಾಗಿತ್ತು ಅಂತ ಕೊಟ್ಟಿದ್ದೀರಿ. ಮೂರು ಸಾರಿಯೂ ಕೂಡ ಎಸ್ಟಿಮೇಟ್ ಡಿಸೈನ್ ಬದಲಾಯಿಸಿದ್ದೀರಾ? ಹಾಗೆ ಮಾಡಿದ್ದ ಪಕ್ಷದಲ್ಲಿ 1ನೇ ಸಾರಿ ಎಷ್ಟು, 2ನೇ ಸಾರಿ ಎಷ್ಟು, 3ನೇ ಸಾರಿ ಎಷ್ಟು?

ಶ್ರೀ ವೀರೇಂದ್ರ ಪಾಟೀಲ್.—ಮೊದಲನೆಸಲ ಟೆಂಡರ್ ಇನ್‌ವೈಟ್ ಮಾಡಿದ್ದು 23-9-67 ರಲ್ಲಿ 2 ಕೋಟಿ 21 ಲಕ್ಷದ 22 ಸಾವಿರ ರೂಪಾಯಿ ಎಸ್ಟಿಮೇಟ್ ಆಗಿತ್ತು. ಪ್ರಾಜೆಕ್ಟ್ ರಿಪೋರ್ಟ್ ತಯಾರಾದ ಮೇಲೆ ಹೊಸ ಡಿಸೈನ್ ಪ್ರಕಾರ 2 ಕೋಟಿ 89 ಲಕ್ಷದ 77 ಸಾವಿರ ರೂಪಾಯಿ ಆಗುತ್ತದೆ ಎಂದು ಹೇಳಿದಮೇಲೆ ಮತ್ತೊಂದು ಟೆಂಡರ್ ಕರೆಯಲಾಯಿತು.

ಶ್ರೀ ಎಚ್. ಎನ್. ನಂಜೇಗೌಡ.—ಫೆಬ್ರವರಿ 8ನೇ ತಾರೀಖು ನೀವು ಟೆಂಡರ್ ಓಪನ್ ಮಾಡಿದ್ದೀರಿ. ಪ್ಯಾರಗ್ರಾಫ್ 179 ಸಬ್ ಕ್ಲಾಸ್ (ಸಿ) ಪ್ರಕಾರ ಮಾಡಬೇಕಾಗಿತ್ತು. ಈಗಾಗಲೇ ಏಪ್ರಿಲ್ 13ನೇ ತಾರೀಖು ಆಗಿದೆ. ಫೆಬ್ರವರಿ 8 ಅಂದರೆ ಎರಡು ತಿಂಗಳುಗಳ ಮೇಲೆ ಆಯಿತು. ಕಂಟ್ರಾಕ್ಟರ್ ಒಪ್ಪಿಗೆ ಪಡೆದು ಈ ಟೆಂಡರನ್ನು ಹಾಗೆಯೇ ಇಟ್ಟುಕೊಂಡಿದ್ದೀರೋ ಅಥವಾ ನಿಮ್ಮ ಸ್ವಪ್ರೇರಣೆಯಿಂದಲೇ ಇಟ್ಟುಕೊಂಡಿದ್ದೀರೋ?

ಶ್ರೀ ವೀರೇಂದ್ರ ಪಾಟೀಲ್.—ಹಾರಂಗಿ ಟೆಂಡರ್ ಹೇಳುವುದಾದರೆ ನಮ್ಮಲ್ಲಿ ಹಣವಿಲ್ಲವೆಂದು ಚೀಫ್ ಇಂಜಿನಿಯರಿಗೆ ತಿಳಿಸಿದ್ದೇವೆ. ಟೆಂಡರ್ ಕರೆದಿದ್ದರು. ಆ ಕೆಲಸವನ್ನು ಕಂಟ್ರಾಕ್ಟರಿಗೆ ಕೊಟ್ಟಮೇಲೆ ಸರ್ಕಾರ ಹಣ ಒದಗಿಸಬೇಕಾಗಿ ಬರುತ್ತದೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣ ಬಹಳ ಕಡಿಮೆ ಇದೆ. ಆದಕ್ಕೋಸ್ಕರ ಆ ಟೆಂಡರನ್ನು ಒಪ್ಪಿಕೊಳ್ಳಬೇಕೆಂಬ ಬಗ್ಗೆ ಸರ್ಕಾರ ಅದನ್ನು ಇನ್ನೂ ಪರಿಶೀಲನೆ ಮಾಡುತ್ತಿದೆಯೆಂದು ಹೇಳಿದೆ.

Sri H. N. NANJE GOWDA.—My question is not answered, Sir. I want to know whether they have taken consent of the Contractor to delay decision in this matter. As per Court's provision, they must take consent within two months. I want definite answer for this.

Sri VEERENDRA PATIL.—It is for the Chief Engineer if the validation period is going to expire and it is also for him to contact the concerned tenderers.

ಶ್ರೀ ಎಸ್. ಶಿವಪ್ಪ.—ಟೆಂಡರ್ ಕಾಲ್ ಫಾರ್ ಮಾಡಿ ಅದರಲ್ಲಿ ಹಣ ಖರ್ಚು ಮಾಡುವುದಕ್ಕೆ ಸಾಕಷ್ಟು ಹಣ ಸರ್ಕಾರದಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಮೊದಲೇ ನೋಡಬೇಕು. ಟೆಂಡರ್ ಅಕ್ಸೆಪ್ಟ್ ಮಾಡಬೇಡಿ ಎಂಬುದಾಗಿ ಚೀಫ್ ಇಂಜನಿಯರ್ ಅವರಿಗೆ ಸೂಚನೆಗಳನ್ನು ಕೊಟ್ಟಿದ್ದೀರಿ ನೀವು ಟೆಂಡರಿಗೆ ಕಾಲ್ ಫಾರ್ ಮಾಡುವ ಮೊದಲೇ ಸರ್ಕಾರದಲ್ಲಿ ಸಾಕಷ್ಟು ಹಣವಿದೆಯೋ ಇಲ್ಲವೇ ಎಂಬುದನ್ನು ನೋಡಬೇಡವೇ ?

ಶ್ರೀ ವೀರೇಂದ್ರ ಪಾಟೀಲ್.—ಚೀಫ್ ಇಂಜನಿಯರ್ ಟೆಂಡರನ್ನು ಕಾಲ್‌ಫಾರ್ ಮಾಡಿದ್ದಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಸಾಕಷ್ಟು ಹಣವಿಲ್ಲವೆಂದು ಹೇಳಿದೆ. ಅದರ ಫಲವಾಗಿ ಆ ಟೆಂಡರನ್ನು ಅಕ್ಸೆಪ್ಟ್ ಮಾಡಬೇಕೋ, ಇಲ್ಲವೋ ಎಂಬುದನ್ನು ಸರ್ಕಾರ ಇನ್ನೂ ಪರಿಶೀಲನೆ ಮಾಡಬೇಕೆಂದು ಹೇಳಿದೆ. ಅವರು ಟೆಂಡರನ್ನು ಅಕ್ಸೆಪ್ಟ್ ಮಾಡುವುದಿಲ್ಲ. ಅದರ ಒಪ್ಪಿಗೆಗೆ ನಮ್ಮ ಹತ್ತಿರವೇ ಕಳುಹಿಸುತ್ತಾರೆ.

ಶ್ರೀ ಎಸ್. ಶಿವಪ್ಪ.—ಸರ್ಕಾರ ಸಾಕಷ್ಟು ಹಣವನ್ನು ಮಂಜೂರು ಮಾಡಿ ಇಂತಿಂಥ ಕೆಲಸಗಳಿಗೆ ಇಷ್ಟು ಹಣವಿದೆ ಎಂಬುದನ್ನು ನೋಡಿಕೊಂಡು ಟೆಂಡರ್ ಹಾಕತಕ್ಕದ್ದು. ಟೆಂಡರ್ ಹಾಕತಕ್ಕ ಕೆಲಸವನ್ನು ವಿಲೇವಾರಿ ಮಾಡುವುದಕ್ಕೋಸ್ಕರ, ಈಗ ಸರ್ಕಾರ ತಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಿರುವುದನ್ನು ನೋಡಿದರೆ, ಯಾರೋ ಕಂಟ್ರಾಕ್ಟರಿಗೆ ಅನುಕೂಲ ಮಾಡಿಕೊಡಬೇಕು ಎಂದು ಈ ರೀತಿ ಮಾಡುತ್ತಿದ್ದೀರೋ ಅಥವಾ ಬೇಕು ಎಂತಲೇ ಈ ರೀತಿ ಮಾಡುತ್ತಿದ್ದೀರೊ ?

ಶ್ರೀ ವೀರೇಂದ್ರ ಪಾಟೀಲ್.—ಕಂಟ್ರಾಕ್ಟರಿಗೆ ಅನುಕೂಲ ಮಾಡಬೇಕಾಗಿದ್ದರೆ ಆ ಟೆಂಡರನ್ನು ಇಷ್ಟುಹೊತ್ತಿಗೆ ಅಕ್ಸೆಪ್ಟ್ ಮಾಡಬೇಕಾಗಿತ್ತು. ಹೋದವರ್ಷ 12 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಪ್ರೋಗ್ರಾಂ ಇಟ್ಟುಕೊಂಡಿದ್ದೆವು. ಈ ವರ್ಷ 12 ಕೋಟಿ ರೂಪಾಯಿಗಳು, ಮುಂದಿನ ವರ್ಷ 15 ಕೋಟಿ ರೂಪಾಯಿಗಳು, ಅದಕ್ಕೂ ಮುಂದಿನ ವರ್ಷ 20 ಕೋಟಿ ರೂಪಾಯಿಗಳು—ಹೀಗೆ ಮೇಜರ್ ಇರ್ರಿಗೇಷನ್‌ಗಳಿಗೆ ಹಣ ಒದಗಿಸಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಪರಿಸ್ಥಿತಿ ಏನಾಗಿದೆಯೆಂದರೆ, ಹೋದವರ್ಷ ಖರ್ಚಾದಷ್ಟನ್ನು ಈ ವರ್ಷ ಒದಗಿಸಲಿಲ್ಲ. ಅಂದಮೇಲೆ ಹೆಚ್ಚು ಹೆಚ್ಚು ಕಮಿಟ್ ಮಾಡುವುದರಲ್ಲಿ ಏನು ಅರ್ಥವಿದೆ ! ಅದಕ್ಕೋಸ್ಕರವೇ ನಾವೂ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟಿನವರೂ ಆ ವಿಚಾರವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ಹೆಚ್ಚಿಗೆ ಹಣ ಬರುವುದಕ್ಕೆ ಸಾಧ್ಯವಾಗುವುದಾದರೆ, ಆ ಕೆಲಸ ಮಾಡೋಣವೆಂದು ಇದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಅಧಿವೇಶನದಲ್ಲಿ ಪ್ರಶ್ನೋತ್ತರಗಳ ಪಟ್ಟಿ 21 ರಲ್ಲಿನ 316 ನೇ ನನ್ನ ಪ್ರಶ್ನೆಗೆ ಉತ್ತರ ಕೊಡುವಾಗ ಈ ಮಾನ್ಯ ಸಭೆಯಲ್ಲಿಯೇ ಮಂತ್ರಿಗಳು ಆ ಟೆಂಡರ್ ಸರ್ಕಾರದ ಮುಂದೆ ಬಂದಿದೆ. ಚೀಫ್ ಇಂಜನಿಯರ್ ಅವರು ಸರ್ಕಾರಕ್ಕೆ ಕಳುಹಿಸಿದ್ದಾರೆ, ಟೆಂಡರನ್ನು ನಾವು ಎಗ್ಜಾಮಿನ್ ಮಾಡುತ್ತಿದ್ದೇವೆಂಬುದಾಗಿ ಹೇಳಿದ್ದಾರೆ. ಈಗ ಉತ್ತರ ಕೊಡುವಾಗ ಅದು ಇನ್ನೂ ಚೀಫ್ ಇಂಜನಿಯರ್ ಅವರ ಹತ್ತಿರವಿದೆ. ಅವರು ಇನ್ನೂ ಸ್ಕ್ರೂಟಿನಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಆದ್ದರಿಂದ ಅವರು ಕೊಟ್ಟಿರುವ ಉತ್ತರಗಳಲ್ಲಿ ಅದು ನಿಜವೋ, ಇದು ನಿಜವೋ ! ಅದರ ಬಗ್ಗೆ ಅಪ್ಪಣೆ ಕೊಡಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಅಪ್ಪಣೆ ಕೊಡಿಸುವುದು ಏನೂ ಇಲ್ಲ. ಮಾನ್ಯ ಸದಸ್ಯರು ಆಗ ಕೇಳಿದ ಪ್ರಶ್ನೆಗೆ ನಾನು ಏನು ಹೇಳಿದ್ದೇನೆಂಬುದು 21ನೇ ಪಟ್ಟಿಯಲ್ಲಿದೆ. ನಾನು ಆಗ ಏನು ಉಪಪ್ರಶ್ನೆಗೆ ಉತ್ತರ ಕೊಟ್ಟಿದ್ದೆನೋ ಅದು ಈಗ ನನ್ನ ಮುಂದೆ ಇಲ್ಲ. ನನಗೆ ಗೊತ್ತಿಲ್ಲ ಅದನ್ನು ನನ್ನಮುಂದೆ ಈಗ ಇಟ್ಟರೆ, ಅದರಲ್ಲಿ ಯಾವುದು ನಿಜವೆಂಬುದನ್ನು ನೋಡಿ ಹೇಳುತ್ತೇನೆ.

Representation by Gangmen of C.I.T.B., Bangalore

507. **Sri V. N. PATIL** (Humnabad).—

Will the Minister for Home and Municipal Administration be pleased to state :—

(*a*) whether Government received any representation from the Gangmen in Sub-Division 2 of the City Improvement Trust Board,

(SRI V. N. PATIL)

Bangalore represented by their Union on 16th January 1968 and 12th February 1968 regarding their unsettled arrears, and the proposed Retrenchment;

(b) if so, since how long the arrears have remained unpaid and unsettled and the proposal of Government to remove the injustice being done to the workers (Gangmen);

(c) whether the City Improvement Trust Board replied to the said representations; if so the reply given;

(d) whether the Hon'ble Chief Minister was approached in this matter; if so what was his reaction to the representation and how Government proposes to solve the difficulties;

(e) whether the workers and gangmen of the City Improvement Trust Board were given the same benefits as given to the City Corporation Employees; if so, what are those benefits; if not, the reason for disparity;

(f) whether the new scales would be given to all the City improvement Trust Board employees; if so, the exact date when the new scales will be given effect to;

(g) whether those who have put in more service are being terminated, if so the compelling reasons;

(h) whether all the leave and pensionary benefits and other benefits are being given to the employees of the City Improvement Trust Board if not, the reasons;

(i) whether the Government propose to settle the claims of unsettled arrears of pay of City Improvement Trust Board employees pending from 1st January 1961 to 31st May 1967?

A.—SRI R. M. PATIL (Minister for Home and Municipal Administration).—

(a) Yes, on 21st February 1968.

(b) The increments due from 1st January 1967 are yet to be paid and the amounts due are being worked out.

(c) The Chairman has reported that the General Secretary of the Bangalore District Corporation and Local Bodies' Union met and discussed with him and was appraised of the situation.

(d) Yes; on 21st February 1968. A report has been called for from the Trust Board to ascertain which of the orders have been already implemented and the points on which further orders are necessary.

(e) All the employees of the City Improvement Trust Board cannot be compared with the employees of the City Corporation. The City Corporation is a permanent Institution with a continuously growing administrative set-up while the Trust Board is established for a limited

purpose and the volume of its activities has to vary from time to time according to the layouts completed or new layouts to be planned. Most of the Trust Board's employment has to be on a work charged basis in view of the nature of its work.

(*f*) For sweepers and scavengers revision was given affect from 1st January 1961. For work-charged establishments the new rates have come into force from 24th June 1967. The same scales of pay cannot be given effect from the same dates to work-charged establishments and the small nucleus of permanent staff.

(*g*) The statement that those who have put in more service are terminated is not correct. The appointments in work-charged establishments are made for the duration of each work and terminated on completion of the work. It is not practicable for any organisation working on a business principle to retain permanently all the persons employed for a specific work from time to time.

(*h*) The work-charged staff appointed under the provisions of the P.W.D. Code do not get Gratuity or Pension but only leave benefits. The sweepers and scavengers get the facilities of leave, gratuity and other benefits because their work has to continue even after completion of the layout and they are handed over to the Corporation along with the layouts. It is not possible to give similar benefits to work-charged establishments employed for a specific work and terminated on completion of the work.

(*i*) The extent to which arrears have been settled and are yet to be settled has been indicated in reply to clause (*b*) above.

ಶ್ರೀ ವಿ. ಎನ್. ಪಾಟೀಲ್.—ಇದರಲ್ಲಿ ಸರ್ವಿಸ್ ಕಂಡೀಷನ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ. ಎಷ್ಟು ಕಾರ್ಮಿಕರ ಬಗ್ಗೆ ಸರ್ವಿಸ್ ರಿಜಿಸ್ಟರ್ ಮೇನ್‌ಟೇನ್ ಮಾಡಲಾಗಿದೆ ? 10 ವರ್ಷದಿಂದಲೂ ಈ ಡಿಪಾರ್ಟ್‌ಮೆಂಟ್‌ನಲ್ಲಿ ಸೇವೆ ಮಾಡಿದ್ದರೂ ಪರ್ಮನೆಂಟ್ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಹೇಳುತ್ತಿದ್ದಾರೆ. ಅದು ಅನ್ಯಾಯವಾಗುವುದಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಆಗಿನ ಪ್ರಾಜೆಕ್ಟ್ ಪ್ರಕಾರ ನೇಮಕವಾಗಿದ್ದುದರಿಂದ ಅದನ್ನು ಮುಂದುವರಿಸಿಕೊಂಡು ಹೋಗಲು ಒಂದು ನಿರ್ದಿಷ್ಟವಾದ ಅವಧಿ ಹೇಳಲಿಕ್ಕೆ ಆಗುವುದಿಲ್ಲ. ಅದರ ಸಲುವಾಗಿ ಇದನ್ನು ಖಾಯಂ ಮಾಡವುದಕ್ಕಾಗುವುದಿಲ್ಲ.

ಶ್ರೀ ವಿ. ಎನ್. ಪಾಟೀಲ್.—ಕಂಟ್ರಾಕ್ಟರ್‌ಗೆ ವರ್ಕ್ಸ್ ಕೊಟ್ಟು, ಕಂಟ್ರಾಕ್ಟರಿಂದ ಲೇಬರ್ ಪಡೆದು, ರಿಟ್ರೆಂಚ್ ಮಾಡುವ ಸ್ಕೀಮನ್ನು ಇಟ್ಟುಕೊಂಡಿದ್ದೀರಾ ? ಇದು ಎಷ್ಟರ ಮಟ್ಟಿಗೆ ಸತ್ಯ ಇದೆ ?

ಶ್ರೀ ಆರ್. ಎಂ. ಪಾಟೀಲ್.—ಕಾರ್ಪೋರೇಷನ್ ಕೆಲಸ ಬೇರೆ, ಟ್ರಸ್ಟ್ ಬೋರ್ಡ್ ಕೆಲಸ ಬೇರೆ. ಕೆಲಸದ ನೇಚರ್ ಒಂದೇ ಆದರೂ ಸರ್ವಿಸ್ ಕಂಡೀಷನ್ಸ್ ಬೇರೆ ಇರುತ್ತದೆ. ಕಾರ್ಪೋರೇಷನ್ ನೌಕರದಾರರು ಖಾಯಂ ನೌಕರದಾರರು ಟ್ರಸ್ಟ್ ಬೋರ್ಡ್ ಪ್ರಾಜೆಕ್ಟನ್ನು ಅನುಸರಿಸಿ ಕೆಲಸ ಮಾಡುವುದರಿಂದ ಒಂದು ನಿರ್ದಿಷ್ಟವಾದ ವೇಳೆಯವರೆಗೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಇರುವುದರಿಂದ ಅವರನ್ನು ಖಾಯಂ ಮಾಡಿಕೊಂಡು ಮುಂದುವರಿಸಿಕೊಂಡು ಹೋಗುವಂತೆ ಹುಕುಂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಕೆಲಸ ಈಗಾಗಲೇ ಅನೇಕ ವರ್ಷಗಳಿಂದ ಇದೆ. ಹತ್ತಾರು ವರ್ಷಗಳಿಂದ ಕೆಲಸ ಮಾಡುವುದರಿಂದ ವರ್ಕ್‌ಛಾರ್ಜ್ ಸ್ಟಾಫಿಗೆ ಪರ್ಮನೆಂಟ್ ಮಾಡದೇ ಇರುವುದರಿಂದ ಇದು ಸಂಬಂಧಪಟ್ಟ ಕಾನೂನಿಗೆ ವಿರೋಧವಾಗುವುದಿಲ್ಲವೇ ? ಹಾಗಿದ್ದರೆ ಪರ್ಮನೆಂಟ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಪರ್ಮನೆಂಟ್ ಯೋಚನೆ ಮಾಡುವುದು ಸಾಧ್ಯ ಇಲ್ಲ ಬೆಂಗಳೂರು ನಗರದಲ್ಲಿಯಾಗಲಿ ಮತ್ತು ಯಾವುದೇ ನಗರದಲ್ಲಿಯಾಗಲಿ ಟ್ರಸ್ಟ್ ಬೋರ್ಡ್ ಎಲ್ಲಿ ಎಸ್ಟಾಬ್ಲಿಷ್ ಆಗುತ್ತದೆ ಅಂತಹ ಕಡೆ ಕಾರ್ಯಕ್ರಮ ತೆಗೆದುಕೊಳ್ಳುವಂಥ ಯೋಜನೆಗಳು ಇಲ್ಲದೇ ಇದ್ದಾಗ, ಸುಮ್ಮನೆ ಕೂಡಿಸಿ ಪಗಾರ ಕೊಡುವುದಕ್ಕೆ ಬರುತ್ತದೆಯೇ ? ಈ ರೀತಿ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ವಿ. ಎನ್. ಪಾಟೀಲ್.—(f) ನಲ್ಲ "for sweepers and scavengers revision was given effect from 1st January 1961" ಎಂದು ಇದೆ. ಇಲ್ಲಿಯವರೆಗೆ ಇಫೆಕ್ಟ್ ಕೊಡುತ್ತಾ ಇಲ್ಲ. ಎಷ್ಟು ದಿವಸದಲ್ಲಿ ಇಫೆಕ್ಟ್ ಕೊಟ್ಟು ಮೊಬಲಗನ್ನು ಕೊಡಬಹುದು ?

ಶ್ರೀ ಆರ್. ಎಂ. ಪಾಟೀಲ್.—ಕೊಡಬೇಕು ಎನ್ನುವ ವಿಚಾರದಲ್ಲಿ ಚರ್ಚೆ ಮಾಡುತ್ತಾ ಇದ್ದಾರೆ. ಈ ಚರ್ಚೆ ಮುಗಿದ ಮೇಲೆ ತ್ವರಿತವಾಗಿ ಕೊಡಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ವರ್ಕ್‌ಛಾರ್ಜ್ ಸ್ಟಾಫ್ 8-10 ವರ್ಷದಿಂದಲೂ ಒಂದೇ ರೀತಿಯಾಗಿ ಕೆಲಸವನ್ನು ಮಾಡಿಕೊಂಡು ಬರುತ್ತಾ ಇಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಒಂದೇ ನಮೂನೆ ಕೆಲಸ. ಅದು ನಿರ್ಧಿಷ್ಟವೇಳೆ ಇರುವುದರಿಂದ, ಹೆಚ್ಚಿಗೆ ಬೆಳೆಸುವುದಕ್ಕೆ ಆಗುವುದಿಲ್ಲ.

Sri J. P. SARWESH.—It is stated in answer (h) that the sweepers and scavengers get the facilities of leave, gratuity and other benefits. I should like to know why pension is not given to these people who perform the most disgraceful work due to which they are treated as untouchables.

Sri R. M. PATIL.—Their claim is accepted.

ಶ್ರೀ ವಿ. ಎನ್. ಪಾಟೀಲ್.—ಹಾಲಿಡೇ ಬೆನಿಫಿಟ್ಸ್ ಕೊಡುತ್ತಾ ಇಲ್ಲ, ಅದನ್ನು ವಿಚಾರ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ವಿಚಾರ ಮಾಡಲಾಗುತ್ತದೆ.

Allotment of Land to Harijans and Girijans in Bhadravathi Taluk

509. Sri ABDUL KHUDDUS ANWAR (Bhadravathi).—

Will the Minister for Revenue and Forests be pleased to state :—

(a) the extent of lands allotted to the Harijans and Girijans in Bhadravathi taluk;

(b) whether it has come to the notice of the Government that the lands allotted to these people are not cleared and handed over to Revenue authorities, although the Government orders were passed long back;

(c) the reasons of such long delay;

(d) whether it is a fact that some lands in Holehonnur hobli, Bhadravathi taluk, Mongoti village are granted to some of the residents of Shimoga and Honnali;

(e) if so, the extent of lands allotted to each one of the outsiders;

(f) whether there were any applications from the local residents (Harijans and Girijans) and if so why this land was not allotted to them;

(*g*) whether there is any proposal to cancel the award and distribute the 35 acres of land to the Local landless Harijans and Girijans ?

A.—Sri B. RACHAIAH (Minister for Revenue and Forests).—

(*a*) 810 acres 20 guntas.

(*b*) Yes.

(*c*) The heavy 'malki' standing on the land has to be removed by the Forest Department after Survey work is completed.

(*d*) Yes.

(*e*)	*Name*	*Extent*
	Sriyuths :	*A—G*
1.	Srigavali Gurulingappa, Political Sufferer.	8-00
2.	Abdul Sattarkhan, Political Sufferer	6-06
3.	Muniraju, Political Sufferer, Bhadravathi.	2-05
4.	C. Nagaraj, Bhadravathi.	4-09
5.	Smt. M. S. Jayamma, Bhadravathi.	4-10
6.	B. A. Hoovappa Gowda, Salur, Tirthalli taluk.	2-05

(*f*) Yes. Applications from local Harijans were received; but since the lands have been reserved for expropriated ryots they could not be allotted by the local officers.

(*g*) It will be examined on merits.

Sri ABDUL KHUDDUS ANWAR.—Is it not true that Sri Abdul Sattarkhan and Sri C. Nagaraj were allotted lands in Doggappanahalli in 1954 and those lands were disposed of and again you have allotted these lands in Mongoti village ?

Sri B. RACHAIAH.—The information which the Hon'ble Member is seeking is not available with me.

Sri ABDUL KHUDDUS ANWAR.—At least if I give that information, will you cancel these lands and regrant to those persons who are already in possession of these lands ?

Sri B. RACHAIAH.—I will make an enquiry as to why the land grant which was made earlier was cancelled and if there is any sufficient reason for granting the land, we will consider.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಭಧ್ರಾವತಿ ತಾಲ್ಲೂಕಿನಲ್ಲಿ 810 ಎಕರೆ 20 ಗುಂಟೆ ಜಮೀನುಗಳನ್ನು ಷೆಡ್ಯೂಲ್ ಕ್ಯಾಸ್ಟ್ಸ್, ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ಏನು ಕೊಟ್ಟಿದ್ದೀರಿ ಅವರು ಅವೆಲ್ಲವನ್ನು ಉಳುಮೆ ಮಾಡುತ್ತಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—810 ಎಕರೆಯಲ್ಲಿ ಈಗ 382 ಎಕರೆ ಸಾಗು ಆಗುತ್ತಾ ಇದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಂತ್ರಿಗಳು ಮತ್ತು ಮುಖಂಡರುಗಳು ಹೇಳಿದ ಮಾತಿನ ಪ್ರಕಾರ ಜಮೀನನ್ನು ಗ್ರಾಂಟ್ ಮಾಡಲಾಗಿದೆಯೋ ಅಥವಾ ಆ ರಾಜಕೀಯಸಂತ್ರಸ್ತರು ಎಂದು ಹೇಳಿಕೊಳ್ಳತಕ್ಕ ಜನಕ್ಕೆ ಭೂಮಿ ಏನಾದರೂ ಇದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿದು ಅದನ್ನು ಗ್ರಾಂಟ್ ಮಾಡಲಾಯಿತೋ ?

ಶ್ರೀ ಬಿ. ರಾಚಯ್ಯ.—ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಅವರಿಗೆ ಆ ಭೂಮಿಯನ್ನು ಕೊಡಲಾಗಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಅಲ್ಲಿ ಯಾರು ಯಾರು ಪೊಲಿಟಿಕಲ್ ಸಫರರ್ ಅಲ್ಲದಿದ್ದರೂ ಸುಳ್ಳು ಹೇಳಿ ಪೊಲಿಟಿಕಲ್ ಸಫರರ್ ಎಂದು ಜಮೀನನ್ನು ತೆಗೆದುಕೊಂಡಿದ್ದರೆ ಅದನ್ನು ರುಜು ವಾತು ಮಾಡಿದರೆ ಅಂಥವರಿಗೆ ಶಿಕ್ಷೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಹಾಗೆ ಸುಳ್ಳು ಹೇಳಿ ಜಮೀನನ್ನು ಪಡೆದಿದ್ದರೆ ಆ ಗ್ರ್ಯಾಂಟನ್ನು ಕ್ಯಾನ್ಸಲ್ ಮಾಡುತ್ತೇವೆ.

ಶ್ರೀ ಹೆಚ್. ಸಿದ್ದವೀರಪ್ಪ.—ನಿಮ್ಮ ಲ್ಯಾಂಡ್‌ಗ್ರ್ಯಾಂಟ್ ರೂಲ್ಸ್ ಜಾರಿಗೆ ಬಂದದ್ದು ಯಾವಾಗ ಮತ್ತು ನೀವು ಅವರಿಗೆ ಆ ಜಮೀನನ್ನು ಕೊಟ್ಟಿದ್ದು ಯಾವಾಗ ?

ಶ್ರೀ ಬಿ. ರಾಚಯ್ಯ.—1960 ರಲ್ಲಿ ಲ್ಯಾಂಡ್‌ಗ್ರ್ಯಾಂಟ್ ರೂಲ್ಸ್ ಇಲ್ಲಿ ಜಾರಿಗೆ ಬಂದರೂ ಆಗಿನ್ನೂ ಬೇರೆ ಬೇರೆ ಜಾಗದಲ್ಲಿ ಬೇರೆ ಬೇರೆ ರೂಲ್ಸ್‌ಗಳು ಜಾರಿಯಲ್ಲಿದ್ದವು. ಈಗ ಅವುಗಳೆಲ್ಲ ವನ್ನೂ ಸಮನ್ವಯಗೊಳಿಸಿ ಒಂದು ಏಕ ಶಾಸನವನ್ನು ಮಾಡಲಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಆ ಹರಿಜನ ಗಿರಿಜನಕ್ಕೆ 810 ಎಕರೆಯನ್ನು ರಿಲೀಜ್ ಮಾಡಿದ ಕಾಲಕ್ಕೆ ಆ ರೂಲ್ಸ್ ಜಾರಿಯಲ್ಲಿತ್ತೇ ?

ಶ್ರೀ ಬಿ. ರಾಚಯ್ಯ.—ಕೆಳಗಿನವರಿಂದ ಆ ಭೂಮಿಗೆ ಕೇಳಿಕೆ ಬಂದಿದ್ದರಿಂದ ಅದನ್ನು ಆಗ ರಿಲೀಜ್‌ಮಾಡಲಾಯಿತು.

ಶ್ರೀ ಎಸ್. ಶಿವಪ್ಪ.—ಆ ಜನರಲ್ಲಿ ಕೆಲವರು ಜೈಲಿಗೆ ಒಂದು ದಿವಸ ಕೂಡ ಹೋಗದಿದ್ದರೂ ತಾವು ಪೊಲಿಟಿಕಲ್ ಸಫರರ್ ಎಂದು ಹೇಳಿ ಸುಳ್ಳು ಸರ್ಟಿಫಿಕೇಟುಗಳನ್ನು ಪಡೆದು ಒಂದು ಕಡೆ ಜಮೀನನ್ನು ಪಡೆದು ಅದನ್ನು ಮಾರಾಟ ಮಾಡಿದ ಕೂಡಲೇ ಮತ್ತೊಂದು ಕಡೆ ಜಮೀನಿಗೆ ಅರ್ಜಿ ಹಾಕಿ ಹೀಗೆ ಹತ್ತಾರು ಸಾರ್ತಿ ಜಮೀನನ್ನು ಪಡೆದು ಇಂಥ ವ್ಯವಹಾರ ಮಾಡತಕ್ಕವರ ಬಗ್ಗೆ ಸರ್ಕಾರದವರೇನು ಕಾರ್ಯಕ್ರಮ ಕೈಗೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಬಹುಶಃ ಇದೊಂದು ಹೈಪೊತೆಟಿಕಲ್ ಕೊಶ್ಚನ್ ಆಗುತ್ತೆ. ಹಾಗೆ ಅವರು ಜಮೀನನ್ನು ಮಾರಾಟ ಮಾಡಿದ್ದಾರೆಂದು ತಿಳಿದು ಬಂದರೆ ಅದನ್ನು ಕ್ಯಾನ್ಸಲ್ ಮಾಡಲಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಅಂಥ ಬೋಗಸ್ ವ್ಯವಹಾರ ಮಾಡಿರತಕ್ಕವರನ್ನು ರುಜುವಾತು ಮಾಡಿ ಕೊಟ್ಟರೆ ಅವರನ್ನು ಜೈಲಿಗೆ ಕಳುಹಿಸುತ್ತೀರಾ ?

(ಉತ್ತರವಿಲ್ಲ)

Sri ABDUL KHUDDUS ANWAR.—When this was reserved for the expropriated people, why was this granted to the Shimoga people when there were Harijans in that area who were already in possession of these lands ?

ಶ್ರೀ ಬಿ. ರಾಚಯ್ಯ.—ಅದನ್ನು ವಿಚಾರ ಮಾಡುತ್ತೇನೆಂದು ಆಗಲೇ ಹೇಳಿದ್ದೇನೆ.

ಶ್ರೀ ಎನ್. ಜಿ. ಹಾಲಪ್ಪ.—ಇಲ್ಲಿ ಉತ್ತರದಲ್ಲಿ ಜಮೀನಿನಿಂದ ಹೊರದೂಡಲ್ಪಟ್ಟವರು ಎಂದು ಹೇಳಲಾಗಿದೆ. ಈ ಜನರು ಇಲ್ಲಿ ಹೇಳಿರತಕ್ಕವರೇನು ಶರಾವತಿ ಮುಳುಗಡೆಯಲ್ಲಿ ಜಮೀನನ್ನು ಕಳೆದುಕೊಂಡವರೇ ? ಇಲ್ಲಿ ಉತ್ತರದಲ್ಲಿ ತಿಳಿಸಿರತಕ್ಕ ಗುರುಲಿಂಗಪ್ಪ ಎನ್ನತಕ್ಕವರಿಗೆ ಶರಾವತಿ ಬಳಿ ಯಾವ ಜಮೀನೂ ಇರಲಿಲ್ಲ. ಇನ್ನು ಎರಡನೇಯವರಾದ ಅಬ್ದುಲ್‌ಸತ್ತಾರ್ ಖಾನ್ ಎನ್ನತಕ್ಕವರು ಹೊನ್ನಾಳಿಯವರು ಇವರಿಗೆ ನೂರಾರು ಎಕರೆ ಜಮೀನಿದೆ. ಹಾಗೆ ಮುನಿರಾಜು ಮತ್ತು ಸಿ. ನಾಗರಾಜ್ ಎನ್ನತಕ್ಕವರಿಗೆ ಬೇಕಾದಷ್ಟು ಜಮೀನಿದೆ. ಹಾಗಿದ್ದರೂ ಅವರಿಗೇಕೆ ಅಲ್ಲಿ ಜಮೀನನ್ನು ಕೊಟ್ಟರು ?

ಶ್ರೀ ಬಿ. ರಾಚಯ್ಯ.—ಆ ಪ್ರಶ್ನೆಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ.

Supply of Power to Indian Aluminium Company, Belgaum

510. Sri M. NAGAPPA (Raichur).—

Will the Minister for Public Works be pleased to state :—

(a) whether there was any agreement for supply of power to the Indian Aluminium Company at Belgaum ;

(b) if so, the period of agreement ;

(c) the rate agreed upon ?

A.—Sri VEERENDRA PATIL (Minister for Public Works).—

(a) Yes.

(b) 25 years, in the first instance, to be extended by further 25 years at the option of the Company.

(c) Basic rate of Rs. 12.50 per Kilowatt per month at Hubli plus extra rate varying from Rs. 1.866 to Rs. 0.830 depending on the power drawn, for transmission including loss in transmission from Hubli to Consumer's point.

ಶ್ರೀ ಎಂ. ನಾಗಪ್ಪ.—ಒಂದು ಕಿಲೋ ವಾಟಿಗೆ 12.50 ರೂಪಾಯಿಗಳಂತೆ ಬೆಳಗಾವಿನಲ್ಲಿರುವ ಇಂಡಿಯನ್ ಅಲ್ಯೂಮಿನಿಯಂ ಕಂಪನಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದೆ ಎಂದು ಹೇಳಿದ್ದೀರಿ. ರಾಜ್ಯದಲ್ಲಿರತಕ್ಕ ಎಲ್ಲಾ ಪ್ರೈವೇಟ್ ಇಂಡಸ್ಟ್ರಿಗಳಿಗೆ ಕೊಟ್ಟಂತಹ ರೇಟು ಏನು ಇದೆಯೋ ಅದಕ್ಕೂ ಈ ರೇಟಿಗೂ ಏನಾದರೂ ವ್ಯತ್ಯಾಸ ಇದೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಪವರ್ ಬೇಸ್ಡ್ ಇಂಡಸ್ಟ್ರಿಯಲ್ಲಿ ಯಾವುದೇ ಚಾರ್ಜ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅವರಿಗೆ ಸ್ಪೆಷಲ್ ಕನ್‌ಸೆಷನ್ ಕೊಟ್ಟಿದೆ.

ಶ್ರೀ ಎಂ. ನಾಗಪ್ಪ.—ಸರ್ಕಾರಕ್ಕೆ ಗೊತ್ತಿರುವ ಹಾಗೆ ಈ ಕೈಗಾರಿಕೆ ಸಾಧಾರಣವಾಗಿ 2-3 ವರ್ಷಗಳಲ್ಲಿ ಪ್ರೊಡಕ್ಟಿವ್ ಆಗಿ ಲಾಭಹೊಂದತಕ್ಕದ್ದು ಸರ್ಕಾರದ ಗಮನದಲ್ಲಿದೆಯೇ ಹಾಗಿದ್ದ ಪಕ್ಷದಲ್ಲಿ ಬೇರೆ ಕೈಗಾರಿಕೆಯು ಹಾಗೆ ಇದನ್ನು ಏತಕ್ಕೆ ಪರಿಗಣಿಸುವುದಕ್ಕೆ ಸಾಧ್ಯವಿಲ್ಲ ?

ಶ್ರೀ ವೀರೇಂದ್ರ ಪಾಟೀಲ್.—ಇದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ಈ ಕೈಗಾರಿಕೆಯಲ್ಲಿ ಸುಮಾರು 3 ಲಕ್ಷ ಕಿಲೋವಾಟ್ ವಿದ್ಯುಚ್ಛಕ್ತಿ ಕನ್‌ಜ್ಯೂಮ್ ಆಗುತ್ತದೆ. ಅವರಿಗೆ ಸರಿಯಾಗಿ ಪವರು ಸಿಕ್ಕದಿದ್ದರೆ ಕೈಗಾರಿಕೆ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ ಅವರಿಗೆ ವಿದ್ಯುಚ್ಛಕ್ತಿ ಹೆಚ್ಚಿನ ಪ್ರಮಾಣದಲ್ಲಿ ಬೇಕು. ಆದ್ದರಿಂದ ಅವರಿಗೆ ನ್ಯಾಯವಾಗಿ ಕನ್‌ಸೆಷನ್ ಬೇಕು.

Sri H. SIDDAVEERAPPA.—There is Aluminium Company at Madras. Have you examined what they are charging and have you compared the figures ?

Sri VEERENDRA PATIL.—I do not know what rate the Madras Government is charging. I assure the House these rates have been artived at only after taking into consideration all these factors.

ಶ್ರೀ ಎಂ. ನಾಗಪ್ಪ.—ಸ್ವಾಮಿ ಈ ಕೈಗಾರಿಕೆಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು 25 ವರ್ಷಗಳ ಒಂದು ಅಗ್ರಿಮೆಂಟ್ ಮಾಡಿಕೊಂಡಿದ್ದೀರಿ, ಮತ್ತೆ ಅವರು ಇಷ್ಟಪಟ್ಟಲ್ಲಿ ಮತ್ತೆ 25 ವರ್ಷಗಳು ಅದನ್ನು ಮುಂದುವರಿಸಿಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ, ಇದು ಸರ್ಕಾರಕ್ಕೆ ಅನ್ಯಾಯವಾಗುವುದಿಲ್ಲವೇ, ಮುಂದೆ ಕೈಗಾರಿಕೆ ಅಭಿವೃದ್ಧಿಯಾದಾಗ್ಯೆ ಬೇರೆಯವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾದ ಪರಿಸ್ಥಿತಿ ಬಂದಾಗ ಇದು ತಪ್ಪಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅದು ಬಹಳ ದೊಡ್ಡ ಕೈಗಾರಿಕೆ. ಅದಕ್ಕೆ ಸೆಕ್ಯೂರಿಟಿ ಇಲ್ಲದೆ ಇದ್ದರೆ ಹೇಗೆ ! ಪ್ರತಿವರ್ಷ ನಾವು ರೇಟು ರಿವೈಜ್ ಮಾಡಿದರೆ ಆ ಕೈಗಾರಿಕೆ ಯಾವರೀತಿ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ ?

Sri H. SIDDAVEERAPPA.—May I know when the Factory goes into production ?

Sri VEERENDRA PATIL.—I think it is there in the agreement. I am told they are going into production during the year 1969.

Mr. DEPUTY SPEAKER.—Question Nos. 511, 512, 513 and 514 lapse as the members absent. Next question.

Closure of Arrack Shops in Tumkur District

515. Sri C. K. RAJAIAH SHETTY (Chickanayakanahally).—

Will the Minister for Finance, Planning, Commerce and Industries be pleased to state :—

(a) whether many arrack shops in Tumkur District were closed one or two days in a week for want of supply ;

(b) if so, the reasons for the same ?

A.—Sri RAMAKRISHNA HEGDE (Minister for Finance, Planning Commerce and Industries).—

(a) Only two shops did not get the supply for 5 days from 16th January 1968.

(b) Unexpected increase of demand for arrack.

Sri C. K. RAJAIAH SHETTY.—In answer to (b) it is stated as "unexpected increase of demand for arrack". May I know what was the estimated quantity and what is the demand that has arisen afresh ?

Sri RAMAKRISHNA HEGDE.—I can only say that the demand was much more than what we expected. We never expected that there will be heavy demand in the first month of relaxation.

Sri C. K. RAJAIAH SHETTY.—Has it come to the notice of the Government that due to short supply of molasses the arrack is not produced and supplied in required quantities ? Have you investigated this ?

Sri RAMAKRISHNA HEGDE.—Yes Sir. The shortage is due to non-supply of raw materials that is alcohol and molasses. This year we have a total shortage of molasses to the extent of 70,000 tons.

Mr. DEPUTY SPEAKER.—Now we shall take up question No. 497 and then proceed to the held our questions.

High Level Causeways

497. Sri V. L. SHIVAPPA (Tiptur).—

Will the Minister for Public Works be pleased to state :—

(*a*) whether the estimate for construction of High Level causeways in the proximity of :

(1) Dharmegowdana Palya ;

(2) Sasalahalli and

(3) Chikkahonnavalli (Honnavalli) has been submitted ;

(*b*) if so, whether sanction has been accorded ;

(*c*) if not, the reasons ?

A.—Sri VEERENDRA PATIL (Minister for Public Works).—

(*a*) No.

(*b*) and (*c*) Does not arise in view of reply to clause (*a*) above.

ಶ್ರೀ ವಿ. ಎಲ್. ಶಿವಪ್ಪ.—ಸ್ವಾಮಿ, ನಾನು ನನ್ನ ಪ್ರಶ್ನೆಯಲ್ಲಿ ಕೇಳಿರತಕ್ಕ ಸ್ಥಳಗಳಲ್ಲಿ ಉಪಚುನಾವಣೆ ನಡೆಯುವ ಸಂದರ್ಭದಲ್ಲಿ ಈ ಇಲಾಖೆಯ ಮಾನ್ಯ ಮಂತ್ರಿಗಳು ದಯಮಾಡಿಸಿ ಆ ಪ್ರದೇಶದಲ್ಲಿ ಶತಮಾನಗಳಿಂದ ಆಗತಕ್ಕ ಕೆಲಸಗಳು ಆಗಿಲ್ಲ, ಅಲ್ಲಿ ಬಹುಭಾಗದ ಕೆಲಸಗಳ ಎಸ್ಟಿಮೇಟ್ ತಯಾರು ಆಗುತ್ತಿದೆ. ಆ ಕೆಲಸಗಳನ್ನು ಮಾಡಿಸಿಕೊಡುತ್ತೇನೆ ಎಂದು ಆಶ್ವಾಸನೆ ಕೊಟ್ಟು ಅವರಿಂದ ವೋಟನ್ನು ಕೇಳಿದ್ದಾರೆ. ಈಗ ನೋಡಿದರೆ ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಆ ಕೆಲಸಗಳ ಎಸ್ಟಿಮೇಟು ತಯಾರಾಗಿಲ್ಲ ಎಂದು ಹೇಳಿದ್ದೀರಿ, ಈಗಲಾದರೂ ತುರ್ತಾಗಿ ಧರ್ಮೇಗೌಡನಪಾಳ್ಯ, ಸಾಲಹಳ್ಳಿ ಮತ್ತು ಚಿಕ್ಕಹೊನ್ನವಳ್ಳಿಗಳ ಸಮೀಪದಲ್ಲಿರುವ ಮೇಲ್ಮಟ್ಟದ ಒಡ್ಡುದಾರಿಗಳನ್ನು ನಿರ್ಮಿಸುವುದಕ್ಕೆ ಸಂಬಂಧಪಟ್ಟ ಎಸ್ಟಿಮೇಟುಗಳನ್ನು ತಯಾರುಮಾಡಿ ಆ ಕೆಲಸಗಳನ್ನು ಮಾಡಿಸಿಕೊಟ್ಟು ಜನಗಳ ಕಷ್ಟವನ್ನು ಪರಿಹಾರಮಾಡುವುದಕ್ಕೆ ಸರ್ಕಾರದವರು ಇಷ್ಟಪಡುತ್ತೀರಾ ?

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದಹಾಗೆ ನಾನು ಯಾವ ಭರವಸೆಯನ್ನೂ ಕೊಟ್ಟಿಲ್ಲ. ನಾನು ಆ ಪ್ರದೇಶಕ್ಕೆ ಹೋಗಿದ್ದಾಗ ಇಲ್ಲಿನ ಜನಗಳು ಪಿ. ಡಬ್ಲ್ಯು. ಡಿ. ರೋಡುಗಳು ಇರುವ ಪ್ರದೇಶಗಳನ್ನು ಬಿಟ್ಟು ಇಂಟೀರಿಯರ್ ರೋಡುಗಳಿರುವ ಹಳ್ಳಿಗಳಿಗೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಈಗಾಗಲೇ ಸಾಸಲಹಳ್ಳಿ ಮತ್ತು ಚಿಕ್ಕಹೊನ್ನವಳ್ಳಿಗಳಿಗೆ ಸಂಬಂಧಪಟ್ಟ ಕೆಲಸಗಳ ಎಸ್ಟಿಮೇಟುಗಳು ತಯಾರಾಗಿವೆ. ಅವು ಇನ್ನೂ ಚೀಫ್ ಇಂಜಿನಿಯರ ಹತ್ತಿರ ಇವೆ. ಅವು ಇನ್ನೂ ನಮಗೆ ಬಂದಿಲ್ಲ. 1968-69ನೆಯ ಸಾಲಿನಲ್ಲಿ ನಾನ್ ಪಿ. ಡಬ್ಲ್ಯು. ಡಿ. ರೋಡುಗಳಿಗೆ ಇರುವಂತಹ ಹಣ ಬಹಳ ಕಡಿಮೆ ಇದೆ. ಸ್ವಲ್ಪ ಮಟ್ಟಿಗೆ ಅದಕ್ಕೆ ಹೆಚ್ಚಿಗೆ ಹಣವನ್ನು ಒದಗಿಸುವುದಕ್ಕೆ ಸಾಧ್ಯವಿದ್ದರೆ ಏನಾದರೂ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಎಲ್. ಶಿವಪ್ಪ.—ಸ್ವಾಮಿ, ಈ ಕೆಲಸಗಳನ್ನು 1972ನೇ ಇಸವಿಯವರೆಗೂ ತಡೆಹಿಡಿದು, 1972ನೇ ಇಸವಿಯಲ್ಲಿ ಮಾಡಿಸಿ ಸಾರ್ವತ್ರಿಕ ಚುನಾವಣೆಯಲ್ಲಿ ಓಟು ಪಡೆಯಬೇಕೆಂದು ನಿಮ್ಮ ಉದ್ದೇಶವೇ ? ಮೊನ್ನೆ ನಡೆದ ಉಪಚುನಾವಣೆಯಲ್ಲಿ ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಈ ಕೆಲಸಗಳನ್ನು ಮಾಡಿಸಿಕೊಡುತ್ತೇನೆಂದು ಹೇಳಿದ್ದರಿಂದ ಅಲ್ಲಿಯ ಜನರು ಪ್ರಾಮಾಣಿಕವಾಗಿ ಕಾಂಗ್ರೆಸ್‌ಗೆ ಓಟು ಮಾಡಿದ್ದಾರೆ, ಒಂದು ಓಟನ್ನೂ ಸಹ ವಿರೋಧ ಪಕ್ಷಕ್ಕೆ ಕೊಟ್ಟಿಲ್ಲ. ಆದ್ದರಿಂದ ಈ ಕೆಲಸಗಳನ್ನು 1972 ರವರೆಗೆ ಕಾಯದೆ ಜಾಗ್ರತೆ ಮಾಡಿಸುತ್ತೀರಾ ?

9-00 A. M.

ಶ್ರೀ ವೀರೇಂದ್ರ ಪಾಟೀಲ್.—ನಾನು ಯಾರಿಗೂ ಯಾವ ರೀತಿಯ ಆಶ್ವಾಸನೆಯನ್ನೂ ಕೊಟ್ಟಿಲ್ಲ. ಯಾರು ನಮಗೆ ಓಟು ಕೊಟ್ಟಿದ್ದಾರೆಂಬುದು ಸಹ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರ ಕ್ಷೇತ್ರ ಯಾವುದು ಎಂಬುದು ಸಹ ನನಗೆ ಗೊತ್ತಿಲ್ಲ. ಮೊನ್ನೆ ನಡೆದ ಉಪಚುನಾವಣೆಯ ಸಮಯದಲ್ಲಿ ನನ್ನ ಕೆಲವು ಸ್ನೇಹಿತರು ಆ ಕ್ಷೇತ್ರದ ಕೆಲವು ಹಳ್ಳಿಗಳಿಗೆ ಕರೆದುಕೊಂಡು ಹೋದಾಗ ಅಲ್ಲಿಯ ಜನರು ಕೆಲವು ಕೆಲಸಗಳು ಆಗಬೇಕೆಂದು ಹೇಳಿದ್ದರು. ಈಗ ಹಣದ ಕೊರತೆ ಇರುವುದರಿಂದ, ಹಣದ ಕೊರತೆ ನೀಗಿದಮೇಲೆ ಈ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ.

Industrial Concerns owned by Birlas

481. Sri L. SRIKANTIAH (Nanjangud).—

Will the Minister for Finance, Planning, Commerce and Industries be pleased to state :—

(*a*) the number of Industrial Concerns owned exclusively by the Birlas in the State;

(*b*) the capital invested by them in such industrial concerns belonging to them execlusively ;

(*c*) the number of industrial or commercial undertakings wherein the Birlas are partners owning less than 51 per cent of the shares and owning more than 51 per cent of the shares ;

(*d*) whether the Government made an attempt to purchase following concerns, *viz.*,

(i) C.P.C. Cotton Mills at Nanjangud ;
(ii) the Paper Mills at Nanjangud ;
(iii) the K. R. Mills, Mysore ;
(vi) Hyderabad Cements ;
(v) Electronics, Bangalore ;

before these concerns were purchased by the Birlas or the Birlas took control of these concerns ;

(*e*) the amount invested by the Government in the Birla Concerns in the State and in Industries situated outside the State ?

A.—Sri RAMAKRISHNA HEGDE (Minister for Finance, Planning, Commerce and Industries).—

(*a*) Nil.
(*b*) Does not arise in view of the reply to clause (*a*) above.
(*c*) Less than 51 per cent of the shares : Two, *viz.*,

(i) Mysore Cements, Ltd., Ammasandra.
(ii) Bharat Commerce and Industries Ltd., Nanjangud.
More than 51 per cent of the shares : Nil.

(d) No.

(e) Within the State, the Government are holding 2,34,600 shares of Rs. 10 each valued at Rs. 23.46 lakhs in Mysore Cements Ltd., Ammasandra.

No amount has been invested by Government in the Industries of the Birla concerns, situated outside the State.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಸ್ಥಳೀಯ ಉದ್ಯಮಿಗಳಿಗೆ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಹೆಚ್ಚಿನ ಅವಕಾಶ ಕೊಡುವುದು ಸರ್ಕಾರದ ಉದ್ದೇಶವಾಗಿದೆಯೆಂದು ಆಗಾಗ್ಗೆ ಹೇಳುತ್ತಿದ್ದೀರಿ. ನಂಜನಗೂಡಿನ ಸಿ. ಪಿ. ಸಿ. ಹತ್ತಿ ಗಿರಣಿಯನ್ನು 11 ಲಕ್ಷ ರೂಪಾಯಿಗಳಿಗೆ ಮತ್ತು ನಂಜನಗೂಡಿನ ಕಾಗದದ ಗಿರಣಿಯನ್ನು 15 ಲಕ್ಷ ರೂಪಾಯಿಗಳಿಗೆ ಹೊರಗಿನ ಉದ್ಯಮಿಗಳಿಗೆ ವಹಿಸಿಕೊಡುವುದಕ್ಕೆ ಬದಲು ಸರ್ಕಾರದವರೇ ವಹಿಸಿಕೊಂಡಿದ್ದರೆ ಆಗುತ್ತಿರಲಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಕೊಂಡುಕೊಂಡರೆ ನಾವು ಯಾವ ರೀತಿಯ ಅತಂಕವನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಸಿ. ಪಿ. ಸಿ. ಯು. ಹತ್ತಿ ಗಿರಣಿಯ ಶೆಟ್ಟರು 11 ಲಕ್ಷ ರೂಪಾಯಿಗಳಿಗೆ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಮೊದಲು ಮನವಿ ಮಾಡಿಕೊಂಡಿರಲಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಸಿಕ್ ಇಂಡಸ್ಟ್ರಿಗಳಿಗೆ ಸರ್ಕಾರದವರು ಕೈಹಾಕಿ ಸಾಕಾಗಿದೆ. ಹೊಸ ಹೊಸ ಇಂಡಸ್ಟ್ರಿಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಸೂಚನೆ ಮಾಡುವುದನ್ನು ನಾನು ಅಷ್ಟು ಒಪ್ಪುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಭಾರತ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ (ಲಿ.) ನಂಜನಗೂಡು, ಬಿರ್ಲಾ ಅವರಿಗೆ ಸೇರಿದ್ದು ಹೌದೋ ಅಲ್ಲವೋ ? ಈ ಕೈಗಾರಿಕಾ ಸಂಸ್ಥೆಯಲ್ಲಿ ಸರ್ಕಾರದ ಪಾತ್ರ ಇದೆಯೋ ಇಲ್ಲವೋ ಎಂಬುದನ್ನು ತಿಳಿಸಿ.

ಶ್ರೀ ರಾಮಕೃಷ್ಣ ಹೆಗಡೆ.—ಈ ಕಾರ್ಖಾನೆಯು ಬಿರ್ಲಾ ಅವರಿಗೆ ಸೇರಿದ್ದಲ್ಲ.

SHORT NOTICE QUESTIONS AND ANSWERS

Release of waters from Visveswaraiah Canal, etc.

43. SRI N. A. CHANNE GOWDA (Pandavapura).—

Will the Minister for Public Works be pleased to state :—

(a) whether the Policy of releasing of water from Visveswaraiah Canal, Chikkadevaraja Sagara Nala, Bangara Doddinala. Devarajanala, Virijanadi Nala for six days and closure for 15 days was introduced in the month of February 1968 ;

(b) if so, what was the policy all these years ;

(c) the acreage of sugarcane which is five months old ;

(d) whether young sugarcane plant which is less than 5 months old can survive without water for a period of fifteen days.

(e) whether experts were consulted before the present policy of release and closure of water from above Nalas to Sugarcane fields was adopted ?

A.—Sri VEERENDRA PATIL (Minister for Public Works).—

(*a*) Yes.

(*b*) The policy was practically the same during the previous years, during which one watering was given once in twenty days with 10 days off and 10 days on in the main channel.

(*c*) 31,188 acres and 23 guntas.

(*d*) Sugarcane crop planted has survived.

(*e*) Yes.

Sri N. A. CHANNE GOWDA.—The Hon'ble Minister has categorically stated that experts were consulted. What is the acreage inch of water required for sugarcane and what is the acreage inch supplied so far ?

† Sri VEERENDRA PATIL.—Water supply for the first six days is 1,000 cusecs and for the remaining period 900 cusecs.

Sri N. A. CHANNE GOWDA.—My question was, what is the acreage inch of water required for sugarcane and what is the acreage inch supplied ?

Sri VEERENDRA PATIL.—I do not have that information.

Sri N. A. CHANNE GOWDA.—Does not the area require more water ?

Sri VEERENDRA PATIL.—This year also we are releasing the same quantity of water that we released last year.

Sri N. A. CHANNE GOWDA.—The Government have changed the scheme because one watering was given once in 20 days with 10 days off and 10 days in the main channel. That means, less water is released. Has it come to the notice of the Government that on account of this policy, the sugarcane crop will suffer ? What is the acreage inch per acre ?

Sri VEERENDRA PATIL.—I do not have that information.

Sri N. A. CHANNE GOWDA.—Since the required quantity of water is not supplied, will the Government consider the reduction of water rate ?

Sri VEERENDRA PATIL.—I do not accept that we have not supplied the required water. This matter came before the Consultative Committee. One Joint Director of Agriculture was also there. In consultation with him, this arrangement has been made.

Sri B. B. SAYANAK.—Who are the experts and what are their qualifications ?

Sri VEERENDRA PATIL.—I have just now replied that the Joint Director of Agriculture was there on the Committee.

Sri N. A. CHANNE GOWDA.—How can the Minister say that the crops have not suffered ? Will the Minister care to come with me and see the losses suffered by the ryots in that area ?

Sri VEERENDRA PATIL.—If the Hon'ble Member brings it to my notice in writing that in any particular area crops have suffered, I will refer it to the concerned Engineer, get a report and consider.

Nelvanki Hobli Panchayat Elections

44. Sri P. VENKATAGIRIYAPPA (Kolar).—

Sri B. L. NARAYANA SWAMY (Srinivasapura).—

Will the Minister for Development and Co-operation be pleased to state :—

(*a*) whether it is a fact that all the nomination and other papers pertaining to Nelvanki Hobli Panchayat Elections have been forcibly snatched away from the Returning Officer (in February 1968) ;

(*b*) if so, whether any enquiry has been held and the action taken against the accused ;

(*c*) whether the Elections have been postponed ; if so, when the Elections are scheduled to take place ?

A.—Sri P. M. NADGOUDA (Minister for Development and Co-operation).—

(*a*) Yes.

(*b*) A Police complaint has been lodged and the matter is under investigation by Police.

(*c*) In view of the incident, the Elections have been postponed. The Deputy Commissioner, Kolar has fixed 3rd May 1968 for holding Elections to these Panchayats.

Sri B. L. NARAYANASWAMY.—May I know the progress of investigation ?

†ಶ್ರೀ ಪಿ. ಎಂ. ನಾಡಗೌಡ.—ನಲವಂಕಿ ಪಂಚಾಯತಿ ಎಲೆಕ್ಷನ್ ಕಾಲದಲ್ಲಿ ಅಲ್ಲಿದ್ದ ರಿಟರ್ನಿಂಗ್ ಆಫೀಸರ ಕಡೆಯಿಂದ ನಾಮಿನೇಷನ್ ಪೇಪರುಗಳನ್ನು ಕಿತ್ತುಕೊಂಡು ಹೋದರು ಎಂದು ದೂರು ಬಂದಿದೆ. ಇದನ್ನು ಪೋಲೀಸಿನವರು ಇನ್‌ವೆಸ್ಟಿಗೇಟು ಮಾಡುತ್ತಿದ್ದಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ಇದರಲ್ಲಿ ಕಿತ್ತುಕೊಂಡು ಹೋಗಿರುವುದು ನಿಜ ಎಂದು ಹೇಳಿದ್ದೀರಿ ಹಾಗೆ ಕಿತ್ತುಕೊಂಡು ಹೋದವರು ಯಾರು ?

ಶ್ರೀ ಪಿ. ಎಂ. ನಾಡಗೌಡ.—ಇದರಲ್ಲಿ ಇಬ್ಬರು ಇದ್ದಾರೆ. ಒಬ್ಬರು ಮುನಿಯಪ್ಪ ಎಂದು. ಇನ್ನೊಬ್ಬರು ರಷೀದ್ ಎಂದು ಇದೆ. ಈ ಇಬ್ಬರು ಮಹನೀಯರು ಇಲ್ಲಿ ಬಂದು ಎಲೆಕ್ಷನ್ ಪೇಪರುಗಳನ್ನು ಕಿತ್ತುಕೊಂಡು ಹೋದರು ಎಂದು ಇದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಪೋಲೀಸಿನವರು ಇದರ ಬಗ್ಗೆ ತನಿಖೆ ಮಾಡಿರುವ ಕಾರ್ಯಕ್ರಮ ಎಷ್ಟುಮಟ್ಟಿಗೆ ಸಾಗಿದೆ ?

ಶ್ರೀ ಪಿ. ಎಂ. ನಾಡಗೌಡ.—ಇದು ಯಾವ ಸ್ಟೇಜಿನಲ್ಲಿದೆ ಎನ್ನುವುದಕ್ಕೆ ಅವರಿಂದ ಇನ್ನೂ ಸರಕಾರಕ್ಕೆ ರಿಪೋರ್ಟು ಬಂದಿಲ್ಲ.

ಶ್ರೀ ಬಿ. ಎಲ್. ನಾರಾಯಣ ಸ್ವಾಮಿ.—ಇದುವರೆಗೆ ಒಬ್ಬ ಸಾಕ್ಷಿಯನ್ನು ಕೂಡ ಇಲ್ಲಿ ವಿಚಾರಣೆ ಮಾಡಿಲ್ಲ ಮತ್ತು ಅಪರಾಧಿಗಳು ಯಾರು ಎನ್ನುವುದನ್ನು ಇದುವರೆಗೆ ತೀರ್ಮಾನ ಮಾಡಿ ಹೇಳಿಲ್ಲ.

ಶ್ರೀ ಪಿ. ಎಂ. ನಾಡಗೌಡ.—ಇದು ಬರಾಬರಿಯಲ್ಲ.

ಶ್ರೀ ಎಂ. ನಾಗಪ್ಪ.—ಇಲ್ಲಿ ಇಬ್ಬರು ಮಹನೀಯರು ಎಲೆಕ್ಷನ್ ಪೇಪರುಗಳನ್ನು ಕಿತ್ತುಕೊಂಡು ಹೋದರು ಎಂದು ಹೇಳಿದಿರಿ. ಸಾಮಾನ್ಯವಾಗಿ ಚುನಾವಣೆಗಳು ನಡೆಯುವಾಗ ಅಲ್ಲಿ ಸರಕಾರದ ಅಧಿಕಾರಿಗಳೇ ಇರುತ್ತಾರೆ, ಜೊತೆಗೆ ಪೋಲೀಸಿನವರೂ ಇರುತ್ತಾರೆ.

ಶ್ರೀ ಜಿ. ದುಗ್ಗಪ್ಪ.—ಆನ್ ಎಂಪ್ಲಾಯಿಂಟ್ ಆಫ್ ಆರ್ಡರ್ ಸಾರ್, ಮಾನ್ಯ ಮಂತ್ರಿಗಳು ಇಲ್ಲಿ ಮುನಿಯಪ್ಪ ಮತ್ತು ರಷೀದು ಎನ್ನುವ ಇಬ್ಬರು ಇಲ್ಲಿನ ಕಾಗದಪತ್ರಗಳನ್ನು ಕಿತ್ತುಕೊಂಡು ಹೋದರು ಎಂದು ಹೇಳುತ್ತಾರೆ. ಆವರೆ ಇನ್ನೊಬ್ಬ ಮಂತ್ರಿಗಳು ದೂರೇ ಬಂದಿಲ್ಲ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸರಿ ?

ಉಪಾಧ್ಯಕ್ಷರು.—ಇದು ಪಾಯಿಂಟ್ ಆಫ್ ಆರ್ಡರಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಇಲ್ಲಿ ಇಬ್ಬರು ಮಹನೀಯರು ಕಾಗದಪತ್ರಗಳನ್ನು ಕಸಿದುಕೊಂಡು ಹೋದರು ಎಂದು ಹೇಳುತ್ತೀರಿ. ಸಾಮಾನ್ಯವಾಗಿ ಎಲೆಕ್ಷನ್‌ಗಳು ನಡೆಯುವಾಗ ಅಲ್ಲಿ ಸರಕಾರಿ ಅಧಿಕಾರಿಗಳು ಇರುತ್ತಾರೆ ಮತ್ತು ಪೋಲೀಸಿನವರೂ ಇರುತ್ತಾರೆ. ಇವರಿಬ್ಬರೂ ಇರುವಾಗ ಅದು ಹೇಗೆ ಕಾಗದಪತ್ರಗಳನ್ನು ಕಿತ್ತುಕೊಂಡು ಹೋದರು ? ಇಲ್ಲಿ ಅಡ್ಮಿನಿಸ್ಟ್ರೇಷನ್ ಎನ್ನುವುದು ಇದೆಯೇ? ಇಲ್ಲದಿದ್ದರೆ ಆಡಳಿತ ಪಕ್ಷದವರ ವತಿಯಿಂದ ಇಲ್ಲಿ ನಡೆಯುವ ಚುನಾವಣೆಗಳನ್ನು ಮುಂದೂಡಬೇಕೆಂದು ಹೀಗೇನಾದರೂ ಮಾಡಿದಿರಾ ?

ಶ್ರೀ ಪಿ. ಎಂ. ನಾಡಗೌಡ.—ಹಾಗೆ ಮುಂದೂಡುವ ಪ್ರಶ್ನೆಯೇ ಇಲ್ಲ.

ಶ್ರೀ ಹೆಚ್. ಶಿದ್ಧವೀರಪ್ಪ.—ಮಾನ್ಯ ಮಂತ್ರಿಗಳು ಹೇಳಿದಂತೆ ಇಲ್ಲಿ ಬರಾಬರಿಯಾಗಿ ರಿಪೋರ್ಟು ಬರುವುದಕ್ಕೆ ಇನ್ನೆಷ್ಟು ದಿವಸಗಳು ಬೇಕಾಗುತ್ತದೆ ?

ಶ್ರೀ ಪಿ. ಎಂ. ನಾಡಗೌಡ.—ರಿಪೋರ್ಟು ಬಂದಾಗಲೇ ಹೇಳಬಹುದು. ಈಗ ಇದನ್ನು ಹೇಳಲಿಕ್ಕೆ ಬರುವುದಿಲ್ಲ.

ಉಪಾಧ್ಯಕ್ಷರು.—ಅಲ್ಪಕಾಲವಧಿ ಪ್ರಶ್ನೆಗಳು ಮುಗಿದವು.

QUESTIONS FOR ANSWERS ON THE DAY

(but not taken up)

Bridges on Sagar-Kogar-Tumri Road

499. Sri K. H. SRINIVASA (Sagar).—

Will the Minister for Public Works be pleased to state :—

(*a*) whether two estimates, one proposing the reconstuction and another proposing the repair of the collapsed bridges on the Sagar-Kogar-Tumri Road, are pending with the Chief Engineer ;

(*b*) whether the Government has taken final decision in the matter ;

(*c*) when the construction of the bridges is going to be taken up ;

A.—Sri VEERENDRA PATIL (Minister for Public Works).—

(*a*) No ; the estimate for the reconstruction of the bridges is under consideration of the Chief Engineer.

(*b*) Yes.

(*c*) As early as possible.

Cattle Population in Bangalore Corporation Area

501. Sri G. RAME GOWDA (Doddaballapur).—

Will the Minister for Labour, Animal Husbandry, Fisheries and Sericulture be pleased to state :—

(a) the cattle population in Bangalore Corporation area ;

(b) the approximate quantity of animal-refuse produced every day ;

(c) its approximate value according to the nitrogen contents ;

(d) how the same is utilised for agricultural purposes ;

(e) whether the Government has any scheme for proper utilisation of the valuable nitrogenuous matter for agricultural purposes ;

(f) if so, the cost of the scheme ?

A.—Sri D. DEVARAJ URS (Minister for Labour, Animal Husbandry, Fisheries and Sericulture).—

(a) 33,357.

(b) 99,000 K.G. approximately.

(c) Rs. 990 to Rs. 1,980 per day.

(d) Part of the animal-refuse produced is being taken by the farmers, nursery men and vegetable growers of villages round about Bangalore for preparing farm-yard manure for their fields.

(e) No.

(f) Does not arise.

Maladministration of Kolar Municipal Council

508. Sri P. VENKATAGIRIYAPPA (Kolar).—

Will the Minister for Home and Municipal Administration be pleased to state :—

(a) whether any complaints have been received from the people of Kolar against the Maladministration of Kolar Municipal Council ?

(b) whether any enquiry has been conducted into the allegations made by the public ;

(c) the action taken in the matter ?

A.—Sri R. M. PATIL (Minister for Home and Municipal Administration).—

(a) Yes.

(b) and (c) The matter is under examination.

Departmental Canteen

511. Sri SHARANAGOWDA (Jewargi).—

Will the Minister for Food and Civil Supplies be pleased to state ;—

(*a*) whether the Government is running Departmental Canteen in Bangalore District for the benefit of their servants ;

(*b*) whether it has come to their notice that the canteens violate all the rules of Health and Hygiene and are being run unsatisfactorily ;

(*c*) the steps Government propose to take to maintain the canteens in a proper manner ?

A.—Sri B. D. JATTI (Minister for Food and Civil Supplies).—

(*a*) The Mysore Government Secretariat Departmental Canteen is run for the benefit of Mysore Government Secretariat Employees.

(*b*) No.

(*c*) Does not arise in view of reply to clause (*b*).

Sainik Schools in the State

512. G. CHANDRAKANTH (Bidar).—

Will the Minister for Agriculture and Education be pleased to state :—

(*a*) the number of Sainik Schools in the State, their location and capacity ;

(*b*) the present strength of students in each school ?

A.—Sri K. V. SHANKARA GOWDA (Minister for Agriculture and Education).—

(*a*) One at Bijapur with a capacity for 525 students.

(*b*) 297 at Bijapur.

Al India Technical Scales of Pay in Technical Colleges

513. Sri K. P. NADAGOUDA (Mudhol).—

Will the Minister for Agriculture and Education be pleased to state :—

(*a*) whether the Central Government has sent a directive to all States to implement All India Technical Scales of pay for teaching staff in Techincal Colleges ;

(*b*) whether it was to be implemented in July 1964 ;

(*c*) if so, whether it has been implemented ; if not the reasons for not implementing the directions ?

A.—Sri K. V. SHANKARA GOWDA (Minister for Agriculture and Education).—

(*a*) No. Government of India have framed a scheme and States are free to take advantage of the scheme.

(*b*) No.

(*c*) The scheme has been implemented.

General Hospital at Chickballapur

514. Sri K. M. PUTTASWAMY (Chickballapur).—

Will the Minister for Health and Housing be pleased to state :—

(*a*) the steps taken to convert the Combined Hospital at Chickballapur into General Hospital ;

(*b*) whether Government intend to convert the Combined Hospital known as Kandawarda Appaia's Hospital located in Chickballapur also into General Hospital by providing more facilities ;

(*c*) whether a sum, Rs. One lakh has already been sanctioned for conversion of the hospital into General Hospital ?

A.—Sri K. PUTTASWAMY (Minister for Health and Housing).—

(*a*) Orders sanctioning conversion of the Combined Hospital into a General Hospital of 50 beds have been issued on 2nd April 1968.

(*b*) No.

(*c*) No.

CALL ATTENTION TO A MATTER OF URGENT PUBLIC IMPORTANCE

Sri G. AMARE GOWDA.—I call the attention of the Minister for Food and Civil Supplies to the recovery of levy by coercive methods in Sindhanoor Taluk of Raichur District.

Sri B. D. JATTI (Minister for Food and Civil Supplies).—My attention has been called to the alleged recovery of the levy on foodgrains through coercive methods in Sindhanoor Taluk where paddy and other crops are stated to have failed due to non-supply of water, as the Tungbhadra Main Canal suffered a breach at a crucial period.

(SRI B. D. JATTI)

In this connection, I would like to make the following points once again clear, as I have already done on more than one occasion in the past in this House.

The scheme of procurement by levy on foodgrains adopted in Mysore State involves a levy, not on the land as such, but on the crop grown, of which there is stock. In other words, under the State's levy orders, there can be no collection of levy if no crop has been grown on the land, or if there has been a failure of the crop, owing to reasons such as the one mentioned by the hon'ble member.

The levy is determined initially on the basis of a gradual scale with reference to the area of the grower's holding and its source of irrigation, as prescribed in the schedules to the levy orders.

However, it should be stated that the Levy Orders themselves provide an option to the grower to claim determination of net surplus. If the grower considers that his net surplus is lower than the levy, as per scales either because some of his land remains fallow, or because of failure of crop, he may take an application in the prescribed form for reassessment of levy. If it is established that his net surplus is le s than the levy, according to the initial demand, the levy will be suitably reduced. If it is established that the crop has completely failed, then no levy will be collected.

There is thus no scope under the Levy Orders for collecting levy where the crop has failed, or for collecting higher rates where the yield does not justify this.

Hence, the question of harassment of growers for collection of levy does not arise. We are also aware that this year many parts of the State have been affected with scarcity conditions. In this context, in so far as collection of levy is concerned, general instructions have already been issued to all the Deputy Commissioners that in fixing the levy targets for villages affected by scarcity, assistance of the Village Panchayat Members and the Taluk Board Members concerned may be utilised. This would, no doubt, apply to Sindhanoor Taluk, as it would apply to other areas where crops might have failed.

So far, no specific instance of adoption of coercive methods for the collection of levy in Sindhanoor Taluk have come to my notice. Sometimes, a firm, proper demand made by the authorities concerned, on the basis of factual data, is misconstrued as harassment. Nevertheless, if specific instances of coercive harassment in Sindhanoor Taluk are brought to the notice of Government, I shall ensure that immediate r dress is given.

It will be appreciated that, in a climate of scarcity the interests of the entire population of the State will have to be safeguarded to the extent possible and that each case will have to be dealt with on its merits.

PAPERS LAID ON THE TABLE

Mr. DEPUTY SPEAKER.—Now Laying of papers.

Sri VEERENDRA PATIL.—I beg to lay on the Table the Annual Financial Statement of the Mysore State Electricity Board for the year 1968-69, as required under sub-section (3) of Section 61 of the Electricity (Supply) Act, 1948.

Members' Representations

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳು ಈಗ ನಮ್ಮ ಮುಂದೆ ಮೈಸೂರು ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನ 1968—69 ನೇ ವರ್ಷದ ಆನ್ಯುಯಲ್ ಫೈನಾನ್ಸಿಯಲ್ ಸ್ಟೇಟ್‌ಮೆಂಟ್‌ನ್ನು ಎಲೆಕ್ಟ್ರಿಸಿಟಿ ಆಕ್ಟ್ ಪ್ರಕಾರ ಈ ಸಭೆಯ ಮುಂದೆ ಇಟ್ಟಿದ್ದಾರೆ. 1968—69 ನೇ ವರ್ಷದ ಬಜೆಟ್ಟನ್ನು ಏಪ್ರಿಲ್ ತಿಂಗಳಿನಲ್ಲಿ ಸಭೆಯಮುಂದೆ ಇಡುತ್ತಿದ್ದಾರೆ. ಇದನ್ನು ಸಭೆ ಚರ್ಚೆ ಮಾಡಬೇಕಾದುದು ಈ ಆಕ್ಟಿನ ಉದ್ದೇಶ. ಇದುವರೆಗೆ ಕೂಡ ಇಲೆಕ್ಟ್ರಿಸಿಟಿ ಬೋರ್ಡಿನ ಆಯವ್ಯಯ ಎರಡು ವರ್ಷ ಚರ್ಚೆಯಾಗಿಲ್ಲ. ನಾನು ಸಭಾಪತಿಗಳ ಮುಖಾಂತರ ಒಂದು ಮಾತು ಕೇಳುತ್ತೇನೆ. ಈ ಸಭೆ ಇದನ್ನು ಚರ್ಚೆ ಮಾಡತಕ್ಕಂಥಾದ್ದು ಕಾನ್ಸ್ಟಿಟ್ಯೂಷನಲ್ ಆಬ್ಲಿಗೇಷನ್ ಇದೆ. ಸಭೆ ಚರ್ಚೆ ಮಾಡಬೇಕು ಎಂದು ಇದನ್ನು ಸಭೆಯ ಮುಂದೆ ಇಡುತ್ತಿದ್ದೀರಾ ಅಥವಾ ಅದನ್ನು ಅಲ್ಲಿಯೇ ಕೈ ಬಿಡುತ್ತೀರಾ ? ಇದರ ಬಗ್ಗೆ ಕೊನೆಯ ತೀರ್ಮಾನ ಏನು ಎನ್ನುವುದನ್ನು ಈ ಸಭೆಯಲ್ಲಿ ಹೇಳಬೇಕು ಎಂದು ನಿಮ್ಮ ಮುಖಾಂತರ ವಿಚಾರಿಸುತ್ತೇನೆ.

Mr. DEPUTY SPEAKER.—It will be discussed and the Business Advisory Committee will decide it.

ಶ್ರೀ ಎಚ್. ಸಿದ್ದವೀರಪ್ಪ.—ಇದರ ಜೊತೆಗೆ ಇನ್ನೊಂದು ವಿಷಯ ಸ್ಟೇಟ್ ಕಾರ್ಪೊರೇಷನ್ ಬಗ್ಗೆ ಹೇಳುವುದು ಪ್ರಕೃತವಾಗಿದೆ ಎಂದು ಈ ಸಮಯದಲ್ಲಿ ಸರಕಾರದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ಅನೇಕ ಕಾರ್ಪೊರೇಷನ್ನುಗಳು ಇವೆ, ಅವುಗಳಲ್ಲಿ ಕೋಟ್ಯಾಂತರ ರೂಪಾಯಿ ಬಂಡವಾಳ ತೊಡಗಿಸಿದ್ದೀರಿ. ಅವುಗಳ ರಿಪೋರ್ಟ ಬಂದಾಗ್ಗೆ ಅದರ ವಿಷಯದ ಬಗ್ಗೆ ಈ ಸಭೆ ತನ್ನ ಅಭಿಪ್ರಾಯ ವ್ಯಕ್ತಪಡಿಸುತ್ತದೆ ಎನ್ನತಕ್ಕಂಥ ವಿಚಾರ ಹೇಳಲಿಲ್ಲ ಹಾಗೂ ಅದಕ್ಕೆ ಇದುವರೆಗೆ ಅವಕಾಶ ಸಿಕ್ಕಿಲ್ಲ. ರೋಡ್ ಟ್ರಾನ್ಸ್‌ಪೋರ್ಟ್ ಒಂದನ್ನು ಬಿಟ್ಟರೆ ಉಳಿದವುಗಳ ಬಗ್ಗೆ ಡಿಮ್ಯಾಂಡ್ಸ್ ಚರ್ಚೆಗೆ ಬಂದಾಗ್ಗೆ ಮಾತನಾಡಿದ್ದೇವೆ. ಭದ್ರಾವತಿ ಕಾರ್ಖಾನೆ ಬಗ್ಗೆ ಮಾತನಾಡಿದ್ದೇವೆ. ಈ ಕಾರ್ಪೊರೇಷನ್ ವಿಷಯದಲ್ಲಿ ಅನೇಕ ವಿಷಯ ಇರತಕ್ಕಂಥಾದ್ದನ್ನು ಒಳಗೆ ಇದ್ದುದನ್ನು ಹೊರಗೆ ತರಲು ನಮಗೆ ಅವಕಾಶವಿಲ್ಲ. ಕೆಲವು ಕಾರ್ಪೊರೇಷನ್ ರಿಪೋರ್ಟಗಳು ಕಾಲ ಕಾಲಕ್ಕೆ ಬರುತ್ತಿಲ್ಲ. ಅವುಗಳ ರಿಪೋರ್ಟ ಬಂದಾಗ್ಗೆ ಈ ಸಭೆಯ ಮುಂದೆ ಮಂಡಿಸಿ ಅದರ ಬಗ್ಗೆ ಸಭೆಯ ಅಭಿಪ್ರಾಯ ಹೇಳುವುದಕ್ಕೆ ಅವಕಾಶ ಮಾಡಿ ಕೊಡಬೇಕು ಅದು ಅತ್ಯಾವಶ್ಯಕವಾಗಿದೆ ಎಂದು ಸರಕಾರಕ್ಕೆ ತಾವು ಸೂಚನೆ ಕೊಡಬೇಕು ಎಂದು ನಾನು ಹೇಳಬಯಸುತ್ತೇನೆ.

Mr. DEPUTY SPEAKER.—I will Consider.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಗಡಿ ವಿವಾದದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ಬೊಂಬಾಯಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿರುವ ವಿಚಾರ ಪ್ರತಿಕೆಗಳಲ್ಲಿ ಬಂದಿರುವುದನ್ನು ನೋಡಿದರೆ ಇವರು ಮಹಾಜನ್ ವರದಿಯನ್ನು ಮರೆತಿದ್ದಾರೆಯೋ ಏನೋ ಎನ್ನುವ ರೀತಿಯಲ್ಲಿ ಭಾಸವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿದ್ದಾರೆ. ಮಹಾಜನ್ ವರದಿ ಏನಾಯಿತು, ಅದೇನಾದರೂ ಮೂಲೆಗೆ ಹೋಯಿತೇ, ಯಾವ ರೀತಿಯಲ್ಲಿ ವಿವಾದ ಪರಿಹಾರವಾಗುತ್ತದೆ ಎನ್ನುವ ಬಗ್ಗೆ ಒಂದು ವಿವರಣೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡಬೇಕು.

ಉಪಾಧ್ಯಕ್ಷರು.—ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಒಂದು ನೋಟೀಸ್ ಕೊಟ್ಟಿದ್ದಾರೆ. ಅದನ್ನು ಸೋಮವಾರ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಈಗ ಅದರಮೇಲೆ ಮಾತನಾಡುವುದಕ್ಕೆ ಹೊರಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಇದೇ ಸಭೆಯಲ್ಲಿ ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕೆಂದು ತೀರ್ಮಾನವಾಯಿತು. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಬೊಂಬಾಯಿಗೆ ಹೋದಾಗ ಗಡಿ ವಿವಾದದ ಬಗ್ಗೆ ತಮ್ಮ ಶಕ್ತಿ ಮೀರಿ ಶ್ರಮಿಸುವುದಾಗಿಯೂ ಅದನ್ನು ಹೇಗೆ ಮಾಡುತ್ತೇನೆ ಯಾವಾಗ ಮಾಡುತ್ತೇನೆ ಎನ್ನುವುದನ್ನು ಈಗ ಹೇಳುವುದಕ್ಕೆ ಸಾಧ್ಯವಿಲ್ಲವೆಂಬುದಾಗಿಯೂ ಹೇಳಿದ್ದಾರೆ. ಮಹಾಜನ್ ವರದಿ ಏನಾಯಿತು ಎನ್ನುವುದನ್ನು ಅವರು ತಿಳಿಸುತ್ತಾರೆಯೇ ಸ್ವಾಮಿ ?

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭೆಯ ಅಧ್ಯಕರಿಗೆ ಮೂರು ದಿವಸಗಳ ಕೆಳಗೆ ಮದ್ರಾಸಿನಲ್ಲಿ ಆಪರೇಷನ್ ಆಗಿದೆ ಎಂದು ಪತ್ರಿಕೆಗಳಲ್ಲಿ ಓದಿದೆ. ಅವರ ಆರೋಗ್ಯ ಹೇಗಿದೆ ಎನ್ನುವುದು ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಆ ವಿಷಯವನ್ನು ಸಭೆಗೆ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಮಾನ್ಯ ಶೆಟ್ಟರು ನನ್ನ ಹತ್ತಿರ ಬಂದಿದ್ದರೆ ಹೇಳುತ್ತಿದ್ದೆ. ನಮ್ಮ ಸಭೆಯ ಅಧ್ಯಕ್ಷರಿಗೆ ಆಪರೇಶನ್ ಆಗಿದೆ, ಅವರು ಗುಣಮುಖರಾಗುತ್ತಿದ್ದಾರೆ ಎನ್ನುವುದು ಸಂತೋಷದ ಮಾತು.

ಮಹಾಜನ್ ವರದಿ ಈಗ ಕೇಂದ್ರ ಸರ್ಕಾರದ ಮುಂದೆ ಇದೆ. ಕೇಂದ್ರ ಸರ್ಕಾರದವರು ಆ ವಿಚಾರದಲ್ಲಿ ಪಾರ್ಲಿಮೆಂಟಿನಲ್ಲಿ ಒಂದು ಮಸೂದೆಯನ್ನ ತರಬೇಕಾಗಿತ್ತು. ಅವರು ಹಾಗೆ ಮಾಡದೆೊಲ್ಲದೆ ಎಲ್ಲ ಪಕ್ಷಗಳ ಮುಖಂಡರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು ಎಂದು ಮುಂದೂಡುತ್ತಿದ್ದಾರೆ. ಇದನ್ನು ಆದಷ್ಟು ಜಾಗ್ರಗೆ ಫೈನಲ್ಮಾಡಬೇಕು ಎಂದು ನಾವು ಕೇಂದ್ರಕ್ಕೆ ಕಾಗದವನ್ನು ಬರೆದಿದ್ದೇವೆ. ಮಹಾಜನ್ ವರದದಿಯಲ್ಲಿರುವ ಸಿಫಾರಸುಗಳ ಪ್ರಕಾರ ಲೋಕಸಭೆಯಲ್ಲಿ ಒಂದು ಮಸೂದೆಯನ್ನು ತರಬೇಕಾದ್ದು ಅವರ ಕರ್ತವ್ಯ. ಅದನ್ನು ಅವರು ಮಾಡದೆ ಮುಖಂಡರನ್ನು ಸೇರಿಸಿ ಮಾತನಾಡುತ್ತೇವೆಂದು ಹೇಳಿ ಅದರಲ್ಲಿ ಕಾಲ ಕಳೆಯುತ್ತಿದ್ದಾರೆ. ಇರುವ ವಿಚಾರ ಇಷ್ಟು. ನಾವು ಮಾಡುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

Mr. DEPUTY SPEAKER.—Hon'ble Food Minister will now reply.

STATEMENT OF THE CHIEF MINISTER ABOUT HIS DUAL ROLE

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಮುಂದಿನ ವಿಷಯಕ್ಕೆ ಹೋಗುವ ಮೊದಲು ನಾನು ಮುಖ್ಯ ಮಂತ್ರಿಯಾಗಿ ಮುಂದುವರಿಯುತ್ತಿರುವ ವಿಚಾರದಲ್ಲಿ ಒಂದು ಮಾತನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ನಿನ್ನೆಯ ದಿವಸ ನಾನು ಬೊಂಬಾಯಿನಲ್ಲಿ ಏನೋ ಹೇಳಿಕೆಯನ್ನು ಕೊಟ್ಟು ಬೇರೆ ಬೇರೆ ಹೇಳುತ್ತಿದ್ದೇನೆ ಎಂದು ಪತ್ರಿಕೆಗಳಲ್ಲಿ ಬಂದಿದೆ ಎಂಬುದಾಗಿ ಅದರ ಬಗ್ಗೆ ಅನೇಕ ಜನ ಮಾತನಾಡಿದ್ದಾರೆ. ಅವರೆಲ್ಲ ಏನು ಹೇಳಿದ್ದಾರೆ ಎನುವುದಕ್ಕೆ ಉತ್ತರವನ್ನು ಕೊಡವುದಕ್ಕೆ ನಾನು ಹೋಗುವುದಿಲ್ಲ. ನಾಲ್ಕೈದು ದಿವಸಗಳ ಕೆಳಗೆ ಒಂದು ಪತ್ರಿಕೆಯನ್ನು ವಿರೋಧಪಕ್ಷದ ನಾಯಕರಾದ ಶಿವಪ್ಪನವರು ತೆಗೆದುಕೊಂಡು ಬಂದು ನನಗೆ ತೋರಿಸಿ ಅದರ ಬಗ್ಗೆ ನಾನು ಜವಾಬ್ದಾರಿಯಿಂದ ಏನು ಹೇಳುತ್ತೇನೆಂದು ಕೇಳಿದರು. ನಾನು ಬೊಂಬಾಯಿಗೆ ಹೋಗಿದ್ದ ಕಾಲದಲ್ಲಿ ಅಲ್ಲಿ ನಾನಾ ರೀತಿಯಿಂದ ಈ ವಿಚಾರದ ಬಗ್ಗೆ ಕೇಳಿದರು. ಮುಖ್ಯ ಮಂತ್ರಿ ಪದವಿಯನ್ನು ಬಿಟ್ಟು ಹೋಗುತ್ತೇನೆ, ಆದರೆ ಯಾವಾಗ ಬಿಟ್ಟು ಹೋಗುತ್ತೇನೆಂಬುದು ಇನ್ನೂ ತೀರ್ಮಾನವಾಗಿಲ್ಲ ಎಂದು ಹೇಳಿದೆ. ಈ ಸಭೆಯಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಅನುಮಾನ ಮಾಡಬೇಕಾಗಿಲ್ಲ. ಪತ್ರಿಕೆಗಳಲ್ಲಿ ಬರೆದಿರುವುದನ್ನು ನೋಡಿಕೊಂಡು ಇಲ್ಲಿ ಕೇಳಿದರೆ ಏನು ಹೇಳಲಿ......

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಒಂದು ಪತ್ರಿಕೆಯಲ್ಲಿ ಮಾತ್ರ ಬಂದಿಲ್ಲ ಸ್ವಾಮಿ. ನಾವು ಎಂಟು ಹತ್ತು ಪತ್ರಿಕೆಗಳನ್ನು ಓದಿ ನೋಡಿದ್ದೇವೆ. ಅವುಗಳನ್ನು ತಮ್ಮ ಮುಂದೆಯೂ ಇಟ್ಟಿದ್ದೇವೆ. ಪತ್ರಿಕೆಗಳಲ್ಲಿ ಬಂದಿರುವುದೆಲ್ಲ ನಿಜ.

ಶ್ರೀ ಜಿ. ದುಗ್ಗಪ್ಪ (ಭರ್ಮಸಾಗರ)—ಸೋಮವಾರದ ದಿವಸ ಇದರ ಬಗ್ಗೆ ಚರ್ಚೆಯಾಗುತ್ತದೆ. ಈವಾಗಲೇ ಆ ವಿಷಯದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟರೆ ಹೇಗೆ ಆಗಬೇಕು ? ಪ್ರಿವಿಲೇಜ್ ಮೋಷನ್ ಕೊಟ್ಟಾಗ, ಮುಖ್ಯ ಮಂತ್ರಿಗಳಿಗೆ ಈಗ ಮಾತನಾಡಲು ಅವಕಾಶ ಕೊಟ್ಟರೆ, ಸೋಮವಾರ ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Mr. DEPUTY SPEAKER.—I permitted the hon'ble Chief Minister to say something.

Sri H. SIDDAVEERAPPA.—I think the question will again come up on Monday; is it not?

ಶ್ರೀ ಎಸ್. ಚನ್ನಯ್ಯ.—ತಾವು ಸೋಮವಾರ ಈ ವಿಚಾರ ತೆಗೆದುಕೊಳ್ಳುವುದಾಗಿ ಹೇಳಿರುವಾಗ ಈಗೇಕೆ ಅವಕಾಶ ಕೊಡಬೇಕು.

Sri DIGAMBARA RAO B. KALMANKAR (Aland).—Sir, I rise to a Point of Order. Regarding the Statement made by the Hon'ble Chief Minister at Bombay about his dual role; a Privilege Motion has been moved and it is before this House. Unless that Privilege Motion is taken up, the Hon'ble Chief Minister cannot say anything regarding that matter, because the important point involved in that Motion is that at Bombay he has stated that he has not yet considered about it, which fact has been published in all the Papers. Monday has been fixed to take up this issue.

Sri H. SIDDAVEERAPPA.—Perhaps, the Chief Minister may not be available on Monday, and we have no objection if the Chair can advance it today.

Sri DIGAMBARA RAO B. KALMANKAR.—It may be taken up and allowed to be discussed at length. But, making a statement before that matter is taken up by this House, is not in order.

Mr. DEPUTY SPEAKER.—There is no Point of Order. The Hon'ble Minister asked my permission to say something about it, and he was allowed by me to say.

Sri DIGAMBARA RAO B. KALMANKAR.—If he is allowed to say something before the Privilege Motion is taken up, it will take away the merit of the Privilege Motion.

Mr. DEPUTY SPEAKER.—On the previous day also I stated that the Privilege question will be Taken up on Monday.

Sri S. SIVAPPA.—Sir, you have stated that the Privilege Motion, in connection with the statement made by the Chief Minister at Bombay and his statement on the Floor of this House, will be taken up on Monday. Therefore, anything connected with that statement should be taken up only on Monday. But, you have permitted the Chief Minister to make a statement today. I want to know whether the Chief Minister will be present on Monday or not? If he will not be present on Monday, then the Privilege Motion can be advanced for today; or if he will be present on Monday, it can be taken up on Monday. But before it is taken up, his making a statement is not correct.

Mr. DEPUTY SPEAKER.—If the hon'ble Members are not prepared to hear him......

Sri M. NAGAPPA (Raichur).—The Hon'ble Speaker can only permit him under Rule 293 ; it says :

> " A member may, with the permission of the Speaker, make a personal explanation although there is no question before the Assembly, but in this case no debatable matter may be brought forward, and no debate shall arise."

The question of Privilege is before the House. So, the Hon'ble Chief Minister may not be permitted to explain anything ; he should not be allowed to give any personal explanation at this stage. He is legally precluded under Rule 293.

Mr. DEPUTY SPEAKER.—The Hon'ble Chief Minister sought the permission of the Chair to say something and he was allowed.

Sri S. NIJALINGAPPA.—If the hon'ble Members are not in a mood to hear me and if they insist that it should be taken up only on the day fixed, I will not be here on Monday ; it may be taken up on Thursday.

Sri S. SIVAPPA.—The Hon'ble Speaker has fixed Monday to take up the Privilege Motion. Now, the Chief Minister says that he will not be present here on Monday and that it should be taken up on Thursday. By this, a new situation has arisen. I want to know whether the House has to adjust according to the programme of the Chief Minister or is the Chief Minister bound by the decision of the House. The House is supreme. The Chief Minister is a servant of this House. It is for the Chair to direct the Chief Minister to be present here on that day. If the Chief Minister were to say that he cannot be present on Monday and that the Motion be taken up on Thursday, it is going back again to the same argument that the Chief Minister cannot devote his attention to the affairs of the State as very well exhibited by his statement. I earnestly request the Chair to direct the Chief Minister to be here on Monday, because you have already decided that the Privilege Motion will be taken up no Monday. The Chief Minister should obey the House.

Sri S. NIJALINGAPPA.—I am always ready to obey the House, and I am going to obey the mandate of the Speaker and the Deputy Speaker. It is for the House to decide.

Sri H. SIDDAVEERAPPA.—As per the present programme, 16th will be the last working day. I do not know the intention of the Chief Minister. We have been here for such a long time, we have got our other engagements and we have already programmed in that way. If this Privilege Motion has to advance to Thursday only to suit the convenience of the Chief Minister, I have no objection. The other issues may be postponed and this may be advanced and taken up today, because it is all important from the stand-point of the State. I want to know how long we are going to continue the sittings of the House. Apart from substantiating what the Leader of the Opposition has stated, I want to bring to the notice of this House that it is the duty of every one of us to adjust to the timings of the House. It is not correct to ask for

its advancement on personal grounds. Please clarify the position so that there may be no confusion about it. Nothing is certain. Let the press need not publish anything about this, in order to save their own interest, because nothing is certain.

9-30 A.M.

Sri S. NIJALINGAPPA.—16th is the last day and let it be taken on that day and we will close on that day.

Mr. DEPUTY SPEAKER.—I hope the Hon'ble Members agree.

Sri H. SIDDAVEERAPPA.—Then Sir, there were certain interpellations of the Leader of the House that were held-over. They have not yet been listed so far. They may also be listed, so that they may come upon that day.

Member's Representation

†Sri S. SIVAPPA.—There is another issue before the House Sir. The Hon'ble Chief Minister has issued some notices to Ministers, Ex-Ministers and Presidents and so on. Now, as the Chief Minister, he has written letter. To fulfil the object of the letter, *i.e.*, to assess the value of assets of a particular person as to what he was before 1917 and what he is to day, that is the essence of that letter. To achieve this objective, I think, a more letter by the Chief Minister will have absolutely no value. To achieve that end, if the Government is sincere, if the Hon'ble Chief Minister is sincere, I request him to let me know, under what rule of law or provisions of Constitution, he has issued that letter. The very validity of that letter is now under question. I want to know, through you Sir, and request the Chief Minister to clarify under what provisions of law that letter has been issued to various persons and what is the legal status of that letter? If his intention is to give a real statutory status to that letter, even then, I request the Hon'ble Speaker, to direct the Chief Minister and allow this House to move a special resolution to appoint a Special Tribunal or an Enquiry Commission, to enquire into the contents of this letter. If the letter is found to be purposeful, immediately you have to constitute a Commission of Enquiry and this issue must be referred to that Commission. As it is the letter has no value and nothing will come out of it. I again request you to evolve a special procedure to assess the assets of Minister, Ex-Ministers and various other persons. This issue has arisen out of the statement made by the Chief Minister that he is going to take action to assess the assets in this House. Anyhow a formula has to be evolved, as to whether the Chief Minister himself is going to constitute a Commission of Enquiry or the House is competent to do it. I therefore request you Sir, to evolve a special procedure to appoint a special Tribunal or Commission of Enquiry for this purpose.

Sri L. SRIKANTIAH (Nanjangud).—I fully endorse what my hon'ble friend Mr. Sivappa has stated. My experience is that when Pandit Jawaharlal Nehru attempted to know the assets and liabilities, except Panditji himself, no one volunteered to submit the statement of assets and liabilities. Then the question arises, whether the issuing a memorandum or notice by Chief Minister to Ministers and other persons, will serve any purpose, as there is no legal binding or statutory duty caste upon them to furnish the information on this notice.

Sri B. D. JATTI.—It is wrong, Sir. Number of us have submitted statements.

Sri L. SRIKANTIAH.—That has been given by the A.I.C.C. There is another difficulty, that is, to know whether there is any *prima facie* case or not. On the other hand if a Statutory Committee is appointed, it is for the judge to find out whether there is any *prima facie* case or not. If this matter is to be decided by the Hon'ble Chief Minister, it becomes purely a personal matter. If the Enquiry Committee is appointed then two to three people can also join together, just like in Soviet Russia. The Committee can take affidivit from the persons and can enquire into it and decide the matter. Therefore, I request that before we disperse at the end of the present session, a resolution be passed in this House to the effect that a Statutory Commission be appointed to enquire into the assets of Ministers ex-Ministers and others.

Sri S. NIJALINGAPPA.—This matter came up before this House, and just before three days I have made statement to that effect. My friend will kindly look into the proceedings of this House. Let me get the information and on the strength of the information I will decide it. Let us receive the replies to the notices first and I will take the House into confidence in this matter.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮುಂಚೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ, ಮೊನ್ನೆ ನಾನು ಆಹಾರ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಿದ್ದರೆ ಮೇಲೆ ಈ ಮನೆಯ ಸದಸ್ಯರಾದ ಶ್ರೀಮಾನ್ ವಿಠಲದಾಸಶೆಟ್ಟರು 3—4 ಆಪಾದನೆಗಳನ್ನು ಮಾಡಿದ್ದಾರೆ. ನಮ್ಮ ಊರಿನ ಪೇಪರ್‌ನಲ್ಲಿ ಅಪಾರ್ಥವಾಗುವ ಹಾಗೆ. ಬಂದಿದೆ. ಆ ಅಲಿಗೇಷನ್ಸ್ ಎಲ್ಲಾ ನನ್ನ ಮೇಲೆಯೇ ಬಂದ ಹಾಗ ಆ ಪೇಪರ್‌ನಲ್ಲಿ ಅರ್ಥವಾಗುತ್ತದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಮೇಲೆ ಅಪಾದನೆಯನ್ನು ಈ ಸಭೆಯಲ್ಲಿ ಮಾಡಿಲ್ಲ, ಪತ್ರಿಕೆಯಲ್ಲಿ ಬಂದಿರುವುದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ, ನಮ್ಮ ಜವಾಬ್ದಾರಿ ಏನಿದೆ ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅದಕ್ಕೇ ನಾನು. ಹೇಳುವುದು.

ಉಪಾಧ್ಯಕ್ಷರು.—ಆ ರೀತಿ ಮಾಡಿರುವ ಅಪಾದನೆಗಳು ಏನಾದರೂ ಇದ್ದರೆ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಅದಲ್ಲದೇ ಇನ್ನೂ ಏನಾದರೂ ಹೇಳುವುದು ಇದ್ದರೆ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ಬರುತ್ತದೆ, ಆಗ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪೋಲೀಸ್ ಡಿಮ್ಯಾಂಡ್ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಸಿಕ್ಕುವುದಿಲ್ಲ, ನನಗೆ ಗೊತ್ತು, ಒಂದೇ ಒಂದು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ, ಅವರು ಮಾಡಿದ ಅಪಾದನೆಗಳಲ್ಲಿ ಒಂದು ಅಂಶವನ್ನಾದರೂ ಕೂಡ ಅವರು ಪ್ರೂವ್‌ಮಾಡಿದರೆ

ನಾನು ಈ ಮನೆಯ ಸದಸ್ಯತ್ವಕ್ಕೆ ರಾಜಿನಾಮೆ ಕೊಡುವುದು ಅಲ್ಲದೇ ಸನ್ಯಾಸಿಯಾಗಿ ಹೊರಟು ಹೋಗುತ್ತೇನೆ. ಇಲ್ಲದೇ ಇದ್ದರೆ ಅವರು ಹೋಗಬೇಕು ಎಂದು ಹೇಳುತ್ತೇನೆ.

(*Interruptions*)

Mr. DEPUTY SPEAKER.—Hon'ble Minister for Food will reply to the Debate.

ಶ್ರೀ ಕೆ. ಹೆಚ್ ರಂಗನಾಥ್ (ಮೂಡಗೆರೆ).—16 ನೇ ತಾರೀಖು ಈ ಮನೆಯ ಕಾರ್ಯಕಲಾಪಗಳು ಮುಗಿಯುತ್ತದೆಯೋ ಎನ್ನುವುದು ನಿಶ್ಚಿತವಾಗಿ ಗೊತ್ತಾಗಲಿಲ್ಲ. ಇನ್ನು ಕೋ-ಆಪರೇಷನ್, ಹೋಮ್, ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡ್ಸ್ ಮತ್ತು ಅಪ್ರೋಪ್ರಿಯೇಷನ್ ಬಿಲ್ ಇವು ಮುಗಿಯಬೇಕಾಗಿವೆ.

ಉಪಾಧ್ಯಕ್ಷರು.—ಇವೊತ್ತು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆದಿದ್ದೇವೆ. We will decide it.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಶ್ರೀಮಾನ್ ಭಾಸ್ಕರಶೆಟ್ಟರು ಪ್ರೊಸೀಡಿಂಗ್ಸ್ ವಿಷಯದಲ್ಲಿ ಯಾವುದೋ ಪತ್ರಿಕೆಯಲ್ಲಿ ತಪ್ಪು ವರದಿಯಾಗಿದೆ ಎಂದು ಹೇಳಿದಾಗ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡಬಹುದೇ ಹೊರತು ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ. ಹೇಗೆ ಆಗುವುದಿಲ್ಲ. ಈ ಸಭೆಯಲ್ಲಿ ನಡೆವಳಿಕೆ ಏನು ನಡೆದಿದೆ, ಮತ್ತು ಸರಿಯಾಗಿ ವರದಿ ಆಗದಿದ್ದರೆ, ಪತ್ರಿಕೆ ಸಂಪಾದಕರನ್ನು ಕರೆಸಿ ಅಲ್ಲಿ ಪತ್ರಿಕೆ ಪ್ರಕಟಿಸಿರುವುದು ಇಲ್ಲಿ ನಡವಳಿಕೆಗೆ ವಿರೋಧವಾಗಿದೆ ಎಂದು ಹೇಳುವುದಕ್ಕೆ ಅಧಿಕಾರ ಇದೆ. ಹಾಗೆ ಮಾಡಿದ ಹೊರತು ಕ್ರಮವಾಗುವುದಿಲ್ಲ. ಆ ರೀತಿ ಮಾಡಬೇಕೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

Mr. DEPUTY SPEAKER.—I will consider.

BUDGET ESTIMATES FOR 1968-69—DEMANDS FOR GRANTS

DEMAND NOS. 15 AND 53

(*Debate Continued*)

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ಮಾತನಾಡಿದಂಥ ಕಾಲಕ್ಕೆ ಕೆಲವು ವಿಷಯಗಳನ್ನು ಎತ್ತಿದ್ದಾರೆ. ಎಲ್ಲಾ ವಿಷಯಗಳ ಬಗ್ಗೆ ಕೂಲಂಕಷವಾಗಿ ಉತ್ತರ ಹೇಳಲಿಕ್ಕೆ ಸಾಧ್ಯವಾಗದಿದ್ದರೂ ಮುಖ್ಯವಾದಂಥ ವಿಷಯಗಳ ಬಗ್ಗೆ ಉತ್ತರ ಹೇಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮುಖ್ಯವಾಗಿ ನಾವು ಆಹಾರಧಾನ್ಯ ಸಂಗ್ರಹ ಮಾಡುವುದು ಒಂದು ಸರ್ಕಾರದ ಕಾರ್ಯಕ್ರಮ. ಈ ಆಹಾರಧಾನ್ಯ ಸಂಗ್ರಹ ಮಾಬೇಕಾಗಿದ್ದರೆ ಲೆವಿ ಮೂಲಕ ಸಂಗ್ರಹ ಮಾಡುತ್ತೇವೆ. ಎರಡನೆಯದು ರೂಲ್ ಆಫ್ ಪ್ರಿಯಂಪ್‌ಷನ್ ಎಂದರೆ ಮಾರ್ಕೆಟ್‌ನಲ್ಲಿ ಯಾರು ಹೆಚ್ಚಿಗೆ ಬೆಲೆ ಕೊಟ್ಟು ಆಹಾರ ಕೊಂಡುಕೊಳ್ಳುತ್ತಾರೋ ಅಂತಹವರಿಂದ ಮಾರ್ಕೆಟ್ ಕಮಿಟಿಯವರು ಅರ್ಧ ಧಾನ್ಯ ತೆಗೆದುಕೊಳ್ಳುತ್ತಾರೆ. ಈ ಬೆಲೆ ಕೊಡುವಂತೆ ಒಂದು ನಿಯಮ ಮಾಡಿದ್ದೇವೆ. ಆ ನಿಯಮದ ಪ್ರಕಾರ ಆಹಾರಧಾನ್ಯ ಕೊಂಡುಕೊಳ್ಳುವುದು ಒಂದು ಸಂಗ್ರಹದ ನೀತಿ. ಮೂರನೆಯದು ಸಹಕಾರಿ ಸಂಘಗಳಿಗೆ ಮಾರ್ಕೆಟ್‌ನಲ್ಲಿ ಯಾವ ರೀತಿ ಅನುಕೂಲವಾಗುತ್ತದೆ ಆ ರೀತಿ ಕೊಂಡುಕೊಳ್ಳುವುದು ಅದು ಒಂದು ತರಹ. ಇದರ ಹೊರತು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರು ನಮ್ಮ ರಾಜ್ಯದಲ್ಲಿ ಆಗಲಿ ಅಥವಾ ಇನ್ನು ಇತರ ಕಡೆಗಳಲ್ಲಿ ಆಗಲಿ ಆಹಾರಧಾನ್ಯಗಳನ್ನು ಕೊಂಡುಕೊಳ್ಳುತ್ತಾರೆ. ಅದರಲ್ಲೂ ನಮಗೆ ಆಹಾರಧಾನ್ಯ ಉಪಯೋಗ ಮಾಡಲಿಕ್ಕೆ ಆಗುತ್ತದೆ. ಈ ರೀತಿ ಆಹಾರಧಾನ್ಯ ಸಂಗ್ರಹ ಮಾಡುತ್ತೇವೆ. ಅದಲ್ಲದೆ ಕೇಂದ್ರ ಸರ್ಕಾರದವರು ಎಷ್ಟು ಸ್ಟಾಕ್ ಮಾಡುತ್ತಾರೋ ಅದರಲ್ಲಿ ಒಂದಂಶ ಆಹಾರಧಾನ್ಯ ನಮಗೆ ಕೊಡುತ್ತಾರೆ. ಇದು ಒಂದು ತರಹ ಆಹಾರಧಾನ್ಯ ಸಂಗ್ರಹ.

(ಶ್ರೀ ಬಿ. ಡಿ. ಜತ್ತಿ)

ಆಹಾರಧಾನ್ಯ ಕೂಡು ಹಾಕುವುದು ಮತ್ತು ಕೇಂದ್ರ ಸರ್ಕಾರದ ಸಹಾಯದಿಂದ ಆಹಾರ ಧಾನ್ಯ ಸಂಗ್ರಹ ಮಾಡುವುದು ಈ ಎರಡು ತರಹದಿಂದ ಎಷ್ಟು ಆಹಾರಧಾನ್ಯ ಸಿಕ್ಕುತ್ತದೆ ಎಂದು ಈ ಮೂರು ವರ್ಷದ ಅಂಕಿಸಂಖ್ಯೆಗಳನ್ನು ನಾನು ಕೊಡುತ್ತಿದ್ದೇನೆ. 1965–66 ರಲ್ಲಿ ನಮ್ಮ ರಾಜ್ಯದಲ್ಲಿ ಸಂಗ್ರಹ ಮಾಡಿದಂಥ ಆಹಾರಧಾನ್ಯದ ಬಗ್ಗೆ ವಿವರಣೆ ಕೊಡುತ್ತೇನೆ. ನಾವು ಸಂಗ್ರಹ ಮಾಡಬೇಕು ಎಂದು ಗೊತ್ತುಮಾಡಿದ್ದ ಟಾರ್ಗೆಟ್ 1965-66 ರಲ್ಲಿ 2 ಲಕ್ಷ 56 ಸಾವಿರದ 575 ಟನ್. ಆದರೆ ಪ್ರತ್ಯಕ್ಷವಾದ ಸಂಗ್ರಹ ಮಾಡಿದ್ದು 1 ಲಕ್ಷ 52 ಸಾವಿರದ 138 ಟನ್ 1966–67 ರಲ್ಲಿ ನಾವು ಅಪೇಕ್ಷೆ ಪಟ್ಟಿದ್ದ 3 ಲಕ್ಷ 97 ಸಾವಿರದ 754 ಟನ್ ಆದರೆ ಪ್ರತ್ಯಕ್ಷವಾಗಿ ಆಹಾರಧಾನ್ಯ ಸಂಗ್ರಹ 1 ಲಕ್ಷ 46 ಸಾವಿರದ 916 ಟನ್. 1967-68 ರಲ್ಲಿ ಈ ವರ್ಷ ಅಂದರೆ 2–4–1968 ರವರೆಗೆ ಸಂಗ್ರಹ ಮಾಡಬೇಕಾದುದು 2 ಲಕ್ಷ 46 ಸಾವಿರದ 877 ಟನ್. ಆದರೆ ಪ್ರತ್ಯಕ್ಷವಾಗಿ ನಾವು ಸಂಗ್ರಹಣೆ ಮಾಡಿದ್ದು 1 ಲಕ್ಷ 4 ಸಾವಿರದ 234 ಟನ್. ಈ ಮೂರು ವರ್ಷದ ಕಾರ್ಯಕ್ರಮದಿಂದ ಏನು ಗೊತ್ತಾಗುತ್ತದೆ ಎಂದರೆ ಎಷ್ಟು ಆಹಾರಧಾನ್ಯವನ್ನು ಲೆವಿ ಮೂಲಕ ಸಂಗ್ರಹ ಮಾಡಬೇಕು ಎಂದು ಪ್ರಯತ್ನ ಮಾಡಿದ್ದೆವೋ ಅದರ ಅರ್ಧದಷ್ಟು ಅಂದರೆ 100ಕ್ಕೆ 50 ರಷ್ಟು ಆಹಾರಧಾನ್ಯ ಸಂಗ್ರಹ ಮಾಡಿದ್ದೇವೆ. ಅದಕ್ಕಿಂತ ಹೆಚ್ಚಿಗೆ ಮಾಡಲಿಕ್ಕೆ ಹೋಗಿಲ್ಲ. ಈ ವರ್ಷ 1 ಲಕ್ಷ 50 ಸಾವಿರ ಟನ್‌ನಷ್ಟು ಆಹಾರಧಾನ್ಯ ಸಂಗ್ರಹ ಮಾಡಬೇಕು ಎಂದು ನಿರ್ಧಾರ ಮಾಡಿದ್ದೇವೆ. ಅದು ಆಗಬಹುದು ಎಂದು ಕಾಣುತ್ತದೆ. ಇನ್ನು ಸರ್ಕಾರದವರು ಲೆವಿ ಮೂಲಕ ಆಹಾರಧಾನ್ಯ ವಸೂಲು ಮಾಡುವುದು ಎಷ್ಟು ಮಾಡುತ್ತಾರೆ ಎನ್ನುವ ಸಮಸ್ಯೆ ಪುನಃ ಪುನಃ ಈ ಮನೆಯಲ್ಲಿ ಬರುತ್ತಾ ಇದೆ. ಇದನ್ನು ವಿಚಾರಣೆ ಮಾಡಿ ನೋಡಿದಾಗ ಉತ್ಪಾದನೆ ಮಾಡಿದ ಆಹಾರಧಾನ್ಯದಲ್ಲಿ 100ಕ್ಕೆ 8 ರಷ್ಟು ವಸೂಲ್ಮಾಡುತ್ತಿದ್ದೇವೆ. ಉಳಿದುದ್ದು ರೈತರ ಕಡೆ ಇರುತ್ತದೆ. ಸರ್ಕಾರದವರಿಗೆ ಕೊಡಬೇಕಾದ ಲೆವಿ ಕೊಟ್ಟನಂತರ ಉಪಯೋಗ ಮಾಡಬೇಕಾದುದಷ್ಟು ಮಾಡಿ ಉಳಿದಂಥಾದ್ದನ್ನು ಮಾರ್ಕೆಟಿನಲ್ಲಿ ಬೇಕಾದ ಬೆಲೆಗೆ ಮೈಸೂರು ರಾಜ್ಯದ ಯಾವ ಮಾರ್ಕೆಟಿನಲ್ಲೇ ಆಗಲಿ ಮಾರಾಟ ಮಾಡುವುದಕ್ಕೆ ಅವಕಾಶ ಇದೆ. ಬೆಲೆ ಬಗ್ಗೆ ಅನೇಕರು ಆಕ್ಷೇಪ ಎತ್ತಿದ್ದಾರೆ. ಸರ್ಕಾರದವರು ಲೆವಿ ಮೂಲಕ ಆಹಾರಧಾನ್ಯ ಕೊಂಡುಕೊಳ್ಳಬೇಕಾದರೆ ಬೆಲೆಯನ್ನು ನಿಗದಿ ಮಾಡುವುದು ಕೇವಲ ನಮ್ಮ ಕೈಯ್ಯಲ್ಲಿಲ್ಲ. ಮೈಸೂರು ರಾಜ್ಯದೊಳಗೆ ಯಾವ ರೀತಿ ಬೆಲೆ ನಿಗದಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ. ಕೇಂದ್ರ ಸರ್ಕಾರದವರು ವಕ್ಕಲುತನ ಇಲಾಖೆಯ ತಜ್ಞರ ಅಭಿಪ್ರಾಯ ತೆಗೆದುಕೊಂಡು ಬೆಲೆಯನ್ನು ನಿಗದಿ ಮಾಡಿದ ಕಾಲಕ್ಕೆ ಇಲ್ಲಿ ರೈತ ಭೂಮಿ ಒಳಗೆ ಬೀಜ ಹಾಕಿ ಆಹಾರ ಉತ್ಪಾದನೆ ಮಾಡುವ ತನಕ ಏನು ಖರ್ಚು ಬೀಳುತ್ತದೆ ಅದನ್ನು ಲೆಕ್ಕ ಹಾಕಿ ಬೆಲೆ ನಿಗದಿ ಮಾಡುತ್ತಾರೆ. ಅದರ ಪ್ರಕಾರ ಈ ವರ್ಷದ ಬೆಲೆ ಉತ್ತಮ ತರಹ ಭತ್ತ ಒಂದು ಕ್ವಿಂಟಾಲ್‌ಗೆ 52 ರೂಪಾಯಿ, ಅದಕ್ಕಿಂತ ಕಡಿಮೆ ತರಗತಿಯದು 51 ರೂಪಾಯಿ, ಸರ್ವಸಾಮಾನ್ಯ ತರಹದ್ದು 46 ರೂಪಾಯಿ, ಅದಕ್ಕಿಂತ ಕೆಳಗೆ ಇರುವುದು 45 ರೂಪಾಯಿ. ಜೋಳದಲ್ಲಿ ಮೂರು ತರಹ ಇದೆ. ಕೆಂಪು ಜೋಳ, ಹಳದಿ ಜೋಳ ಮತ್ತು ಬಿಳಿ ಜೋಳ. ಇದರಲ್ಲೂ ಮೂರು ತರಹ ಬೆಲೆ ಇದೆ. ಕೆಂಪು ಜೋಳ 35 ರೂಪಾಯಿ, ಹಳದಿ ಜೋಳ 52 ರೂಪಾಯಿ, ಬಿಳಿ ಜೋಳ 54 ರೂಪಾಯಿ ಇದೆ. ಸಜ್ಜೆ ಒಂದು ಕ್ವಿಂಟಾಲ್‌ಗೆ 52 ರೂಪಾಯಿ ಇದೆ. ಈ ರೀತಿ ನಿಗದಿ ಮಾಡಿ ಸರ್ಕಾರದವರು ಈ ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಆಹಾರ ಧಾನ್ಯದ ಬೆಲೆ ಕೆಲವು ಮಟ್ಟಿಗೆ ಕಡಿಮೆಯಾಗುತ್ತಿದೆ. ಈ ರೀತಿ ಬೆಲೆ ಕಡಿಮೆ ಆದಾಗ ಅನೇಕ ಸದಸ್ಯರು ಕೇಳಿದರು ನೀವು ಏನು ಮಾಡುತ್ತೀರಿ ಎಂದು. ಸರ್ಕಾರದ ವಿಚಾರ ಹೀಗೆ ಇದೆ. ಈಗ ನಾನು ಹೇಳಿದ ದರದಂತೆ ಆಹಾರಧಾನ್ಯ ಮಾರ್ಕೆಟ್‌ನಲ್ಲಿ ಸಿಕ್ಕುತ್ತಾ ಇದ್ದರೆ ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ತೆಗೆದುಕೊಂಡು ಸಂಗ್ರಹ ಮಾಡಿ ಒಳ್ಳೆಯ ರೀತಿಯಿಂದ ಮುಂದಿನ ಉಪಯೋಗಕ್ಕೆ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದರಸಲುವಾಗಿ ರೈತರ ಯಾವ ವಿವಂಚನೆಗೂ ಒಳಗಾಗಕೂಡದು ಎಂದು ನನ್ನ ಅಭಿಪ್ರಾಯ ಇದೆ. ಸರ್ಕಾರದಲ್ಲಿ ಈಗಿರತಕ್ಕ ಸಮಸ್ಯೆಗಳು ಎರಡು. ಒಂದು ಆಹಾರ ಧಾನ್ಯಗಳನ್ನು ರೈತರ ಕಡೆಯಿಂದ ಕೊಂಡುಕೊಳ್ಳುವುದು ಮತ್ತು ಆ ರೀತಿ ಕೊಂಡುಕೊಳ್ಳುವ ಕಾಲಕ್ಕೆ ಸರಿಯಾದ ಬೆಲೆ ಅವರಿಗೆ ಸಿಗುವುದು, ಇದು ಒಂದು ಸಮಸ್ಯೆ. ಎರಡನೆಯದು ಕೊಂಡುಕೊಂಡ ಆಹಾರಧಾನ್ಯಗಳನ್ನ ಬಳಕೆದಾರರಿಗೆ ಹಂಚಬೇಕಾದರೆ ಅವರಿಗೆ ಯೋಗ್ಯ ಬೆಲೆಗೆ ಮಾರಾಟ ಮಾಡಬೇಕು. ಈ ಎರಡು ಸಮಸ್ಯೆಗಳು ಬಗೆಹರಿಯಬೇಕಾದರೆ, ಇದು ಒಂದು ಬಹಳ ಕಠಿಣ ಸಮಸ್ಯೆ. ಇದರಿಂದ ನಾವು ಮಾಡಬೇಕಾದುದು ಏನೆಂದರೆ, ರೈತರಿಗೆ ಯೋಗ್ಯ ಬೆಲೆ ಕೊಡಬೇಕು ಬಹಳ ಹೆಚ್ಚು

ಕೊಟ್ಟರೆ, ನಂತರ ಬಳಕೆದಾರರು ಕೊಂಡುಕೊಳ್ಳಬೇಕಾದರೆ, ಅವರು ಶಕ್ತಿ ಮೀರಿ ಹೆಚ್ಚಿನ ಬೆಲೆ ಕೊಟ್ಟು ಕೊಂಡು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ, ಅಥವಾ ನಾವು ಮಾಡಿದ್ದು ಸರಿಯೇ ಎಂದು ಈ ಎರಡೂ ಕಡೆ ನೋಡಿಕೊಂಡು ಹೊಂದಾಣಿಕೆ ಮಾಡಬೇಕು. ಆ ರೀತಿಯಾಗಿ ವ್ಯವಹಾರ ಮಾಡಿದ್ದೇವೆ.

ಇನ್ನು ಲೆವಿ ಬಗ್ಗೆ ಅನೇಕರು ಅನೇಕ ತೊಂದರೆಗಳನ್ನು ಹೇಳಿದ್ದಾರೆ. ಆದರೆ ಈಗಾಗಲೇ ಹೇಳಿದಂತೆ ಇದುವರೆಗೂ ನಾವು ಲೆವಿ ರೂಪದಲ್ಲಿ ಆಹಾರಧಾನ್ಯಗಳನ್ನು ವಸೂಲು ಮಾಡಿದ್ದು ಸೇಕಡ 50 ಕ್ಕಿಂತ ಕಡಿಮೆ ಇದೆ. ಅದಕ್ಕಿಂತ ಕಡಿಮೆ ಮಾಡಬೇಕು, ಜನಗಳಿಗೆ ಬಹಳ ಅನ್ಯಾಯವಾಗಿದೆ, ಕಷ್ಟವಾಗಿದೆ ಎಂದು ಹೇಳುತ್ತಾರೆ. ಆ ರೀತಿ ಆಗಿದೆಯೆಂದು ನನಗನ್ನಿಸುವುದಿಲ್ಲ, ಆ ಮಾತನ್ನು ನಾನು ಒಪ್ಪುವುದಿಲ್ಲ. ಇಲ್ಲಿ ಯಾವ ರೀತಿಯಲ್ಲೂ ರೈತರಿಗೆ ತೊಂದರೆಯಾಗಿಲ್ಲವೆಂದೂ ನಾನು ಹೇಳುವುದಕ್ಕೆ ಆಗುವುದಿಲ್ಲ. ಅಂತಹವರೂ ಅನೇಕರು ಇದ್ದಾರೆ. ಈಗ ಸರ್ಕಾರದವಲ್ಲಿದ್ದು ಅಲ್ಲಿಯೇ ಕೆಲಸ ಮಾಡಿಕೊಂಡಿದ್ದು ಯಾರಾದರೂ ತಪ್ಪು ಮಾಡಿದ್ದರೆ, ಅದರಲ್ಲಿ ದೋಷವಿದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ತಕ್ಷಣ ಬರೆದು ತಿಳಿಸಿದ್ದಾರೆ. ಸಮಕ್ಷಮ ಡೆಪ್ಯುಟಿ ಕಮಿಷನರ್ ಅವರು ಕೆಲವು ಸಾರಿ ಸಭೆಗಳಿಗೆ ಬಂದಾಗ್ಗೆ ತಿಳಿಸಿದ್ದಾರೆ. ಇನ್ನೊಂದು ವಿಷಯ. ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಇದೆಯೋ ಅಲ್ಲೆಲ್ಲಾ ಸರ್ಕಾರದವರು ಈಗಾಗಲೇ ಅನೇಕ ವಿಷಯಗಳನ್ನು ಈ ಬಗ್ಗೆ ತಿಳಿಸಿದ್ದಾರೆ. ಅದರೊಳಗೆ ಲೆವಿ ವಸೂಲು ಮಾಡಬೇಕಾದರೆ ಗ್ರಾಮ ಪಂಚಾಯತಿ ಸದಸ್ಯರು, ತಾಲ್ಲೂಕು ಬೋರ್ಡ್ ಸದಸ್ಯರುಗಳನ್ನು ಕೇಳಿ ಅವರಿಂದ ತಕ್ಕ ಸಲಹೆಗಳನ್ನು ತೆಗೆದುಕೊಂಡು ಯೋಗ್ಯವಾದಷ್ಟು ಅವರೂ ಇವರೂ ಕೂಡಿ ಒಂದು ಪಟ್ಟಿಯನ್ನು ಸಿದ್ಧಮಾಡಿ ಲೆವಿ ಪದ್ಧತಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿದೆ. ಒಟ್ಟಿನಲ್ಲಿ ಆ ವಿಚಾರದಲ್ಲಿ ಗ್ರಾಮಪಂಚಾಯತಿ ಸದಸ್ಯರನ್ನೂ ಮತ್ತು ತಾಲ್ಲೂಕು ಬೋರ್ಡ್ ಸದಸ್ಯರನ್ನೂ ಕೇಳಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ. ಆ ರೀತಿಯಾಗಿ ಎಲ್ಲಾ ಕಡೆಗಳಲ್ಲಿಯೂ ತಿಳಿಸಿದ ಮೇಲೆಯೂ ನಾವು ಏನೂ ಮಾಡಿಲ್ಲವೆಂದು ಹೇಳುವುದು ಖಂಡಿತವಾಗಿ ಸರಿಯಲ್ಲ. ಇನ್ನು ಮೂರನೆಯ ಮಾತು ಏನೆಂದರೆ, ರೈತರಿಗೂ ಕೂಡ ಸಂಪೂರ್ಣ ಹಕ್ಕು ಕೊಟ್ಟಿದೆ. ಸರ್ಕಾರದ ಅಧಿಕಾರಿಗಳು ಡಿಮ್ಯಾಂಡ್ ನೋಟೀಸನ್ನು ಸಿದ್ಧಮಾಡುವ ಕಾಲಕ್ಕೆ ಆ ಕ್ಷೇತ್ರ ಎಷ್ಟಿದೆ, ಆ ಕ್ಷೇತ್ರದಲ್ಲಿ ಎಷ್ಟು ಬೆಳೆಯಬಹುದು, ಎಷ್ಟು ಬೆಳೆದಿದೆ, ಬೆಳೆಯಾದ ಮೇಲೆ ಲೆವಿ ಮಾಡುವುದು ಕಾನೂನು ಪ್ರಕಾರ ಎಷ್ಟು ಇರುತ್ತದೆ — ಇವೆಲ್ಲವನ್ನೂ ಹೇಳಲು ಸಂಪೂರ್ಣ ಅಧಿಕಾರವನ್ನು ರೈತರಿಗೇ ಕೊಟ್ಟಿದೆ. ರೈತನಾದವನು ತನ್ನ ಖರ್ಚಿಗೆ ಎಷ್ಟು ಬೇಕು, ಬೀಜಕ್ಕೆ ಎಷ್ಟು ಬೇಕು ಎಂಬುದನ್ನು ನಿರ್ಣಯ ಮಾಡಿದನಂತರ ತಾವು ಮೊದಲು ಕೊಟ್ಟ ನೋಟೀಸಿಗಿಂತ ಆಹಾರ ಧಾನ್ಯ ಅವನಲ್ಲಿ ಕಡಿಮೆ ಇದ್ದರೆ ಆಗ ಅವನು ಏನೂ ಕೊಡಕೂಡದು ಎಂಬುದಾಗಿ ನಿರ್ಣಯ ಕೊಟ್ಟನಂತರ ಸರ್ಕಾರಕ್ಕೆ ಏನೂ ಕೊಡಬಾರದೆಂಬ ಬಗ್ಗೆ ಸಂಪೂರ್ಣ ಅಧಿಕಾರ ಕೊಟ್ಟಿದೆ. ಅದನ್ನು ಉಪಯೋಗ ಮಾಡದಿದ್ದರೆ ಅದು ಸರ್ಕಾರದ ತಪ್ಪು ಆಗುವುದಿಲ್ಲ. ಒಂದು ವೇಳೆ ರೈತ ಸಾಕಷ್ಟು ಓದಲಿಲ್ಲ, ಅದಕ್ಕೋಸ್ಕರ ಗೊತ್ತಾಗಲಿಲ್ಲವೆಂದು ಹೇಳಿದರೆ, ಆಗ ಸರ್ವರೂ ನಾವೂ ನೀವೂ ಕೂಡ ಸಹಾಯ ಮಾಡಬೇಕು. ಎಲ್ಲಾದರೂ ದೋಷಗಳಿದ್ದರೆ ಅವನ್ನು ಆಗ ಸರಿಪಡಿಸುತ್ತೇವೆ. ಇನ್ನು ಕೆಲವರು ಲೆವಿ ಇರಬೇಕು, ಇರಬಾರದು ಎಂಬುದಾಗಿ ಮಾತನಾಡಿದ್ದಾರೆ. ಲೆವಿ ಇರಬೇಕೆಂಬ ಮಾತನ್ನು ನಾವು ಈಗ ಒಪ್ಪಬೇಕು. ಸರ್ಕಾರದವರೂ ಒಪ್ಪಬೇಕು. ಆಹಾರ ಸಂಗ್ರಹಣೆ ಒಂದು ಲೆವಿ ಮೂಲಕವೇ ಆಗಬೇಕು. ಅದಕ್ಕಾಗಿ ಕೇಂದ್ರ ಸರ್ಕಾರ ಬೇರೆಬೇರೇ ಪ್ರಾಂತಗಳಿಂದ ಆಹಾರಧಾನ್ಯಗಳನ್ನು ಕೂಡಿಸಬೇಕು. ಎಲ್ಲಿ ಆಹಾರಧಾನ್ಯಗಳು ಸಿಗುವುದಿಲ್ಲವೋ, ಎಲ್ಲಿ ಅಭಾವ ಪರಿಸ್ಥಿತಿ ಇದೆಯೋ, ಎಲ್ಲಿ ಕಾರ್ಮಿಕರು ಹೆಚ್ಚು ಕೆಲಸ ಮಾಡುತ್ತಾರೆಯೋ ಅಲ್ಲಿಗೆ ಸಾಧ್ಯವಾದಷ್ಟು ಕಡಿಮೆ ಬೆಲೆಗೆ ಆಹಾರ ಪದಾರ್ಥಗಳನ್ನು ಒದಗಿಸಬೇಕು. ಈ ನಿಯಮವನ್ನು ನಾವೂ ಒಪ್ಪುತ್ತೇವೆ, ನೀವೂ ಒಪ್ಪುತ್ತೀರಿ. ಅಲ್ಲದೆ ಅದರಲ್ಲಿರತಕ್ಕ ದೋಷಗಳನ್ನು ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ. ಒಂದೆರಡು ದೋಷಗಳು ಈಗಾಗಲೇ ಸರ್ಕಾರಕ್ಕೆ ಗೊತ್ತಾಗಿವೆ. ಅವನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡಲಾಗಿದೆ.

ಇನ್ನು ಕೆಲವರು ಮಾರ್ಕೆಟ್‌ನಲ್ಲಿ ಯಾವ ಬೆಲೆಗಳಲ್ಲಿ ಆಹಾರಧಾನ್ಯಗಳು ಸಿಗುತ್ತವೋ ಆ ಬೆಲೆಗೇ ಸರ್ಕಾರದವರೂ ಸಹ ಕೊಂಡುಕೊಳ್ಳಬೇಕೆಂದು ಹೇಳಿದರು. ಮಾರ್ಕೆಟ್ಟಿನಲ್ಲಿ ಹೆಚ್ಚು ಬೆಲೆ ಇದ್ದಾಗ್ಗೆ ಕೊಂಡುಕೊಂಡು, ಬಳಕೆದಾರರಿಗೆ ಖರ್ಚು ಹೋಗಿ ಆ ಬೆಲೆಗೆ ಕೊಳ್ಳಿ ಎಂದು ಹೇಳಿದರೆ ಬಳಕೆದಾರರು ಶಕ್ತಿಮೀರಿ ಹಣಕೊಡಲು ಸಿದ್ಧರಿದ್ದಾರೆ. ಅದಕ್ಕಾಗಿಯೇ ಲೆವಿಯನ್ನು ಸ್ವಲ್ಪದಿನಗಳಾದರೂ ಇಡಬೇಕು. ತನ್ನಷ್ಟಕ್ಕೆ ತಾನೇ ಯಾವ್ಯಾವ ಪದಾರ್ಥಗಳು ಬೆಲೆಗಳು ಕಡಿಮೆಯಾಗುತ್ತವೆ ಎಂಬುದನ್ನೂ ಸಹ ನೋಡಬೇಕು. ಅದರಿಂದ ಲೆವಿ ಇಷ್ಟೇ ಇರಬೇಕು ಎಂಬುದಾಗಿ ಸಂಪೂರ್ಣವಾಗಿ ಈಗಲೂ ಹೇಳುವುದಿಲ್ಲ. ಮುಂದಿನಸಾರಿ ಆಹಾರ ಸಂಗ್ರಹಣೆ

(ಶ್ರೀ ಬಿ. ಡಿ. ಜತ್ತಿ)

ಮಾಡುವಾಗ ಮಾನ್ಯ ಸದಸ್ಯರ ಸಲಹೆಗಳನ್ನೆಲ್ಲಾ ಪರಿಶೀಲನೆಗೆ ತೆಗೆದುಕೊಳ್ಳುತ್ತೇವೆ. ಮತ್ತೆ ಕೆಲವರು ಈಗ ಸರ್ಕಾರದವರು ಲೆವಿ ಏನು ವಸೂಲು ಮಾಡುತ್ತಾರೋ ಅದನ್ನು ತೆಗೆದುಹಾಕಬೇಕು, ಈ ರಾಜ್ಯದೊಳಗೆ ಮನಾಪಲಿ ಪ್ರೊಕ್ಯೂರ್‌ಮೆಂಟ್, ಸ್ಟಾಟುಟರಿ ರೇಷನಿಂಗ್ — ಈ ಎರಡನ್ನೂ ಇಂಟ್ರೊಡ್ಯೂಸ್ ಮಾಡಬೇಕೆಂದು ಹೇಳಿದರು. ಇನ್ನು ಕೆಲವರು ವ್ಯಾಪಾರದ ರಾಷ್ಟ್ರೀಕರಣಮಾಡಿ ರೈತನಾದವನು ಏನೇನು ಬೆಳೆಯುತ್ತಾನೋ ಅದನ್ನು ಸರ್ಕಾರಕ್ಕೆ ತಂದುಕೊಡಬೇಕು, ಅದನ್ನೆಲ್ಲಾ ಸರ್ಕಾರದವರು ಗೋಡೌನಿನಲ್ಲಿ ಇಡಬೇಕೆಂದು ಹೇಳಿದ್ದಾರೆ. ಈ ತರಹವಾಗಿ ಹೆದರಿಸಿದರೆ, ನಾವು ಒಪ್ಪುವುದಿಲ್ಲ. ಸರ್ಕಾರದವರೂ ಸಹ ಒಪ್ಪುವುದಿಲ್ಲ. ನಮ್ಮ ರಾಜ್ಯದಲ್ಲಿ ಬೆಳೆದಿದ್ದನ್ನು ಸರ್ಕಾರ ಎಲ್ಲಾ ತೆಗೆದುಕೊಳ್ಳಬೇಕು, ಸರ್ಕಾರವೇ ಮಾರಾಟ ಮಾಡಬೇಕು, ರೈತರಿಗೆ ಮಾರಾಟಮಾಡುವುದಕ್ಕೆ ಶಕ್ತಿ ಇಲ್ಲ. ಶಾಶ್ವತವಾಗಿ ಒಂದೇ ಇಲಾಖೆ ಇದನ್ನು ತೆಗೆದುಕೊಳ್ಳುವ ವ್ಯವಸ್ಥೆಮಾಡಬೇಕು, ಪ್ರತ್ಯೇಕವಾಗಿ ಇತರ ಇಲಾಖೆಗಳು ಅಂದರೆ, ಹೋಂ ಡಿಪಾರ್ಟ್‌ಮೆಂಟ್, ರೆವಿನ್ಯೂ ಡಿಪಾರ್ಟ್‌ಮೆಂಟ್, ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಹಾಗೆ ಇರುವ ಈ ಇಲಾಖೆಯನ್ನೂ ಸಹ ಮಾಡಬೇಕು ಎಂದು ಕೆಲವರು ಹೇಳಿದರು. ಆ ರೀತಿಯಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಅದಕ್ಕೆ ಮುಂದೆ ಅವಶ್ಯಕತೆಯೂ ಬೀಳುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ. ಈ ವರ್ಷದಲ್ಲಿ ಆಹಾರಧಾನ್ಯಗಳ ಪರಿಸ್ಥಿತಿ ಸ್ವಲ್ಪ ಒಳ್ಳೆಯದಾಗಿದೆ. ಉತ್ತರಹಿಂದೂಸ್ಥಾನದಲ್ಲಿ ಆಹಾರಧಾನ್ಯಗಳನ್ನು ಬಹಳ ಚೆನ್ನಾಗಿ ಬೆಳೆದಿದ್ದಾರೆ. ಅಲ್ಲಿ ನಿರ್ಬಂಧ ಕಡಿಮೆಮಾಡಿದ್ದಾರೆ. ಜೋಳ, ಸಜ್ಜೆ, ಮುಸುಕಿನ ಜೋಳ, ಬಾರ್ಲಿ, ಕಡಲೇಬೇಳೆ, ತೊಗರಿಬೇಳೆ—ಈ ಪದಾರ್ಥಗಳನ್ನು ಇತ್ತೀಚೆಗೆ ನಮ್ಮ ದೇಶದಲ್ಲಿ ಬೆಳೆಯುತ್ತಿದ್ದಾರೆ. ಅಂತಹ ಆಹಾರ ಧಾನ್ಯಗಳನ್ನೂ ಸಹ ನಮ್ಮಲ್ಲಿ ಹೆಚ್ಚಿಗೆ ಬೆಳೆಯುತ್ತಿದ್ದಾರೆ. ಅದಕೋಸ್ಕರವೇ ಸ್ವಲ್ಪಮಟ್ಟಿಗೆ ಬೆಲೆ ಕಡಿಮೆಯಾಗಿದೆ. ಆದ್ದರಿಂದ ಯಾರೂ ಅದರ ಬಗ್ಗೆ ಹೆದರಬೇಕಾಗಿಲ್ಲ. ಡಾ. ನಾಗನಗೌಡರು ಮಾತನಾಡುತ್ತಾ ಈಗ ಆಹಾರ ಧಾನ್ಯಗಳ ಬೆಲೆ ಒಂದು ಸ್ಥಿಮಿತಕ್ಕೆ ಬರಬೇಕು, ಒಂದು ಸ್ಟಾಂಡರ್ಡೈಜ್ ಆಗಬೇಕು, ಆಗ ರೈತರಿಗೆ ಇಂತಿಷ್ಟು ಜಾಸ್ತಿ ಬೆಲೆ ಬರುತ್ತದೆ, ಆಹಾರಧಾನ್ಯಗಳನ್ನೂ ಸಹ ಅವರು ಹೆಚ್ಚುಹೆಚ್ಚಿಗೆ ಬೆಳೆಯುತ್ತಾರೆ; ಆ ಒಂದು ಧೈರ್ಯ ಅವರಿಗೆ ಬರುತ್ತದೆ. ಈ ರೀತಿಯಲ್ಲಿ ಅನೇಕ ದೇಶಗಳಲ್ಲಿ ಮಾಡಿದ್ದೇವೆ. ಅದೇ ರೀತಿಯಲ್ಲಿ ಇಲ್ಲಿ ಮಾಡಬೇಕೆಂಬುದಾಗಿ ಹೇಳುತ್ತಾರೆ. ಸದ್ಯಕ್ಕೆ ಇರುವ ಪದ್ಧತಿ ಪ್ರಕಾರ ನಾನು ಹೇಳಿದ ರೀತಿಯಲ್ಲಿ ಆ ಬೆಲೆಗಳಿಗೆ ಸರ್ಕಾರದವರು ಕೊಂಡುಕೊಳ್ಳಲಿಕ್ಕೆ ಸಿದ್ಧರಿದ್ದಾರೆ. ಮುಸುಕಿನ ಜೋಳ 75 ರೂಪಾಯಿಗಳಿಂದ 100 ರೂಪಾಯಿಗಳವರೆಗೆ ಒಂದು ಕ್ವಿಂಟಾಲ್‌ಗೆ ಮಾರಾಟವಾಗುತ್ತಿತ್ತು. ಈಗ ಅದರ ಬೆಲೆ ಕಡಿಮೆಯಾಗಿದೆ. ಆದರೆ 60 ರೂಪಾಯಿಗಳಿಗಿಂತ ಕಡಿಮೆಯಾಗಿಲ್ಲ. ಲೆವಿ ಮೂಲಕ ಕೊಡುಕೊಂಡಿಲ್ಲ. ಬಿಳೀ ಜೋಳ 64 ರೂಪಾಯಿಗಳ ಬೆಲೆ ಇದ್ದರೂ ಅದು ಕಡಿಮೆಯಾಗಿಲ್ಲ. ಈಗ 54 ರಿಂದ 60ರವರೆಗೆ ಆಗಿದೆ. 54 ರೂಪಾಯಿಗಳಂತೆ ಬಂದರೆ ಎಷ್ಟು ಬೇಕಾದರೂ ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ. ಸ್ಟಾರ್ಚ್ ಮಾಡತಕ್ಕ ಕೈಗಾರಿಕೆಯವರು ಹೊರಗಡೆ ದೇಶಗಳಲ್ಲಿ ಮುಸುಕಿನ ಜೋಳದ ಬೆಲೆ ಕಡಿಮೆ ಇದ್ದರೆ, ಇಲ್ಲಿ ರೈತ ಬೆಳೆದಂಥ ಮುಸುಕಿನ ಜೋಳಕ್ಕೆ ಜಾಸ್ತಿ ಬೆಲೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರದವರು ಹೇಳಿದರು. ಹೋದವರ್ಷ ಆ ರೀತಿಯಾಗಿ ಕೇಂದ್ರ ಸರ್ಕಾರದವರು ಮಾಡಿದ್ದರೂ ರಾಜ್ಯ ಸರ್ಕಾರದವರು ಅವರಿಗೆ ಕಟ್ಟುನಿಟ್ಟಾಗಿ ಬರೆದಿದ್ದಾರೆ. ಅವರಿಗೆ ಸ್ಪಷ್ಟವಾಗಿ ಹೇಳಿದ್ದೇವೆ. ಇನ್ನು ಮುಂದೆ ಪರದೇಶಗಳಿಂದ ಮುಸುಕಿನಜೋಳ ತರಿಸಬಾರದೆಂದು. ಹೈಬ್ರಿಡ್ ಮುಸುಕಿನ ಜೋಳದ ಬೀಜಗಳನ್ನು ಉಪಯೋಗಮಾಡಿ ಸಾಕಷ್ಟು ಇಲ್ಲಿಯೇ ಬೆಳೆಯಬೇಕೆಂದೂ, ಅದನ್ನು ಇನ್ನು ಮುಂದೆ ಹೊರಗಿನಿಂದ ತರಿಸಲು ಅವಶ್ಯಕತೆ ಇಲ್ಲವೆಂದು ಮಾನ್ಯ ಶ್ರೀ ಜಗಜ್ಜೀವನರಾಂ ಅವರು ಸ್ಪಷ್ಟವಾಗಿ ಒಪ್ಪಿಗೆ ಕೊಟ್ಟಿದ್ದಾರೆ. ಮುಸುಕಿನ ಜೋಳ ತರುವುದಿಲ್ಲ, ನೀವು ಎಷ್ಟು ಬೇಕಾದರೂ ಬೆಳೆಯಿರಿ, ಸ್ಟಾರ್ಚ್ ಫ್ಯಾಕ್ಟರಿಗೆ ಕೊಟ್ಟರೆ ನನ್ನ ಅಭ್ಯಂತರವಿಲ್ಲವೆಂದೂ ಹೇಳಿದ್ದಾರೆ. ನಾನು ಆ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ.

ಇನ್ನು ಸಹಕಾರಿ ಸಂಸ್ಥೆಗಳ ಬಗ್ಗೆ ಹೇಳುವುದಾದರೆ, ಪ್ರೀಎಂಪ್ಷನ್ ಪದ್ಧತಿ ಪ್ರಕಾರ ನಮ್ಮಲ್ಲಿ 8 ಸಹಕಾರೀ ಸಂಸ್ಥೆಗಳಿವೆ. ಅವುಗಳನ್ನು ಒಪ್ಪಿದ್ದೇವೆ. ಎಲ್ಲಾ ಕಡೆಯೂ ಒಪ್ಪಿಲ್ಲ. 8 ಸಹಕಾರ ಸಂಘಗಳು ಚೆನ್ನಾಗಿ ಕೆಲಸಮಾಡುತ್ತಿವೆ. ಎಸ್ಟಾಬ್ಲಿಷ್‌ಮೆಂಟ್ ಚೆನ್ನಾಗಿದೆ. ಹಣವಿದೆ. ಅಲ್ಲಿ ವ್ಯಾಪಾರ, ಉದ್ದಿಮೆಗಳಲ್ಲಿ ಚನ್ನಾಗಿ ತಿಳಿದವರೂ ಇದ್ದಾರೆ. ಪ್ರಿಎಂಪ್ಷನ್ ಪದ್ಧತಿ ಪ್ರಕಾರ ಆಹಾರವನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದೆ. ಕೆಲವು ಸಹಕಾರ ಸಂಘಗಳು ತಮಗೆ ಇಷ್ಟಬಂದಂತೆ ಕೊಂಡರೆ ಮುಂದೆ ಮಾರಾಟಮಾಡುವ ಅವಕಾಶ ಬರುತ್ತದೆಂದು ಅವರಿಗೆ ಹೇಳಿದೆ. ಸಹಕಾರ ಸಂಘಗಳ ಮುಖಾಂತರ ಹೊಸದಾಗಿ 22,491 ಷಟಲ್ ಬತ್ತವನ್ನು ಕೊಂಡು

ಕೊಂಡಿದ್ದೇವೆ. ಇನ್ನುಳಿದ ಭತ್ತವನ್ನು ಮತ್ತು ಇತರ ಆಹಾರಧಾನ್ಯಗಳನ್ನು ಕೊಂಡುಕೊಳ್ಳುವುದಕ್ಕೆ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದುವರೆಗೆ ಕೊಂಡಿರುವ ಬತ್ತದ ಬೆಲೆ 65ರಿಂದ 79 ರೂಪಾಯಿಗಳವರೆಗೆ ಇದೆ. ಆ ಬೆಲೆ ಇನ್ನೂ ಹೆಚ್ಚು ಕಡಿಮೆಯಾಗುತ್ತಾ ಇದೆ. ಆದರೂ ಆ ಬೆಲೆಯ ಪ್ರಕಾರವೇ ಬತ್ತ ಕೊಂಡುಕೊಂಡಿದ್ದೇವೆ.

10-00 A.M.

[MR. CHAIRMAN (Sri S. D. KOTHAVALE) in the Chair.]

ಇನ್ನು ನಾನೀಗ ಈ ಆಹಾರ ಪದಾರ್ಥಗಳ ವಿನಿಯೋಗ ಅಥವಾ ಅವುಗಳ ಹಂಚಿಕೆ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಾನಾಗಲೇ ಹೇಳಿದಹಾಗೆ ಹೋದ ವರ್ಷ ಮತ್ತು ಅದರ ಹಿಂದಿನ ವರ್ಷ ಎಲ್ಲೆಲ್ಲಿ ಸರಿಯಾಗಿ ಮಳೆಯಾಗಲಿಲ್ಲವೋ ಅಂಥ ಕಡೆಗಳಿಗೆ ಮತ್ತು ಹೆಚ್ಚು ಕೂಲಿಗಾರರು ಕಾರ್ಮಿಕರು ಕೆಲಸ ಮಾಡುವಂಥ ಸ್ಥಳಗಳಿಗೆ ಮತ್ತು ಹೆಚ್ಚು ನೇಕಾರರು ಕೆಲಸ ಮಾಡುವಂಥ ಸ್ಥಳಗಳಿಗೆ ಹೆಚ್ಚಿನ ಆಹಾರ ಧಾನ್ಯಗಳನ್ನು ಒದಗಿಸುವುದಕ್ಕಾಗಲಿಲ್ಲ. ನಾವು ಈಗ ಧಾನ್ಯಗಳನ್ನು ಹಂಚುವ ಎರಡು ಮಾರ್ಗಗಳನ್ನು ಅನುಸರಿಸಲಾಗುತ್ತಿದೆ. ಅದರಲ್ಲಿ ಒಂದನೆಯದು ಇನ್‌ಫಾರ್ಮಲ್ ರೇಷನಿಂಗ್ ಏರಿಯಾ ಎಂದು ಹೇಳಿ ಬೆಂಗಳೂರು ಸಿಟಿ ಮತ್ತು ಕೋಲಾರ್ ಗೋಲ್ಡ್ ಮೈನಿಂಗ್ ಏರಿಯಾ ಈ ಎರಡು ಸ್ಥಳಗಳಲ್ಲಿ ಒಂದೊಂದು ತಿಂಗಳಿಗೆ ದೊಡ್ಡವರೊಬ್ಬರಿಗೆ 8 ಕೆ. ಜಿ. ಧಾನ್ಯವನ್ನು ಕೊಡಲಾಗುತ್ತಿದೆ. ಆ 8 ಕೆ. ಜಿ. ಧಾನ್ಯಗಳೆಂದರೆ :— 3 ಕೆ. ಜಿ. ಅಕ್ಕಿ, 3 ಕೆ. ಜಿ. ಗೋಧಿ ಮತ್ತು 2 ಕೆ. ಜಿ. ಜೋಳ ಹೀಗೆ 8 ಕೆ. ಜಿ. ಧಾನ್ಯವನ್ನು ಹಂಚಲಾಗುತ್ತಿದೆ. ಇನ್ನು ಎಲ್ಲೆಲ್ಲಿ ಈ ಇನ್‌ಫಾರ್ಮಲ್ ರೇಷನ್ ಪದ್ಧತಿ ಜಾರಿಯಲ್ಲಿಲ್ಲವೋ ಅಂಥ ಪ್ರದೇಶಗಳಿಗೆ ಒಂದೊಂದು ಕುಟುಂಬಕ್ಕೂ ಒಂದು ತಿಂಗಳಿಗೆ ಸಧಾರಣವಾಗಿ 5 ಕೆ. ಜಿ ಧಾನ್ಯವನ್ನು ಅದು ಯಾವುದಾದರೂ ಆಗಬಹುದು, ಅಕ್ಕಿಯಾಗಬಹುದು, ಇಲ್ಲವೇ ಗೋಧಿಯಾಗಬಹುದು ಅಥವಾ ಇನ್ನಾವುದಾದರೂ ಧಾನ್ಯವಾಗಬಹುದು ; ಹೀಗೆ ಅಲ್ಲಿಗೆ ಕೊಡುತ್ತ ಬರುತ್ತಿದ್ದೇವೆ. ಆದರೆ ಅದರಲ್ಲಿ ರೈಲ್ವೆ ಕಾರ್ಮಿಕರಿಗೆ ಮಾತ್ರ 7 ಕೆ. ಜಿ. ಕೊಡುತ್ತಿದ್ದೇವೆ. ಈ ರೀತಿ ನಾವು ಆಹಾರ ಧಾನ್ಯಗಳ ಹಂಚಿಕೆಯನ್ನು ಮಾಡಿಕೊಂಡು ಬರುತ್ತಿದ್ದೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಿಗೆ ಒಂದು ಕುಟುಂಬಕ್ಕೆ ಒಂದು ತಿಂಗಳಿಗೆ 4 ಕೆ. ಜಿ. ಮಾತ್ರ ಕೊಡುತ್ತಿದ್ದಾರೆ. ಇದನ್ನು ಏತಕ್ಕೆ ಕೊಡಬೇಕು ?

ಶ್ರೀ ಬಿ. ಡಿ. ಜತ್ತಿ.—ನಾನು ಮಾತನಾಡತಕ್ಕ ಕಾಲದಲ್ಲಿ ದಯವಿಟ್ಟು ಯಾರೂ ಮಧ್ಯೆ ಬಾಯಿ ಹಾಕಬಾರದೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಸರಕಾರದವರು ಇಲ್ಲಿಯವರೆಗೂ ಹಂಚುವುದಕ್ಕಾಗಿ ಸಂಗ್ರಹಣೆ ಮಾಡಿದ್ದ ಒಟ್ಟು ಧಾನ್ಯದಲ್ಲಿ ಅಂದರೆ 2 ಲಕ್ಷ 54 ಸಾವಿರ ಟನ್ನಿನಲ್ಲಿ ನಾವು ಲೆವಿ ಪದ್ಧತಿಯಿಂದ ವಸೂಲ್ಮಾಡಿರತಕ್ಕ ಧಾನ್ಯ ಎಷ್ಟೆಂದರೆ—70 ಸಾವಿರ ಟನ್ ಅಕ್ಕಿ ಇಷ್ಟು ಸಂಗ್ರಹಣೆ ಮಾಡಿದ್ದೇವೆ. ಜೋಳ ಮತ್ತು ಸಜ್ಜೆ 60 ಸಾವಿರ ಟನ್ ಸಂಗ್ರಹಣೆ ಮಾಡಿದ್ದೇವೆ. ಇನ್ನು ಕೇಂದ್ರ ಸರ್ಕಾರದವರಿಂದ ನಾವು ಹೆಚ್ಚಿಗೆ ಪಡೆದಿದ್ದು ಅಕ್ಕಿ 24 ಸಾವಿರ ಟನ್, ಗೋಧಿ 60 ಸಾವಿರ ಟನ್ ; ಮತ್ತು 40 ಸಾವಿರ ಟನ್ ಮೈಲೊ — ಹೀಗೆ ಒಟ್ಟು 2 ಲಕ್ಷ 54 ಸಾವಿರ ಟನ್ ಆಹಾರ ಧಾನ್ಯಗಳನ್ನು ಸಂಗ್ರಹಣೆ ಮಾಡಿದ್ದೇವೆ. ಆದರೆ ನಮ್ಮ ರಾಜ್ಯಕ್ಕೆ ಒಟ್ಟು ಒಂದು ವರ್ಷಕ್ಕೆ ಬೇಕಾಗಿರತಕ್ಕ ಆಹಾರ ಧಾನ್ಯ ಎಷ್ಟು ಎಂದರೆ ಅಕ್ಕಿ 1 ಲಕ್ಷ 15 ಸಾವಿರ ಟನ್, ಗೋಧಿ 65 ಸಾವಿರ ಟನ್ ಮೈಲೊ 65 ಸಾವಿರ ಟನ್ ; ಮತ್ತು ಕೋರ್ಸ್ ಧಾನ್ಯಗಳು 75 ಸಾವಿರ ಟನ್ ಹೀಗೆ ಒಟ್ಟು 3 ಲಕ್ಷ 20 ಸಾವಿರ ಟನ್. ನಾವು ಈಗಾಗಲೆ ಇದರ ಬಗ್ಗೆ ಕೊಂಡಿಟ್ಟಿರುವುದು 2 ಲಕ್ಷ 75 ಸಾವಿರ ಟನ್. ಇನ್ನು ಕಡಮೆ ಬೀಳತಕ್ಕ ಆಹಾರಧಾನ್ಯಗಳನ್ನು ಒದಗಿಸಿಕೊಳ್ಳಲು ನಾವು ಸಹಕಾರ ಸಂಘಗಳವರಿಗೆ ಓಪನ್ ಮಾರ್ಕೆಟ್ಟಿನಲ್ಲಿ ಪ್ರಿಯಂಪಷನ್ ಪ್ರಕಾರ ಕೊಂಡುಕೊಳ್ಳುವುದಕ್ಕೆ ಅವರಿಗೆ ತಿಳಿಸಿದ್ದೇವೆ. ಆದರಿಂದ ನಮ್ಮ ಖೋತಾವನ್ನು ಭರ್ತಿ ಮಾಡಿಕೊಳ್ಳುವ ಮಾರ್ಗ ಒಂದು. ಅದರ ಜೊತೆಗೆ ಫುಡ್‌ಕಾರ್ಪೊರೇಷನ್ ಆಫ್ ಇಂಡಿಯಾದವರು ಕೊಳ್ಳತಕ್ಕ ಧಾನ್ಯದಲ್ಲಿ ನಮಗೆ ಖೋತಾ ಬೀಳುವುದನ್ನು ನಾವು ಅವರಿಂದ ಕೊಳ್ಳಬಹುದು. ಅವರಿಂದ ನಮಗೆ ಸಾಧ್ಯವಾದಷ್ಟು ಕಡಮೆ ಬೆಲೆಗೆ ಆಹಾರಧಾನ್ಯ ಸಿಕ್ಕುತ್ತದೆ. ಹೀಗೆ ನಾವು ಒಂದು ವರ್ಷಕ್ಕೆ ಬೇಕಾಗುವ ಆಹಾರ ಧಾನ್ಯವನ್ನು ಸಂಗ್ರಹಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದೇವೆ.

(ಶ್ರೀ ಬಿ. ಡಿ. ಜತ್ತಿ)

ಇನ್ನು ಮೂರನೆಯದಾಗಿ ಸಕ್ಕರೆ ಹಂಚಿಕೆಯ ವಿಚಾರಕ್ಕೆ ಬಂದರೆ: ಹೋದ ವರ್ಷ ಮತ್ತು ಅದರ ಹಿಂದಿನ ವರ್ಷ ಸರಿಯಾಗಿ ಮಳೆಯಾಗದೆ ನಮ್ಮಲ್ಲಿ ಎಷ್ಟು ಕಬ್ಬಿನ ಬೆಳೆಯಾಗಬೇಕೋ ಅಷ್ಟಾಗಲಿಲ್ಲ. ಹೀಗಾಗಿ ಕಮ್ಮಿ ಬೆಳೆ ಆದ್ದರಿಂದ ಕಬ್ಬಿನ ಕಾರ್ಖಾನೆಯವರಿಗೆ ಎಷ್ಟು ಕಬ್ಬು ಬೇಕೋ ಅಷ್ಟು ಕಬ್ಬು ಅವರಿಗೆ ಸಿಕ್ಕಲಿಲ್ಲ. ಆದ್ದರಿಂದ ಸಕ್ಕರೆ ಸರಬರಾಯಿಗೆ ಸ್ವಲ್ಪ ತೊಂದರೆಯುಂಟಾಯಿತು. ಆಗ ಕೇಂದ್ರ ಸರ್ಕಾರದವರು ಒಂದು ಆರ್ಡರನ್ನು ಹೊರಡಿಸಿದರು.

> "Out of the total production of sugar, 40 per cent can be sold in the open market and the remaining 60 per cent should be procured by the Central Government by way of levy according to the rate fixed."

ಈ ಆಜ್ಞೆಯ ಪ್ರಕಾರ ಕಬ್ಬಿನ ಕಾರ್ಖಾನೆಯವರಿಗೆ ನಿರೀಕ್ಷಿಸಿದ ದರದಲ್ಲಿ ಕಬ್ಬು ಸಿಕ್ಕಲಿಲ್ಲ. ಆಗ ಅವರು ಕಬ್ಬನ್ನು ಬೆಳೆಯುತಕ್ಕ ರೈತರಿಗೆ ಹೆಚ್ಚಿನ ಬೆಲೆಯನ್ನು ಕೊಡಬೇಕಾಯಿತು. ಹಾಗೆ ಹೆಚ್ಚಿನ ಬೆಲೆಯನ್ನು ಕೊಟ್ಟು ಕೊಂಡ ಕಬ್ಬಿನಿಂದ ಉತ್ಪನ್ನವಾದ ಸಕ್ಕರೆಯನ್ನು ಅವರು ನಮಗೆ ಕಡಮೆ ಬೆಲೆಗೆ ಮಾರಾಟ ಹೇಗೆ ಮಾಡುತ್ತಾರೆಂಬ ಪ್ರಶ್ನೆ ಬಂತು. ಆಗ ಅವರಿಗೆ ಸಪ್ಲೈ ಆಗತಕ್ಕ ಕಬ್ಬಿನಲ್ಲಿ ನೂರು ಭಾಗದಲ್ಲಿ ಶೇ: 40 ರಷ್ಟು ಕಬ್ಬಿನಿಂದ ಉತ್ಪನ್ನವಾಗತಕ್ಕ ಸಕ್ಕರೆಯನ್ನು ಮಿಲ್ ಮಾಲೀಕರು ಓಪನ್ ಮಾರ್ಕೆಟ್ಟಿನಲ್ಲಿ ಅವರ ಇಷ್ಟದ ಪ್ರಕಾರ ಮಾರಾಟಮಾಡಿಕೊಳ್ಳಬಹುದೆಂದೂ ಇನ್ನುಳಿದ ಶೇ. 60 ರಷ್ಟು ಸಕ್ಕರೆಯನ್ನು ಸರ್ಕಾರಕ್ಕೆ ಒಂದು ನಿಗದಿಯಾದ ಬೆಲೆಯಲ್ಲಿ ಕೊಡಬೇಕೆಂದೂ ತೀರ್ಮಾನ ಆಯಿತು. ಇನ್ನು ಆ ಖುಲ್ಲಾ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡತಕ್ಕ ಸಕ್ಕರೆಯನ್ನು ಟೆಂಡರ್ ಕರೆದು ಅದರಲ್ಲಿ ಯಾರು ಹೈಯಸ್ಟ್ ಬಿಡ್ ಮಾಡುತ್ತಾರೋ ಅವರಿಗೆ ಕೊಡಬೇಕೆಂದು ತೀರ್ಮಾನವಾಯಿತು. ಅದರ ಪ್ರಕಾರ ಆ 40 ಪರ್ಸೆಂಟ್ ಸಕ್ಕರೆ ಮಾರಾಟಕ್ಕೆ ಟೆಂಡರನ್ನು ಕರೆದಾಗ ಬೊಂಬಾಯಿನವರೊಬ್ಬರು ಮತ್ತು ಕಲ್ಕತ್ತದವರೊಬ್ಬರು ಹೀಗೆ ಇಬ್ಬರು ಮಾತ್ರ ಟೆಂಡರನ್ನು ಹಾಕಿಕೊಂಡರು. ಈ ಟೆಂಡರುಗಳ ತೀರ್ಮಾನವಾಗತಕ್ಕ ಪ್ರಸಂಗದಲ್ಲಿ ನಮಗೆ ಒಂದೂವರೆ ತಿಂಗಳ ಕಾಲ ಸಕ್ಕರೆ ಸಿಕ್ಕುವುದು ಬಹಳ ಕಷ್ಟವಾಯಿತು. ಆದ್ದರಿಂದ ಆಗ ಸಕ್ಕರೆ ಹಂಚಿಕೆಗೆ ಸ್ವಲ್ಪ ತೊಂದರೆಯಾಯಿತು. ಆಗ ನಮಗೆ ಸಕ್ಕರೆ ಅಗತ್ಯ ಹೆಚ್ಚಾಗಿದ್ದುದರಿಂದ ಓಪನ್ ಮಾರ್ಕೆಟ್ ಸಕ್ಕರೆಯನ್ನು ಕೊಳ್ಳಬೇಕಾಗಿ ಬಂತು. ಆಗ ಸರ್ಕಾರದವರು ಅವರಿಗೆ ಕೊಡಲಾಗಿದ್ದ 40 ಪರ್ಸೆಂಟ್ ಸಕ್ಕರೆಯಲ್ಲಿ ಶೇ. 50 ರಷ್ಟು ಸಕ್ಕರೆಯನ್ನು ಅಂದರೆ 20 ಪರ್ಸೆಂಟ್ ಸಕ್ಕರೆಯನ್ನು ಅವರಿಂದ ಕ್ವಿಂಟಾಲ್ ಒಂದಕ್ಕೆ 400 ರೂಪಾಯಿಗಳ ಪ್ರಕಾರ ಕೊಳ್ಳಬೇಕೆಂದು ಸರ್ಕಾರದವರು ಆಲೋಚನೆ ಮಾಡುತ್ತಿದ್ದ ಕಾಲಕ್ಕೆ 400 ರೂಪಾಯಿಗೆ ಕೊಂಡ ಸಕ್ಕರೆಯನ್ನು 450 ಕ್ಕಾದರೂ ಮಾರದಿದ್ದರೆ ಸರ್ಕಾರಕ್ಕೆ ಹೆಚ್ಚಿನ ಹಾನಿಯಾಗಬಹುದೆಂದು ಆಲೋಚನೆ ಮಾಡುತ್ತಿದ್ದ ಕಾಲಕ್ಕೆ ಓಪನ್ ಮಾರ್ಕೆಟ್‌ನಲ್ಲಿ ಸಕ್ಕರೆ ಕ್ವಿಂಟಾಲಿಗೆ 560 ರಂತೆ ಮಾರಾಟವಾಗುತ್ತಿತ್ತು. ಆಗ ನಮಗೆ ಮದುವೆ ಮಾಡುವವರಿಗೂ ಮತ್ತು ಹೋಟಲುಗಳವರಿಗೂ ಸಕ್ಕರೆಯು ಅಗತ್ಯ ಹೆಚ್ಚಾಗಿತ್ತು. ನಮ್ಮ ಸಕ್ಕರೆಯನ್ನು ಕೊಂಡಿದ್ದ ವರ್ತಕರಿಬ್ಬರೂ ಬಹಳ ದೊಡ್ಡ ವರ್ತಕರು. ಆಗ ಅವರಿಂದ ಸರ್ಕಾರದವರು 400 ರೂಪಾಯಿಗಳ ಪ್ರಕಾರ ಕೊಂಡ ಸಕ್ಕರೆಯನ್ನು ಇಲ್ಲಿ ನಮ್ಮ ಕನ್ಸೂಮರ್ಸಿಗೆ ಕ್ವಿಂಟಾಲಿಗೆ 365 ರೂ. ಪ್ರಕಾರ ಮಾರಾಟ ಮಾಡಿದರೆ ಅದರಿಂದ ಸರ್ಕಾರಕ್ಕೆ ಬಹಳ ಹಾನಿಯಾಗುವುದೆಂದು ಹೇಳಿ ಕೊಂಡ ಸಕ್ಕರೆಯನ್ನು ಕ್ವಿಂಟಾಲಿಗೆ 365 ರೂ ಪ್ರಕಾರ ಮಾರಾಟ ಮಾಡಲಾಯಿತು. ಓಪನ್ ಮಾರ್ಕೆಟ್ಟಿನಲ್ಲಿ 450 ರೂಪಾಯಿಗಳಿಗೆ ಸಕ್ಕರೆ ಮಾರಾಟವಾಗುತ್ತಿದ್ದಾಗ ಅದರ ಬೆಲೆ ಇದ್ದಕ್ಕಿದ್ದಂತೆ ಅದು 470 ಕ್ಕೆ ಏರಿತು. ಅವರು ಹೀಗೆ ಓಪನ್ ಮಾರ್ಕೆಟ್ಟಿನಲ್ಲಿ ಅಧಿಕ ಬೆಲೆಗೆ ಸಕ್ಕರೆ ಮಾರಾಟ ಮಾಡುವುದು ಸರಿಯಾದದ್ದಲ್ಲ ಎಂದು ನಾವು ಅವರಲ್ಲಿದ್ದ ಸಕ್ಕರೆಯನ್ನು ಕೊಂಡು ಅದರಲ್ಲಿ 1800 ಕ್ವಿಂಟಾಲ್‌ಗಳನ್ನು ಕ್ವಿಂಟಾಲ್ ಒಂದಕ್ಕೆ 360 ರಂತೆ ಮಾರಾಟ ಮಾಡಿದೆವು. ಅನಂತರ 1500 ಕ್ವಿಂಟಾಲನ್ನು ಕ್ವಿಂಟಾಲ್ ಒಂದಕ್ಕೆ 375 ರಂತೆ ಮಾರಾಟ ಮಾಡಿದೆವು. ನಾವು ಕೊಂಡ ಸಕ್ಕರೆಯಲ್ಲಿ ಕೊಂಚ ಭಾಗವನ್ನು ಕ್ವಿಂಟಾಲಿಗೆ 395ರ ಪ್ರಕಾರ ಕೂಡ ಮಾರಾಟ ಮಾಡಿದ್ದೇವೆ. ಹೀಗೆ ಸರ್ಕಾರದವರು ಹೆಚ್ಚು ಬೆಲೆಗೆ ಸಕ್ಕರೆಯನ್ನು ಕೊಂಡು ಅದನ್ನು ಕಡಮೆ ಬೆಲೆಗೆ ಮಾರಾಟ ಮಾಡಿದರೆ ಅದರಿಂದ ಹೆಚ್ಚಿನ ಹಾನಿಯಾಗುವುದೆಂಬುದನ್ನು ಲೆಕ್ಕ ಹಾಕಿದಾಗ ಅದರಿಂದ ಸರ್ಕಾರಕ್ಕೆ ಸುಮಾರು 4 ಅಥವಾ ನಾಲ್ಕುವರೆ ಲಕ್ಷ ರೂಪಾಯಿಗಳ ಹಾನಿಯಾಗಬಹುದೆಂದು ತಿಳಿಯಬಂತು. ನಮ್ಮಲ್ಲಿ ಈ ಸಕ್ಕರೆ ವ್ಯವಹಾರಕ್ಕೆ 2 ಜೋನಗಳನ್ನು ಮಾಡಿಕೊಂಡಿದೆ. ಒಂದು ಜೋನಿನಲ್ಲಿ ಸಕ್ಕರೆಯನ್ನು ಕ್ವಿಂಟಾಲು ಒಂದಕ್ಕೆ 140 ರಂತೆ

ಮಾರಾಟ ಮಾಡಲಾಗುತ್ತಿತ್ತು. ಆಗ ಇನ್ನೊಂದು ಜೋನಿನಲ್ಲಿ ಕ್ವಿಂಟಾಲು ಒಂದಕ್ಕೆ 161 ರಂತೆ ಮಾರಾಟ ಮಾಡಲಾಗುತ್ತಿತ್ತು. ಆಗ ಆ ಮೊದಲನೆಯ ಜೋನಿನವರು ನಮಗೂ ಆ ಸಕ್ಕರೆಯನ್ನು 161 ರಂತೆ ಮಾರಾಟ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಅವರು ಹೈಕೋರ್ಟಿಗೆ ರಿಟ್ ಹಾಕಿದರು. ಆಗ ಅಲ್ಲಿಯೂ ಅದೇ ರೀತಿ ಮಾಡಬೇಕೆಂದು ಅವರು ತೀರ್ಮಾನ ಕೊಟ್ಟರು. ಆಗ ಮಾರುಕಟ್ಟೆಯಲ್ಲಿ 161 ಕ್ಕೆ ಕೊಂಡ ಸಕ್ಕರೆ 172ಕ್ಕೆ ಮಾರಾಟವಾಗುತ್ತಿತ್ತು. ಆಗ ನಾವು ನಮ್ಮ ಸಕ್ಕರೆಯನ್ನು ಅಂದರೆ ಓಪನ್ ಮಾರ್ಕೆಟ್ ಸಕ್ಕರೆಯನ್ನು ಕ್ವಿಂಟಾಲಿಗೆ 175 ರಂತೆ ಮಾರಾಟ ಮಾಡಿದೆವು. ಇದರಿಂದ ಸರ್ಕಾರಕ್ಕೆ 3 ಲಕ್ಷ ಉಳಿತಾಯ ಆಯಿತು. ನಮಗೆ ಆ ಮೊದಲನ ಓಪನ್ ಮಾರ್ಕೆಟ್ ಸಕ್ಕರೆಯನ್ನು ಹೈರೇಟಿನಲ್ಲಿ ಕೊಂಡು ಅದನ್ನು ಲೋರೇಟಿನಲ್ಲಿ ಮಾರಾಟ ಮಾಡಿದ್ದರಿಂದ ನಾಲ್ಕೂ ನಾಲ್ಕೂವರೆ ಲಕ್ಷ ಏನು ನಷ್ಟವಾಗಿತ್ತು ಅದು ಇದರಿಂದ ಭರ್ತಿಮಾಡಿಕೊಳ್ಳಲು ಒಂದು ಅವಕಾಶವುಂಟಾಯಿತು. ಆದರೆ ಹಿಂದೆ ಒಮ್ಮೆ ಇದೇ ಪ್ರಶ್ನೆ ಇಲ್ಲಿ ಚರ್ಚೆಗೆ ಬಂದಿದ್ದ ಕಾಲಕ್ಕೆ ಆಗ ಸಾಕಷ್ಟು ವೇಳೆ ಸಿಗದೆ ಇದರ ಪೂರ್ಣ ವಿವರಗಳನ್ನು ತಿಳಿಸಲಿಕ್ಕೆ ಸಾಧ್ಯವಾಗಿರಲಿಲ್ಲ. ಹೀಗೆ ನಾವು ಆ ಓಪನ್ ಮಾರ್ಕೆಟ್ಟಿನಲ್ಲಿ ಹೈರೇಟಿಗೆ ಸಕ್ಕರೆ ಮಾರಾಟವಾಗತಕ್ಕದ್ದನ್ನು ತಡೆಗಟ್ಟಲು ಪ್ರಯತ್ನ ಮಾಡಿದ್ದೇವೆ. ಆದರೆ ನಮಗೆ ಈ ದಿವಸ ಸಕ್ಕರೆ ಹಂಚಿಕೆಗೆ ಬಹಳ ಕಮ್ಮಿ ಬೀಳುತ್ತಿದೆ. ನಮಗೆ ಇಲ್ಲಿ ಒಟ್ಟು ಬೇಕಾಗತಕ್ಕ ಸಕ್ಕರೆ ಎಷ್ಟೆಂದರೆ 50,036 ಟನ್. ಇದರಲ್ಲಿ 13 ಸಾವಿರ ಟನ್ ಖೋತಾಬೀಳುತ್ತಿದೆ. ನಾವು ಡೊಮೆಸ್ಟಿಕ್ ಕನ್‌ಸಂಪ್ಷನ್‌ಗೆ ಎಷ್ಟು ಸಕ್ಕರೆಯನ್ನು ಕೊಡಬೇಕೋ ಅಷ್ಟನ್ನು ಕೊಡುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಹೀಗಾಗಿ ಎಲ್ಲರಿಗೂ ಒಂದೇ ಪ್ರಮಾಣದಲ್ಲಿ ಸಕ್ಕರೆ ಹಂಚುವುದಕ್ಕೆ ಸ್ವಲ್ಪ ತೊಂದರೆಯಾಗಿದೆ.

ಆಯುರ್ವೇದ ಮತ್ತು ಯೂನಾನಿ ಔಷಧಿ ಮಾಡುವವರಿಗೆ ಸಕ್ಕರೆ ಬೇಕಾಗುತ್ತದೆ. ಅದಕ್ಕೆ ಅವರು ಓಪನ್ ಮಾರ್ಕೆಟ್ಟಿಗೆ ಹೋಗಬೇಕು ಎಂದು ಹೇಳಿದರು. ಅದಕ್ಕಾಗಿ ಸಕ್ಕರೆಗೆ ಹೆಚ್ಚು ಬೆಲೆ ಕೊಟ್ಟರೆ, ಔಷಧಿ ಬೆಲೆ ಹೆಚ್ಚಾಗುತ್ತದೆ, ಅದರಿಂದ ಜನಗಳಿಗೆ ಕಷ್ಟವಾಗುತ್ತದೆ ಎಂದು ತಿಳಿದುಕೊಂಡು ಬೇರೆ ಬೇರೆ ಆಯುರ್ವೇದ, ಯೂನಾನಿ ಔಷಧಿ ಮಾಡುವವರೆಲ್ಲರಿಗೂ ಸಕ್ಕರೆ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ನಾವು ಬರೆದಿದ್ದೆವು. ಅದಕ್ಕೆ ಅವರು ನಮಗೆ 17 ಟನ್ ಸಕ್ಕರೆ ಕೊಡಲು ಒಪ್ಪಿದ್ದಾರೆ. ಆದರಿಂದ ನಾವು ಆಯುರ್ವೇದ ಯುನಾನಿ ಔಷಧಿಯನ್ನು ಮಾಡುವವರಿಗೆ ಸಕ್ಕರೆಯನ್ನು ಹಂಚಬೇಕಾಗುತ್ತದೆ. ಆ ಸಕ್ಕರೆ ಅವರಿಗೆ ಕಂಟ್ರೋಲ್ ರೇಟಿನಲ್ಲಿ ಕೊಡುವುದಕ್ಕೆ ಏರ್ಪಾಟು ಮಾಡಿದ್ದೇವೆ. ಬಹಳ ದಿವಸಗಳಿಂದ ಅವರ ಕಷ್ಟ ಇದ್ದದ್ದು ಈಗ ನಿವಾರಣೆ ಆಗಿದೆ.

ಇನ್ನೊಂದು ವಿಷಯ ಈಗ ನಮ್ಮ ರಾಜ್ಯದಲ್ಲಿ ಆಹಾರ ಧಾನ್ಯದ ಬೆಲೆಗಳು ಹೇಗಿವೆ ಎನ್ನುವ ಮಾತನ್ನು ಕೆಲವು ಮಾನ್ಯ ಸದಸ್ಯರು ಕೇಳಿದರು. ಅದನ್ನೂ ಸ್ವಲ್ಪ ಹೇಳುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಬೇರೆ ಬೇರೆ ಬೆಲೆಗಳು ಏನಿವೆ ಆ ಬೆಲೆಗಳನ್ನು ನೋಡಿದಾಗ ಜೋಳದ ಬೆಲೆ ಸರಿಯಾಗಿದೆ. ಅದೇನು ಹೆಚ್ಚಾಗಿಲ್ಲ, 60-65 ರೂಪಾಯಿಗಳು, 70-75 ರೂಪಾಯಿಗಳಿಗೆ ಒಂದು ಕ್ವಿಂಟಾಲನಂತ ಎಲ್ಲಾಕಡೆಗೂ ಜೋಳ ಸಿಕ್ಕುತ್ತದೆ. ಮುಸುಕಿನ ಜೋಳದ ಬೆಲೆ ಒಂದು ಕ್ವಿಂಟಾಲಿಗೆ 60-65 ರೂಪಾಯಿಗಳು ಇದೆ. ರಾಗಿ ಬೆಲೆ ಬಹಳ ಕಡಿಮೆಯಾಗಿದೆ. ಇದರಿಂದ ಜನಗಳಿಗೂ ಅನೂಕೂಲವಾಗಿದೆ. ಸರ್ಕಾರಕ್ಕೂ ಕೂಡ ಅನುಕೂಲವಾಗಿದೆ. ಈ ರೀತಿಯಾಗಿ ಆಹಾರ ಧಾನ್ಯಗಳ ಬೆಲೆಗಳು ಇಳಿಮುಖವಾಗುತ್ತಿವೆ.

ಇನ್ನು ಆಹಾರ ಧಾನ್ಯಗಳ ಸ್ಟಾಕ್ ಡಿಕ್ಲರೇಷನ್ ಬಗ್ಗೆ ಹೇಳುವುದಾದರೆ ನಿಯಮದ ಪ್ರಕಾರ ಯಾರು ಸ್ಟಾಕ್ ಹೋಲ್ಡರುಗಳು ಇರುತ್ತಾರೆಯೋ ಅವರಲ್ಲಿ ಯಾರ ಹತ್ತಿರ 40 ಕ್ವಿಂಟಾಲ್ ಬತ್ತ 25 ಕ್ವಿಂಟಾಲ್ ಅಕ್ಕಿ, ಜೋಳ, ರಾಗಿ ಇರುತ್ತದೆಯೋ ಅಂಥವರು ಪ್ರತಿತಿಂಗಳೂ ಡಿಕ್ಲರೇಷನ್ ಕೊಡಬೇಕೆಂದಿತ್ತು. ಅವರು ಆ ರೀತಿ ಡಿಕ್ಲರೇಷನ್ ಕೊಡದಿದ್ದರೆ ಅಂಥವರ ಮೇಲೆ ಕಾನೂನು ಪ್ರಕಾರ ಕ್ರಮತೆಗೆದುಕೊಂಡು ಅವರಿಗೆ ಶಿಕ್ಷೆಯನ್ನು ವಿಧಿಸುವಂತಹ ಅವಕಾಶ ಇತ್ತು. ಈ ಕಾನೂನು ಸರಿಯಾಗಿದ್ದರೂ ಕೂಡ ರೈತರು ಬಹಳ ಜನ ಓದಿಲ್ಲ. ಅವರಿಗೆ ಕಾನೂನು ಗೊತ್ತಿಲ್ಲ ಫಾರಂ ಮತ್ತು ಸ್ಟಾಕ್ ರಿಜಿಸ್ಟರುಗಳನ್ನು ಯಾವ ರೀತಿ ಮೇಂಟೇನ್ ಮಾಡಬೇಕೆಬುದು ಅವರಿಗೆ ಗೊತ್ತಿಲ್ಲ, ಇತ್ಯಾದಿ ಅನೇಕ ತೊಂದರೆಗಳು ರೈತರಿಗೆ ಇದರಿಂದ ಇವೆ ಎಂಬುದು ಕೇಳಿ ಬಂತು. ಇದನ್ನೆಲ್ಲಾ ವಿಚಾರ ಮಾಡಿ ನೋಡಿದಾಗ ಈ ಕಾನೂನು ತಿದ್ದುಪಡಿ ಮಾಡಬೇಕೆಂದು ತಿಳಿದು ಆದಕ್ಕೆ ಕೇಂದ್ರ ನಾವು ಸರ್ಕಾರದವರ ಒಪ್ಪಿಗೆಯನ್ನು ಕೇಳಿದ್ದೆವು. ಅದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆ. ಈಗ ತಿದ್ದುಪಡಿಯ ಪ್ರಕಾರ ಇದುವರೆಗೆ ಇದ್ದಂತೆ ಪ್ರತಿ ತಿಂಗಳು ಡಿಕ್ಲರೇಷನ್ ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ. ಇದರ ಬದಲು 6 ತಿಂಗಳಿಗೊಮ್ಮೆ ಡಿಕ್ಲರೇಷನ್ ಕೊಟ್ಟರೆ ಸಾಕು ಎಂದು ಮಾಡಿದ್ದೇವೆ. ರೈತರಿಗೆ ಇದರಿಂದ ಸಹಾಯವಾಗುತ್ತದೆ,

(ಶ್ರೀ ಬಿ. ಡಿ. ಜತ್ತಿ)

ಯಾವ ತೊಂದರೆಯೂ ಆಗುವುದಿಲ್ಲ, ಬೇಸಿಗೆ ಬೆಳೆ, ಮೊದಲನೇ ಬೆಳೆ ಹೀಗೆ ಎರಡು ಬೆಳೆ ಆದರೂ ಕೂಡ ಒಮ್ಮೆ ಡಿಕ್ಲರೇಷನ್ ಕೊಟ್ಟಮೇಲೆ ಪುನಃ ಅವರು ಕೊಡಬೇಕಾಗಿಲ್ಲ. ಈ ರೀತಿಯಾಗಿ ರೈತರಿಗೆ ಇರುವ ಕಷ್ಟವನ್ನು ತಪ್ಪಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ.

ಇನ್ನು ಖಾನಾಪುರದ ಮಾನ್ಯ ಸದಸ್ಯ ಸದಸ್ಯರು ಅವರ ತಾಲ್ಲೂಕಿನಲ್ಲಿ ಲೆವಿ ಸಂಗ್ರಹ ಮಾಡುವುದರಲ್ಲಿ ಬಹಳ ಹಿಂಸೆಯಾಗಿದೆ ಎಂದು ಹೇಳಿದರು. ನನಗೆ ಗೊತ್ತಿರುವ ಪ್ರಕಾರ ಅಂಥಾದ್ದೇನೂ ಅಲ್ಲಿ ಕಾಣುವುದಿಲ್ಲ. ಲೆವಿ ವಸೂಲು ಮಾಡಿರುವ ಬಗ್ಗೆ ಮಾನ್ಯ ಸದಸ್ಯರುಗಳಿಗೆ ಅಂಕಿಅಂಶಗಳನ್ನು ಹೇಳುತ್ತೇನೆ. 1965-66 ರಲ್ಲಿ ನಾವು ಆಹಾರ ಧಾನ್ಯವನ್ನು ಲೆವಿಮೂಲಕ 47.8 ಪರ್ಸೆಂಟ್ ಲೆವಿಯನ್ನು ವಸೂಲು ಮಾಡಿದ್ದೇವೆ. 66-67 ನೇ ಸಾಲಿನಲ್ಲಿ 50.8 ಪರ್ಸೆಂಟ್ ವಸೂಲು ಮಾಡಿದ್ದೇವೆ. ಈ ಸಾಲಿನಲ್ಲಿ ಇದುವರೆಗೆ 44 ಪರ್ಸೆಂಟ್ ವಸೂಲು ಮಾಡಿದ್ದೇವೆ. 50 ಪರ್ಸೆಂಟ್ ಗಿಂತ ಕಡಿಮೆ ವಸೂಲು ಮಾಡಿದ್ದೇವೆ. ರೈತರಿಗೆ ಲೆವಿ ವಸೂಲು ಮಾಡುವುದಕ್ಕೆ ಯಾವ ಹೆರಾಸ್‌ಮೆಂಟೂ ಮಾಡುತ್ತಿಲ್ಲ. ಹೆರಾಸ್‌ಮೆಂಟ್ ಮಾಡುವುದು ನಿಶ್ಚಯವಾಗಿದ್ದರೆ 100 ಪರ್ಸೆಂಟ್ ಲೆವಿ ವಸೂಲಿ ಬರಬೇಕಾಗಿತ್ತು, ಯಾವ ಹೆರಾಸ್‌ಮೆಂಟೂ ಇಲ್ಲದೆ ಇದ್ದುದರಿಂದ 50 ಪರ್ಸೆಂಟಿಗಿಂತ ಕಡಿಮೆ ಬಂದಿದೆ. ಆದ್ದರಿಂದ ಮಾನ್ಯ ಸದಸ್ಯರು ಉತ್ಪ್ರೇಕ್ಷೆಮಾಡಿ ಲೆವಿ ವಸೂಲಿಯಲ್ಲಿ ಹಿಂಸೆ ಮಾಡುತ್ತಿದ್ದಾರೆ ಎಂದು ಹೇಳಿದ್ದನ್ನು ಒಪ್ಪುವುದಕ್ಕಾಗುವುದಿಲ್ಲ. ಈ ಲೆವಿ ಕಾನೂನನ್ನು ಜಾರಿಗೆ ತರುವಾಗ ತೊಂದರೆಗಳಿದ್ದರೆ ಅದನ್ನು ತಾಲ್ಲೂಕು ಬೋರ್ಡಿನವರಾಗಲೀ, ಗ್ರಾಮ ಪಂಚಾಯಿತಿಯವರಾಗಲೀ ಸರ್ಕಾರದ ಗಮನಕ್ಕೆ ತಂದರೆ ಅದನ್ನು ಪರಿಹರಿಸುವುದಕ್ಕೆ ನಾವು ಒಪ್ಪಿದ್ದೇವೆ. ಬೆಳೆ ಆಗಿದ್ದರೆ ಲೆವಿ ತೆಗೆದುಕೊಳ್ಳಬೇಕು, ಬೆಳೆ ಆಗದೆ ಲೆವಿ ಕೊಡುವುದಕ್ಕೆ ಶಕ್ತಿ ಇಲ್ಲದಿದ್ದರೆ ಅಂಥಾ ಕಡೆ ಲೆವಿ ತೆಗೆದುಕೊಳ್ಳುವುದಿಲ್ಲ ಎಂದು ಅದನ್ನೂ ಒಪ್ಪಿದ್ದೇವೆ. ಅದಕ್ಕಿಂತ ಹೆಚ್ಚು ಈ ಲೆವಿ ಕಾನೂನು ಸಡಿಲಮಾಡುವುದು ನನಗೆ ಕಾಣುವುದಿಲ್ಲ. ಈ ಲೆವಿ ಕಾನೂನೇ ಬೇಡ ಎಂದು ಅಸೆಂಬ್ಲಿಯಲ್ಲಿ ಹೇಳಿದ ಕೂಡಲೇ, ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು, ಅದರಿಂದ ಹೆರಾಸ್‌ಮೆಂಟ್ ಆಗುತ್ತಿದೆ ಎಂದು ಹೇಳಿದರೆ ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಿಗೆ ಜನಗಳ ಸಂಪರ್ಕ ಯಾವ ರೀತಿ ಇದೆಯೋ ಅದೇ ರೀತಿ ನಮಗೂ ಇದೆ. ನಾನೂ ಕೂಡ ಜನಗಳಿಂದ ಚುನಾಯಿತನಾಗಿ ಬಂದಿದ್ದೇನೆ ಆದ್ದರಿಂದ ನಾನು ಕೂಡ ಜನಗಳಿಗೆ ಸಂತೋಷವಾಗುವ ರೀತಿಯಲ್ಲಿ, ಸಮಾಧಾನವಾಗುವ ರೀತಿಯಲ್ಲಿ ಕೆಲಸಗಳನ್ನು ಮಾಡಬೇಕಾಗುತ್ತದೆ. ನಾನು ಮುಂದೆ ಮತ್ತೆ ಚುನಾವಣೆಗೆ ನಿಲ್ಲಬೇಕಾಗುತ್ತದೆ. ನಾನೇನು ಸನ್ಯಾಸಿಯಾಗಿ ಹೋಗಬೇಕೆಂದೇನೂ ಇಲ್ಲ. ಈ ಲೆವಿಯನ್ನು ವಸೂಲು ಮಾಡುವುದರಲ್ಲಿ ಸ್ವಲ್ಪ ಗಲಾಟೆ ಮಾಡುತ್ತಾರೆ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಬರೆದಿರತಕ್ಕ ಪತ್ರವನ್ನು ನಾನು ಓದಿದ್ದೇನೆ. ಈ ವಿಚಾರದಲ್ಲಿ ಏನು ನಡೆಯುತ್ತಿದೆ ಎನ್ನುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ ಮತ್ತು ಸರ್ಕಾರಕ್ಕೂ ಗೊತ್ತಿದೆ. ಆದ್ದರಿಂದ ಲೆವಿ ವಸೂಲು ಮಾಡುವುದರಲ್ಲಿ ಏನು ನಡೆಯುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದು ವೇದವಾಕ್ಯ, ಸತ್ಯಸಂಗತಿ ಎಂದು ಒಪ್ಪಲಿಕ್ಕೆ ಸಿದ್ಧವಾಗಿದ್ದರೂ ಕೂಡ ಎಲ್ಲಿ ಅಸಮಾಧಾನ, ಅನ್ಯಾಯವಾಗಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತಂದರೆ ಅದು ಸರಿಯೋ ಹೇಗೆ ಎಂಬುದನ್ನು ಪುನಃ ಪರಿಶೀಲಿಸಿ ಚೌಕಾಸಿ ಮಾಡುತ್ತೇವೆ. ಅದನ್ನು ನಾವು ಸರಿಪಡಿಸುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ಮಾನ್ಯ ಸದಸ್ಯರು ತಮಗೆ ಕಾಗದ ಬರೆದಿದ್ದರಲ್ಲಿ ಸತ್ಯಾಂಶ ಇದೆಯೆಂದು ಅವರಿಗೆ ತಿಳಿಸಿದ್ದೀರಾ? ಮತ್ತು ವಿರೋಧ ಪಕ್ಷದವರು ಬರೆಯುವ ಕಾಗದಗಳು ಸುಳ್ಳು ಎಂದು ಹೇಳುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ತಾವು ಹೇಳಿದ್ದು ಅಸತ್ಯ ಎಂದು ಹೇಳುವುದಿಲ್ಲ. ಅದು ಸತ್ಯ ಎಂದು ತಿಳಿದುಕೊಂಡು ಅದರ ಬಗ್ಗೆ ಚೌಕಾಸಿಮಾಡುತ್ತೇವೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ನಾಡಕರ್ಣಿಯವರು ನಮ್ಮ ಕಾರವಾರ ಜಿಲ್ಲೆಗೆ ಆಹಾರ ಧಾನ್ಯದ ಅಲಾಟ್‌ಮೆಂಟ್ ಸರಿಯಾಗಿ ಕೊಟ್ಟಿಲ್ಲ ಎಂದು ಹೇಳಿದರು. ಕಾರವಾರ ಜಿಲ್ಲೆಗೆ ಮಂತ್ರಿ ಅಲಾಟ್‌ಮೆಂಟ್ ಎಷ್ಟು ಕೊಟ್ಟಿದೆ ಎಂಬುದನ್ನು ನಾನು ಹೇಳುತ್ತೇನೆ. ಅಕ್ಕಿ 1250 ಕ್ವಿಂಟಾಲ್. ಗೋಧಿ 600 ಕ್ವಿಂಟಾಲ್. ಮೈಲೋ 350 ಕ್ವಿಂಟಾಲ್. ಸಕ್ಕರೆ 1470 ಕ್ವಿಂಟಾಲ್ ಕೊಟ್ಟಿದೆ. ನಾವು ಕೊಡತಕ್ಕ ಕೋಟಾವನ್ನು ಕಡಿಮೆ ಮಾಡುವುದಕ್ಕೆ ಹೋಗಿಲ್ಲ. ಅಂಕೋಲಕ್ಕೆ ಸ್ಪೆಷಲ್ ಅಲಾಟ್‌ಮೆಂಟ್ ಮಾಡಿದ್ದೇವೆ ಅಂಕೋಲಕ್ಕೆ ಜನವರಿ, ಫೆಬ್ರುವರಿ, ಮಾರ್ಚಿ ಈ ಮೂರು ತಿಂಗಳಲ್ಲಿ 1[illegible]0 ಕ್ವಿಂಟಾಲ್ ಅಕ್ಕಿಯನ್ನು ಅಲಾಟ್‌ಮಾಡಿದೆ. ಹಾಗೆಯೇ 130 ಕ್ವಿಂಟಾಲ್ ಗೋಧಿಯನ್ನು ಕೊಟ್ಟಿದೆ. ಕುಮಟಕ್ಕೆ 3 ತಿಂಗಳಿಗೆ 170 ಕ್ವಿಂಟಾಲ್ ಅಕ್ಕಿಯನ್ನು ಕೊಟ್ಟಿದೆ ಅಂಕೋಲಕ್ಕೆ

ಫೆಬ್ರವರಿ ತಿಂಗಳಿನಲ್ಲಿ 50 ಕ್ವಿಂಟಾಲ್ ಮೈಲೋ ಕೊಟ್ಟಿದೆ. ಕುಮಟಕ್ಕೆ 65 ಕ್ವಿಂಟಾಲ್ ಮೈಲೋ ಕೊಟ್ಟಿದೆ. ಅಂಕೋಲಕ್ಕೆ ಜನವರಿ ತಿಂಗಳಿನಲ್ಲಿ 60 ಕ್ವಿಂಟಾಲ್ ಮೈಲೋ ಕೊಟ್ಟಿದೆ. ಫೆಬ್ರವರಿ ತಿಂಗಳಿನಲ್ಲಿ 50 ಕ್ವಿಂಟಾಲ್ ಕೊಟ್ಟಿದೆ. ಮಾರ್ಚಿ ತಿಂಗಳಿನಲ್ಲಿ 65 ಕ್ವಿಂಟಾಲ್ ಕೊಟ್ಟಿದೆ. ಅಂಕೋಲಕ್ಕೆ ಮೈಲೋ ಫೆಬ್ರವರಿ ಮತ್ತು ಮಾರ್ಚಿ ತಿಂಗಳು ಸೇರಿ 125 ಕ್ವಿಂಟಾಲ್ ಕೊಟ್ಟಿದೆ. ಕುಮಟಾಕ್ಕೆ 3 ತಿಂಗಳಿಗೆ ಮೈಲೋ 185 ಕ್ವಿಂಟಾಲ್ ಕೊಟ್ಟಿದೆ. ಇದನ್ನು ನೋಡಿದರೆ ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ ಎಷ್ಟರಮಟ್ಟಿಗೆ ನಾರ್ತ್ ಕೆನರಾ ಜಿಲ್ಲೆಗೆ ಆಹಾರ ಧಾನ್ಯವನ್ನು ಒದಗಿಸಿ ಕೊಟ್ಟಿದೆ ಎಂಬುದು. ಎಲ್ಲೆಲ್ಲಿ ಆಹಾರದ ಅಭಾವ ಇದೆ, ಎಲ್ಲೆಲ್ಲಿ ಕಾರ್ಮಿಕರ ಸಂಖ್ಯೆ ಜಾಸ್ತಿ ಇದೆ ಆ ಪ್ರದೇಶಗಳಿಗೆ ಜನಗಳಿಗೆ ಸಾಧ್ಯವಾದಷ್ಟು ಆಹಾರ ಧಾನ್ಯವನ್ನು ಒದಗಿಸಿದೆ. ನಮ್ಮ ರಾಜ್ಯದಲ್ಲಿ ಸುಮಾರು 2½ ಕೋಟಿ ಜನಸಂಖ್ಯೆ ಇದೆ. ಎಲ್ಲರಿಗೂ ನಾವು ಆಹಾರ ಧಾನ್ಯವನ್ನು ಒದಗಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಈಗ ನಮ್ಮಲ್ಲಿ 10 ಪರ್ಸೆಂಟ್ ಆಹಾರ ಧಾನ್ಯದ ಕೊರತೆ ಇದೆ. ಆ 10 ಪರ್ಸೆಂಟ್ ಕೊರತೆಯನ್ನು ಯಾವರೀತಿಯಿಂದಾದರೂ ಪೂರೈಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಪ್ರತಿಯೊಬ್ಬರಿಗೂ ನಾವು ಆಹಾರ ಧಾನ್ಯವನ್ನು ಕೊಡುತ್ತೇವೆ ಎಂದು ಹೇಳಿದರೆ ಅದು ಆಗುವುದಿಲ್ಲ.

ಇನ್ನು ಶ್ರೀಮಾನ್ ಭಾಸ್ಕರಶೆಟ್ಟರು ದಕ್ಷಿಣಕನ್ನಡ ಜಿಲ್ಲೆಯ ಬಗ್ಗೆ ಬಹಳ ಘಟ್ಟಿ ಘಟ್ಟಿಯಾಗಿ ಮಾತನಾಡಿದರು. ನಮ್ಮ ಜಿಲ್ಲೆಯವರು ಕೊಡುವಷ್ಟು ಲೆವಿಯನ್ನು ಬೇರೆ ಯಾವ ಜಿಲ್ಲೆಯವರು ಸಹ ಕೊಡುವುದಿಲ್ಲ, ನಮ್ಮ ಜಿಲ್ಲೆಯವರು ಸುಮಾರು 78 ಪರ್‌ಸೆಂಟ್ ಕೊಟ್ಟಿದ್ದಾರೆಂದು ಬಹಳ ಘಟ್ಟಿಯಾಗಿ ಈ ಸಭೆಯಲ್ಲಿ ಹೇಳಿದರು. ಅವರು ಆ ರೀತಿ ಹೇಳಿದ್ದರಲ್ಲಿ ಯಾವ ಸತ್ಯಾಂಶವೂ ಇಲ್ಲ. ಈ ಬಗ್ಗೆ ಅಂಕಿಅಂಶಗಳನ್ನು ಹೇಳುತ್ತೇನೆ. 1965-66ರಲ್ಲಿ ಲೆವಿಯನ್ನು 32 ಸಾವಿರ ಕ್ವಿಂಟಾಲ್ ವಸೂಲು ಮಾಡಬೇಕೆಂಬ ಗುರಿಯಿತ್ತು. ಆದರೆ ಸಂಗ್ರಹವಾಗಿದ್ದು 14,500 ಕ್ವಿಂಟಾಲ್ ಮಾತ್ರ ಅಂದರೆ 46 ಪರ್‌ಸೆಂಟ್ ಆಯಿತು. 1966-67ರಲ್ಲಿ 28 ಪರ್‌ಸೆಂಟ್ ಸಂಗ್ರಹವಾಗಿದೆ. 1967-68ರಲ್ಲಿ 33 ಪರ್‌ಸೆಂಟ್ ಸಂಗ್ರಹವಾಗಿದೆ. ಈ ರೀತಿ ಅಂಕಿಅಂಶಗಳು ಇರುವುದರಿಂದ ಮಾನ್ಯ ಸದಸ್ಯರು 78 ಪರ್‌ಸೆಂಟ್ ಕೊಟ್ಟಿದ್ದೇವೆಂದು ಹೇಳುತ್ತಿರುವುದು ಸರಿಯಲ್ಲ. ಆ ರೀತಿ ಹೇಳುವುದರಲ್ಲಿ ಸತ್ಯಾಂಶವಿಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಬೇರೆ ಜಿಲ್ಲೆಯವರಿಗಿಂತ ನಾವು ಹೆಚ್ಚು ಕೊಟ್ಟಿರುವುದು ಹೌದೋ ಅಲ್ಲವೋ ಎಂಬುದನ್ನು ಹೇಳಿ.

ಶ್ರೀ ಬಿ. ಡಿ. ಜತ್ತಿ.—ಬೇರೆ ಜಿಲ್ಲೆಯವರಿಗಿಂತ ನಾವು ಜಾಸ್ತಿ ಕೊಟ್ಟಿದ್ದೇವೆಂದು ನೀವು ಹೇಳಿದ್ದರೆ ನಾನು ಒಪ್ಪುತ್ತಿದ್ದೆ. ಆದರೆ 78 ಪರ್‌ಸೆಂಟ್‌ವರೆಗೆ ಕೊಟ್ಟಿದ್ದೇವೆಂದು ಹೇಳಿದ್ದು ಸರಿಯಲ್ಲ. ನಮ್ಮ ಮೈಸೂರು ಸಂಸ್ಥಾನವನ್ನು ಲೆವಿ ವಿಚಾರದಲ್ಲಿ ಸರಾಸರಿ ತೆಗೆದುಕೊಂಡರೆ 50 ಪರ್‌ಸೆಂಟ್ ವಸೂಲು ಮಾಡುತ್ತಿದ್ದೇವೆ. ಅದಕ್ಕಿಂತ ಜಾಸ್ತಿ ವಸೂಲು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ರೀತಿ ಅವರೇಜ್ 50 ಪರ್‌ಸೆಂಟ್ ಇರುವಾಗ ಮಾನ್ಯ ಸದಸ್ಯರ ಜಿಲ್ಲೆಯಲ್ಲಿ 1965-66ರಲ್ಲಿ ಕೇವಲ 46 ಪರ್‌ಸೆಂಟ್, 1966-67ರಲ್ಲಿ 28 ಪರ್‌ಸೆಂಟ್, 1967-68ರಲ್ಲಿ 33 ಪರ್‌ಸೆಂಟ್ ಸಂಗ್ರಹವಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ತಪ್ಪು ಕಲ್ಪನೆ ಇಟ್ಟುಕೊಂಡು ಈ ಸಭೆಯಲ್ಲಿ ಗೊಂದಲ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಇನ್ನು ಒಂದು ವಿಚಾರವನ್ನು ಹೇಳಬೇಕಾಗಿದೆ. ಏನೆಂದರೆ ಮೊನ್ನೆ ಆ ಕಡೆಯ ಮಾನ್ಯ ಸದಸ್ಯರಾದ ಶ್ರೀ ಭಾಸ್ಕರಶೆಟ್ಟರಿಗೂ ಈ ಕಡೆಯ ಸದಸ್ಯರಾದ ಶ್ರೀ ವಿಠಲದಾಸ ಶೆಟ್ಟರಿಗೂ ವಾಗ್ಯುದ್ಧವಾಯಿತು. ಆ ಬಗ್ಗೆ ಒಂದು ವಿಚಾರವನ್ನು ಹೇಳಬೇಕಾಗಿದೆ. ಮಂಗಳೂರು ಜಿಲ್ಲೆ ಕೇರಳಾ ರಾಜ್ಯಕ್ಕೆ ಸಮೀಪದಲ್ಲಿ ಇದೆ. ಕೇರಳಾದಲ್ಲಿ ಅಕ್ಕಿಯ ಬೆಲೆ ಜಾಸ್ತಿ ಇದೆ. ಎಷ್ಟು ಪ್ರಯತ್ನ ಮಾಡಿದರೂ ಸಹ ಮಂಗಳೂರು ಜಿಲ್ಲೆಯಿಂದ ಕೇರಳಾ ರಾಜ್ಯಕ್ಕೆ ಅಕ್ಕಿಯು ಕಳ್ಳಸಾಗಾಣಿಕೆಯಿಂದ ಹೋಗುತ್ತಿರುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿ ಹೋಗುವುದನ್ನು ತಪ್ಪಿಸಲು ನಾವು ಸಹ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಸಾಕಷ್ಟು ಸಿಬ್ಬಂದಿಗಳನ್ನು ನೇಮಕ ಮಾಡಿದ್ದೇವೆ. ಸಾಕಷ್ಟು ಪೋಲೀಸ್ ಸ್ಕ್ವಾಡ್‌ನ್ನು ಇಟ್ಟಿದ್ದೇವೆ. ನಾವು ಎಷ್ಟೇ ಪ್ರಯತ್ನ ಮಾಡಿದರೂ ಸಹ ಸಂಪೂರ್ಣವಾಗಿ ಅಕ್ಕಿಯು ಕಳ್ಳಸಾಗಾಣಿಕೆಯಿಂದ ಹೋಗುತ್ತಿರುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಆ ರೀತಿ ಸಂಪೂರ್ಣವಾಗಿ ಹೋಗುವುದನ್ನು ತಪ್ಪಿಸಬೇಕಾದರೆ ಮಂಗಳೂರಿಗೂ ಕೇರಳಾ ರಾಜ್ಯಕ್ಕೂ ಇರುವ ಅಂತರದಲ್ಲಿ ಅಂದರೆ ಸುಮಾರು ಮೈಲಿಯ ಮಾತ್ರಮಂತರಲೂ ಸಹ ಪೋಲೀಸಿನವರನ್ನು ಇಡಬೇಕಾಗುತ್ತದೆ, ಇದು ಸಾಧ್ಯವಿಲ್ಲದ ಮಾತು. ಆದ್ದರಿಂದ ಈ ವಿಚಾರದಲ್ಲಿ ಈ ಮನೆಯ ಕಾಂಗ್ರೆಸ್ ಸದಸ್ಯರುಗಳು ಮತ್ತು ವಿರೋಧ ಪಕ್ಷದ ಸದಸ್ಯರುಗಳು ಒಬ್ಬರಮೇಲೆ ಒಬ್ಬರು ತಪ್ಪು ಹಾಕಿ ಮಾತನಾಡುವುದು ಸರಿಯಲ್ಲ. ಒಬ್ಬ

(ಶ್ರೀ ಬಿ. ಡಿ. ಜತ್ತಿ)

ವ್ಯಕ್ತಿ ಮಂಗಳೂರು ಗಡಿಯಿಂದ ಕೇರಳಾ ಗಡಿಗೆ 10 ಕೆ. ಜಿ. ಅಕ್ಕಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿದೆ. ಇದೇ ಅನುಕೂಲವನ್ನು ಕೆಲವು ವರ್ತಕರು ಉಪಯೋಗಿಸಿಕೊಂಡು ನೂರಾರು ಜನ ಕೂಲಿಯವರನ್ನು ಉಪಯೋಗಿಸಿಕೊಂಡು ಅಕ್ಕಿಯನ್ನು ಸಾಗಿಸುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ನಮ್ಮ ಕಡೆಯ ಪೋಲೀಸಿನವರು ಸಾಧ್ಯವಾದಮಟ್ಟಿಗೂ ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಇನ್ನು ರೈತರು ತಮ್ಮ ಪಾಲನ ಲೆವಿಯನ್ನು ಕೊಟ್ಟಮೇಲೂ ಸಹ ಉಳಿದ ಧಾನ್ಯವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೆ ಅವಕಾಶವಾಗುತ್ತಿಲ್ಲ. ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರುಗಳು ಅನೇಕರು ಹೇಳಿದರು. ಇನ್ನು ಮೇಲೆ 6 ತಿಂಗಳಿಗೆ ಒಂದು ಸಾರಿ ಡಿಕ್ಲರೇಷನ್ ಕೊಡಬೇಕೆಂದು ಮಾಡಿರುವುದರಿಂದ ರೈತರು ತಮ್ಮ ಧಾನ್ಯವನ್ನು ಎಲ್ಲಿಗೆ ಬೇಕಾದರೂ ಸಹ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೆ ತೊಂದರೆ ಬರುವುದಿಲ್ಲ.

ಇನ್ನು ಚೆಕ್‌ಪೋಸ್ಟ್‌ಗಳು ಎಲ್ಲಾ ಕಡೆಗಳಲ್ಲಿಯೂ ಇವೆ. ಕೆಲವು ಚೆಕ್‌ಪೋಸ್ಟ್‌ಗಳಲ್ಲಿ ಬಹಳ ಅನ್ಯಾಯವಾಗುತ್ತಿದೆಯೆಂದು ಕೆಲವು ಸದಸ್ಯರುಗಳು ಹೇಳಿದರು.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾಮೂಲು ಪೋಸ್ಟ್‌ಗಳಾಗಿವೆ.

ಶ್ರೀ ಬಿ. ಡಿ. ಜತ್ತಿ.—ಯಾರು ಯಾರು ಎಷ್ಟೆಷ್ಟು ಮಾಮೂಲು ಕೊಡುತ್ತಿದ್ದಾರೆಂಬುದು ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ. ಈ ಬಗ್ಗೆ ಮಾನ್ಯ ಸದಸ್ಯರು ಹೆಚ್ಚಿನ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸಿಕೊಟ್ಟರೆ ವಿಚಾರ ಮಾಡಲಾಗುತ್ತದೆ. ಫುಡ್ ಸೆಲ್‌ನವರಿಗೆ ಗೊತ್ತಿಲ್ಲದ್ದು, ಸಿ. ಐ. ಡಿ. ಅವರಿಗೆ ಗೊತ್ತಿಲ್ಲದ್ದು, ಪೋಲೀಸಿನವರಿಗೆ ಗೊತ್ತಿಲ್ಲದ್ದು, ಅಧಿಕಾರಿಗಳಿಗೆ ಗೊತ್ತಿಲ್ಲದ್ದು ಮಾನ್ಯ ಭಾಸ್ಕರಶೆಟ್ಟರ್ ಅವರಿಗೆ ಗೊತ್ತಿರುವಂತಿದೆ. ನಮ್ಮ ಅಧಿಕಾರಿಗಳು ಈ ಬಗ್ಗೆ ಬಹಳಷ್ಟು ಚೆಕ್ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಮಾಮೂಲು ನಡೆಯುತ್ತಿದೆಯೆಂದು ಸುಮ್ಮನೆ ಹೇಳಿದರೆ ಪ್ರಯೋಜನವಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮೊನ್ನೆ ನಾನು ಹೇಳಿದ ವಿಷಯದ ಬಗ್ಗೆ ಚೆಕ್ ಮಾಡಿ ನೋಡಿ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳಿದ ವಿಷಯದಲ್ಲಿ ಚೆಕ್ ಮಾಡುವುದು ಕಷ್ಟವಾಗುತ್ತದೆ. ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿದರೆ ಚೆಕ್ ಮಾಡಬಹುದು.

ಶ್ರೀ ಅಜೀಜ್ ಶೇಠ್ (ನರಸಿಂಹರಾಜ).—ಮಾನ್ಯ ಭಾಸ್ಕರಶೆಟ್ಟರು ಹೇಳಿದ ಮಾಹಿತಿಯಲ್ಲಿ ಏನೂ ಚೆಕ್ ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಮಾನ್ಯ ಭಾಸ್ಕರಶೆಟ್ಟರು ಕಿವಿಯಿಂದ ಕೇಳಿದ, ತಾವೇ ನೋಡಿದ ವಿಷಯಗಳನ್ನು ಹೇಳುತ್ತಿದ್ದಾರೆ. ಅಂದ ಮೇಲೆ ಅವರು ಹೇಳುತ್ತಿರುವುದು ಸರಿಯಿಲ್ಲವೆಂದು ತಾವು ಹೇಳುವುದಾದರೆ ಫುಡ್ ಡಿಪಾರ್ಟ್‌ಮೆಂಟನ್ನು ಅಬಾಲಿಶ್ ಮಾಡಿ ನಮಗೆ ಅಧಿಕಾರವನ್ನು ವಹಿಸಿಕೊಡಿ, ನಾವು ತನಿಖೆ ಮಾಡಿ ರಿಪೋರ್ಟ್ ತಂದು ಕೊಡುತ್ತೇವೆ. ಈ ಸಭೆಯಲ್ಲಿ ಮಾನ್ಯ ಸದಸ್ಯರುಗಳು ಏನಾದರೂ ಹೇಳಿದರೆ ಅದರಲ್ಲಿ ಸತ್ಯಾಂಶವಿದೆಯೆಂದು ಸರ್ಕಾರದವರು ತಿಳಿದುಕೊಂಡು ತನಿಖೆ ಮಾಡಿಸುವುದು ಒಳ್ಳೆಯದು.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಅಜೀಜ್‌ಶೇಠ್ ಅವರಾಗಲೀ, ಮಾನ್ಯ ಭಾಸ್ಕರಶೆಟ್ಟರ ಅವರಾಗಲೀ ಇಂತಹ ಕಡೆ ತಪ್ಪು ನಡೆದಿದೆ ಎಂಬ ಬಗ್ಗೆ ಮಾಹಿತಿಯನ್ನು ಒದಗಿಸಿಕೊಟ್ಟರೆ ಸ್ಪೆಷಲ್ ಆಫೀಸರನ್ನು ನೇಮಕ ಮಾಡಿ ತನಿಖೆ ಮಾಡಿಸುತ್ತೇನೆ. ಮಾನ್ಯ ಸದಸ್ಯರು ಹೇಳುವ ವಿಚಾರದಲ್ಲಿ ತನಿಖೆ ಮಾಡಿಸುವುದಿಲ್ಲವೆಂದು ಹೇಳುವುದಿಲ್ಲ. ಎಲ್ಲೋ ಒಂದಿಬ್ಬರು ಅಧಿಕಾರಿಗಳು ಲಂಚ ತೆಗೆದುಕೊಂಡರೆ ಮೈಸೂರು ರಾಜ್ಯದಲ್ಲಿರುವ ಎಲ್ಲಾ ಅಧಿಕಾರಿಗಳು ಸಹ ಲಂಚ ತೆಗೆದುಕೊಳ್ಳುತ್ತಾರೆ. ಎಲ್ಲಾ ಕಡೆಯಲ್ಲಿಯೂ ಮಾಮೂಲು ನಡೆಯುತ್ತಿದೆಯೆಂದು ಹೇಳುವುದು ಸರಿಯಲ್ಲ. ಎಲ್ಲಿ ತಪ್ಪಾಗಿದೆ ಅಲ್ಲಿ ತಡೆಯಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಮಾನ್ಯ ಸದಸ್ಯರುಗಳು ಸುಮ್ಮನೆ ಜಾರೆಂಜ್ ಮಾಡದೆ ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿದರೆ ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮೊನ್ನೆ ನಾನು ಹೇಳಿದ ವಿಷಯಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ತಾವು ನನಗೆ ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಘಟ್ಟಿಮುಟ್ಟಾಗಿ ಹೇಳುತ್ತೇನೆ. ಆ ರೀತಿ ಕ್ರಮ ಕೊಳ್ಳುವ ವಿಚಾರದಲ್ಲಿ ಹಿಂದುಮುಂದು ನೋಡುವುದಿಲ್ಲ.

ಇನ್ನು ಮಾನ್ಯ ಸದಸ್ಯರುಗಳು ವಲಯಗಳ ಬಗ್ಗೆ ಹೇಳಿದರು. ಮೈಸೂರು ರಾಜ್ಯದ ಅಭಿಪ್ರಾಯ ಮೊದಲಿನಿಂದಲೂ ಸಹ ವಲಯ ಪದ್ಧತಿ ಇರಬಾರದು ಎಂಬುದೇ ಆಗಿದೆ. ಇದೇ ವಿಚಾರದಲ್ಲಿ ಮೊನ್ನೆ ದೆಹಲಿಯಲ್ಲಿ ನಡೆದ ಸಭೆಯಲ್ಲಿಯೂ ಸಹ ಹೇಳಿದ್ದೇವೆ. ಕೇಂದ್ರ ಸರ್ಕಾರದ ಮೇಲೆ ಈ ವಿಚಾರದಲ್ಲಿ ಸಾಕಷ್ಟು ಪರಿಣಾಮ ಉಂಟುಮಾಡಿದೆ. ಈಗಾಗಲೇ ಉತ್ತರ ಇಂಡಿಯಾದಲ್ಲಿ ಒಂದೊಂದು ರಾಜ್ಯಕ್ಕೂ ಇದ್ದ ವಲಯವನ್ನು ರದ್ದು ಮಾಡಿ ಕೆಲವು ಅಂದರೆ 3—4 ರಾಜ್ಯಗಳನ್ನು ಸೇರಿಸಿ ಒಂದು ವಲಯ ಎಂದು ಮಾಡಿದ್ದಾರೆ. ಅದೇ ರೀತಿ ಇನ್ನು ಸ್ವಲ್ಪ ದಿನಗಳಲ್ಲಿ ದಕ್ಷಿಣ ಭಾಗದಲ್ಲೂ ಸಹ ಮಾಡಬಹುದೆಂದು ನನಗೆ ಕಾಣುತ್ತದೆ. ಈ ಬಗ್ಗೆ ಎಲ್ಲಾ ಪ್ರಯತ್ನವನ್ನೂ ಸಹ ಮಾಡಲಾಗಿದೆ. ಈ ಬಗ್ಗೆ ಮಾನ್ಯ ಸದಸ್ಯರುಗಳು ಸಂಶಯ ಪಡಬೇಕಾಗಿಲ್ಲ. ಈಗ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಕಳ್ಳಸಾಗಾಣಿಕೆಯಿಂದ ತೆಗೆದುಕೊಂಡು ಹೋಗುವವರು ಬಹಳ ಜನ ಇದ್ದಾರೆ. ಇಂತಹವರ ಮೇಲೆ ಸಾಕಷ್ಟು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇಂತಹವರು ಬಹಳ ಜನ ಇದ್ದಾರೆಂದು ನಾನು ಒಪ್ಪುವುದಿಲ್ಲ. ಎಲ್ಲಿ ಇದ್ದಾರೆಂದು ಗೊತ್ತಾಗಿದೆಯೋ ಅಂತಹ ಕಡೆಯಲ್ಲಿ ಹಿಡಿದಿದ್ದೇವೆ, ಇದೇ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಿ. ಎನ್. ಪಾಟೀಲ್ ಅವರು ಬಹಳವಾಗಿ ಹೇಳಿದರು. ಬೀದರ್ ಜಿಲ್ಲೆಯ ಒಂದೆರಡು ಕಡೆ ಏನಾದರು ನಡೆದಿದ್ದರೆ ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ನಡೆಯುತ್ತಿದೆಯೆಂದು ಹೇಳುವುದು ಸರಿಯಲ್ಲ. ಅದನ್ನು ನಾನು ಒಪ್ಪುವುದಿಲ್ಲ. ಬ್ಲಾಕ್ ಮಾರ್ಕೆಟ್ ನಡೆಯುತ್ತಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಮೊದಲಿಗಿಂತ ಕಡಿಮೆಯಾಗಿದೆಯೆಂದು ಹೇಳುತ್ತೇನೆ. ಎಲ್ಲಾ ಕಡೆಯಲ್ಲಿಯೂ ಚೆಕ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಸೆಂಬ್ಲಿಯ ಸದಸ್ಯರುಗಳು ಏನಾದರು ಹೇಳಿದರೆ ಸರ್ಕಾರದವರು ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಅಜೀಜ್ ಶೇಠ್.—ನಾವುಗಳು ಜವಾಬ್ದಾರಿಯಿಂದಲೇ ಇಲ್ಲಿ ಮಾತನಾಡುವುದು. ನಾವು ಕೇವಲ 25 ರೂಪಾಯಿಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಇಲ್ಲಿಗೆ ಬಂದಿಲ್ಲ. ನಾವು ಎಂ. ಎಲ್. ಎ. ಆಗಿ ಜವಾಬ್ದಾರಿಯಿಂದ ನಡೆಯುತ್ತಿರುವ ಅನ್ಯಾಯಗಳನ್ನು ಹೇಳುತ್ತೇವೆ. ಅದೇ ರೀತಿ ಮಂತ್ರಿಗಳಾಗಿರುವ ನೀವು ತನಿಖೆ ಮಾಡಿಸಬೇಕು.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಎಂ. ಎಲ್. ಎ. ಆಗಿದ್ದಾರೆಂಬುದನ್ನು, ನಾನು ಮಂತ್ರಿಯಾಗಿದ್ದೇನೆ ಎಂಬುದನ್ನು ಒಪ್ಪುತ್ತೇನೆ. ಈ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಡುವುದು ಸಾಧ್ಯವಿಲ್ಲ. ಅವರು ಯಾವಾಗಲೂ ಸಹ ಮಾತನಾಡುತ್ತಿರುತ್ತಾರೆ. ನಿಶ್ಚಿತವಾಗಿ ಎಲ್ಲಿ ತಪ್ಪು ನಡೆದಿದೆಯೆಂದು ತಿಳಿಸಿದಾಗ ಮಾತ್ರ ಕ್ರಮ ತೆಗೆದುಕೊಳ್ಳಬಹುದೆಂದು ಒಪ್ಪುತ್ತೇನೆ.

ಇನ್ನು ಆಹಾರವನ್ನು ಸರ್ಕಾರದವರು ಸಂಗ್ರಹ ಮಾಡುತ್ತಿರುವ ಬಗ್ಗೆ ಮತ್ತು ಅದನ್ನು ವಿತರಣೆ ಮಾಡುತ್ತಿರುವ ಬಗ್ಗೆ ಮಾನ್ಯ ಸದಸ್ಯರುಗಳು ಅನೇಕರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಈಗಿರತಕ್ಕಂಥ ಲೆವಿ ಪದ್ಧತಿ ಇರಬೇಕೇ ಅಥವಾ ಬೇಡವೇ ಎಂಬುದು ಒಂದು ಪ್ರಶ್ನೆ ಇದೆ. ಲೆವಿ ಬಗ್ಗೆ ಯೋಚನೆ ಮಾಡಬೇಕು ಮತ್ತು ಸರಕಾರದ ನೀತಿಯಲ್ಲಿ ಬದಲಾವಣೆ ಮಾಡಬೇಕೆಂದೂ ಹೇಳಿದರು. ಸದ್ಯಕ್ಕೆ ಲೆವಿ ಮೂಲಕ ಮಾಡುವುದು ಸರಿ ಇದೆ ಮತ್ತು ಯಾವ ರೀತಿಯಾಗಿ ಎಲ್ಲಿ ಇದರಂತೆ ವಸೂಲು ಮಾಡಬೇಕೆಂದು ಸಲಹೆಗಳನ್ನು ಕೇಳಿದಾಗ ಕೆಲವರು ರೈಸ್ ಮಿಲ್‌ಗಳಲ್ಲಿ ಲೆವಿಯನ್ನು ಅಕ್ಕಿಯ ರೂಪದಲ್ಲಿ ವಸೂಲು ಮಾಡಬೇಕು ಎಂದು ಹೇಳಿದರು. ಮತ್ತು ಇದನ್ನು ನಿಲ್ಲಿಸಬೇಕು ಎಂದೂ ಹೇಳಿದರು. ಆದರೆ ಈಗ ಎಲ್ಲಾ ರೈತರೂ ಸಂತೋಷದಿಂದ ಅವರು ಕೊಡುವ ಧಾನ್ಯವನ್ನು ಲೆವಿ ರೂಪದಲ್ಲಿ ಕೊಡುತ್ತಿದ್ದಾರೆ. ಇದು ಯೋಗ್ಯ ಇದೆ ಎಂದು ಮಾಡಲಾಗಿದೆ. ಇದನ್ನು ಬದಲಾವಣೆ ಮಾಡಬೇಕು ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಯಾವ ರೀತಿ ಬದಲಾವಣೆ ಮಾಡಬೇಕು ಎನ್ನುವುದರ ಬಗ್ಗೆ ಸರಿಯಾದ ಸಲಹೆಗಳನ್ನು ಕೊಟ್ಟರೆ ಅದನ್ನು ವಿಚಾರ ಮಾಡಬಹುದು. ಆದರೆ ಇದರಲ್ಲಿ ಕೆಲವು ಕಡೆ ಲೆವಿಯಂತೆ ಹೆಚ್ಚು ಬಂದಿರಬಹುದು ಕೆಲವು ಕಡೆ ಕಡಿಮೆ ಬಂದಿರಬಹುದು. ಈ ರೀತಿ ಅಲ್ಲಲ್ಲಿ ಸ್ವಲ್ಪ ಹೆಚ್ಚೂ ಕಡಿಮೆಯಾಗಿರಬಹುದು. ಇದರ ಬಗ್ಗೆ ಸ್ಪಷ್ಟವಾಗಿ ವಿಚಾರ ಮಾಡಲಿಕ್ಕೆ ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟರೂ ಅದನ್ನು ವಿಚಾರ ಮಾಡಬಹುದು. ಇಷ್ಟು ಹೇಳಿ ನನ್ನ ಡಿಮ್ಯಾಂಡುಗಳಿಗೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

10-30 A.M.

ಶ್ರೀ ಅಜೀಜ್ ಸೇಟ್.—ಮಾನ್ಯ ಮಂತ್ರಿಗಳಾದ ಜತ್ತಿಯವರು ಇಲ್ಲಿ ಒಂದು ವಿಚಾರ ಸ್ಪಷ್ಟವಾಗಿ ಹೇಳಬೇಕು. ಲೆವಿ ಎಂದು ವಸೂಲು ಮಾಡುವುದು ಕಾನ್‌ಸ್ಟಿಟ್ಯೂಷನಲ್ ಆಗಿದೆಯೇ ಇಲ್ಲವೇ, ಅನ್‌ಕಾನ್‌ಸ್ಟಿಟ್ಯೂಷನಲ್ ಆಗಿದೆಯೇ ಎನ್ನುವುದು ? ಇನ್ನೊಂದು ವಿಚಾರ ಅವರಲ್ಲಿ ಹೇಳಬೇಕಾಗಿದೆ. ಪಾರ್ಲಿಮೆಂಟಿನಲ್ಲಿ ಕೂಡ ಇಂತಹ ಲೆವಿ ರೀತಿ ತೆಗೆದುಕೊಳ್ಳಬಾರದು ಇದು ಅನ್‌ಕಾನ್‌ಸ್ಟಿಟ್ಯೂಷನಲ್ಲಾಗಿದೆ ಎಂದು. ಇಲ್ಲಿ ಲೆವಿ ರೂಪದಲ್ಲಿ ರೈತರಿಂದ ಕ್ವಿಂಟಾಲ್ ಭತ್ತಕ್ಕೆ 45 ರೂಪಾಯಿನಂತೆ ಕೊಂಡು ಬಳಕೆ ಮಾಡುವವರಿಗೆ 99 ರೂಪಾಯಿನಂತೆ ಮಾರುತ್ತಿದ್ದೀರಿ. ಇದೇ ರೀತಿ ಈಗ ಹೆಚ್ಚು ಬರುವ 50 ರೂಪಾಯಿಗಳನ್ನು ರೈತರಿಗೇ ಕೊಟ್ಟು ಇದನು ಸಬ್‌ಸಿಡೈಸ್ ಮಾಡುವಂತೆ ಏಕೆ ಮಾಡಬಾರದು ? ಎಂದರೆ ರೈತರಿಗೆ ಬೇಕಾಗುವ ಎತ್ತು ಬೀಜ ಗೊಬ್ಬರಗಳನ್ನು ಕೊಟ್ಟು ಹೆಚ್ಚು ಬೆಳೆ ಬೆಳೆಯುವಂತೆ ಮಾಡಬಹುದು. ಈಗ ಲೆವಿ ಎಂದು ವಸೂಲು ಮಾಡುತ್ತಾ ರೈತರಿಂದ ಕ್ವಿಂಟಾಲಿಗೆ 45 ರೂಪಾಯಿನಂತೆ ಕೊಂಡುಕೊಂಡು ಮಾರಾಟ ಮಾಡುವಾಗ ಕ್ವಿಂಟಾಲಿಗೆ 99 ರೂಪಾಯಿನಂತೆ ಮಾರುವುದು ಯಾವ ನ್ಯಾಯ ? ಮೈಸೂರು ಸಿಟಿಯಲ್ಲಿ ಒಂದು ಕಾರ್ಡಿಗೆ ಎರಡು ಹಾಗೂ ಮೂರು ಕೆ.ಜಿ. ಅಕ್ಕಿ ಎಂದು ಕೊಟ್ಟರೆ ಅದು ಸರಿಯೇ ? ಒಂದು ಸಂಸಾರಕ್ಕೆ ಎರಡು ಕೆ.ಜಿ. ಅಕ್ಕಿ ಸಾಕಾಗುತ್ತದೆಯೇ ಎನ್ನುವುದನ್ನು ಮಾನ್ಯ ಮಂತ್ರಿಗಳಾದ ಜತ್ತಿಯವರು ತಿಳಿಸುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಅಜೀಜ್ ಶೇಟ್‌ರವರು ಹೇಳಿದ್ದು ಲೆವಿ ಸಿಸ್ಟಂ ಕಾನ್‌ಸ್ಟಿಟ್ಯೂಷನಲ್ ಆಗಿದೆಯೇ ಇಲ್ಲವೇ ಅನ್‌ಕಾನ್‌ಸ್ಟಿಟ್ಯೂಷನಲ್ ಆಗಿದೆಯೇ ಎಂದು. ಅನ್‌ಕಾನ್‌ಸ್ಟಿಟ್ಯೂಷನಲ್ ಎಂದು ಕೋರ್ಟಿನವರು ನಿರ್ಣಯ ಮಾಡಿದರೆ ಅದನ್ನು ನಾವು ಆಗ ಕೈಬಿಡುತ್ತೇವೆ.

Sri DIGAMBAR RAO B. KALMANKAR.—The Hyderabad Karnatak area is not a paddy growing area. In spite of this forcible collection of levy of paddy is being made. Will the Government reconsider this and give up collection of paddy ?

Sri B. D. JATTI.—Unless the farmers grow paddy, the question of collection of levy does not arise.

Sri H. SIDDAVEERAPPA.—It is within our experience during the last twenty years that more the controls the greater is the scarcity in this country. We experimented a number of times. Now the climate is favourable for complete decontrol and it is a matter within the purview of the State also. Why can't you embolden yourself and try to get rid of the whole thing which is a hot-bed for all sorts of corruption and evil practices ? Instead of spending this money on your Food Department, you give it by way of subsidy to the growers so that they may grow food and give it to us. Could you kindly consider it ?

Sri B. D. JATTI.—It is a valuable suggestion and it will be considered and considered favourably.

ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲ).—ಅಂಕೋಲ ತಾಲ್ಲೂಕಿನಲ್ಲಿ ರೈತರು ಡಿಕ್ಲರೇಷನ್ ಕೊಟ್ಟು ಅವರಲ್ಲಿ ಧಾನ್ಯವಿಲ್ಲ ಎಂದು ಹೇಳಿದರೂ ಕೂಡ ಅಧಿಕಾರಿಗಳು ಒತ್ತಾಯದಿಂದ ಲೆವಿ ವಸೂಲು ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದರೂ ವಸೂಲು ಮಾಡುತ್ತಿದ್ದಾರೆ. ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ ?

Sri B. D. JATTI.—When actually search is being made if no stock is found out, it is all right. But during search if it is found out that he has got stocks and not declared them, he will be prosecuted.

ಶ್ರೀ ಡಿ. ಎಸ್. ನಾಡಕರ್ಣಿ.—ಪ್ರಾಸಿಕ್ಯೂಷನ್ ಮಾಡುವುದು ಸರಿಯಲ್ಲ ಎಂದರೂ ಮಾಡುತ್ತಿದ್ದಾರೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಸದಸ್ಯರು ಹೇಳಿದ್ದು ಅರ್ಥವಾಗಲಿಲ್ಲ ಎಂದು ತೋರುತ್ತೆ. ಆಯಾ ಶಾನುಭೋಗರುಗಳು ಅವರು ಬರೆಯುವ ಪಹಣಿ ಲೆಕ್ಕದಲ್ಲಿ ಅರಾಣಿ ಬೆಳೆಯೂ ಬಂದಿಲ್ಲ ಎಂದು ಇದ್ದರೂ ತಾವು ಈಗ ಮಾಡಿರುವ ಸುಗ್ರೀವಾಜ್ಞೆಯಂತೆ ಅಲ್ಲಿರುವ ತಹಶೀಲ್ದಾರರುಗಳು ಲೆವಿ ಕೊಡಬೇಕು ಎಂದು ಕಡ್ಡಾಯದಿಂದ ವಸೂಲು ಮಾಡುತ್ತಿದ್ದಾರೆ. ಇದರಿಂದ ಬೆಳೆ ಬೆಳೆಯದ ರೈತರಿಗೂ ಬಹಳ ತೊಂದರೆಗಳಾಗುತ್ತಿವೆ. ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಬಿ. ಡಿ. ಜತ್ತಿ.—ಇದಕ್ಕೆ ರೈತರು ಅಲ್ಲಿ ಒಂದು ಡಿಟರ್‌ಮಿನೇಷನ್ ಫಾರಂ ಎಂದು ಒಂದು ಇದೆ. ಇದನ್ನು ಪೂರ್ತಿಯಾಗಿ ಬರೆದು ಕೊಟ್ಟರೆ ಅಂತಹ ರೈತರ ಮೇಲೆ ಯಾವ ಕ್ರಮ ವನ್ನೂ ತೆಗೆದುಕೊಳ್ಳುವುದಕ್ಕೆ ಅರುವುದಿಲ್ಲ. ಒಂದು ವೇಳೆ ಇಲ್ಲಿ ಮಾನ್ಯ ಸದಸ್ಯರು ಹೇಳುವಂತೆ ಲೆವಿ ವಸೂಲಿ ಮಾಡಿದ್ದರೆ ಅದು ತಪ್ಪಾಗಿದ್ದರೆ ಅದನ್ನು ಸರಿಪಡಿಸಬಹುದು ಎಂದು ಇಲ್ಲಿ ಮಾನ್ಯ ಸದಸ್ಯರಿಗೆ ಅಷ್ಯೂರೆನ್ಸ್ ಕೊಟ್ಟಿದ್ದೇನೆ. ಇದಕ್ಕಿಂತ ಇನ್ನೇನು ಭರವಸೆಯನ್ನು ನಾನು ಕೊಡ ಬಹುದು?

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಮ್ಮ ತಾಲ್ಲೂಕಿನಲ್ಲಿ ಒಂದು ಕೇಸಿನ ಬಗ್ಗೆ ಪ್ರಾಸಿಕ್ಯೂಷನ್ ಆಗಿದೆ ಎಂದು ಸರಕಾರಕ್ಕೆ ಮಾಹಿತಿಗಳನ್ನು ಕೊಟ್ಟಿದ್ದೆ ಮತ್ತು ಈ ಕೇಸಿನಲ್ಲಿ ಕೋರ್ಟಿನವರು ದಂಡ ಕೂಡ ವಿಧಿಸಿದರು ಮತ್ತು ರೈತರಿಂದ ವಸೂಲಿ ಮಾಡಿದ ಭತ್ತವನ್ನು ಅವರಿಗೇ ವಾಪಸು ಕೊಡ ಬೇಕೆಂದೂ ಆಜ್ಞೆಯಾಯಿತು. ಇದರ ಬಗ್ಗೆ ಮಾನ್ಯ ಮಂತ್ರಿಗಳಾದ ಜತ್ತಿಯವರಿಗೂ ವಿನಂತಿ ಮಾಡಿದ್ದೆ. ಇದರ ಬಗ್ಗೆ ಕೂಡಲೇ ಸರಕಾರ ತೀವ್ರವಾದ ಕಾರ್ಯಕ್ರಮವನ್ನು ಈಗಲಾದರೂ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಇದರ ಬಗ್ಗೆ ನನಗೂ ತಿಳಿಸಿದರು. ಇದರ ಪ್ರಕಾರ ನಾನು ಅಲ್ಲಿರುವ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೆ ಮತ್ತು ಆ ವೇಳೆಗೆ ಈ ಕೇಸು ಕೋರ್ಟಿನಲ್ಲಿ ಇತ್ತು ಮತ್ತು ಅಲ್ಲಿ ತೀರ್ಮಾನವೂ ಆಗಿದೆ ಎಂದು ತಿಳಿದು ಬಂತು. ಅದರಂತೆ ಅಲ್ಲಿ ತೆಗೆದುಕೊಂಡಿರುವ ಭತ್ತವನ್ನು ಆ ರೈತರಿಗೆ ವಾಪಸು ಕೊಡುವುದಕ್ಕೆ ಒಪ್ಪಿಗೆಯಾಗಿದೆ. ಅದನ್ನು ಕೊಡುತ್ತಾರೆ.

ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಯಾವ ಯಾವ ಜಿಲ್ಲೆಯಲ್ಲಿ ಲೆವಿ ರೂಪದಲ್ಲಿ ಕಾಳು ಗಳನ್ನು ವಸೂಲು ಮಾಡುತ್ತಿದ್ದಾರೋ ಆ ಜಿಲ್ಲೆಗಳಲ್ಲೇ ಆ ಧಾನ್ಯಗಳನ್ನು ಹಂಚುತ್ತಿಲ್ಲ. ಇದರ ಉದ್ದೇಶವೇನು ಎನ್ನುವುದು ತಿಳಿಯುತ್ತಿಲ್ಲ. ಮತ್ತು ಲೆವಿ ವಸೂಲು ಮಾಡುವ ದರಕ್ಕೂ ಮಾರ್ಕೆಟ್ಟಿ ನಲ್ಲಿರುವ ದರಕ್ಕೂ ಬಹಳ ವ್ಯತ್ಯಾಸವಿದೆ. ಇದಕ್ಕೆ ಕಾರಣವೇನು? ಇಷ್ಟು ಹೆಚ್ಚು ದರ ವೆತ್ಯಾಸ ಮಾಡಲು ಆವಶ್ಯಕತೆ ಇದೆಯೇ? ಲೆವಿ ಎಂದು ವಸೂಲು ಮಾಡುವುದರ ಉದ್ದೇಶವಾದರೂ ಏನು ಎನ್ನುವುದು ಸರಿಯಾಗಿ ಜನಗಳಿಗೆ ಗೊತ್ತಾಗುತ್ತಿಲ್ಲ. ಈ ಉದ್ದೇಶ ಸಾಧನೆಯಾಗಬೇಕಾದರೆ ಯೋಗ್ಯವಾದ ದರದಲ್ಲಿ ಕಾಳುಗಳು ಸಿಗುವಂತೆ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಸರಕಾರದ ನೀತಿಯನ್ನು ಸ್ಪಷ್ಟವಾಗಿ ಜನಕ್ಕೆ ತಿಳಿಯುವಂತೆ ಎಲ್ಲ ಪೇಪರುಗಳಲ್ಲಿಯೂ ಹಾಕಿ ಪ್ರಚಾರ ಮಾಡಬೇಕು, ಇದರ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಬಿ. ಡಿ. ಜತ್ತಿ.—ಲೆವಿ ರೂಪದಲ್ಲಿ ದವಸವನ್ನು ಯಾವ ಜುರಿಸ್‌ಡಿಕ್ಷನ್‌ನಲ್ಲಿ ವಸೂಲು ಮಾಡುತ್ತೇವೋ ಅದೇ ಕ್ಷೇತ್ರದಲ್ಲಿ ಕೊಡಬೇಕು ಎಂದು ಮಾಡುವುದು ಸಾಧ್ಯವಿಲ್ಲ. ಯಾವ ತಾಲ್ಲೂಕಿ ನಲ್ಲಿ ಅಥವಾ ಜಿಲ್ಲೆಯಲ್ಲಿ ಎಷ್ಟು ಲೆವಿ ರೂಪದಲ್ಲಿ ವಸೂಲು ಮಾಡಲಾಗಿದೆ ಅದನ್ನು ಪ್ರತಿಯೊಬ್ಬರಿಗೂ ಹಂಚಬೇಕು ಎಂದರೆ ಕಷ್ಟವಾಗುತ್ತದೆ. ಆದರೆ ಎಲ್ಲಿ ದವಸಗಳ ಕೊರತೆ ಇದೆಯೋ ಅದನ್ನು ನೋಡಿಕೊಂಡು ಅಲ್ಲಿ ಹಂಚಲು ಪ್ರಯತ್ನ ಮಾಡುತ್ತೇವೆ. ಆದರೆ ಎಲ್ಲರಿಗೂ ಹಂಚುತ್ತೇವೆ ಎಂದು ಹೇಳಿಲ್ಲ. ಅಲ್ಲಿರುವ ಆಫೀಸರು ಇದನ್ನೆಲ್ಲಾ ನೋಡಿಕೊಂಡು ಮಾಡುತ್ತಾರೆ ಎಂದು ನನಗೆ ಕಾಣುತ್ತದೆ.

ಶ್ರೀ ಸಿ. ಎನ್. ದೇಸಾಯಿ (ಸಿಂದಗಿ).—ಲೆವಿ ವಸೂಲು ಮಾಡುವಾಗ ನೀರಾವರಿ ಪ್ರದೇಶ ಗಳಲ್ಲಿ ಇರುವ ಜಮೀನುಗಳನ್ನು ವಿಚಾರ ಮಾಡುವಾಗ ಪಿ.ಡಬ್ಲ್ಯು.ಡಿ.ಯವರು ಮಾಡಿರುವ ಆಧಾರದ ತರ ವಸೂಲು ಮಾಡುತ್ತೇವೆ ಎಂದು ಹೇಳಿದಿರಿ. ಎಂದರೆ ಐದು ಎಕರೆಗಳಷ್ಟು ಇರುವ ಪ್ರದೇಶ ಗಳಲ್ಲಿ ಎರಡು ಕ್ವಿಂಟಾಲ್‌ನಷ್ಟು, 5-10 ಎಕರೆಗಳವರೆಗೆ ಇದ್ದರೆ ನಾಲ್ಕು ಕ್ವಿಂಟಾಲುಗಳು ಮತ್ತು ಇದಕ್ಕೆ ಮೇಲ್ಪಟ್ಟು ಏರಿಯಾ ಹೆಚ್ಚಾಗಿದ್ದರೆ ಆರು ಕ್ವಿಂಟಾಲುಗಳಷ್ಟು ವಸೂಲು ಮಾಡಬೇಕೆಂದು ಇದೆ. ಆದರೆ ಇಲ್ಲಿ ಆ ರೀತಿ ಮಾಡದೆ 8-10 ಕ್ವಿಂಟಾಲುಗಳಷ್ಟು ವಸೂಲು ಮಾಡುತ್ತಿದ್ದಾರೆ. ಮತ್ತು ಇದರ ಮೇಲೆ ಲೆಕ್ಕಾಚಾರ ಮಾಡುವಾಗ ನೀವೇ ಹೇಳುವಂತೆ ಸೇಕಡಾ 20ಕ್ಕಿಂತ ಹೆಚ್ಚು ನೀರಾವರಿ ಪ್ರದೇಶ ಇಲ್ಲ ಎಂದರೂ ಶೇಕಡಾ 75 ರಷ್ಟು ಹೆಚ್ಚು ನೀರಾವರಿ ಪ್ರದೇಶ ಇದೆ ಎಂದು ಹೀಗೆ ಲೆಕ್ಕಾಚಾರ ಮಾಡುವುದು ಸರಿಯೇ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಈ ಸಮಸ್ಯೆ ಬಗ್ಗೆ ನನ್ನ ಕಡೆಗೆ ಬಂದು ತಿಳಿಸಿದ್ದಾರೆ. ಅವರು ಹೇಳುವುದು ಪಿ. ಡಬ್ಲ್ಯು. ಡಿ.ಯವರು ಏನು ಪ್ರಾಜೆಕ್ಟ್ಸ್‌ಗಳಿವೆ, ಅವರು ಹೇಳುವಂತೆ ಹೆಸಿಯರ್ ಸ್ಟೋರ್ಸ್ ಹೇಗೆ ಇದೆ ಎನ್ನುವುದರ ಬಗ್ಗೆ ವಿವರಗಳನ್ನು ತಿಳಿಸಿದಂತೆ ನಾವೂ ಲೆವಿ ವಸೂಲು ಮಾಡುತ್ತಿದ್ದೇವೆ. ಇದು ಸರಿಯಲ್ಲ ಇದನ್ನು ಪುನಃ ಪಿ.ಡಬ್ಲ್ಯು.ಡಿ.ಯವರಿಗೆ ಕಳುಹಿಸ ಬೇಕು ಎಂದು ಹೇಳುತ್ತಾರೆ ಮತ್ತು ಇದರಲ್ಲಿ ಬಹಳ ಹೆಚ್ಚು ಕಡಿಮೆಯಾಗುತ್ತದೆ ಎಂದೂ ಹೇಳು ತ್ತಾರೆ. ಇದರಲ್ಲ ಕೆಲವು ಕಡೆ ಹೆಚ್ಚು ಕಡಿಮೆಯಾಗಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಹಿಂದಿನ ವರ್ಷ ಅಸೆಂಬ್ಲಿ ಅಧಿವೇಶನ ಸೇರಿದಾಗ ಈ ಸದನದಲ್ಲಿ ಆಹಾರ ಧಾನ್ಯ ಎತ್ತುವಳಿ ವಿಷಯದಲ್ಲಿ ಒಂದು ಹೇಳಿಕೆ ಕೊಟ್ಟಿರುವರು. ಲೆವಿ ವಸೂಲ್ಮಾಡುವ ಬಗ್ಗೆ ಸರಕಾರದ ನೀತಿ ಈ ರೀತಿ ಇದೆ ಎಂದು ತಿಳಿಸಿದ್ದಾರೆ. ಆಯಾಯ ಗ್ರೂಪ್ ಪಂಚಾಯಿತಿ ಸದಸ್ಯರು ಆ ಹೋಬಳಿಯಲ್ಲಿ ಇರತಕ್ಕಂಥ ರೆವೆನ್ಯೂ ಇನ್‌ಸ್ಪೆಕ್ಟರ್ ಅವರು ಸೇರಿ ಒಂದು ಗ್ರಾಮದಲ್ಲಿ ಯಾವ ಯಾವ ವ್ಯಕ್ತಿಯಿಂದ ಎಷ್ಟು ಲೆವಿ ಕೊಡಲು ಸಾಧ್ಯವಿದೆ ಎನ್ನುವುದನ್ನು ನೋಡಿ ಅದರ ಬಗ್ಗೆ ಒಂದು ಲಿಸ್ಟ್ ತಯಾರ್ಮಾಡಬೇಕು ಮತ್ತು ಆ ರೀತಿ ಲೆವಿ ವಸೂಲ್ಮಾಡಬೇಕು, ಇಷ್ಟು ಮಾಡಿದರೆ ಸಾಕು, ಇದು ಎಲ್ಲರಿಗೂ ಕಡ್ಡಾಯವಾಗಿ ಇಲ್ಲ ಎಂದು ಈ ಸದನದಲ್ಲಿ ಒಂದು ಹೇಳಿಕೆ ಕೊಟ್ಟಿದ್ದರು. ಈ ಮಾನದಲ್ಲಿ ಹೇಳಿಕೆ ಕೊಟ್ಟ ಪ್ರಕಾರ ಮೈಸೂರು ರಾಜ್ಯದಲ್ಲಿ ಇದು ನಡೆಯುತ್ತಿದೆಯೇ ಎಂದು ಅದು ಯಾವ ಕಡೆ ಕೂಡ ಇಲ್ಲ. ಯಾವ ಅಧಿಕಾರಿಗೂ ಇನ್ನೂ ಕೂಡ ಗವರ್ನ್‌ಮೆಂಟ್ ಆರ್ಡರ್ ಹೋಗಿಲ್ಲ. ಶಿವಮೊಗ್ಗ ಡೆಪ್ಯೂಟಿ ಕಮಿಷನರ್ ಹಾಗು ತಹಶೀಲದಾರರನ್ನು ಕೇಳಿದ್ದೇವೆ. ಯಾರಿಗೂ ಈ ಆರ್ಡರ್ ಬಂದಿಲ್ಲ ಎಂದು ಅವರು ಹೇಳುತ್ತಾರೆ. ಇದರ ಅರ್ಥ ಏನು ?

Mr. CHAIRMAN.—Let the hon. Member please take his seat. I don't allow.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಅದಕ್ಕೋಸ್ಕರ ನಾನು ಕೇಳುತ್ತೇನೆ, ಅಧಿಕಾರಿಗಳು ವಸೂಲ್ಮಾಡುವುದಕ್ಕೆ ಲೆವಿ ಕಾನೂನು ಇದೆಯೇ ? ಕಾನೂನು ಪ್ರಕಾರ ಅವರು ವಸೂಲ್ಮಾಡುವು ದಿಲ್ಲ. ತಮ್ಮ ಹೇಳಿಕೆಯ ಪ್ರಕಾರ ವಸೂಲ್ಮಾಡುವುದಿಲ್ಲ. ಹಾಗಾದರೆ ಸರಕಾರದ ನೀತಿ ಏನು ? ಇದಕ್ಕೆ ಕಾನೂನು ಹೊರಡಿಸಿ ಅದನ್ನು ಅಧಿಕಾರಿಗಳಿಗೆ ಕಳಿಸಿದ್ದರೆ ಅದು ಕ್ಷೇಮ. ಇದನ್ನು ಮಾಡದೇ ಇರುವುದರಿಂದ ಲೆವಿ ತೆಗೆದುಕೊಳ್ಳುವಾಗ ಪ್ರತಿಯೊಬ್ಬರ ಮೇಲೆ ವಿಪರೀತ ಕೇಸು ಹಾಕುತ್ತಿದ್ದಾರೆ. ಅದಕ್ಕೆ ಕಾರಣ ಕೊಡುತ್ತಿದ್ದಾರೆ. ಲೆವಿ ವಸೂಲ್ಮಾಡುವ ಮೂಲತತ್ವದ ಬಗ್ಗೆ ನಮ್ಮದು ವಿರೋಧವಿಲ್ಲ. ನಮ್ಮ ವಿರೋಧ ಇರುವುದು ಪ್ರಸ್ತುತ ಇರತಕ್ಕ ಪರಿಸ್ಥಿತಿ ಏನು ಇದೆ ಅದರ ಬಗ್ಗೆ ಇದೆ. ಸರಕಾರದ ಮುಂದೆ ಇದನ್ನು ಅನೇಕ ಸಲ ಹೇಳಿದ್ದೇವೆ. ಆದರೆ ನಾವು ಹೇಳುವುದಕ್ಕೆ ಸರಕಾರ ಕೊಟ್ಟಿರುವುದು ಡೆಫ್ ಇಯರ್ ಮಾತ್ರ.

Mr. CHAIRMAN.—Let him please resums him seat.

ಶ್ರೀ ಎಸ್. ಬಂಗಾರಪ್ಪ.—ಕೊನೆಯ ಒಂದು ಮಾತು ಹೇಳಿ ಮುಗಿಸಿ ಬಿಡುತ್ತೇನೆ.

Mr. CHAIRMAN.—Then he may put a clear question.

ಶ್ರೀ ಎಸ್. ಬಂಗಾರಪ್ಪ.—ಕೊನೆಯ ಮಾತು ಒಂದು ಹೇಳುತ್ತೇನೆ. ಶ್ರೀ ಭಾಸ್ಕರ ಶೆಟ್ಟಿಯವರು ಕಳ್ಳ ಸಾಗಾಣಿಕೆಯಿಂದ ಭತ್ತ ಅಕ್ಕಿ ಮಂಗಳೂರು ಜಿಲ್ಲೆಯಿಂದ ಹೋಗುತ್ತಿದೆ ಎಂದು ಮಾನ್ಯ ಮಂತ್ರಿಗಳಿಗೆ ತಿಳಿಸಿದರು. ನಾನು ಹೇಳುತ್ತೇನೆ ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಲೆವಿ ಎತ್ತಬೇಕು ಎನ್ನುವುದು ನಿಗದಿ ಮಾಡಿದರೆ ಅಷ್ಟು ಧಾನ್ಯ ಶೇಖರಣೆಯಾಗುತ್ತಿತ್ತು. ಅದಿಗೆ ಪ್ರತಿ ದಿನ 15—20 ಲೋಡೆಡ್ ಲಾರಿಗಳು ಹೊರಗಡೆಗೆ ಹೋಗುತ್ತಿವೆ. ಈ ರೀತಿ ಧಾನ್ಯ ಲಾರಿಗಳಲ್ಲಿ ತುಂಬಿಕೊಂಡು ಹೋಗುವುದಕ್ಕೆ ಪ್ರತಿದಿವಸ ಒಂದು ಲಾರಿಯಿಂದ 500 ರೂಪಾಯಿ ಲಂಚ ಅಧಿಕಾರಿಗಳು ತಿನ್ನುತ್ತಿದ್ದಾರೆ ಎಂದು ಇದು ಜನಜನಿತವಾಗಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ? ನೀವು ನನ್ನ ಜೊತೆಗೆ ಬರುತ್ತೀರಾ ? ನೀವು ನನ್ನ ಜೊತೆಗೆ ಬಂದರೆ ಇಂಥ ಲಾರಿಗಳನ್ನು ಹಿಡಿಸಿ ಕೊಡುತ್ತೇನೆ. ಇದನ್ನು ಹಿಡಿಯುವುದಕ್ಕೆ ಬೇರೆ ದಾರಿ ಮೂಲಕ ಹೋಗಬೇಕಾಗುತ್ತದೆ.

ಶ್ರೀ ಬಿ. ಡಿ. ಜತ್ತಿ.—ಮೊದಲನೇ ಮಾತು ಅವರು ಹೇಳಿದ್ದು ಸರಿಯಲ್ಲ. ಎಲ್ಲಿ ಸ್ಕೇರ್‌ಸಿಟಿ ಕಂಡೀಷನ್ಸ್ ಇದೆಯೋ, ಎಲ್ಲಿ ಸರಕಾರ ಆ ರೀತಿ ಡಿಕ್ಲೇರ್ ಮಾಡಿದೆಯೋ ಅಂಥಲ್ಲಿ ಗ್ರಾಮ ಪಂಚಾಯಿತಿಯು ತಾಲ್ಲೂಕ್ ಬೋರ್ಡಿನವರು, ಅಲ್ಲಿರುವ ಸದಸ್ಯರು ಒಂದು ಪಟ್ಟಿ ಮಾಡಿ ಇಷ್ಟು

ಲೆವಿ ಬರಬೇಕು, ಬೆಳೆ ಸರಿಯಾಗಿ ಬಂದಿಲ್ಲ, ಆದುದರಿಂದ ಇಷ್ಟೇ ವಸೂಲ್ಮಾಡಬೇಕು ಎಂದು ಹೇಳಿರುವುದನ್ನು ಇಡೀ ಮೈಸೂರು ರಾಜ್ಯಕ್ಕೆ ಅನ್ವಯಿಸುವುದು ತಪ್ಪು. ಇನ್ನೊಂದು ಮಾತು ಅವರು ಸರಿಯಾಗಿ ಹೇಳಲಿಲ್ಲ. ಡೆಪ್ಯುಟಿ ಕಮಿಷನರ್‌ರಿಗೆ ಸುಕ್ಯುಲರ್ ಕಳಿಸಿದ್ದೇವೆ. ಸರ್ಕ್ಯುಲರ್ ಕಳಿಸಿಲ್ಲ ಎಂದು ಅವರು ಹೇಳುವುದು ತಪ್ಪು, ಅದು ಸರಿಯಲ್ಲ. ಲಂಚ ತೆಗೆದು ಕೊಳ್ಳುತ್ತಾರೆ ಎನ್ನುವುದು ಅವರಿಗೆ ಗೊತ್ತಿದೆ ಎಂದು ಹೇಳುತ್ತಾರೆ. ಒಂದು ಪಟ್ಟಿ ಮಾಡಿ ಅದನ್ನು ವಿವರವಾಗಿ ನನಗೆ ಕೊಡಲಿ. ಅದನ್ನು ನನಗೆ ಕೊಟ್ಟರೆ ಅದನ್ನು ಪತ್ತೆ ಹಚ್ಚುವುದಕ್ಕೆ ಪೋಲೀಸ್ ಅಧಿಕಾರಿಗಳ ಕೂಡ ಅವರನ್ನೂ ನೇಮಿಸುತ್ತೇನೆ.

(ಗೊಂದಲ)

Mr. CHAIRMAN.—I won't allow any speech. The member must put a specific question.

Mr. AZEEZ SAIT.—Question forms part of the speech.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಅನೇಕ ರೈತರು ಮುಸುಕಿನ ಜೋಳ ಬೆಳೆದಿದ್ದಾರೆ. ಒಂದು ಮೂಟೆಗೆ 60 ರೂಪಾಯಿ ಬೆಲೆ ಗೊತ್ತು ಮಾಡಿರುವುದು ಅದು ಕಡಿಮೆಯಲ್ಲ, ಅದು ಸರಿಯಾಗಿ ಇದೆ ಎಂದು ಹೇಳಿದರು. ಈ ಬೆಲೆ ಹೇಗೆ ಗೊತ್ತು ಮಾಡಿದ್ದಾರೆ ತಿಳಿಸುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಕಳೆದ ಮೂರು ವರ್ಷಗಳಿಂದ ಹೆಚ್ಚಾಗಿ ಮುಸುಕಿನ ಜೋಳ ಬೆಳೆಯುತ್ತಿದ್ದಾರೆ. ಒಂದು ಎಕರೆಯಲ್ಲಿ ಎರಡು ಮೂಟೆ ಮೂರು ಮೂಟೆ ನಾಲ್ಕು ಮೂಟೆ ರಾಗಿ ಬೆಳೆಯುತ್ತಿದ್ದರು ಅಂಥ ಕಡೆ ಕನಿಷ್ಟ ಪಕ್ಷ 15 ಮೂಟೆ ಮುಸುಕಿನ ಜೋಳ ಬೆಳೆಯುತ್ತಿದ್ದಾರೆ. ಮುಸುಕಿನ ಜೋಳ ಹೆಚ್ಚು ಬೆಳೆಯುತ್ತಾರೆ. ಒಂದೊಂದು ಮೂಟೆಗೆ 60 ರೂಪಾಯಿ ಬೆಲೆಯಾದರೆ ಅವರಿಗೆ ಲಾಭವಾಗುತ್ತದೆ. ಇದನ್ನು ವಿಚಾರ ಮಾಡಬೇಕಾಗಿಲ್ಲ. ಸರಕಾರದ ದೃಷ್ಟಿಯಿಂದಲೂ ಶ್ರೀ ರಾಮೇಗೌಡರ ದೃಷ್ಟಿಯಿಂದಲೂ ಈ ಬೆಲೆ ಗೊತ್ತುಮಾಡಿರುವ ಪದ್ಧತಿ ಸರಿಯಾಗಿದೆ.

ಶ್ರೀ ಎಂ. ನಾಗಪ್ಪ.—ಲೆವಿ ಪದ್ಧತಿ ತಪ್ಪು ಎಂದು ಹೈಕೋರ್ಟು ತೀರ್ಮಾನ ಮಾಡಿದರೆ ಅದು ನಿಮ್ಮ ಗಮನಕ್ಕೆ ಬಂದರೆ ಈ ಪದ್ಧತಿ ತೆಗೆದುಹಾಕುತ್ತೀರಾ ? ಮದ್ರಾಸ್ ಮತ್ತು ಕೇರಳ ಹೈಕೋರ್ಟು ಇದು ತಪ್ಪು ಪದ್ಧತಿ ಎಂದು ಹೇಳಿದ್ದಾರೆ. ಅದರ ಬಗ್ಗೆ ನೀವು ಏನು ಯೋಚಿಸಿದ್ದೀರಿ ? ರಾಯಚೂರು ತಾಲ್ಲೂಕಿನಲ್ಲಿ ರೈತರು ವಿವರ ಒದಗಿಸುವುದಕ್ಕೆ ಒಂದು ಫಾರ್ಮ್ ಕೊಟ್ಟಿದ್ದೇವೆ ಎಂದು ಹೇಳಿದರು. ರೈತರಿಗೆ ಫಾರ್ಮ್ ದೊರೆತಿಲ್ಲ. ಅವರು ಹೇಗೆ ವಿವರ ಕೊಡಬೇಕು ? ಅವರು ಯಾವ ಕಾಗದದಲ್ಲಿ ಬರೆದು ಕೊಡಬೇಕು ?

ಶ್ರೀ ಬಿ. ಡಿ. ಜತ್ತಿ.—ಮೊದಲನೆಯ ಪ್ರಶ್ನೆಗೆ ಉತ್ತರ ಅಂದರೆ ನಮ್ಮ ಹೈಕೋರ್ಟು ಲೆವಿ ಸಿಸ್ಟಂ ಕಾನೂನುಬಾಹಿರ ಎಂದು ಹೇಳಿಲ್ಲ. ಆದುದರಿಂದ ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಇನ್ನೊಬ್ಬರ ವಿಚಾರ ಮಾಡುವುದು ಅವಶ್ಯಕತೆ ಇಲ್ಲ. ಡಿಟರ್ಮಿನೇಷನ್ ಫಾರ್ಮ್ ಸರಕಾರದವರು ಹಂಚಬೇಕು ಎಂದು ನಿಯಮವಿಲ್ಲ. ಇವನ್ನು ಒತ್ತಾಯಮಾಡಿ ಕೊಡುವ ಅವಶ್ಯಕತೆ ಇಲ್ಲ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಲೆವಿ ತೆಗೆಯಿರಿ ಎಂದು ಕೆಲವರು ಹೇಳುತ್ತಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದರು. ಯಾರಿಗೆ ಕೊಡುವುದಕ್ಕೆ ಶಕ್ಯವಿದೆ ಅವರಿಂದ ತೆಗೆದುಕೊಳ್ಳಿ, ಜನಗಳಿಗೆ ಕಿರುಕುಳ ಕೊಡದೆ ಯಾರ ಕಡೆಯಿಂದ ವಸೂಲುಮಾಡಬಹುದೋ ಅವರಿಂದ ವಸೂಲುಮಾಡಿ.

ವಸೂಲುಮಾಡಿದ ಆಹಾರ ಧಾನ್ಯವನ್ನು ಸರಿಯಾಗಿ ಇಡದೆ ಇದ್ದುದರಿಂದ ಬಿದರೆಯಲ್ಲಿ 225 ಕ್ವಿಂಟಾಲ್ ಗೋಧಿಕಾಳು ಜನರು ತಿನ್ನುವುದಕ್ಕೆ ಅರ್ಹವಿಲ್ಲವೆಂದು ಗೊತ್ತಾಗಿ ಅದನ್ನು ಜಿಲ್ಲಾಧಿಕಾರಿಗಳು ಸೀಲ್ ಮಾಡಿದ್ದಾರೆ.

ಕಲ್ಯಾಣದಿಂದ ಹುಮ್ನಾಬಾದ, ಹುಮ್ನಾಬಾದದಿಂದ ಗುಲ್ಬರ್ಗ ಕಡೆಗೆ ಆಹಾರ ಧಾನ್ಯಗಳು ಕಳ್ಳತನದಲ್ಲಿ ಹೋಗುತ್ತಿದ್ದುದನ್ನು ಹಿಡಿಯಲು ಆಹಾರ ಇನ್‌ಸ್ಪೆಕ್ಟರವರು ಲಾರಿಗಳನ್ನು ಬೆನ್ನಟ್ಟಿ ಹೋಗಿ ಆ ಸಂಬಂಧದಲ್ಲಿ ಅವರು ಪ್ರಾಣ ತೆತ್ತದ್ದು ಸರ್ಕಾರದ ಗಮನಕ್ಕೆ ಬಂದಿದೆಯೋ ? ಇಂಥದ್ದೆಲ್ಲ ಆಗುತ್ತಿರುವಾಗ ಆಹಾರದ ಕಳ್ಳ ಸಾಗಣೆ ನಡೆಯುತ್ತಿದೆ ಎಂದರೆ ಜನರಲೈಸ್ ಮಾಡುತ್ತಿದ್ದೀರಿ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದು ಹೇಗೆ ?

ಒಂದೂವರೆ ರೂಪಾಯಿಗೆ ಒಂದು ಕೆ.ಜಿ. ಸಕ್ಕರೆ ಸಿಕ್ಕುತ್ತಿದ್ದುದು ಈಗ ನಾಲ್ಕು ರೂಪಾಯಿ ವರೆಗೂ ಹೋಗಿದೆ. ಇದೆಲ್ಲ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುವವರ ಬೇಜವಾಬ್ದಾರಿಯಿಂದ ಆಗಿದೆ ಎಂದರೆ ಒಪ್ಪುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ನೂರಕ್ಕೆ 40 ಭಾಗವನ್ನು ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಬಿಡುಗಡೆ ಮಾಡಿದ್ದರೆ ಬ್ಲಾಕ್ ಮಾರ್ಕೆಟ್ ಪ್ರಸಂಗವೇ ಬರುವುದಿಲ್ಲ. ಬಹಿರಂಗ ಮಾರುಕಟ್ಟೆಯಲ್ಲಿ ಯಾರು ಬೇಕಾದರೂ ಮಾರಾಟ ಮಾಡುವುದಕ್ಕೆ ಅವಕಾಶವಿದೆ; ಯಾರು ಬೇಕಾದರೂ ಕೊಂಡುಕೊಳ್ಳುವುದಕ್ಕೆ ಅವಕಾಶವಿದೆ. ಆದ್ದರಿಂದ ಬ್ಲಾಕ್ ಮಾರ್ಕೆಟ್ ಸಮಸ್ಯೆಯೇ ಉದ್ಭವಿಸುವುದಿಲ್ಲ.

ಒಂದು ಲಾರಿ ಅಥವಾ ಎರಡು ಲಾರಿ ಕಳ್ಳತನದಲ್ಲಿ ಸಾಗಿಸಿದರು ಎಂದು ಬೆನ್ನು ಹತ್ತಿ ಹೋಗಿರಬಹುದು. ಅದನ್ನು ಇಲ್ಲ ಎಂದು ನಾನು ಹೇಳುವುದಿಲ್ಲ. ಚೌಕಿ ಎಷ್ಟು ಬೇಕೋ ಅಷ್ಟು ಮಾಡುತ್ತೇನೆ. ಒಂದೆರಡು ಉದಾಹರಣೆಗಳನ್ನು ತೆಗೆದುಕೊಂಡು ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯೂ ಆಗುತ್ತದೆ ಎನ್ನುವುದು ಸರಿಯಲ್ಲ ಎಂದು ಹೇಳಿದೆ.

ಲೆವಿ ವಸೂಲು ಮಾಡುವಾಗ ಯಾವುದೋ ಒಂದು ಸಂದರ್ಭವನ್ನು ತೆಗೆದುಕೊಂಡು ಅದನ್ನು ಜನರಲೈಸ್ ಮಾಡುವುದು ಪದ್ಧತಿಯಾಗಿದೆ. ಯಾರ ಹತ್ತಿರ ಇಲ್ಲ ಅವರ ಹತ್ತಿರ ತೆಗೆದುಕೊಳ್ಳುವುದಿಲ್ಲ. ಒಬ್ಬರಿಗೆ ಅನ್ಯಾಯ ಆಗುತ್ತಿದೆ ಎಂದು ಯಾರಾದರೂ ಮಾನ್ಯ ಸದಸ್ಯರು ಹೇಳಿದರೆ ಅದರ ಬಗ್ಗೆ ವಿಚಾರಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು).—ಸಕ್ಕರೆ ಹಂಚಿಕೆಯಲ್ಲಿ ನಗರಗಳಲ್ಲಿ 500 ಗ್ರಾಂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 50-75 ಗ್ರಾಂ ಕೊಡುತ್ತಾರೆ. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಮಾಡಿ ನಗರ ಪ್ರದೇಶಗಳಿಗೆ ಕೊಡುವಂತೆ ಕೊಟ್ಟರೆ ಗ್ರಾಮಾಂತರ ಪ್ರದೇಶದ ಜನಗಳಿಗೆ ಒಳ್ಳೆಯದಾಗೀತು ಎನ್ನುವುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಬಹುದೇ ?

ಶ್ರೀ ಬಿ. ಡಿ. ಜತ್ತಿ.—ಮೊದಲು ಪಟ್ಟಣದ ಜನ ಹೆಚ್ಚು ಸಕ್ಕರೆಯನ್ನು ಉಪಯೋಗ ಮಾಡುತ್ತಾರೆನ್ನುವ ಲೆಕ್ಕ ಇಟ್ಟುಕೊಂಡು ಅವರಿಗೆ ಹೆಚ್ಚು ಕೊಡುತ್ತ ಬಂದಾಯಿತು. ಇತ್ತೀಚೆಗೆ ಗ್ರಾಮಾಂತರ ಪ್ರದೇಶಗಳಲ್ಲಿರುವವರು ಉಪಯೋಗ ಮಾಡುತ್ತಿರುವುದರಿಂದ ಅವರಿಗೂ ಹೆಚ್ಚು ಕೊಡುವ ಪ್ರಯತ್ನ ಮಾಡಿದ್ದೇವೆ. ಅವರಿಗೆ ಇನ್ನೂ ಹೆಚ್ಚು ಕೊಡುವ ಅವಕಾಶವಿದೆ ಎಂದು ಈ ಮನೆಯಲ್ಲಿ ಎಲ್ಲರೂ ಒಪ್ಪುವುದಾದರೆ ಹೆಚ್ಚು ಮಾಡುವುದಕ್ಕೆ ಸಿದ್ಧವಾಗಿದ್ದೇನೆ.

Sri B. P. KADAM (Karwar).—Is the Government aware that last year for inadequate payment of levy of 100 kgs. all those who have been prosecuted in Karwar Taluk are invariably Marati and Konkani speaking people, and may I know whether anybody in the Cabinet have passed orders, either in writing or orally to the officers, that only such people should be prosecuted ?

ಶ್ರೀ ಬಿ. ಡಿ. ಜತ್ತಿ.—ನಮ್ಮ ಕರ್ಣಾಟಕ ರಾಜ್ಯದೊಳಗೆ ಭಾಷೆಯ ಮೇಲೆ, ಜಾತಿಯ ಮೇಲೆ ವ್ಯತ್ಯಾಸ ಮಾಡಿಲ್ಲ. ಅದರಂತೆ ಮಾಡಿದರೆ ಶುದ್ಧ ಅನ್ಯಾಯ.

Sri B. P. KADAM.—Will the hon'ble Minister enquire into the matter ?

Sri B. D. JATTI.—If the hon'ble Member pass on the information to me, I will enquire into it.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಗ್ರಾಮಾಂತರಗಳಲ್ಲಿ ವಸೂಲು ಮಾಡಿರತಕ್ಕ ಲೆವಿ ಜೀವನಕ್ಕೇ ಸಾಕಾಗದೆ ಇರುವಂಥ ಸಣ್ಣ ಹಿಡುವಳಿದಾರರಿಂದ ಮಾತ್ರ ಮತ್ತು ದೊಡ್ಡ ಹಿಡುವಳಿದಾರರಿಗೆ ರಿಯಾಯಿತಿಯನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಬಿ. ಡಿ. ಜತ್ತಿ.—ಇಲ್ಲ.

Sri TIRUMALADEVA RAYA (Gangavati).—Is the hon'ble Minister aware that due to breach of Tungabhadra Left Bank Canal though thousands of applications were given to the Tahsildar, not a single application was entertained and levy was collected ? In another instance, when a villager was bringing his produce from Gangavati, 50 per cent of his produce was taken away ; is it justifiable ?

Sri B. D. JATTI.—If the facts stated by the hon'ble Member are correct, it is not justifiable.

Sri C. K. RAJAIAH SETTY.—Government is dealing with foodgrains on 'no loss-no profit' basis. After verifying the actual figures, may I know whether Government has gained or lost something?

Sri H. SIDDAVEERAPPA.—The correct position is that the loss is borne by the growers!

Sri B. D. JATTI.—Sir, it is true that the Food Department is run on 'no profit–no loss' basis. But, as per the figures for 1965–66 and 1966–67, we have made slight profits; it is roughly Rs. 28 to Rs. 30 lakhs per year. This year, it is likely that we may lose, because we have purchased gram and gram dhal at a higher rate. Since the respective States and the Government of India removed the ban on movement, we are getting more gram and the prices have come down. But, on the whole, the intention of the Government is to run the department on 'no loss–no profit basis'.

ಶ್ರೀಮತಿ ಲೀಲಾವತಿ ರೈ (ಬಂಟವಾಳ).—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುವ ನೀರನ್ನು ಏತಗಳ ಮೂಲಕ ತೆಗೆದುಕೊಂಡು ವ್ಯವಸಾಯ ಮಾಡುತ್ತಿದ್ದರು. ಈಗ ಪಂಪ್‌ಸೆಟ್ ಹಾಕಿ ನೀರನ್ನು ಉಪಯೋಗ ಮಾಡುತ್ತಿದ್ದಾರೆ. ಸರ್ಕಾರಕ್ಕೆ ಅದರಿಂದ ಏನೂ ಖರ್ಚು ಇಲ್ಲ. ಆದರೂ ಅದಕ್ಕೆ ವಾಟರ್ ರೇಟ್, ಸೆಸ್ ಕೊಡಬೇಕು ಎಂದು ಹೇಳುತ್ತಿದ್ದಾರೆ. ಇದಕ್ಕೆ ಟ್ಯಾಕ್ಸ್ ಹಾಕ ಬಾರದು ಎಂದು ಮನವಿಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವರೇ?

ಶ್ರೀ ಬಿ. ಡಿ. ಜತ್ತಿ.—ಅದರ ಬಗ್ಗೆ ನನಗೆ ಗೊತ್ತಿಲ್ಲ. ಕೇಳಿಕೊಂಡು ಉತ್ತರ ಕೊಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಆಹಾರ ಇಲಾಖೆಯವರು ಆಮದು ಮಾಡಿಕೊಳ್ಳತಕ್ಕ ಕಡಲೆಬೇಳೆ, ತೊಗರಿ ಬೇಳೆ ಇವುಗಳನ್ನು ಹೆಚ್ಚು ಬೆಲೆಗೆ ಕೊಂಡು ಕಡಮೆ ಬೆಲೆಗೆ ಮಾರುವುದರಿಂದ, ಸಕ್ಕರೆಯನ್ನು 400 ರೂಪಾಯಿಗಳಿಗೆ ಕೊಂಡು 370-375 ರೂಪಾಯಿಗಳಿಗೆ ಮಾರಿದ್ದರಿಂದ ಏನು ನಷ್ಟ ಬಂತೋ ಅದನ್ನು ತುಂಬುವುದಕ್ಕೆ ಸಕ್ಕರೆಗೆ ಇದ್ದ ಕಂಟ್ರೋಲ್ ಧಾರಣೆಯನ್ನು ಇತ್ತೀಚೆಗೆ 10 ರೂಪಾಯಿ ಗಳಷ್ಟು ಜಾಸ್ತಿ ಮಾಡಿದ್ದೀರಾ ಅಥವಾ ಬೇರೆ ಯಾವ ಉದ್ದೇಶಕ್ಕೋಸ್ಕರ ಜಾಸ್ತಿ ಮಾಡಿದ್ದೀರಿ?

ಆಹಾರದ ಡೈರೆಕ್ಟರ್ ಆಫೀಸಿನ ವಿಚಾರದಲ್ಲಿ ಹೋದ ಬಜೆಟ್ ಅಧಿವೇಶನದಲ್ಲಿ ದೊಡ್ಡ ಅಪಾದನೆ ಬಂದು ಯಾವುದೋ ಒಂದು ಮಳಿಗೆಗೆ ಹೆಚ್ಚಿನ ಬಾಡಿಗೆ ಕೊಡುತ್ತಿದ್ದೀರಿ ಎಂದು ಅಪಾದನೆ ಲಾಗಿತ್ತು. ಈವಾಗ ಅದನ್ನು ಬೇರೆ ಕಡೆಗೆ ಹಾಕಿದ್ದಾರೆ. ಈಗ ಏನು ಬಾಡಿಗೆ ಕೊಡುತ್ತಿದ್ದೀರಿ, ಹಿಂದೆ ಏನು ಬಾಡಿಗೆಯನ್ನು ಕೊಡುತ್ತಿದ್ದರಿ, ಅದರಲ್ಲಿ ಉಳಿತಾಯವೇನಾದರೂ ಆಗಿದೆಯೇ ಎನ್ನು ವುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಮೊದಲನೇ ಪ್ರಶ್ನೆಗೆ ಉತ್ತರ ಹೇಳಿದಾಗ ಮಾನ್ಯ ಸದಸ್ಯರು ಇರಲಿಲ್ಲ. ಸಕ್ಕರೆಗೆ ಎರಡು ಜೋನ್ ಮಾಡಿ, ಒಂದು ಜೋನ್‌ನಲ್ಲಿ 145 ರೂಪಾಯಿಗಳ ಪ್ರಕಾರ, ಇನ್ನೊಂದು ಜೋನ್‌ನಲ್ಲಿ 161 ರೂಪಾಯಿಗಳ ಪ್ರಕಾರ ಕೊಂಡುಕೊಳ್ಳುತ್ತಿದ್ದೆವು. ಹೈಕೋರ್ಟಿಗೆ ರಿಟ್ ಹಾಕಿದ್ದರಿಂದ ಅವರು ಇಂಟೆರಿಂ ಆರ್ಡರ್ ಮಾಡಿ ಎಲ್ಲರಿಗೂ 161 ರೂಪಾಯಿ ಪ್ರಕಾರ ಕೊಡಬೇಕು ಎಂದು ಹೇಳಿದ್ದರಿಂದ ವ್ಯತ್ಯಾಸ ಕಾಣಿಸುತ್ತದೆ. ಈಗ ಎರಡೂ ಕಡೆ ಒಂದೇ ರೇಟಿಗೆ ಅಂದರೆ 161 ರೂಪಾಯಿಗಳಿಗೆ ಕೊಂಡು 172 ರೂಪಾಯಿಗಳಿಗೆ ಮಾರಬಹುದು. ನಾವು 175 ರೂಪಾಯಿಗಳಿಗೆ ಮಾರುತ್ತಿದ್ದೇವೆಂದು ಹೇಳಿದೆ. ಮಳಿಗೆ, ಆಫೀಸು, ಬೇರೆ ಬೇರೆ ಕಡೆಗೆ ಇತ್ತು. ಅದನ್ನೆಲ್ಲ ಒಂದೇ ಕಡೆ ಕೇಂದ್ರೀಕೃತ ಮಾಡಿದ್ದೇವೆ. ಬಾಡಿಗೆ ಹೆಚ್ಚು ಆಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಎಷ್ಟು ಉಳಿತಾಯವಾಗುತ್ತದೆ ಅಥವಾ ಹೆಚ್ಚಾಗುತ್ತದೆ ಎನ್ನುವುದನ್ನು ನೋಡಿ ಹೇಳಬೇಕು.

11-00 A.M.

ಶ್ರೀ ಕೊಟ್ರಬಸವಯ್ಯ ಸೋಗಿ (ಹಡಗಲಿ).—ಪ್ರೊಕ್ಯೂರ್‌ಮೆಂಟ್ ಮಾಡಲು ಕೆಲವು ಪ್ರೋಸೆಸಿಂಗ್ ಸೊಸೈಟಿಗಳಿಗೆ ಅವಕಾಶ ಕೊಡಲಾಗಿದೆ. ಬಳ್ಳಾರಿ ಜಿಲ್ಲೆಯ ಮಲ್ಲೇಶ್ವರ ಸೊಸೈಟಿಯಿಂದ 14-15 ಲಕ್ಷ ರೂಪಾಯಿ ಬರಬೇಕಾಗಿದೆ ಎಂದು ಆಡಿಟ್ ವರದಿಯಲ್ಲಿದೆ. ಅದನ್ನು ಬರಮಾಡಿಕೊಳ್ಳಲು ಕ್ರಮ ಕೈಕೊಂಡಿರುವುದೇನು? ಇದೇ ಜಿಲ್ಲೆಯ ಇನ್ನೊಂದು ಸೊಸೈಟಿ ಜೋಳವನ್ನು ದಾವಣಗೆರೆಗೆ ಮಾರಾಟಮಾಡಿರುವ ದೂರಿನ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಬಿ. ಡಿ. ಜತ್ತಿ.—ಒಂದು ಸೊಸೈಟಿಯ ಬಗ್ಗೆ ಕ್ರಮ ತೆಗೆದುಕೊಳ್ಳುವ ಕೆಲಸ ಆರಂಭವಾಗಿದೆ, ಇನ್ನೊಂದು ಸೊಸೈಟಿಯ ಬಗ್ಗೆ ಕ್ರಮ ಕೈಕೊಂಡು ಹಣ ವಸೂಲುಮಾಡಲಾಗುವುದು.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಬೆಂಗಳೂರು ಮತ್ತು ಕೆ.ಜಿ.ಎಫ್. ಮೈನಿಂಗ್ ಪ್ರದೇಶಕ್ಕೆ ತಿಂಗಳಿಗೆ 5 ಕೆ.ಜಿ. ಕೊಡುವುದಾಗಿ ಹೇಳುತ್ತಿದ್ದಾರೆ. ಇದು ಸಕ್ಕರೆ ದರವಾಗುವುದು. ಗ್ರಾಮಾಂತರ ಪ್ರದೇಶಗಳಿಗೆ ತಿಂಗಳಿಗೆ 5 ಕೆ.ಜಿ. ಕೂಡ ಕೊಡುತ್ತಿಲ್ಲ. ಇನ್ನುಮೇಲಾದರೂ ಕೊಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ವರ್ಷವೆಲ್ಲಾ ಸಮಗ್ರ ರಾಜ್ಯದಲ್ಲಿ ಎಲ್ಲರಿಗೂ 5 ಕೆ.ಜಿ. ಕೊಡುತ್ತೇವೆ ಎಂದು ಹೇಳಿಲ್ಲ, ಅನಾವೃಷ್ಟಿಯಿರುವ ಕಡೆ, ಕಷ್ಟವಿರುವ ಕಡೆ 5 ಕೆ.ಜಿ. ಕೊಡಲು ಏರ್ಪಾಡು ಮಾಡಿದ್ದೇವೆ. ಆಹಾರ ಪದಾರ್ಥಗಳು ದೊರೆಯುವ ಸ್ಥಳಗಳನ್ನು ಕೈಬಿಡಲಾಗಿದೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಪ್ರೊಡ್ಯೂಸರ್‌ನಿಂದ ಸರಕಾರ ತೆಗೆದುಕೊಳ್ಳುವ ದರಕ್ಕೂ ಮತ್ತು ಹೊರಗಡೆ ಮಾರುವ ದರಕ್ಕೂ ವ್ಯತ್ಯಾಸವಿರುವುದರಿಂದ ವ್ಯವಸಾಯಕ್ಕೆ ಕೊಡುವ ಸಾಲದ ಮೇಲೆ ಬಡ್ಡಿ, ಚಕ್ರಬಡ್ಡಿ ತೆಗೆದುಹಾಕಿ ಫರ್ಟಿಲೈಜರ್ಸ್, ಡೀಸಲ್ ಮತ್ತು ಪೆಸ್ಟಿಸೈಡ್ಸ್ ಮುಂತಾದವುಗಳ ಮೇಲೆ ರಿಯಾಯಿತಿ ತೋರಿಸುವುದನ್ನು ಯೋಚನೆಮಾಡಿದ್ದೀರಾ?

ಶ್ರೀ ಬಿ. ಡಿ. ಜತ್ತಿ.—ಸಬ್ಸಿಡಿ ಕೊಡುವ ವಿಷಯ ವಕ್ಕಲತನದ ಇಲಾಖೆಗೆ ಸಂಬಂಧಪಟ್ಟಿದೆಯಾದುದರಿಂದ ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ಲೆವಿ ವಿಚಾರ ಚರ್ಚೆಮಾಡುವಾಗ ಈಗಿರುವ ವ್ಯವಸ್ಥೆಗೆ ಬದಲಾಗಿ ವ್ಯವಸಾಯಕ್ಕೆ ಆಗುವ ಖರ್ಚು, ಸಂಸಾರಕ್ಕೆ ಬೇಕಾಗುವುದು ಮುಂತಾದ್ದಕ್ಕೆಲ್ಲಾ ಅವಕಾಶ ಕೊಟ್ಟಮೇಲೆ ಲಾಭ ಬರುವಂತಿದ್ದರೆ ಉಳಿದಿರುವುದನ್ನು ತೆಗೆದುಕೊಳ್ಳಲು ಯೋಚನೆಮಾಡುವುದಾಗಿ ಹೇಳಿದ್ದಿರಿ. ಅಗ್ರಿಕಲ್ಚರಲ್ ಪ್ರೈಸ್ ಕಮಿಷನ್‌ನಲ್ಲಿ ಮಾರ್ಕೆಟೆಬಲ್ ಪ್ರೈಸ್, ನೋಡಿ ಸರ್‌ಪ್ಲಸ್ ಇದ್ದರೆ ಸೇಕಡ 15 ಭಾಗ ತೆಗೆದುಕೊಳ್ಳಬೇಕು ಎಂದು ಹೇಳಿತ್ತು. ಆ ರೀತಿ ಮಾಡಲು ಇನ್ನುಮುಂದೆ ಯೋಚನೆಮಾಡುವುದಾಗಿ ಹೇಳಿದ್ದರು. ಅದನ್ನು ಯೋಚನೆ ಮಾಡಿದ್ದೀರಾ ಅಥವಾ ಈಗಿರುವಂತೆಯೇ ಮುಂದುವರಿಸುತ್ತೀರಾ?

ಕೇರಳಾದಲ್ಲಿ ಎರಡು ಎಕರೆಗಳಿಗಿಂತ ಕಡಮೆ ಇರುವವರಿಗೆ ವಿನಾಯಿತಿ ಕೊಡುತ್ತಿದ್ದಾರೆ, ಇಲ್ಲೂ ಕೂಡ ಅದೇ ರೀತಿ ಜಾರಿಗೆ ತರುತ್ತೀರಾ? ವ್ಯಕ್ತಿಗಳಿಗೆ ಆಹಾರಧಾನ್ಯಗಳನ್ನು ಕೊಡುವುದನ್ನು ನಿಲ್ಲಿಸಿ ಸೊಸೈಟಿಗಳು ಯಾವ ದಾರಿಗೂ ಒಳಗಾಗದೆ ಚೆನ್ನಾಗಿ ಕೆಲಸಮಾಡುತ್ತಿದ್ದರೆ ಅವುಗಳಿಗೇ ಆಹಾರ ಪದಾರ್ಥಗಳನ್ನು ಮಾರಾಟಮಾಡಲು ಒಂದು ವ್ಯವಸ್ಥೆಮಾಡಿ ಅದರಂತೆ ಜಾರಿಗೆ ತರುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಸರಕಾರದ ನೀತಿಯ ಪ್ರಕಾರ ಎಲ್ಲೆಲ್ಲಿ ಸಹಕಾರ ಸಂಘಗಳು ಮುಂದೆ ಬರುತ್ತವೆ ಅಲ್ಲಿ ಅವುಗಳಿಗೇ ವಹಿಸಲಾಗುವುದು. ವ್ಯಕ್ತಿಗಳಿಗೆ ಅವಕಾಶ ಕೊಟ್ಟಿರುವ ಕಡೆ ಸಹಕಾರ ಸಂಘಗಳು ಮುಂದೆ ಬಂದರೆ ವ್ಯಕ್ತಿಗಳನ್ನು ರದ್ದುಮಾಡುತ್ತಲಿದೆ. ನಮ್ಮಲ್ಲಿ ಒಂದು ಎಕರೆಗೆ ವಿನಾಯಿತಿಯು ಲೆವಿ ಬಗ್ಗೆ ಇದೆ. ಆದರೆ ಇರಿಗೇಟೆಡ್ ಅಥವಾ ನಾನ್ ಇರಿಗೇಟೆಡ್ ಎಂದು ವ್ಯತ್ಯಾಸಮಾಡಿಲ್ಲ. ಮನೆಗೆ ಬೇಕಾದಷ್ಟನ್ನು ಬಿಟ್ಟು ಉಳಿಯುವುದನ್ನು ನೋಡಿ ಲೆವಿ ವಸೂಲು ಮಾಡಬೇಕು ಎಂದು ಈಗ ಗೊತ್ತುಮಾಡಿದೆ. ಅದನ್ನು ವ್ಯತ್ಯಾಸ ಮಾಡಬೇಕು ಎನ್ನುವುದಾದರೆ ವಿಚಾರಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಸೊಸೈಟಿಯವರು ಲೆವಿ ತೆಗೆದುಕೊಳ್ಳುವಾಗ 4 ರಿಂದ 8 ಕೇಜಿಗಳವರೆಗೆ ಬತ್ತ ಜಾಸ್ತಿ ತೆಗೆದುಕೊಳ್ಳುತ್ತಾರೆ. ನಮ್ಮ ನಂಜನಗೂಡು ಸೊಸೈಟಿಗೆ ಹೋದ ವರ್ಷ 1 ಲಕ್ಷ 20 ಸಾವಿರ ರೂಪಾಯಿಗಳ ಲಾಭ ಬಂದಿದೆ,

ಇದು ರೈತರಿಗೆ ಸೇರಬೇಕು. ಹಾಗೆ ಮಾಡಿ ಬೋನಸ್ ರೂಪವಾಗಿ ಅವರಿಗೆ ಕೊಡುತ್ತೀರಾ? ಹೀಗೆ ಲಾಭ ಬರುತ್ತಿರುವುದರಿಂದ ಸೊಸೈಟಿಗಳಲ್ಲಿ ಪ್ರೆಸಿಡೆಂಟ್ ಆಗಬೇಕು, ಡೈರೆಕ್ಟರಾಗಬೇಕು ಎಂದು ಅನೇಕರಲ್ಲಿ ಕಚ್ಚಾಟ ಜಾಸ್ತಿಯಾಗಿದೆ.

ಶ್ರೀ ಬಿ. ಡಿ. ಜತ್ತಿ.—ಅವರು ನನಗೆ ಹಿಂದೆ ಹೇಳಿದ್ದನ್ನೇ ಈಗಲೂ ಹೇಳಿದ್ದಾರೆ, ಎಷ್ಟು ಅವರು ತೆಗೆದುಕೊಂಡಿದ್ದಾರೆಂಬುದನ್ನು ನೋಡಬೇಕು. ಮಾನ್ಯ ಸದಸ್ಯಣಿಯರು ತಿಳಿಸಿದಂತೆ ಒಂದು ಕ್ವಿಂಟಾಲಿಗೆ 4 ರಿಂದ 8 ಕೇಜಿಗಳವರೆಗೆ ಹೆಚ್ಚಾಗಿ ತೆಗೆದುಕೊಂಡಿರುವರೇ ಎಂದು ವಿಚಾರಮಾಡಿ ನೋಡಲು ಪ್ರಯತ್ನಮಾಡಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ).—ಎಸೆನ್ಷಿಯಲ್ ಕಮಾಡಿಟೀಸ್, ಬೇಬಿ ಫುಡ್ ಮುಂತಾದುವನ್ನು ಗ್ರಾಮಾಂತರಗಳಿಗೆ ಹಂಚುವ ವ್ಯವಸ್ಥೆಮಾಡಿಲ್ಲ, ಈ ಬಗ್ಗೆ ವಿವರ ಹೇಳಬೇಕು. ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಸೊಸೈಟಿಗಳ ಮೂಲಕ ಹಂಚಿಕೆ ನಡೆಯುತ್ತಿದೆ, ಧಾರವಾಡದಲ್ಲೂ ಸ್ವಲ್ಪಮಟ್ಟಿಗೆ ಅದೇ ರೀತಿ ಇದೆ. ಆದರೆ ಹುಬ್ಬಳ್ಳಿಯಲ್ಲಿ ದೊಡ್ಡ ವ್ಯಾಪಾರಿಗಳಿಗೆ ಅವಕಾಶ ಕೊಡಲಾಗಿದೆ. ಇದನ್ನು ರದ್ದುಮಾಡಬೇಕು.

ಶ್ರೀ ಬಿ. ಡಿ. ಜತ್ತಿ.—ಬೆಂಗಳೂರು ಸುತ್ತಮುತ್ತ ಸಿವಿಲ್ ಸಪ್ಲೈಸ್ ಅಧಿಕಾರಿಗಳು ಹಂಚಿಕೆ ಮಾಡುತ್ತಾರೆ. ಇತರ ಕಡೆಗಳಿಗೂ ಸೊಸೈಟಿಗಳ ಮೂಲಕ ಈ ವರ್ಷ ಹಂಚಿಕೆ ಮಾಡಲು ಪ್ರಯತ್ನಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ಜನರಿಗೆ ನ್ಯಾಯಬೆಲೆಯ ಅಂಗಡಿಗಳಲ್ಲಿ ಕಲ್ಲು ಮಣ್ಣು ಬೆರೆಸಿ ಒದಗಿಸುತ್ತಿದ್ದಾರೆ. ಅದನ್ನ ಬೆರೆಸುವವರು ಯಾರು? ಸರಕಾರದವರು ಬೆರೆಸುವರೇ ಅಥವಾ ಅಂಗಡಿಯವರು ಬೆರೆಸುತ್ತಾರೆಯೇ? ಎರಡನೆಯದು ಈ ರೇಷನ್ ಒದಗಿಸುವ ಬಗ್ಗೆ ಪತ್ರಿಕೆಯಲ್ಲಿ ವಿವರ ಬರುತ್ತಿದೆ. ಈ ವಾರ ಅರ್ಧ ಕೋಟಾ ಕೊಡುತ್ತೇವೆ, ಈ ವಾರ ಪೂರ್ಣ ಕೋಟಾ ಕೊಡುತ್ತೇವೆ ಎಂದು ಪತ್ರಿಕೆಯಲ್ಲಿ ಹಾಕಿಸುತ್ತಾರೆ. ಇದರಲ್ಲಿ ಯಾವುದು ನಿಜ? ಮೂರನೆಯದು ಮದುವೆ ಸಮಾರಂಭಗಳಿಗೆ ಈಗ ಅಕ್ಕಿ ಕೊಡುತ್ತಿಲ್ಲ. ಅನೇಕರು ಅರ್ಜಿ ಕೊಟ್ಟರೂ ಕೊಡುತ್ತಿಲ್ಲ. ಕೊಡಲು ಸೂಚನೆ ಕೊಡುತ್ತೀರಾ?

ನಾಲ್ಕನೆಯದು, ನ್ಯಾಯಬೆಲೆಯ ಅಂಗಡಿಗಳು ಸರಿಯಾಗಿ ನಡೆಯುತ್ತಿಲ್ಲ. ಆದುದರಿಂದ ಇದನ್ನು ಪರಿಶೀಲಿಸಿ ಸರಕಾರದವರೇ ಡಿವಿಜನ್ನುಗಳಲ್ಲಿ ಡಿಪೋಗಳನ್ನು ತೆರೆಯಬೇಕೆಂದು ಇದ್ದೀರಾ?

ಶ್ರೀ ಬಿ. ಡಿ. ಜತ್ತಿ.—ಅಕ್ಕಿ ವಿಷಯವನ್ನು ಮಾನ್ಯ ಸದಸ್ಯರು ಹೇಳಿದರು. ಅವರು ಹೇಳಿದಂತೆ ಆಗುತ್ತಿಲ್ಲ. ಇದುವರೆಗೆ ಒಬ್ಬ ವಯಸ್ಕನಿಗೆ ಒಂದು ತಿಂಗಳಿಗೆ 3 ಕೇಜಿ ಕೊಡುತ್ತಿತ್ತು. ಓಪನ್ ಮಾರ್ಕೆಟ್ಟಿನಲ್ಲಿ ಅಕ್ಕಿ ಈಗ ಸಾಕಾದಷ್ಟು ಸಿಕ್ಕುತ್ತಿದೆ. ಈಗ 3 ಕೇಜಿಗೆ ಬದಲಾಗಿ 2 ಕೇಜಿ ಕೊಡಲಾಗುತ್ತಿದೆ.

ಎರಡು ತಿಂಗಳು ಈ ರೀತಿ ನೋಡಿ ಉಳಿತಾಯವಾದರೆ ಸೆಪ್ಟೆಂಬರ್, ಅಕ್ಟೋಬರ್ ಮತ್ತು ಮುಂದಿನ ತಿಂಗಳುಗಳಲ್ಲಿ ಲೀನ್ ಮಂತ್ಸ್‌ನಲ್ಲಿ ಕೊಡಲಿಕ್ಕೆ ಅನುಕೂಲವಾಗುತ್ತದೆ. ಎರಡನೆ ವಿಷಯ ಕಲ್ಲು ಮಣ್ಣು ಬೆರೆಸಿ ಸರ್ಕಾರದವರು ಮಾರಾಟ ಮಾಡುತ್ತಾರೆ ಎಂದು ಹೇಳಿದರು, ಇದ ಶುದ್ಧ ತಪ್ಪು, ಅನ್ಯಾಯ, ಸರ್ಕಾರದವರು ಆ ರೀತಿ ಎಲ್ಲಾ ಮಾಡುವುದಕ್ಕೆ ಹೋಗುವಂತಹ ಅವಶ್ಯಕತೆ ಇಲ್ಲ, ಒಂದುವೇಳೆ ಆ ರೀತಿ ಎಲ್ಲಾದರೂ ಇದ್ದರೆ ಸರಿಪಡಿಸುತ್ತೇವೆ. ಮಾರಾಟ ಮಾಡತಕ್ಕ ಅಂಗಡಿಯಲ್ಲಿ ಆಗಿರಬಹುದು, ನನಗೆ ಗೊತ್ತಿದ್ದಹಾಗೆ ಅದೂ ಕೂಡ ಇಲ್ಲ ಎಂದು ಹೇಳಬಹುದು, ಎಲ್ಲಾದರೂ ಒಬ್ಬಿಬ್ಬರು ಆ ರೀತಿ ಮಾಡತಕ್ಕವರು ಇದ್ದರೆ ಅವರ ಮೇಲೆ ಸಾಕಾದಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಇದುವರೆಗೂ ಈ ವರ್ಷದಲ್ಲಿ 300 ಅಂಗಡಿಗಳ ಲೈಸೆನ್ಸನ್ನು ಕ್ಯಾನ್ಸಲ್ ಮಾಡಿದ್ದೇವೆ. ಆದರೆ ಕೆಲವು ಸಂದರ್ಭಗಳಲ್ಲಿ ಮಾನ್ಯ ಸದಸ್ಯರೇ ಬಂದು ಕ್ಯಾನ್ಸಲ್ ಮಾಡಿದವರಿಗೆ ತಿರುಗಿ ಕೊಡಿಸಲಿಕ್ಕೆ ಕೇಳಿಕೊಂಡು ಬರುತ್ತಾರೆ, ಅದನ್ನು ದಯಮಾಡಿ ಅವರು ಬಿಟ್ಟುಬಿಟ್ಟರೆ ಒಳ್ಳೆಯದು. ಲಗ್ನಕಾರ್ಯದ ವಿಷಯದಲ್ಲಿ ಕಂಟ್ರೋಲ್ಡ್ ಕಮಾಡಿಟಿ ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳಲಿಕ್ಕೆ ಸಾಧ್ಯವಾಗದೇ ಹೋದರೆ ಬಿಡಲ...

ಶ್ರೀ ವಾಟಾಳ್ ನಾಗರಾಜ್.—ಬಡವರಿಗೆ ಬಹಳ ಕಷ್ಟವಾಗುತ್ತಾ ಇದೆ, ಬ್ಲಾಕ್ ಮಾರ್ಕೆಟ್‌ನಲ್ಲಿ ತೆಗೆದುಕೊಳ್ಳಬೇಕು, ಸರ್ಕಾರಿ ಡಿಪೋಗಳನ್ನು ತೆಗೆಯುತ್ತೀರಾ ಎಂದು ಕೇಳಿದೆ. ನ್ಯಾಯಬೆಲೆ ಅಂಗಡಿಗಳನ್ನು ರದ್ದುಮಾಡಿ ಪ್ರತಿ ಡಿವಿಜನ್‌ನಲ್ಲೂ ಸರ್ಕಾರಿ ಡಿಪೋಗಳನ್ನು ತೆಗೆಯುತ್ತೀರಾ ಎಂಬುದನ್ನು ಹೇಳಬೇಕು.

ಚೇರ್ಮನ್‌ರವರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅವರು 3 ಪ್ರಶ್ನೆಗಳಿಗೆ ಉತ್ತರ ಕೊಡಬೇಕು, ಎರಡು ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ, ಇನ್ನೊಂದು ಪ್ರಶ್ನೆಗೆ ಉತ್ತರ ಕೊಡಬೇಕು, ತಾವು ಈ ರೀತಿ ಹಟಮಾಡಬೇಡಿ, ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ.

ಚೇರ್ಮನ್‌ರವರು.—ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಮುಖ್ಯವಾದ ಪ್ರಶ್ನೆ ಸ್ವಾಮಿ, ಸರ್ಕಾರದವರು ಕೊಟ್ಟಂತಹ ಪದಾರ್ಥವನ್ನು ಬ್ಲಾಕ್ ಮಾರ್ಕೆಟ್ ಮಾಡುತ್ತಾ ಇದ್ದಾರೆ. ಅದನ್ನು ನಿಲ್ಲಿಸುವುದಕ್ಕೆ ಸರ್ಕಾರದವರೇ ಡಿಪ್ಪೋ ತೆಗೆಯುತ್ತೀರಾ ಅಂತ ಕೇಳಿದ್ದೇನೆ. ಇದು ಬಹಳ ಪ್ರಾಮುಖ್ಯವಾದದ್ದು ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು ಸ್ವಾಮಿ. ತಾವು ದಯವಿಟ್ಟು ಹಟ ಮಾಡಬೇಡಿ, ಯಾವಾಗಲೂ ಇದೇ ರೀತಿ ತಾವು ಹಟ ಮಾಡುತ್ತೀರಿ, ಈ ರೀತಿ ಮಾಡಬೇಡಿ ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. CHAIRMAN.—Let him please resume his seat.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಪ್ರಾಮುಖ್ಯವಾದ ಪ್ರಶೆ. ಬ್ಲಾಕ್ ಮಾರ್ಕೆಟ್ ನಡೆಯುತ್ತಾ ಇದೆ. ಅದಕ್ಕೆ ಕೇಳುತ್ತಾ ಇದ್ದೇನೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದಾರೆ, ದಯವಿಟ್ಟು ತಾವು ಅವಕಾಶ ಕೊಡಬೇಕು ಸ್ವಾಮಿ, ತಾವು ಈ ರೀತಿ ಮಾಡುತ್ತಾ ಹೋದರೆ ನಾವು ಅದನ್ನು ಪ್ರತಿಭಟನೆ ಮಾಡಬೇಕಾಗುತ್ತದೆ.

Mr. CHAIRMAN.—The Hon'ble Minister need not reply.

ಶ್ರೀ ಎಸ್. ಬಂಗಾರಪ್ಪ.—ಪಾಯಿಂಟ್ ಆಫ್ ಆರ್ಡರ್ ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಅಧ್ಯಕ್ಷರನ್ನು ಅವರು ಕೇಳಿದ ಮೂರು ಪ್ರಶ್ನೆಗಳಿಗೆ 2ಕ್ಕೆ ಉತ್ತರ ಬಂದಿದೆ ಇನ್ನೊಂದಕ್ಕೆ ಉತ್ತರ ಕೊಡಿಸಿಕೊಡಬೇಕೆಂದು ಬಿನ್ನೈಸಿಕೊಂಡರು. ಮಾನ್ಯಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ ಮತ್ತು ಅವರು ಉತ್ತರ ಕೊಡುವುದಕ್ಕೂ ಕೂಡ ಅಲ್ಪಸ್ವಲ್ಪ ಎದ್ದಿದ್ದರು. ಆದರೆ ಅಧ್ಯಕ್ಷರು ಆ ಕಡೆಗೆ ಗಮನ ಕೊಡಲಿಲ್ಲ ಅಂತ ಕಾಣುತ್ತದೆ, ನೋಡಲಿಲ್ಲ ಅಂತ ಕಾಣುತ್ತದೆ, ದಿ ಮಿನಿಸ್ಟರ್ ನೀಡ್ ನಾಟ್ ರಿಪ್ಲೈ ಅಂತ ಹೇಳಿದರು. ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅರ್ಧಂಬರ್ಧ ತಯಾರಾಗಿದ್ದರು, ಹಾಗಿರುವಾಗ ತಾವು ಆ ರೀತಿ ದಿ ಮಿನಿಸ್ಟರ್ ನೀಡ್ ನಾಟ್ ರಿಪ್ಲೈ ಅಂತ ಹೇಳುವುದು ಸರಿಯೇ ಎಂಬುದು ನನ್ನ ಪಾಯಿಂಟ್ ಆಫ್ ಆರ್ಡರ್. ಮತ್ತು ಸದಸ್ಯರಿಗೆ ಪ್ರಶ್ನೆ ಕೇಳುವುದಕ್ಕೆ ಹಕ್ಕು ಇದೆ ಎಂಬುದು ನಿರ್ವಿವಾದವಾದ ವಿಷಯ. ಅದಕ್ಕೆ ಉತ್ತರ ಕೊಡುವುದೂ ಕೂಡ ಮಂತ್ರಿಗಳ ಜವಾಬ್ದಾರಿ. ಆ ದೃಷ್ಟಿಯಿಂದ ಸದಸ್ಯರಿಗೆ ಇರತಕ್ಕ ಹಕ್ಕು ಪ್ರಶ್ನೆ ಕೇಳುವುದು ಮತ್ತು ಅದಕ್ಕೆ ಉತ್ತರವನ್ನು ಮಿನಿಸ್ಟರಿಂದ ಪಡೆಯತಕ್ಕ ಹಕ್ಕು ಏನಿದೆ ಅದಕ್ಕೆ ಲೋಪ ಬಂದಹಾಗೆ ಆಗುತ್ತದೆ. ಆ ದೃಷ್ಟಿಯಿಂದ ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು, ಮತ್ತು ಆ ರೀತಿ ದಿ ಮಿನಿಸ್ಟರ್ ನೀಡ್ ನಾಟ್ ರಿಪ್ಲೈ ಅಂತ ತಾವು ಆರ್ಡರ್ ಮಾಡದೇ ಸಚಿವರಿಂದ ಉತ್ತರ ಕೊಡಿಸಬೇಕು ಎಂದು ಹೇಳುತ್ತೇನೆ.

Mr. CHAIRMAN.—Hon'ble Member Mr. Bangarappa has raised a point of order. The question was that the Hon'ble Member Mr. Vatal Nagaraj asked a few questions. They were replied. The Chair came to know that the questions were being again repeated.

ಶ್ರೀ ವಾಟಾಳ್ ನಾಗರಾಜ್.—ನಾನು ಕೇಳುತ್ತಾ ಇರುವುದು ಇಷ್ಟೆ; ತಾವು ಹಟ ಮಾಡಬೇಡಿ, ತಮ್ಮನ್ನು ಕ್ಷಮೆ ಕೇಳಿಕೊಂಡು ಕೇಳುತ್ತಾ ಇದ್ದೇನೆ. ನಾನು ಕೇಳುವುದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ತಾವು ಈ ರೀತಿ ಮಾಡುತ್ತಾ ಇರುವುದರಿಂದ ನಮ್ಮ ಹಕ್ಕಿಗೆ ಲೋಪ ಬಂದಿದೆ.

Mr. CHAIRMAN.—The ruling of the Chair has got to be obeyed.

Sri AZIZ SAIT.—I rise to a point of order. The point of order is this: I do not want to bring any insinuation against the Chair. I feel sorry that the Chair while giving the ruling has not allowed any member to substantiate the point of order raised by Mr. Bangarappa. I do not want to question your ruling. I want your goodself to kindly recollect from the records available that the Chair allowed the Hon'ble Member to

put the question and the Minister replied but he replied only to two questions and when he got up to reply the third question, the Hon'ble Chair did not permit the Minister to answer. Is it correct ? When the Chair permitted the Member to put the question, how far the Chair is right in calling upon the Minister not to reply ? So long as he is an elected member, he has every right to put question and elicit replies from the Minister and it is the bounden duty of the Minister to reply to the questions raised by the Member when the Member is allowed to put the questions.

MR. CHAIRMAN.—The Chair has already given the ruling on this subject. There is no force in the point of order.

SRI D. M. SIDDIAH (Beligere).—I move for closure.

MR. CHAIRMAN.—Now there is motion for closure. I will put it to the House.

SRI S. SIVAPPA.—The Hon'ble Speaker was pleased to call upon Mr. Sastry to put question. In the meanwhile the Hon'ble Member from the other side wants to obstruct the Speaker's ruling. Is it allowed ? Can you uphold the Member ?

MR. CHAIRMAN.—That is the motion made by him.

SRI S. SIVAPPA.—Moving of closure motion is irregular. The Member should be told so.

MR. CHAIRMAN.—Mr. Sastry will put the last question.

SRI M. NAGAPPA.—I rise to a point of order, Sir. Just now Mr. Vatal Nagagraj has put three or four questions and those questions were allowed by the Chair. During answer, the Hon'ble Minister omitted to furnish answer to one of those questions. Has not the Hon'ble Member the right to press his question again for answer ? I submit that in this particular case, the Chair cannot exercise the residuary power and rule out the question as a mere repitition.

MR. CHAIRMAN.—The ruling is already given. There cannot be a point of order on the ruling of the Chair.

SRI M. NAGAPPA.—The Chair cannot behave in an arbitrary manner. There are rules.

(Interruptions by a number of Hon'ble Members)

MR. CHAIRMAN.—I will put the Demands *viz* first Demand No. 15 (26) Miscellaneous Departments to the vote of the House. The question is :

> "That a sum not exceeding Rs. 2,22,25,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Miscellaneous Departments'."

The motion was adopted.

(MR. CHAIRMAN)

Now next Demand No. 53 (124) capital outlay on schemes of Government Trading.

The Question is:

"That a sum not exceeding Rs. 29,92,03,200 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Capital Outlay on Schemes of Government Trading'."

The motion was adopted.

MR. CHAIRMAN.—The demands are granted. Now the House will adjourn for half an hour and meet at 11.55 A.M.

The House rose at Twenty-five Minutes past Eleven of the Clock to re-assemble at Fifty-five Minutes past Eleven of the Clock.

The House re-assembled at Fifty-five Minutes past Eleven of the Clock.

(MR. DEPUTY SPEAKER in the Chair)

Members' Representations

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಸಭಾ ಅಧ್ಯಕ್ಷರೇ, ಈಗಾಗಲೇ ಹಿಂದಿನ ಅಧ್ಯಕ್ಷರು ಫುಡ್ ಡಿಮ್ಯಾಂಡ್ ಮೇಲೆ ನನಗೆ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಟ್ಟಿದ್ದರು. ಈಗ ನಾನು ಪ್ರಶ್ನೆಗಳನ್ನು ಕೇಳುವುದಕ್ಕೆ ಪ್ರಾರಂಭ ಮಾಡುತ್ತೇನೆ.

MR. DEPUTY SPEAKER.—The demand has already been passed by the House. We must take the next Demand.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ಡಿಮ್ಯಾಂಡ್ ಪಾಸ್ ಆಗಿಲ್ಲ ಸ್ವಾಮಿ, ನನಗೆ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

SRI D. M. SIDDIAH.—On a point of order, Sir. The Demand relating to the Miscellaneous, Food and Civil Supplies has already been passed and as per programme, the Chair has to call the Minister for Co-operation to move his demand.

MR. DEPUTY SPEAKER.—I uphold the point of order. The next demand may be moved.

Sri DIGAMBARA RAO B. KALMANKAR.—The Hon'ble Member Sri D. M. Siddiah had moved for closure of the debate and it was at that stage the debate was proceeding. My submission is that there must be a motion for closure and since there was no such motion moved by the Hon'ble Member Sri D. M. Siddiah for closure of the debate, there was no closure at all. In view of the fact that the Hon'ble Chair had permitted the Hon'ble Member Mr. Sastry to put his question and since he had not yet put the question and elicited the answer, my submission is that the debate has not yet concluded, and there was no question of putting the Demand to the vote. My point is that there was no closure and the debate is deemed to continue and Mr. Sastry may be permitted to put the question which the Chair had permitted.

† Sri B. P. GANGADHAR.—Sir, under rule 291 :

> "When for the purpose of explanation during discussion or for any other sufficient reason, any member has occasion to ask a question of another member on any matter then under the consideration of the Assembly, he shall ask the question through the Speaker."

The residuary powers of the Speaker are contained in Rule 325 which reads as follows ;

> "All matters not specifically provided for in these rules and all questions relating to the detailed working of these rules shall be regulated in such manner as the Speaker may from time to time direct."

If there is any matter actually not provided for, then the Speaker may invoke the residuary power. When there is a specific rule, namely Rule 291, when a question is permitted by the Chair to be put by Mr. C. M. S. Sastry—not once, but two or three times, before that question was put and answer was elicited, whether it is within the competence of another Hon'ble Member to move for closure and whether it is within the competence of the Speaker to ignore his own previous consent and concede to the closure motion. I want to see that the prestige of the Speaker is safeguarded. When the Speaker says something and gives his permission for putting a question, that question must be put and the Hon'ble Member must be permitted to exercise his right to get an answer from the Minister. But even before that question is put, whether it is within the competence of the Speaker to close the debate and say that the question previously permitted will not be allowed to be put. That is point No. 1.

12-00 NOON

Point No. 2 is, when once the Speaker has already called upon the member, should he not be allowed to put the question ? He should be allowed to put the question. In fact, in the confusion that was created, when he was trying to put the question, none of us heard the closure

(SRI B. P. GANGADHAR)

motion or the Speaker's ruling on the closure motion and his putting it to vote. We did not know anything about it. It should not have been done like that. There was a lot of confusion. In that confusion if the Speaker had said that it is passed even though it was not audible to the members, it cannot be said that it was properly done because it was not a congenial atmosphere. In such an atmosphere it cannot be said that democracy prevails here. If such things are allowed, I think democracy cannot be said to have been functioning in this House. As the custodian of the rights and privileges of this House you must have to keep the high traditions of this House. When once the Speaker has asked the member to put his question, he must allow him to put the question and elicit answer to it in keeping with the high tradition of this House.

† SRI M. NAGAPPA.—I wish to submit one point. The point of order raised by Sri Siddaiah is not maintainable in view of the fact that a closure motion has to be moved as per the rules of procedure. If you turn to rule 299 (1) the word used there is 'motion'. I know that no motion is moved. So I want the decision given by the Chair should be revised by the Deputy Speaker. I submit that so many bad precedents have been created on the floor of this House. Such bad precedents should not be there on record. I submit that they should be revised properly. As per rule 299 a motion has to be moved. What a motion is has not been mentioned in rule 299. How a motion should be has been laid down in rule 147 and it says that notice of the motion given in writing addressed to the Secretary and then it must satisfy all the conditions laid down in rule 148. Unless that is done, the question of moving the closure motion does not arise. Therefore the hon'ble Deputy Speaker will be pleased to see that there is no closure motion and the debate is still on.

Then I would like to add one additional point to the submission made by my friend Sri Gangadhar. As has been said rule 291 has given a right to ask questions or explanations to the Minister. The rule says:

> "When for the purposes of explanation during discussion or for any other sufficient reason, any member has occasion to ask a question of another member on any matter then under the consideration of the Assembly, he shall ask the question through the Speaker."

The wording used is "through the Speaker". So the hon'ble member Sri Vatal Nagaraj has put 4 questions and it is on record. Out of these 4 questions. 3 questions have been answered and one was to be yet answered. Even the Minister conceded that he was about to answer that question, but the Chairman said that the Minister should not answer. That is why I say that it is an arbitrary decision that has been given. Rule 291 gives permission for questions to be put and the

Chairman has got residuary powers to regulate them and that has been laid down under rule 325 :

> "All matters not specifically provided for in these rules and all questions relating to the detailed working of these rules shall be regulated in such manner as the Speaker may from time to time direct."

Though there are no regular rules for the purpose, the Speaker has got every right to lay down his own procedure. When there is a specific rule 291 and when the Speaker has admitted the questions put by the hon'ble member, can he exercise the power under rule 325 and say that answer should not be given ? So I submit that this ruling has to be revised because otherwise it would create a very bad precedent for the future. I make this submission with certain authority, namely "Practice and Procedure in Parliament" by M. N. Kaul, page 91, where it is said that such matters can be revised by the Speaker :

> "If a member desires to make a submission to the Speaker on the floor of the House regarding a ruling, the Speaker may permit the member to do so after satisfying himself that it does not unduly interfere with the proceedings of the House. The member making such submission cannot criticise the decision, but can seek elucidation on the point and request the Chair to consider the ruling in the light of the facts submitted by him."

So I submit that the ruling that has been given by the previous Speaker may kindly be reconsidered and a definite ruling may be given which may guide us in the future as a healthy precedent on the floor of the House.

SRI D. M. SIDDIAH.—I oppose the point of order raised by Sri Gangadhar and wish to substantiate the ruling of the Speaker on the closure motion. Both Sri Gangadhar and Sri Mallappa who supported the point of order quoted rule 291 to say that hon'ble member has got a right to put questions, but both of them failed to quote the provisions of 292. Rule 292 says :

> "The Speaker, after having called the attention of the Assembly to the conduct of a member who persists in irrelevance or in tedious repetition either of his own arguments or of the arguments used by other members in debate, may direct him to discontinue his speech."

What the previous Speaker said was that repetition of the question need not be allowed and on that ground he did not allow the member to put the question. So the Speaker was within his right under rule 292 in not allowing the member to put the question. Further on a closure motion moved by me the motion was put to vote and the demand was passed. I do not understand what relevancy is there for the hon'ble members Sri Gangadhar and Sri Nagappa to raise the question now when the demand is already passed. So I request the Chair to take up the next demand.

Sri B. P. GANGADHAR.—This is a point of law and cannot be so easily everlooked. It is clear that under rule 291 I can put the question "through the Speaker". Of course, the name of Sri Sastry was called 3 or 4 times.

Mr. DEPUTY SPEAKER.—The member has already substantiated the point. There is a limit to all these things.

Sri B. P. GANGADHAR.—Under rule 291 I have every right to ask my question "through the Speaker". Likewise Sri Sastry was called and he was about to put his question "through the Speaker". But abruptly closure was moved and it was put to vote immediately. Can it be said that it was within the four cornors of the rules to move such a closure motion at that stage? When you specifically call a member to put a question, that question must be put and an answer must be given. The concerned Minister can plead his ignorance or inability to give answer or he may take some time to answer. When once the Speaker has permitted a question to be put, it must be answered.

Mr. DEPUTY SPEAKER.—Under what rule?

Sri B. P. GANGADHAR.—Under Rule 291. I shall read it:

> "When for the purposes of explanation during discussion or for any other sufficient reason, any member has occasion to ask a question of another member on any matter then under the consideration of the Assembly, he shall ask the question through the Speaker."

If you have already made up your mind to say that there is no point of order, it may be of no use to explain our stand point.

Mr. DEPUTY SPEAKER.—The hon'ble Member should not anticipate and make comments.

Sri B. P. GANGADHAR.—I am trying to persuade you.

Mr. DEPUTY SPEAKER.—I have heard the hon'ble member enough.

Sri B. P. GANGADHAR.—In order that you may come to a correct conclusion, I am explaining the point. His name was called. He was allowed to put the question. When once the Chair permits a member to put a question, the Member has the right to elucidate the answer to his question; that has not been done. When once a Member has been called to put the question, he cannot be asked to sit down and some other business resumed; when that Member comes forward to put his question, how could he be ignored and some other business taken? When once a member has been called to ask a question, he must be allowed to put it.

†Sri M. NAGAPPA.—I am speaking on a new point. My learned friend has cited Rule 292. I will read it and show that that Rule is not applicable in the present case.

Mr. DEPUTY SPEAKER.—Again the hon'ble member is reopening the issue and repeating the same thing. He wants to have a second chance.

Sri M. NAGAPPA.—Because a new point has been raised, I want to enlighten the House. Rule 292 reads thus:

> "The Speaker, after having called the attention of the Assembly to the conduct of a member who persists in irrelevance or in tedious repitition either of his own arguments or of the arguments used by other members in debate, may direct him to discontinue his speech."

If Mr. Nagaraj was found putting the same question again and again, definitely he could be debarred from asking that question. In fact, he asked four questions and they have been allowed under Rule 291. They have been admitted and even the Minister was allowed to answer; the Minister was insisted upon to answer the remaining question. Rule 292 won't come for consideration in this case. On the contrary, the question of the Member put with the permission of the Chair, remains unanswered in violation of Rule 291. I submit that Rule 292 is not applicable to this particular case. So, I request the Deputy Speaker to give a considered ruling after revising the ruling given by the Chairman then in the Chair.

Mr. DEPUTY SPEAKER.—I will give a ruling.

Sri S. BANGARAPPA.—I want to add something.

Mr. DEPUTY SPEAKER.—I have heard three Members in full. I will give a ruling. If the Members continue interruption like this, it is very difficult to carry on business. There are important demands.

†Sri DIGAMBARA RAO B. KALMANKAR.—If a closure motion has to be made, it has to be done under Rule 299. The Member making it has to give notice. There is no closure motion at all before the House. And on that particular motion which is defective, the Chair took a decision to close that debate. The Member who had been allowed to put the question, was subsequently not allowed. If there is no specific provision in the Rules of Procedure to revise an order that is already passed, there is the residuary power which is vested in the House. Under that residuary power, that particular order that was given by the Chair, being improper and not in order, requires to be revised. Since the Motion made by Mr. Siddiah is also not regular and is wrong, all the subsequent proceedings are all irregular and are not binding. A stage had been reached when the question had to be put and answered and at that stage a closure was applied. Mr. Shastry was allowed to put his question. So, only after he puts question and answer is given to it, further proceedings can take place.

Sri S. BANGARAPPA.—I have an aspect to put forward. The Chair may kindly consider this aspect.

Mr. DEPUTY SPEAKER.—I do not want to hear any other Member. If there is any point of order, please tell me under which rule the member raises the point.

† **ಶ್ರೀ ಎಸ್. ಬಂಗಾರಪ್ಪ.**—ಅಧ್ಯಕ್ಷರೆ, ಈಗ ಈ ಸದನದ ಶ್ರೀ ನಾಗಪ್ಪನವರು ಒಂದು ಪ್ರಶ್ನೆಯನ್ನೆತ್ತಿದ್ದಾರೆ........

ಉಪಾಧ್ಯಕ್ಷರು.—ನಾನು ಅದೆಲ್ಲವನ್ನೂ ಕೇಳಿದ್ದೇನೆ........

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ತಾವು ಅವರು ಹೇಳುವುದನ್ನು ದಯವಿಟ್ಟು ಸ್ವಲ್ಪ ಕೇಳಿ......

ಉಪಾಧ್ಯಕ್ಷರು.—ನಾನು ಇಲ್ಲಿ ಅಧ್ಯಕ್ಷನಾಗಿ ಕುಳಿತುಕೊಂಡು ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದಂತೆ ಕೆಲಸ ಮಾಡಬೇಕೆಂದರೆ ಅದು ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಕೋಠಾವಳೆಯವರು ಅಧ್ಯಕ್ಷ ಪೀಠದಲ್ಲಿದ್ದಾಗ ಅವರು ಏನು ಒಂದು ರೂಲಿಂಗನ್ನು ಕೊಟ್ಟರೋ ಅದನ್ನು ಈಗ ರಿವೈಜ್ ಮಾಡಬೇಕೆಂಬುದಕ್ಕೆ ಕಾರಣ ಏನು ಎಂದರೆ ಅದಕ್ಕೆ ಬಹು ಮುಖ್ಯವಾದ 2 ಪಾಯಿಂಟ್ಸ್‌ಗಳಿವೆ. ನಾವು ಇಲ್ಲಿ ನಮ್ಮ ಸದನದ ಕಾರ್ಯಕಲಾಪಗಳನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂಬ ಆಸೆ ಅಭಿಲಾಷೆಗಳು ಇದ್ದ ಪಕ್ಷದಲ್ಲಿ, ಈಗ ಆ ಶ್ರೀ ಕೊಠಾವಳೆಯವರು ಏನು ತಮ್ಮ ಒಂದು ರೂಲಿಂಗನ್ನು ಕೊಟ್ಟಿದ್ದಾರೋ ಅದು ಹೈಲಿ ಇರ್ರೆಗ್ಯುಲರ್ ಎಂದು ನನ್ನ ಅಭಿಪ್ರಾಯ. ಏಕೆಂದರೆ ಅಧ್ಯಕ್ಷರು ಇದೇ ಸದನದ ಮಾನ್ಯ ಸದಸ್ಯರಾದ ಶ್ರೀ ಸಿ. ಎಂ. ಎಸ್. ಶಾಸ್ತ್ರಿಗಳವರಿಗೆ ಪ್ರಶ್ನೆ ಹಾಕುವುದಕ್ಕೆ ಮೊದಲು ಅವಕಾಶವನ್ನು ಕೊಟ್ಟಿದ್ದರೂ, ಕೊನೆಗೆ ಅವರು ಅವಕಾಶ ಕೊಡಲಿಲ್ಲ ಎನ್ನುವುದು ಒಂದು ಕಾರಣ. ಇನ್ನೊಂದು ಕಾರಣ ಎಂದರೆ ಶ್ರೀ ವಾಟಾಳ್ ನಾಗರಾಜ್ ಅವರು ಕೇಳಿದ್ದ ನಾಲ್ಕು ಪ್ರಶ್ನೆಗಳಲ್ಲಿ ಮೂರಕ್ಕೆ ಮಾತ್ರ ಉತ್ತರ ಕೊಟ್ಟು ಇನ್ನೊಂದು ಪ್ರಶ್ನೆಗೆ ಉತ್ತರ ಕೊಡುವುದಿದ್ದಾಗಲೇ ಅವರು ಅದಕ್ಕೆ ಉತ್ತರ ಕೊಡದಂತೆ ತಡೆಹಿಡಿದಿದ್ದು ಎರಡನೇ ಕಾರಣ. ಇದೇ ವಿಚಾರದಲ್ಲಿ ಮಾನ್ಯ ಶಿವಪ್ಪನವರು ಕೂಡ ಮಾತನಾಡುವುದಕ್ಕೆ ಎದ್ದುನಿಂತರು ಆಗ ಶ್ರೀ ಕೊಠಾವಳೆಯವರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ. ಒಬ್ಬ ಮಾನ್ಯ ಸದಸ್ಯರು ಈ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಎದ್ದು ನಿಂತಾಗ ಆ ಪ್ರಶ್ನೆಯ ಪ್ರಾಮುಖ್ಯತೆಯನ್ನು ಗಮನಿಸಿ ಅಧ್ಯಕ್ಷರು ಪ್ರಶ್ನೆ ಹಾಕುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ. ಆದರೆ ನನಗೆ ಕೆಲವು ವೇಳೆ ಈ ರೂಲ್ 299 ದುರುಪಯೋಗವಾಗುತ್ತದೇನೋ ಎಂದೆನಿಸುತ್ತಿದೆ. ಈ ರೂಲನ್ನು ಮಾನ್ಯ ಕೋಠಾವಳೆಯವರು ಅನೇಕಾವರ್ತಿ ತಾವು ಆ ಅಧ್ಯಕ್ಷಪೀಠದಲ್ಲಿದ್ದಾಗ ಇದೇ ರೀತಿ ದುರುಪಯೋಗ ಮಾಡಿರತಕ್ಕ ನಿದರ್ಶನಗಳು ಇವೆ. ಅವರು ಈ ರೂಲ್ 299ನ್ನು ಉಪಯೋಗ ಮಾಡುವುದನ್ನು ಬಹಳ ಚೆನ್ನಾಗಿ ತಿಳಿದಿದ್ದಾರೆ. ಹೀಗೆ ಈ ರೂಲನ್ನು ದುರುಪಯೋಗ ಮಾಡುವುದು ಹೈಲಿ ಇರ್ರೆಗ್ಯುಲರ್ ಎಂದು ಹೇಳದೆ ವಿಧಿಯಿಲ್ಲ.

ಶ್ರೀಮಾನ್ ನಾಗರಾಜ ಅವರಿಗೆ ಪ್ರಶ್ನೆ ಕೇಳುವುದಕ್ಕೆ ಅಧ್ಯಕ್ಷರು ಅವಕಾಶವನ್ನು ಕೊಟ್ಟ ಮೇಲೆ ಅವರು ಕೇಳಿದಂತಹ ಪ್ರಶ್ನೆಗಳಿಗೆ ಉತ್ತರ ಸಿಕ್ಕಲಿಲ್ಲ ಎನ್ನುವುದು ಒಂದು. ಕ್ಲೋಜರ್ ಮೋಷನ್ ಮೂವ್ ಮಾಡುವುದಕ್ಕೆ ಅವಕಾಶವನ್ನು ಕೊಟ್ಟು, ರೂಲಿಂಗ್ ಕೊಟ್ಟದ್ದು ತಪ್ಪಾಗುತ್ತದೆ. ಈ ದೃಷ್ಟಿಯಿಂದ ಕ್ಲೋಜರ್ ಮೋಷನ್ ಮೂವ್ ಮಾಡುವುದು ಕಾನೂನು ಬಾಹಿರವಾಗುತ್ತದೆ. ಆದ್ದರಿಂದ ದಯವಿಟ್ಟು ಶ್ರೀಮಾನ್ ಕೊಠಾವಳೆಯವರು ಕೊಟ್ಟಿರತಕ್ಕ ರೂಲಿಂಗನ್ನು ರಿವೈಜ್ ಮಾಡಬೇಕು. ಇಲ್ಲದಿದ್ದರೆ ಒಂದು ಬ್ಯಾಡ್ ಪ್ರಿಸೀಡೆಂಟ್ ಮಾಡಿದಹಾಗಾಗುತ್ತದೆ. ಪ್ರಜಾಪ್ರಭುತ್ವ ತತ್ವಕ್ಕೆ ಬೆಲೆ ಕೊಡಬೇಕು, ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕು ಎನ್ನುವುದು ತಮಗೆ ಇದ್ದರೆ ಶ್ರೀಮಾನ್ ಕೊಠಾವಳೆಯವರು ಕೊಟ್ಟಿರತಕ್ಕ ರೂಲಿಂಗ್‌ಅನ್ನು ಕೂಡಲೇ ತೆಗೆದುಹಾಕಬೇಕಾಗುತ್ತದೆ, ಇಲ್ಲದಿದ್ದರೆ ಮರ್ಯಾದೆ ಬರುವುದಿಲ್ಲ.

(ಅನೇಕ ಮಾನ್ಯ ಸದಸ್ಯರು ಒಂದೇ ಬಾರಿಗೆ ಮಾತನಾಡುವುದಕ್ಕೆ ಎದ್ದುನಿಂತರು)

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಈ ವಿಷಯದಲ್ಲೇ ಈ ಸಭೆಯ ಕಾಲವನ್ನು ಕಳೆಯುತ್ತಿದ್ದಾರೆ.

Sri B. P. GANGADHAR.—Sir, we take strong exception for the language used. You have been saying that we are wasting the time of the House.

Mr. DEPUTY SPEAKER.—The member has been given chance several times. Under rule 164 I will apply guillotine and put it to the vote of the House.

Sri B. P. GANGADHAR.—You can do whatever you like. But please do not say such things. You must withdraw it. I am sorry.

Mr. DEPUTY SPEAKER.—Order, Order. The members should not.........

Sri B. P. GANGADHAR.—The language used must be courteous. I request you not to pass such remarks. We have been making submissions. Have we come here to waste the time of the House? Not at all.

Mr. DEPUTY SPEAKER.—Any further remarks of the member need not be taken down.

* * * *

Mr. DEPUTY SPEAKER.—The member must understand his limitations and also adhere to rules. If the member is called upon to speak he can speak. Otherwhise if he goes on speaking it serves no purpose. The member should not cast aspersions against the Chair.

Sri B. P. GANGADHAR.—Similarly you should not cast aspersion against the members.

* * * *

Mr. DEPUTY SPEAKER.—Let nothing he taken down.

ಶ್ರೀ ಅಜೀಜ್‌ಸೇಠ್.—ಪಾಯಿಂಟ್ ಆಫ್ ಆರ್ಡರ್ ಬಹಳ ಖಚಾರ್ಗಿದೆ. ಈ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ಆಡಬೇಕೆಂದು ಬಯಸುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಸ್ವಾಮಿ ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಅಜೀಜ್‌ಸೇಟ್.—ಈ ರೀತಿ ಮಧ್ಯದಲ್ಲಿ ಪಾಯಿಂಟ್ ಆಫ್ ಆರ್ಡರು ಬಂದರೆ ನಾನು ಏನು ಮಾಡಬೇಕು. ನಾನು ಪಾಯಿಂಟ್ ಆಫ್ ಆರ್ಡರನ್ನು ಸಬ್ಸ್ಟಿಟ್ಯೂಟ್ ಮಾಡುತ್ತೇನೆ. ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

ಒಬ್ಬರು ಮಾನ್ಯ ಸದಸ್ಯರು.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್, ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ಇವರು ಯಾರು ?

ಶ್ರೀ ಅಜೀಜ್‌ಸೇಠ್.—ನನಗೆ ಮಾತನಾಡುವುದಕ್ಕೆ ಅಧ್ಯಕ್ಷರು ಪರ್ಮಿಷನ್ ಕೊಟ್ಟಿದ್ದಾರೆ. ಆದ್ದರಿಂದ ಅಧ್ಯಕ್ಷರ ಮೂಲಕ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ನಾನು ಈ ಸಭೆಗೆ ಗಂಭೀರವಾಗಿ ಮರ್ಯಾದೆಯಿಂದ ಬೇಡಿಕೊಳ್ಳುವುದು ಇಷ್ಟೆ. ಈ ಸಭೆಯಲ್ಲಿರತಕ್ಕ ಅಧ್ಯಕ್ಷರ ಸ್ಥಾನ ಏನಿದೆ ಅದು ವಿರೋಧ ಪಕ್ಷ ಮತ್ತು ಕಾಂಗ್ರೆಸ್ ಪಕ್ಷ ಅಥವಾ ಆಡಳಿತ ಪಕ್ಷ ಎರಡಕ್ಕೂ ಸೇರಿದ್ದು. ಅದು ಇಂಥಾ ಪಾರ್ಟಿಗೇ ಸೇರಿದ್ದು ಎಂದು ಅದರ ಮೇಲೇನೂ ಲೇಬಲ್ ಹಾಕಿಲ್ಲ. ತಾವೇನೋ ಈ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದಿಂದ ಚುನಾಯಿತರಾಗಿರಬಹುದು.

* * * *

ಉಪಾಧ್ಯಕ್ಷರು.—ಏನೂ ರೆಕಾರ್ಡ್ ಮಾಡಬಾರದು.

**** Matter not recorded as ordered by the Chair.

ಶ್ರೀ ಎಚ್. ಎನ್. ನಂಜೇಗೌಡ.—ಈ ವಿಚಾರದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಒಂದೆರಡು ಮಾತುಗಳನ್ನು ಹೇಳಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಶಿವಪ್ಪ.—ಈ ಸಭೆಯಲ್ಲಿ ಹಿಂದಿನ ಬೇಡಿಕೆಯ ಬಗ್ಗೆ ಚರ್ಚೆ ನಡೆಯುವಾಗ್ಯೆ ಕ್ಲೋಜರ್ ಮೋಷನ್ ಮೂವ್ ಮಾಡಿ ಅದನ್ನು ಪಾಸು ಮಾಡಿದಮೇಲೆ ಆ ವಿಚಾರದಲ್ಲಿ ಮಾನ್ಯ ಸದಸ್ಯರು ಈಗಾಗಲೇ ಆಗ್ರಹವನ್ನು ವ್ಯಕ್ತ ಮಾಡಿದ್ದಾರೆ. ಸ್ವಲ್ಪ ಕಾಲವನ್ನು ಕೊಟ್ಟು ಒಂದೆರಡು ವಿಚಾರಗಳ ಬಗ್ಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಮಾನ್ಯ ಸದಸ್ಯರಿಗೆ ಅಧ್ಯಕ್ಷರು ಅವಕಾಶವನ್ನು ಕೊಟ್ಟಿದ್ದರೆ ಈ ಗೊಂದಲಕ್ಕೆ ಅವಕಾಶವೇ ಇರುತ್ತಿರಲಿಲ್ಲ ಎಂದು ನನ್ನ ದೃಢವಾದ ನಂಬಿಕೆ. ಇದುವರೆಗೂ ಈ ವಿಚಾರದಲ್ಲಿ ನಡೆದಿರತಕ್ಕ ಚರ್ಚೆಯನ್ನು ಗಮನಿಸುವುದಾದರೆ ಮುಂದಿನ ಬೇಡಿಕೆಗಳ ಬಗ್ಗೆ ಇಂಥಾ ಅವಕಾಶ ಬಂದಾಗ ಕ್ಲಾರಿಫಿಕೇಷನ್ ಕೇಳುವುದಕ್ಕೆ ಮಾನ್ಯ ಅಧ್ಯಕ್ಷರು ಮಾನ್ಯ ಸದಸ್ಯರಿಗೆ ಸ್ವಲ್ಪ ಹೆಚ್ಚಿನ ರೀತಿಯಲ್ಲಿ ಕಾಲಾವಕಾಶವನ್ನು ಕೊಡತಕ್ಕದ್ದು ಸೂಕ್ತ ಎಂದು ಮನವರಿಕೆಯಾಗಿದೆ. ಆದ್ದರಿಂದ ಇನ್ನು ಈ ಚರ್ಚೆಯನ್ನು ಸಾಕುಮಾಡಿ ಮುಂದಿನ ಚರ್ಚೆಗೆ ಹೋಗುವುದು ಒಳ್ಳೆಯದು ಅನಿಸುತ್ತದೆ.

12-30 P.M.

ಸ್ವಾಮಿ, ನಾನು ಒಂದು ಕ್ರಿಯಾಲೋಪ ಎತ್ತುತ್ತೇನೆ. ಮಾನ್ಯ ಸಹಕಾರ ಸಚಿವರಿಗೆ ಸಂಬಂಧಪಟ್ಟಂತೆ ಒಂದು ಮಹತ್ವದಿಂದ ಕೂಡಿದ ಪ್ರಶ್ನೆ. ಈ ಸಭೆಯ ಘನತೆಗೆ ಕುಂದು ತರ ತಕ್ಕಂಥ ಮಾತುಗಳನ್ನು ಈ ಸಹಕಾರ ಸಚಿವರು ಬೇರೆ ಮನೆಯಲ್ಲಿ ಹೇಳಿದ್ದಾರೆ. ಅವರು ಹೇಳಿದಂಥ ಮಾತುಗಳು ಈ ಸಭೆಯ ಸದಸ್ಯರನ್ನು ಮತ್ತು ಈ ಸಭೆಯನ್ನು ಅವಹೇಳನ ಮಾಡುವಂತೆ ಇವೆ. ಈ ಬಗ್ಗೆ ಹಕ್ಕುಬಾಧ ತಾ ಪ್ರಶ್ನೆಯಾಗಿ ಇದೇ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ರೀತಿ ಚರ್ಚೆ ನಡೆವಾಗ ಒಂದು ವಿಚಾರ ಈ ಸಭೆಗೆ ತಿಳಿದುಬಂತು. ಏನೆಂದರೆ, ಈ ಸಭೆಯ ಗೌರವಕ್ಕೆ ಮತ್ತು ಈ ಸಭೆಯ ಪ್ರತಿಷ್ಠೆಗೆ ಕುಂದು ತರುವ ರೀತಿಯಲ್ಲಿ ಒಬ್ಬ ಸದಸ್ಯರು ಬೇರೆ ಮನೆಯಲ್ಲಿ ಮಾತನಾಡಿದಾಗ ಅವರನ್ನು ಕರೆಸಿ ಕೇಳಬೇಕು ಎಂಬುದಾಗಿ. ಆದರೆ ಶ್ರೀಮಾನ್ ನಾಡಗೌಡರು ವಿಧಾನ ಪರಿಷತ್ತಿನ ಸದಸ್ಯರಾಗಿ ಈ ಮನೆಯ ವಿಚಾರವಾಗಿ ಮತ್ತೊಂದು ಮನೆಯಲ್ಲಿ ಹೇಳಿಕೆ ಕೊಟ್ಟಿದ್ದರೆ ಅವರನ್ನು ಈ ಸಭೆಗೆ ಕರೆಸಿ ಕ್ರಮ ತೆಗೆದುಕೊಳ್ಳುವದು ಕಷ್ಟವಾಗುತ್ತದೆಂದು ತಿಳಿದು ಬಂತು. ನಂತರ ಶ್ರೀಮಾನ್ ನಾಡಗೌಡರು ಸಹಕಾರ ಸಚಿವರಾಗಿ ಅಭಿವೃದ್ಧಿ ಶಾಖಾ ಸಚಿವರಾಗಿ ಈ ಸಭೆಗೆ ಸಂಬಂಧಪಟ್ಟಂತೆ ಮಾತನಾಡಿರುವುದರಿಂದ ಅವರು ಈ ಸಭೆಗೆ ಶಾರೀರಿಕವಾಗಿ ಸಂಬಂಧ ಪಟ್ಟಿದ್ದಾರೆಂದು ತೀರ್ಮಾನವಾಯಿತು. ಈ ಸಭೆಯ ಗೌರವ ಘನತೆಗೆ ಕುಂದು ತರುವ ರೀತಿಯಲ್ಲಿ ಅವರು ಮಾತನಾಡಿರುವುದರಿಂದ ಈಗ ಅವರು ಅವರ ಖಾತೆಗೆ ಸಂಬಂಧಪಟ್ಟಿರುವ ಬೇಡಿಕೆಗಳನ್ನು ಮಂಡಿಸುವುದಕ್ಕೆ ಅವಕಾಶ ಕೊಡಬೇಕೇ ಅಥವಾ ಬೇಡವೇ ಎಂಬ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಶ್ರೀಮಾನ್ ನಾಡಗೌಡರು ಈ ಸಭೆಗಿಂತ ದೊಡ್ಡವರೇನಲ್ಲ ಎಂಬುದು ಒಂದು ವಿಚಾರ. ಅವರು ಸಹಕಾರ ಸಚಿವರಾಗಿದ್ದರೂ ಸಹ ಈ ಸಭೆಯ ಘನತೆ ಗೌರವ ಎಂಬುದು ಎಲ್ಲಕ್ಕಿಂತ ಹಿರಿಯದು. ಈ ಸಭೆಯ ಘನತೆ ಗೌರವವನ್ನು ಕಾಪಾಡತಕ್ಕಂಥಾದ್ದು ನಮಗೆ ಎಷ್ಟು ಪವಿತ್ರವಾದ ಕರ್ತವ್ಯ ವಾಗಿದೆಯೋ, ಅಷ್ಟೇ ಒಂದು ಪವಿತ್ರವಾದ ಕರ್ತವ್ಯ ಅಥವಾ ಜವಾಬ್ದಾರಿ ಶ್ರೀ ನಾಡಗೌಡರಿಗೂ ಇದೆಯೆಂಬುದನ್ನು ಅವರಮುಂದೆ ಒತ್ತಿ ಹೇಳುತ್ತಿದ್ದೇನೆ. ಈಗಲೂ ಸಹ ಮಾನ್ಯ ಅಧ್ಯಕ್ಷರ ಮೂಲಕ ಶ್ರೀ ನಾಡಗೌಡರನ್ನು ಕೇಳಿಕೊಳ್ಳುವುದೇನೆಂದರೆ, ಈ ಸಭೆಯ ಘನತೆ ಮತ್ತು ಗೌರವವನ್ನು ಕಾಪಾಡುವದಕ್ಕಾಗಿ ಆ ಸಭೆಯಲ್ಲಿ ಈ ಸಭೆಯ ಬಗ್ಗೆ ಏನು ಮಾತನಾಡಿದಿರಿ ಎಂಬ ಬಗ್ಗೆ ವಿಶದವಾಗಿ ಚರ್ಚೆ ಮಾಡುವುದಕ್ಕೆ ಹೋಗುವ ಬದಲು ಈ ಸಭೆಯ ಬಗ್ಗೆ ಏನು ಮಾತುಗಳನ್ನು ಆಡಿದ್ದಾರೆ ಆ ಬಗ್ಗೆ ಕ್ಷಮಾಪಣೆಯನ್ನು ಕೇಳಿಕೊಂಡರೆ ಮುಂದಿನ ಕಾರ್ಯಕಲಾಪವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶವಾಗುತ್ತದೆಂದು ಒತ್ತಾಯಪೂರ್ವಕವಾಗಿ ಸೂಚನೆ ಮಾಡುತ್ತೇನೆ.

† ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಈಗ ವಿರೋಧಪಕ್ಷದ ನಾಯಕರು ಈ ವಿಷಯದಲ್ಲಿ ಏನು ಹೇಳಿದರು ಅದನ್ನು ನಾನು ಪುಷ್ಟೀಕರಿಸುತ್ತಾ ಎರಡು ಅಂಶಗಳನ್ನು ತಮ್ಮ ಮುಂದೆ ಇಡ ಬೇಕೆಂದಿದ್ದೇನೆ. ಶ್ರೀಮಾನ್ ನಾಡಗೌಡರ ವೈಯಕ್ತಿಕ ವಿಚಾರದಲ್ಲಿ ನಾವು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ನಮಗೆ ಅದು ಸಂಬಂಧವೂ ಇಲ್ಲ. ಶ್ರೀಮಾನ್ ನಾಡಗೌಡರನ್ನು ನೋಡಿದರೆ ಬಹಳ ಸರಳಿಗಳಂತಿದ್ದಾರೆ. ಅವರನ್ನು ನೋಡಿದರೆ ಈ ಪ್ರಶ್ನೆ ಎತ್ತಲಿಕ್ಕೆ ಮನಸ್ಸು ಹಿಂದೇಟು ಹಾಕುತ್ತಿದೆ. ಈ ವಿಷಯವನ್ನು ಎತ್ತದಿದ್ದರೆ ಕರ್ತವ್ಯ ಲೋಪವಾಗುತ್ತದೆಂದು ತಿಳಿದು ಈ ಪ್ರಶ್ನೆಯನ್ನು ಎತ್ತಾ

ಬೇಕಾಗಿದೆ. ಏನು ಕಾರಣವೋ ಶ್ರೀಮಾನ್ ನಾಡಗೌಡರು ಆ ಸಭೆಯಲ್ಲಿ ಈ ಸಭೆಯ ಸದಸ್ಯರುಗಳು ತುಂಬಾ ಗಲಾಟೆ ಮಾಡುತ್ತಾರೆ, ತುಂಬಾ ಗದ್ದಲ ಮಾಡುವ ಜನ, ನಮಗೆ ಯಾವ ಕೆಲಸವನ್ನೂ ನಡೆಯುವಂತೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಈ ರೀತಿಯ ಆಕ್ರೋಶವನ್ನು ಈ ಸದಸ್ಯರ ಬಗ್ಗೆ ಅವರು ಹೇಳುವುದು ಏತಕ್ಕೋ ಎಂಬುದು ಗೊತ್ತಾಗಲಿಲ್ಲ. ಇದು ಅತ್ತೆ ಸೊಸೆಯ ಜಗಳದಂತೆ ಒಬ್ಬರು ಮತ್ತೊಬ್ಬರ ಬಗ್ಗೆ ಹಿಂದು ಮುಂದೆ ಮಾತನಾಡುವಂತೆ ಆಗಿದೆ. ಈ ಸಭೆಯ ಸಹವಾಸ ಬೇಕಿಲ್ಲ ಸಹವಾಸ. ಈ ಸಭೆಗೆ ಒಳ್ಳೆಯ ರೀತಿಯಿಂದ ಗೌರವ ಕೊಡಬೇಕು. ಗೌರವ ತೆಗೆದು ಕೊಳ್ಳಬೇಕು. ನಾವು ಒಂದು ಲಕ್ಷ ಜನರಿಂದ ಆರಿಸಿಬಂದಿದ್ದೇವೆ. ನಾವುಗಳು ಗಲಾಟೆ ಮಾಡುವುದಕ್ಕಾಗಿಯಾಗಲೀ ದರೋಡೆ ಮಾಡುವುದಕ್ಕಾಗಲೀ ಇಲ್ಲಿಗೆ ಬಂದಿಲ್ಲ. ನಾವು ನಮ್ಮ ಕರ್ತವ್ಯವನ್ನು ಮಾಡುವುದಕ್ಕೆ ಇಲ್ಲಿಗೆ ಬಂದಿದ್ದೇವೆ. ಈ ಸಭೆಗೆ ಬಿಸಿ ರಕ್ತ ಇರುವವರು, ತರುಣರು ಮತ್ತು ನವ ಚೈತನ್ಯ ಇರುವವರು ಬಂದಿದ್ದಾರೆ. ಇವರು ಮಾತಿನಂಥ ಭಾಷಣದಿಂದಲೇ ಇವರುಗಳ ಧೋರಣೆ ಏನು ಎಂಬುದು ಗೊತ್ತಾಗುತ್ತದೆ. ನಮಗೆ ಅಗೌರವ ಮಾಡಿದ್ದಾರೆ ಎಂಬುದು ಖಚಿತವಾದ ಅಭಿಪ್ರಾಯವಾಗಿದೆ. ಆದ್ದರಿಂದ ಶ್ರೀಮಾನ್ ನಾಡಗೌಡರಿಗೆ ಹೇಳುತ್ತೇನೆ. ಆಂಗ್ಲ ಭಾಷೆ ಎಂಬುದು ಬಹಳ ಸುಲಭವಾದ ಭಾಷೆ. ಆಂಗ್ಲ ಭಾಷೆಯಲ್ಲಿ "I am sorry" ಎಂದು ಹೇಳಿದರೆ ಕ್ಷಮಾಪಣೆ ಕೇಳಿದಂತಾಗುತ್ತದೆ. ಆದ್ದರಿಂದ ತಾವು ಪ್ರತಿಷ್ಠೆಗೆ ನಿಂತುಕೊಳ್ಳದೆ ನಿಮ್ಮ ಮನಸ್ಸು ನೊಂದಿದ್ದರೆ ಕ್ಷಮಾಪಣೆ ಕೇಳಿ. ಆ ರೀತಿ ಕೇಳಿಬಿಟ್ಟರೆ ನಿಮ್ಮ ಡಿಮ್ಯಾಂಡನ್ನು ಮಂಡಿಸಲು ಗೇಟ್ ಪಾಸ್ ಸಿಕ್ಕಿದಂತೆ ಎಂದು ಹೇಳಿ ಮಾನ್ಯ ಅಧ್ಯಕ್ಷರ ಮೂಲಕ ಅವರಿಗೆ ಸಲಹೆ ಮಾಡುತ್ತೇನೆ.

† ಶ್ರೀ ಪಿ. ಎಂ. ನಾಡಗೌಡ (ಅಭಿವೃದ್ಧಿ ಮತ್ತು ಸಹಕಾರ ಇಲಾಖೆಯ ಸಚಿವರು).— ಮಾನ್ಯ ಅಧ್ಯಕ್ಷರೇ, ಈ ವಿಷಯ ಈಗಾಗಲೇ ಮೇಲಿನ ಮನೆಯಲ್ಲಿ ಇತ್ಯರ್ಥವಾಗಿದೆ. ಈ ಮನೆಯ ಸದಸ್ಯರುಗಳು ಆ ದಿವಸ ಯಾವುದೋ ಒಂದು ಮಾತನ್ನು ನನ್ನ ಬಾಯೊಳಗೆ ಹಾಕಿ ನನ್ನ ಮೇಲೆ ಎರಡು ದಿವಸ ಪ್ರಿವಿಲೇಜ್ ಮೋಷನ್ ಮೂವ್ ಮಾಡಿ, ಆ ಬಗ್ಗೆ ಈ ದಿವಸ ನನ್ನ ಕಡೆಯಿಂದ ಒಂದು ಮಾತನ್ನು ಕೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾನು ಇಷ್ಟು ಮಾತ್ರ ಹೇಳುತ್ತಿದ್ದೇನೆ, ಯಾವ ಒಂದು ಅಗೌರವವನ್ನೂ ಇಟ್ಟುಕೊಂಡು ಈ ಮನೆಯ ಬಗ್ಗೆ ಮೇಲ್ಮನೆಯಲ್ಲಿ ಮಾತನಾಡಲಿಲ್ಲ. ಮಾನ್ಯ ಸಿದ್ದವೀರಪ್ಪನವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಈ ಸಭೆಯ ಬಗ್ಗೆ ಏನು ಗೌರವ ಇಟ್ಟುಕೊಂಡಿದ್ದಾರೋ ಅದರ ನೂರರಷ್ಟು ಪಟ್ಟು ನಾನು ಇಟ್ಟುಕೊಂಡಿದ್ದೇನೆ, ಈ ಪ್ರಶ್ನೆ ಈಗಾಗಲೇ ಇತ್ಯರ್ಥವಾಗಿದೆ. ಈ ಮಾತನ್ನು ನಾನು ಯಾವ ದೃಷ್ಟಿಯಿಂದ ಹೇಳಿದ್ದೇನೆಂದರೆ, ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಬಿಲ್‌ನ್ನು ತರುವುದಕ್ಕೆ ಈ ಮನೆಯ ಸದಸ್ಯರ ಸಹಕಾರ ಸಾಕಷ್ಟು ಸಿಗಲಿಲ್ಲವೆಂಬ ಕಾರಣಕ್ಕಾಗಿ. ಇಂಗ್ಲೀಷ್ ಭಾಷೆಯಲ್ಲಿ "Making a mountain out of a mole hill" ಎಂದು ಹೇಳುವಂತೆ ನನ್ನ ಬಾಯಲ್ಲಿ ಆ ತಪ್ಪನ್ನು ಹಾಕಿದ್ದಾರೆ. ಈ ಸಭೆಗೆ ನಾನು ಅಗೌರವ ಮಾಡಿಲ್ಲ. ಆದ್ದರಿಂದ ನಾನು ಆಂಗ್ಲ ಭಾಷೆಯಲ್ಲಿ ಏನನ್ನೂ ಹೇಳುವುದಕ್ಕೆ ತಯಾರಿಲ್ಲ. ಮಾನ್ಯ ಸಿದ್ದವೀರಪ್ಪನವರು ಡ್ಯೂಯಲ್ ಪರ್ಸನಾಲಿಟೀಸ್ ಎಂದು ಏನು ಇಂಗ್ಲೀಷ್ ಭಾಷೆಯಲ್ಲಿ ಹೇಳಿದರು ಅದರಂತೆ ನಾನು ಏನೂ ತಪ್ಪು ಮಾಡಿಲ್ಲವೆಂಬ ಭಾವನೆ ನನಗಿದೆ. ಆದ್ದರಿಂದ ನನ್ನ ಖಾತೆಯ ಬೇಡಿಕೆಗಳನ್ನು ಮಂಡಿಸಲು ತಮ್ಮ ಅಪ್ಪಣೆಯನ್ನು ಕೇಳುತ್ತೇನೆ.

ಶ್ರೀ ಅಜೀಜ್ ಶೇಠ್.—ನನ್ನ ಕ್ರಿಯಾಲೋಪದ ಬಗ್ಗೆ ಏನೂ ರೂಲಿಂಗ್ ಕೊಡಲಿಲ್ಲ.

MR. DEPUTY SPEAKER.—I will give my ruling the next day.

Demands Nos. 21, 23 and 25

SRI P. M. NADGOUDA (Minister for Devolopment and Co-operation).—Sir, on the recommendation of the Governor, I beg to move the following demands :

"That a sum not exceeding Rs. 69,00,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Rural Development.'"

(SRI P. M. NADGOUDA)

"That a sum not exceeding Rs. 2,10,83,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Co-operation".

"That a sum not exceeding Rs. 3,65,79,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Community Development Projects, National Extension Service and Local Development Works".

MR. DEPUTY SPEAKER.—Motion moved :

"That a sum not exceeding Rs. 69,00,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Rural development'."

The other Demands, namely, 23 and 25 are also before the House.

†ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಈ ಬೇಡಿಕೆ ಏನಿದೆ ಈ ಮಂತ್ರಿಗಳು ಕೇಳಿರುವಂತೆ ಸುಮಾರು 6,45,62,000 ರೂಪಾಯಿಗಳಷ್ಟು ಬೇಕೆಂದು ಕೇಳಿರುವ ಈ ಬೇಡಿಕೆಯನ್ನು ವಿರೋಧಿಸುವುದಕ್ಕಾಗಿ ನಾನು ನಿಂತಿದ್ದೇನೆ. ವಿರೋಧಿಸುವುದು ಎಂದರೆ ಬಹಳ ಬಾರಿ ಕಳಕಳಿಯಿಂದ ಹೇಳುತ್ತಿದ್ದೇನೆ. ಏಕೆಂದರೆ ಬೇರೆ ಬೇಡಿಕೆಗಳನ್ನು ಈ ಪಕ್ಷದವರು ಮಾತ್ರ ವಿರೋಧ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದರು. ಮತ್ತು ಇದನ್ನು ಸರಕಾರದವರೂ ಒಪ್ಪಿಕೊಳ್ಳುತ್ತಿದ್ದರು. ಆದರೆ ಒಂದು ರೀತಿಯಾಗಿ ಈ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಬಹಳ ಭಾರಿಯಾಗಿ ಕಳಕಳಿಯಿಂದ ಏಕೆ ಹೇಳುತ್ತೇನೆಂದರೆ ನಾನು ಒಬ್ಬನೇ ಹೇಳಿ ಇದನ್ನು ವಿರೋಧ ಮಾಡತಕ್ಕದ್ದೇ ಅಲ್ಲ. ಇದನ್ನು ತಾವೂ ಕೂಡ ವಿರೋಧ ಮಾಡಬೇಕು ಎಂದು ಹೇಳುತ್ತಿದ್ದೇನೆ. ಇದಕ್ಕೆ ಕಾರಣವನ್ನೂ ಹೇಳುತ್ತೇನೆ. ಬಹುಶಃ ಯಾವ ಒಂದು ಸರಕಾರ ನಡೆಯಬೇಕಾದರೂ ಸರಕಾರ ಮಾಡತಕ್ಕ ಕೆಲಸ ಕಾರ್ಯಗಳಲ್ಲಿ ಅವಶ್ಯಕವಾಗಿ ಮಾಡುವ ಕೆಲಸ ಕಾರ್ಯಗಳೂ ಇರುತ್ತವೆ. ಅನಾವಶ್ಯಕವಾಗಿ "ತಲೆಗಿಂತ ಪೇಟಾ ಭಾರ" ಎನ್ನುವಂತೆ ಕೆಲವು ಕೆಲಸಗಳನ್ನು ಮಾಡುತ್ತಿದಾರೆ ಮತ್ತು "ಹೊಟ್ಟೆಗೇ ಹಿಟ್ಟು ಇಲ್ಲದಿರುವಾಗ ಜುಟ್ಟಿಗೆ ಮಲ್ಲಿಗೆ ಹೂ" ಎನ್ನುವಂತೆ ಇಲ್ಲಿ ನಿಮ್ಮಲ್ಲಿ ಅನೇಕ ಇಲಾಖೆಗಳು ಇವೆ. ಇದರಲ್ಲಿ ಕೆಲವು ಅಧಿಕಾರಿಗಳನ್ನು ಇಟ್ಟುಕೊಂಡು ಅವರನ್ನು ಬೆಳೆಸಿಕೊಂಡು ಬರುವುದಕ್ಕಾಗಿಯೇ ಇಂತಹ ಇಲಾಖೆಗಳನ್ನು ಮಾಡಿರುವಂತೆ ತೋರುತ್ತದೆ. ಇದರಿಂದ ರಾಜ್ಯದ ಹೊರೆ ಹೆಚ್ಚಾಗುತ್ತದೆ. ಇಂತಹ ಇಲಾಖೆಗಳನ್ನು ತೆಗೆಯುವುದರಿಂದ ರಾಜ್ಯದ ಹೊರೆಯೂ ಕಡಿಮೆಯಾಗುತ್ತದೆ. ನಮ್ಮ ದೇಶದಲ್ಲಿ ಬೇಕಾದಷ್ಟು ನೀರಾವರಿ ಕೆಲಸಗಳು ಆಗಬೇಕು ಮತ್ತು ಇನ್ನಿತರ ಅಭಿವೃದ್ಧಿ ಕೆಲಸಗಳು ಆಗಬೇಕು ಎಂದು ಸರಕಾರಕ್ಕೆ ಹೇಳಿದಾಗ ಅದಕ್ಕೆ ಸರಕಾರದವರು ಹಣಕ್ಕೆ ತೊಂದರೆ ಇದೆ ಎಂದು ಹೇಳುತ್ತಾರೆ. ಆದುದರಿಂದ ಇಂತಹ ಇಲಾಖೆಗಳನ್ನು ಸರಕಾರ ಕೈಬಿಡುವುದು ಉತ್ತಮ. ಇದರಿಂದ ಉಳಿತಾಯವಾಗುವ ಹಣವನ್ನು ಬೇರೆ ಕಾರ್ಯಗಳಲ್ಲಿ ವಿನಿಯೋಗಿಸಬಹುದು. ಇಂದು ಅಗತ್ಯವಾದ ಕಾರ್ಯಗಳನ್ನು ಮಾಡಬೇಕಾಗಿರುವ ಈ ಕಾಲದಲ್ಲಿ "ತಲೆಗಿಂತ ಪೇಟಾ ಭಾರಿ" ಎನ್ನುವಂತೆ ನಮ್ಮ ಸರಕಾರ ಇನ್ನೂ ಇಂತಹ ಇಲಾಖೆಗಳನ್ನು ಇಟ್ಟುಕೊಂಡಿದ್ದಾರೆ. ಇದರ ಬಗ್ಗೆ ಸರಕಾರ ತೀವ್ರವಾಗಿ ಯೋಚನೆ ಮಾಡಿ ತೀರ್ಮಾನ ಮಾಡತಕ್ಕ ವಿಷಯ ಇದು ಎಂದು ತಮ್ಮಲ್ಲಿ ನಾನು ಇಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಮೊದಲನೆಯದಾಗಿ ಇದರ ಬಗ್ಗೆ ಮಾತನಾಡುವ ಕಾಲದಲ್ಲಿ ಕೆಲವು ವಿಷಯಗಳ ಬಗ್ಗೆ ನಾವು ಕಳೆದ ಅಧಿವೇಶನದಲ್ಲಿ ಸರಕಾರದ ಮುಂದೆ ಅವರ ಗಮನವನ್ನು ಸೆಳೆದು ಅದನ್ನು

ಯಾವ ರೀತಿಯಾಗಿ ಸರಿಪಡಿಸಬೇಕು ಮತ್ತು ಹೇಗೆ ಮಾಡಬೇಕು ಎಂಬುದರ ಬಗ್ಗೆ ಹೇಳಿದಾಗ ಇದಕ್ಕೆ ಹೋದ ಸಾರಿ ಇಲ್ಲ ಮಾನ್ಯ ಮಂತ್ರಿಗಳು ಹೇಳಿದ ಮಾತುಗಳನ್ನು ಪುನಃ ಅವರ ಗಮನಕ್ಕೆ ಇಲ್ಲ ತರುತ್ತಿದ್ದೇನೆ. ಮಾನ್ಯ ಮಂತ್ರಿಗಳೇ ಕಳೆದ ಸಾರಿಯ ಬಡ್ಜೆಟ್ ಭಾಷಣಕ್ಕೆ ಉತ್ತರವಾಗಿ ಹೀಗೆ ಹೇಳಿದ್ದಾರೆ :

> 'ಎಲ್ಲಾ ಸೊಸೈಟಿಗಳಲ್ಲೂ ಕೆಲಸ ಚೆನ್ನಾಗಿದೆ ಎಂದು ನಾವು ಭಾವಿಸಿಲ್ಲ. ಆದರೆ ಥರೋ ಸೊಸೈಟಿಗಳೂ ಕೆಲವು ಇವೆ. ಅವಕ್ಕೆ ಶಾಭಾಸುಗಿರಿ ಕೊಡಬೇಕು. ಚೆನ್ನಾಗಿ ನಡೆಯುತ್ತಿರುವ ಸಹಕಾರ ಸಂಸ್ಥೆಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ವಿಶ್ವಾಸ ಪೂರ್ವಕವಾಗಿ ಹೇಳುತ್ತೇನೆ.'

ಈ ರೀತಿ ಮಾನ್ಯ ಮಂತ್ರಿಗಳು ಹೋದ ಸಾರಿಯ ಬಡ್ಜೆಟ್ಟಿಗೆ ಉತ್ತರ ಕೊಡುವಾಗ ಅಪ್ಪಣೆ ಕೊಡಿಸಿದರು. ಇದನ್ನು ಅವರ ಗಮನಕ್ಕೆ ಇಲ್ಲಿ ಪುನಃ ನಾನು ಇಲ್ಲಿ ತರುತ್ತಿದ್ದೇನೆ. ಇದು ಹೇಗಿದೆ ಎಂದರೆ ಹೊಟ್ಟೆಗೆ ಹಿಟ್ಟಿಲ್ಲದೇ ಇರುವಾಗ ಜುಟ್ಟಿಗೆ ಮಲ್ಲಿಗೆ ಹೂ ಎಂಬಂತೆ ಇರ್ರಾಗಿದೆ. Co-operatives have become grazing grounds for unscrupulous co-operators. ಇದರಲ್ಲಿ ಅವರೇ ಹೇಳಿದಂತಹ ಮಾತುಗಳಿಗೆ ಎಷ್ಟು ಮಟ್ಟಿಗೆ ಅಂಟಿಕೊಂಡಿದ್ದಾರೆ ಎನ್ನುವುದನ್ನು ತಿಳಿಸುವುದಕ್ಕಾಗಿ ಇಲ್ಲಿ ಎರಡು ಮೂರು ಉದಾಹರಣೆಗಳನ್ನು ಹೇಳುತ್ತೇನೆ. ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಟಿ. ಎ. ಪಿ. ಸಿ. ಸಂಘ ಎಂದು ಒಂದು ಸಂಘ ಇದೆ. ಮಾನ್ಯ ಮಂತ್ರಿಗಳಿಗೂ ಕೂಡ ರೂಲ್ಸು ಪ್ರಕಾರ ಈ ಸಂಘ ಕೆಲಸ ಮಾಡುತ್ತಿಲ್ಲ ಎಂದು ಒಂದಲ್ಲ ಎರಡು ಸಲ ಅಲ್ಲ ಎಷ್ಟೋಸಾರಿ ಸರಕಾರದ ಗಮನಕ್ಕೆ ತಂದೆ. ಅನಂತರ ನಾನೇ ಸುಮಾರು 13 ಅಂಶಗಳನ್ನು ಪಟ್ಟಿಮಾಡಿ ಸರಕಾರಕ್ಕೆ ಕಳುಹಿಸಿಕೊಟ್ಟಿದ್ದೆ. ಇದಕ್ಕೆ 20-9-67 ರಂದು ಮಾನ್ಯ ಮಂತ್ರಿಗಳಿಂದ ಒಂದು ಉತ್ತರ ಬಂತು. ತದನಂತರ 24-1-68 ರಲ್ಲಿ ಪ್ರಿಲಿಮಿನರಿ ಎನ್‌ಕ್ವೈರಿ ಮುಗಿದು ಫೈನಲ್ ಆಗಿ ಆಕ್ಷನ್ ತೆಗೆದು ಕೊಂಡಿದ್ದೇವೆ ಎಂದು: Action is being taken to supersede the committee, ಎಂದು ನನಗೆ ಉತ್ತರ ಕಳುಹಿಸಿಕೊಟ್ಟರು. ತಾಲ್ಲೂಕಿನಲ್ಲಿರುವ ಸೊಸೈಟಿಗಳ ವಿಷಯ ಹೇಳ ಬೇಕಾದರೆ ಎಷ್ಟೋ ಇವೆ. ಒಂದೇ ಒಂದು ಎಕ್ಸಾಂಪಲ್ ಮಾತ್ರ ಇಲ್ಲಿ ಹೇಳಬಯಸುತ್ತೇನೆ. ಮಾನ್ಯ ಮಂತ್ರಿಗಳೇನೋ ಇದರ ಬಗ್ಗೆ ಎನ್‌ಕ್ವೈರಿ ಮಾಡುತ್ತೇವೆ ಇದಕ್ಕಾಗಿ ಇಲಾಖೆಯ ಅಧಿಕಾರಿ ಗಳಿದ್ದಾರೆ ಎಂದು ಹೇಳುತ್ತಾರೆ. ಅರಕಲಗೂಡು ತಾಲ್ಲೂಕಿನ ಒಂದು ಸೊಸೈಟಿಯಲ್ಲಿ ಭತ್ತವನ್ನು ಸ್ಟಾಕ್ ಮಾಡಿದ್ದರು. ಅದನ್ನು ಎರಡು ಕಡೆಗಳಲ್ಲಿ ಸ್ಟಾಕು ಮಾಡಲಾಗಿದೆ ಎಂದು ಹೇಳುತ್ತಿದ್ದರು. ಇದನ್ನು ತನಿಖೆ ಮಾಡಲು ಅಲ್ಲಿರುವ ಅಸಿಸ್ಟೆಂಟು ರಿಜಿಸ್ಟ್ರಾರ್‌ರವರು ಒಂದೇ ದಿನ ಬಂದರು. ಅಲ್ಲಿಗೆ ಬಂದ ದಿವಸ ಒಂದು ಕಡೆಯಲ್ಲಿ ಸೊಸೈಟಿಗಳವರು ಸ್ಟಾಕು ಮಾಡಿದ್ದ ಭತ್ತವನ್ನು ಅವರಿಗೆ ತೋರಿಸಿ ಅದು ಸರಿಯಾಗಿದೆ ಎಂದು ಬರಿಸಿದರು. ಮತ್ತು ರಾತ್ರಿ ಅವರು ಅಲ್ಲೇ ಟಿ ಬಿ ಯಲ್ಲಿ ಕ್ಯಾಂಪ್ ಮಾಡಿದರು ಮತ್ತು ಮಾರನೇ ದಿನ ಇನ್ನೊಂದು ಕಡೆ ಗೋಡೌನ್ ತನಿಖೆ ಮಾಡ ಬೇಕಾಗಿದ್ದುದರಿಂದ ಅಲ್ಲೇ ಇದ್ದರು. ಆ ದಿನ ರಾತ್ರಿಯೇ ಅರಕಲಗೂಡಿನಲ್ಲಿ ಮೊದಲು ಎಲ್ಲಿ ಸ್ಟಾಕು ಮಾಡಿದ್ದ ಭತ್ತ ಇತ್ತೋ ಅದನ್ನೇ ಪುನಃ ರಾತ್ರೋ ರಾತ್ರಿ ಲಾರಿಗಳಲ್ಲಿ ತುಂಬಿಸಿ ಇನ್ನೊಂದು ಕಡೆ ಇರುವ ಗೋಡೌನಿಗೆ ಸಾಗಿಸಿ ಅಸಿಸ್ಟೆಂಟು ರಿಜಿಸ್ಟ್ರಾರು ಇನ್‌ಸ್ಪೆಕ್ಷನ್ ಬರುವ ವೇಳೆಗೆ ಸರಿಯಾಗಿ ರೆಡಿ ಮಾಡಿದರು. ಇದನ್ನೇ ಅಲ್ಲಿಗೆ ಬಂದ ರಿಜಿಸ್ಟ್ರಾರರವರು ತನಿಖೆ ಮಾಡಿದರು. ಎಲ್ಲಾ ಸರಿಯಾಗಿದೆ ಎಂದು ಅವರ ಕಡೆಯಿಂದ ಆ ಸೊಸೈಟಿಗಳಲ್ಲಿರುವ ಅಧಿಕಾರಿಗಳು ಬರಿಸಿ ಬಿಟ್ಟರು. ಇದರ ವಿಚಾರ ನನಗೆ ಗೊತ್ತಾಯಿತು. ನಾನೇ ಆ ನಂತರ ಖುದ್ದಾಗಿ ಅಸಿಸ್ಟೆಂಟು ರಿಜಿಸ್ಟ್ರಾರವರ ಬಳಿ ಹೋಗಿ What is this nonsense ? You visit both the places on the same day. ಎಂದು ಹೇಳಿದ ಮೇಲೆ ಪುನಃ ಅಸಿಸ್ಟೆಂಟು ರಿಜಿಸ್ಟ್ರಾರ್‌ವರು ಬಂದು ಇವೆರಡು ಗೋಡೌನುಗಳನ್ನು ಮತ್ತೆ ತನಿಖೆ ನಡೆಸಿದಾಗ ಒಂದು ಗೋಡೌನಿನಲ್ಲಿ ಮಾತ್ರ ಭತ್ತ ಇತ್ತು. ಇನ್ನೊಂದು ಗೋಡೌನಿನಲ್ಲಿ ಏನೂ ಇಲ್ಲದೆ ಬರೀ ಖಾಲಿ ಗೋಡೌನು ಇತ್ತು ಎನ್ನುವುದು ಅವರಿಗೆ ತಿಳಿದುಬಂತು. ಇದರ ಬಗ್ಗೆ ಅಸಿಸ್ಟೆಂಟು ರಿಜಿಸ್ಟ್ರಾರ್‌ರವರು ಇಲ್ಲಿನ ಕಮಿಟಿ ಮ್ಯಾನೇಜು ಮೆಂಟಿನವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ದುರುಪಯೋಗವಾಗಿದೆ ಎಂದು 24-1-1968 ರಲ್ಲಿ ಸರಕಾರಕ್ಕೆ ತಿಳಿಸಿದ್ದರೂ ಇದುವರೆಗೆ ಸರಕಾರದವರು ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಈಗಾಗಲೇ ಅಸಿಸ್ಟೆಂಟು ರಿಜಿಸ್ಟ್ರಾರ್‌ರವರು ಕೂಡ ಇದರ ಬಗ್ಗೆ ವರದಿ ಕಳುಹಿಸಿದ್ದಾರೆ. ತದನಂತರ ಸರಕಾರದ ಮೇಲೆ ಇಲ್ಲಿರುವ ಕಾಂಗ್ರೆಸು ಭಕ್ತರ ಪ್ರಭಾವ ತಂದು ಇಲ್ಲಿರುವ ಸೊಸೈಟಿಯ ಕಾಂಗ್ರೆಸ್ಸು ಭಕ್ತರುಗಳನ್ನು ಉಳಿಸಬೇಕು ಎಂದು ಇದುವರೆಗೆ ಇಲ್ಲಿ ಯಾವ ತರಹದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೂ ಅವಕಾಶ ಕೊಡದೇ ಇದ್ದರೆ ಇದರಿಂದ ಸರಕಾರಕ್ಕೆ ಇರುವ ಬೆಲೆಯಾದರೂ ಏನು ಎಂದು ಇಲ್ಲಿ ಕೇಳಬೇಕಾಗಿದೆ. ಇದೇ ರೀತಿ ರಾಮನಗರದ ಒಂದು ಸೊಸೈಟಿ

(ಶ್ರೀ ಎಚ್. ಎನ್. ನಂಜೇಗೌಡ)

ಯಲ್ಲಿಯೂ ದುರುಪಯೋಗವಾಗಿದೆ ಎಂದು ಸರಕಾರಕ್ಕೆ ದೂರು ಬಂದಿದ್ದರೂ ಕೂಡ ಇಲ್ಲಿ ಇರುವ ಸೊಸೈಟಿಯವರು ಕಾಂಗ್ರೆಸಿನವರು ಆಗಿದ್ದು ಮತ್ತು ಎಂ. ಎಲ್. ಸಿ. ಆಗಿದ್ದಾರೆ ಎಂದು ಇವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಇಲ್ಲಿ ಸರಕಾರ ನಿಗದಿ ಮಾಡಿರುವ ರೇಟುಗಳಿಗಿಂತ ಹೆಚ್ಚು ರೇಟುಗಳನ್ನು ಕೊಟ್ಟು ಸರಕಾರ ಕೊಂಡು ಕೊಂಡು ಇದಕ್ಕೆ ರಾಷ್ಟ್ರ ರತೀತಿಗಳನ್ನೂ ಕೊಟ್ಟಿದ್ದಾರೆ. ಇವರ ಬಗ್ಗೆ ಸರಕಾರಕ್ಕೆ ದೂರುಗಳನ್ನು ಕೊಟ್ಟಿದ್ದರೂ ಸರಕಾರ ಇದುವರೆಗೆ ಯಾವ ಕಾರ್ಯ ಕ್ರಮವನ್ನೂ ತೆಗೆದುಕೊಳ್ಳದೇ ಇರುವುದನ್ನು ನೋಡಿದರೆ ಸರಕಾರ ಯಾವ ರೀತಿ ತಮ್ಮ ಪಕ್ಷದವರಿಗೆ ಪ್ರಾಧಾನ್ಯತೆ ಕೊಟ್ಟು ರಾಜ್ಯದ ಉನ್ನತಾಧಿಕಾರಿಗಳೂ ಹೀಗೆ ಕಾಲಹರಣ ಮಾಡುತ್ತಿರುವುದನ್ನು ನಾವು ನೋಡಬಹುದು. ಇದಕ್ಕೆ ನಾನು ಹೇಳುತ್ತಿರುವುದು ಇಂದು ನಮ್ಮ ರಾಜ್ಯದಲ್ಲಿ ಸಹಕಾರ ತತ್ವಕ್ಕೆ ಯಾವ ಬೆಲೆಯೂ ಇಲ್ಲದಂತಾಗಿದೆ. ಇಂತಹ ಸಹಕಾರ ಸಂಘಗಳನ್ನು ಮಾಡುವುದಕ್ಕೆ ಬದಲಾಗಿ ಇವನ್ನು ವಜಾ ಮಾಡುವುದು ಒಳ್ಳೆಯದು. ಹೊರದೇಶಗಳಲ್ಲಿ ಸಹಕಾರ ಸಂಘಗಳು ಬಹಳ ಚೆನ್ನಾಗಿ ಬೆಳೆಯುತ್ತಿವೆ ಎಂದರೆ ಬೇರೆ ರಾಷ್ಟ್ರಗಳಲ್ಲಿ ಸರಕಾರ ಸಂಘಗಳನ್ನು ಬಹಳ ಚೆನ್ನಾಗಿ ಬೆಳೆಸಿಕೊಂಡು ನಡೆಸಿಕೊಂಡು ಬರುತ್ತಿದ್ದಾರೆ. ಸಹಕಾರ ಸಂಘಗಳನ್ನು ಮಾಡುವುದೇತಕ್ಕೆ ಎಂದರೆ:

> Co-operatives are formed by people who are interested in a common objective to promote the interests of the common man without being exploited by middlemen and to get maximum benefit at minimum cost.

ಇದು ಆಗುತ್ತಿದೆಯೇ ಎನ್ನುವುದನ್ನು ಇಲ್ಲಿ ನೋಡಬೇಕು. ಇಲ್ಲಿ ನಾವು ಬರೀ ರೈತರನ್ನು ಶೋಷಣೆ ಮಾಡುವುದಕ್ಕೆ ಬದಲಾಗಿ ಮಧ್ಯವರ್ತಿ ಜನರಿಂದ ಆಗುವ ಕಷ್ಟಗಳನ್ನು ತಪ್ಪಿಸುವುದಕ್ಕಾಗಿ ಇಲ್ಲಿ ಯಾವ ಪ್ರಯತ್ನಗಳೂ ನಡೆಯುತ್ತಿಲ್ಲ. ಸಾಮಾನ್ಯ ಜನತೆಯ ಕಷ್ಟಗಳೇನು ಎನ್ನುವುದನ್ನು ತಿಳಿದುಕೊಂಡು ಅವರಿಗೆ ಅನುಕೂಲವಾಗುವಂತೆ ಮಾಡುವುದು ರೂಢಿಯಾಗಿದ್ದರೂ ಸರಕಾರ ಇಂತಹ ಜನತೆಗೆ ಅನುಕೂಲವಾಗುವಂತಹ ಯಾವ ಕಾರ್ಯಕ್ರಮಗಳನ್ನೂ ಮಾಡುತ್ತಿಲ್ಲ. ಆದರೆ ನಮ್ಮಲ್ಲಿ ಇಂದು ಏನು ಆಗುತ್ತಿದೆ ಎಂದರೆ ಎಲ್ಲಕ್ಕೂ ಸರಕಾರದವರೇ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಸರಕಾರವೇ ಎಲ್ಲಕ್ಕೂ ಫೈನಾನ್ಸ್ ಮಾಡುತ್ತದೆ ಮತ್ತು ಎಲ್ಲವನ್ನೂ ಕಂಟ್ರೋಲು ಮಾಡುತ್ತದೆ. ಪ್ರತಿಯೊಂದರಲ್ಲಿಯೂ ಅಫಿಷಿಯಲೈಸೇಷನ್, ಕಾಮನ್ ಮ್ಯಾನ್‌ನನ್ನು ಮಿಡ್ಲ್ ಮ್ಯಾನ್‌ಗಳವರು ಎಕ್ಸ್‌ಪ್ಲಾಯಿಟ್ ಮಾಡುತ್ತಿರುವುದರಿಂದ ಅವರಿಗೇನೂ ಅನುಕೂಲವಾಗುತ್ತಾ ಇಲ್ಲ. ಪ್ರತಿಯೊಂದರಲ್ಲೂ ಸರಕಾರದವರೇ ಇರುತ್ತಾರೆ. They are simply officialising everything. ಹೀಗಾಗಿ ಕಾಮನ್ ಮ್ಯಾನನ್ನು ಮುಂದಕ್ಕೆ ತರುತ್ತೇವೆ ಎಂದು ಹೇಳುವುದಕ್ಕೆ ಬದಲಾಗಿ ಸಾಮಾನ್ಯ ಜನತೆಯ ಶೋಷಣೆ ನಡೆಯುತ್ತಿದೆ. ಹೀಗೆ ಶೋಷಣೆ ಮಾಡುವುದರಿಂದ ಜನ ಜೀವನ ಅಸ್ತವ್ಯಸ್ತವಾಗುತ್ತದೆ. ಸಾಮಾನ್ಯ ಜನತೆಗೆ ಅನುಕೂಲವಾಗುವಂತಹ ಯಾವ ಏರ್ಪಾಡುಗಳನ್ನೂ ಸರಕಾರ ಕೈಗೊಳ್ಳುತ್ತಿಲ್ಲ. ಈಗ ಸಹಕಾರ ಸಂಘಗಳ ಹೆಸರಿನಲ್ಲಿ ಜನತೆಗೆ ಅನುಕೂಲ ಮಾಡುತ್ತೇವೆ ಎಂದು ಹೇಳುವ ರೂಪದಲ್ಲಿ ಜನರನ್ನು ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೆ. ಉದಾಹರಣೆಯಾಗಿ ಹೇಳಬೇಕು ಎಂದರೆ ಈಗ ಬ್ಯಾಂಕುಗಳಿಗೆ ಹಣ ಕೊಡುವಾಗ ಮೂರು ರೀತಿಯಾದ ಸಿಸ್ಟಂಗಳಿವೆ. ಮೊದಲು ರಿಸರ್ವ್ ಬ್ಯಾಂಕಿನವರು ಅಪೆಕ್ಸ್ ಬ್ಯಾಂಕಿಗೆ ಹಣ ಕೊಡುತ್ತಾರೆ. ಅನಂತರ ಅಪೆಕ್ಸ್ ಬ್ಯಾಂಕಿನವರು ಎಲ್ಲ ಡಿಸ್ಟ್ರಿಕ್ಟ್ ಬ್ಯಾಂಕುಗಳಿಗೂ ಹಣವನ್ನು ಹಂಚಿಕೆ ಮಾಡುತ್ತಾರೆ. ಈ ಬ್ಯಾಂಕುಗಳವರು ಅನಂತರ ಪ್ರೈಮರಿ ಕೋ ಅಪರೇಟೀವ್ ಸೊಸೈಟಿಗಳಿಗೆ ಹಂಚುತ್ತಾರೆ. ರಿಸರ್ವ್ ಬ್ಯಾಂಕಿನವರು ರೈತರಿಗೆ ಅನುಕೂಲವಾಗಲಿ ಎಂದು ಶೇಕಡಾ ನಾಲ್ಕರ ಬಡ್ಡಿ ದರದ ಮೇಲೆ ಸಾಲ ಕೊಡುತ್ತಾರೆ. ಕಮರ್ಷಿಯಲ್ ಬ್ಯಾಂಕಿನವರು ಸಾಲ ತೆಗೆದುಕೊಂಡು ಅದನ್ನು ಶೇಕಡಾ ಆರರ ಬಡ್ಡಿ ದರದಂತೆ ಖಾಸಗಿ ಜನರಿಗೆ ಕೊಡುವಾಗ ಶೇಕಡಾ 9 ರಿಂದ ಒಂಬತ್ತೂವರೆ ಬಡ್ಡಿ ದರದಂತೆ ಕೊಡತಕ್ಕದು ರೂಢಿಯಾಗಿದೆ. ಇದನ್ನು ಕಡಿಮೆ ಮಾಡುವುದಕ್ಕೆ ಆಗುತ್ತಿಲ್ಲ. ಇಂದು ರಿಸರ್ವ್ ಬ್ಯಾಂಕಿನವರಿಂದ ಶೇಕಡಾ ನಾಲ್ಕರಂತೆ ಸಾಲ ತೆಗೆದುಕೊಂಡರೂ ಸೊಸೈಟಿಗಳಿಗೆ ಸಹಾಯವಾಗಿ ಕೊಡುವಾಗ ಶೇಕಡಾ $7\frac{1}{2}$ ದರದ ಬಡ್ಡಿಯ ಮೇಲೆ ಕೊಡುತ್ತಾರೆ. ಇದರಲ್ಲಿ ಹತ್ತು ರೂಪಾಯಿಗಳು ಷೇರಿಗೆ ಹೋದರೆ ಉಳಿಕೆಯಾದ 90 ರೂಪಾಯಿಗಳಿಗೇ ಶೇಕಡಾ ಏಳುವರೆಯಂತೆ ಬಡ್ಡಿದರ ಬೀಳುತ್ತದೆ. ಇಲ್ಲವೇ ಶೇಕಡಾ ಎಂಟರವರೆಗೂ ಬಡ್ಡಿದರ ಬರುತ್ತದೆ. ರಿಸರ್ವ್ ಬ್ಯಾಂಕಿನವರೇನೋ ರೈತರಿಗೆ

ಅನುಕೂಲವಾಗಲಿ ಎಂದು ಶೇಕಡಾ ನಾಲ್ಕು ನಾಲ್ಕುವರೆಯಂತೆ ಬಡ್ಡಿ ಹಾಕಿ ಕೊಟ್ಟರೂ ಇದರಿಂದ ರೈತರಿಗೆ ಯೋಗ್ಯವಾದ ಬಡ್ಡಿದರ ಎಲ್ಲಿ ಬಂತು ಎನ್ನುವುದನ್ನು ಯೋಚನೆ ಮಾಡುತ್ತಿಲ್ಲ. ರಿಸರ್ವ್ ಬ್ಯಾಂಕಿನವರು ಕೊಡುವ ದರಕ್ಕಿಂತ ಎಕ್ಸ್‌ಟ್ರಾ ರೇಟು ಬೇರೆ ಬೀಳುತ್ತದೆ. ಕಮರ್ಷಿಯಲ್ ಬ್ಯಾಂಕಿನವರು ಮೂರು ಪರ್ಸೆಂಟ್ ಹೆಚ್ಚು ಮಾಡಿ ಕೊಡುತ್ತಾರೆ ಅದೇ ಖಾಸಗಿ ಜನಕ್ಕೆ ಬೇರೆ ಬ್ಯಾಂಕುಗಳವರು ಕೊಡುವಾಗ ಶೇಕಡ 9 ರಂತೆ ರೇಟು ಬರುತ್ತದೆ. ರೈತರಿಗೆ ಶೇಕಡಾ ನಾಲ್ಕರಷ್ಟು ಹೆಚ್ಚಿಗೆ ಬಡ್ಡಿದರ ಅವರ ತಲೆಯ ಮೇಲೆ ಬೀಳುತ್ತದೆ ಮತ್ತು ಈ ಸಹಕಾರ ಸಂಘಗಳಲ್ಲಿ ಬರೀ ಅಧಿಕಾರಿಗಳ ಒಂದು ಸಮೂಹವೇ ಜಾಸ್ತಿಯಾಗಿದೆ. ಇಂತಹ ಅಧಿಕಾರಿಗಳ ಸಮೂಹವನ್ನು ರಕ್ಷಣೆ ಮಾಡುವುದಕ್ಕಾಗಿ ಸಹಕಾರ ಸಂಘಗಳಿಗಾಗಿ ಹೋದ ವರ್ಷ ಸುಮಾರು 68 ಲಕ್ಷ ರೂಪಾಯಿಗಳಷ್ಟು ಹಣವನ್ನು ಸರಕಾರದವರು ಬರೀ ಅಧಿಕಾರಿಗಳ ಎಸ್ಟಾಬ್ಲಿಷ್‌ಮೆಂಟಿಗಾಗಿ ಖರ್ಚು ಮಾಡಿರತಕ್ಕದ್ದು ಇಲ್ಲಿ ನಮಗೆ ಕಂಡುಬರುತ್ತದೆ. ಇದು ಯಾವ ಪುರುಷಾರ್ಥಕ್ಕಾಗಿ ಎಂದು ಇಲ್ಲಿ ನಾನು ಕೇಳಬೇಕಾಗಿದೆ. ಕೋ-ಆಪರೇಷನ್‌ನಲ್ಲಿ ಮನಾಪಲೀಸ್‌ಗಳನ್ನು ಕ್ರಿಯೇಟ್ ಮಾಡುತ್ತಿದ್ದಾರೆ. ಇಲ್ಲಿ ಇಂಡಸ್ಟ್ರೀಸ್‌ಗಳಲ್ಲಿರುವಂತೆ ಲೈಸೆನ್ಸ್ ಕೊಡುವುದರಲ್ಲಿ, ಸ್ಟೋರೇಜು ಮಾಡುವುದರಲ್ಲಿ, ಡಿಸ್ಟ್ರಿಬ್ಯೂಷನ್ ಮಾಡುವುದರಲ್ಲಿ, ಸಪ್ಲೈ ಮತ್ತು ಕಂಟ್ರೋಲ್ ಮಾಡುವುದರಲ್ಲಿ The storage, distribution, supply and control things like Sugar and other things, ಹೀಗೆ ಮನಾಪಲಿ ಎಂದು ಎಲ್ಲೆಲ್ಲಿ ಕೊಟ್ಟಿದ್ದಾರೆಯೋ ಅಲ್ಲೆಲ್ಲಾ Incompetency, corruption, forgery and other offences which are punishable under the Indian Penal Code ಇದು ಆಗಲು ಸಾಧ್ಯವಾಗಿದೆ. ಇದಕ್ಕೆಲ್ಲಾ ಡಿಪಾರ್ಟ್‌ಮೆಂಟು ಇದೆ ಮತ್ತು ಈ ಇಲಾಖೆಯವರು ಎನ್‌ಕ್ವೈರಿ ಮಾಡಬೇಕು ಎಂದು ಮಾಡುತ್ತಾರೆ, ಅನಂತರ ಅಸಿಸ್ಟೆಂಟು ರಿಜಿಸ್ಟ್ರಾರ್‌ರವರ ಕೋರ್ಟು ಇದೆ. ಇಲ್ಲೆಲ್ಲಾ ಬಿಳಿಯ ಟೋಪಿಗಳವರನ್ನು ಕಾಪಾಡುವಂತಹ ಬಿಳಿ ಟೋಪಿಯ ಅಧಿಕಾರಿಗಳೇ ಇರುತ್ತಾರೆ. ಹೀಗೆ ಬಿಳೀ ಟೋಪಿಯವರನ್ನು ಕಾಪಾಡುವಂತಹ ಅಸಿಸ್ಟೆಂಟು ರಿಜಿಸ್ಟ್ರಾರ್‌ರವರೂ ಇರುವುದರಿಂದ ಇಲ್ಲಿ ಯಾವ ತರಹ ಕ್ರಮವನ್ನೂ ಕೈಗೊಳ್ಳುವುದಕ್ಕಾಗುವುದಿಲ್ಲ. ಫೋರ್ಜರಿ ಮಾಡಬಹುದು ಮತ್ತೊಂದು ಮಾಡಬಹುದು. ಈ ರೀತಿ ಈ ಇಲಾಖೆಯ ಕೆಲಸ ನಡೆದಿದೆ. ಇಂಡಿಯನ್ ಪಿನಲ್ ಕೋಡ್ ಪ್ರೊವಿಜನ್ ಪ್ರಕಾರ ಸೂಕ್ತ ಕ್ರಮ ತೆಗೆದುಕೊಂಡು ಒಳಗಿನ ಹುಳುಕನ್ನು ಹೊರಗೆ ತೆಗೆಯುವುದಕ್ಕೆ ಸಾಧ್ಯವಿದೆ. ಸಹಕಾರ ಸಂಘಗಳ ಮೂಲಕ ಮನಾಪಲಿ ಇಟ್ಟುಕೊಂಡಿರುವುದರಿಂದ ಸಕಾಲಕ್ಕೆ ರೈತರಿಗೆ ಬೀಜ ಗೊಬ್ಬರ ಮುಂತಾದ ಅನುಕೂಲತೆ ಸಿಕ್ಕುತ್ತಿಲ್ಲ ಮತ್ತು ಇದರಿಂದ ಅವರಿಗೆ ಬಹಳ ತೊಂದರೆಯಾಗಿದೆ. ಸಹಕಾರ ಸಂಘಗಳಿಂದ ಜನತೆಗೆ ಶೋಷಣೆಯಾಗುತ್ತಿದೆ. ಈ ಇಲಾಖೆಯಲ್ಲಿ ನಡೆಯುವ ಅಕ್ರಮಗಳ ಬಗ್ಗೆ ಬೇರೆ ವ್ಯವಸ್ಥೆ ಮೂಲಕ ವಿಚಾರಣೆ ಮಾಡಿಸಬೇಕು ಎಂದು ಹೇಳುತ್ತೇನೆ. ಈ ಸಹಕಾರ ಸಂಘಗಳ ಸ್ಥಾಪನೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ರೈತರು ಮೊದಲು ಸಾಲ ಪಡೆಯುತ್ತಿದ್ದ ಲೋಕಲ್ ಮನಿ ಲೆಂಡರ್ಸ್ ಇವರ ಕೊಲೆ ಮಾಡಿದ್ದೀರಿ. ಗುಡ್‌ವಿಲ್‌ದಿಂದ ಸಿಗತಕ್ಕಂಥ ಸಾಲ ರೈತರ ಕೈ ತಪ್ಪಿಸಿದ್ದೀರಿ. ಈ ಪರಿಸ್ಥಿತಿಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲದಾಗಿದೆ. ನಾವು ವಿರೋಧ ಪಕ್ಷದ ಸದಸ್ಯರು ಸಲಹೆ ಮಾಡುವುದನ್ನು ಸರಕಾರ ನಡೆಸಿಕೊಡುತ್ತಾರೆ ಎಂಬ ನಂಬಿಕೆಯಿಂದ ರಚನಾತ್ಮಕ ಸಲಹೆಗಳನ್ನು ಕೊಡುತ್ತೇವೆ. ಇದುವರೆಗೆ ಕೋ ಆಪರೇಟಿವ್ ಡಿಪಾರ್ಟ್‌ಮೆಂಟು ಪ್ರಾಮಾಣಿಕತೆಯಿಂದ ದಕ್ಷತೆಯಿಂದ ಕೆಲಸ ಮಾಡಿ ಗುಡ್‌ವಿಲ್ ನಂಬಿಕೆ ಸಂಪಾದನೆ ಮಾಡಿರುತ್ತದೆ. ಆದರೆ ಅದು ಈಗ ಇಲ್ಲವಾಗಿದೆ. ಆದುದರಿಂದ ಸಹಕಾರ ತತ್ವವನ್ನು ಜಾರಿಗೆ ತರಬೇಕು ಎಂಬ ಅಪೇಕ್ಷೆ ನಿಮಗೆ ಇದ್ದರೆ, ಈ ಮನಾಪಲಿಯನ್ನು ಮೊದಲು ಅಬಾಲಿಷ್ ಮಾಡಿ. ಇದನ್ನು ಮಾಡಿ ಇಲ್ಲದಿದ್ದರೆ ಸಹಕಾರ ಇಲಾಖೆಯನ್ನು ಅದಷ್ಟು ಜಾಗ್ರತೆ ತೆಗೆದುಹಾಕಬೇಕು. ಅಂದರೆ ಜನತೆಗೆ ಸಂಬಂಧ ಅನುಕೂಲವಾಗುತ್ತದೆ. ಹೀಗೆ ಮಾಡುವುದರಿಂದ ಸರಕಾರಕ್ಕೆ 68 ಲಕ್ಷ ರೂಪಾಯಿ ಖರ್ಚು ಮಾಡುವುದು ಉಳಿತಾಯವಾಗುತ್ತದೆ ಮತ್ತು ಜನರಲ್ಲಿಯೂ ನಂಬಿಕೆ ಬರುತ್ತದೆ.

"It will save many crores of rupees to the Government also ... It will help to create individual self-confidence. Let them function on a competitive basis."

ಸಹಕಾರ ಸಂಘಗಳು ವಾಲಂಟರಿ ಆರ್ಗನೈಜೇಷನ್‌ಗಳು ಆಗಬೇಕು ಅಂದರೆ ಅನುಕೂಲವಾಗುತ್ತದೆ. ಅಫಿಲಿಯೇಷನ್ ತಪ್ಪಿಸಿದರೆ ಸೆಲ್ಫ್ ರಿಸ್ಪೆಕ್ಟ್ ಸೆಲ್ಫ್ ಕಾನ್‌ಫಿಡೆನ್ಸ್ ಹುಟ್ಟುವುದಕ್ಕೆ ಅನುಕೂಲವಾಗುತ್ತದೆ. ಕಾಮನ್ ಇಂಟರೆಸ್ಟ್ ಇರತಕ್ಕವರು ಒಂದು ಸಂಘ ಮಾಡಿಕೊಳ್ಳುತ್ತಾರೆ. ಇಂದು ಏನಾಗಿದೆ ಅಂದರೆ ಇಂಟರೆಸ್ಟ್ ಇಲ್ಲದೇ ಇರತಕ್ಕಂಥವರು ರೈತರ ಪರವಾಗಿ ಅಲ್ಲಿಯ

(ಶ್ರೀ ಎಚ್. ಎನ್. ನಂಜೇಗೌಡ)

ರಾಯರುಗಳು ಇಂದು ಅಲ್ಲಿ ಕೂತಿರುತ್ತಾರೆ. ಈ ಸಂಘಗಳಲ್ಲಿ ಇರತಕ್ಕವರು ಅಂದರೆ ಬ್ಲಾಕ್ ಮಾರ್ಕೆಟ್ ಮಾಡುವವರು ರಾಜಕೀಯ ಪುಢಾರಿಗಳು ಅಲ್ಲಿ ಕೂತುಕೊಳ್ಳುತ್ತಾರೆ. ಇವರು ಸರಕಾರ ದಿಂದ ದೊರೆಯುವ ಸಬ್‌ಸೀಡೀ ಮೆಂಟೆನನ್ಸ ಗ್ರ್ಯಾಂಟ ತಂದು ಅದನ್ನು ತಾವೆ ಇಟ್ಟುಕೊಳ್ಳುತ್ತಾರೆ. ಆದುದರಿಂದ ಸಬ್‌ಸೀಡಿ ಮತ್ತು ಮೆಂಟೆನನ್ಸ ಗ್ರ್ಯಾಂಟ್ ನೀಡತಕ್ಕಂಥಾದ್ದನ್ನು ಮೊದಲು ನಿಲ್ಲಿಸ ಬೇಕು. ಅಂದರೆ ಇದರಲ್ಲಿ ಬ್ಲಾಕ್ ಮಾರ್ಕೆಟ್ ಮಾಡುವುದನ್ನು ತಪ್ಪಿಸಲು ಅವಕಾಶವಾಶವಾಗು ತ್ತದೆ.

ಇನ್ನು ರಿಜರ್ವ ಬ್ಯಾಂಕಿನಿಂದ ಪಡೆಯುವ ಹಣವನ್ನು ಡಿಸ್ಟ್ರಿಕ್ಟ್ ಬ್ಯಾಂಕುಗಳ ಮುಖಾಂತರ ಹಣ ಒದಗಿಸುವುದರಲ್ಲಿ ತೊಂದರೆ ಇದೆ. ಇದು ಒಂದು ಡುಯಲ್ ಸಿಸ್ಟಂ ಆಗಿದೆ. ಆದುರಿಂದ ಬ್ಯಾಂಕಿನಿಂದ ನೇರವಾಗಿ ಹಣ ಕೊಡುವುದಾದರೆ ಬಡ್ಡಿ ದರ ಕಡಿಮೆ ಮಾಡಿ ಕೊಡಬಹುದು. ಇಲ್ಲದಿದ್ದರೆ ಇದೊಂದು ದಾಕ್ಷಿಣ್ಯದ ವ್ಯವಹಾರವಾಗಿ ಸರಿಯಾಗಿ ಸಾಲ ಕೊಡುವುದಿಲ್ಲ ಮತ್ತು ಹಣ ಸರಿಯಾಗಿ ವಸೂಲಾತಿಯಾಗುವುದಿಲ್ಲ ಹಾಗು ಇದರಲ್ಲಿ ರಾಜಕೀಯ ಬರುತ್ತದೆ. ಭಾರತ ಸೇವಕ ಸಮಾಜದ ಬಗ್ಗೆ ಶ್ರೀ ನಂದಾಜೀಯವರು ಹೇಳಿದ ಹಾಗೆ ರೈಟ್ ಆಫ್ ಮಾಡತಕ್ಕಂಥಾದ್ದು ಕಂಡು ಬರತ್ತದೆ ಎಂದು ಎಚ್ಚರಿಕೆ ಕೊಡುತ್ತೇನೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಒಂದು ದಿನ ನೀವು ರಾಜೀನಾಮೆ ಕೊಡತಕ್ಕ ಸಂದರ್ಭ ಬರುತ್ತದೆ. ಯಾಕಂದರೆ ನೂರಾರು ಕಡೆ ಕೇಂದ್ರ ಸರಕಾರ ರೈಟ್ ಆಫ್ ಕೊಡುತ್ತದೆ. ಆದರೆ ಈ ಎಲ್ಲ ನಷ್ಟವು ಬಡ ಬೋರೇ ಗೌಡನ ತಲೆಯ ಮೇಲೆ ಟ್ಯಾಕ್ಸ ಮೂಲಕ ಪುನಃ ಬರುತ್ತದೆ. ಈ ಸಾಲ ಪಡೆಯುತಕ್ಕಂಥಾದ್ದು ಬಹಳ ಕಷ್ಟವಾಗಿದೆ, ಇದರಿಂದ ತೊಂದರೆಯಾಗಿದೆ ಎಂದು ಸರಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ಮುಂದೆ ರೈಟ್ ಆಫ್ ಮಾಡತಕ್ಕಂಥ ಪರಿಸ್ಥಿತಿ ಬರುತ್ತದೆ, ಅದುದರಿಂದ ಇದರ ಬಗ್ಗೆ ಕೂಡಲೇ ಎಚ್ಚರಿಕೆ ವಹಿಸಬೇಕು.

ಇನ್ನು ರೂರಲ್ ಡೆವಲಪ್ಮೆಂಟ್ ವಿಷಯ ಒಂದು ಹೇಳುತ್ತೇನೆ. 1950 –51 ನೇ ಇಸವಿ ಯಲ್ಲಿ ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲಪ್‌ಮೆಂಟ್ 238 ಲಕ್ಷ ರೂ. ಖರ್ಚು ಆಗಿದೆ; 1965-66ನೇ ಇಸವಿಯಲ್ಲಿ 3556 ಲಕ್ಷ ರೂ. ಖರ್ಚು ಆಗಿದೆ. ಸ್ಟೇಟ್ ಲೆವೆಲ್ಲಿನಲ್ಲಿ 2080 ಲಕ್ಷ ರೂಪಾಯಿ, ಈಗ ಅದು 9763 ಲಕ್ಷ ರೂ. ಆಗಿದೆ. ಕೇಂದ್ರದ ಮಟ್ಟದಲ್ಲಿ ಇದು 15 ಪಟ್ಟು ಜೆಚ್ಚಿದೆ. ಆದರೆ ಸಂಸ್ಥಾನದ ಮಟ್ಟದಲ್ಲಿ ಇದು 4.7 ಹೆಚ್ಚಿದೆ. ರೂರಲ್ ಡೆವಲಪ್ಮೆಂಟ್ ಕಾರ್ಯಕ್ರಮಕ್ಕೆ ದಿಲ್ಲಿಯಲ್ಲಿ ಹಣ ಹೆಚ್ಚಾಗಿ ಖರ್ಚಾಗುತ್ತಿದೆ. ಹಳ್ಳಿಗಳಲ್ಲಿ ಹಣ ಖರ್ಚಾಗ ಬೇಕಾ ದುದು ದಿಲ್ಲಿಯಲ್ಲಿ ಹಣ ಖರ್ಚಾಗುತ್ತಿದೆ. ಕೇವಲ ಅಧಿಕಾಗಳಿಗೋಸ್ಕರ ಟಾಪ್ ಹೇವಿ ಎಕ್ಸಪೆಂಡಿ ಚರ್ ಇರುವುದು ಕಂಡು ಬರುತ್ತದೆ ಗ್ರಾಮಾಂತರ ಪ್ರದೇಶದಲ್ಲಿ ಹಣ ಖರ್ಚಾಗಬೇಕಾದುದು ದಿಲ್ಲಿಯಲ್ಲಿ ಖರ್ಚು ಆಗುತ್ತಿರುವುದು ನಿಜವಾಗಿಯೂ ನಾಚಿಕೆಗೇಡು. ಅಲ್ಲಿ 15 ಪಟ್ಟು ಹೆಚ್ಚಿಸಿ ಹಳ್ಳಿ ಗಳಿಗೆ 4 ಪಟ್ಟು ಹಚ್ಚಿಸಿರುವುದು ನಿಜವಾಗಿಯೂ ಸಂತೋಷಪಡತಕ್ಕಂಥ ವಿಚಾರವಲ್ಲ. ಇದು ನಾಚಿಕೆ ಪಡತಕ್ಕಂಥ ವಿಚಾರ. ಪ್ರಾಮಾಣಿಕತನದಿಂದ ರೂರಲ್ ಡೆವಲಪಮೆಂಟ್ ಮಾಡುತ್ತೇವೆ ಅಂದರೆ ಅಧಿಕಾರಿಗಳ ಸಂಖ್ಯೆ ಹೆಚ್ಚಿಸಬಾರದು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧಿಕಾರಿಗಳ ಸಂಖ್ಯೆ ಜಾಸ್ತಿ ಮಾಡ ಬಾರದು. ತಲೆಗಿಂತ ಹೇಟದ ಭಾರ ಜಾಸ್ತಿಯಾಗಿದೆ. ಆದುದರಿಂದ ಅಧಿಕಾರಿಗಳ ಬಗ್ಗೆ ಖರ್ಚು ಕಡಿಮೆ ಮಾಡಿ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ರೈತರಿಗೆ ಏನೇನು ಆಗ ಬೇಕು ಎಬುದನ್ನು ದೃಷ್ಟಿಯಲ್ಲಿ ಇಟ್ಟು ಕೊಳ್ಳಬೇಕು ಎಂದು ಸರಕಾರಕ್ಕೆ ಸೂಚನೆ ಕೊಡುತ್ತೇನೆ.

ಇನ್ನು ಎ.ಇ.ಎಸ್. ರಾಷ್ಟ್ರೀಯ ವಿಸ್ತೀರ್ಣಾ ಯೋಜನೆಗೆ ಸಂಬಂಧಪಟ್ಟ ವೆಚ್ಚ 1,80,62,000 ರೂಪಾಯಿ ಇಟ್ಟುಕೊಂಡು ಬಂದಿದ್ದೀರಿ. ಮೂರು ಕೋಟಿ ಚಿಲ್ಲರೆ ಅಥವಾ ಎರಡೂವರೆ ಕೋಟಿ ರೂಪಾಯಿ ಅಧಿಕಾರಿಗಳಿಗೋಸ್ಕರ ಖರ್ಚಾಗುತ್ತದೆ. ಇದರಿಂದ ದೇಶಕ್ಕೆ ಏನು ಒಳ್ಳೆಯದು ಆಗುತ್ತದೆ ? ಹಳ್ಳಿಗಳಲ್ಲಿ ಜನರು ಉಪವಾಸ ಇರುವಾಗ ಅಧಿಕಾರಿಗಳು ಸಂಬಳ ಪಡೆದು ಜೋಬಿಗೆ ಹಾಕಿಕೊಂಡು ತಿರುಗಾಡುತ್ತಿದ್ದಾರೆ. ಆದುದರಿಂದ ಎ.ಇ.ಎಸ್.ನ್ನು ಮೊದಲು ರದ್ದುಪಡಿಸಬೇಕು. ಎ.ಇ.ಎಸ್.ನ್ನು ಅಬಾಲಿಷ್‌ಮಾಡಿ ಎಂದು ಸೂಚನೆ ಕೊಡು ತ್ತೇನೆ.

ತಾಲ್ಲೂಕ ಮಂಡಲಿ ಸದಸ್ಯರು ಟಿಕೆಟ್ ಲೆಸ್ಸ್ ಟ್ರಾವಲರ್ಸ್ ತರಹ ಮುಂದುವರೆಯುತ್ತಿದ್ದಾರೆ. ಓಟು ಕೊಟ್ಟು ಚುನಾಯಿಸಿದ ಸದಸ್ಯರು ನಾಲ್ಕು ವರ್ಷಗಳ ಅವಧಿಯವರೆಗೆ ಇರಬೇಕಾಗಿದ್ದವರು ಐದು ವರ್ಷವಾಯಿತು. ಎಂಟು ವರ್ಷವಾಯಿತು ಇನ್ನೂ ಮುಂದುವರಿಯುತ್ತಿದ್ದಾರೆ, ರೀ-ಎಲೆಕ್ಷನ್

ಮಾಡಿಲ್ಲ. ಈ ರೀತಿ ಮುಂದುವರೆಯುವುದು ಇದೊಂದು ಅತ್ಯಾಚಾರ, ಇದು ಹಗಲು ದರೋಡೆ ಆಗಿರುವುದರಿಂದ ಸಾಮಾನ್ಯ ಜನರಿಗೆ ಇದರಲ್ಲಿ ನಂಬಿಕೆ ಹೋಗಿಬಿಟ್ಟಿದೆ. ತಾಲ್ಲೂಕ ಬೋರ್ಡ್ ಸಂಸ್ಥೆಗಳ ಬಗ್ಗೆ ಗೌರವ ಹುಟ್ಟಸಬೇಕಾದರೆ, ಪ್ರಜಾಪ್ರಭುತ್ವ ತತ್ವ ನ್ಯಾಯವಾಗಿ ಉಳಿಸುವುದಾದರೆ, ಜನರಲ್ಲಿ ಧೈರ್ಯ ನಂಬಿಕೆ ಬರಬೇಕಾದರೆ, ಕೆಲವು ಪದ್ಧತಿಗಳನ್ನು ರೂಢಿಸಿಕೊಂಡು ಅದರಂತೆ ನಡೆದುಕೊಂಡು ಬರಬೇಕು. ಈ ಮಾನ್ಯ ಸಭೆಗೆ ಚುನಾವಣೆ ನಡೆದಿದೆ. ಆದರೆ ತಾಲ್ಲೂಕ ಬೋರ್ಡ್ ಚುನಾವಣೆ ನಡೆಸದೇ ಇರುವುದಕ್ಕೆ ಕಾರಣ ಏನು ?

1-00 P.M.

ನಾವು ದೂರುತ್ತಿದ್ದಾಗ್ಯೂ ಚುನಾವಣೆಗಳನ್ನು ನಡೆಸದೆ ಕಾಲ ಕಳೆಯುತ್ತಿದ್ದೀರಿ. ರಾಜ್ಯದಲ್ಲಿರುವ ಬಹು ಭಾಗದ ತಾಲ್ಲೂಕು ಬೋರ್ಡ್‌ಗಳಲ್ಲಿ ನಿಮ್ಮ ಪಕ್ಷದವರೇ ಅಧ್ಯಕ್ಷರಾಗಿದ್ದಾರೆ. ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಎರಡು ಸಾವಿರ ರೂಪಾಯಿ ಸಂಭಾವನೆಯನ್ನು ಕೊಡುತ್ತೀರಿ. ಮುಂದೆ ಬರುವ ಲೋಕಲ್ ಬೋರ್ಡ್ಸ್ ಚುನಾವಣೆಗಳಲ್ಲಿ ನಿಮ್ಮ ಪಕ್ಷದವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೀರಿ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಏನೂ ಕೆಲಸ ಆಗುತ್ತಿಲ್ಲ. ಅದನ್ನು ನಿಮ್ಮ ಪಕ್ಷಕ್ಕೆ ಪರೋಕ್ಷವಾಗಿ ಪ್ರಚಾರ ಮಾಡುವುದಕ್ಕೆ ಇಟ್ಟುಕೊಂಡಿದ್ದೀರಿ ಎನ್ನುವ ಅಭಿಪ್ರಾಯ ಜನಗಳಲ್ಲಿ ಬರುತ್ತಿದೆ. ಚುನಾವಣೆಗಳನ್ನು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ನಡೆಸದೆ ಹಿಂದೆ ಚುನಾಯಿತರಾದವರನ್ನೇ ಎಂಟು ಹತ್ತು ವರ್ಷಗಳಾದರೂ ಇಟ್ಟುಕೊಂಡಿರುವುದರಲ್ಲಿ ಅರ್ಥವಿಲ್ಲ. ಜನತೆ ಬಹಳ ಬೇಸತ್ತಿದೆ. ಮರು ಚುನಾವಣೆಗಳನ್ನು ಬೇಗ ನಡೆಸುವ ವ್ಯವಸ್ಥೆಯನ್ನು ಮಾಡಿ. ಇಲ್ಲದೆ ಹೋದರೆ ತಾಲ್ಲೂಕು ಬೋರ್ಡ್ ಸದಸ್ಯರನ್ನೂ ಅಧ್ಯಕ್ಷರನ್ನು ಅವರು ಹೋದ ಕಡೆ ಜನ ಹೊಡೆಸಿಯಾರು. ಮೊದಲು ಚುನಾವಣೆಗಳನ್ನು ನಡೆಸಿ. ಇದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು ಚುನಾವಣೆಗಳನ್ನು ಬೇಗ ನಡೆಸದೆ ಹೋದರೆ ಅದು ನಿಮಗೆ ಗೌರವ ತರುವುದಿಲ್ಲವೆಂದು ಹೇಳುತ್ತೇನೆ. ತಾಲ್ಲೂಕು ಬೋರ್ಡ್‌ಗಳಲ್ಲಿರುವವರು ಅಲ್ಲಿರುವುದಕ್ಕೆ ನ್ಯಾಯವಾಗಿ ಅರ್ಹರಲ್ಲದ ಪ್ರಯುಕ್ತ ಚುನಾವಣೆಗಳನ್ನು ನಡೆಸಬೇಕು. ನನಗೆ ಇನ್ನು ವೇಳೆ ಇಲ್ಲದ್ದರಿಂದ ನನ್ನ ಮಾತನ್ನು ಇಲ್ಲಿಗೇ ಮುಗಿಸುತ್ತಿದ್ದೇನೆ ಸ್ವಾಮಿ.

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ (ಹಡಗಲಿ).—ಮಾನ್ಯ ಸಭಾಪತಿಗಳೇ, ಸಹಕಾರ, ಗ್ರಾಮಾಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥನೆ ಮಾಡುತ್ತ ಕೆಲವು ಅಂಶಗಳನ್ನು ಹೇಳಬಯಸುತ್ತೇನೆ. ನಿಜವಾಗಿಯೂ ನಮ್ಮ ಜನಜೀವನ ಹಾಗೂ ಸಹಕಾರಿ ಆಡಳಿತ ಮತ್ತು ಸೂತ್ರಗಳು ಇವುಗಳನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳು ನಿಜವಾಗಿಯೂ ಸಮರ್ಥರು ಎಂದು ಹೇಳಬಹುದು. ಗ್ರಾಮಾಭಿವೃದ್ಧಿಯಂತಹ ಮಹತ್ವದ ಕಾರ್ಯದಲ್ಲಿ ಸಹಕಾರ, ಗ್ರಾಮಾಭಿವೃದ್ಧಿ ಹಾಗೂ ಪಂಚಾಯಿತಿರಾಜ್ಯ ಈ ಮೂರು ಖಾತೆಗಳು ಗ್ರಾಮೀಣ ಜನತೆಯ ಅಭಿವೃದ್ಧಿಯ ರಕ್ತನಾಳಗಳಂತೆ ಇವೆ, ಶ್ವಾಸನಾಳಗಳಂತೆ ಇವೆ. ಈ ಮಹತ್ತರವಾದ ಖಾತೆಗಳನ್ನು ವಹಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳಾದ ನಾಡಗೌಡರು ಅಷ್ಟೇ ಸಮರ್ಥರಿದ್ದಾರೆ, ಜನಪ್ರಿಯರಾಗಿದ್ದಾರೆ, ಗ್ರಾಮೀಣ ಜನತೆಯ ಅಭಿವೃದ್ಧಿ ಬಗ್ಗೆ ಅತ್ಯಂತ ಕಳಕಳಿಯಿಂದ ಕೂಡಿರುವಂಥ ಸರಳ ಜೀವಿಗಳಿದ್ದಾರೆ. ಇಂಥ ಸಚಿವರಿರುವುದು ಗ್ರಾಮಾಂತರ ಜನತೆಯ ಭಾಗ್ಯ ಎಂದರೆ ತಪ್ಪಾಗಲಾರದು.

ಸಹಕಾರ ರಂಗದಲ್ಲಿ ಸಾಕಷ್ಟು ಮಟ್ಟಿಗೆ ಪ್ರಗತಿಯಾಗಿದೆ, ತೃಪ್ತಿಕರವಾಗಿ ಪ್ರಗತಿಯಾಗಿದೆ. ಸಹಕಾರ ಎನ್ನತಕ್ಕುದು ನಾನು ಹೇಳಿದ ಹಾಗೆ ನಮ್ಮ ಜನಜೀವನದ ಎಲ್ಲ ರಂಗಗಳನ್ನೂ ವ್ಯಾಪಿಸಿದೆ, ಸರ್ವವ್ಯಾಪಿಯಾಗಿದೆ. ಜನಜೀವನದ ಆಗುಹೋಗುಗಳನ್ನು ನಿರ್ವಹಿಸತಕ್ಕ ಎಲ್ಲ ವಿಷಯಗಳಲ್ಲಿಯೂ ಸಹಕಾರಿ ರಂಗ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಿದೆ. ವ್ಯವಸಾಯಕ್ಕೆ ಸಂಬಂಧಿಸಿದಂತೆ ಸಹಕಾರ ಸಂಸ್ಥೆಗಳು ಸ್ಥಾಪನೆಯಾಗಿ ನಡೆಯುತ್ತಿವೆ ಮತ್ತು ಪ್ರಗತಿಪರವಾಗಿ ಮುಂದುವರಿಯುತ್ತಿವೆ. ವ್ಯವಸಾಯದ ವಿಚಾರವಾಗಲೀ, ಕೈಗಾರಿಕೆ ವಿಚಾರವಾಗಲೀ, ಯಾವುದೇ ಕ್ಷೇತ್ರವಾಗಲೀ ಎಲ್ಲ ರಂಗಗಳಲ್ಲಿಯೂ ಸಹಕಾರ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಕಾರ್ಮಿಕರು, ರೈತರು, ಹರಿಜನ ಗಿರಿಜನರ ಉದ್ಧಾರ, ಮೀನುಗಾರಿಕೆ, ತೋಟಗಾರಿಕೆ ಸರ್ಕಾರಿ ನೌಕರರು, ವಿದ್ಯಾರ್ಥಿಗಳ ರಂಗ ಹೀಗೆ ಎಲ್ಲಕಡೆಗಳಲ್ಲಿಯೂ ಸಹಕಾರ ಸಂಸ್ಥೆಗಳು ಸ್ಥಾಪನೆಯಾಗಿ ಅವರವರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಬೇಕಾದ ಅನುಕೂಲತೆಗಳನ್ನು ಬೆಳೆಸಿಕೊಳ್ಳುವುದಕ್ಕೆ ಸಹಾಯಕವಾಗಿದೆ. ಇಷ್ಟೆಲ್ಲ ಪ್ರಗತಿಪರವಾಗಿ, ಪ್ರಬುದ್ಧಮಾನವಾಗಿ, ಬೃಹದಾಕಾರವಾಗಿ ಈ ಸಹಕಾರ ಕ್ಷೇತ್ರ ಬೆಳೆಯುತ್ತಿದೆ. ಭದ್ರವಾದ ಬುನಾದಿಯ ಮೇಲೆ, ಭವ್ಯವಾದ ರೀತಿಯಲ್ಲಿ ಸಹಕಾರ ಸಂಸ್ಥೆಗಳು ಬೆಳೆಯುತ್ತಿವೆ. ವರ್ಷೇ ವರ್ಷೇ

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಸಹಕಾರಿ ಕ್ಷೇತ್ರದಲ್ಲಿ ಇಷ್ಟು ಮಹತ್ತರವಾಗಿ ಬೆಳೆಯುತ್ತಿರುವುದು ನಮಗೆ ಕಂಡು ಬರುತ್ತದೆ. ಅದನ್ನು ಅಂಕಿ ಅಂಶಗಳಿಂದ ಪುಷ್ಟೀಕರಿಸಬಹುದಾದರೆ ಸಹಕಾರ ಸಂಸ್ಥೆಗಳ ಸಂಖ್ಯೆ ವರ್ಷೇ ವರ್ಷೇ ಎಷ್ಟರಮಟ್ಟಿಗೆ ಬೆಳೆಯುತ್ತಿವೆ ಎನ್ನುವುದನ್ನು ನೋಡುವುದಾದರೆ ಮೂರನೆ ಪಂಚವಾರ್ಷಿಕ ಯೋಜನೆಯ ಆರಂಭದಲ್ಲಿ 14,871 ಸಹಕಾರ ಸಂಸ್ಥೆಗಳಿದ್ದುದು ಇಂದು 19,502 ಅದಕ್ಕೂ ಹೆಚ್ಚು ಇವೆ; ಮತ್ತು ಇನ್ನೂ ಬೆಳೆಯತಕ್ಕ ರೀತಿಯಲ್ಲಿವೆ. ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರ ಸಂಖ್ಯೆ 24 ಲಕ್ಷದಷ್ಟಿದ್ದುದು ಈವಾಗ 36–38 ಲಕ್ಷದಷ್ಟು ಸದಸ್ಯತ್ವ ಬೆಳೆದಿವೆ. ಸಹಕಾರಿ ಸಂಸ್ಥೆಗಳಲ್ಲಿ ತೊಡಗಿಸಿರತಕ್ಕ ಬಂಡವಾಳ 102 ಕೋಟಿ ರೂಪಾಯಿಗಳಿಂದ 220 ಕೋಟಿ ರೂಪಾಯಿಗಳಿಗೆ ಏರಿದೆ. ಹೀಗೆ ನಾನಾ ಮುಖವಾಗಿ ಸಹಕಾರಿ ಸಂಸ್ಥೆಗಳು ಸಹಕಾರಿ ರಂಗದಲ್ಲಿ ವಿಸ್ತಾರವಾಗುತ್ತಿವೆ. ಇದರ ಜೊತೆಗೇ ಅದರ ಕಾರ್ಯವ್ಯಾಪ್ತಿಯೂ ಬೆಳೆಯುತ್ತಿದೆ. ಇಷ್ಟೇ ಪ್ರಾಮುಖ್ಯವಾಗಿ ಸಹಕಾರ ಸಂಸ್ಥೆಗಳ ಆರ್ಥಿಕ ಸ್ಥಿತಿಯೂ ಸಹ ಭದ್ರವಾಗಿ, ಸಮರ್ಥವಾಗಿ ಬೆಳೆಯಲಿಕ್ಕೆ ವ್ಯವಸ್ಥೆಯಾಗಿದೆ. ಉದಾಹರಣೆಗೆ ಹೇಳುವುದಾದರೆ ವ್ಯವಸಾಯ ಕ್ಷೇತ್ರದಲ್ಲಿ ಸಹಕಾರ ಸಂಘಗಳಿಗೆ ವಹಿಸಿರತಕ್ಕ ಹಣ 1961 ರಲ್ಲಿ ಎರಡು ಕೋಟಿ ಚಿಲ್ಲರೆ ಇದ್ದುದು ಈಗ ಅದರ ಹತ್ತು ಪಟ್ಟು ಎಂದರೆ 20 ಕೋಟಿಯವರೆಗೂ ಏರಿ ಇಷ್ಟು ಹಣವನ್ನು ವ್ಯವಸಾಯಾಭಿವೃದ್ಧಿಗಾಗಿ ಪೂರೈಕೆ ಮಾಡಿದ್ದಾರೆ. ಹೀಗೆ ನಾನಾ ವಿಧವಾಗಿ ಸಹಕಾರ ಕ್ಷೇತ್ರ ಸಮರ್ಥವಾಗಿ ಬೆಳೆಯುತ್ತಿದೆ. ಇದು ನಾವು ಬಹಳ ಸಂತೋಷಪಡಬೇಕಾದ ವಿಚಾರ. ಏಂದರೆ ನಮ್ಮ ಗ್ರಾಮೀಣ ಜನತೆಯ ಮುಖ್ಯ ಕಸಬಾಗಿರತಕ್ಕ, ನಮ್ಮ ದೇಶದ ಜನತೆಯ ಜೀವನೋಪಾಯವಾಗಿರತಕ್ಕ ವ್ಯವಸಾಯದ ಅಭಿವೃದ್ಧಿಗಾಗಿ ಸಹಕಾರಿ ಕ್ಷೇತ್ರ, ಸಹಕಾರಿ ರಂಗ ಇತ್ತೀಚೆಗೆ ಹೆಚ್ಚು ಗಮನ ಕೊಟ್ಟಿದೆ. ಇದಕ್ಕಾಗಿ ಸಹಕಾರಿ ಖಾತೆಯನ್ನು, ಸರ್ಕಾರವನ್ನು ಸ್ತೋತ್ರ ಮಾಡಬೇಕು.

ಮುಂಚೆ ಬರೀ ವ್ಯಾಪಾರಸ್ಥರಿಗೆ ಅಥವಾ ಯಾವುದೋ ಕೆಲವರಿಗೆ, ಜೀವನದಲ್ಲಿ ಗಣ್ಯ ಸ್ಥಾನವನ್ನು ಪಡೆದವರಿಗೆ ಮಾತ್ರ ಅವಕಾಶವಿದ್ದ ಸಹಕಾರಿ ರಂಗ ಈ ದಿವಸ ಗ್ರಾಮೀಣ ಜನತೆಯನ್ನು, ಸರ್ವ ಸಾಮಾನ್ಯ ಜನತೆಯನ್ನು ಮುಟ್ಟಿದೆ. ಈ ಜನರ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಹಕಾರಿ ರಂಗದಲ್ಲಿ ಸಂಘಗಳನ್ನು ನಿರ್ಮಾಣಮಾಡಿ ಅದಕ್ಕೆ ಬೇಕಾಗಿರತಕ್ಕ ಹಣವನ್ನು ಪೂರೈಕೆ ಮಾಡುತ್ತಿರುವುದು ಕಂಡುಬರುತ್ತದೆ. ಈಗ ನಮ್ಮ ದೇಶದಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಹೊಸದಾಗಿ ಏನೇನು ಅಭಿವೃದ್ಧಿಯಾಗಿದೆ ಅದನ್ನು ಗಮನಿಸಿದರೆ, ವ್ಯವಸಾಯದ ಪ್ರಗತಿಯಲ್ಲಿ ಮಹತ್ತರವಾದ ಕ್ರಾಂತಿಯಾಗಿದೆ ಎಂದರೆ ತಪ್ಪಾಗಲಾರದು. ಅದಕ್ಕೆ ಅನುಗುಣವಾಗಿ ಯೋಜನೆಗಳ ಉಪಯೋಗ ಜನತೆಗೆ ಸರಿಯಾಗಿ ಆಗಬೇಕು, ಆಹಾರದ ಉತ್ಪಾದನೆಯನ್ನು ಹೆಚ್ಚಿಸಬೇಕು ಎನ್ನುವ ದೃಷ್ಟಿಯಿಂದ ನಾನಾ ವಿಧವಾದ ಯೋಜನೆಗಳನ್ನು ಸಹಕಾರಿ ಕ್ಷೇತ್ರದಲ್ಲಿ ಯೋಜಿಸಲಾಗಿದೆ. ಅದರಲ್ಲಿ ಕೆಲವು ವಿಶೇಷ ಯೋಜನೆಗಳು ಎಂದರೆ ಅಗ್ರಿಕಲ್ಚರಲ್ ರೀ ಫೈನಾನ್ಸಿಂಗ್ ಕಾರ್ಪೋರೇಷನ್ ಸಹಾಯದಿಂದ ಹತ್ತು ಕೋಟಿ ರೂಪಾಯಿಗಳನ್ನು ಮೊದಲ ಕಂತಾಗಿ ಪಡೆದುಕೊಂಡು, ತುಂಗಭದ್ರ ಎಡದಂಡೆ ನಾಲೆ, ಬಲದಂಡೆ ನಾಲೆಗಳ ಅಭಿವೃದ್ಧಿಗಾಗಿ, ಅಡಕೆಯನ್ನು ಬೆಳೆಸುವುದಕ್ಕೆ, ರೆಕ್ಲಮೇಷನ್ ಅಂಡ್ ಡೆವಲಪ್‌ಮೆಂಟ್ ಆಫ್ ಏರಿಯಾ ಅಂಡರ್ ತುಂಗಭದ್ರ ಪ್ರಾಜೆಕ್ಟ್ ಅಂಡ್ ಭದ್ರ ಪ್ರಾಜೆಕ್ಟ್, ಹೀಗೆ ನಾನಾ ವಿಧವಾಗಿರತಕ್ಕ ವಿಶೇಷ ಯೋಜನೆಗಳನ್ನು ಕೈಕೊಂಡಿದ್ದಾರೆ. ಇದರ ಜೊತೆಗೆ ಇನ್ನೂ ಉಪಯುಕ್ತವಾಗಿರತಕ್ಕ ಹಣ್ಣುಗಳನ್ನು ಬೆಳೆಸತಕ್ಕ, ಕಾಯಿಪಲ್ಲೆ ಬೆಳೆಸತಕ್ಕ, ಜನರಿಗೆ ಅತಿ ಉಪಯುಕ್ತವಾದ ತೋಟಗಾರಿಕೆ ಉದ್ಯಮಕ್ಕೆ ಸಹ ಅಭಿವೃದ್ಧಿ ಯೋಜನೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಈ ದೃಷ್ಟಿಯಿಂದ ನಾವು ನೋಡಿದರೆ ಸಹಕಾರಿಕ್ಷೇತ್ರ ನಾನಾ ಮುಖವಾಗಿ ರೈತರಿಗೆ ಆದಾಯವನ್ನು ಕ್ಷಿಪ್ರವಾಗಿ ಒದಗಿಸಿಕೊಡತಕ್ಕ ಮಹತ್ತರವಾದ ಕಾರ್ಯವನ್ನು ಮಾಡುವುದು ನಮಗೆ ಕಂಡುಬರುತ್ತಿದೆ. ಆದರೆ ಮಾನ್ಯ ಸದಸ್ಯರಾದ ನಂಜೇ ಗೌಡರು ಮಾತನಾಡುತ್ತ ಸಹಕಾರಿ ಖಾತೆಯ ಅವಶ್ಯಕತೆಯೇ ಇಲ್ಲವೇನೋ ಎನ್ನುವಷ್ಟುಮಟ್ಟಿಗೆ ಹೇಳಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ಲೋಪದೋಷಗಳಿರಬಹುದು. ಲೋಪದೋಷಗಳಿಲ್ಲದೆ ಇರತಕ್ಕದು ಯಾವುದೂ ಇಲ್ಲ. ಬಹುಶಃ ದೇವ ನಿರ್ಮಾಣದಲ್ಲಿ ಸಹ ಇಲ್ಲ. ನಿಸರ್ಗದತ್ತವಾಗಿರುವುದರಲ್ಲಿ ಲೋಪದೋಷಗಳಿವೆ ಎಂದು ಹೇಳುವಾಗ ಮಾನವನು ಮಾಡುವ ಕೆಲಸಗಳಲ್ಲಿ ಲೋಪದೋಷಗಳಿದ್ದೇ ಇರುತ್ತವೆ. ಅದರಲ್ಲೂ ಸರ್ಕಾರಿ ಕ್ಷೇತ್ರದ ಸೇವೆಗೆ ಜವಾಬ್ದಾರಿ ಕೇವಲ ಸರಕಾರಕ್ಕೆ ಮಾತ್ರವಲ್ಲ; ಪ್ರತಿಯೊಂದನ್ನೂ ಸರಕಾರವೇ ನಡೆಸಬೇಕೆಂದು ನಿರೀಕ್ಷೆ ಮಾಡುವುದು ಸರಿಯಲ್ಲ. ಈ ದಿವಸ ಸಹಕಾರ ಸಂಘಗಳನ್ನು ಬೆಳೆಸುವ ಬಗ್ಗೆ ಜವಾಬ್ದಾರಿ ಸರಕಾರಕ್ಕಿಂತ ಹೆಚ್ಚಾಗಿ ಜನರಿಗೆ ಇದೆ ಎಂಬುದನ್ನು ಸಭೆಯ ಗಮನಕ್ಕೆ ತರುತ್ತೇನೆ. ಈ ದೃಷ್ಟಿಯಿಂದ ಪರಿಶೀಲನೆ ಮಾಡಿದರೆ ಜನರ ಪಾತ್ರವಿರುವ

ಸಂಸ್ಥೆಗಳಲ್ಲಿ ಕೆಲವು ಲೋಪದೋಷಗಳಿದ್ದರೂ ಅದು ಜನರ ತಪ್ಪೇ ಹೊರತು ಸರಕಾರದ ತಪ್ಪಲ್ಲ. ಹಾಗೆಂದ ಮಾತ್ರಕ್ಕೇ ಸರಕಾರ ಕಣ್ಣುಮುಚ್ಚಿ ಕೊಡಬೇಕೆಂದು ಹೇಳುತ್ತಿಲ್ಲ, ಸರಕಾರ ತನ್ನ ವಿವೇಚನೆಯನ್ನುಪಯೋಗಿಸಿ ಕ್ರಮ ಕೈಕೊಳ್ಳಬಾರದೆಂದು ಹೇಳುವುದಿಲ್ಲ. ಸರಕಾರ ತಕ್ಷಣ ಸೂಕ್ತ ಕ್ರಮ ಕೈಕೊಳ್ಳಬೇಕು. ಲೋಪದೋಷವಿರುವುದಕ್ಕೆ ಸಾಧ್ಯವಿದೆ. ಕೆಲವು ಕಡೆ ಪ್ರಾಮುಖ್ಯವಾಗಿ ಸಹಕಾರಿ ಸಂಸ್ಥೆಗಳು ಅವಶ್ಯವಾಗಿದ್ದರೂ ಕೂಡ ಕೆಲವು ಕಡೆ ಸಾಮಾಜಿಕ ಧುರೀಣರು ಅವನ್ನು ದುರುಪಯೋಗ ಪಡಿಸಿಕೊಂಡಿರುವ ಸಂದರ್ಭಗಳಿವೆ. ಇದನ್ನು ಸರಕಾರದ ಗಮನಕ್ಕೆ ತರುತ್ತೇನೆ. ಎಷ್ಟೋ ರೀತಿ ಸರಕಾರದ ಹಣ ದುರುಪಯೋಗವಾಗಿರುವುದುಂಟು. ಇವರ ಬಗ್ಗೆ ಕೂಡ ಲಕ್ಷವಿಟ್ಟು ನಷ್ಟವಾಗಿರುವ ಸಂದರ್ಭಗಳಲ್ಲಿ, ದುರುಪಯೋಗ ಮಾಡಿರುವಾಗ ಮತ್ತು ಅವ್ಯವಹಾರ ನಡೆದಿರುವ ಸಂದರ್ಭಗಳಲ್ಲಿ ಆ ಬಗ್ಗೆ ಕ್ರಮ ಕೈಕೊಂಡಿರುವುದು ಕಂಡು ಬರುತ್ತದೆ. ಹಾಗೆ ಮಾಡಿ ಅನೇಕ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿದ್ದಾರೆ. ಅನೇಕ ಕೇಸುಗಳನ್ನು ಹಾಕಿದ್ದಾರೆ. ಹೀಗೆ ತಕ್ಕ ಕ್ರಮ ಕೈಕೊಳ್ಳುತ್ತಿರುವುದು ಕಂಡುಬರುತ್ತದೆ. ಇದರ ಜೊತೆಗೆ ವ್ಯವಸಾಯಾಭಿವೃದ್ಧಿಗೆ ಸಹಕಾರ ಸಂಘಗಳು ಪಂಪುಸೆಟ್ಟುಗಳನ್ನೊದಗಿಸಿವೆ, ಸುಮಾರು 40 ಸಾವಿರ ಕೊಡಬೇಕೆಂದು ಯೋಚಿಸಿ ಅದನ್ನು ಕಾರ್ಯಗತ ಮಾಡಿದ್ದಾರೆ. ಜಿಲ್ಲಾ ಸೆಂಟ್ರಲ್ ಬ್ಯಾಂಕು ಪಂಪುಸೆಟ್ಟುಗಳನ್ನು ಕೊಡುವ ಯೋಜನೆಯನ್ನಿಟ್ಟುಕೊಂಡಿದ್ದು ಅದು ಕಾರ್ಯಗತವಾಗಿದೆ. ಈ ಸಂದರ್ಭದಲ್ಲಿ ಸರಕಾರದ ಗಮನಕ್ಕೆ ಒಂದು ವಿಚಾರ ತರುತ್ತೇನೆ. ಪಂಪು ಸೆಟ್ಟುಗಳನ್ನು ವಿತರಣೆ ಮಾಡುವಾಗ, ಬಾವಿಗಳಿಗೆ ಸಾಲ ಕೊಡುವಾಗ ಮೊದಲು ಎನ್. ಇ. ಎಸ್‌ನಲ್ಲಿ ಲಿಬರಲೈಜ್ಡ್ ಸ್ಕೀಂ ಇತ್ತು. ಈಗ ಈ ಕೆಲಸವನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಲಾಗಿದೆ. ಆದರೆ ತಾಲ್ಲೂಕು ಬೋರ್ಡುಗಳಲ್ಲಿ ಮೊದಲು ಎನ್. ಇ. ಎಸ್‌ನಲ್ಲಿ ಕೊಡುತ್ತಿದ್ದಂತೆ ಕ್ಷಿಪ್ರದಲ್ಲಿ ಕೊಡುವುದಕ್ಕಾಗಿಲ್ಲ. ಇರುವ ಮನೋ ತೊಡಕಿನಿಂದಲೋ ಅಥವಾ ಕಾರ್ಯದಕ್ಷತೆಯಿಲ್ಲದೆಯೋ ತಾಲ್ಲೂಕು ಬೋರ್ಡಿಗೆ ವಹಿಸಿರುವ ಕೆಲಸ ಯಶಸ್ವಿಯಾಗಿ ನಡೆಯುತ್ತಿಲ್ಲ. ಜನರಿಗೆ ಬೇಕಾದ ಬಾವಿಗಳ, ಸಾಲ ಅಥವಾ ಪಂಪುಸೆಟ್ಟುಗಳು ಮುಂತಾದುವನ್ನು ಹಂಚುವ ಕೆಲಸದಲ್ಲಿ ತಾಲ್ಲೂಕು ಬೋರ್ಡಿನಲ್ಲಿ ಪ್ರಗತಿಯಾಗಿಲ್ಲ. ಇದಕ್ಕೆ ಗಮನ ಕೊಡಬೇಕು. ಹೆಚ್ಚು ತ್ವರೆಯಿಂದ ತಾಲ್ಲೂಕು ಬೋರ್ಡುಗಳು ಕೆಲಸ ನಿರ್ವಹಿಸುವಂತೆ ನೋಡಿಕೊಳ್ಳಬೇಕು. ಸರಕಾರದವರು ಈ ಬಗ್ಗೆ ಹಣ ಪೂರೈಕೆ ಮಾಡಿದ್ದರೂ ಸರಿಯಾಗಿ ಅದು ಪೂರೈಕೆಯಾಗಿ ತುರ್ತಾಗಿ ಜನರಿಗೆ ದೊರೆಯುತ್ತಿಲ್ಲದಿರುವುದರಿಂದ ವಿಳಂಬವನ್ನು ತಪ್ಪಿಸಬೇಕು, ಅನಾವಶ್ಯಕವಾಗಿ ತೊಂದರೆಯಾಗುವುದನ್ನು ನಿವಾರಣೆ ಮಾಡಬೇಕು ಎಂದು ಸೂಚಿಸುತ್ತೇನೆ. ಹಣದ ದುರುಪಯೋಗ ಅಥವಾ ಅವ್ಯವಹಾರ ನಡೆಯುತ್ತದೆಯೆಂದು ಹೇಳಿದರು. ಜನರಲ್ಲಿ ಒಳ್ಳೆಯವರೂ ಕೆಟ್ಟವರೂ ಇಬ್ಬರೂ ಇದ್ದಾರೆ. ಬಿಳಿಯ ಟೋಪಿಯನ್ನು ಹಾಕುವವರು ಎಲ್ಲಾ ಪಕ್ಷಗಳಲ್ಲೂ ಇದ್ದಾರೆ, ಒಂದೇ ಪಕ್ಷದವರು ಹಾಕುತ್ತಿಲ್ಲ. ನಾನು ಹೇಳುವುದಾದರೆ ಇತರ ಪಕ್ಷಗಳವರು ಕಾಂಗ್ರೆಸ್ ಪಕ್ಷವನ್ನು ದೂರಲು ಅದರಮೇಲೆ ಆರೋಪಗಳನ್ನು ಹೊರಿಸುತ್ತಿದ್ದಾರೆ, ಸಟನೆ ಮಾಡುತ್ತಿದ್ದಾರೆ. ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಇಂಥ ಉದಾಹರಣೆಗಳು ಬೇಕಾದಷ್ಟಿವೆ. ಸರಕಾರದ ಹೆಸರು ಹೇಳಿಕೊಂಡು ತಮ್ಮ ಸ್ವಂತ ಲಾಭ ಮಾಡಿಕೊಳ್ಳುವವರು ಕಾಂಗ್ರೆಸ್ಸಿನಲ್ಲಿ ಮಾತ್ರವಲ್ಲದೆ ಇತರ ಪಕ್ಷಗಳಲ್ಲೂ ಇದ್ದಾರೆ ಅಂಥವರಿಂದ ಅನೇಕ ದುರ್ವ್ಯವಹಾರಗಳು ನಡೆಯುತ್ತಿವೆ. ಬಳ್ಳಾರಿ ಜಿಲ್ಲೆಯಲ್ಲಿ ಮಲ್ಲೇಶ್ವರ ಪ್ರೋಸೆಸಿಂಗ್ ಸೊಸೈಟಿ ಎಂಬುದಿದೆ, ಅದರಲ್ಲಿ ಕಾಂಗ್ರೆಸ್ಸಿನವರಿಲ್ಲ, ಅದರಿಂದ ಸುಮಾರು 14-15 ಲಕ್ಷ ರೂಪಾಯಿಗಳ ಬಾಕಿ ಬರಬೇಕಾಗಿದೆ. ಹಡಗಲಿ ಸೊಸೈಟಿಯಿಂದಲೂ ಬರಬೇಕಾಗಿದೆ. ಈ ಬಗ್ಗೆ ಆಡಿಟ್ ವರದಿಯಲ್ಲಿ ಆಕ್ಷೇಪಣೆಯಿದೆ. ಇದನ್ನು ವಸೂಲು ಮಾಡುವುದಕ್ಕೆ ತಕ್ಷಣ ಕ್ರಮ ಕೈಕೊಳ್ಳಬೇಕೆಂದು ಡೆಪ್ಯುಟಿ ಕಮಿಷನರು ಹೇಳಿ ಸುಮಾರು ಎರಡು ವರ್ಷವಾಗಿದೆ. ಈ ಸಂಬಂಧದಲ್ಲಿ ಒಂದು ದಿನ ಕೂಡ ನಿಧಾನವಾಗಬಾರದು. ಈ ಹಣ ವಸೂಲು ಮಾಡಲು ತಕ್ಷಣ ಕ್ರಮ ಕೈಕೊಳ್ಳಬೇಕು. ಇದೇ ರೀತಿಯಾಗಿ ಒಂದು ಮಾರ್ಕೆಟಿಂಗ್ ಸೊಸೈಟಿಯಲ್ಲೂ ಆಗಿದೆ. ಅಲ್ಲಿ ಕೂಡ ಕಾಂಗ್ರೆಸ್ ಪಕ್ಷದವರಿಲ್ಲ. ಕೊಟ್ಟೂರು ಸೊಸೈಟಿಯವರು ಲೇವಿ ಜೋಳವನ್ನು ಮಾರಿಕೊಂಡಿದ್ದಾರೆ. ಇದರ ಬಗ್ಗೆ ಕ್ರಮ ಕೈಕೊಳ್ಳಬೇಕು.

ಸಹಕಾರಿ ರಂಗವದು ದೊಡ್ಡವರ ಜಾತ್ರೆ
ಅದಕ್ಕೆ ದೊರೆಯುವ ಹಣವು ಅಕ್ಷಯದ ಪಾತ್ರೆ
ಸಣ್ಣವರು ಓಡಾಡಿ ಮಾಡಿದರು ಯಾತ್ರೆ
ಸಿಗಲಿಲ್ಲ ಅವರಿಗೆ ಜಡ್ಡಿಗೂ ಮಾತ್ರೆ.

ಈ ರೀತಿ ಅವ್ಯವಹಾರಗಳಿಗೆ ಅವಕಾಶವಾಗುವುದನ್ನು ತಪ್ಪಿಸಲು ಸಚಿವರು ತಕ್ಷಣ ಸೂಕ್ತ ಕ್ರಮ ಕೈಕೊಳ್ಳಬೇಕು ಎಂದು ವಿಜ್ಞಾಪನೆ ಮಾಡುತ್ತೇನೆ. ಬೇಕಾದಷ್ಟು ಹಣ ಕೊಡಲಿ. ಅವ್ಯವಹಾರ ನಡೆದಿದ್ದರೆ ಅದರ ಬಗ್ಗೆ ತಕ್ಷಣ ಕ್ರಮ ಕೈಕೊಳ್ಳಬೇಕು ಎಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ.

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಇನ್ನು ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಕೆಲವು ಮಾತು ಹೇಳಬಯಸುತ್ತೇನೆ. ಎನ್ ಇ ಎಸ್ ಯೋಜನೆಯಿಂದ ಬೇಕಾದಷ್ಟು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಾಗಿದೆ. ಇಂದು ಗ್ರಾಮಾಂತರಗಳಲ್ಲಿ ಅಭಿವೃದ್ಧಿಯೇನಾದರೂ ಆಗಿದ್ದರೆ ಅದು ಎನ್ ಇ ಎಸ್ ಮತ್ತು ತಾಲ್ಲೂಕು ಬೋರ್ಡುಗಳಿಂದ ಆಗಿರುವುದು. ಈ ಸಂಸ್ಥೆಗಳಿಲ್ಲದಿದ್ದರೆ ಅಭಿವೃದ್ಧಿಯಾಗುತ್ತಿರಲಿಲ್ಲ ಎಂದು ನನಗನ್ನಿಸುತ್ತದೆ. ನಾನೂ ಕೂಡ ಕೆಲವು ಕಾಲ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದೆ. ಎನ್ ಇ ಎಸ್ ಮತ್ತು ತಾಲ್ಲೂಕು ಬೋರ್ಡಿನ ಕೆಲಸವನ್ನು ಕ್ರೋಢೀಕರಿಸಿ ಎನ್. ಇ. ಎಸ್.ಗೆ ಬರುವ ಹಣವನ್ನೂ ಕೂಡ ತಾಲ್ಲೂಕು ಬೋರ್ಡಿಗೆ ಕೊಟ್ಟು ಅದಕ್ಕೆ ಹೆಚ್ಚಿನ ಅಧಿಕಾರ ಕೊಟ್ಟು ಹೆಚ್ಚಿನ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನೊಂದು, ಒಬ್ಬರೇ ವ್ಯಕ್ತಿ ತಾಲ್ಲೂಕು ಬೋರ್ಡು ಅಧ್ಯಕ್ಷ ಮತ್ತು ಶಾಸಕ ಆಗಿರಲು ಈಗ ಅವಕಾಶವಿರುವುದು ಸರಿಯಲ್ಲ. ಅದಕ್ಕಾಗಿ ನಾನು ತಾಲ್ಲೂಕು ಬೋರ್ಡಿನ ಅಧ್ಯಕ್ಷತೆಗೆ ರಾಜೀನಾಮೆ ಕೊಟ್ಟೆ. ಕಾಯಿದೆಯಲ್ಲಿ ಎರಡು ಕಡೆ ಇರಲು ಅವಕಾಶವಿರಬಾರದು. ಆದುದರಿಂದ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿಯೂ ಮತ್ತು ಶಾಸಕನಾಗಿಯೂ ಒಬ್ಬರೇ ಇರಲು ಅವಕಾಶವಿಲ್ಲದಂತೆ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕು. ಹಾಗೆ ಮಾಡದಿದ್ದರೆ ಎರಡು ಕಡೆಗೂ ಸಂಪೂರ್ಣವಾಗಿ ಲಕ್ಷ ಕೊಡಲು ಅವಕಾಶವಾಗದಿರಬಹುದು. ತಾಲ್ಲೂಕು ಬೋರ್ಡಿನ ಚುನಾವಣೆಯನ್ನು ಆದಷ್ಟು ಬೇಗ ಮಾಡಬೇಕು. ಈಗ ಪಂಚಾಯತ್‌ರಾಜ್ ಬಿಲ್ಲು ಕೋಲ್ಡ್ ಸ್ಟೋರೇಜಿನಲ್ಲಿದೆ, ಹಾಗಾಗಬಾರದಾಗಿತ್ತು. ಆ ಬಿಲ್ಲನ್ನು ಈ ಸಭೆಯಲ್ಲಿ ಮಂಡಿಸಬೇಕು, ತೀವ್ರವಾಗಿ ಅದಕ್ಕೆ ಅಂಗೀಕಾರ ಪಡೆಯಬೇಕು. ಹೊಸ ಕಾಯಿದೆಯಂತೆ ತಾಲ್ಲೂಕು ಮತ್ತು ಗ್ರಾಮಗಳಲ್ಲಿ ಹೊಸ ಅಧಿಕಾರ ಘಟಕಗಳನ್ನು ನಿರ್ಮಾಣ ಮಾಡಬೇಕು, ಅವುಗಳಿಗೆ ಹೆಚ್ಚಿನ ಹಣ, ಅಧಿಕಾರ ಕೊಟ್ಟು ಗ್ರಾಮಾಂತರಗಳ ಮಟ್ಟ ಬಹಳ ಇಳಿದಿರುವುದನ್ನು ಸರಿಪಡಿಸಬೇಕು, ಸ್ಥಳೀಯ ಸಂಸ್ಥೆಗಳ ಮೂಲಕ ಅಲ್ಲಿನ ಕೆಲಸ ನಡೆಯುವಂತೆ ಅವಕಾಶ ಮಾಡಬೇಕು. ಪ್ರತಿಯೊಂದು ಕೆಲಸಕ್ಕೂ ಕೂಡ ಎಂ.ಎಲ್.ಎಗಳು ಅಥವಾ ಮಂತ್ರಿಗಳು ಪ್ರವೇಶ ಮಾಡದೇ ಗ್ರಾಮಸ್ಥರಿಗೆ ಆ ಅನುಕೂಲ ಸಿಕ್ಕುವ ವ್ಯವಸ್ಥೆ ಆಗಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಇನ್ನು ಎನ್.ಇ.ಎಸ್.ನಲ್ಲಿ ಹೊಸದಾಗಿ ಸಿಬ್ಬಂದಿ ವರ್ಗದವರು ಇದ್ದಾರಲ್ಲಾ—ಎಕ್ಸ್‌ಟೆನ್‌ಷನ್ ಆಫೀಸರ್ಸ್ ಅವರ ಮುಂದಿನ ಭವಿಷ್ಯ ಏನು, ಅವರ ಸ್ಥಿತಿಗತಿ ಏನು ಎಂಬುದು ನಿರ್ಧಾರವಾಗಿಲ್ಲ. ಕೈಗಾರಿಕಾ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಇದ್ದಾರೆ, ಅವರ ಭವಿಷ್ಯ ನಿರ್ಧಾರವಾಗಿಲ್ಲ. ಅಂತಹವರ ವಿಷಯದಲ್ಲಿ ಯಾವ ಒಂದು ಸಮಸ್ಯೆ ಇದೆ ಅದನ್ನು ಕೂಡಲೇ ಪರಿಹರಿಸಬೇಕು, ಅವರಿಗೆ ಸರಿಯಾದ ಒಂದು ಮಾರ್ಗದರ್ಶನ ಕೊಡಬೇಕೆಂದು ಹೇಳಿ ಇಲ್ಲಿಯವರೆಗೂ ಮಾತನಾಡಲಿಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The discusssion will continue on Monday. Now, I will take up the next item on the agenda. The next item is the call attention by Sriyuths Sayanak and Krishnan. The Hon'ble Minister for Health and Housing is not here. He has taken my permission and therefore, this will be taken up later. So, the next is call attention notice by M. Bommai.

CALLING ATTENTION TO A MATTER OF URGENT PUBLIC IMPORTANCE.

Re : Failure of Groundnut and Chillies crop in Kundagol Taluk

Sri S. R. BOMMAI (Kundagol).—I call the attention of Hon'ble Minister for Agriculture and Education. to the failure of ground-nut and chillies etc., in Kundagol Taluk.

SRI K. V. SHANKARA GOWDA (Minister for Agriculture and Education).—Sir, With reference to the call attention notice, I beg to state :

Although the seasonal conditions started well in the beginning of monsoon season there was long break during the months of August and September and again in October. As a result Groundnut crop suffered considerably during the flowering and fruiting stage for want of moisture. Chilly crop also has suffered to a certain extent in this Taluka. The crop of wheat was also reported to be below normal. It is true that heavy rainfall occurred in 3rd week of February in the villages mentioned. Cotton, Toor and Safflower were standing in the field at the time. Wheat was in threshing floor, fodder was still to be stacked. It is reported that there is damage to the standing crops to the extent of 10 to 20 per cent. Fooder which was lying outside has not been completely spoiled but quality would be affected to certain extent. The exact assessment could be made and if necessary, scarcity works could be taken up in the areas if declared as scarcity affected villages.

MR. DEPUTY SPEAKER.—Next, half-an-hour discussion regarding land revenue and surcharge. Mr. Devegowda.

HALF AN HOUR DISCUSSION ARISING OUT OF REPLIES TO STARRED QUESTION NO. 79 TAKEN ON 2nd MARCH 1968 *re*: REMISION OF LAND REVENUE AND SURCHARGE.

† ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಪತಿಗಳೇ, ಇದೇ ಸಭೆಯಲ್ಲಿ 7ನೇ ಪಟ್ಟಿಯಲ್ಲಿ 79ನೇ ಸ್ಟಾರ್ಡ್ ಪ್ರಶ್ನೆಗೆ ರೆವಿನ್ಯೂ ಮಂತ್ರಿಗಳು ಕೊಟ್ಟಂಥ ಉತ್ತರದ ಮೇಲೆ ಕೆಲವೊಂದು ಅನುಮಾನವನ್ನು ಪರಿಹರಿಸಿಕೊಳ್ಳಲು ಈ ಅರ್ಧಗಂಟೆ ಕಾಲದ ಚರ್ಚೆಯನ್ನು ಪ್ರಾರಂಭಿಸಬೇಕೆಂದು ಹೇಳಿ ತಮಗೆ ಮನವಿ ಮಾಡಿಕೊಂಡದ್ದರ ಮೇಲೆ ತಾವು ಅವಕಾಶ ಕೊಟ್ಟಿದ್ದೀರಿ. ಇದರಲ್ಲಿರತಕ್ಕ ಅನುಮಾನವಾದರೂ ಇ ್ಟ. 1962-63, 63-64, 64-65, 65-66 66-67, ನೇ ಸಾಲಿನಲ್ಲಿ ತಾವು ರಾಜ್ಯದಾದ್ಯಂತ ಎಷ್ಟೆಷ್ಟು ಭೂಕಂದಾಯದ ರಿಮಿಷನ್ ಮತ್ತು ಸರ್ಚಾರ್ಜ್ ವಜಾಮಾಡಿದ್ದೀರಿ ಎಂಬುದನ್ನು ಸ್ಟಾರ್ಡ್ ಪ್ರಶ್ನೆಯ ಮುಖೇನ ಸರ್ಕಾರದಿಂದ ಉತ್ತರ ಪಡೆಯಲು ಪ್ರಯತ್ನ ಪಟ್ಟಂತಹ ಕಾಲದಲ್ಲಿ ಮಂತ್ರಿಗಳು ಒದಗಿಸಿರತಕ್ಕ ಉತ್ತರ ಏನಿದೆ ಅದರ ಪ್ರಕಾರ ಮೈಸೂರು ರಾಜ್ಯದಲ್ಲಿ ಸುಮಾರು 62 ಲಕ್ಷದ ನಾಲ್ಕುನೂರಾ 82 ರೂಪಾಯಿ ಲ್ಯಾಂಡ್ ರೆವಿನ್ಯೂ ಮನ್ನಾ ಮಾಡಿದ್ದೀರಿ. ಅದರಲ್ಲಿ ಹಳೇ ಮೈಸೂರಿನಲ್ಲಿ 11 ಲಕ್ಷದ 64 ಸಾವಿರದ 881 ರೂಪಾಯಿಗಳನ್ನು ತಾವು ಮಾಫಿ ಮಾಡಿದ್ದೀರಿ. ಅದರಲ್ಲಿ ಹಾಸನ ಜಿಲ್ಲೆಯಲ್ಲಿ ಮನ್ನಾ ಮಾಡಿರುವುದು ಎಷ್ಟು ಎಂದರೆ 552 ರೂಪಾಯಿ. ಹಾಗೆಯೇ ಸರ್ಚಾರ್ಜ್ ಇಡೀ ರಾಜ್ಯದಲ್ಲಿ 9 ಲಕ್ಷದ 40 ಸಾವಿರದ 91 ರೂಪಾಯಿ ಮಾಫಿ ಮಾಡಿದ್ದೀರಿ, ಅದರಲ್ಲಿ ಹಳೇ ಮೈಸೂರಿನಲ್ಲಿ 1 ಲಕ್ಷದ 32 ಸಾವಿರದ 723 ರೂಪಾಯಿಗಳನ್ನು ಮಾಫಿ ಮಾಡಿದ್ದೀರಿ, ಮತ್ತು ಅದರಲ್ಲಿ ಹಾಸನ ಜಿಲ್ಲೆಯಲ್ಲಿ 552 ರೂಪಾಯಿಗಳನ್ನು ಮಾಫಿ ಮಾಡಲಾಗಿದೆ ಎಂದು ಉತ್ತರ ಕೊಡತಕ್ಕ ಕಾಲದಲ್ಲಿ ತಿಳಿಸಿದ್ದೀರಿ. ಸಮನ್ವಯವಾದ ಕಾನೂನು ಇರಲಿಲ್ಲ. ಮತ್ತು ಹಳೇ ಮೈಸೂರಿನಲ್ಲಿ ಭೂಕಂದಾಯವನ್ನು ರದ್ದು ಮಾಡತಕದ್ದರ ಬಗ್ಗೆ ಕ್ಷಾಮ ಪೀಡಿತ ಪ್ರದೇಶವಾದರೆ ಅದಕ್ಕೆ ಒಂದು ಸೌಲತ್ತನ್ನು ಕೊಡಬೇಕಾದರೆ ಕಾನೂನಿನ ಅಡಚಣೆ ಇದ್ದುದರಿಂದ ಆ ಒಂದು ಬೆನಿಫಿಟ್‌ನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ ಎಂದು ತಿಳಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಯಾವ ಅಪಾದನೆಯನ್ನೂ ಮಾಡುತ್ತಿಲ್ಲ, ಏಕೆಂದರೆ ತಾವು ಬೆನಿಫಿಟ್ ಕೊಡಬೇಕೆಂಬ ಉದ್ದೇಶದಿಂದಲೇ ಪುನರ್ವಿಮರ್ಶಿತವಾದ ರೂಲ್ಸ್‌ನ್ನು ಮಾಡುತ್ತಾ ಇದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಆದರೆ ಆಡಳಿತ ನಿರ್ವಹಣೆ ಮಾಡತಕ್ಕ ಕಾಲದಲ್ಲಿ ಆಧಾರ ರಹಿತವಾದ

(ಶ್ರೀ ಎಚ್. ಡಿ. ದೇವೇಗೌಡ)

ಉತ್ತರವನ್ನು ಕೊಟ್ಟಿದ್ದೀರಿ ಎಂಬುದರ ಕಡೆಗೆ ತಮ್ಮ ಗಮನವನ್ನು ಸೆಳೆಯುತ್ತಾ ಇದ್ದೇನೆ. ಹಳೇ ಮೈಸೂರಿನ, ಚಿಕ್ಕಮಗಳೂರು, ಶಿವಮೊಗ್ಗ, ಮಂಡ್ಯ, ಮೈಸೂರು, ಕೋಲಾರ ಈ ಜಿಲ್ಲೆಗಳಿಗೆ ಯಾವ ಯಾವ ಸೌಲತ್ತುಗಳನ್ನು ಕೊಡುವುದಕ್ಕೆ ಅವಕಾಶವಾಯಿತೋ ಅದೇ ಕಾನೂನಿನ ಚೌಕಟ್ಟಿನೊಳಗೆ ಹಾಸನ ಜಿಲ್ಲೆಗೂ ಕೂಡ ಏಕೆ ಆ ಸೌಲತ್ತುಗಳನ್ನು ಕೊಡಬಾರದಾಗಿತ್ತು ? ಹಾಸನ ಜಿಲ್ಲೆಯವರು ಮಾಡಿದ ಪಾಪ ಏನು ? ಈ ಬಗ್ಗೆ ಒಂದು ಸಂಶಯ ಇದೆ. ಯಾವ ಒಂದು ಕಾನೂನು ಹಾಸನ ಜಿಲ್ಲೆಗೆ ಆ ಒಂದು ಸೌಲತ್ತನ್ನು ಕೊಡುವುದಕ್ಕೆ ಅಡ್ಡಿಯಾಯಿತು ಎಂಬುದನ್ನು ತಾವು ತಿಳಿಸಬೇಕು. ಆ ರೀತಿ ಇದ್ದ ಪಕ್ಷದಲ್ಲಿ ಅದೇ ಕಾನೂನಿನ ಚೌಕಟ್ಟಿನೊಳಗಿರತಕ್ಕ ಹಳೇ ಮೈಸೂರಿನ ಉಳಿದ ಜಿಲ್ಲೆಗಳಿಗೆ ಆ ಸೌಲತ್ತುಗಳನ್ನು ಕೊಡುವುದಕ್ಕೆ ಹೇಗೆ ಸಾಧ್ಯವಾಯಿತು ? ಉತ್ತರ ಕೊಡತಕ್ಕ ಕಾಲದಲ್ಲಿ ಸಮನ್ವಯವಲ್ಲದೇ ಇರತಕ್ಕ ಉತ್ತರವನ್ನು ಕೊಡಲಾಗಿದೆ ಎಂಬುದು ನನ್ನ ತೀವ್ರತರವಾದ ಆಕ್ಷೇಪಣೆ. ಸ್ವಾಮಿ, ಸುಮಾರು 8 ಲಕ್ಷ ರೂಪಾಯಿಗಳ ಕಂದಾಯವನ್ನು ಹಾಸನ ಜಿಲ್ಲೆಯಲ್ಲಿ ರೆಮಿಷನ್ ಮಾಡಬೇಕೆಂದು ಜಿಲ್ಲಾಧಿಕಾರಿಗಳು ಶಿಫಾರಸು ಮಾಡಿ ಕಳುಹಿಸಿದ್ದಾರೆ. ಅದು ಏನಾಯಿತು ? ಹಾಗಿದ್ದರೂ ಕೂಡ ಕಂದಾಯ ವಸೂಲು ಮಾಡಲು ಉಗ್ರವಾದ ಕಾರ್ಯಕ್ರಮ ತೆಗೆದುಕೊಂಡಿರತಕ್ಕ ನಿದರ್ಶನ ಇದೆ ಇದಕ್ಕೆ ಕಾರಣವೇನು? ಶ್ರೀಮಾನ್ ಜ್ವಾಲಯ್ಯನವರು ಒಂದು ಸಾರಿ ಹೇಳುತ್ತಾ ಇದ್ದರು, ಹಾಸನ ಜಿಲ್ಲೆಯಲ್ಲಿ ಬರೀ ಅಪೋಸಿಷನ್‌ನವರು ಆರಿಸಿ ಬಂದಿದ್ದಾರೆ ಅಂತ ಈ ರೀತಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇದ್ದೀರಿ ಅಂತ ಆ ರೀತಿ ಮೋಟೀವ್ ಅಟ್ರಿಬ್ಯೂಟ್ ಮಾಡುವುದಕ್ಕೆ ನಾವು ಹೋಗುವುದಿಲ್ಲ. ಇವತ್ತು ರಾಜ್ಯಾಡಳಿತ ನಡೆಸತಕ್ಕ ಕಾಲದಲ್ಲಿ ಪಕ್ಷಾತೀತ ಭಾವನೆ ಇರಬೇಕು ಎಂಬುದನ್ನು ತಿಳಿಸಿ, ಹೊಳೇನರಸೀಪುರದ 93 ಗ್ರಾಮಗಳನ್ನು ಕ್ಷಾಮ ಪೀಡಿತ ಪ್ರದೇಶ ಎಂದು ಡಿಕ್ಲೇರ್ ಮಾಡಿದ ಪ್ರದೇಶಗಳಲ್ಲಿ ಸೇರಿಸಿ ಏಕೆ ಮನ್ನಾ ಮಾಡುವುದಕ್ಕೆ ಆಗಲಿಲ್ಲ, ಎಂಬ ವಿಷಯವನ್ನು ಕೇಳುತ್ತಾ ಇದ್ದೇನೆ. ಇದಕ್ಕೆ ಕಾರಣವೇನು ? ಇದು ಬಹಳ ಶೋಚನೀಯವಾದ ವಿಷಯ. ಹಾಸನ ಜಿಲ್ಲೆಯಲ್ಲಿ 62—63 ರಿಂದ 66—67ರವರೆಗೂ 4 ಆಣೆಗಿಂತ ಕಮ್ಮಿ ಬೆಳೆಯಾಗಿರತಕ್ಕ ಪ್ರದೇಶ ಯಾವ್ಯಾವುದು ಇದೆ ಎಂಬ ಒಂದು ವರದಿಯನ್ನು ತರಿಸಿಕೊಳ್ಳಬೇಕೆಂದು ಹೇಳುತ್ತೇನೆ. ಈಗಾಗಲೇ ಜಿಲ್ಲಾಧಿಕಾರಿಗಳು ಕಳುಹಿಸಿದ್ದಾರೆ ಎಂದು ಕೇಳಿದ್ದೇನೆ. 8 ಲಕ್ಷ ರೂಪಾಯಿಗಳನ್ನು ಮನ್ನಾ ಮಾಡುತ್ತೀರಿ ಎಂಬ ಭರವಸೆಯನ್ನು ತಮ್ಮಿಂದ ನಿರೀಕ್ಷಣೆ ಮಾಡಿ ನನ್ನ ಮಾತನ್ನು ಪೂರೈಸುತ್ತೇನೆ.

1-30 P.M.

† ಶ್ರೀ ದಿಗಂಬರರಾವ್ ಬಿ. ಕಲಮಂಕರ್.—ಅಧ್ಯಕ್ಷರೇ, ಇವತ್ತು ನಾವು ಚರ್ಚೆ ಮಾಡುತ್ತಿರುವ ಮುಖ್ಯ ಕಾರಣ, ಎಲ್ಲಾ ಜಿಲ್ಲೆಗಳ ಪೈಕಿ ರಾಯಚೂರು ಜಿಲ್ಲೆಯಲ್ಲಿ ಪರಿಸ್ಥಿತಿ ಚೆನ್ನಾಗಿದೆಯೆಂದು ಹೇಳಿದ್ದು ಆಗಿದೆ. 5 ವರ್ಷಗಳ ಕಾಲದಲ್ಲಿ ಲ್ಯಾಂಡ್ ರೆವಿನ್ಯೂ ಬಾಕಿ ಇರುವುದು, 1 ಕೋಟಿ 20 ಲಕ್ಷ 93 ಸಾವಿರದ 940 ರೂಪಾಯಿಗಳು. ಆದರೆ ಬಿಜಾಪುರ ಜಿಲ್ಲೆಯಲ್ಲಿ ಕ್ಷಾಮ ಇರುತ್ತದೆ. ಅಲ್ಲಿ ಬಹಳ ಕಡಿಮೆ ಬಾಕಿ ಇರುವುದು ಎಂದು ಹೇಳುತ್ತಾರೆ. ಇದಕ್ಕೆ ಏನು ಕಾರಣ ಇರಬಹುದು ಎಂಬ ಬಗ್ಗೆ ರೆವಿನ್ಯೂ ಮಂತ್ರಿಗಳು ಹೇಳಬೇಕು. ಏಕೆಂದರೆ, ರಾಯಚೂರಿನಲ್ಲಿ ವಾಸ್ತವಿಕ ಪರಿಸ್ಥಿತಿ ದೃಷ್ಟಿಯಿಂದ ನೋಡಿದರೆ ಅಲ್ಲಿ ಅಷ್ಟು ಬಾಕಿ ಇರಬಾರದು. ಅಲ್ಲಿರತಕ್ಕ ಬಾಕಿಯನ್ನು ವಸೂಲು ಮಾಡುವುದರಲ್ಲಿ ಅಲ್ಲಿನ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಅಷ್ಟು ಬಾಕಿ ಅಲ್ಲಿ ಇದೆ. ಬಿಜಾಪುರ ಬರಗಾಲ ಏರಿಯಾ ಆಗಿದೆಯೆಂದು ಹೇಳುತ್ತಾರೆ. ಅದರಿಂದಲೇ ಅಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಲಿಲ್ಲವೆಂದು ನನಗನ್ನಿಸುತ್ತದೆ. ಎರಡನೆಯದಾಗಿ, 5 ವರ್ಷಗಳ ಬಾಕಿ ಲ್ಯಾಂಡ್ ರೆವಿನ್ಯೂನಲ್ಲಿ, 6 ಕೋಟಿ 42 ಲಕ್ಷ 45 ಸಾವಿರದ 683 ರೂಪಾಯಿಗಳು. ಸರ್‌ಚಾರ್ಜ್ 1 ಕೋಟಿ 39 ಲಕ್ಷ 87 ಸಾವಿರದ 229 ರೂಪಾಯಿಗಳು. ಅಂದಮೇಲೆ ಒಟ್ಟು ಸುಮಾರು 7-8 ಕೋಟಿ ರೂಪಾಯಿಗಳ ಬಾಕಿ ಇದೆ. ಈ ಬಾಕಿಯನ್ನು ಸಂಬಂಧಪಟ್ಟ ಇಲಾಖೆಯಿಂದ ವಸೂಲು ಮಾಡಲಿಲ್ಲ. ಅದಕ್ಕೆ ಎರಡು ಕಾರಣಗಳಿವೆ. ಒಂದು ಕಡೆ ಅಧಿಕಾರಿಗಳಿಗೆ ಕೆಲಸ ಬರುವುದಿಲ್ಲ, ಅವರು ಚೆನ್ನಾಗಿ ಕೆಲಸ ಮಾಡುವುದಿಲ್ಲ. ಬಾಕಿಯನ್ನು ಸ್ಮಾಲ್ ಲ್ಯಾಂಡ್ ಹೋಲ್ಡರ್ಸ್ ಯಾರೂ ಕೊಡುವುದಕ್ಕಾಗುವುದಿಲ್ಲ. ಅಂತಹವರೇ ಜಾಸ್ತಿ ಕೊಡುವುದು ಇರಬಹುದು. ಅದರ ಬಗ್ಗೆ ರೆವಿನ್ಯೂ ಮಂತ್ರಿಗಳು ವಾಸ್ತವಿಕ ಪರಿಸ್ಥಿತಿ ಏನಿದೆಯೆಂಬುದನ್ನು ಹೇಳಬೇಕು. ಈಗಾಗಲೇ 62 ಲಕ್ಷ 2 ಸಾವಿರದ 487 ರೂಪಾಯಿಗಳನ್ನು ರೈಟ್ ಆಫ್ ಮಾಡಿದ್ದಾರೆ. ಸರ್‌ಚಾರ್ಜ್ ಇನ್ನೂ ಕಡಿಮೆ ಇದೆ. ಸಣ್ಣ ಸಣ್ಣ ಲ್ಯಾಂಡ್ ಹೋಲ್ಡರ್ಸ್ ಬಗ್ಗೆ ಅಷ್ಟಾಗಿ ಈಗ ಬಾಕಿ ಇಲ್ಲದೇ ಇರುವುದರಿಂದ, ಅವರು ಕೊಡತಕ್ಕ ಲ್ಯಾಂಡ್ ರೆವಿನ್ಯೂ ಬಾಕಿಯನ್ನು ತೆಗೆದುಹಾಕಬೇಕು. ಏಕೆಂದರೆ ಅವರು

ಕೊಡುವುದಕ್ಕಾಗುವುದಿಲ್ಲ. ಅವರಿಗೆ ಪೂರ್ತಿ ರೈಟ್ ಆಫ್ ಮಾಡುವ ಬಗ್ಗೆ ಒಂದು ನಿರ್ಣಯವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಲ್ಯಾಂಡ್ ರೆವಿನ್ಯೂ ಬಗ್ಗೆ ಸರ್ಕಾರದವರು ವಿಚಾರಮಾಡಿ ಕೇವಲ 5-10 ಎಕರೆಗಳಿಗಿಂತ ಕಡಿಮೆ ಇರುವವರಿಗೆ ಲ್ಯಾಂಡ್ ರೆವಿನ್ಯೂ ಬಾಕಿಯನ್ನು ತೆಗೆದು ಹಾಕಬೇಕು ಎಂದು ಹೇಳಿ ನಾನು ಇದನ್ನು ವಿರೋಧಿಸುತ್ತೇನೆ.

† ಶ್ರೀ ಜಿ. ಬಿ. ಶಂಕರ ರಾವ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ಲ್ಯಾಂಡ್ ರೆವಿನ್ಯೂಗೆ ಸಂಬಂಧಪಟ್ಟಹಾಗೆ ಕೆಲವು ಉಪಪ್ರಶ್ನೆಗಳನ್ನು ಕೇಳುವಾಗ ಸ್ವಲ್ಪ ಕನ್‌ಫ್ಯೂಷನ್ ಮಾಡಿಕೊಂಡು ಲ್ಯಾಂಡ್ ರೆವಿನ್ಯೂ ಕಂದಾಯದ ಬಗ್ಗೆ ಮತ್ತು ಅದನ್ನು ವಜಾ ಮಾಡುವ ಬಗ್ಗೆ ದ್ವಂದ್ವ ಪರಿಸ್ಥಿತಿಯನ್ನುಂಟುಮಾಡಿಕೊಂಡು ಕೆಲವು ಜಿಲ್ಲೆಗಳಿಗೆ ಆ ಕಂದಾಯವನ್ನು ರೈಟ್ ಆಫ್ ಮಾಡಿದ್ದಾರೆ, ಇನ್ನು ಕೆಲವು ಜಿಲ್ಲೆಗಳಿಗೆ ರೈಟ್ ಆಫ್ ಮಾಡಿಲ್ಲವೆಂಬುದಾಗಿ ಹೇಳಿದ್ದಾರೆ. ಆದರೆ ಕಂದಾಯ ರೈಟ್ ಆಫ್ ಮಾಡುವುದು ಬಹಳ ಕಡಿಮೆ. ಕಾನೂನು ಪ್ರಕಾರ ಕಂದಾಯವನ್ನು ವಸೂಲುಮಾಡುವುದಕ್ಕೆ ಸಾಧ್ಯವಿಲ್ಲದೇ ಇದ್ದರೆ, ರೈಟ್ ಆಫ್ ಮಾಡುವುದು. ಕೆಲವುಕಡೆ ಹೈದರಾಬಾದ್ ಕರ್ಣಾಟಕದಲ್ಲಿ ಬಿದರೆ ಜಿಲ್ಲೆಯಲ್ಲಿ ಕಂದಾಯ ರೂಪದಲ್ಲಿ ಸರ್ಕಾರಕ್ಕೆ ಬರುವ ಬಾಕಿಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ವಜಾ ಮಾಡಿದೆ. ಅದಕ್ಕೆ ವಿಶೇಷವಾದಂಥ ಕಾರಣಗಳು ಉಂಟು. ಅದಕ್ಕೆ ರಾಜಕೀಯ ಕಾರಣಗಳು ಇಲ್ಲ. ಕರ್ಣಾಟಕ ರಾಜ್ಯವಾಗುವ ಕಾಲದಲ್ಲಿ ಹೈದರಾಬಾದ್ ಕರ್ಣಾಟಕದ ಕೆಲವು ಜಿಲ್ಲೆಗಳಲ್ಲಿ ಸಣ್ಣ ಸಣ್ಣ ಜಹಗೀರುಗಳು ಇದ್ದುವು. ಅಲ್ಲಿ ಇನಾಂದಾರರೂ ಇದ್ದಾರೆ. ಈಗ ರೈತರು ಸರ್ಕಾರಕ್ಕೆ ಕೊಡುವ ಕಂದಾಯದ ಎರಡರಷ್ಟು ಬಾಕಿಯಾಗುತ್ತದೆ.

ಶ್ರೀ ಎಚ್. ಡಿ. ದೇವೇ ಗೌಡ.—ಹೈದಾರಾಬಾದ್ ಕರ್ಣಾಟಕದಲ್ಲಿ ಸಣ್ಣ ಸಣ್ಣ ಜಹಗೀರುದಾರರು ಕೆಲವು ಸಂದಿಗ್ಧಪರಿಸ್ಥಿತಿಯಲ್ಲಿದ್ದಾರೆಂದು ಮಾನ್ಯ ಉಪಮಂತ್ರಿಗಳು ಉತ್ತರವನ್ನು ಮುಂದುವರಿಸುತ್ತಿದ್ದಾರೆ. 1956 ರಲ್ಲಿ ಪ್ರಾಂತ ಪುನರ್ವಿಂಗಡಣೆಯಾದಾಗ ಅಲ್ಲಿನ ಕರ್ಣಾಟಕದಲ್ಲಿ ಆದಂತ ವಿಷಯವೇ ಬೇರೆ.

ಶ್ರೀ ಕೆ. ವಿ. ಶಂಕರ ಗೌಡ.—ಹಿಂದೆ ಅಲ್ಲಿನ ಇನಾಂ ಹಳ್ಳಿಗಳಲ್ಲಿರತಕ್ಕ ರೈತರಿಗೂ ಈ ರಾಜ್ಯದ ಹಳ್ಳಿಗಳಲ್ಲಿರತಕ್ಕ ರೈತರಿಗೆ ಹಾಕುವ ಕಂದಾಯದಷ್ಟೇ ಹಾಕಬೇಕೆಂಬುದು ಆ ಸರ್ಕಾರದ ಪರಿಶೀಲನೆಯಲ್ಲಿತ್ತು. ಕರ್ಣಾಟಕವಾಗುವುದಕ್ಕೆ ಮುಂಚೆ ಹೈದರಾಬಾದ್ ಸರ್ಕಾರದವರು ಅದನ್ನು ಪರಿಶೀಲನೆಮಾಡುತ್ತೇವೆಂದು ಒಪ್ಪಿಕೊಂಡಿದ್ದರು. ಆದರೆ ಇದುವರೆಗೆ ಅಲ್ಲಿ ಕಂದಾಯವನ್ನು ವಜಾಮಾಡಲಿಲ್ಲ. ರೀಜನಲ್ ಸೆಟಲ್‌ಮೆಂಟ್ ನಡೆಯದೇ ಇದ್ದುದರಿಂದ, ಅದು ಮುಂದುವರಿದು ಕರ್ಣಾಟಕ ಪ್ರಾಂತ ರಚನೆಯಾದಮೇಲೂ 1962 ರವರೆಗೆ ಅದನ್ನು ವಜಾಮಾಡಲಿಕ್ಕೆ ಸಾಧ್ಯವಾಗಿಲ್ಲ. ನಂತರ ಹಿಂದಿನ ಸರ್ಕಾರ ಯಾವ ವಿಷಯದಲ್ಲಿ ಭರವಸೆ ಕೊಟ್ಟಿತ್ತೋ, ಅದನ್ನು ಪಾಲಿಸಬೇಕೆಂಬ ಉದ್ದೇಶದಿಂದ, ಬಿದರ್ ಜಿಲ್ಲೆಯಲ್ಲಿ ಅಂತಹ ವಿಶೇಷ ಪರಿಸ್ಥಿತಿ ಇದ್ದುದರಿಂದ ಕಂದಾಯ ಅಲ್ಲಿ ವಜಾ ಮಾಡಲಾಗಿದೆ. ಮಾನ್ಯ ಶ್ರೀ ಕರ್‌ಮಂಕರ್ ಅವರು ರಾಯಚೂರು ಮತ್ತು ಗುಲ್ಬರ್ಗಾಗಳಲ್ಲಿಯೂ ಅದೇ ರೀತಿ ಉಂಟು ಎಂದು ಹೇಳಿದ್ದಾರೆ. ಆದರೆ ಅಲ್ಲಿನ ಇನಾಂ ಜಮೀನ್ದಾರರಿಂದ ಆ ರೀತಿ ಸರ್ಕಾರಕ್ಕೆ ಮನವಿಗಳು ಬರಲಿಲ್ಲ. ಅಷ್ಟೊಂದು ದೊಡ್ಡ ಪ್ರಮಾಣದ ಹಣವನ್ನು ಆ ಸರ್ಕಾರ ವಜಾ ಮಾಡಬೇಕಾಗಿತ್ತು, ಇನ್ನೂ ಕೆಲವು ಕಡೆಗಳಲ್ಲಿ ಕಂದಾಯ ಬಾಕಿಯನ್ನು ಬಿದರೆ ಜಿಲ್ಲೆಯಲ್ಲಿ ತಕಾವಿ ಸಾಲದ ಹಣವನ್ನೂ ವಜಾಮಾಡಬೇಕಾಗಿತ್ತು. ಅಲ್ಲಿ ಪೋಲೀಸ್ ಕ್ರಮ ನಡೆದಾಗ ಅದಕ್ಕೆ ಸಂಬಂಧಪಟ್ಟ ರಿಕಾರ್ಡ್ಸ್ ನಾಶವಾದ್ದರಿಂದ, ರೈತರನ್ನು ಕೇಳಿದಾಗ ಅವರಿಗೆ ಹಣ ಕಟ್ಟುವುದಕ್ಕೆ ತಕ್ಕ ದಾಖಲಾತು ಇಲ್ಲದೇ ಇದ್ದುದರಿಂದ ಅನಿವಾರ್ಯವಾಗಿ ಕಂದಾಯದ ಬಾಕಿ ವಜಾಮಾಡಬೇಕಾಯಿತು. ಉಳಿದ ಜಿಲ್ಲೆಗಳಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಿನ ಕಾನೂನುಗಳ ಪ್ರಕಾರ ಕಂದಾಯ ಬಾಕಿಯನ್ನು ವಜಾ ಮಾಡುವಂಥ ಪ್ರಸಂಗ ಬಹಳ ಕಡಿಮೆ. 1964 ರ ಕಂದಾಯ ಕಾನೂನು ಪ್ರಕಾರ ಯಾವ್ಯಾವ ಪ್ರಸಂಗದಲ್ಲಿ ರಿಯಾಯತಿ ಕೊಡಬೇಕೋ ಆ ನಿಯಮವನ್ನು ಮಾಡಲಿಲ್ಲ. ಮೊನ್ನೆಮೊನ್ನೆ ಮಾಡಿದ್ದಾರೆ. ರೈತರಿಗೆ ವಿಶೇಷ ಅನುಕೂಲವಾಗಲಿ ಎಂಬುದಾಗಿ ಈ ರೀತಿ ಮಾಡಿದ್ದಾರೆ. ಆದರೂ ಅದರಲ್ಲಿ ಕಂದಾಯದ ಹೊರೆ ಬಹಳ ಆಗುತ್ತದೆ. ಅಭಾವ ಉಂಟಾದರೆ ಕಂದಾಯ ಕೊಡುವುದಕ್ಕೆ ಶಕ್ತಿ ಇಲ್ಲ. ರೈತರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಎಲ್ಲಿ 4 ಆಣೆಗಿಂತ ಕಡಿಮೆ ಬೆಳೆಯಾಗುತ್ತದೋ ಅಂತಹವರಿಗೆ ಕಂದಾಯ ವಜಾ ಮಾಡಬೇಕು ಎಂಬುದಾಗಿ ಒಂದು ಹೊಸ ನಿಯಮವನ್ನು ಮಾಡಿ ಅದರ ಬಗ್ಗೆ ಅನುಮತಿ ಕೊಟ್ಟಿದೆ ಮತ್ತು ಜಾರಿಗೆ ಕೊಟ್ಟಿದೆ ಈ ಪ್ರಕಾರ ಕೆಲವರಿಗೆ ವಿನಾಯತಿಸಿಗುವುದು. ಅದು ಈ ವರ್ಷಕ್ಕೇ ಅಲ್ಲ. 1964ರಿಂದಲೂ ಇಲ್ಲಿಯವರೆಗೆ ವಿನಾಯತಿ ಕೊಡುವ ಪ್ರಶ್ನೆ ಇದೆ, ಕಂದಾಯ ವಸೂಲಿ ವಿನಾಯತಿ

(ಶ್ರೀ ಕೆ. ಎ. ಶಂಕರಗೌಡ)

ಕೊಡಬೇಕೆಂಬದನ್ನು ಸರ್ಕಾರ ಒಪ್ಪಿಕೊಂಡದ್ದು ಬರೀ ಹಾಸನ ಜಿಲ್ಲೆಯಲ್ಲ. ಮೈಸೂರು ರಾಜ್ಯದ 19 ಜಿಲ್ಲೆಯಲ್ಲ 1964 ರಿಂದೀಚೆಗೆ ಎಲ್ಲಿ ರೂಪಾಯಿಯಲ್ಲ 25 ಪೈಸೆಗಿಂತ ಕಡಿಮೆ ಬೆಳೆಯಾಗಿದ್ದರೆ ಅದಕ್ಕೆ ಅಂತಹವರಿಗೆ ವಿನಾಯಿತಿ ಸಿಗುತ್ತದೆ. ನಾಲ್ಕು ವರ್ಷಗಳವರೆಗೆ ವಿನಾಯಿತಿ ಕೊಡುವ ನಿರ್ಧಾರ ಮಾಡಿದ್ದಾರೆ. ಅದರ ಬಗ್ಗೆ ಪ್ರೊಪೋಸಲ್ಸ್ ಕಳುಹಿಸಿ ಎಂದು ರೆವಿನ್ಯೂ ಅಧಿಕಾರಿಗಳಿಗೂ ಹೇಳಿದ್ದೇವೆ. ರೈತರಿಗೆ ಏನೇನು ವಿನಾಯಿತಿ ಸಿಗಲಿಲ್ಲವೋ ಅವರ ಬಗ್ಗೆ ಅನುಕೂಲ ಮಾಡಿಕೊಡತಕ್ಕ ಪ್ರೊಪೋಜಲ್ಸ್ ಅವರಿಂದ ಕೇಳಿದ್ದೇವೆ. ಅವರಿಂದ ಪ್ರೊಪೋಸಲ್ಸ್ ಬಂದ ನಂತರ ಎಲ್ಲಾ ಜಿಲ್ಲೆಗಳಲ್ಲಿಯೂ ಇಂತಹ ಕಾರಣಗಳಿಂದ ರೈತರಿಗೆ ಪ್ರತಿಫಲ ಸಿಗುವ ವಿಷಯವಾಗಿ ಅನುಕೂಲವಾಗುತ್ತದೆನ್ನುವ ಮಾತನ್ನು ನಾನು ಹೇಳುತ್ತೇನೆ.

ಕಂದಾಯದ ಬಾಕಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಇದೆ. ಇದರಲ್ಲಿ ಆಥರೈಸ್ಡ್ ಅರಿಯರ್ಸ್ ಕೆಲವು ಕಡೆ, ಅನ್‌ಆಥರೈಸ್ಡ್ ಅರಿಯರ್ಸ್ ಕೆಲವು ಕಡೆ ಇದೆ. 4 ಆಣೆಗಿಂತ ಹೆಚ್ಚಿಗೆ ಬೆಳೆಸು ಆಗಿದ್ದರೂ ಕೆಲವು ಕಡೆ ಕೊಟ್ಟಿಲ್ಲ. ಕೆಲವು ಕಡೆ ಕಂದಾಯದ ಬಾಕಿ ವಸೂಲಿ ಬಹಳ ಉಳಿದಿದೆ. ಹೊಸ ನಿಯಮಾವಳಿ ಪ್ರಕಾರ ವಿನಾಯಿತಿ ಕೊಟ್ಟು ಉಳಿದ ಬಾಗ ವಸೂಲು ಮಾಡುವುದಕ್ಕೆ ಮಾನ್ಯ ಸದಸ್ಯರೂ ಸಾರ್ವಜನಿಕರೂ ಎಲ್ಲರೂ ಸಹಕರಿಸಬೇಕು. ಜನಗಳಲ್ಲಿ ಕಂದಾಯ ಈಗ ಕೊಡದಿದ್ದರೂ ನಡೆದೀತು ಎನ್ನುವ ಭಾವನೆ ಇದೆ. ಆದುದರಿಂದ ಈಗ ಏನು ಕಂದಾಯ ಬಾಕಿ ಇದೆ ಅದನ್ನು ವಸೂಲು ಮಾಡಲು ಎಲ್ಲರೂ ಸಹಕರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇ ಗೌಡ.—ರಿಟರ್ನ್ ಆಫ್ ಮಾಡಿದ್ದಾರೆ ಎನ್ನುವುದನ್ನು ತಪ್ಪು ಕಲ್ಪನೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ರಿಟನ್ ಆಫ್ ಮತ್ತು ಸಸ್ಪೆನ್‌ಷನ್ ಏನು ಎನ್ನುವುದು ನನಗೆ ಅರ್ಥವಾಗುತ್ತದೆ. ರಿಟನ್ ಆಫ್ ಎಷ್ಟು ಎಂದು ನಾನು ತಿಳಿದುಕೊಂಡಿದ್ದೇನೆ. ಡೆಪ್ಯೂಟಿ ಕಮೀಷನರು ಅಲ್ಲಿ 4 ಆಣೆ ಬೆಳೆ ಕಡಿಮೆ ಇದೆ ಎಂದು ಸುಮಾರು 8 ಲಕ್ಷ ರೂಪಾಯಿನ ವರೆಗೆ ರಿಟನ್ ಆಫ್ ಮಾಡಬೇಕು ಎಂದು ರಿಪೋರ್ಟನ್ನು ಕಳುಹಿಸಿದ್ದಾರೆ.

ಶ್ರೀ ಜಿ. ಬಿ. ಶಂಕರ ರಾವ್.—ರೆಮಿಷನ್ ಎಂದರೆ ಕಾನೂನು ಪ್ರಕಾರ ಅವರಿಗೆ ಏನು ವಿನಾಯಿತಿ ಕೊಡಬೇಕು ಅದು. ರಿಟನ್ ಆಫ್ ಎಂದರೆ ವಸೂಲು ಮಾಡುವುದಕ್ಕೆ ಬಾರದೇ ಇದ್ದಂಥ ಬಾಕಿಯನ್ನು ಸರ್ಕಾರಕ್ಕೆ ಬರುವುದಿಲ್ಲ ಎಂದು ನಿಶ್ಚಿತವಾದ ಮೇಲೆ ಅದನ್ನು ರಿಟನ್ ಆಫ್ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಹೇಳಿದ್ದು ಬೆಳೆ ಆಗದಿದ್ದರೆ ಯಾವ ರೈತನಿಗೆ ಕಂದಾಯ ಕೊಡುವುದಕ್ಕೆ ಇತ್ತು, ಯಾವ ರೈತನಿಗೆ ಕೊಡುವುದಕ್ಕೆ ಶಕ್ತಿ ಇತ್ತೋ ಅಲ್ಲಿ ಸರ್ಕಾರದ ಕಾನೂನನ್ನು ಉಲ್ಲಂಘನೆ ಮಾಡುತ್ತಾರೆ, ಅದನ್ನು ರೈಟ್ ಆಫ್ ಮಾಡುವುದಕ್ಕಾಗುವುದಿಲ್ಲ. ಬೆಳೆ ಕೆಟ್ಟಿದ್ದರೂ ಕೂಡ, 4 ಆಣೆಗಿಂತ ಕಡಿಮೆ ಇದ್ದರೂ ಕೂಡ ಈ ಅಧಿಕಾರಿಗಳು ಪುಷ್ಠೀಕರಿಸಿ ಅದನ್ನು ರೆಮಿಷನ್ ಮಾಡಿಸಿ ಎಂದು ಹೇಳುತ್ತಾರೆ. ಹಾಸನ ಜಿಲ್ಲೆಯಲ್ಲಿ 8 ಲಕ್ಷ ರೂಪಾಯಿನವರೆಗೆ ರೆಮಿಷನ್ ಕೊಡಿ, 4 ಆಣೆಗಿಂತಲೂ ಬೆಳೆ ಕಡಿಮೆ ಇದೆ ಎಂದು ಡೆಪ್ಯೂಟಿ ಕಮೀಷನರು, ನಿಮ್ಮ ಅಧಿಕಾರಿಗಳು ಬರೆದರೂ ಕಂದಾಯವನ್ನು ವಸೂಲು ಮಾಡುವಂಥ ನಿದರ್ಶನಗಳು ಇವೆ. ನಾನು ಅಲಿಗೇಷನ್ ಮಾಡುತ್ತಾ ಇಲ್ಲ.

ಶ್ರೀ ಜಿ. ಬಿ. ಶಂಕರ ರಾವ್.—ನಮ್ಮ ರೆವಿನ್ಯೂ ಅಧಿಕಾರಿಗಳಿಂದ ಬಂದಿರುವ ಸಲಹೆಗಳು ಅಷ್ಟು ಪರಿಪೂರ್ಣ ಆಗಿರಲಿಲ್ಲ. ಅದನ್ನು ವಾಪಸ್ಸು ಕಳುಹಿಸಿ ಪುನಃ ಸರಿಯಾದ ಪ್ರಪೋಸಲ್ಸ್ ಕಳುಹಿಸಿ ಎಂದು ಹೇಳಿದ್ದೇವೆ. ಮಾನ್ಯ ಸದಸ್ಯರಿಗೆ ಹೇಳುವುದು ಏನೆಂದರೆ ಎಲ್ಲಿ 4 ಆಣೆಗಿಂತ ಬೆಳೆ ಕಡಿಮೆ ಇದ್ದಂಥ ಪ್ರದೇಶದಲ್ಲಿ ರೈತನಿಗೆ ಕಂದಾಯ ಕೊಡುವುದಕ್ಕೆ ಸಾಧ್ಯವಾಗಿಲ್ಲ ಅಂಥ ಕಡೆಯಲ್ಲಿ 4 ವರ್ಷದ ರೆಮಿಷನ್ ಕೊಡುತ್ತೇವೆ ಎಂದು ಹೇಳುತ್ತೇವೆ.

Sri DIGAMBAR RAO B. KALMANKAR —The Deputy Minister has admitted that in Bidar there are many Inam and Jahgir lands and that the rate of land revenue is high. In view of the fact that Government have been writing off arrears of land revenue, I want to bring to the notice of the Hon'ble Deputy Minister that the reasons which made them to revise their policy in Bidar, are equally good for Raichur and

Gulbarga. Even in respect of Raichur and Gulbarga, I wish the Minister takes pains to call for records, and go round and see whether there are not such Inam and Jahgir lands and other type of lands which are having very exorbitant land revenue and the benefits given to Bidar are given to Gulbarga and Raichur also. This matter should be seriously examined and the same benefits given to both Gulbarga and Raichur. Otherwise, there will be discrimination.

Compared to the existing land revenue rates in the old Mysore area, the rates in Hyderabad Karnatak area are high. In Hyderabad Karnatak area and Bombay Karnatak area, lands are not classified into various types; thereby also, lot of injustice is done to the Hyderabad Karnatak area. It is particularly so in case of Inam lands which were being levied land revenue many more times than the land revenue for patta lands. I want to know whether the Covernment will consider the writting off of land revenue of such Inam lands in Gulbarga and Raichur and also reconsider the fixing of the land revenue on the lands in Hyderabad Karnatak area in view of the clasification of of lands that is to be made to introduce uniformity in the State.

Thirdly, with respect to my question regarding the small holders, may I know whether the Government has taken pains to ascertain as to how much land revenue is collected from small lands varying between 5 to 10 acres. These are all dry lands producing negligible quantity of jowar. Will Government state its present policy in regard to its earleir declaration and stand for abolition of land revenue. Will Government give the benefit of abolition of land revenue to such petty landholders who are not in a position to pay land revenue ?

ಶ್ರೀ ಜಿ. ಬಿ. ಶಂಕರರಾವ್.—ಸರ್ಕಾರಕ್ಕೆ ಬರುವಂಥಾ ಬಾಕಿ ಎಂದರೆ ತಕಾವಿ ಲೋನುಗಳು ಇನ್ನೂ ಇತರ ಡ್ಯೂಸ್ ಏನು ಇವೆ ಅವು ಕಾನೂನು ಪ್ರಕಾರ ವಸೂಲ್ಮಾಡುವುದಕ್ಕೂ ಬರುತ್ತದೆ, ವಿನಾಯಿತಿ ಕೊಡುವುದಕ್ಕೂ ಬರುತ್ತದೆ. ಎಲ್ಲಿ ಸರ್ಕಾರಕ್ಕೆ ಬರತಕ್ಕಂಥ ಇತರ ಬಾಬುಗಳಿಂದ ವಸೂಲ್ ಆಗತಕ್ಕದ್ದು ಏನು ಇದೆ ಅಲ್ಲಿ ನಿಯಮಾವಳಿ ಪ್ರಕಾರ ವಸೂಲ್ಮಾಡುವುದಕ್ಕೆ ಸಾಧ್ಯ ಇಲ್ಲ. ಅದರ ವಿಚಾರ ಹೇಳುತ್ತಿರುವುದು. ಹಳೇ ಬಾಕಿ ಬಗ್ಗೆ ಅದಕ್ಕೆ ಸಂಬಂಧಪಟ್ಟ ರಿಕಾರ್ಡ್ಸ್ ಇಲ್ಲ, ಪೋಲೀಸ್ ಆಕ್ಷನ್‌ನಲ್ಲಿ ಹೋಗಿಬಿಟ್ಟವು.

ಶ್ರೀ ಡಿ. ಬಿ. ಕಲ್ಮನಕರ್.—ಈ ಕನ್ಸಿಡರೇಷನ್ ಇರತಕ್ಕ ಪೀರಿಯಡ್ 1962–63.

ಶ್ರೀ ಜಿ. ಬಿ. ಶಂಕರರಾವ್.—ನಾನು ಮೊದಲೇ ಹೇಳಿದ್ದೇನೆ. ನಾವು ವಸೂಲ್ಮಾಡುವುದಕ್ಕೆ ಪ್ರಯತ್ನಪಟ್ಟಾಗ್ಯೂ ಕೂಡ ಆಗದೆ ಇದನ್ನು ಅನಿವಾರ್ಯವಾಗಿ ರಿಟನ್ ಆಫ್ ಮಾಡಬೇಕಾಯಿತು. ಆದರೆ ರೈಟ್ ಆಫ್ ಪ್ರಸಂಗ ಬರುವುದಿಲ್ಲ. ಇದರ ಬಗ್ಗೆ ವಿನಾಯಿತಿ ಕೊಡುವುದು ಲ್ಯಾಂಡ್ ರೆವಿನ್ಯೂ ಬಾಕಿ ಬಗ್ಗೆ ಸದಸ್ಯರು ಹೇಳಿದರು. ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಯಲ್ಲಿ ಕಂದಾಯ ಬಹಳ ವರ್ಷದಿಂದ ವಸೂಲು ಆಗಿದೆ. ಕಂದಾಯ ಜಾಸ್ತಿ ಇದೆ ಎಂದು ಇಲ್ಲಿಯವರೆಗೂ ಅಂತಹ ಪ್ರಸಂಗ ಬಂದಿಲ್ಲ. ಕಂದಾಯ ಕೊಟ್ಟುಬಿಟ್ಟಿದ್ದಾರೆ. ರೈಟ್ ಆಫ್ ಪ್ರಸಂಗ ಬರುವುದಿಲ್ಲ.

ಇನ್ನು ಸಣ್ಣ ಹಿಡುವಳಿದಾರರಿಗೆ ಏಕೆ ವಜಾ ಮಾಡಬಾರದು ಎಂದು ಕೇಳಿದ್ದಾರೆ. ಹೀಗೆ ಆಲೋಚನೆ ಮಾಡುತ್ತಾ ಹೋದರೆ ಸಣ್ಣ ಹಿಡುವಳಿದಾರರಿಗೆ ಎಷ್ಟು ಎಕರೆಯವರೆಗೆ ಕೊಡಬೇಕು ಎನ್ನುವ ಪ್ರಸಂಗ ಬಂದರೆ 2–3 ವರ್ಷದಿಂದ ಈ ಮಾನ್ಯ ಸಭೆ ಪಾಸ್ ಮಾಡಿದ Prevention of Fragmentation and Consolidation of Holdings ಇದರ ಉದ್ದೇಶ ಏನು ಇತ್ತೋ ಅದು ಪೂರ್ಣ ನಿಷ್ಫಲವಾಗುತ್ತದೆ. ವ್ಯವಸಾಯದ ಹಿಡುವಳಿ ಹೆಚ್ಚಾಗಬೇಕು, ಇದನ್ನು ಪುನಃ ಪುನಃ ಸಣ್ಣ ಸಣ್ಣ ಹಿಡುವಳಿದಾರರಿಗೆ ಕಂದಾಯ ಗೊತ್ತು ಮಾಡಬೇಕು ಎಂದರೆ ಅವೆಲ್ಲಾ ತುಂಡು ತುಂಡಾಗುತ್ತದೆ. ಇದು ಸಾಧ್ಯವಾಗುವುದಿಲ್ಲ. ಆದುದರಿಂದ ಇದನ್ನು ಸರ್ಕಾರದವರು ಬಿಟ್ಟಿದ್ದಾರೆ. ಮೈಸೂರು ದೇಶದಲ್ಲಿ ರೀಕ್ಲಾಸಿಫಿಕೇಷನ್ ಕೆಲವು ಕಡೆ ಆಗಿದೆ ಬೇರೆ ಕಡೆ ಆದಾಗ ಎಲ್ಲಾ

(ಶ್ರೀ ಜಿ. ಬಿ. ಶಂಕರರಾವ್)

ಕಡೆಯೂ ಭೂಕಂದಾಯದ ರೇಟು ಒಂದೇ ಯೂನಿಫಾರ್ಮಿಟಿ ಇರಬೇಕು ಎಂದು ಮಾಡಿದ್ದೇವೆ. ಒಂದು ಕಡೆ ಹೆಚ್ಚು, ಒಂದು ಕಡೆ ಕಡಿಮೆ ಎನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಒಂದು ವಿಶಿಷ್ಟ ಸಂದರ್ಭದಲ್ಲಿ ಏನಾದರೂ ಅನ್ಯಾಯವಾಗಿದೆ ಎಂದು ಕಂಡು ಬಂದರೆ ಸರ್ಕಾರದವರು ಪರಿಶೀಲನೆ ಮಾಡಲಿಕ್ಕೆ ಸಿದ್ಧ ಇದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ (ಅನೇಕಲ್).—4 ವರ್ಷಗಳಿಗೂ ಮೇಲ್ಪಟ್ಟು 4 ಆಣೆ ಕೂಡ ಬೆಳೆಯಾಗದ ಭೂಮಿಗಳಿಗೆ ಕಂದಾಯವನ್ನು ಮಾಫಿಮಾಡಲಾಗುತ್ತದೆಂದು ಈಗ ತಾನೆ ಮಾನ್ಯ ಸಚಿವರು ತಿಳಿಸಿದರು. ಅದೇ ರೀತಿ ನಮ್ಮ ಆನೇಕಲ್ ತಾಲ್ಲೂಕಿನಲ್ಲೂ ಕಳೆದ 4 ವರ್ಷಗಳಿಂದ 4 ಆಣೆಗಿಂತ ಬಹಳ ಕಡಮೆ ಬೆಳೆಯಾಗಿದೆ ಎಂದು ಜಿಲ್ಲಾಧಿಕಾರಿಗಳು ವರದಿಯನ್ನು ಕಳುಹಿಸಿದಾಗ್ಯೂ ಮತ್ತು ಸರ್ಕಾರದವರು ಆ ತಾಲ್ಲೂಕಿನಲ್ಲಿ ಕಂದಾಯ ಎತ್ತಬಾರದೆಂದು ಆಜ್ಞೆ ಮಾಡಿದೆ ಎಂಬುದಾಗಿ ಪತ್ರಿಕೆಗಳಲ್ಲಿ ವಿಚಾರ ಬರುತ್ತಿದ್ದಾಗ್ಯೂ ಅಲ್ಲಿರತಕ್ಕ ಸ್ಥಳೀಯ ಅಧಿಕಾರಿಗಳು ಆ ಬಡಜನರನ್ನು ಕಂದಾಯ ಕೊಡಲು ಒತ್ತಾಯ ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರ ಯಾವ ರೀತಿ ಪರಿಹಾರವನ್ನು ಒದಗಿಸಬೇಕೆಂದಿದೆ ?

ಶ್ರೀ ಜಿ. ಬಿ. ಶಂಕರರಾವ್.—ಸಾಧಾರಣವಾಗಿ ಸರ್ಕಾರದವರು ಮಾಡಿರತಕ್ಕ ನಿಯಮಾವಳಿಗಳನ್ನು ಎಲ್ಲಾ ಕಡೆಗಳಲ್ಲೂ ರಿಟ್ರಾಸ್ಪೆಕ್ಟೀವಾಗಿ ಜಾರಿಗೆ ಕೊಡಬೇಕೆಂದು ತೀರ್ಮಾನ ಮಾಡಿರುವುದರಿಂದ ಯಾವ ಸದಸ್ಯರೂ ಇದರ ಬಗ್ಗೆ ಯಾವ ಸಂಶಯವನ್ನು ಪಡಬೇಕಾದ್ದಿಲ್ಲ. ಸರ್ಕಾರದವರೀಗ ಎಲ್ಲ ಕಡೆಗಳಿಂದ ರೆಕಾರ್ಡುಗಳನ್ನು ಕಾಲಫಾರ್ ಮಾಡಿದ್ದಾರೆ. ನಿಸ್ಸಾಹಯ ಸ್ಥಿತಿಯಲ್ಲಿರತಕ್ಕ ರೈತರು ಆ ಆನೆಕಲ್ ಒಂದರಲ್ಲೇ ಅಲ್ಲ ಇಡೀ ರಾಜ್ಯಾದ್ಯಂತವೂ ಇದ್ದಾರೆ. ಅವರಿಗೆ ಆ ನಿಯಮಾವಳಿಗಳ ಪ್ರಕಾರ ಏನು ಕಂದಾಯದ ರಿಮಿಷನ್ ಆಗಬೇಕೋ ಆದಾಗುತ್ತದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮಾನ್ಯ ಸಚಿವರು 1964 ರಿಂದ ಇಲ್ಲಿಯವರೆಗೂ ಎಲ್ಲೆಲ್ಲಿ 4 ಆಣೆ ಬೆಳೆ ಕೂಡ ಆಗಿಲ್ಲವೋ ಅಥವಾ ಕಡಮೆ ಬೆಳೆಯಾಗಿದೆಯೋ ಅಂಥ ಪ್ರದೇಶಕ್ಕೆಲ್ಲ ಕಂದಾಯದ ವಿನಾಯಿತಿ ಕೊಡಬೇಕು ಎಂಬ ವಿಚಾರವನ್ನು ತಿಳಿಸಿದ್ದಾರೆ. ಇದೇ ವಿಚಾರದಲ್ಲಿ ಹಿಂದೆ ನಮ್ಮ ಮೈಸೂರು ರಾಜ್ಯದಲ್ಲಿ ಒಂದು ಆಜ್ಞೆ ಆಯಿತು. ಆ ಆಜ್ಞೆಯಲ್ಲಿ ರಾಜ್ಯದ ಎಲ್ಲಾ ಭಾಗಗಳೂ ಸೇರಿದ್ದರೂ ಅದೇಕೆ ನಮ್ಮ ಹಾಸನ ಜಿಲ್ಲೆ ಅದರಲ್ಲಿ ಕೈಬಿಟ್ಟು ಹೋಯಿತೋ ಗೊತ್ತಾಗುವುದಿಲ್ಲ. ಹೀಗಿರುವಾಗ ಸರ್ಕಾರದವರು ಈ ಕಂದಾಯ ರೈಟಾಫ್ ಮಾಡತಕ್ಕ ಬಗ್ಗೆ ಯಾವ ಯಾವ ವಿಧಾನಗಳನ್ನು ಅನುಸರಿಸುತ್ತಾರೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೋ ?

ಶ್ರೀ ಜಿ. ಬಿ. ಶಂಕರರಾವ್.—ನಾನು ಕಂದಾಯವನ್ನು ರೈಟಾಫ್ ಮಾಡಿದ ವಿಚಾರ ಹೇಳಲಿಲ್ಲ. ಆದರೆ ಬೀದಾರ್ ಜಿಲ್ಲೆಯಲ್ಲಿ ಆ ಪೋಲೀಸ್ ಆಕ್ಷನ್ ಆದ ಕಾಲಕ್ಕೆ ಅನೇಕ ದಾಖಲೆಗಳು ಕಳೆದು ಹೋದವು. ಅಲ್ಲಿದ್ದ ನಮಗೆ ಯಾರೂ ಸಾಲ ಕೊಟ್ಟಿರಲಿಲ್ಲ ಎಂದು ಹೇಳಿದರು. ಅಂಥಾ ಒಂದು ಅನಿವಾರ್ಯ ಸಂದರ್ಭದಲ್ಲಿ ಅಲ್ಲಿಯ ಜನರಿಂದ ಬರಬೇಕಾಗಿದ್ದ ತಕಾವಿ ಸಾಲ ಇತ್ಯಾದಿಗಳನ್ನು ಮಾತ್ರ ರೈಟಾಫ್ ಮಾಡಲಾಯಿತು. ಇನ್ನು ಹಾಸನ ಜಿಲ್ಲೆಗೇಕೆ ವಿನಾಯಿತಿ ಕೊಡಲಿಲ್ಲ ಎಂದು ಕೇಳಿರತಕ್ಕ ಪ್ರಶ್ನೆಗೆ ನಾವು ಎಲ್ಲ ಕಡೆಗಳಿಂದ ರೆಕಾರ್ಡ್‌ನ್ನು ಕಾಲ್‌ಫಾರ್ ಮಾಡಿದ್ದೇವೆ. ಅವಿನ್ನೂ ಬಂದಿಲ್ಲ. ಎಲ್ಲ ಜಿಲ್ಲೆಯಿಂದಲೂ ರೆಕಾರ್ಡುಗಳನ್ನು ತರಿಸಿ ಅದನ್ನು ರೈಟಾಫ್ ಮಾಡತಕ್ಕ ವಿಚಾರವನ್ನು ಹೇಳಿದ್ದೇನೆ. ಅದನ್ನು ರಿಟ್ರಾಸ್ಪೆಕ್ಟೀವಾಗಿ ಮಾಡಬೇಕೆಂದು ಹೇಳಿದ್ದೇವೆ. ಹಾಗಿರುವಾಗ ಹಾಸನ ಜಿಲ್ಲೆಯನ್ನು ಕೈಬಿಡತಕ್ಕ ಪ್ರಶ್ನೆಯೆಲ್ಲಿ ಉದ್ಭವಿಸುತ್ತದೆ?

Mr. DEPUTY SPEAKER.—The House will now adjourn and meet on Monday at 12 Noon.

The House adjourned at Fifty-five Minutes past One of the Clock to meet again at Twelve of the Clock on Monday, the 15th April 1968.

WD 10879—GPB—600 24-8-1968

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE FORTY-FIRST DAY

OF THE

THIRD SESSION

OF THE

FOURTH LEGISLATIVE ASSEMBLY

WEDNESDAY, 17TH APRIL 1968

CHAITRA 28, 1890 (SAKA)

Vol. XII—No. 10

BANGALORE :
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1968

Price : 25 Paise

CONTENTS

	Pages
Starred Questions and Answers ...	1131—1179
Short Notice Questions and Answers ...	1179—1185
Questions for Answers on the day (but not taken up) ...	1186—1188
Member's Representation ...	1188—1189
Calling attention to a Matter of Urgent Public Importance Regarding murders at Bogojikoppa near Ramadurg Regarding death of Narayana by suicide in Tumkur	1190
Papers laid on the Table— First list of Unstarred Questions and Answers ... Third Report of the Public Accounts Committee... —(Presented) ... First Report of the Committee on Government —Assurances (Presented) ...	1190—1210
Members' Representations ...	1210—1211
Statement of the Chief Minister on the Notice of breach of Privilege by Sri K. H. Patil ...	1211—1212
Privilege Motion regarding Purchase of the Travancore Maharaja's Palace at Bangalore (Disallowed) ...	1212—1226
Official Resolution under Article 252 of the Constitution of India—Regarding Prevention of water pollution —(Adopted) ...	1227
Privilege Motion regarding Chief Minister's Statement on Mysore-Maharashtra Border dispute—(Disallowed) ...	1228—1229
Special Resolution regarding enquiry into assets of Ministers, ex-Ministers, etc., (Disallowed) ...	1229—1134

(Continued on next Page)

MYSORE LEGISLATIVE ASSEMBLY

Wednesday, 17th April 1968.

The House met in the Assembly Chamber, Vidhana Soudha, Bangalore at Thirty Minutes past Eight of the Clock.

MR. DEPUTY SPEAKER (Sri D. MANJUNATH) in the Chair.

STARRED QUESTIONS

(to which oral answers were given)

Cauveri Water Supply Scheme

556. Sri T. R. SHAMANNA (Fort).—

Will the Minister for Home and Municipal Administration be pleased to state :—

(*a*) the stage at which the Scheme to get drinking water from Cauvery to Bangalore stands at present ;

(*b*) whether the scheme is in progress and when it is expected to be completed ;

(*c*) whether it was contemplated to get financial assistance from the World Bank for the execution of Cauvery Scheme ;

(*d*) whether the proposal to obtain the World Bank Loan assistance is given up ;

(*e*) if so, whether any other alternative proposal to get financial assistance for the completion of the project is before the Government ?

A.—Sri R. M. PATIL (Minister for Home and Municipal Administration).—

(*a*) and (*b*) It has now been decided to take up the original 60 million gallons a day project in two stages, the first stage being for an additional supply of 30 million gallons a day. An estimate for Rs. 22·32 crores has now been approved by Government, for taking up the first stage of Cauvery Water Supply Scheme. Several works incorporated in

(SRI R. M. PATIL)

this Scheme, *viz.*, construction of residential quarters at treatment site, bridge across river Bhima and acquisition of lands, etc., are in progress. Pipe-lines works connected with the distribution in City are partly completed. Tender papers for gravity main work, etc., are under scrutiny.

(*c*) Yes.
(*d*) Yes.
(*e*) Yes ; by loan from Government.

ಶ್ರೀ ಟಿ. ಆರ್. ಶಾಮಣ್ಣ.—ನನ್ನ ಪ್ರಶ್ನೆಯ (ಬಿ) ಭಾಗಕ್ಕೆ ಪೂರ್ತಿಯಾಗಿ ಉತ್ತರ ಕೊಟ್ಟಿಲ್ಲ. ಇವೊತ್ತಿನ ದಿವಸದ ಪೇಪರನ್ನು ನೋಡಿದೆ, ನೀರಿನ ಪರಿಸ್ಥಿತಿ ಬಗ್ಗೆ ಬಹಳ ಕಠಿಣವಾಗಿದೆ, ಎಂದು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಆದುದರಿಂದ ಈ ಸ್ಕೀಮನ್ನು ಯಾವಾಗ ಕಂಪ್ಲೀಟು ಮಾಡುತ್ತೀರಿ ಎನ್ನುವ ಬಗ್ಗೆ ಒಂದು ಅಷ್ಯೂರೆನ್ಸ್‌ನ್ನು ಬೆಂಗಳೂರಿನ ನಾಗರಿಕರಿಗೆ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಆರ್. ಎಂ. ಪಾಟೀಲ್.—ಈ ಪ್ರಶ್ನೆಗೆ ಉತ್ತರವನ್ನು ನಿನ್ನೆ ದಿವಸ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಇಲ್ಲಿ ಮಾತನಾಡುವಾಗ ಹೇಳಿದ್ದೇನೆ. ಈಗ ತೀವ್ರವಾಗಿ ಕಾರ್ಯ ಕ್ರಮವನ್ನು ಶುರು ಮಾಡಿ 1973ರ ಒಳಗೇ ಮುಗಿಸಬೇಕು ಎನ್ನುವ ಒಂದು ಕಾರ್ಯಕ್ರಮ ಇದೆ. ಇದು ದುಡ್ಡಿನ ಮೇಲೆ ಅವಲಂಬನೆಯಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ಇಲ್ಲಿ ಒಂದು ಸ್ಟೇಟ್‌ಮೆಂಟು ಕೊಟ್ಟಿರುವುದನ್ನು ನೋಡಿದರೆ ಇದಕ್ಕಾಗಿ ಮಾಡಿರುವ ಎಸ್ಟಿಮೇಟಿನ ಪ್ರಕಾರ ಇನ್ನು ಐದು ವರ್ಷದಲ್ಲಿಳೊಳಗಾಗಿ ಮುಗಿಸಬೇಕು ಎಂದು ಹೇಳಿದ್ದಾರೆ. ಈಗಾಗಲೇ ಪವಿತ್ರವಾದ ನಾಲ್ಕು ವರ್ಷಗಳು ಕಳೆದುಹೋದವು. ಡ್ರೈನೇಜು ಸ್ಕೀಂನ್ನು ಬೇರೆ ರೀತಿಯಾಗಿ ವರ್ಕ್ ಔಟು ಮಾಡಿ ಬರೀ ವಾಟರ್ ಸಪ್ಲೈ ಒಂದನ್ನೇ ತೆಗೆದುಕೊಂಡು ಇದಕ್ಕಾಗಿ ಒಂದು ಡಿಬೆಂಚರು ಲೋನನ್ನಾದರೂ ತೆಗೆದುಕೊಂಡು ಇದನ್ನು ಆದಷ್ಟು ಬೇಗ ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲವೇ ? ಇದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆ ?

Sri R. M. PATIL.—That is under consideration, Sir.

ಶ್ರೀ ಟಿ. ಆರ್. ಶಾಮಣ್ಣ.—ಕಾವೇರಿ ಲೋನ್‌ಗಾಗಿ ವರ್ಲ್ಡ್ ಬ್ಯಾಂಕು ಲೋನು ಬರುವುದನ್ನು ಕೈಬಿಟ್ಟುದರಿಂದ ನಮಗೆ ಆಗಿರತಕ್ಕ ನಷ್ಟ ಎಷ್ಟು ? ಮತ್ತು ಇದಕ್ಕಾಗಿ ಒಬ್ಬರು ಎಕ್ಸ್‌ಪರ್ಟನ್ನು ನೇಮಕ ಮಾಡಿರುವುದರಿಂದ ಎಷ್ಟು ದುಡ್ಡು ಕೊಡಬೇಕಾಗುತ್ತದೆ ಮತ್ತು ಅವರನ್ನು ಬಡಾಗಡೆ ಮಾಡಲು ಎಷ್ಟು ದುಡ್ಡು ಬೇಕಾಗುತ್ತದೆ ಎನ್ನುವುದನ್ನು ತಿಳಿಸುತ್ತೀರಾ ?

Sri R. M. PATIL.—That is a separate question ; I want notice. If a separate question is put, I will furnish the information.

Sri G. DUGGAPPA.—It is said that the project has been divided into two stages. May I know what are the works contemplated to be taken up at the first stage ?

Sri R. M. PATIL.—To get 30 million gallons per day, laying the pipes, construction of bridges, acquisition of land and all these things are to be done in the first stage. Second stage is, putting another line getting 30 million gallons per day.

ಶ್ರೀ ಟಿ. ಆರ್. ಶಾಮಣ್ಣ.—ಡಿಸ್ಟ್ರಿಬ್ಯೂಷನ್ ಮಾಡಲು ನೀರು ತರುವುದಕ್ಕೆ ಮುಂಚೆ ಹಣ ಖರ್ಚು ಮಾಡಿ ಬೆಂಗಳೂರು ನಗರದಲ್ಲಿ ರಸ್ತೆ ಅಗಿದು ಹಳ್ಳ ತೋಡಿದ್ದಾರೆ. ಇದು ಹೇಗೆ ಆಗಿದೆ ಎಂದರೆ ಮಗು ಹುಟ್ಟುವುದಕ್ಕೆ ಮುಂಚೆ ಕುಲಾವಿ ಹೊಲಿಸಿದರು ಎಂದು ಹೇಳಿದ ಹಾಗೆ ಆಗಿದೆ. ಆದುದರಿಂದ ನೀರು ಸಪ್ಲೈ ಮಾಡುವುದಕ್ಕೆ ಟಾಪ್ ಪ್ರಯಾರಿಟಿ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

Sri R. M. PATIL.—The approach of the Hon'ble Member is completely wrong. As it is, it requires distribution. It only supplements the quantity of water to be supplied.

Construction of Bridges across Cauvery River

557. Sri T. P. BORAIAH (Bannur).—

Will the Minister for Public Works be pleased to state :—

(*a*) whether they have prepared an estimate for the construction of bridges across Cauvery River at Hemmige and Shivanasamudra ;

(*b*) the estimated cost of each bridge ;

(*c*) when they would start the said works ?

A.—Sri VEERENDRA PATIL (Minister for Public Works).—

(*a*) No.

(*b*) and (*c*) Does not arise in view of reply to clause (*a*) above.

ಶ್ರೀ ಟಿ. ಪಿ. ಬೋರಯ್ಯ.—(ಅ) ಪ್ರಶ್ನೆಗೆ ಇಲ್ಲ ಎಂದು ಉತ್ತರ ಹೇಳಿದೆ. ಈ ಸೇತುವೆ ಕಟ್ಟುವುದು ಅಗತ್ಯವಿಲ್ಲ ಎಂದು ನಿಮ್ಮ ವಿಚಾರವಿದೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಅದು ಅಗತ್ಯ ಇರಹುದು. ಆದರೆ ಜಾಗ್ರತೆ ಈ ಕೆಲಸ ತೆಗೆದುಕೊಳ್ಳುವ ಸಂಭವ ಕಂಡು ಬರುವುದಿಲ್ಲ.

ಶ್ರೀ ಟಿ. ಪಿ. ಬೋರಯ್ಯ.—ಈ ಸೇತುವೆ ಅಂದಾಜು ತಯಾರ್ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎರಡನೇ ಸೇತುವೆಯ ಎಸ್ಟಿಮೇಟು ತಯಾರಾಗಿದೆ. ಇನ್‌ವೆಸ್ಟಿಗೇಷನ್ ಮಾಡಬೇಕಾಗಿದೆ. ಇದಕ್ಕೆ ಸುಮಾರು 20–25 ಲಕ್ಷ ಖರ್ಚಾಗುವ ಅಂದಾಜು ಇದೆ. ಶಿವನಸಮುದ್ರದ ಹತ್ತಿರದ ಸೇತುವೆಗೆ 10–12 ಲಕ್ಷ ರೂಪಾಯಿ ಖರ್ಚಾಗಬಹುದು. ಇದರ ಅಂದಾಜು ತಯಾರಾಗಿಲ್ಲ. ಅದನ್ನು ತಯಾರ್ಮಾಡಿಸುತ್ತೇವೆ.

Import of Heavy Duty Drills

558. Sri H. C. LINGA REDDY (Malur).—

Will the Minister for Agriculture and Education be pleased to state :—

(*a*) whether Government are aware that the Bihar Government has imported heavy duty drills capable of drilling a well in Five Hours ;

(*b*) whether the State Government also has made similar attempts to procure such heavy duty drills and if so, with what results ?

---

†Indicates that remarks or speeches have not been revised by the member concerned.

A.—Sri K. V. SHANKARA GOWDA (Minister for Agriculture and Education).—

(*a*) No.

(*b*) The Government has taken steps to import some well boring machines. Recently four machines from Poland have been imported. As they have been received very recently, it is too early to say about the results.

Sri H. C. LINGA REDDY.—May I know the cost of each of these machinery that have been imported from Poland ?

Sri K. V. SHANKARA GOWDA.—That information is not available with me.

Sri H. C. LINGA REDDY.—May I know the number of wells that each of these heavy drill machine is capable of digging ?

Sri K. V. SHANKARA GOWDA.—They have not yet been put into operation. That will have to be assessed in future.

Sri H. C. LINGA REDDY.—May I know whether Government have used these machines in the famine stricken areas and assessed their capacity ?

Sri K. V. SHANKARA GOWDA.—No, Sir; we have not yet used these machines anywhere.

Smt. BASAVARAJESWARI.—May I know how many such machines have been bought ?

Sri K. V. SHANKARA GOWDA.—Four.

Sri C. K. RAJAIAH SHETTY.—Is it a fact that a Christian missionary has come forward to take this work on 'no profit' 'no loss' basis and it is going to be tried at Tumkur very shortly ?

Sri K. V. SHANKARA GOWDA.—I am not aware of it.

ಶ್ರೀ ಸಿದ್ದಯ್ಯ ಕಾಶೀಮಠ.—ಇದಕ್ಕಾಗಿ ಪ್ರೈವೇಟ್ ಪಾರ್ಟಿಗೆ ಲೈಸೆನ್ಸ್ ಕೊಡುತ್ತೀರಾ ?

Sri K. V. SHANKARA GOWDA.—If necessary, we will give them.

Sri R. NAGAN GOUDA.—Will the Minister give us an idea as to what each of these machines from Poland costs and what is its capacity ?

Sri K. V. SHANKARA GOWDA.—I have no information about the cost. About the capacity, I have already stated that they have not yet been put to use.

Smt. BASAVARAJESWARI.—Is it not a fact that none of them working in Gulbarga are replaced in spite of repeated requests from the public ?

Sri K. V. SHANKARA GOWDA.—I have already said that they have been recently imported and not put into use. Old ones are given to Raichur.

ಶ್ರೀ ಜೆ. ಆರ್. ಹಾಲಸ್ವಾಮಿ.—ಸ್ವಾಮಿ, ಈ ಬೋರಿಂಗ್ ಮೆಷಿನ್‌ಗಳನ್ನು ತಾಲ್ಲೂಕ್ ಬೋರ್ಡುಗಳಿಗೆ ಕೊಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅದು ಸಾಧ್ಯವಿಲ್ಲ.

Sri V. N. PATIL.—Has Government got any scheme to keep boring machine at the disposal of the Divisional Commissioner as per the need of each Division?

Sri K. V. SHANKARA GOWDA.—The Department of Agriculture is looking after it and there is no necessity to keep it at the disposal of the Divisional Commissioner.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈ ಯಂತ್ರದ ವಿಷಯ ಕೂಡಲೇ ಪರಿಶೀಲನೆ ಮಾಡಿ ಇನ್ನೂ ಕೆಲವು ಯಂತ್ರಗಳನ್ನು ನಮ್ಮ ರಾಜ್ಯಕ್ಕೆ ತರಿಸಿಕೊಳ್ಳುವ ಯೋಚನೆ ಇದೆಯೇ?

ಶ್ರೀ ಕೆ. ವಿ. ಶಂಕರಗೌಡ.—ಈಗಾಗಲೇ ನಾಲ್ಕು ಯಂತ್ರ ತರಿಸಿದ್ದೇವೆ. ಇವುಗಳ ಕೆಲಸ ನೋಡಿಕೊಂಡು ಮುಂದಿನ ಏರ್ಪಾಡು ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀರು ಇರುವ ಕಡೆ ಈ ಬೋರಿಂಗ ಮೆಷಿನ್ಸ್ ಉಪಯೋಗ ಮಾಡಿ ಅನುಕೂಲ ಮಾಡಿ ಕೊಡುತ್ತೀರಾ ಅಥವಾ ನೀರು ಇಲ್ಲದೆ ಕಡೆ ಇದರ ಉಪಯೋಗ ಮಾಡಿ ಜನರಿಗೆ ಅನುಕೂಲ ಮಾಡಿ ಕೊಡುತ್ತೀರಾ?

ಶ್ರೀ ಕೆ. ವಿ. ಶಂಕರಗೌಡ.—ನೀರು ಇರುವ ಕಡೆ ಉಪಯೋಗ ಮಾಡುತ್ತೇವೆ, ನೀರು ಇಲ್ಲದ ಕಡೆ ಕೂಡ ಉಪಯೋಗ ಮಾಡಿ ಅನುಕೂಲ ಮಾಡಿ ಕೊಡುತ್ತೇವೆ.

Sri DIGAMBARA RAO B. KALMANKAR.—It is impossible to dig wells in Gulbarga with only boring machines and the District Development Council, Gulbarga has passed a resolution for providing blasting machines. Will Government consider the desirability of providing blasting machines?

Sri K. V. SHANKARA GOWDA.—That is a different question and it will have to be considered.

ಶ್ರೀ ಬಿ. ಪಿ. ಗಂಗಾಧರ್.—ನಾಲ್ಕು ಮೆಷಿನ್ಸ್ ತರಿಸಿಕೊಂಡಿದ್ದೇವೆ, ಅವುಗಳನ್ನು ಟೆಸ್ಟ್ ಮಾಡಿ ನೋಡಬೇಕು ಎಂದು ಹೇಳಿದಿರಿ. ಅವುಗಳನ್ನು ಟೆಸ್ಟ್ ಮಾಡುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ. ?

ಶ್ರೀ ಕೆ. ವಿ. ಶಂಕರಗೌಡ.—ಈಗ ತಾನೆ ಅವುಗಳನ್ನು ತಂದಿದ್ದೇವೆ. ಆದಷ್ಟು ಜಾಗ್ರತೆ ಉಪಯೋಗಕ್ಕೆ ಅವುಗಳನ್ನು ಹಾಕುತ್ತೇವೆ.

Sri R. NAGAN GOUDA.—I understand these machines came last year and the Agricultural University has been working them for the last 5-6 months. How many wells have they dug?

Sri K. V. SHANKARA GOWDA.—The report is not yet available.

ಶ್ರೀ ಬಿ. ದೊಡ್ಡಬೋರೇಗೌಡ.—ಸ್ವಾಮಿ, ವೆಲ್ ಬೋರಿಂಗ್ ಮೆಷಿನ್ಸ ತರುವುದಕ್ಕೆ ತಾವೇ ಹೋಗಿ, ಅವುಗಳನ್ನು ಪರಿಶೀಲಿಸಿ ಇಂಥ ಮೆಷಿನ್ಸ್ ತರುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ನಾನು ಹೋಗಿ ಪರಿಶೀಲಿಸಿ ಅವುಗಳನ್ನು ತರುವುದಕ್ಕಾಗುವುದಿಲ್ಲ. ಈ ಕೆಲಸ ಮಾಡಲು ಬೇರೆಯವರು ಇದ್ದಾರೆ.

ಶ್ರೀ ಕೆ. ಎಂ. ತಮ್ಮಯ್ಯ.—ನಮ್ಮ ಊರಿನಲ್ಲಿ ಒಂದು ಬೋರಿಂಗ್ ಮೆಷಿನ್‌ನಿಂದ ಮಾಡಿದ ಬೋರ್ ವೆಲ್ ಹಾಕಿದ್ದಾರೆ. ಅಲ್ಲಿ ನೀರು ಬೇಗ ಸಿಕ್ಕಿದೆ. ಇದರಿಂದ ಅನುಕೂಲವಾಯಿತು. ಈ ಬೋರ್ ವೆಲ್ಲಿನಿಂದ ರೈತರಿಗೆ ರೀಪೇಯಿಂಗ್ ಕೆಪಾಸಿಟಿ ಜಾಸ್ತಿಯಾಗುತ್ತದೆ ಅಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ಅದಕ್ಕಾಗಿಯೇ ಬೋರ್‌ವೆಲ್ ಮೆಷಿನ್ಸ್ ತರಿಸಿರುವುದು.

ಶ್ರೀ ಎಂ. ಎನ್. ರಾಮಣ್ಣ.—ನಮ್ಮ ಉಪಯೋಗಕ್ಕಾಗಿ ಎಷ್ಟು ಮೆಷಿನ್ಸ್ ಬೇಕಾಗಿವೆ?

Sri K. V. SHANKARA GOWDA.—I want notice.

Sri C. K. RAJAIAH SHETTY.—Has it come to the notice of the Government that the Agricultural Department is not effectively managing these bore well machines whereas the Geological Department is managing them effectively? In view of this will the Government consider the desirability of handing them over to the Geological Department?

Sri K. V. SHANKARA GOWDA.—It is not correct to say that the Agricultural Department is not effectively using them.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಯಂತ್ರ ತರಿಸಿ ಒಂದು ವರ್ಷವಾಗಿದ್ದರೂ ಕೂಡ, ಈ ಪ್ರಶ್ನೆ ಬಂದ ಮೇಲಾದರೂ ಕೂಡ ಯಂತ್ರ ಸರಿಯಾಗಿ ಕೆಲಸ ಮಾಡುತ್ತಾ ಇವೆಯೇ ಇಲ್ಲವೇ, ಇದು ಜಯಪ್ರದವಾಗಿದೆಯೇ ಇಲ್ಲವೇ ಎನ್ನುವುದಕ್ಕೆ ಒಂದು ವರದಿ ತರಿಸಿಕೊಳ್ಳಲು ನಿಮಗೆ ಏನು ಕಷ್ಟ ಸ್ವಾಮಿ? ಸಂಬಂಧಪಟ್ಟ ಅಧಿಕಾರಿಗಳು ನಿಮಗೆ ಈ ಸಮಾಚಾರ ಏತಕ್ಕೆ ಒದಗಿಸಲಿಲ್ಲ?

ಶ್ರೀ ಕೆ. ವಿ. ಶಂಕರಗೌಡ.—ಈಗ ತಾನೆ ಯಂತ್ರಗಳು ಬಂದಿವೆ, ಇನ್ನೂ ಉಪಯೋಗಕ್ಕೆ ಹಾಕಿಲ್ಲ.

ಶ್ರೀ ವಿ. ಎನ್. ಪಾಟೀಲ್.—ಬೀದರ್ ಜಿಲ್ಲೆಯಲ್ಲಿ ನೀರಿನ ಅಭಾವ ಇರುವ ಹಾಗು ಈ ಬೋರ್ ವೆಲ್ ಹಾಕಬೇಕಾದ ಅಗತ್ಯವಿರುವ 60 ಹಳ್ಳಿಗಳ ಒಂದು ಲಿಸ್ಟ್ ಕೊಟ್ಟರೆ ಆ ಊರುಗಳಲ್ಲಿ ಬೋರ್ ವೆಲ್ ಹಾಕುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ವಿ. ಶಂಕರಗೌಡ.—ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಎಂ. ಎನ್. ರಾಮಣ್ಣ.—ಈ ಯಂತ್ರ ನಡೆಸುವ ಡ್ರೈವರ್ ಇಲ್ಲದ ಅವು ಐಡ್ಲ್ ಆಗಿ ಇವೆ, ಇದು ನಿಜವೇ?

Sri K. V. SHANKARA GOWDA.—It is not true.

Sri M. N. RAMANNA.—The Hon'ble Minister says it is not true. One boring set has been supplied to Tumkur and for want of driver it is lying in Hebbal. I can challenge the Hon'ble Minister on this point. I was requesting the concerned engineer during the last month to make it available to us. He said that there was no driver. I got a driver from my place and asked him to hand it over; it has not yet been given.

Mr. DEPUTY SPEAKER.—Next question.

Distribution of Sugar

560. **Sri DIGAMBARA RAO B. KALMANKAR (Aland).**—

Will the Minister for Food and Civil Supples be pleased to state:—

(*a*) whether the Government is aware that 500 grammes of sugar per unit per month is given in Corporation Area, 400 grammes in District Headquarters and 300 grammes at taluka and Village level in Maharashtra State;

(*b*) at what rate per unit the Government of Mysore is distributing sugar in Corporation Area, District, taluka and village level;

(*c*) whether the Government is not getting sugar quota in proportion to its population as the Government of Maharasthra gets, if so, whether the Government will bring the distribution of sugar at all levels on par with that of Maharashtra?

A.—Sri B. D. JATTI (Minister for Food and Civil Supplies).—

(*a*) No.

(*b*) At 250 grammes per unit per month in the Bangalore Corporation Area.

Allotment of sugar is made to districts with reference to the quota of sugar allotted to the State by the Government of India and the availability of stocks taking into consideration the Local Conditions and requirements. The scales of issues are regulated by the Deputy Commissioners.

(*c*) There are no data to make a valid comparison.

Sri DIGAMBARA RAO B. KALMANKAR.—Supplementary to (*a*), may I know how many units of sugar are given in our State as compared to the neighbouring States?

Sri B. D. JATTI—I have no information regarding the arrangement made in the neighbouring States.

Sri DIGAMBARA RAO B. KALMANKAR.—May I know on what basis the Centre is making allotment to various States?

Sri B. D. JATTI.—They are allotting to us on the basis of past 10 years' consumption of the people of Mysore State.

Sri SIDDIAH KASHIMATH.—Are there any representations to increase the quota of sugar per unit?

Sri B. D. JATTI.—There are regular representations to increase the quota of sugar per unit.

ಶ್ರೀ ಎನ್. ಎ. ಚನ್ನೇಗೌಡ.—ಗ್ರಾಮಾಂತರ ಪ್ರದೇಶ ಮತ್ತು ಕಾರ್ಪೊರೇಷನ್ ಪ್ರದೇಶಗಳಿಗೆ ಹಂಚಿಕೆ ಮಾಡುವುದರಲ್ಲಿ ವ್ಯತ್ಯಾಸ ಮಾಡಕೂಡದೆಂದು ಆದೇಶ ಕೊಟ್ಟಿಲ್ಲವೇ?

ಶ್ರೀ ಬಿ. ಡಿ. ಜತ್ತಿ.—ಇಲ್ಲ. ಇನ್‌ಫಾರ್ಮಲ್ ರೇಷನ್ ಜಾರಿಯಲ್ಲಿರುವ ಕಡೆ ಒಂದು ಯೂನಿಟ್ಟಿಗೆ 250 ಗ್ರಾಂ, ಒಬ್ಬ ವಯಸ್ಕನಿಗೆ 500 ಗ್ರಾಂ ಕೊಡಲಾಗುತ್ತಿದೆ, ಇದು ಒಂದು ತಿಂಗಳಿಗೆ ಕೊಡುವುದು. ಉಳಿದ ಕಡೆಗಳಿಗೆ ಸ್ಥಳೀಯ ಪರಿಸ್ಥಿತಿ, ಅವಶ್ಯಕತೆ ನೋಡಿ ಸಕ್ಕರೆ ಕೋಟಾ ಮತ್ತು ದಾಸ್ತಾನು ನೋಡಿಕೊಂಡು ಜಿಲ್ಲೆಗಳಿಗೆ ಹಂಚುತ್ತೇವೆ. ಅದನ್ನು ಜಿಲ್ಲಾಧಿಕಾರಿಗಳು ಹಂಚುವರು.

ಶ್ರೀ ಎನ್. ಎ. ಚನ್ನೇಗೌಡ.—ಗ್ರಾಮಾಂತರದವರಿಗೆ ಸಕ್ಕರೆ ಪಟ್ಟಣದವರಂತೆ ಹೆಚ್ಚು ಕೊಡಬೇಕಾಗಿಲ್ಲ ಎಂಬುದು ತಮ್ಮ ಅಭಿಪ್ರಾಯವೇ?

ಶ್ರೀ ಬಿ. ಡಿ. ಜತ್ತಿ.—ಅಲ್ಲ.

Sri K. H. PATIL.—When sugar quota is available at a little higher rate, why don't you try to distribute it between the villages and Corporation area on the same basis?

Sri B. D. JATTI.—The sugar that is allotted to Mysore State is 5,036 tonnes. That itself will not be sufficient for domestic consumption. Even for the present arrangement, we require 6,000 tonnes. That is the difficulty.

ಶ್ರೀ ಎಂ. ನಾಗಪ್ಪ.—ಮಹಾರಾಷ್ಟ್ರದಲ್ಲಿ ಒಂದು ಯೂನಿಟ್ಟಿಗೆ 500 ಗ್ರಾಂನಂತೆ ಕೊಡುತ್ತಿರುವರೇ ಎಂದು ತಿಳಿಯ, ಹಾಗೆ ಕೊಡುತ್ತಿದ್ದು ಮೈಸೂರು ದೇಶಕ್ಕೆ ಕಡಮೆ ಅಲಾಟ್‌ಮಾಡಿದ್ದು ಡಿಸ್‌ಕ್ರಿಮಿನೇಟ್ ಮಾಡಿದ್ದರೆ ವಿಚಾರ ತಿಳಿಸಿ ಮಹಾರಾಷ್ಟ್ರಕ್ಕೆ ಕೊಡುವಂತೆ ನಮಗೂ ಹೆಚ್ಚು ಕೊಡುವಂತೆ ಒತ್ತಾಯಮಾಡಿ ಪಡೆಯಲು ಸಾಧ್ಯವೇ ?

ಶ್ರೀ ಬಿ. ಡಿ. ಜತ್ತಿ.—ನನಗೆ ಗೊತ್ತಿರುವ ಹಾಗೆ ಮೈಸೂರಿಗೆ ಕೊಡುವಷ್ಟೇ ಅಲ್ಲೂ ಕೊಡುತ್ತಿರಬೇಕು. ವ್ಯತ್ಯಾಸವಿದೆಯೆಂದು ಹೇಳುವುದಾದರೆ ಕೇಳಿ ತಿಳಿದುಕೊಳ್ಳಬೇಕು.

Sri R. NAGAN GOUDA.—The last crushing season is just now over and the Hon'ble Minister has some reports about the quantity that has been produced in India. Does he feel optimistic enough to increase the quota of sugar per individual during this new season ?

Sri B. D. JATTI.—Sir, for the next year I hope there may be some possibilty of increasing the quota per unit or per adult unit.

Sri DIGAMBARA RAO B. KALMANKAR.—In answer to (*b*) it is stated that the allotment of sugar is made to districts with reference to the quota of sugar allotted to the State by the Government of India and the availability of stocks and local conditions. Has not the Government helped directly in discriminating people from district to district and creating dissatisfaction among the public of our State ?

Sri B. D. JATTI.—That is not the opinion of the Government.

ಶ್ರೀ ಕೆ. ಎಂ. ತಮ್ಮಯ್ಯ.—ಮೊದಲು ವರ್ತಕರ ಮೂಲಕ ಹಂಚುತ್ತಿದ್ದಾಗ ಸ್ವಲ್ಪ ಸಿಕ್ಕುತ್ತಿತ್ತು, ಈಗ ಸೊಸೈಟಿ ಮೂಲಕ ಕೊಡುವುದರಿಂದ ಅಲ್ಲಿ ಕಾಳಸಂತೆ ನಡೆಯುವುದರಿಂದ ಸರಿಯಾಗಿ ಸಿಕ್ಕುವುದಿಲ್ಲ. ಆದುದರಿಂದ ವರ್ತಕರಿಗೆ ಮತ್ತೆ ಸಕ್ಕರೆ ಒದಗಿಸಲು ಲೈಸೆನ್ಸ್ ಕೊಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಈ ಮಾನ್ಯ ಸಭೆಯಲ್ಲಿ ಸಹಕಾರ ಸಂಘಗಳ ಮೂಲಕ ಹಂಚಬೇಕೆಂಬ ಅಭಿಪ್ರಾಯ ವ್ಯಕ್ತವಾದ್ದರಿಂದ ಅವುಗಳ ಮೂಲಕ ಹಂಚುತ್ತಿದ್ದೇವೆ. ವರ್ತಕರ ಮೂಲಕವೇ ಹಂಚಬೇಕೆಂದು ಈ ಸಭೆ ನಿರ್ಣಯಮಾಡಿದರೆ ಹಾಗೆಯೇ ಮಾಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಳೆದ 10 ವರ್ಷದ ಆಧಾರದಮೇಲೆ ಜನಸಂಖ್ಯೆಯ ಆಧಾರದಮೇಲೆ ಕೋಟಾ ಪಡೆಯುವುದಾದರೆ ಹೆಚ್ಚು ದೊರೆಯುವುದೇ ಅಥವಾ ಬೇರೆ ಆಧಾರದ ಮೇಲೆ ಪಡೆದರೆ ಹೆಚ್ಚು ದೊರೆಯುವುದೇ ಎಂಬುದನ್ನು ನೋಡಿ, ಹೆಚ್ಚು ಯಾವುದರ ಮೇಲೆ ಪಡೆಯಬಹುದೋ ಅದನ್ನೇ ಆಧಾರವಾಗಿಟ್ಟುಕೊಳ್ಳಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ತಮ್ಮ ಸಲಹೆಯನ್ನು ಪರಿಶೀಲಿಸಿ ಯಾವುದು ಅನುಕೂಲವೋ ಆ ರೀತಿ ಮಾಡಲು ಪ್ರಯತ್ನಮಾಡುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಈಗ ಪಟ್ಟಣಗಳಿಗೆ ಕೊಡುವಷ್ಟು ಸಕ್ಕರೆ ಹಳ್ಳಿಗಳಿಗೆ ಕೊಡುತ್ತಿಲ್ಲ. ಇದರ ಬಗ್ಗೆ ಎಷ್ಟೋ ಹಳ್ಳಿಗಳಿಂದ ದೂರು ಬಂದಿದೆ. ನನ್ನ ಕ್ಷೇತ್ರದಲ್ಲಿ ಕೊಡುವುದೇ ಇಲ್ಲವೆಂದು ಹೇಳುತ್ತಾರೆ. ಕೊಡುವುದೂ ಕಡಮೆ. ಇದನ್ನು ಗಮನಿಸಿ ಎಲ್ಲ ಕಡೆಗೂ ಒಂದೇ ಸಮನಾಗಿ ಕೊಡಲು ಏರ್ಪಾಡು ಮಾಡುತ್ತೀರಾ ? ಎರಡನೆಯದಾಗಿ ಈಗ ಕೊಡುವ ಸಕ್ಕರೆ ಕಾಳಸಂತೆಯಲ್ಲಿ ಮಾರಾಟವಾಗುವುದರಿಂದ ಸರಕಾರಿ ಏಜನ್ಸಿಮೂಲಕ ಕೆಲವು ಡಿಪೋಗಳಲ್ಲಿ ಕ್ಲಾರ್ಕುಗಳನ್ನು ನೇಮಕಮಾಡಿ ಅವರ ಮೂಲಕ ಹಂಚಿಕೆ ಮಾಡುವುದಕ್ಕೆ ಅಥವಾ ಹಳ್ಳಿಯವರಿಗೂ ಕಾರ್ಡನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ನಮ್ಮ ಸ್ಟೇಟ್‌ಗೆ ಬಂದ ಸಕ್ಕರೆ ಕೋಟಾ ಡಿಸ್ಟ್ರಿಕ್‌ವೈಸ್ ಅಲಾಟ್ ಮಾಡುತ್ತೇವೆ. ಡಿಸ್ಟ್ರಿಕ್ಟ್ ಹಂತದಲ್ಲಿ ಡಿಸ್ಟ್ರಿಕ್ಟ್ ಅಡ್ವೈಸರಿ ಕಮಿಟಿಯವರು ಸಲಹೆಯನ್ನು ತೆಗೆದುಕೊಂಡು ಡೆಪ್ಯೂಟಿ ಕಮಿಷನರು ತಾಲ್ಲೂಕಿಗೆ ಅಲಾಟ್ ಮಾಡುತ್ತಾರೆ. ಅದನ್ನು ಡಿಸ್ಟ್ರಿಬ್ಯೂಟ್ ಮಾಡಲಿಕ್ಕೆ ತಾಲ್ಲೂಕು ಸಲಹಾ ಸಮಿತಿ ಇದೆ. ಮಾನ್ಯ ಸದಸ್ಯರು ಇದ್ದಾರೆ ಅಲ್ಲಿ ಬ್ಲಾಕ್ ಮಾರ್ಕೆಟ್ ಆಗುತ್ತಾ ಇದ್ದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆ. ಈಕ್ವಲ್ ಆಗಿ ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ ತಿಂಗಳಿಗೆ ಯೂನಿಟ್ ಒಂದಕ್ಕೆ 250 ಗ್ರಾಂ ಸಕ್ಕರೆಯನ್ನು ಹಂಚಲಾಗುತ್ತಿದೆ. ಇದೇ ಪ್ರಕಾರ ಸಣ್ಣ ಪಟ್ಟಣ ಗಳಿಗೂ ಕೂಡ 250 ಗ್ರಾಂ ಸಕ್ಕರೆಯನ್ನು ಕೊಡತಕ್ಕ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಸದ್ಯಕ್ಕೆ ಇರತಕ್ಕ ಪರಿಸ್ಥಿತಿಯಲ್ಲಿ ಆ ಏರ್ಪಾಡು ಮಾಡುವುದಕ್ಕೆ ಸಾಧ್ಯವಿಲ್ಲ ಈಗಿರತಕ್ಕ ಸಕ್ಕರೆಗಿಂತಲೂ ಹೆಚ್ಚು ಬಂದರೆ ಮಾಡುವುದಕ್ಕೆ ಸಾಧ್ಯ.

Sri AZIZ SAIT.—The Hon'ble Minister was pleased to say that there are Food Advisory Committees to advise the respective Deputy Commissioners regarding distribution. Has it not come to the notice of the Hon'ble Minister that Food Advisory Committee meetings are not being convened by the respective Deputy Commissioners particularly in Mysore ?

Sri B. D. JATTI.—I have not get that information. If that is the case in Mysore, I will immediately instruct the Deputy Commissioner to convenue meetings regularly.

ಶ್ರೀ ಕೆ. ಎನ್. ವೀರಪ್ಪ ಗೌಡ.—ಮಾನ್ಯ ಸದಸ್ಯರು ಸೊಸೈಟಿಗಳಲ್ಲಿ ಬ್ಲಾಕ್ ಮಾರ್ಕೆಟ್ ಆಗುತ್ತಿದೆ ಎಂದು ಹೇಳಿದರು. ಯಾವುದಾದರೂ ಸೊಸೈಟಿ ವಿಷಯವಾಗಿ ತಮಗೆ ನೋಟೀಸ್ ಬರೆದು ಅವರು ಕಳುಹಿದ್ದಾರೆಯೇ ? ಅಥವಾ ಅವರು ಯಾವುದಾದರೂ ಸೊಸೈಟಿಯ ಡೈರೆಕ್ಟರ್ ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ.

ಶ್ರೀ ಬಿ. ಡಿ. ಜತ್ತಿ.—ನನ್ನ ಗಮನಕ್ಕೆ ಬಂದಿಲ್ಲ, ಮತ್ತು ಅವರು ಆ ರೀತಿ ಬರೆದಿಲ್ಲ.

Smt. WINNIFRED F. FERNANDES.—In our Taluk, *i.e.*, Coondapur, in town areas we get only 150 grammes per unit per month for card holders and in rural areas we get only 50 grammes per unit. Will the hon'ble Minister kindly instruct the Deputy Commissioner concerned to have uniformity as you have given to the Corporation Area, because those 50 and 150 grammes now given is only a pinch?

Sri B.D. JATTI.—If the members of the Advisory Committee at the District level discuss and decide, the Deputy Commissioner will implement it.

Sri DIGAMBARA RAO B. KALMANKAR.—May I know onwhat basis the quota is allotted to each district—whether on population basis or some other basis?

Sri B.D. JATTI.—It is on population basis plus the quantity of sugar available in the State.

Yellow Leaf Disease

562. Sri K. H. SRINIVASA (Sagar).—

Will the Minister for Agriculture and Education be pleased to state :—

(a) whether Government are aware that the Yellow Leaf Disease is still prevalent in the Areca gardens of Sagar Taluk and some other areas ;

(Sri K. H. Srinivasa)

(*b*) the result of the "Yellow Leaf Disease Research Scheme"

(*c*) whether it is a fact that the "Research Scheme" has been wound up ;

(*d*) if so, the reasons for winding up the Yellow Leaf Disease Research Scheme ?

A.—Sri K. V. SHANKARA GOWDA (Minister for Agriculture and Education).—

(*a*) Yes.

(*b*) The restlts on the Yellow Leaf disease are as follows:—

1. The chemical analysis of soils and leaves show no consistent differences in the contents of Calcium Magnesium, Phosphorus, Potassium and Feroes (Iron) as compared to the diseased and healthy areca palms.

2. In general the Nitrogen content in the leaves of healthy: areca and soils around them is more than those of the diseased palms.

3. The disease is not caused by any of the micro organisms.

4. Application of lime and Nitrogen, Phosphorus and potassium with Zinc Sulphate to the soil resulted in the reduction of diseased symptoms.

5. The incidence of the disease is more in ill-drained and neglected gardens.

(*c*) No.

(*d*) Dose not arise.

ಶ್ರೀ ಕೆ. ಎಚ್. ಶ್ರೀನಿವಾಸ.—ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಸಂಶೋಧನಾ ಯೋಜನೆಯನ್ನು ಕೈಬಿಟ್ಟಿರುವುದು ನಿಜವಲ್ಲವೆಂದು ಹೇಳಿದೆ. ಹಾಗಾದರೆ ರಿಸರ್ಚ್‌ಸ್ಕೀಮನ್ನು ಮುಂದುವರಿಸುತ್ತೀರಿ ಎಂಬುದಾಗಿ ಭಾವಿಸಬಹುದೇ ?

ಶ್ರೀ ಕೆ. ವಿ. ಶಂಕರಗೌಡ.—ಹೌದು ಮುಂದುವರಿಸುತ್ತಿದ್ದೇವೆ. ಆದರೆ ರಿಸರ್ಚ್‌ಸ್ಕೀಂ ಪ್ರಕಾರ ಫಾಲೋಅಪ್ ಆಕ್ಷನ್ ನಡೆಯಬೇಕು. ಅದು ಸಮರ್ಪಕವಾಗಿ ನಡೆಯದಿದ್ದರೆ ಅದನ್ನು ಸುಮ್ಮನೆ ಮುಂದುವರಿಸಿಕೊಂಡು ಹೋದರೆ ಏನೂ ಪ್ರಯೋಜನವಿಲ್ಲ. ಅದಕ್ಕಾಗಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು ಮತ್ತು ಅಗ್ರಿಕಲ್‌ಚರಲ್ ಯೂನಿವರ್ಸಿಟಿ ವೈಸ್ ಛಾನ್ಸಲರ್ ಅವರು ಇದರ ಫಾಲೋಅಪ್ ಆಕ್ಷನ್ ಸಮರ್ಪಕವಾದ ರೀತಿಯಲ್ಲಿ ನಡೆಸುವುದಕ್ಕೆ ಸರ್ಕಾರದವರು ವ್ಯವಸ್ಥೆಮಾಡಬೇಕೆಂದು ಹೇಳಿದ್ದಾರೆ. ಆದರಿಂದ ಈ ರಿಸರ್ಚ್ ಸ್ಕೀಮನ್ನು ಮುಂದುವರಿಸುವ ಬಗ್ಗೆ ಫಾಲೋಅಪ್ ಆಕ್ಷನ್ ತೆಗೆದುಕೊಳ್ಳುತ್ತೇವೆ.

Expenditure incurred on Staff working in Upper Krishna Project

563. Sri M. NAGAPPA (Raichur).—

Will the Minister for Public Works be pleased to state :—

(*a*) the amout spent on the staff in the year 1967-68 (including all the staff—clerical, executive, menials etc.,) on Upper Krishna Project.

(*b*) the amout spent for the Project work in the year 1967-68 ?

A.—Sri VEERENDRA PATIL (Minister for Public Works).—

(*a*) Rs. 8.92 lakhs.

(*b*) Rs. 10.37 lakhs.

ಶ್ರೀ ಎಂ. ನಾಗಪ್ಪ.—ಅಪ್ಪರ್‌ಕೃಷ್ಣಾ ಪ್ರಾಜೆಕ್ಟಿಗೆ 1967-68ನೇ ಸಾಲಿನಲ್ಲಿ ತಾವು ಬಡ್ಜೆಟ್ಟಿನಿಂದ ಏನು ಮೊಬಲಗನ್ನು ಪ್ರೊವೈಡ್ ಮಾಡಿದ್ದೀರಿ ?

†ಶ್ರೀ ವೀರೇಂದ್ರ ಪಾಟೀಲ್.—1967-68ನೇ ಸಾಲಿನಲ್ಲಿ ಸುಮಾರು 50 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಖರ್ಚುಮಾಡಬೇಕೆಂದು ವಿಚಾರಮಾಡಿದ್ದೇವೆ.

ಶ್ರೀ ಎಂ. ನಾಗಪ್ಪ.—ಈ 50 ಲಕ್ಷ ರೂಪಾಯಿಗಳ ಪೈಕಿ, 10.37 ಲಕ್ಷ ರೂಪಾಯಿಗಳನ್ನು ಯೋಜನೆಯ ಕಾಮಗಾರಿಗಳಿಗೂ, 8.92 ಲಕ್ಷ ರೂಪಾಯಿಗಳನ್ನು ಎಸ್ಟಾಬ್ಲಿಷ್‌ಮೆಂಟಿಗೋಸ್ಕರ ಖರ್ಚುಮಾಡಿದ್ದೀರಿ. ಇದರಿಂದಾಗಿ ಕೇರಳದವರು ಹೇಳಿದಂತೆ ಈ ಪ್ರಾಜೆಕ್ಟ್ ಬಗ್ಗೆ ಬರೀ ಎಸ್ಟಾಬ್ಲಿಷ್‌ಮೆಂಟ್ ಮಾತ್ರ ಸಾಕಬೇಕೆಂಬ ಉದ್ದೇಶವನ್ನು ತಾವು ಇಟ್ಟುಕೊಂಡಿರುವುದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.— ಅದು ನಿಜವಲ್ಲ. 1967-68ನೇ ಸಾಲಿನಲ್ಲಿ ಇದರ ಬಗ್ಗೆ ಏನೂ ಕೆಲಸಮಾಡುವುದಕ್ಕೆ ಆಗಲಿಲ್ಲ. ಸಿಬ್ಬಂದಿಯವರು ಈ ಪ್ರಾಜೆಕ್ಟಿನ ಇನ್‌ವೆಸ್ಟಿಗೇಷನ್, ಸರ್ವೆ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಬಹುಶಃ ಈ ಕೆಲಸವನ್ನು ಮಾಡಬೇಕೆಂದಿದ್ದೇವೆ.

ಶ್ರೀ ಎಂ. ನಾಗಪ್ಪ.—ಈ ಪ್ರಾಜೆಕ್ಟಿಗೆ 50 ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದೆ ಎಂದು ಹೇಳಿದಿರಿ. ತಾವು ಇಟ್ಟಿರತಕ್ಕ ಸಿಬ್ಬಂದಿ, ಅಲ್ಲಿ ಕೆಲಸಗಳು ಆಗಬೇಕಾದ ಪರಿಸ್ಥಿತಿಯನ್ನು ನೋಡಿದರೆ ಈಗ ಆ ಬಾಬಿಗೆ ಇಟ್ಟಿರತಕ್ಕ ಮೊಬಲಗನ್ನು ಏನಾದರೂ ಹೆಚ್ಚುಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—50 ಲಕ್ಷ ರೂಪಾಯಿಗಳು ಸಾಲದು ಎಂಬುದಾಗಿ ನಾನೇ ಹೇಳಿದ್ದೇನೆ. ಈ ವರ್ಷ ಏನಾದರೂ ಮಾಡಿ 2 ಕೋಟಿ ರೂಪಾಯಿಗಳನ್ನು ಅದಕ್ಕಾಗಿ ಖರ್ಚುಮಾಡಬೇಕೆಂದು ವಿಚಾರಮಾಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ.—ಈ ಪ್ರಾಜೆಕ್ಟಿಗೆ 76 ಕೋಟಿ ರೂಪಾಯಿಗಳು ಮೊದಲನೆಯ ಹಂತದಲ್ಲಿ ಖರ್ಚುಮಾಡಬೇಕೆಂದು ನಿರ್ಧಾರವಾಗಿದೆ. ಅಂದಮೇಲೆ ಕೇವಲ 2-3 ಕೋಟಿ ರೂಪಾಯಿಗಳು ಇದಕ್ಕಾಗಿ ಖರ್ಚುಮಾಡುತ್ತಾ ಹೋದರೆ, ಕನಿಷ್ಟಪಕ್ಷ ಈ ಪ್ರಾಜೆಕ್ಟ್ ಮುಗಿಯುವುದಕ್ಕೆ 100 ವರ್ಷಗಳಾದರೂ ಬೇಕು. ಅದಕ್ಕಾಗಿ ಏನಾದರೂ ಫೇಸ್ಡ್ ಪ್ರೋಗ್ರಾಂ ಮಾಡಿ 4ನೇ ಯೋಜನೆಯಲ್ಲಿ ಆದರೂ ಕನಿಷ್ಠಪಕ್ಷ ಮೊದಲನೆಯ ಹಂತವನ್ನಾದರೂ ಮುಗಿಸುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಯಾವ ರೀತಿಯಲ್ಲಿ ಹಣ ಖರ್ಚು ಆಗುತ್ತದೋ ಅದನ್ನು ನೋಡಿಕೊಂಡು ಸ್ವಲ್ಪಮಟ್ಟಿಗಾದರೂ ಅದರಿಂದ ಲಾಭ ಬರುವಂತೆ ಫೇಸ್ಡ್ ಪ್ರೋಗ್ರಾಂ ಮಾಡಬೇಕೆಂದು ಸರ್ಕಾರ ಮತ್ತು ಇಂಜನಿಯರುಗಳು ಪರಿಶೀಲನೆ ಮಾಡುತ್ತಿದ್ದಾರೆ.

Sri DIGAMBARA RAO B. KALMANKAR.—Will the Government consider, without waiting for the Central aid or the loans from the World Bank, to make its own provision and give 5 crores of rupees this year for this project ?

Sri VEERENDRA PATIL.—The Budget provision for the current year is only 50 lakhs of rupees. I have been insisting upon the Finance Department and the Chief Minister that this is quite inadequate and we must be in a position to spend at least about 2 crores of rupees. I am trying my best in this respect

ಶ್ರೀ ಎಸ್. ಎಂ. ಗುರಡ್ಡಿ.—ಈ ಯೋಜನೆಗಾಗಿ ಕಾಮಗಾರಿಗಳ ಬಗ್ಗೆ 10.37 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಪ್ರಾಜೆಕ್ಟ್ ವರ್ಕ್ಸ್ ಅಂದರೆ ಕಟ್ಟಡಗಳನ್ನು ಕಟ್ಟುವುದು, ಸಿಬ್ಬಂದಿಗೆ ಕ್ವಾರ್ಟರ್ಸ್ ಕಟ್ಟುವುದು ಎಂದು ಅರ್ಥವೇ ?

ಶ್ರೀ ವೀರೇಂದ್ರ ಪಾಟೀಲ್.—ಪ್ರಾಜೆಕ್ಟ್ ವರ್ಕ್ ಅಂದರೆ, ಅದಕ್ಕೆ ಬೇಕಾದಂಥ ಇನ್‌ವೆಸ್ಟಿಗೇಷನ್ ಮತ್ತು ಸರ್ವೆ ಮುಂತಾದುವನ್ನು ಮಾಡುವುದಕ್ಕೆ ಅಷ್ಟು ಹೆಚ್ಚಿಗೆ ಖರ್ಚಾಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಪ್ರಾಜೆಕ್ಟ್ ವರ್ಕ್ಸ್ ಬಗ್ಗೆ ಬಡ್ಜೆಟ್ಟಿನಲ್ಲಿ ಏನು ಮೊಬಲಗನ್ನು ಪ್ರೊವೈಡ್ ಮಾಡಿರುತ್ತೀರೋ ನಮಗೆ ಕಂಡುಬಂದಂತೆ ಎಲ್ಲವನ್ನೂ ಪೂರ್ತಿಯಾಗಿ ನೀವು ಖರ್ಚುಮಾಡುವುದಿಲ್ಲ. ಬಡ್ಜೆಟ್ ಅಲಾಟ್‌ಮೆಂಟ್‌ನಲ್ಲಿ ಹೆಚ್ಚಿಗೆ ಖರ್ಚಾಗುವ ಕಡೆಗಳಲ್ಲಿ ಕಡಿಮೆ ಅಲಾಟ್‌ಮೆಂಟ್ ಮಾಡಿರುತ್ತೀರಿ. ಅಷ್ಟಾದರೂ ಮಿನಿಮಂ ಇನ್ನುಮುಂದೆ ಖರ್ಚುಮಾಡುತ್ತೀವೆಂದು ನೀವು ಭರವಸೆ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಬಡ್ಜೆಟ್ಟಿನಲ್ಲಿ ಎಷ್ಟು ಅಲಾಟ್ ಮಾಡುತ್ತಾರೋ ಅಷ್ಟನ್ನೆಲ್ಲಾ ಖರ್ಚುಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಎಷ್ಟೆಷ್ಟು ಖರ್ಚುಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ನೋಡಿಕೊಂಡು ಖರ್ಚುಮಾಡುತ್ತೇವೆ. ನಮ್ಮ ಇಂಜನಿಯರುಗಳು ಮೂರು ತಿಂಗಳಿಗೊಮ್ಮೆ ಸೇರಿ ಅದನ್ನು ರಿವ್ಯೂ ಮಾಡಿ ರೀಅಪ್ರೋಪ್ರಿಯೇಷನ್ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ.

ಶ್ರೀ ಎಂ. ನಾಗಪ್ಪ.—ಅಪ್ಪರ್ ಕೃಷ್ಣಾ ಯೋಜನೆಯಲ್ಲಿ ಬಲದಂಡೆ ನಾಲೆಯ ಕಾಮಗಾರಿಯನ್ನು ಮೊದಲನೆಯ ಹಂತದಲ್ಲಿ ಸೇರಿಸಿದರೆ, ಅಲ್ಲಿ ಕೆಂಪು ಭೂಮಿಯಿಂದ ರಿಟರ್ನ್ ಹೆಚ್ಚಿಗೆ ಬರತಕ್ಕದ್ದು ಇದೆಯೆಂದು ಸರ್ಕಾರದ ಗಮನಕ್ಕೆ ತಂದಿರುವುದರಿಂದ, ಅದನ್ನು ಮೊದಲನೆಯ ಹಂತದಲ್ಲಿಯೇ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಪ್ರಾಜೆಕ್ಟ್ ವರದಿ ಪ್ರಕಾರ ಅದು ಮೊದಲನೆಯ ಹಂತದಲ್ಲಿಲ್ಲ. ಎರಡನೆಯ ಹಂತದಲ್ಲಿ ಮತ್ತೆ ಬದಲಾವಣೆ ಮಾಡುವುದಕ್ಕೆ ಕಾಂಪ್ಲಿಕೇಷನ್ಸ್ ಆಗುತ್ತದೆ. ಆದ್ದರಿಂದ ನಾವು ಪ್ರಾಜೆಕ್ಟ್ ರಿಪೋರ್ಟ್ ಪ್ರಕಾರವೇ ಈಗ ಹೋಗಬೇಕಾಗುತ್ತದೆ.

Sri C. K. RAJAIAH SHETTY.—If you just look to the amounts you have provided for different projects, there is no hope of completing any of the projects in the State. Will you kindly see that adequate funds are provided and all those projects are completed ?

Sri VEERENDRA PATIL.—That is cur policy. We are going to concentrate on the completion of all those projects which have reached advanced stage. But at the same time, we cannot give up the other projects. In view of the inadequacy of funds we may not be able to spend more on these projects.

Sri DIGAMBARA RAO B. KALMANKAR.—May I know, what is the total amount spent so far since 1964 ?

Sri VEERENDRA PATIL.—Up to end of March 1967, the total amount spent is Rs. 186 lakhs and 48 thousands.

9–00 A. M.


ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ಭಾಷಣದಲ್ಲಿ ಮೊದಲನಿಂದ ಕೊನೆಯುವರೆಗೂ ನಾವೇನೂ ಮಾಡಿಲ್ಲ ಅಧಿಕಾರಿಗಳು ಹೇಗೆ ಹೇಳಿದ್ದಾರೋ ಹಾಗೆ ಮಾಡಿದ್ದೇವೆ ಎಂದು ಹೇಳಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್.—ಪಿ. ಡಬ್ಲ್ಯು. ಡಿ. ಸೆಕ್ರೆಟರಿಯವರಿಗೆ ಕಳುಹಿಸಿದ್ದೇವೆ. ನೆಗೋಷಿಯೇಟ್ ಮಾಡಿದ್ದೇವೆ, ನಮಗೆ ಬಂದ ವರದಿಯನ್ನು ಪರಿಶೀಲನೆ ಮಾಡಿ ಅದರಮೇಲೆ ನಿರ್ಣಯ ಮಾಡಿದ್ದೇವೆ ಎಂದು ಹೇಳಿದ್ದೇನೆ. ಅಧಿಕಾರಿಗಳು ಯಾವ ರೀತಿಯಿಂದ ವ್ಯಾಲ್ಯುಯೇಷನ್ ಮಾಡಿದ್ದಾರೆ. ಅದೇ ರೀತಿ ಕೊಟ್ಟಿದ್ದೇವೆ ಎಂದು ನಾನು ಎಲ್ಲೂ ಹೇಳಿಲ್ಲ, ಬೇಕಾದರೆ ಇನ್ನೊಂದು ಸಲ ಓದಿ ಮುಂದಿನ ಸಲ ಈ ವಿಷಯವನ್ನು ಪ್ರಸ್ತಾಪಮಾಡಿ.

ಶ್ರೀ ಎಚ್. ಎನ್. ನಂಜೇಗೌಡ (ನಂಜನಗೂಡು).—ಎಕ್ಸಿಕ್ಯೂಟೀವ್ ಇಂಜನಿಯರು ವ್ಯಾಲ್ಯುಯೇಷನ್ ಹಾಕಿದ್ದು 1966ರಲ್ಲಿ ಚೀಫ್ ಇಂಜನಿಯರು ವ್ಯಾಲ್ಯುಯೇಷನ್ ಹಾಕಿರುವುದು 1967ರಲ್ಲಿ. ನಿಮಗೆ ಗೊತ್ತಿರುವ ಹಾಗೆ ದಿನ ದಿನಕ್ಕೆ ರೇಟ್ ಹೆಚ್ಚಾಗುತ್ತಾ ಬಂದಿದೆ.

Sri M. NAGAPPA (Raichur).—Sir, are we discussing the very Privilege Motion itself?

ಈ ರೀತಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಹೇಗೆ?

We are deviating from the rules and discussing the very subject, as if the Privilege Committee has submitted a Report, on the Floor of this House. We need not go into the niceties of the case. Otherwise, every body must have an opportunity to speech on the subject.

Mr. DEPUTY SPEAKER.—I have given an opportunity to the Hon'ble Minister to explain.

Sri M. NAGAPPA.—It is being discussed as if every letter, every correspondence and all documents have been placed on the Table of this House. These are all documents to be placed before the Privilege Committee.

Sri DIGAMBARA RAO B. KALMANKAR.—Sir, I rise to a point of Order. At this stage, can the Hon'ble Minister go on giving all the details and are they to be considered? The Hon'ble House is to see whether there is a prima facie case or not. A definite question was posed by my friend, Sri Siddaveerappa as to whether the Chief Engineer had given his report of the valuation as Rs. 13 lakhs and odd. To that question, the Hon'ble Minister has replied that on 28th July 1967 he made the valuation according to which it comes to Rs. 13 lakhs and odd. That is sufficient. If we go beyond this, that would mean that this House has usurped the jurisdiction of the Privilege Committee, to which this matter is likely to be referred. Prima facie, there is a case of breach of privilege. But, we are deviating from the procedure. Now, I think, this much is sufficient to come to the conclusion that there is a prima facie case as made out by the hon'ble Member Sri Siddaveerappa. Therefore, no more discussion may be allowed to take place and no more statement is required to arrive at a decision.

Mr. DEPUTY SPEAKER.—The Hon'ble Minister has given the explanation.

† Sri B. P. GANGADHAR.—Sir, I rise to a point of order under Rule 311. Sir, we are aware and fully confronted with the facts that a Privilege Motion is moved and the hon'ble Member Sri Siddaveerappa has elaborately discussed it. And, the Hon'ble Minister is replying to it now. It is for the Committee to get all the necessary details about the date, the person who examined it and the person who valued it, etc. If we go on putting questions for anything and everything now and then, he may not be able to complete his reply. Let the Hon'ble Minister complete his reply, and then, the Speaker can come to a conclusion whether there is a prima facie case or not. We may allow the Hon'ble Minister to make a statement, because he has understood the whole thing—he was noting down all the questions as I could see.

ಶ್ರೀ ವೀರೇಂದ್ರ ಪಾಟೀಲ್.—ಈಗ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಒಂದು ವಿಷಯವನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಕೇಳಿದ್ದಾರೆ ಏನೆಂದರೆ ಇದು ಕ್ಯಾಬಿನೆಟ್‌ಗೆ ಹೋಗಿತ್ತು. ಕ್ಯಾಬಿನೆಟ್‌ನಲ್ಲಿ ಚೀಫ್ ಇಂಜಿನಿಯರು, ಎಕ್ಸಿಕ್ಯೂಟೀವ್ ಇಂಜನಿಯರು ಯಾರು ವ್ಯಾಲ್ಯುಯೇಷನ್ ಮಾಡಿದ್ದಾರೋ ಅವರು ಇರಲಿಲ್ಲ, ಇರುವುದಿಲ್ಲ, ಯಾರಿಗೋ ಒಬ್ಬರು ಇಬ್ಬರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಂಡಿದ್ದಾರೆ ಅಂತ ಹೇಳಿ ಅವರ ಮನಸ್ಸಿನಲ್ಲಿ ಇದ್ದ ಹಾಗೆ ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ವಿಷಯ ಬಂದಿರಲಿಕ್ಕೇ ಬೇಕು. All these gentlemen are criminally and grossly negligent; they have not safeguarded the interests of the State.

ಶ್ರೀ ವೀರೇಂದ್ರ ಪಾಟೀಲ್.—ಈ ವಿಷಯದಲ್ಲಿ ಹೇಳಬೇಕಾದರೆ ಪ್ರತಿಯೊಂದೂ ಪ್ರೊಸೀಜರ್ ಪ್ರಕಾರ ಏನು ಮಾಡಬೇಕಾಗಿದೆಯೋ ಆ ರೀತಿ ಮಾಡುವುದರಿಂದ—ಕ್ಯಾಬಿನೆಟ್ ಮುಂದೆ ನೋಟಿಂಗ್ ಇರುತ್ತದೆ ಅದನ್ನೆಲ್ಲಾ ಹೇಳುವುದು ಸಮಂಜಸವಲ್ಲ, ಹೇಳುವುದಕ್ಕೆ ಸಾಧ್ಯವೂ ಇಲ್ಲ ಇಷ್ಟು ಮಾತ್ರ ಹೇಳಬಹುದು, 18 ಲಕ್ಷ ರೂಪಾಯಿನ ಒಂದು ಬಿಲ್ಡಿಂಗ್‌ನ್ನು ಸರ್ಕಾರದವರು ಖರೀದಿ ಮಾಡಬೇಕಾಗಿದ್ದರೆ. ತೆಗೆದುಕೊಳ್ಳಬೇಕಾಗಿದ್ದರೆ, ಏನು ಒಂದು ಪ್ರೊಸೀಜರ್ ಇದೆಯೋ ಅದನ್ನೆಲ್ಲಾ ಪೂರ್ತಿ ಮಾಡಿದ್ದೇವೆ, ಅದರಲ್ಲಿ ಚ್ಯುತಿ ಮಾಡಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈಗ ಅನೇಕ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಕೇಳುತ್ತಾರೆ. ಕೆಲವು ಪ್ರಶ್ನೆಗಳಿಗೆ ನಮ್ಮಲ್ಲಿ ಮಾಹಿತಿ ಇರುತ್ತದೆ, ಇನ್ನು ಕೆಲವು ಪ್ರಶ್ನೆಗಳಿಗೆ ಮಾಹಿತಿ ಇರುವುದಿಲ್ಲ. ಇಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರ ಹೇಳಲಿಲ್ಲವೆಂದು ಅದಕ್ಕೆ ಪ್ರಿವಿಲೆಜ್ ಮೋಷನ್ ತಂದು ಸಪ್ರೆಸ್ ಮಾಡಿದ್ದಾರೆಂದು ಹೇಳಿದರೆ ಅಂಥಾ ಪ್ರಸಂಗ ಇಲ್ಲಿ ಏನೂ ಇಲ್ಲ. ಇಲ್ಲಿ ಆ ರೀತಿ ನಡೆದದ್ದೂ ಯಾವುದೂ ಇಲ್ಲ. ಈ ಮನೆಯಲ್ಲಿ ಈ ರೀತಿ ಸಪ್ರೆಸ್ ಮಾಡಬೇಕೆಂಬ ವಿಚಾರ ಇಲ್ಲಿಯವರೆಗೂ ಬರಲಿಲ್ಲ. ನನ್ನಲ್ಲಿ ಏನು ಮಾಹಿತಿ ಇರುತ್ತದೋ ಅದನ್ನು ಇಲ್ಲಿ ಹೇಳುವುದಕ್ಕೆ ತಯಾರಾಗಿರುತ್ತೇನೆ. ಇದರಲ್ಲಿ ಈ ಪ್ರಶ್ನೆ ಮುಖ್ಯವಾಗಿ ಏಕೆ ಬರಲಿಲ್ಲ ಅಂದರೆ ಮೊದಲಿನಿಂದಲೂ ಅದನ್ನು ಖರೀದಿ ಮಾಡಿದ್ದಾರೆಂಬ ಪ್ರಶ್ನೆ ಬರಲಿಲ್ಲ. ಏನೋ ಡೆಲಿಬರೇಟಾಗಿ ಇದನ್ನು ಮುಚ್ಚಬೇಕು, ಸಪ್ರೆಸ್ ಮಾಡಬೇಕೆಂಬ ವಿಚಾರ ಏನೂ ಇಲ್ಲವೆಂದು ಇನ್ನೊಮ್ಮೆ ಸ್ಪಷ್ಟಪಡಿಸುತ್ತೇನೆ.

Sri H. SIDDAVEERAPPA.—Before you give your ruling I would like to know from the Hon'ble Minister, one information. Having heard all that he has said, and as the Government Order is not yet issued, may I very earnestly request you, in the interest of your own Cabinet, not to finalise the Government Order, because if you finalise it you will be doing so under suspicious circumstances, for which there may or may not be any basis. Now, we feel there is a basis for suspicion after having seen the recommendations of the Chief Engineer. Therefore, may I request you to see that this transaction is dropped and you do not proceed further? As you have not issued the Government Order yet, even now I request the Government to examine and see that the matter is not pursued in the interest of both the Congress organisation and the Congress Ministry.

ಶ್ರೀ ವೀರೇಂದ್ರ ಪಾಟೀಲ್.—ಒಂದು ನಿರ್ಣಯವನ್ನು ಈಗಾಗಲೇ ತೆಗೆದುಕೊಂಡಿದ್ದೇವೆಂಬ ಮಾತನ್ನು ಹೇಳಿದ್ದೇನೆ. ಈ ನಿರ್ಣಯವನ್ನು ನಾವು ತೆಗೆದುಕೊಂಡಿದ್ದು ಅವರಿಗೆ ಗೊತ್ತಾಗಿದೆ. ಅವರಿಗೆ ನಾವು ತೆಗೆದುಕೊಳ್ಳುತ್ತೇವೆಂದು ಸೂಚನೆ ಕೊಡುವುದಕ್ಕೆ ಫಾರ್ಮಾಲಿಟೀಸ್ ಇನ್ನೂ ಪೂರ್ತಿಯಾಗಿಲ್ಲ. ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲ್ ಅವರು ಅವರೇ ಅದನ್ನು 16 ಲಕ್ಷ ರೂಪಾಯಿಗಳಿಗೆ ಕೊಡುತ್ತೇನೆಂದು ಬರೆದಿದ್ದಾರೆ, ಅದಕ್ಕಾಗಿ 18 ಲಕ್ಷ ರೂಪಾಯಿಗಳನ್ನು ಏಕೆ ಕೊಡುತ್ತೀರಿ, ಎಂಬುದಾಗಿ ಒಂದು ಪತ್ರ ನನಗೆ (ಬಂದಿದೆಯೆಂದು) ಹೇಳಿದರು. ಆ ಪತ್ರವನ್ನು ನಾನು ತರಿಸಿಕೊಂಡು ನೋಡುತ್ತೇನೆ. ಅವರೇ 16 ಲಕ್ಷ ರೂಪಾಯಿಗಳಿಗೆ ಅದನ್ನು ಕೊಡುತ್ತೇನೆ ಎಂಬುದಾಗಿ ಭರವಸೆ ಕೊಟ್ಟಾಗ, 18 ಲಕ್ಷ ರೂಪಾಯಿಗಳನ್ನು ಅವರು ಪುನಃ ಕೇಳುವಂಥಾದ್ದು ಅನ್ಯಾಯವೆಂದು ನಾನೇ ಪರ್ಸನಲ್ಲಾಗಿ ಫೀಲ್ ಮಾಡುತ್ತೇನೆ. ಆ ರೀತಿ ಭರವಸೆ ಅವರು ಕೊಟ್ಟ ತಕ್ಷಣವೇ, ಅದೇ ರಿಯಲ್, ಅದನ್ನು ಅಷ್ಟಕ್ಕೆ ಕೊಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಇನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಅದನ್ನು ಪರಿಶೀಲನೆ ಮಾಡಿದಮೇಲೆ ಒಂದು ವೇಳೆ ಆ ರೀತಿಯಲ್ಲಿ ಪತ್ರ ಬರೆದಿದ್ದರೆ ಅಥವಾ ಆ ಪತ್ರ ಬಾರದೇ ಇದ್ದರೆ, ಅದರ ಪರಿಸ್ಥಿತಿಯೇ ಬೇರೆಯಾಗುತ್ತದೆ. ಒಟ್ಟಿನಲ್ಲಿ ಇದನ್ನು ಪರಿಶೀಲನೆಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

†ಶ್ರೀ ಎಸ್. ಶಿವಪ್ಪ.—ಮಾನ್ಯ ಮಂತ್ರಿಗಳು ಹೇಳಿದಂಥ ಹೇಳಿಕೆ ಪ್ರಕಾರ ಈ ಸಭೆ ಸಮಾಧಾನಪಡಬೇಕಾದ ಪರಿಸ್ಥಿತಿಯಲ್ಲಿಲ್ಲ. ಈ ವಿಷಯವನ್ನು ಆಗಸ್ಟ್ 1ನೇ ತಾರೀಖಿನ ದಿವಸವೇ ಸರ್ಕಾರಕ್ಕೆ ಎಚ್ಚರಿಕೆ ರೂಪದಲ್ಲಿ ಹೇಳಿದ್ದೇನೆ. ಚೀಫ್ ಇಂಜನಿಯರ್ ಜೂನ್ ತಿಂಗಳಲ್ಲಿ 13 ಲಕ್ಷ ಚಿಲ್ಲರೆ ಎಂದು ಎಸ್ಟಿಮೇಟ್ ಮಾಡಿದಮೇಲೆ ಈ ವಿಚಾರ ಗೊತ್ತಾಯಿತು. ಈ ಸರ್ಕಾರದಲ್ಲಿ ಕೆಲವು

(ಶ್ರೀ ಎಸ್. ಶಿವಪ್ಪ)

ಮಂತ್ರಿಗಳ ಪ್ರಭಾವದಿಂದ ತಿರುವಾಂಕೂರು ಮಹಾರಾಜರ ಅರಮನೆಯನ್ನು 18 ಲಕ್ಷ ರೂಪಾಯಿ ಗಳಿಗೆ ಖರೀದಿಮಾಡಲು ಹೊರಟಿದ್ದಾರೆ. ಈ ವಿಚಾರವಾಗಿ ನಾನು ಆಗಸ್ಟ್ ಒಂದನೇ ತಾರೀಖಿನಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಈ ಖಜಾನೆ ಪೂರ್ತಿ ನಿಮ್ಮದು ಎಂಬುದಾಗಿ ಭಾವನೆ ಮಾಡಬೇಡಿ, ಯಾರೋ ಮಹಾರಾಜರ ಪ್ರೀತಿ, ವಿಶ್ವಾಸಕ್ಕೋಸ್ಕರ ಈ ದೇಶದ ಖಜಾನೆಯ 18 ಲಕ್ಷ ರೂಪಾಯಿಗಳನ್ನು ಕೊಟ್ಟು ಆ ಅರಮನೆ ಕೊಂಡುಕೊಳ್ಳುವ ಪ್ರಮೇಯ ಏನಿದೆ, ಅದನ್ನು ಕೂಲಂಕಷವಾಗಿ ಪರಿಶೀಲನೆಮಾಡಬೇಕೆಂದು ಎಚ್ಚರಿಕೆ ಕೊಟ್ಟಮೇಲೆ ಚೀಫ್ ಇಂಜನಿಯರ್ ಅವರು ಅದಕ್ಕೆ 13 ಲಕ್ಷ ಚಿಲ್ಲರೆ ಎಂದು ಅಂದಾಜು ಮಾಡಿದ್ದರೆಂಬುದಾಗಿ ನಾನು ಹೇಳಿದ ಮಾರನೆಯ ದಿವಸವೇ ಒಂದು ವರದಿಯನ್ನು ತರಿಸಿದ್ದಾರೆ. ಇದು ಬಳ್ಳಾರಿ ರೋಡ್ ಅಂತಹ ಹೈರೋಡಿನಲ್ಲಿದೆ. ಸ್ವಲ್ಪ ಹೆಚ್ಚುಕಡಿಮೆ ವ್ಯಾಪಾರ ಮಾಡಿ ಎಂಬುದಾಗಿ ಪತ್ರ ಬರೆದಿದ್ದಾರೆ. ನಿಮ್ಮ ಚೀಫ್ ಇಂಜನಿಯ ರಿಗೆ ಅದು ಬಳ್ಳಾರಿ ಹೈರೋಡ್‌ನಲ್ಲಿ ಇದೆಯೆಂಬುದು ಜೂನ್ ತಿಂಗಳಲ್ಲಿ ಗೊತ್ತಾಗಲಿಲ್ಲವೇ, ಎರಡ ನೆಯಸಾರಿ, ಬಣ್ಣದ ಕನ್ನಡಕ ಹಾಕಿಕೊಂಡಮೇಲೆ ಏನಾದರೂ ಅದು ಬಳ್ಳಾರಿ ಹೈರೋಡಿನಲ್ಲಿದೆ ಯೆಂದು ಗೊತ್ತಾಯಿತೇ ? ಎರಡು ತಿಂಗಳ ಹಿಂದೆ ಹೇಳಿದ್ದನ್ನು ಎರಡು ತಿಂಗಳು ಆದಮೇಲೆ ಬದಲಾಯಿಸಿಕೊಂಡು ಹೇಳುವ ಪ್ರಮೇಯವೇನು ? ಅಲ್ಲಿ ಹೈರೋಡ್ ಇದೆ. ಆದ್ದರಿಂದ ಮೊದ ಲನ ತೀರ್ಮಾನವನ್ನು ಬದಲಾವಣೆ ಮಾಡಬೇಕೆಂದು ಹೇಳಿರುವುದನ್ನು ನೋಡಿದರೆ, ಅದರಲ್ಲಿ ಖಂಡಿತ ವಾಗಿ ಇನ್ನೂ ಅನೇಕ ಒಳ್ಳೆಯ ವಿಚಾರಗಳು ಅಡಕವಾಗಿವೆ. ಅವನ್ನು ವಿಚಾರಮಾಡುವುದು ಅಗತ್ಯವಿದೆಯೆಂದು ನಾನು ಹೇಳುತ್ತೇನೆ. ಅದಕ್ಕೆ ಈಗಾಗಲೇ 18 ಲಕ್ಷ ರೂಪಾಯಿಗಳೆಂದು ತೀರ್ಮಾನಮಾಡಿದ್ದಾರೆಂದು ಹೇಳಿದ್ದಾರೆ. ಖಂಡಿತವಾಗಿ ಆ ರೀತಿ ಕೊಡಕೂಡದು. ಇದು ಬಹಳ ಅಪಹಾಸ್ಯಕರವಾಗಿದೆ. ಆದ್ದರಿಂದ ಇದನ್ನು ಎಸ್ಟಿಮೇಟ್ ಕಮಿಟಿಗೆ ರೆಫರ್‌ಮಾಡಿ. ನೀವು, ಗೃಹ ಮಂತ್ರಿಗಳು, ಲಾ ಸೆಕ್ರೆಟರಿ ಎಲ್ಲರೂ ಸೇರಿಕೊಂಡು ಇದನ್ನು ವಿಚಾರಮಾಡಿ ಈ ಸಭೆಗೆ ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಪುನಃ ಒದಗಿಸಬೇಕೆಂದು ಹೇಳುತ್ತೇನೆ. ಈ ಕಾರ್ಯವನ್ನು ನಿಮ್ಮ ದೃಷ್ಟಿಯಿಂದಲೂ, ಶಾಸಕರ ದೃಷ್ಟಿಯಿಂದಲೂ ಜನತೆಯನ್ನು ಸಮಾಧಾನಪಡಿಸುವುದಕ್ಕೋಸ್ಕರ ಸರ್ಕಾರದವರು ಕೂಡಲೇ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು.—ಈ ವಿಷಯದ ಬಗ್ಗೆ ಮುಂದೆ ರೂಲಿಂಗ್ ಕೊಡುತ್ತೇನೆ.

† ಶ್ರೀ ಎಸ್. ಚನ್ನಯ್ಯ.—ತಾವು ರೂಲಿಂಗ್ ಕೊಡುವ ಮುನ್ನ ನಾನು ಒಂದು ಮಾತನು ಹೇಳುತ್ತೇನೆ. ಈ ವಿಚಾರ ಚರ್ಚೆಯಾಗುವಾಗ ಅವರೇ ಅದನ್ನು ಹನ್ನೆರಡೂವರೆ ಅಥವಾ 13 ಲಕ್ಷ ರೂಪಾಯಿಗಳಿಗೆ ಸರ್ಕಾರಕ್ಕೆ ಕೊಡುವುದಕ್ಕೆ ತಯಾರಾಗಿದ್ದರು. ಆ ವಿಷಯ ಇವರಿಗೆ ಗೊತ್ತಿದ್ದೂ ಗೊತ್ತಿಲ್ಲವೆಂದು ಹೇಳಿದರು. ಈಗಲಾದರೂ ನಾನು ಒತ್ತಾಯಮಾಡುತ್ತೇನೆ. ಈಗಾಗಲೇ 6 ತಿಂಗಳಾದುವು, ಒಂದು ವರ್ಷವಾಯಿತು, ಸುಮಾರು 2 ವರ್ಷಗಳಿಂದಲೂ ಇನ್ನೂ ಅದರ ಬಗ್ಗೆ ನೆಗೋಷಿಯೇಷನ್ ಮಾಡುತ್ತಿದ್ದೇವೆಂದು ಅವರು ಹೇಳುವ ಮಾತನ್ನು ನಾನು ಒಪ್ಪುವುದಿಲ್ಲ. ಅದಕ್ಕೆ ಹನ್ನೆರಡೂವರೆ ಅಥವಾ 13 ಲಕ್ಷ ರೂಪಾಯಿ ಕೊಡುತ್ತೀರೋ ಅಥವಾ ಯಾವ ಬೆಲೆಗೆ ಅದನ್ನು ನೀವು ತೆಗೆದುಕೊಳ್ಳುತ್ತೀರೋ, ಆ ವಿಷಯವಾಗಿ ನಾನು ಹೇಳುವುದಿಲ್ಲ. ಈಗಲೂ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಪೀಲು ಮಾಡಿಕೊಳ್ಳುತ್ತೇನೆ. ಏಕೆಂದರೆ ಅದು ಇನ್ನೂ ಫೈನಲ್ ಆಗಿಲ್ಲ. ದಯವಿಟ್ಟು ಈಗಲೇ ಡ್ರಾಪ್ ಮಾಡಿ. ಸರ್ಕಾರದವರು 18–20 ಲಕ್ಷ ರೂಪಾಯಿಗಳನ್ನು ಪ್ರೈವೇಟ್ ಪಾರ್ಟಿಗೆ ಕೊಟ್ಟು ಆ ಒಂದು ಕಟ್ಟಡವನ್ನು ಕೊಂಡುಕೊಳ್ಳುವ ಅಗತ್ಯವಿಲ್ಲ. ಅದೇ 20 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡಿದರೆ, ಒಳ್ಳೆಯ ಜಾಗವಿದೆ, ಅಲ್ಲಿ ಅಂತಹ ಕಟ್ಟಡವನ್ನು ಕಟ್ಟಬಹುದು. 20 ಲಕ್ಷ ಖರ್ಚುಮಾಡಿದರೆ ಈಗ ಆ ಕಟ್ಟಡದಲ್ಲಿ ಎಷ್ಟು ಜನ ಹಿಡಿಸು ತ್ತಾರೋ ಅದರ 4ರಷ್ಟು ಜನ ಹಿಡಿಯುವಂಥ ಕಟ್ಟಡವನ್ನು ಕಟ್ಟಿಸಬಹುದು. ಅದಕ್ಕೆ 5 ಎಕರೆ ಜಾಗ ಬೇಕಾಗಿಲ್ಲ. ಒಂದು ಎಕರೆಯಲ್ಲಿ ಬೇಕಾದಷ್ಟು ಜಾಗ ಇರುತ್ತದೆ. ಕಟ್ಟಬಹುದು. ಆದ್ದ ರಿಂದ ಇದು ಬಹಳ ಅನುಮಾನಕ್ಕೆ ಖಂಡಿತವಾಗಿ ಕಾರಣವಾಗಿದೆ. ನಾನು ಅವರ ಹೆಸರನ್ನು ಹೇಳು ವುದಕ್ಕೆ ತಯಾರಾಗಿಲ್ಲ. ಯಾರ್ಯಾರು ಏನೇನು ಕೇಳಿದ್ದಾರೋ ಇದರ ಬಗ್ಗೆ ಎನ್ನುವುದು ಸುಮಾರು ಒಂದೂವರೆ ಅಥವಾ ಎರಡು ವರ್ಷಗಳಿಂದಲೂ ನಮಗೆ ಗೊತ್ತಾಗಿದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಅಪೀಲು ಮಾಡುತ್ತೇನೆ. ಅವರು ಕಡೆಯ ಸಾರಿ ಕೆಟ್ಟ ಹೆಸರನ್ನು ತೆಗೆದುಕೊಳ್ಳು ವುದು ಸರಿಯಲ್ಲ. ಇದನ್ನು ಡ್ರಾಪ್‌ಮಾಡಿ ಅವರು ಹೋಗಲಿ ಎಂದು ನಾನು ಅಪೀಲ್ ಮಾಡುತ್ತೇನೆ.

Sri H. SIDDAVEERAPPA.—Will the Chief Minister kindly give some responsive statement in this behalf ?

Sri S. NIJALINGAPPA.—The concerned Minister has already said that he will examine. What more I can say ?

ಶ್ರೀ ಎಸ್. ಚನ್ನಯ್ಯ.—ತಾವು ಹೇಳದೆ ಅವರು ಏನೂ ಮಾಡುವುದಕ್ಕಾಗುವುದಿಲ್ಲ. ತಾವು ಈ ರೀತಿ ಮಾಡಿ ಎಂದು ನೀವೇ ಅವರಿಗೆ ಹೇಳಿ. ಅದನ್ನು ಏಕೆ ಅವರೇ ತಿಳಿಸಬೇಕು ?

ಶ್ರೀ ಎಚ್. ಸಿದ್ಧವೀರಪ್ಪ.—ತಮ್ಮ ಅನುಭವದಲ್ಲಿ 6-7 ವರ್ಷಗಳು ಮುಖ್ಯ ಮಂತ್ರಿಗಳಾಗಿದ್ದವರು, ಗೌರ್ನಮೆಂಟ್ ಆರ್ಡರ್‌ಗಳನ್ನು ಇಷ್ಯೂ ಮಾಡುವ ಟೈಂನಲ್ಲಿ ಎಷ್ಟೋ ಸಾರಿ ಅವನ್ನು ಹಿಂದಕ್ಕೆ ತಂದು ರಿವೈಜ್ ಮಾಡಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—16 ಲಕ್ಷಕ್ಕೆ ಅವರೇ ಕೊಟ್ಟಿದ್ದಾರೆ, ಅದನ್ನು ವಿಚಾರ ಮಾಡುತ್ತೇನೆಂದು ಹೇಳಿದ್ದಾರೆ.

Sri H. SIDDAVEERAPPA.—In any case even now you can give a positive assurance to this House.

Sri S. NIJALINGAPPA.—The point is that the Minister has stated that the matter will be examined, and therefore we are looking into that.

ಶ್ರೀ ಎಚ್. ಸಿದ್ಧವೀರಪ್ಪ.—ಹಾಗಿದ್ದರೆ, ಅದೆಲ್ಲವನ್ನೂ ಎಸ್ಟಿಮೇಟ್ ಕಮಿಟಿಗೆ ಹಾಕಿ. ಅವರೇ ಎಲ್ಲವನ್ನೂ ಕೂಲಂಕಷವಾಗಿ ಎಗ್ಜಾಮಿನ್ ಮಾಡಲಿ ಎಂದು ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಇದನ್ನು ಹೇಗೆ ಬಿಟ್ಟುಬಿಡುವುದಕ್ಕಾಗುತ್ತದೆ ? ಇದೇನು ನಿಮ್ಮ ಮನೆ ದುಡ್ಡೇ.

Sri S. NIJALINGAPPA.—You cannot dictate.

Sri S. SIVAPPA.—It is a clear case. Your own Chief Engineer has estimated it and the same Chief Engineer has changed his attitude within three months. What more do you want ? ಇದಕ್ಕಿಂತ ಬೇರೆ ಇನ್ನು ಯಾವುದು ಬೇಕಾಗಿದೆ ? ಇದರಲ್ಲಿ ನಿಮ್ಮನ್ನು ನಂಬುವುದಕ್ಕಾಗುವುದಿಲ್ಲ.

Sri H. SIDDAVEERAPPA.—Sir, before you give your ruling I request you to withhold your ruling and examine all the previous statements made and the statement now made. On the day on which the Hon'ble Minister made the statement it is quite possible that he never referred to this matter. He gave it as though he was defending the Government and he was guided by the report of the officers. Anyhow, I will request you to examine all these facts first, and then give your ruling.

Mr. DEPUTY SPEAKER.—I know the allegations that have been made and I have heard the Hon'ble Minister also. I will come to the conclusion whether it is in order or not.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಮಂತ್ರಿಗಳಿಗೆ ಯಾವ್ಯಾವ ರಿಕಾರ್ಡ್‌ಗಳನ್ನು ನೋಡಿ ಇಲ್ಲಿ ಓದಬೇಕೆಂದು ಹೇಳಿದ್ದೆವೋ ಅವುಗಳ ಪೈಕಿ ಕೆಲವನ್ನು ಅವರು ಇನ್ನೂ ಇಲ್ಲಿ ಓದಿ ಹೇಳಲಿಲ್ಲ. ಡಾಕ್ಯುಮೆಂಟ್ಸ್ ನೋಡುವುದಕ್ಕೆ ತಮಗೂ ಅಧಿಕಾರವಿದೆ. ಆದ್ದರಿಂದ ಇದು ಪ್ರಿವಲೇಜ್ ಮೋಷನ್ ಆಗಿರುತ್ತದೆ.

ಉಪಾಧ್ಯಕ್ಷರು.—ಅದನ್ನು ಈಗ ಕೂಲಂಕಷವಾಗಿ ಪರಿಶೀಲನೆ ಮಾಡುವುದು ಏನೂ ಇಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಇದರಲ್ಲಿ ಪ್ರೈಮಾಫಿಸಿ ಕೇಸ್ ಇದೆಯೆಂದು ಹೇಳಿದೆ.

ಶ್ರೀ ಎಸ್. ಶಿವಪ್ಪ.—ತಾವು ಡಾಕ್ಯುಮೆಂಟ್ಸ್ ತರಿಸಿ ನೋಡಿ. ಅನಂತರ ಅದರಮೇಲೆ ತೀರ್ಮಾನವನ್ನು ತೆಗೆದುಕೊಳ್ಳಿ.

ಉಪಾಧ್ಯಕ್ಷರು.—ಮಂತ್ರಿಗಳು ಹೇಳಿದುದನ್ನು ಕೇಳಿದೆ, ಮಾನ್ಯ ಶ್ರೀ ಸಿದ್ಧವೀರಪ್ಪನವರೂ ಹೇಳಿದುದನ್ನು ಕೇಳಿದೆ. ಈಗ ನಾನು ಒಂದು ತೀರ್ಮಾನಕ್ಕೆ ಬಂದಿದ್ದೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ತಾವು ಈ ವಿಚಾರದಲ್ಲಿ ರೂಲಿಂಗ್ ಕೊಡಬೇಕಾಗಿದೆ. ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೇ. ಈಗ ಒಂದು ಫ್ಯಾಕ್ಟ್ ಅಡ್‌ಮಿಷನ್ ಆಯಿತು. 13 ಲಕ್ಷಕ್ಕೆ ಎಸ್ಟಿಮೇಟ್ ಮಾಡಿದ್ದು ನಿಜವೇ ಅಲ್ಲವೇ ಎಂಬುದು. ಆದರೂ ಅವರು ಎಕ್ಸ್‌ಪ್ಲನೇಷನ್ ಏನಾದರೂ ಕೊಡಲಿ. ಯಾವ ಕಾರಣವನ್ನಾದರೂ ಹೇಳಲಿ. But with one ground my case is stronger. ಅದಕ್ಕೆ ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುವುದು ಏನೆಂದರೆ, ನಿಮಗೆ ನಾವು ಕೆಲವು ಪಾಯಿಂಟುಗಳನ್ನು ಕೊಟ್ಟಿದ್ದೇವೆ. ಅದನ್ನು ನೀವು ನೋಡಿ. ಆಗಸ್ಟ್‌ನಿಂದ ಇಲ್ಲಿ ಆಗಿರತಕ್ಕ ಭಾಷಣಗಳನ್ನೆಲ್ಲಾ ನೋಡಿ. ಏಕೆಂದರೆ ಇದು ಪ್ರೈಮಾಫಿಸಿ ಕೇಸ್. ಬಹಳ ಮುಖ್ಯವಾದುದು. ಈಗ ಯಾವ ರೀತಿಯಲ್ಲಿ ಈ ಸರ್ಕಾರವನ್ನು ನಂಬಬೇಕೋ, ಬೇಡವೋ ಎಂಬ ಸಂಶಯ ಆಗುತ್ತಿದೆ. ರೂಲಿಂಗ್ ಬೇಕಾದರೆ ರಿಜರ್ವ್‌ಮಾಡಿ. It does not arise ಎಂದು ಹೇಳುವ ತಂಟೆಗೆ ನೀವು ಹೋಗಬೇಡಿ. ಅದನ್ನು ಎಗ್ಸಾಮಿನ್ ಮಾಡಿ ರೂಲಿಂಗ್ ಕೊಡಿ.

Mr. DEPUTY SPEAKER.—I have to say whether it is in order or not. ಅದು ಪ್ರಿವಿಲೇಜ್ ಆಗುತ್ತದೆಯೋ ಅಥವಾ ಇಲ್ಲವೇ ಎಂಬುದನ್ನು ನಾನು ಪರೀಕ್ಷೆ ಮಾಡಿದ್ದೇನೆ.

ಶ್ರೀ ಎಂ. ನಾಗಪ್ಪ.—ನಾನು ಹೇಳುವುದು ಅದು ಪ್ರಿವಿಲೇಜ್ ಆಗುತ್ತದೆಯೋ ಅಥವಾ ಇಲ್ಲವೇ ಎಂಬುದನ್ನು ತೀರ್ಮಾನ ಮಾಡತಕ್ಕದ್ದು ಪ್ರಿವಿಲೇಜ್ ಕಮಿಟಿ. ತಮಗೆ ಇರತಕ್ಕ ಅಧಿಕಾರ 177ನೇ ರೂಲ್ ಪ್ರಕಾರ ಕನ್‌ಸೆಂಟ್ ಕೊಡತಕ್ಕದ್ದು. ಅದು ಪ್ರಿವಿಲೇಜ್ ಆಗುತ್ತದೆಯೋ ಅಥವಾ ಇಲ್ಲವೇ ಎನ್ನತಕ್ಕ ತೀರ್ಮಾನ ಕೊಡತಕ್ಕ ಅಧಿಕಾರ ತಮಗೆ ಇಲ್ಲ.

Mr. DEPUTY SPEAKER.—I have to say whether it is in order or not.

Sri M. NAGAPPA.—That is exactly what I am submitting. ಅದು ಪ್ರಿವಿಲೇಜ್ ಆಗುತ್ತದೆಯೋ ಅಥವಾ ಇಲ್ಲವೇ ಎಂಬುದನ್ನು ನಾನು ತೀರ್ಮಾನ ಮಾಡುತ್ತೇನೆ ಎಂದು ತಾವು ಹೇಳುತ್ತಿದ್ದೀರಿ.

Mr. DEPUTY SPEAKER.—The other day also the member argued and he was convinced.

Sri M. NAGAPPA.—But no ruling was given by you. You simply said that there was no point of order. I submit that under rule 179 three points are to be considered.

Mr. DEPUTY SPEAKER.—He has already argued elaborately on that.

Sri M. NAGAPPA.—Now you are going to decide whether it amounts to a privilege or not.

Mr. DEPUTY SPEAKER.—The member knows the rules very well.

Sri DIGAMBARA RAO B. KALMANKAR.—I would like to add one thing.

Mr. DEPUTY SPEAKER.—Not necessary. I will give my ruling.

If any statement is made on the floor of the House by a member or Minister which another member believes to be untrue, incomplete or incorrect, it does not constitute a breach of privilege. If an incorrect statement is made, there are other remedies by which the issue can be decided.

According to May, the House may treat the making of a deliberately misleading statement as a contempt of the House in 163, the House of Commons resolved that in making a personal statement which contained words which he later admitted not to be true, a member had been guilty of a grave contempt. (Profumo's case).

A breach of privilege arises only when the member or the Minister makes a false statement or an incorrect statement wilfully, deliberately and knowlngiy.

On 17th August 1966, in Lok Sabha when two members sought to raise a question of privilege against the Minister for Food and Agriculture on the ground that he had suppressed the truth and misled the Public Accounts Committee when he appeared before them, the Speaker of Lok Sabha observed among other things, as follows:

> "Incorrect statements made by a Minister cannot be the basis for a breach of privilege. It is only a deliberate falsehood, if it can be substantiated, that would certainly bring the offence within the meaning of breach of privilege."

In the case under consideration, I find from the proceedings relating to the Short Notice Question and Half-an-Hour discussion that the Minister for Public Works has answered whatever questions were asked by the member. I cannot construe the statement of the Minister to be deliberately misleading. I, therefore, hold that the matter raised is not in order.

SRI H. SIDDAVEERAPPA.—I rise to a point of order, not on the decision that you have just now given. Your decision is based on what happened earlier. Now today certain other disclosures are made. When you came to that decision, this information was not available. This decision had been prepared and got typed earlier when this information was not available to you. Now based on what admissions have been made and the information disclosed, you may be pleased to consider whether there is any further point for consideration.

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಇವೊತ್ತು ನನ್ನ ಮಾನ್ಯ ಲೋಕೋಪಯೋಗಿ ಸಚಿವರು ಈ ಸಭೆಯ ಮುಂದೆ ಒಂದು ಹೇಳಿಕೆಯನ್ನು ಕೊಡುತ್ತಾ, ರಾಮಪ್ರಿಯ ಭವನದ ವ್ಯವಹಾರದ ಬಗ್ಗೆ ಒಂದು ವಿವರಣೆಯನ್ನು ಮಾಡಿದ್ದಾರೆ. ಈ ವ್ಯವಹಾರ ದೋಷ ಪೂರಿತವಾಗಿದೆ. ಅದು ಈ ಸಭೆಯ ನಂಬಿಕೆಗೆ ಅರ್ಹವಾದ ವಿಷಯವಾಗಿಲ್ಲ ಎನ್ನತಕ್ಕಂಥಾದ್ದು ಅವರು ಕೊಟ್ಟಂತಹ ಹೇಳಿಕೆಯಿಂದ ಉದ್ಭವವಾಗಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖ್ಯ ಇಂಜಿನಿಯರು ಈ ಕಟ್ಟಡಕ್ಕೆ ಏನು ಎಸ್ಟಿಮೇಟ್ ತಯಾರು ಮಾಡಿದ್ದರೋ ಅದಕ್ಕಿಂತಲೂ ಈಗ ಇವರು ಖರೀದಿ ಮಾಡಿರುವುದು ಮೀರಿದೆ. ಚೀಫ್ ಇಂಜಿನಿಯರು ಒಂದು ಸಾರಿ ಆ ಕಟ್ಟಡದ ಬಗ್ಗೆ ಅಂದಾಜನ್ನು ತಯಾರು ಮಾಡಿ ಕೊಟ್ಟಮೇಲೆ, ಅವರ ಮೇಲೆ ಸರ್ಕಾರದವರು ಯಾವುದೋ ಒಂದು ಒತ್ತಾಯವನ್ನು ತಂದು ಆ ಕಟ್ಟಡದ ಬಗ್ಗೆ ಅವರಿಂದ ಬೇರೊಂದು ವರದಿಯನ್ನು ತರಿಸಿಕೊಂಡಿರುವ ವ್ಯವಹಾರ ಎದ್ದು ಕಾಣಿಸುತ್ತಿದೆ. ಈ ರೀತಿ ಚೀಫ್ ಇಂಜಿನಿಯರಿಂದ ಇನ್ನೊಂದು ಪತ್ರವನ್ನು ತರಿಸಿದ ಕಾರಣವೇನು ? ಈ ಸರ್ಕಾರ ತನ್ನ ಕೈ ಚಳಕ ಮಾಡಿ, ಮೊದಲು ಚೀಫ್ ಇಂಜನಿಯರು ಈ ಕಟ್ಟಡದ ಬಗ್ಗೆ ಮಾಡಿದಂತಹ ಎಸ್ಟಿಮೇಟಿನ ಮೇಲೆ ಎರಡನೇ ವರದಿಯನ್ನು ತರಿಸಿಕೊಂಡು ಯಾರೋ ಒಬ್ಬರನ್ನು ಮೆಚ್ಚಿಸುವುದಕೋಸ್ಕರ ಈ ವ್ಯವಹಾರವನ್ನು ಸಾಕಷ್ಟು ಈ ಸಭೆ ನಂಬದ ರೀತಿಯಲ್ಲಿ, ಈ ಸಭೆಯ ನಂಬಿಕೆಯನ್ನು ಕಳೆದುಕೊಳ್ಳತಕ್ಕ ವ್ಯವಹಾರವನ್ನು ಮಾಡಿದ್ದಾರೆ. ಈಗಲಾದರೂ ನಾನು ಹೇಳುತ್ತೇನೆ. ಈ ಬಗ್ಗೆ ಒಂದು ವಿಚಾರಣಾ ಸಮಿತಿಯನ್ನು ನೇಮಕಮಾಡಿ; ಈ ವಿಷಯದಲ್ಲ ಏನು

(ಶ್ರೀ ಎಸ್. ಶಿವಪ್ಪ)

ವ್ಯವಹಾರ ನಡೆದಿದೆ. ಎಂಬುದನ್ನು ವಿಮರ್ಶೆ ಮಾಡಬೇಕು. ಮುಖ್ಯ ಮಂತ್ರಿಗಳು ಈಗಾಗಲೇ ಹೊರಟು ಹೋಗುತ್ತೇನೆಂದು ಹೇಳಿದ್ದಾರೆ. ಮಂತ್ರಿಗಳು, ಮಾಜಿ ಮಂತ್ರಿಗಳು, ಉಪ ಮಂತ್ರಿಗಳು ಇತ್ಯಾದಿ ಕಾಂಗ್ರೆಸ್ ಮುಖಂಡರುಗಳ ಆಸ್ತಿಪಾಸ್ತಿಗಳ ಸಂಗ್ರಹ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಈ ರಾಮಪ್ರಿಯ ಭವನದ ವ್ಯವಹಾರದಲ್ಲಿ ಏನು ನಡೆದಿದೆ ಎಂಬುದನ್ನು ವಿಚಾರಣೆ ಮಾಡಲು ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಬೇಕು. ಅದನ್ನು ನೇಮಕ ಮಾಡುತ್ತೇವೆಂದು ಮುಖ್ಯ ಮಂತ್ರಿಗಳು ಧೈರ್ಯವಾಗಿ ಹೇಳಲಿ. ಇಷ್ಟೊತ್ತು ನಾನು ಕೊನೆಯದಾಗಿ ಹೇಳುತ್ತೇನೆ, ಈ ವ್ಯವಹಾರದಲ್ಲಿ ಏನೋ ನಡೆದಿರುವಂತೆ ಅನುಮಾನ ಬರುತ್ತದೆ. ಆದ್ದರಿಂದ ಈ ಬಗ್ಗೆ ತನಿಖೆ ನಡೆಯಬೇಕು. ಅದಕ್ಕಾಗಿ ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಅವರನ್ನು ಮತ್ತೊಮ್ಮೆ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಮಂತ್ರಿಗಳು ಎಗ್ಸಿಕ್ಯುಟೀವ್ ಇಂಜನಿಯರು ಆ ಕಟ್ಟಡಕ್ಕೆ 18 ಲಕ್ಷ ರೂಪಾಯಿಗಳ ಬೆಲೆಯನ್ನು ಅಂದಾಜನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ. ಕೆಲವು ದಿವಸಗಳ ಹಿಂದೆ ಚೀಫ್ ಇಂಜನಿಯರು ಆ ಕಟ್ಟಡಕ್ಕೆ 13 ಲಕ್ಷ ರೂಪಾಯಿಗಳ ಎಸ್ಟಿಮೇಟನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ. ಈ ಎರಡು ಎಸ್ಟಿಮೇಟುಗಳನ್ನು ನೋಡುವುದಾದರೆ ಎಗ್ಸಿಕ್ಯುಟೀವ್ ಇಂಜನಿಯರು 5 ಲಕ್ಷ ರೂಪಾಯಿಗಳ ಜಾಸ್ತಿ ಎಸ್ಟಿಮೇಟನ್ನು ಹೇಗೆ ಮಾಡಿದ್ದಾರೆ ಎನ್ನುವ ಪ್ರಶ್ನೆ ಬರುತ್ತದೆ. ಅದಕೋಸ್ಕರವಾಗಿ ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಇಷ್ಟು, ಆ ಕಟ್ಟಡಕ್ಕೆ ಎಗ್ಸಿಕ್ಯುಟೀವ್ ಇಂಜನಿಯರು ಡೇಟಾ ವರ್ಕ್‌ಔಟ್ ಮಾಡಿ ಅದಕ್ಕೆ 18 ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡಿದ್ದಾರೆ. ಚೀಫ್ ಇಂಜನಿಯರು ಅದಕ್ಕೆ 13 ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡಿದ್ದಾರೆ. ಈ ರೀತಿ ಇಷ್ಟೊಂದು 5 ಲಕ್ಷ ರೂಪಾಯಿಗಳ ವ್ಯತ್ಯಾಸ ಬರುವುದಕ್ಕೆ ಕಾರಣವೇನು ? ದಯವಿಟ್ಟು ಇದನ್ನು ಪರೀಕ್ಷೆಮಾಡಿ ಒಂದು ವೇಳೆ ಎಗ್ಸಿಕ್ಯುಟೀವ್ ಇಂಜನಿಯರದು ತಪ್ಪು ಆಗಿದ್ದರೆ, ಅವರನ್ನು ಪನಿಷ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. He must have been influenced. Otherwise, he cannot estimate the value to the tune of Rs. 18 lakhs. There cannot be such a difference.

ಉಪಾಧ್ಯಕ್ಷರು.—ಇದರ ಮೇಲೆ ಹೆಚ್ಚು ಚರ್ಚೆ ಬೇಕಾಗಿಲ್ಲ. It has been disposed of.

ಶ್ರೀ ಎಸ್. ಶಿವಪ್ಪ.—ಈ ವ್ಯವಹಾರದಲ್ಲಿ ಸರ್ಕಾರದ್ದು ಹೆಚ್ಚು ಕ್ರೈವಾಡ ಇದೆ ಎಂದು ಸ್ಪಷ್ಟವಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಫೈನರೈಸ್ ಆಗಿಲ್ಲ. ಜಿ.ಓ. ಆಗಿಲ್ಲ. ಗೌರ್ನಮೆಂಟ್ ಆರ್ಡರ್ ಇಷ್ಯೂ ಆಗಿಲ್ಲದೇ ಇದ್ದಾಗ ಇದನ್ನು ಕನ್ಸಿಡರ್ ಮಾಡದೆ ಗಟ್ಟಿಯಾಗಿ ಇಟ್ಟುಕೊಳ್ಳಬೇಕಾದರೆ ಎಷ್ಟರಮಟ್ಟಿಗೆ ಕಮಿಟ್‌ಮೆಂಟ್ ಇರಬಹುದು ಎಂದು ಸಂಶಯಕ್ಕೆ ಆಸ್ಪದವಾಗುತ್ತದೆ. 2–3 ಬಿಲ್ಡಿಂಗ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಪ್ಲಾನ್ ಹಾಕಿದ್ದೀರಿ. ಅವು ಯಾವುವು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಿಮಗೆ ಹೇಗೆ ಗೊತ್ತಾಗುತ್ತದೆ, ಎಂದು ಕೇಳಬಹುದು. 250 ಲಕ್ಷ ಜನ ಕಣ್ಣುಬಿಟ್ಟು ನೋಡುತ್ತಿದ್ದಾರೆ, ಹೇಗೆ ಆಡಳಿತ ನಡೆಸುತ್ತೀರಿ ಎಂದು. ದಯ ಮಾಡಿ ದೇಶದ ಹಿತದೃಷ್ಟಿಯಿಂದ ಕೆಲಸ ಮಾಡಿ. ನಾವು ಹೇಳಿದರೆ ಅದನ್ನು ಕೇಳುವುದಿಲ್ಲ ಎನ್ನುವುದಾದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

Sri B. P. GANGADHAR.—When so much has been said and done, it is really in the interest of the Government and all concerned, to drop this matter especially when it has not been finalised. Let it not give rise to any further misunderstandings and complications.

ಶ್ರೀ ಎಸ್. ಶಿವಪ್ಪ.—ಈ ಸಭೆಗೆ ಎಲ್ಲರೂ ಹೇಳಿದರೂ ಕೂಡ ನಾವು ಮಾಡಿದ್ದನ್ನೇ ಮಾಡುತ್ತೇವೆ ಎಂಬ ಹಟಮಾರಿತನದಿಂದ ದೇಶದ ಹಣ ಸ್ವಂತ ಹಣ ಎಂದು ದುರ್ವಿನಿಯೋಗ ಮಾಡುತ್ತಿದ್ದೀರಿ. ಸರ್ಕಾರದ ಒಂಧತನವನ್ನು ಭ್ರಷ್ಟಾಚಾರ ಎಂದು ವಿರೋಧಿಸುವುದಕ್ಕೆ ಪ್ರತಿಭಟನೆ ತೋರಿಸುವುದಕ್ಕೋಸ್ಕರವಾಗಿ ನಾವು ಸಭಾತ್ಯಾಗ ಮಾಡುತ್ತೇವೆ.

(Some members of the Opposition withdrew from the House)

OFFICIAL RESOLUTION UNDER ARTICLE 252 OF THE CONSTITUTION OF INDIA—PREVENTION OF WATER POLLUTION

SRI. R. M. PATIL (Minister for Home and Municipal Administration).—I beg to move the following resolution :

" Whereas the prevention of pollution of natural sources of water from domestic and industrial wastes and maintaining and restoring the wholesomeness of water is a matter of general importance and the problems relating thereto are common to all the States.

And whereas legislation for the purpose mentioned above is relatable to matters enumerated in Entry 6 and Entry 17 of List II of the Seventh Schedule to the Constitution of India with respect to which Parliament has no power to make a law for the States except as provided in Articles 249 and 250 thereof ;

And whereas it appears to this Assembly to be desirable that such legislation should be undertaken by Parliament ;

Now, therefore, in pursuance of clause (1) of article 252 of the Constitution of India, this Assembly hereby resolves that the prevention of water pollution and all other matters connected therewith or incidental thereto shall be regulated in this State by Parliament by Law."

MR. DEPUTY SPEAKER.—The question is :

" Whereas the prevention of pollution of natural sources of water from domestic and industrial wastes and maintaining and restoring the wholesomeness of water is a matter of general importance and the problems relating thereto are common to all the States.

And whereas legislation for the purpose mentioned above is relatable to matters enumerated in Entry 6 and Entry 17 of List II of the Seventh Schedule to the Constitution of India with respect to which Parliament has no power to make a law for the States except as provided in Articles 249 and 250 thereof ;

And whereas it appears to this Assembly to be desirable that such legislation should be undertaken by Parliament ;

Now, therefore, in pursuance of clause (1) of Article 252 of the Constitution of India, this Assembly hereby resolves that the prevention of water pollution and all other matters connected therewith or incidental thereto shall be regulated in this State by Parliament by Law."

The motion was adopted.

PRIVILEGE MOTION *re*: CHIEF MINISTER'S STATEMENT ON MYSORE-MAHARASHTRA BORDER DISPUTE

Sri DIGAMBAR RAO B. KALMANKAR.—The proceedings are not going on as per programme. Two days back I was informed by the Hon'ble Speaker that I would be permitted to move the motion.

Mr. DEPUTY SPEAKER.—But the member was outside.

†Sri DIGAMBAR RAO B. KALMANKAR.—I have given notice under rules 177 and 178 of the Rules of Procedure and Conduct of Business for moving a motion of breach of privilege against the Hon'ble Chief Minister. Now I may be allowed to move a motion of breach of privilege against the Chief Minister for having made a statement in Bombay regarding the Mysore–Maharashtra dispute.

I perused a news item in the 'Deccan Herald' dated 11th April 1968 under the caption 'Hope on Border Dispute' appearing on the front page in bold letters. In the said news item, Sri S. Nijalingappa, the Chief Minister of Mysore, is alleged to have declared while addressing pressmen, as Congress President in answer to a query if he had any formula for solving the dispute, that he would do his best to solve the issue amicably. As President of the Congress, he said, it was very difficult for him to disclose how and what he would do. As this august House is well aware including the Hon'ble Chief Minister, this House had passed an unanimous resolution in clear language and categorical terms in the last session that the Mahajan Commission Report covering Mysore Maharashtra Border dispute must be implemented in toto as an award.

In view of the said unambiguous resolution passed by this august House after a detailed deliberation, the utterances of the Hon'ble Chief Minister who is also the Leader of this House, at Bombay on 10th April 1968 before pressmen amounts to bring the resolution of this House into contempt and ridicule and it also amounts to an obstruction in the unfettered discharge of functions of this House concerning the vital interest of the State of Mysore. It is also an indignity offered to this House in connection with the performance of its duties.

Hence the Hon'ble Chief Minister has committed a breach of Privilege by deliberately omitting to mentien at Bombay the firm stand taken by this House in the matter of Mysore Maharashtra border dispute and by having given an impression that there was scope for the matter being solved otherwise, for which he is liable to be punished by this House. Sri V. P. Naik, Chief Minister of Bombay, commented on it by saying that it was a good sign and he was waiting for the next move by the Congress President. I, therefore, feel that the Hon'ble Chief Minister of Mysore is guilty of breach of privilege and hence he should be punished for his statement at Bombay concerning the Mysore-Maharashtra Border dispute, since his statement brings the resolution of the House to contempt and ridicule and it obstructs the House in the unfettered discharge of its functions.

My submission is that my motion may be referred to the Privileges Committee.

Sri B. B. SAYANAK.—My friend said just now that there is a unanimous decision of this House. This is not correct.

Mr. DEPUTY SPEAKER.—I will give my ruling.

There is nothing to indicate that the Chief Minister has made a misleading statement to constitute a breach of privilege. The matter is, therefore, not in order. On 13th April when the hon. Member Sri Vatal Nagaraj raised the matter on the floor of the House, the matter was already clarified. So it is not in order.

Sri AZIZ SAIT.—The Chief Minister is sitting in the House. Give him an opportunity and hear the Chief Minister. I do not know on what basis you have come to the conclusion that the statement of the hon. member is not correct. The presumption is that the Chief Minister has made this statement. He should have denied it or accepted it.

Mr. DEPUTY SPEAKER.—This matter was raised already.

Sri DIGAMBAR RAO B. KALMANKAR.—In view of what has appeared in today's newspapers, let the Chief Minister make a statement. Please hear the Chief Minister.

Mr. DEPUTY SPEAKER.—Even without hearing the Chief Minister I can come to the conclusion whether it is in order or not.

Sri S. V. AGNIHOTRI (Dharwar-Rural).—I rise to a point of order. ಮಾನ್ಯ ಮಂತ್ರಿಗಳು ಈಗತಾನೇ ಒಂದು ನಿರ್ಣಯವನ್ನು ಸಭೆಯಮುಂದೆ ಮಂಡಿಸಿದಾಗ ವಿರೋಧಪಕ್ಷದವರು ಈ ಮನೆಯಲ್ಲಿರಲಿಲ್ಲ. ಅವರು ಒಳಗೆ ಬಂದನಂತರ ಅವನ್ನು ವೋಟಿಗೆ ಹಾಕಿದಾಗ ಅವರಿಗೆ ಆ ವಿಷಯ ಏನೂ ಗೊತ್ತಿಲ್ಲದಿದ್ದರೂ ಆ ನಿರ್ಣಯಕ್ಕೆ ಒಪ್ಪಿಗೆಯನ್ನು ಕೊಡು ವಾಗ ನೋ ಎಂದು ಹೇಳಿದರು. ಅದನ್ನು ಅವರು ಆ ರೀತಿ ಹೇಳಬಹುದೇ ?

ಉಪಾಧ್ಯಕ್ಷರು :—ಇದು ಕ್ರಿಯಾಲೋಪ ಆಗುವುದಿಲ್ಲ. ಆ ನಿರ್ಣಯ ಈಗಾಗಲೇ ಅಂಗೀಕೃತ ವಾಗಿದೆ.

NOTICE OF A SPECIAL RESOLUTION FOR ENQUIRY INTO ASSETS OF MINISTERS, EX-MINISTERS ETC.

†ಶ್ರೀ ಎಸ್. ಶಿವಪ್ಪ.—ಸ್ವಾಮಿ, ನಿನ್ನೆಯ ದಿವಸ ನಾನು ಒಂದು ವಿಶೇಷ ನಿರ್ಣಯವನ್ನು 146 ನೇ ರೂಲ್ ಪ್ರಕಾರ ಈ ಸಭೆಯಲ್ಲಿ ಮೂವ್ ಮಾಡುವುದಕ್ಕೆ ತಮಗೆ ಕಳುಹಿಸಿ ಕೊಟ್ಟಿದ್ದೆ. ನಿನ್ನೆಯ ದಿವಸ ತಾವು ಹೇಳಿದಿರಿ, ಈ ಸಭಾ ನಾಯಕರೊಡನೆ ಚರ್ಚಿಸಿ ನಂತರ ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದಿರಿ. ನಾನು ತಂದಿರತಕ್ಕ ಈ ವಿಶೇಷ ನಿರ್ಣಯ ಬಹಳ ಪ್ರಾಮುಖ್ಯವಾದದ್ದು. ಮತ್ತು ಅತ್ಯಗತ್ಯವಾದದ್ದು. ಈ ಸಭೆಯಲ್ಲಿ ನಿರ್ಣಯ ವನ್ನು ನಾವು ಪಾಸು ಮಾಡಿ ಅದನ್ನು ಕಾರ್ಯಗತ ಮಾಡತಕ್ಕದ್ದು ಬಹಳ ಅವಶ್ಯಕ ಇದೆ ಎನ್ನ ತಕ್ಕಂಥಾದ್ದನ್ನು ನಾನು ತಮ್ಮ ಮುಂದೆ ಒತ್ತಿ ಹೇಳುತ್ತೇನೆ. ಈ ಸಭಾ ನಾಯಕರು ಈ ಸಭೆ ಯಲ್ಲಿ ಒಂದು ಹೇಳಿಕೆಯನ್ನು ಈಗಾಗಲೇ ಕೊಟ್ಟಿದ್ದಾರೆ. ಅವರ ಉದ್ದೇಶ ಏನು ಎಂದರೆ ಮಂತ್ರಿ ಗಳು, ಮಾಜಿ ಮಂತ್ರಿಗಳು, ಉಪ ಮಂತ್ರಿಗಳು, ಮತ್ತು ಇತರ ಕಾಂಗ್ರೆಸ್ ಮುಖಂಡರು ಯಾರು ಯಾರು ಇದ್ದಾರೆ ಅವರೆಲ್ಲರೂ 1947ನೇ ಇಸವಿಯಿಂದೀಚೆಗೆ ಏನೇನು ಆಸ್ತಿ ಪಾಸ್ತಿಗಳನ್ನು ಮಾಡಿ ಕೊಂಡಿದ್ದಾರೆ ಅವನ್ನು ಸಂಗ್ರಹ ಮಾಡುತ್ತೇನೆ ಎನ್ನುವ ಉದ್ದೇಶವನ್ನು ಅವರು ಈ ಸಭೆಯಲ್ಲಿ

(ಶ್ರೀ ಎಸ್. ಶಿವಪ್ಪ)

ವ್ಯಕ್ತ ಮಾಡಿದ್ದಾರೆ. ಮತ್ತು ಮಂತ್ರಿಗಳು, ಉಪ ಮಂತ್ರಿಗಳು, ಮಾಜಿ ಮಂತ್ರಿಗಳು ಮತ್ತು ಕಾಂಗ್ರೆಸ್ ಮುಖಂಡರು, ಅಧಿಕಾರದಲ್ಲಿದ್ದವರು ಯಾರು ಯಾರು ಆಸ್ತಿ ಪಾಸ್ತಿಗಳ ವಿಚಾರ ಸಂಗ್ರಹ ವನ್ನು ಮಾಡಬೇಕೆಂದು ಮುಖ್ಯ ಮಂತ್ರಿಗಳ ಮನಸ್ಸಿನಲ್ಲಿತ್ತೋ ಅವರೆಲ್ಲರಿಗೂ ಈಗಾಗಲೇ ಪತ್ರ ವನ್ನು ಬರೆದಿದ್ದಾರೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಹಾಗೆ ಮಾಡುವುದಕ್ಕೋಸ್ಕರ, ಅವರ ಉದ್ದೇಶವನ್ನು ಈಡೇರಿಸುವುದಕ್ಕೋಸ್ಕರ, ಅದು ಶಾಸ್ತ್ರೀಯವಾದ ಕಾನೂನು ಪ್ರಕಾರ ನಡೆಯಬೇಕಾದರೆ ಈ ಸಭೆಯ ಅನುಮತಿಯ ಪ್ರಕಾರ ಈ ನಿರ್ಣಯವನ್ನು ಅನುಮೋದಿಸಬೇಕು. ಅದಕ್ಕಾಗಿ ನಾನು ಈ ನಿರ್ಣಯವನ್ನು ಇಲ್ಲಿ ತಂದಿದ್ದೇನೆ. ಅದು ಈ ರೀತಿ ಇದೆ:

> "This Assembly recommends to Government to appoint a commission of Enquiry under the Commission of Enquiry Act, 1952, for the purpose of making an enquiry into the assets of the Ministers, ex-Ministers and other non-officials who held public offices in the State since 1947."

ಈ ನಿರ್ಣಯವನ್ನು ಇವೊತ್ತು ಈ ಸಭೆಯಲ್ಲಿ ಮಂಡನೆ ಮಾಡಬೇಕು. 1947ನೇ ಇಸವಿ ಯಿಂದ ಈಚೆಗೆ ಮಂತ್ರಿಗಳು, ಮಾಜಿ ಮಂತ್ರಿಗಳು, ಮತ್ತು ಅಧಿಕಾರ ಸ್ಥಾನವನ್ನು ಅಲಂಕರಿಸಿದ ನಾನ್ ಅಫಿಷಿಯಲ್ ಪ್ರಮುಖರು ಯಾರು ಯಾರು ಇದ್ದಾರೆಯೋ ಅವರ ಬಗ್ಗೆ ಇರತಕ್ಕ ಆಸ್ತಿ ಪಾಸ್ತಿಗಳನ್ನು ತನಿಖೆ ಮಾಡಲು ಒಂದು ಕಾನೂನು ಬದ್ಧವಾದ ಅಧಿಕಾರ ಬೇಕು. ಇವೊತ್ತು ಮುಖ್ಯ ಮಂತ್ರಿಗಳು ಕೇವಲ ಒಂದು ಪತ್ರವನ್ನು ಬರೆದು ಆಸ್ತಿಪಾಸ್ತಿಗಳ ವಿವರವನ್ನು ಕೊಡಿ ಎಂದು ಹೇಳಿದರೆ ಅದಕ್ಕೆ ಯಾವ ಕಾನೂನಿನ ಬಲವೂ ಇಲ್ಲ ಅದು ಕೇವಲ ಒಂದು ಪರ್ಸನಲ್ ಪತ್ರ ವ್ಯವಹಾರವಾಗುತ್ತದೆ. ಆ ಪತ್ರಕ್ಕೆ ಸಂಬಂಧಪಟ್ಟವರು ಉತ್ತರವನ್ನು ಕೊಟ್ಟರೂ ಕೊಡಬಹುದು, ಕೊಡದೇ ಇದ್ದರೂ ಇರಬಹುದು ಆದ್ದರಿಂದ ಈ ನಿರ್ಣಯವನ್ನು ಈ ಸಭೆಯಲ್ಲಿ ಮಂಡನೆ ಮಾಡುವು ದನ್ನು ತಾವು ಒಪ್ಪಲೇ ಬೇಕು. ಇದರಲ್ಲಿ ನಮಗೂ ನಿಮಗೂ ಭಿನ್ನಾಭಿಪ್ರಾಯವಿಲ್ಲ. ಆದ್ದರಿಂದ ಈ ಸಭೆಯಲ್ಲಿ ನನ್ನ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ಅನುಮತಿಯನ್ನು ಕೊಡಬೇಕೆಂದು ನಾನು ಮತ್ತೊಮ್ಮೆ ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ. ಮತ್ತು ಈ ನಿರ್ಣಯವನ್ನು ಈ ಸಭೆ ಯಲ್ಲಿ ಚರ್ಚೆ ಮಾಡಿ ಪಾಸು ಮಾಡಬೇಕು, ಅದರ ಮುಖಾಂತರ ಒಂದು ಕಮಿಷನ್ ನೇಮಕ ಮಾಡಬೇಕು.

† **Sri S. R. KANTHI** (Minister for Law and Parliamentary Affairs).—I rise to a point of order. Any motion before the House cannot be brought and cannot be discussed unless you permit the mover of the motion to do so in the first place Secondly, in such cases the Leader of the House will have to be consulted. In this case I am sure you have not as yet consulted the Leader of the House. I am also sure that you have not permitted the mover of the motion to move any motion at all. This being so, I do not know how the hon. member can make a motion and at the same time fire a speech.

Sri S. SIVAPPA.—I am just requesting the hon.Chair to permit me to move this resolution.

ಅದಕ್ಕೇ ನಾನು ಹೇಳಿದೆ. ಈ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸುವುದಕ್ಕೆ ಸಭಾ ನಾಯಕರು ಅನುಮತಿಯನ್ನು ಕೊಟ್ಟಲ್ಲಿ, ಅವರು ಆಸ್ತಿಪಾಸ್ತಿಗಳ ಸಂಗ್ರಹದ ಸಂಬಂಧದಲ್ಲಿ ಏನು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆಯೋ ಅದನ್ನು ಪುಷ್ಟೀಕರಿಸುವುದಕ್ಕೆ ಈ ನಿರ್ಣಯ ಇದೆ. ಆದ ರಿಂದ ಈ ನನ್ನ ನಿರ್ಣಯಕ್ಕೆ ಈ ಸಭೆಯ ಮಂಜೂರಾತಿಯನ್ನು ತೆಗೆದುಕೊಂಡರೆ ಅವರ ಕೈಗೆ ಬಲ ಬಂದಂತಾಗುತ್ತದೆ. ಈ ದೃಷ್ಟಿಯಿಂದ ಈ ಸಭಾ ನಾಯಕರು ನನ್ನ ನಿರ್ಣಯವನ್ನು ಸಭೆಯಲ್ಲಿ ಮಂಡಿಸುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ. ಮತ್ತು ಸಭಾ ನಾಯಕರು ಇಲ್ಲಿಯೇ ಇದ್ದಾರೆ, ಅವರೊಡನೆ ತಾವು ಪ್ರಸ್ತಾಪ ಮಾಡಿ ಇಂಥಾ

ಪ್ರಾಮುಖ್ಯವಾದ ನಿರ್ಣಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಇದಕ್ಕೆ ಸಭಾ ನಾಯಕರು ಇಲ್ಲಾ ಎಂದು ಹೇಳುವುದಿಲ್ಲ. ಅವರು ಇದನು ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಆದ್ದರಿಂದ ನನ್ನ ನಿರ್ಣಯವನು ಈ ಸಭೆಯಲ್ಲಿ ಮಂಡನೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಎಸ್. ಚನ್ನಯ್ಯ.—ಸ್ವಾಮಿ ಈ ವಿಷಯದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಮುಖ್ಯ ಮಂತ್ರಿಗಳಾಗಿರತಕ್ಕವರು ನನಗೂ ಒಂದು ಪತ್ರವನ್ನು ಬರೆದು ಕಳುಹಿಸಿದ್ದಾರೆ. ನಾನು ಅದಕ್ಕೆ ಉತ್ತರವನ್ನು ಕೊಡಬೇಕೊ ಬೇಡವೋ ಎಂದು ಯೋಚನೆ ಮಾಡುತ್ತಿದ್ದೇನೆ. ನಾನು ಅವರಿಗೆ ಉತ್ತರವನ್ನು ಕೊಡಬೇಕಾದ ಕಾರಣವಿಲ್ಲ. ನನ್ನನ್ನು ಕೇಳುವವರು ಯಾರು ? ಅವಕ್ಕೆ ಪ್ರಾಮುಖ್ಯತೆ ಬರಬೇಕಾದರೆ ಒಂದು ಕಮಿಷನ್ ಬೇಕು. ಆಗ ಅದನ್ನು ಕೊಡಬೇಕಾದ ಅಗತ್ಯ ಕಂಡುಬರುತ್ತದೆ, ಕೊಡುತ್ತಾರೆ. ಅದು ಬಿಟ್ಟು ಏನೋ ಒಂದು ಕಾಗದ ಬರೆದು ಎದ್ದು ಹೋಗುವ ಮಾತು ಬಿದ್ದು ಹೋಗಲಿ ಅಂತ ಬರೆದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾನು ಈಗ ಕಾಂಗ್ರೆಸ್ಸಿನಲ್ಲಿ ಇಲ್ಲ. ಆದ್ದರಿಂದ ಮುಖ್ಯ ಮಂತ್ರಿಗಳು ಬರೆದಿರುವ ಕಾಗದಕ್ಕೆ ನಾನು ಉತ್ತರವನ್ನು ಬರೆಯಬೇಕಾದ ಕಾರಣವಿಲ್ಲ. ಅವರು ನಮ್ಮ ಮಾತಿಗೆ ಗೌರವ ಕೊಡದಿದ್ದರೆ ನಾವೇಕೆ ಅವರ ಮಾತಿಗೆ ಗೌರವ ಕೊಡಬೇಕು ! ಅವರು ಒಂದು ಕಮಿಟಿಯನ್ನು ಒಂದು ಕಮಿಷನ್ ಅನ್ನು ನೇಮಕ ಮಾಡಿದರೆ ಅದಕ್ಕೆ ಒಂದು ಗೌರವ ಬರುತ್ತದೆ. ಆಗ ನಾವು ಅವರ ಪತ್ರಕ್ಕೆ ಉತ್ತರ ಕೊಡಬೇಕಾದ ಅಗತ್ಯ ಬರುತ್ತದೆ. ಅವರ ಬಗ್ಗೆ ನನಗೆ ಇವೊತ್ತು 10 ಗಂಟೆಯ ತನಕ ಇದ್ದ ಗೌರವ ಹೋಯಿತು. ಆದ್ದರಿಂದ ಈಗಲಾದರೂ ನಾನು ಹೇಳುತ್ತೇನೆ, ಅವಕ್ಕೆ ಒಂದು ಕಮಿಷನ್ ನೇಮಕ ಮಾಡಿ, ಆಗ ಅದಕ್ಕೆ ಗೌರವ ಬರುತ್ತದೆ. ಇಲ್ಲದಿದ್ದರೆ ಗೌರವ ಬರುವುದಿಲ್ಲ. ನೀವು ಕಮಿಷನ್ ನೇಮಕ ಮಾಡಿದರೆ ನಾನೂ ಕೂಡ ನಿಮ್ಮ ಪತ್ರಕ್ಕೆ ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ.

12-30 P.M.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ನಾನು ಹೇಳುತ್ತೇನೆ, ಕಮಿಷನ್ ನೇಮಕ ಮಾಡಬೇಕಾದರೆ ಏನಾದರೂ ಒಂದು ಆಧಾರ ಇರಬೇಕು. ಎರಡು ಮೂರು ಸಲ ಈ ವಿಚಾರ ಬಂದಾಗ ಅವರ ಮಾರಲ್ ಅಬ್ಲಿಗೇಷನ್, ಅವರ ಕರ್ತವ್ಯವೆಂದು ಹೇಳಿದ್ದೇನೆ. ವಿವರಗಳನ್ನು ತಿಳಿದುಕೊಂಡು ಎಲ್ಲರೂ ಕಳಿಸುವುದು ಸರಿ. ವಿವರಗಳನ್ನು ಕಳಿಸಿದರೆ ಅದರ ಆಧಾರದ ಮೇಲೆ ಅವಶ್ಯಕವೆಂದು ಕಂಡುಬಂದರೆ ಖಂಡಿತ ಕಮಿಷನ್ ನೇಮಕ ಮಾಡುತ್ತೇನೆ. ಈ ವಿಚಾರದಲ್ಲಿ ಕೂಲಂಕುಷವಾಗಿ ಆಲೋಚನೆ ಮಾಡಿ, ಯಾರು ಯಾರು ಏನೇನು ಮಾಡಿದ್ದಾರೆ. ಏನೇನು ದುಡ್ಡು ಮಾಡಿದ್ದಾರೆ, ಏನು ಆಸ್ತಿ ಮಾಡಿದ್ದಾರೆ, ಹಿಂದೆ ಎಷ್ಟುಮಟ್ಟಿಗೆ ಇದ್ದರು, ಈಗ ಹೇಗಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ನಮ್ಮಲ್ಲೂ ಕೆಲವು ಅಂಕಿಅಂಶಗಳು ಇವೆ. ಆದರೂ ಸಹ ಸಾಕಷ್ಟು ವಿವರಗಳು ಏನೂ ಇಲ್ಲದೆ ಗಾಳಿಯಲ್ಲಿ ಗೋಪುರ ಕಟ್ಟುವುದಕ್ಕಾಗುವುದಿಲ್ಲ. ಅಭಿಪ್ರಾಯಗಳು ಸರ್ಕಾರಕ್ಕೆ ಬಂದ ಮೇಲೆ ಶಾಸನ ಮಾಡತಕ್ಕಂಥ ಅವಶ್ಯಕತೆ ಇದ್ದರೆ ಶಾಸನ ಮಾಡುತ್ತೇನೆ. ಏನೂ ಇಲ್ಲದೆ ನಿರ್ಣಯ ಮಾಡುವುದರಲ್ಲಿ ಅರ್ಥವಿಲ್ಲ. ಗಾಳಿಯಲ್ಲಿ ಗೋಪುರ ಕಟ್ಟುವುದಕ್ಕಾಗುವುದಿಲ್ಲ. It is putting the cart before the horse. It cannot done. ಇವತ್ತು ಪುನಃ ಈ ನಿರ್ಣಯವನ್ನು ಒಪ್ಪುವುದಕ್ಕಾಗುವುದಿಲ್ಲ. ವರಗಳು ಬರಲಿ. ಯಾರ ಯಾರ ಹತ್ತಿರ ಏನೇನು ಇದೆ ಎಂಬುದನ್ನು ತಿಳಿಸಲಿ. ಅದರ ಮೇಲೆ ಸಕಾರಣಗಳು ಇದ್ದರೆ ಕಮಿಷನ್ ನೇಮಕ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಎಸ್. ಶಿವಪ್ಪ.—ಅದು ನಿಮ್ಮಿಂದಲೇ ಪ್ರಾರಂಭವಾಗಲಿ. ನಿಮ್ಮ ಒಂದು ಕಾರಣಕ್ಕೆ ಕಮಿಷನ್ ನೇಮಕ ಆಗಲಿ. ಲೋಕಾಭಿರಾಮವಾಗಿ ಮುಂದೆ ಬೇಕಾದರೆ ಕಮಿಷನ್ ನೇಮಕ ಮಾಡುತ್ತೇವೆ ಎಂದು ಹೇಳಿದರೆ ಪ್ರಯೋಜನವಿಲ್ಲ. ಈಗ ನಿರ್ದಿಷ್ಟವಾದಂಥ ಒಂದೆರಡು ವಿಷಯಗಳಾದರೂ ಇವೆ. ಅದಕ್ಕೋಸ್ಕರವಾಗಿಯಾದರೂ ಇವತ್ತಿನದಿವಸ ಕಮಿಷನ್ ನೇಮಕ ಮಾಡುತ್ತೇವೆ ಎಂದು ಧೈರ್ಯವಾಗಿ ಒಪ್ಪಿಕೊಳ್ಳಿ. ಆ ರೀತಿ ನೀವು ಧೈರ್ಯವಾಗಿ ಮಾಡಿದರೆ ಅದರಲ್ಲಿ ಅರ್ಥವಿದೆಯೆಂದು ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎಸ್. ಚನ್ನಯ್ಯ.—ತಮ್ಮನ್ನು ಕೇಳುವವರು ಯಾರು ?

ಶ್ರೀ ಎಸ್ ನಿಜಲಿಂಗಪ್ಪ.—ನೀವೇ ಕೇಳಿ.

ಶ್ರೀ ಎಸ್. ಚನ್ನಯ್ಯ.—ನನಗೇನಿದೆ ಅಧಿಕಾರ ನಿಮ್ಮನ್ನು ಕೇಳುವುದಕ್ಕೆ, ಅಧಿಕಾರ ಕೊಡಿ, ಬರೆಯುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಬೀದಿಯಲ್ಲಿ ಹೋಗುವವರಿಗೆಲ್ಲಾ ಅಧಿಕಾರ ಕೊಡುವುದಕ್ಕಾಗುವುದಿಲ್ಲ. ಬೇಕಾದವರು ಬರೆಯಲಿ.

Sri B. P. GANGADHAR.—Supposing a person who has made adequate money by illegal and questionable means, does not furnish details and keeps quiet or evades, what is the legal remedy? The suggestion made by the hon'ble Chief Minister should take concrete shape; for that some legal sanction is necessary; it is absolutely necessary to have legal backing so that a person may be compelled to furnish information about his assets. If there is no legal sanction, with the best of intentions, I am afraid the hon'ble Chief Minister may not be able to know the reality.

Mr. DEPUTY SPEAKER.—The hon'ble Chief Minister has said that it was the moral obligation of the persons receiving the notices to send replies.

Sri B. P. GANGADHAR.—Let it not be a mere moral obligation. Can I also send notice for declaration of other's assests? Let it be coverted into legal obligation so that there may be purity in politics and administration. Whithout legal sanction, it is difficult to put an end to corruption.

ಶ್ರೀ ಎಚ್. ಸಿದ್ಧವೀರಪ್ಪ.—ಮಾರಲ್ ಅಬ್ಲಿಗೇಷನ್ ಇದೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಮನುಷ್ಯನಿಗೆ ಮಾರಲ್ ಅಬ್ಲಿಗೇಷನ್ ಇರಬೇಕಾದುದು ಒಳ್ಳೆಯದು. ಇಲ್ಲದಿದ್ದರೆ ಆಗುವುದಿಲ್ಲ. ಶ್ರೀಮಾನ್ ಶಿವಪ್ಪನವರು ಹೇಳಿದಂತೆ ಯಾರೂ ವಿವರಗಳನ್ನು ಕೊಡದಿದ್ದರೆ ಏನು ಮಾಡುತ್ತೀರಿ. What is the legal sanctity? ತಾವು ಇನ್ನು ಸ್ವಲ್ಪ ದಿವಸ ಇರುತ್ತೀರಿ, ಆಮೇಲೆ ಹೊರಟು ಹೋಗುತ್ತೀರಿ. ಮುಂದೆ ಬರತಕ್ಕಂಥ ಮುಖ್ಯ ಮಂತ್ರಿಗಳು ಯಾವ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ? ಈ ಬಗ್ಗೆ ಏನಾದರೂ ಒಂದು ಗೌರ್ನಮೆಂಟ್ ಆರ್ಡರ್ ಮಾಡಿದ್ದೀರಾ? 75 ಜನರಿಗೆ ನೋಟೀಸ್ ಕೊಡಲಾಗಿದೆಯೆಂದು ಹೇಳಿದಿರಿ. ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ? ನನಗೂ ಸಹ ನೋಟೀಸ್ ಕಳಿಸಿದ್ದೀರಿ. ನಾನು ಈಗಲೂ ಕೊಡುವುದಕ್ಕೆ ತಯಾರಿದ್ದೇನೆ. ನನ್ನದು ಕೊಡುತ್ತೇನೆ. ಬೇರೆಯವರು ಏನೋ ಒಂದು ನೆಪದಲ್ಲಿ ಸುಮ್ಮನಿರುತ್ತಾರೆ. ನಿಮ್ಮ ಮಂತ್ರಿಗಳಿಗೆ ಯಾವ ಆಧಾರದ ಮೇಲೆ ಕೇಳುತ್ತೀರಿ? ಅವರು ಯಾವ ಆಧಾರದ ಮೇಲೆ ಕೊಡುತ್ತಾರೆ?

ಶ್ರೀ ಆರ್. ಎಂ. ಪಾಟೀಲ್.—ನೀವು ಯಾವ ಆಧಾರದ ಮೇಲೆ ಕೊಡುತ್ತೀರೋ ಅದೇ ರೀತಿ ನಾವು ಕೊಡುತ್ತೇವೆ.

ಶ್ರೀ ಎಚ್. ಸಿದ್ಧವೀರಪ್ಪ.—ಮುಂದೆ ಬರತಕ್ಕ ಮುಖ್ಯಮಂತ್ರಿಗಳು ಯಾವ ಆಧಾರದ ಮೇಲೆ ಕೇಳಬೇಕು? ಸುಮ್ಮನೆ ನಮಗೆ ಆಕಾಶಲಿಂಗ ತೋರಿಸುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ನಿಜಲಿಂಗವನ್ನೇ ತೋರಿಸುತ್ತೇನೆ. ಶ್ರೀ ಸಿದ್ಧವೀರಪ್ಪನವರು ಹೇಳಿದ ಮಾತು ನ್ಯಾಯವಾಗಿದೆ. ನನ್ನದು ಕೊಡುತ್ತೇನೆ ಎಂದು ಅವರು ಹೇಳಿದ್ದು ಬಹಳ ಸಂತೋಷ. ಕಮಿಷನ್ ನೇಮಕ ಮಾಡಬೇಕಾದರೆ ಏನು ಅಂಶಗಳಿವೆ ಎಂಬುದನ್ನು ತಿಳಿದುಕೊಳ್ಳಬೇಕು. ಈ ವಿಚಾರದಲ್ಲಿ ಮುಂದೆ ಬರತಕ್ಕಂಥ ಮುಖ್ಯಮಂತ್ರಿಗಳಿಗೂ ಬೈಂಡಿಂಗ್ ಆಗಿರುತ್ತದೆ, ಇದರಲ್ಲಿ ಏನೂ ವ್ಯತ್ಯಾಸವಿಲ್ಲ. ಆದ್ದರಿಂದ ಈ ನಿರ್ಣಯ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮುಂದೆ ಏನು ಅಂಶಗಳು ಬರುತ್ತವೋ ಅದರ ಆಧಾರದಮೇಲೆ ಕಮಿಷನ್ ನೇಮಕ ಮಾಡುವುದು ಅಥವಾ ಬಿಲ್ ತರುವುದು ಯೋಚನೆ ಮಾಡಬೇಕಾಗುತ್ತದೆ. ಇದು ಅವಸರವಾಗಿ ಹೇಳುವ ಮಾತಲ್ಲ. ಆಲೋಚನೆ ಮಾಡತಕ್ಕ ವಿಷಯ.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ನಮಗೆ ನೀವು ಕಾಗದ ಬರೆದಿರುವುದು ನಮ್ಮ ದೇಶದ ಹಿರಿಯ ನಾಯಕರಾಗಿಯೇ ಹೊರತು, ಮುಖ್ಯಮಂತ್ರಿಗಳಾಗಿ ಬರೆದಿಲ್ಲ. ಸರಕಾರ ಅಂದರೆ ಒಂದು ರೀತಿನೀತಿ ಇರುತ್ತದೆ. ಸರ್ಕಾರ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿರುತ್ತದೆ. ಕಮಿಷನ್ ನೇಮಕ ಮಾಡಬೇಕೆಂದು ಒತ್ತಿ ಒತ್ತಿ ಹೇಳಿದ್ದೇವೆ. ನಾನು ಈಗಾಗಲೇ ವಿವರಗಳನ್ನು ನನ್ನ ಬಗ್ಗೆ ಕೊಡುತ್ತೇನೆಂದು ಹೇಳಿದ್ದೇನೆ. ಈ ವಿಷಯ ಕಾನೂನು ಪ್ರಕಾರ ತೀರ್ಮಾನವಾಗಬೇಕಾದರೆ, ಶಾಸ್ತ್ರೀಯವಾಗಿ ಆಗಬೇಕಾಗಿದ್ದರೆ, ಎಲ್ಲರೂ ವಿವರಗಳನ್ನು ಮಾಡಬೇಕಾಗಿದ್ದರೆ ಮತ್ತು ಮುಂದೆ ಬರತಕ್ಕಂಥ ಮುಖ್ಯಮಂತ್ರಿಗಳು ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂಬ ಇಚ್ಛೆಯಿದ್ದರೆ ಈ ವಿಷಯವನ್ನು ಕಾನೂನಿನ ಚೌಕಟ್ಟಿಗೆ ಒಳಪಡಿಸುವುದು ಒಳ್ಳೆಯದು.

Sri S. NIJALINGAPPA.—Let us see how we c n bring it. I will consult the Law Deprtment and see what we can do. I have made up my mind to go into these things. It means, the Chief Minister has made up his mi d to go into the matter as minutely as possible so that there is no loophole left. Let us see what material we get. After that we will see that necessary action is taken. Let there be no doubt about it.

ಶ್ರೀ ಎಚ್. ಸಿದ್ಧವೀರಪ್ಪ.—75 ಜನರಿಗೆ ನೋಟೀಸ್ ಕೊಟ್ಟಿದ್ದೇನೆ ಎಂದು ಹೇಳಿದಿರಿ, ಅವರ ಹೆಸರುಗಳನ್ನು ಪಬ್ಲಿಷ್ ಮಾಡಿ. ನಿಮ್ಮ ಮಂತ್ರಿಗಳಲ್ಲಿ ಯಾರಿಗೆ ಕೊಟ್ಟಿದ್ದೀರಿ, ಅವರ ಹೆಸರುಗಳನ್ನು ಸಹ ಪಬ್ಲಿಷ್ ಮಾಡಿ.

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲರದ್ದೂ ಮಾಡಿಸೋಣ.

ಶ್ರೀ ಎಚ್. ಸಿದ್ಧವೀರಪ್ಪ.—ನೀವು ಏನು ಮಾಡಿದರೂ ನಮಗೆ ಒಪ್ಪಿಗೆಯಾಗುವಂತೆ ಕಾನೂನು ಪ್ರಕಾರ ಮಾಡಿ ಎಂದು ಹೇಳುತ್ತೇನೆ.

Sri S. NIJALINGAPPA.—I will take all that into consideration.

Sri DIGAMBARA RAO B. KALMANKAR.—I wish to point out that this must be seen from another angle. Supposing in response to the request made by the hon'ble Chief Minister Sri S. Nijalingappa, nobody furnishes the information or nobody discloses any assets, what is to be done? It is a matter of common sense that nobody is bound to disclose the information if there is no statutory obligation. In case a person does not give any such information or reply, what is to be done? Therefore, it is only a Commission of Enquiry that could compel a person to give proper reply to the notices of the Chief Minister. I wish to know whether it will be a Commission ?

Sri S. NIJALINGAPPA.—I have already answered that question.

Sri AZIZ SAIT.—In case, nobody responds, what is the next course? That apart, I want one clarification from the hon'ble Chief Minister now. Now that the Chief Minister has taken pains and initiated further action to send certain letters to all the Ministers and Deputy Ministers and other non-officials who held influntial posts in the Congress Party to disclose their assets from 1967, I would like to know whether according to that letter, information relating to the property acquired by their sons, relatives, wives, brothers, has also to be furnished. Supposing those Ministers, etc., have acquired properties in the name of A, B, and C, and such close relations, whether that also has to be disclosed, is my point. It may be that some

(SRI AZIZ SAIT)

person may have made property in the name of his relatives. That information is also very important. Supposing 'Aziz Sait, who hapens to be a Minister under the Nijalingappa Cabinet, has properties in the name of his nephew, wives, and sons, should he, in addition to his own, declare the assets of his wives, children and close relations !

ಶ್ರೀ ಎಸ್. ನಿಜಲಿಂಗಪ್ಪ.—ಇದನ್ನೆಲ್ಲಾ ಕೇಳಿದೆ.

ಶ್ರೀ ಎಸ್. ಸಿದ್ಧವೀರಪ್ಪ.—ಶ್ರೀ ಅಜೀಜ್ ಸೇಟ್ ಅವರಿಗೆ ಮಂತ್ರಿಪದವಿ ಕೊಟ್ಟು ಅವರಿಗೂ ಒಂದು ನೋಟೀಸ್ ಕಳುಹಿಸಿದರೆ ಒಳ್ಳೆಯದಾಗುತ್ತದೆ.

† ಶ್ರೀ ಎಸ್. ಶಿವಪ್ಪ.—ಸ್ವಾಮಿ, ತಾವು ಸಭಾ ನಾಯಕರು ಬರಲಿ, ನಾವು ಕಳುಹಿಸಿರುವ ನಿರ್ಣಯದ ಬಗ್ಗೆ ಹೇಳುತ್ತೇನೆ ಎಂದು ಹೇಳಿದಿರಿ. ಇಂದು ಸಭಾನಾಯಕರು ಇಲ್ಲಿಗೆ ಬಂದಿರುವಾಗ ನಾವೂ ಕೂಡ ನಮ್ಮ ಒಂದು ನಿರ್ಣಯಕ್ಕೆ ತಾವು ಒಪ್ಪಿಗೆ ಕೊಡಬಹುದು ಎನ್ನುವ ಒಂದು ಆಸೆಯಿಂದ ತಮ್ಮಲ್ಲಿ ಇಲ್ಲಿ ಹೇಳುತ್ತಿದ್ದೇನೆ. ಇಂತಹ ಒಂದು ನಿರ್ಣಯವನ್ನು ತಾವು ಒಪ್ಪಿಕೊಳ್ಳದೇ ಹೋದರೆ ನೀವು ಹೇಳತಕ್ಕ ಮಾತುಗಳು ಕೃತಿಗೆ ಇಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ತಾವು ಹೇಳಿರುವ ಮಾತುಗಳನ್ನು ಕೃತಿಗೆ ಇಳಿಸುವ ಉದ್ದೇಶಕ್ಕಾಗಿ ಇಲ್ಲ ನಾವು ತಂದಿರುವ ನಿರ್ಣಯಕ್ಕೆ ಒಪ್ಪಿಗೆ ಕೊಡಬೇಕು, ಇಲ್ಲದೇ ಹೋದರೆ ಇದರಿಂದೇನೂ ಸಾಧನೆಯಾಗುವುದಿಲ್ಲ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದರಲ್ಲೇನೂ ತಪ್ಪಾಗುವುದಿಲ್ಲ. ನಮ್ಮ ಸಭಾ ನಾಯಕರು ಇಂದು ಎಲ್ಲ ನಾಯಕರ ಆಸ್ತಿಪಾಸ್ತಿಗಳ ವಿವರಗಳನ್ನು ಶೇಖರಣೆ ಮಾಡಬೇಕು ಎಂದು ಎಲ್ಲರಿಗೂ ಕೇಳಲಾಗಿದೆ ಎಂದು ಹೇಳುತ್ತಾರೆ. ಇದು ಕೇವಲ ನಮ್ಮ ಜನರ ಮೆಚ್ಚಿಗಾಗಿ ಮಾಡಿರಬಹುದು ಎಂದು ಆಗುತ್ತದೆ. ನೀವು ಹೇಳಿದಂತೆ ಇಂದು ಎಲ್ಲರೂ ಕೊಡುವಂತಹ ಕಾಲವಲ್ಲ. ಇದು ಕೇವಲ ನಿಮ್ಮ ಒಂದು ಭ್ರಮೆ. ಇಂತಹ ಒಂದು ಭ್ರಮೆಯನ್ನು ತಾವು ತ್ಯಾಜ್ಯ ಮಾಡಬೇಕು. ಇದಕ್ಕೆರಾ ಒಂದು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು. ಇದಕ್ಕಾಗಿ ಒಂದು ಕಾಯಿದೆ ಇದ್ದರೆ ಆಗ ಇದನ್ನು ಮಾಡಲು ಸಾಧ್ಯ. ಸುಮ್ಮನೆ ತಾವು ಬರೀ ಕಾಗದದಲ್ಲಿ ಲಿಸ್ಟನ್ನು ಕಳಿಸಬೇಕು ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ ತಾವೇನೋ ನಿಮ್ಮ ಮೇಲಿರುವ ಜವಾಬುದಾರಿಗಳನ್ನು ಕಳೆದುಕೊಂಡಿದ್ದೇನೆ ಎಂದು ಹೇಳಬಹುದು. ಆದರೆ ತಾವು ಹೇಳುವ ವಿಚಾರಗಳನ್ನು ಕಾರ್ಯಗತ ಮಾಡಬೇಕಾದರೆ ಈ ಸಭೆಯಲ್ಲಿ ಇಂತಹ ಒಂದು ನಿರ್ಣಯವನ್ನು ಪಾಸು ಮಾಡಿಕೊಂಡು ಇದಕ್ಕಾಗಿ ಒಂದು ಕಾನೂನು ಮಾಡಬೇಕು. ಆಗ ಎಲ್ಲ ಸದಸ್ಯರುಗಳೂ ಅವರ ಕರ್ತವ್ಯವೆಂದು ವಿವರಗಳನ್ನು ಕೊಡಬಹುದು. ಚೀಫ್ ಮಿನಿಸ್ಟರು ಆಗಿರುವವರು ಹಾಗೂ ಇತರ ಮಂತ್ರಿಗಳೂ ಎಲ್ಲರೂ ವಿವರಗಳನ್ನು ಕೊಟ್ಟಾಗ ಅವುಗಳನ್ನೆಲ್ಲಾ ವಿಚಾರಣೆ ಮಾಡಬೇಕೆಂದು ಈ ಸಭೆ ಒಪ್ಪಿಕೊಂಡಂತಾಗುತ್ತದೆಯೇ ? ಇದು ಕಾರ್ಯಗತವಾಗುವ ಹಾಗೆ ಮಾಡಬೇಕು. ಸಭಾನಾಯಕರು ಒಪ್ಪಲಿ ಬಿಡಲಿ ಈ ಈ ಸಭೆಗೆ ಕಾನೂನು ಮಾಡುವ ಅಧಿಕಾರವಿದೆ. ಸಭಾಪತಿಗಳಾಗಿರುವ ತಾವು ಇದನ್ನು ವಿಮರ್ಶೆ ಮಾಡಿ ಒಪ್ಪಬೇಕು ವಿಚಾರಣೆಯಾಗಬೇಕು ಎಂದು ಹೇಳುವಾಗ ಈ ಸಭೆಯ ಮುಖೇನ ಒಂದು ತೀರ್ಮಾನವನ್ನು ನಾವೆಲ್ಲರೂ ತೆಗೆದುಕೊಳ್ಳಬೇಕು. ಆದುದರಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿರುವುದು ಈ ನಿರ್ಣಯವನ್ನು ಚರ್ಚೆ ಮಾಡುವುದಕ್ಕೆ ಒಂದು ಅವಕಾಶಕೊಟ್ಟು ಇದರ ಬಗ್ಗೆ ತೀರ್ಮಾನ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಇಲ್ಲ ಈ ನಿರ್ಣಯ ತಂದಿದ್ದೇವೆ. ಇದಕ್ಕೆ ತಮ್ಮ ಪರ್ಮಿಷನ್ನನ್ನು ಕೊಡಬೇಕು ಎಂದು ತಮ್ಮಲ್ಲಿ ಹೇಳುತ್ತಿದ್ದೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರ ಸ್ಥಾನ ವಹಿಸಿರುವ ಮಂತ್ರಿಗಳ ಬಗ್ಗೆ ಹೇಳಿದರು. ಈ ಸಭೆಯ ಸ್ಪೀಕರು ಹಾಗೂ ಡೆಪ್ಯೂಟೀ ಸ್ಪೀಕರ್‌ರವರು ಅಧಿಕಾರಗಳನ್ನು ಅನುಭವಿಸಿದವರು, ಆದುದರಿಂದ ಇವರುಗಳೂ ಇದರಲ್ಲಿ ಸೇರಿಕೊಳ್ಳುತ್ತಾರೆಯೇ ಹೇಗೆ ?

ಶ್ರೀ ಎಸ್. ನಿಜಲಿಂಗಪ್ಪ.—ಅವರೆಲ್ಲರೂ ಮಂತ್ರಿಗಳಾಗಿದ್ದವರೇ. ಅವರಿಗೂ ಕಾಗದಗಳನ್ನು ಕಳುಹಿಸಲಾಗಿದೆ.

Mr. DEPUTY SPEAKER.—I have nothing to say. The Leader of the House does not agree and it cannot be moved. If he does not agree, it cannot be moved.

PRIVILEGE MOTION *re*: MINISTER'S STATEMENT ABOUT ALLEGED INVOLVEMENT OF COMMUNISTS IN FAKE NOTE CASE.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸ್ವಾಮಿ, ನಾನು ಒಂದು ಪ್ರಿವಿಲೇಜು ಮೋಷನ್ನನ್ನು ತಮ್ಮ ಕಡೆಗೆ ಕಳುಹಿಸಿದ್ದೆ. ಮೊನ್ನೆ ದಿವಸ ಮಾನ್ಯ ಗೃಹ ಮಂತ್ರಿಗಳು ಖೋಟಾ ನೋಟುಗಳ ಬಗ್ಗೆ ಉತ್ತರ ಕೊಡುವಾಗ ಒಂದು ಪ್ರಶ್ನೆಯನ್ನು ನಾವು ಕೇಳಿದಾಗ ಇನ್ನೊಂದು ಪಕ್ಷದ ಬಗ್ಗೆ ಕೇಳಲಿಲ್ಲ. ಈ ಕೇಸಿನಲ್ಲಿ ಮೂರು ಜನ ಎಕ್ಸ್ ಲೆಜಿಸ್ಲೇಟರುಗಳು ಇದ್ದಾರೆಯೇ ಮತ್ತು ಅವರೆಲ್ಲಾ ಕಾಂಗ್ರೆಸ್ಸಿನ ಲೆಜಿಸ್ಲರುಗಳೇ ಎಂದು ಕೇಳಿದುದಕ್ಕೆ ಉತ್ತರವಾಗಿ ಒಬ್ಬರು ಕಾಂಗ್ರೆಸ್ಸು ಸದಸ್ಯರು ಇದ್ದಾರೆ ಅಥವಾ ಇಲ್ಲ ಎಂದು ಹೇಳಬಹುದಾಗಿತ್ತು. ಇದಕ್ಕೆ ಬದಲಾಗಿ ಇದರಲ್ಲಿ ಕಮ್ಯೂನಿಸ್ಟು ಪಕ್ಷದವರ ಕೈವಾಡವೇ ಹೆಚ್ಚಾಗಿತ್ತು ಎನ್ನುವಂತೆ ಹೇಳಿದರು. ಇದು ಸರಿಯಾದ ವಿವರವಲ್ಲ. ಕಮ್ಯುನಿಸ್ಟು ಪಕ್ಷದವರು ಇದರಲ್ಲಿ ಇರಲೇ ಇಲ್ಲ. ಸುಮ್ಮನೆ ಒಂದು ಪಕ್ಷದ ಬಗ್ಗೆ ಅವರು ಹೀಗೆ ಹೇಳಿರುವುದು ಉಚಿತವಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ನನ್ನಲ್ಲಿ ಎಷ್ಟೋ ದಾಖಲೆಗಳೂ ಇವೆ. ಇದನ್ನೆಲ್ಲಾ ಓದಿಕೊಂಡು ಬಂದಿದ್ದೇನೆ. ಬೇಕಾದರೆ ಅವುಗಳ ವಿವರಗಳನ್ನೆಲ್ಲಾ ತಮಗೆ ಇಲ್ಲಿ ಕೊಡುತ್ತೇನೆ. ಇದಕ್ಕಾಗಿ ನಾನು ತಮ್ಮಲ್ಲಿ ಇದನ್ನು ಹೇಳುತ್ತಿರುವುದು.

Mr DEPUTY SPEAKER.—The matter is under investigation.

Sri M. S. KRISHNAN.—If the matter is under investigation and it is not proper to ask questions about it, the Minister should not have said that there was a congress man involved. Having said in the first instance that there was a congress man, involved and when this question was asked, he should have given a straight answer. But what he said is a slur on me because I belong to that party and so it is also a slur on that party. People may think that I am also in this affair. I can assure that there is no member of my party connected with this.

A privilege motion was considered in the Lok Sabha; and in the Rajya Sabha in 1959 Part II, volume 7. In Lok Sabha Debate 1959, page 79, April-June 1959. there also there was a telegram sent by Sri Namboodaripad which was taken as a matter of privilege by some members of the Parliament. Later on Sri Namboodaripad said that he did not mean anything to any particular member and thereupon, the matter was dropped. In the Madras Legislative Assembly 1959, vol. 8 there was a case. and similarly also in U. P. 1959. there was a case.

ಇದೂ ಅಲ್ಲದೆ ಇನ್ನೂ ಎಷ್ಟೋ ವಿವರಗಳೂ ನನ್ನಲ್ಲಿವೆ. ಅವನೆಲ್ಲಾ ಇಲ್ಲಿ ಹೇಳುವುದಕ್ಕೆ ಕಾಲಾವಕಾಶವಿಲ್ಲದಿರುವುದರಿಂದ ಹೇಳುವುದಕ್ಕೆ ಹೋಗುವುದಿಲ್ಲ.

MR. DEPUTY SPEAKER.—I have looked into the proceedings. No specific allegation is made against the hon'ble member. When the member hits, he should be prepared to receive also. This does not constitute a privilege because the Minister has not specifically made any allegation against the hon'ble member. It is not in order.

SRI M. S. KRISHNAN.—Sir, I leave it to you to decide in the best manner. I am prepared to give the hit and also take the hit. But the hit must be on the basis of facts. He himself admitted that one congress man was involved and that is why I asked that question.

Mr. DEPUTY SPEAKER.—It does not constitute any matter of breach of privilege.

CALL ATTENTION TO MATTERS OF URGENT PUBLIC IMPORTANCE *Re*: RAILWAY ACCIDENT AT YALVIGI RAILWAY STATION.

Sri R. M. PATIL (Minister for Home and Municipal Administration).—Sir, there are 7 to 8 persons who have given similar call attention notice. It is already under enquiry by a Commission appointed by Government of India.

Sri H. SIDDAVEERAPPA.—The matter is *sub-judice*. Why take up this subject ?

Sri R. M. PATIL.—It is not *sub judice* and we are not going into the merits of the case.

Sri H. SIDDAVEERAPPA.—Enquiry is going on by the Commission.

Sri K. H. SRINIVASA (Sagar).—I feel there is nothing prejudicing the other proceedings in this. The actual facts must be taken cognisance of by this House. I want that the statement be read.

